ಧರ್ಮ ದೀಪ್ತಿ



ಅಭಿನಂದನ ಗ್ರಂಥ

ಶ್ರೀ ಜಿ.ಜಿ.ದೊಡವಾಡ ಅಮೃತ ಮಹೋತ್ಸವ
ಸಮಿತಿ, ಧಾರವಾಡ



ಶ್ರೀ ಗುರುಪುತ್ರಪ್ಪನವರ ಪೂಜ್ಯ ತಂದೆ
ಲಿಂ. ಶರಣ ಗುರುಪಾದಪ್ಪನವರು ದೊಡವಾಡ

ಧರ್ಮದೀಪ್ತಿ

ಶ್ರೀ ಜಿ. ಜಿ. ದೊಡವಾಡ ಅವರ ಅಭಿನಂದನ ಗ್ರಂಥ

❋

೨೯ ಜನವರಿ, ೧೯೮೮

❋

ಶ್ರೀ ಜಿ. ಜಿ. ದೊಡವಾಡ ಅಮೃತ ಮಹೋತ್ಸವ ಸಮಿತಿ
ಧಾ ರ ವಾ ಡ

ಸಂಪಾದಕ ಮಂಡಳಿ :

ಪ್ರಧಾನ ಸಂಪಾದಕರು :

ಡಾ. ಆರ್. ಸಿ. ಹಿರೇಮಠ
ಡಾ. ಎಂ. ಎಸ್. ಸುಂಕಾಪೂರ

ಸಂಪಾದಕರು :

ಡಾ. ಚೆನ್ನಕ್ಕ ಎಲಿಗಾರ

ಸದಸ್ಯರು :

ಶ್ರೀ ಈಶ್ವರ ಕಮ್ಮಾರ
ಶ್ರೀ ಎಸ್. ಎಸ್. ಭೂಸರಡ್ಡಿ
ಡಾ. ಮೃತ್ಯುಂಜಯ ಶಾಸ್ತ್ರೀಮಠ
ಶ್ರೀ ಯೋಗೀಶ ಯಡ್ರಾವಿ

ಕಲಾವಿದರು :

ಶ್ರೀ ಸುರೇಶ ಕುಲಕರ್ಣಿ

ಮುದ್ರಣ :

ಮುಖಪುಟ, ಚಿತ್ರಗಳು : ಅನುಪಮ ಗ್ರಾಫಿಕ್ ಆರ್ಟ್ಸ್, ಹುಬ್ಬಳ್ಳಿ
ಪತ್ರ : ಸೋಮಶೇಖರ ಅಕಳವಾಡಿ, ಮನೋಹರ ಮುದ್ರಣಾಲಯ, ಧಾರವಾಡ

ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅಮೃತ ಮಹೋತ್ಸವ ಸಮಿತಿ, ಧಾರವಾಡ

ಕಾರ್ಯಾಧ್ಯಕ್ಷರು
ಶ್ರೀ ಬಿ. ಎಸ್. ಲಕಮನಹಳ್ಳಿ

ಉಪಾಧ್ಯಕ್ಷರು
ಶ್ರೀ ಎಂ. ಜಿ. ಅಗಡಿ, ವಕೀಲರು
ಶ್ರೀ ಬಿ. ಎಸ್. ಕುಂದಗೋಳ

ಕೋಶಾಧ್ಯಕ್ಷರು
ಶ್ರೀ ಬಿ ಜಿ. ದೊಡಮನಿ

ಪ್ರಧಾನ ಕಾರ್ಯದರ್ಶಿಗಳು
ಶ್ರೀ ವೀರಣ್ಣ ವಾಣಿ

ಕಾರ್ಯದರ್ಶಿಗಳು
ಶ್ರೀ ಎಸ್. ಎನ್. ಸೀಮಿಕೇರಿಮಠ
ಶ್ರೀ ಎಂ. ಜಿ. ನಡಕಟ್ಟಿ, ವಕೀಲರು

ಸಂಯೋಜಕರು
ಶ್ರೀ ಸಿ. ಎಸ್. ಘಂಟೆಣ್ಣವರ

ಅಮೃತ ಮಹೋತ್ಸವ ನಿಮಿತ್ತ ಪ್ರಕಟಿತ
ಇತರ ಕೃತಿಗಳು

೧. ಷಟ್‌ಸ್ಥಲಜ್ಞಾನಿ ಶ್ರೀ ಚನ್ನಬಸವಣ್ಣನವರು

—ಪ್ರೊ. ವ್ಹಿ. ಜಿ. ಮಾರೀಹಾಳ

೨. ಶ್ರೀ ಜಿ. ಜಿ. ದೊಡವಾಡ : ಕಿರುಪರಿಚಯ

—ಪ್ರೊ. ಎಸ್. ಎಸ್. ಭೂಸರಡ್ಡಿ

ನಮ್ಮ ಮಾತು

ಧರ್ಮದೀಪ್ತಿ ಇದೀಗ ಬೆಳಗಲುದ್ಯುಕ್ತವಾಗಿದೆ. ಇದು ಬರಿ ಬೆಳಗಲ್ಲ; ಧರ್ಮದ ಬೆಳಗು. 'ದಯೆ ದಮಂ ದಾನಂ ತಪಂ ಶೀಲಮೆಂಬಿವು ಮೆಯ್ಯಾಂತಿರೆ ಸಂದ ಧರ್ಮಮೆವಲಂ ಧರ್ಮಂ' ಎಂದು ನಮ್ಮ ಮಹಾಕವಿ ರನ್ನನು ಉದ್ಘೋಷಿಸಿರುವನು. ದಯೆ, ದಮ, ದಾನ, ತಪಸ್ಸು ಶೀಲಗಳಿಗೆ ಹೆಸರಾದ ದೊಡವಾಡ ಗುರುಪುತ್ರಪ್ಪನವರ ಬದುಕಿನ ಬೆಳಕು ಇಲ್ಲಿದೆ. ಅವರು ಧರ್ಮನಿಷ್ಠರು, ದಯಾಶೀಲರು, ದಾನಶೂರರು ಅಂತೆಯೆ ಅವರ ಅಮೃತ ಮಹೋತ್ಸವ ಸ್ಮರಣಿಕೆ ಧರ್ಮದೀಪ್ತಿಯಾಗಿ ಬರುತ್ತಿದೆ. ಸುತ್ತಲೂ ಬೆಳಕು ಹರಿಸಿ ಕತ್ತಲೆಯನ್ನು ಹೊಡೆದೋಡಿಸುವುದು ದೀಪ್ತಿಯ ಸಹಜ ಗುಣವಲ್ಲವೆ ?' ಅಂತಹ ಬರೆಹಗಳು ಬಂದಿವೆ ಇಲ್ಲಿ.

ಧರ್ಮದೀಪ್ತಿ ಷಣ್ಮುಖವಾಗಿದೆ. ಪುರುಷಾರ್ಥಗಳು ನಾಲ್ಕಾಗಿರುವಂತೆ ಧರ್ಮದೀಪ್ತಿ ಮೊದಲಿಗೆ ಚರಿತ್ರದೀಪ್ತಿ, ಧರ್ಮದೀಪ್ತಿ, ವಾಣಿಜ್ಯದೀಪ್ತಿ ಮತ್ತು ಸಮಾಜದೀಪ್ತಿಗಳನ್ನೊಳಗೊಂಡಿದ್ದರೂ ದೊಡವಾಡರ ಬಗೆಗೆ ಅಭಿಮಾನಪೂರ್ವಕ ಬರೆದ ಕವನಗಳನ್ನು ಐದನೆಯ ಭಾಗ ಕಾವ್ಯದೀಪ್ತಿ, ಅಮೃತಮಹೋತ್ಸವದ ಸಮಸ್ತ ವರದಿಯನ್ನೊಳಗೊಂಡ ಸಮಾರಂಭದೀಪ್ತಿ ಆರನೆಯ ಭಾಗವಾಗಿ ರೂಪಿತಗೊಂಡಿವೆ.

ಮೊದಲಭಾಗ ದೊಡವಾಡ ಅಣ್ಣನವರ ಬದುಕಿನ ಎತ್ತರವನ್ನು ಬಿತ್ತರಿಸುತ್ತಿದೆ. ನದಿ ಹುಟ್ಟುವಾಗ ಸಣ್ಣ ಝರಿಯಾಗಿ ಸೆಲೆಯೊಡೆಯುವಂತೆ ಗುರುಪುತ್ರಪ್ಪನವರು ಒಂದು ಕಿರಿಯ ಕಿರಾಣಿ ಅಂಗಡಿಯಿಂದ ತಮ್ಮ ಜೀವನ ಪ್ರಾರಂಭಿಸಿ ಇಂದು 'ಆಯಿಲ್ ಕಿಂಗ್' ತೈಲ ಸಾಮ್ರಾಟರ ತಂದೆಯಾಗುವ ಎತ್ತರಕ್ಕೆ ಹೋಗಿರುವರು. ಪ್ರಾಮಾಣಿಕತೆ ಅವರ ಬದುಕಿನ ಪ್ರಾಣ, ಧಾರ್ಮಿಕತೆ ಅವರ ದೇಹ–ಮನಸ್ಸು, ವರ್ತಕನ ಪತ್ತು ಇದ್ದಷ್ಟು ವ್ಯಾಪಾರ ಕಳೆಯೇರುತ್ತದೆ. ಆ ಕಳೆ ಷೋಡಶ ಕಲೆಗಳಿಂದ ಕೂಡಿ ಪೂರ್ಣಚಂದ್ರಮನಾಗಿ ಎಳೆವೆಳ್ದಿಂಗಳನ್ನು ಸುತ್ತೆಲ್ಲ ಸೂಸುತ್ತದೆ. ಅಂತೆ ಈ ಅಮೃತೋತ್ಸವ; ಈ ಧರ್ಮದೀಪ್ತಿ.

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರರವಿಕರ್ಣ ದಧೀಚಿ ಬಲೀಂದ್ರನೆಂದುನೀಂ
ಅನವರತಾ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ ॥

ಎಂದು ಹರಿಹರದೇವನು ಸಾವಕೆಡುವ ಮಾನವರನ್ನು ವರ್ಣಿಸಲು ಕಾವ್ಯಶಕ್ತಿಯನ್ನು ವಿನಿಯೋಗಿಸಕೂಡದೆಂದು ವೀರಶೈವ ಕಾವ್ಯ ಪರಂಪರೆಗೆ ನಾಂದಿಯನ್ನು ಹಾಕಿದನು. ಅಂದರೆ ಮನುಜರನ್ನು ಅನವಶ್ಯಕವಾಗಿ ಹೊಗಳಕೂಡದು ಎಂಬುದು ವೀರಶೈವ ಕವಿಗಳ ಛಲ. ಆದುದರಿಂದ ಗಿರಿಶಂಗೆ ನಾಲಗೆಯಂ ಮಾರಿಕೊಂಡೆನೆಂದು ಒಬ್ಬ ಕವಿ ಹೇಳಿದ. 'ಮಾನವಸ್ತುತಿಗಂಗೈಸಿದಿರಲ್ಪ ಕಾರ್ಯಂ' ಎಂದು ಇನ್ನೊಬ್ಬರು ಹೇಳಿದರು. 'ಶಿವನಂ ತದೀಯ ಶರಣ ವ್ರಜಮಂ ಕೊಂಡಾಡುವೆ'ನೆಂದ ಮತ್ತೊಬ್ಬ ವೀರಶೈವ ಕವಿ. ಇದು ಇವರ ಕಾವ್ಯ ಸಂಪ್ರದಾಯವಾಯಿತು. ಹೀಗಾಗಲು ಇವರ ಹಿಂದಿನ ಯುಗ ದಲ್ಲಿದ್ದ ಆದಿ ಪಂಪ ವಿಕ್ರಮಾರ್ಜುನ ವಿಜಯವೆಂಬ 'ಸಕಲಾರ್ಥ ಸಂಯುತಮಲಂ ಕೃತಿಯುಕ್ತಮುದಾತ್ತ ವೃತ್ತಿ ವಿನ್ಯಾಸಮನೇಕ ಲಕ್ಷಣಯುಕ್ತ'ವಾದ ಮಹೋನ್ನತ ಕಾವ್ಯವನ್ನು ರಚಿಸಿ

> ಕೂಸುಮನೀವುದೀವುದರಿ
> ಕೇಸರಿಗಲ್ಲದ ವಸ್ತುಗೀವುದೆ ?

ಅಂದರೆ ಕಾವ್ಯ ಕನ್ನಿಕೆಯನ್ನು ಅರಿಕೇಸರಿಗರ್ಪಣ ಮಾಡಬೇಕಲ್ಲದೆ ಬೇರೆಯವರಿಗರ್ಪಿಸ ಬಹುದೇ ಎಂದು ಪ್ರಶ್ನಿಸಿ ಆ ಕಾವ್ಯವನ್ನು ಆತನಿಗೆ ಸಮರ್ಪಣೆ ಮಾಡಿದ್ದನು. ಇದನ್ನು ಪ್ರತಿಭಟಿಸಿದ ವೀರಶೈವ ಕವಿ ರಾಘವಾಂಕ

> ರಸಜೀವ ಭಾವವೊಡಲರ್ಥವಯವ ಶಬ್ದ
> ವಿಸರವೇನು ನುಡಿಯಲಂಕಾರವೇ ತೊಡಿಗೆಯುತ
> ವೆಸುಲಕ್ಷಣವೆ ಲಕ್ಷಣಂ ವಿಮಳಪದನ್ಯಾಸ ನಡೆರೀತಿ ಸುಕುಮಾರತೆ
> ರಸಿಕತನ ಸುಳಿಸುಖಿಂ ನಿಳಯವಂತಪ್ಪ ಈ
> ಪೊಸ ಕಾವ್ಯಕನ್ನಿಕೆಯ ಪಡೆದು ಈ ಪಂಪಾಂಬಿಕೆಯ
> ರಸ ವಿರೂಪಾಕ್ಷಂಗೆ ಕೊಟ್ಟ ಹಂಪೆಯ–
> ರಾಘವಾಂಕನೇಂ ಕೃತಕೃತ್ಯನೋ ॥

ಎಂದು ಹೇಳಿದನು. ರಸವೇ ಜೀವ, ಭಾವವೇ ಒಡಲು, ಅರ್ಥ ಅವಯವ, ಶಬ್ದ ನುಡಿ, ಅಲಂಕಾರ ತೊಡಿಗೆ, ಸುಲಕ್ಷಣವೆ ಲಕ್ಷಣ, ರಸಿಕತನ ಸುಳಿ, ಸುಖ, ಮನೆ ಹೀಗಿದ್ದ ಹೊಚ್ಚ ಹೊಸ ಕಾವ್ಯಕನ್ನಿಕೆಯನ್ನು ಹಡೆದು ಅದನ್ನು ಪಂಪಾಂಬಿಕೆಯರಸ ವಿರೂಪಾಕ್ಷನಿಗೆ ಅರ್ಪಿಸಿರುವನು ರಾಘವಾಂಕ.

ಶಿವನನ್ನು ಶಿವಶರಣರನ್ನು ಮಾತ್ರ ವಸ್ತುವಾಗಿಟ್ಟು ಕಾವ್ಯ ರಚಿಸಬೇಕೆಂಬುದು ವೀರಶೈವ ಕಾವ್ಯಸಂಪ್ರದಾಯ.

ಈ ದೃಷ್ಟಿಯಿಂದ ನಮ್ಮ ಪ್ರಸ್ತುತ ಕಾರ್ಯವನ್ನು ಪರೀಕ್ಷಿಸುವುದಾದರೆ ನಾವು ಗುರುಪುತ್ರಪ್ಪನವರನ್ನು ಒಬ್ಬ ಶರಣರೆಂದು ಪರಿಭಾವಿಸಿರುವುದನ್ನು ಗಮನಿಸಬೇಕು.

ಗುರುಪುತ್ರಪ್ಪನವರ ಸಜ್ಜನಿಕೆ, ದೈವಭಕ್ತಿ, ಲೋಕ ಸಂಗ್ರಹ, ಸತ್ಯಪ್ರೇಮ, ನ್ಯಾಯ ದೃಷ್ಟಿ, ಧರ್ಮಭಾವ, ಪುಣ್ಯಚರಿತೆ, ಪಾಪಭೀರುತ್ವ ಇವು ಜನತೆಯ ಮನವನ್ನು ಸೆಳೆದುಕೊಂಡಿವೆ. ಬಡವರ ವಿಷಯವಾಗಿ ಅವರಿಗಿರುವ ಕಳಕಳಿ, ಕಾರುಣ್ಯ ಎಲ್ಲರ ಮೆಚ್ಚುಗೆಯನ್ನು ಪಡೆದಿವೆ. ಅವರ ದೇಶ, ದೈವ, ಸಾಹಿತ್ಯಪ್ರೇಮಗಳು ತಮ್ಮ ಶ್ರೀಗಂಧವನ್ನು ಸುತ್ತು ಪಸರಿಸಿವೆ. ಅಂತೆಯೇ ವೈಭವೋಪೇತವಾದ ಈ ಸಭೆಗೆ ನಾನಾ ಭಾಗದಿಂದ, ನಾನಾ ಕೋಮುಗಳಿಂದ ಜನ ಧಾವಿಸಿ ಬಂದಿದ್ದರು. ಗುರುಪುತ್ರಪ್ಪನವರಿಗೆ ಹಾರ ಅರ್ಪಿಸಿ ಕಾಣಿಕೆ ಸಲ್ಲಿಸಿದರೆ, ಅದು ದೇವರಿಗೆ ಮುಟ್ಟಿ ದಂತಾಗುತ್ತದೆಯೆಂಬ ಭಾವ ಸಭೆಯಲ್ಲಿ ವ್ಯಕ್ತವಾಗುತ್ತಿತ್ತು. ಈ ಪ್ರೇಮಭಾವ ಉಕ್ಕಿ ಹೊರಚಿಲ್ಲಿ ಶಿಸ್ತಿನ ಸಭೆಯ ಕಾರ್ಯಕಲಾಪಗಳಿಗೆ ವ್ಯತ್ಯಯವನ್ನುಂಟು ಮಾಡಿ ದರೂ, ಅವರ ಜನಪ್ರಿಯತೆ ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಸಾವಿರ ಸಾವಿರ ಜನ, ರಾಶಿ ರಾಶಿ ಮಾಲಾರ್ಪಣೆ ಮಾಡಿ ಕೃತಜ್ಞತೆ ವ್ಯಕ್ತಪಡಿಸಿದರು. ಅಲ್ಲಿ ಸಭೆಯಲ್ಲಿ ಮಾತನಾಡಿದವರು, ಇಲ್ಲಿ ಗ್ರಂಥದಲ್ಲಿ ಲೇಖನ ಬರೆದವರು ಎಲ್ಲರೂ ಗುರುಪುತ್ರಪ್ಪ ನವರ ಗುಣ ಶೀಲ ಸಂಪತ್ತನ್ನು ಬಣ್ಣಿಸಿರುವರಲ್ಲದೆ ಅವರ ಧನಸಂಪತ್ತನ್ನಲ್ಲ.

ನಾವು ಗುರುಪುತ್ರಪ್ಪನವರನ್ನು ಕಳೆದ ಮೂರು ದಶಕಗಳಿಂದ ಬಹು ಸೂಕ್ಷ್ಮ ವಾಗಿ ನಿರೀಕ್ಷಿಸುತ್ತ ಬಂದಿದ್ದೇವೆ. ಅವರ ಶರಣ ಜೀವನಕ್ಕೆ, ದೈವೀಭಕ್ತಿಗೆ ಮಾರು ಹೋಗಿದ್ದೇವೆ. ಒಂದು ದಿನ ಬತ್ತದ ವಿಷಯ ಸಮಾಲೋಚಿಸಲು ಒಂದು ಬತ್ತದ ಗಿರಣಿ **(Rice Mill)** ಯೊಳಗೆ ಹೋದೆ. ಅದು ಯಾರದೆಂಬುದು ನನಗೆ ತಿಳಿದಿರ ಲಿಲ್ಲ. ಒಳಗೆ ಹೋಗಿ ನಿಂತಾಗ ಮಷಿನ್ ಸಪ್ಪಳದಲ್ಲಿ ಯಾರು ಮಾತಾಡಿದುದೂ ಕೇಳುತ್ತಿರಲಿಲ್ಲ. ಮುಖ ಮೇಲೆತ್ತಿ ನೋಡಿದಾಗ ಗೋಡೆಯ ಮೇಲೆ ಶರಣವಾಣಿ ಶೋಭಿಸುತ್ತಿದ್ದುವು. ಆಶ್ಚರ್ಯವಾಯಿತು, ವ್ಯವಹಾರದ ಒಂದು ಸ್ಥಾನದಲ್ಲಿ ಇಂತಹ ಅಮೃತೋಕ್ತಿಗಳನ್ನು ಕಂಡು ನಮಗೆ ಹಿಡಿಸಲಾರದಷ್ಟು ಆನಂದವಾಯಿತು. ಆ ಗಿರಣಿ ಗುರುಪುತ್ರಪ್ಪನವರದೇ ಎಂದು ತಿಳಿದಾಗ ಅವರ ಜೀವನದ ರಹಸ್ಯ ಏಳ್ಗೆಯ ಗುಟ್ಟು, ಅಭಿವೃದ್ಧಿಯ ಪ್ರಾಣ ತಿಳಿಯಿತು. 'ತೇನವಿನಾ ತೃಣಮಪಿ ನ ಚಲತಿ' ಎಂಬ ಉಪನಿಷದ್ವಾಣಿ ಇವರ ಜೀವನದಲ್ಲಿ ಹಾಸು ಹೊಕ್ಕಾಗಿರುವುದರ ಅರ್ಥವಾಯಿತು. 'ನಡೆಯಲ್ಲಿ ನುಡಿಯಲ್ಲಿ ಕೊಡುವಲ್ಲಿ ಕೊಂಬಲ್ಲಿ ಕೂಡಲಸಂಗನುಂಟೆಂಬ ಭಾವ' ಅವ ರಲ್ಲಿ ಗಟ್ಟಿಗೊಂಡಿದೆ. ಅಂತೆಯೆ ಅವರ ವ್ಯಾಪಾರ, ಉದ್ದಿಮೆಗಳೆಲ್ಲ ಪರಮಾತ್ಮನ ಸಾಕ್ಷಾತ್ಕಾರವಾಗಿ ನಡೆದಂತಿವೆ. ಮೃದುವಚನವೇ ಸಕಲ ಜಪತಪಂಗಳೆಂಬುದು ಅವರ ಜೀವನದ ಸೂತ್ರವಾಗಿದೆ. ಸತ್ಯ ಶುದ್ಧ ಕಾಯಕವನ್ನು ಚಿತ್ತಶುದ್ಧಿಯಿಂದ ಮಾಡಿದ ಗುರುಪುತ್ರಪ್ಪನವರಿಗೆ ಲಕ್ಷ್ಮಿ ಎತ್ತ ನೋಡಿದತ್ತ ಕೈ ಸಾರ್ದುದು ಅಚ್ಚರಿ ಯಲ್ಲ ಅಂತೆ ಅವರೊಬ್ಬ ಶರಣರು. ಶರಣರು ಅಂದಿದ್ದರು ಇಂದಿಲ್ಲ ಎನ್ನುವಂತಿಲ್ಲ, ಅವರು ಎಂದೆಂದಿಗೂ ಇರತಕ್ಕವರೇ ಅಂತಹರಿರುವುದರಿಂದಲೇ ಪುಣ್ಯ ಬದುಕಿದೆ. ಸತ್ಯ ಸಾಯದೆ ಉಳಿದಿದೆ. ಇದನ್ನರಿತು ಈ ಅಮೃತಮಹೋತ್ಸವದ ಕಾರ್ಯ ಜರುಗಿದೆ.

ಅಮೃತಮಹೋತ್ಸವ ವೈಭವದಿಂದ ನೆರವೇರಿದುದು ನಿಜ. ಅದನ್ನು ಕಂಡವರ ಕಣ್ಣಲ್ಲಿ ಆನಂದ ಬಾಷ್ಪಗಳುದುರಿದುವು. ಇಷ್ಟಕ್ಕೆ ನಿಂತರೆ ಈ ಕಾರ್ಯ ಮುಗಿದಂತಾಗದು. ಸಮಾಜದಲ್ಲಿ ಶಾಶ್ವತವಾಗಿ ಉಳಿಯುವ ಕಾರ್ಯವೇನಾದರೂ ಈ ಅಮೃತೋತ್ಸವದ ಕುರುಹಾಗಿ ಉಳಿದರೆ ಇದರ ಆಚರಣೆ ಸಾರ್ಥಕವಾಗುತ್ತದೆ. ಈ ಹಂದರ, ಸಭೆ, ಭೋಜನ ಬಾಜನ ಒಂದು ದಿನದ ಸಂತೆಯಿದ್ದಂತೆ: ಭಾಷಣಗಳು ಗಾಳಿಯಲ್ಲಿ ಗಾಳಿಯಾಗಿ ಹೋಗುತ್ತವೆ. ಮಾಲೆಗಳು ಬಾಡಿ ನಿಲ್ಲುತ್ತವೆ. ಕಾಣಿಕೆಗಳು ಕಾಣದಾಗುತ್ತವೆ. ಇವುಗಳಿಗೆ ಶಾಶ್ವತತೆಯ ಸ್ವರೂಪ ಕೊಡಬೇಕಾದರೆ ಸಮಾಜಕ್ಕೆ ಶಾಶ್ವತವಾಗಿ ಉಪಯುಕ್ತವಾಗುವ ಕಾರ್ಯವೊಂದು ನೆರವೇರುವುದು ಅವಶ್ಯ.

ಮೊನ್ನೆ ಸಭೆಯಲ್ಲಿ ಘೋಷಣ ಮಾಡಿದ ೧,೧೧,೧೧೧ ರೂ ನಿಧಿಯನ್ನೆ ಈ ದೃಷ್ಟಿಯಲ್ಲಿ ಬೀಜ ನಿಧಿಯೆಂದು ಭಾವಿಸಿ ಉದಾರಿಗಳಾದ ಚಿರಂಜೀವರು ಉಳಿದ ನಿಧಿಯನ್ನು ಸೇರಿಸಿ ಶಾಶ್ವತ ಕಾರ್ಯ ಮಾಡಬಹುದು.

ಕಾರ್ಯವೆಲ್ಲ ಪೂರ್ತಿಯಾಗಿರುವುದರಿಂದ ಮತ್ತೆ ಬೇರೆಡೆಗೆ ಸೂಚನೆ ಮಾಡುವುದಕ್ಕಿಂತ ಈ ಪ್ರಸ್ತಾವನೆಯಲ್ಲಿಯೇ ಇದರ ಪ್ರಸ್ತಾಪ ಸಾಧುವೆಂದು ನಿವೇದಿಸಲಾಗಿದೆ.

ಭದ್ರಂ ಶುಭಂ ಮಂಗಲಂ

ಆರ್. ಸಿ. ಹಿರೇಮಠ
ಪ್ರಧಾನ ಸಂಪಾದಕರು



ಆರಾಧ್ಯ ದೈವ ಶ್ರೀ ಮಹದೇಶ್ವರ, ಮಹದೇಶ್ವರ ಬೆಟ್ಟ
ತಾಲೂಕ : ಕೊಳ್ಳೆಗಾಲ, ಮೈಸೂರ



ಜಗಜ್ಯೋತಿ ಬಸವೇಶ್ವರರು




ಮಹಾಮಹಿಮ ಪೂಜ್ಯ ಶ್ರೀ ಅಥಣಿ ಮುರಘೇಂದ್ರ
ಶಿವಯೋಗಿಗಳು



ಪೂಜ್ಯ ಶ್ರೀ ಮುರಗೋಡ ಮಹಾಂತ ಶಿವಯೋಗಿಗಳು



ಪೂಜ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು
ಮುರಘಾಮಠ, ಧಾರವಾಡ



ಪೂಜ್ಯ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು
ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ



ಪೂಜ್ಯ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ತೋಂಟದಾರ್ಯ ಸಂಸ್ಥಾನ ಮಠ, ಡಂಬಳ – ಗದಗ



ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು
ಮುರಘಾಮಠ, ಧಾರವಾಡ




ಪೂಜ್ಯ ಶ್ರೀ ನೀಲಕಂಠ ಸ್ವಾಮಿಗಳು
ಅರಭಾವಿಮಠ, ಮುರಗೋಡ



ಮಾನ್ಯ ಶ್ರೀ ಬಿ. ಡಿ. ಜತ್ತಿ
ಮಾಜಿ ಉಪರಾಷ್ಟ್ರಪತಿ
ಸಮಾರಂಭದ ಅಧ್ಯಕ್ಷರು



ಮಾನ್ಯ ಶ್ರೀ ಬಿ. ಎಂ. ಚಂದ್ರಶೇಖರ
ಉಚ್ಚನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು
ಸಮಾರಂಭದ ಮುಖ್ಯ ಅತಿಥಿಗಳು



ಪದ್ಮಶ್ರೀ ಡಾ. ಆರ್. ಬಿ. ಪಾಟೀಲ
ಸ್ವಾಗತ ಸಮಿತಿಯ ಅಧ್ಯಕ್ಷರು



ಶ್ರೀ ಬಿ. ಎಸ್. ಲಕಮನಹಳ್ಳಿ
ಅಮೃತ ಮಹೋತ್ಸವದ ಕಾರ್ಯಾಧ್ಯಕ್ಷರು




ಶ್ರೀ ಈರಣ್ಣಾ ವಾಣಿ
ಅಮೃತ ಮಹೋತ್ಸವದ ಪ್ರಧಾನ ಕಾರ್ಯದರ್ಶಿಗಳು

ಅಮೃತ ಮಹೋತ್ಸವ ಸಮಿತಿ



ಶ್ರೀ ಎಂ. ಜಿ. ಅಗಡಿ
ವಕೀಲರು
ಉಪಾಧ್ಯಕ್ಷರು




ಶ್ರೀ ಬಿ. ಎಸ್. ಕುಂದಗೋಳ


ಅಮೃತ ಮಹೋತ್ಸವ ಸಮಿತಿ



ಶ್ರೀ ಸಿ. ಎಸ್. ಘಂಟೆಣ್ಣವರ
ಸಂಯೋಜಕರು



ಶ್ರೀ ಎಂ. ಜಿ. ನಡಕಟ್ಟಿ
ವಕೀಲರು
ಕಾರ್ಯದರ್ಶಿ



ಶ್ರೀ ಬಿ. ಜಿ. ದೊಡಮನಿ
ಕೋಶಾಧ್ಯಕ್ಷರು
ಅಮೃತ ಮಹೋತ್ಸವ ಸಮಿತಿ

ಅಮೃತ ಮಹೋತ್ಸವ ಸಮಿತಿ



ಎಸ್. ಎನ್. ಸೀಮಿಕೇರಿಮಠ
ಕಾರ್ಯದರ್ಶಿಗಳು



ಶ್ರೀ ಎಂ. ಎಂ. ಹೊರಡಿ
ಕಾರ್ಯಾಲಯದ ಪ್ರಧಾನ ಕಾರ್ಯದರ್ಶಿ




ಶ್ರೀ ಸುರೇಶ ಕುಲಕರ್ಣಿ
ಕಲಾವಿದರು
ಅಮೃತ ಮಹೋತ್ಸವ ಸಮಿತಿ

ಅಭಿನಂದನಾ ಗ್ರಂಥದ ಸದಸ್ಯರು



ಡಾ. ಆರ್. ಸಿ. ಹಿರೇಮಠ
ಮಾಜಿ ಕುಲಪತಿ ಕ. ವಿ. ವಿ. ಧಾರವಾಡ
ಅಭಿನಂದನಾ ಗ್ರಂಥದ ಪ್ರಧಾನ ಸಂಪಾದಕರು



ಡಾ. ಎಂ. ಎಸ್. ಸುಂಕಾಪೂರ
ಅಭಿನಂದನಾ ಗ್ರಂಥದ ಉಪಸಂಪಾದಕರು

ಅಭಿನಂದನಾ ಗ್ರಂಥದ ಸದಸ್ಯರು



ಪ್ರೊ. ಎಸ್. ಎಸ್. ಭೂಸರಡ್ಡಿ



ಡಾ. ಮೃತ್ಯುಂಜಯ ಶಾಸ್ತ್ರಿಮಠ



ಡಾ. ಚನ್ನಕ್ಕ ಎಲಿಗಾರ



ಶ್ರೀ ಯೋಗೇಶ ಯಡ್ರಾವಿ



ಶ್ರೀ ಈಶ್ವರ ಕಮ್ಮಾರ

ಸಂದೇಶ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ
ಮಹಾಸ್ವಾಮಿಗಳು

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನ.
ಚಿತ್ರದುರ್ಗ

ದಿ. ೨೯-೧೨-೧೯೮೭

ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅವರ ಅಮೃತ ಮಹೋತ್ಸವ ಈಗ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ದೊಡವಾಡರು ಬಡತನದಿಂದ ಈ ಮಟ್ಟಕ್ಕೆ ಬಂದುದು, ವ್ಯಾಪಾರೋದ್ಯಮ ನೈಪುಣ್ಯದಿಂದ, ಸರಳ ಸ್ವಭಾವದ ಧರ್ಮಬುದ್ಧಿಯಿಂದ.

ಅವರ ಶ್ರೀಮಂತಿಕೆ. ಧರ್ಮಕಾರ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉದಾರವಾಗಿ ಹರಿದು ಬಂದಿದೆ. ಮೃದು-ಮಧುರ ಹೃದಯದ ಮಿತ ಭಾಷಿ ದೊಡವಾಡರು ಜನಪ್ರಿಯ ವ್ಯಕ್ತಿಯೆನಿಸಿದ್ದಾರೆ. ಅವರು ಆರಂಭಿಸಿರುವ ಸಾರ್ವಜನಿಕ ಸಂಸ್ಥೆಗಳು ಹಾಗೂ ಉದ್ಯಮಗಳು ವ್ಯವಸ್ಥಿತವಾಗಿ ಮುಂದುವರಿಯುತ್ತಿವೆ.

ಅವರ ಅಮೃತ ಮಹೋತ್ಸವ. ಅಮೃತ ಪುತ್ರನ ಆದರ್ಶ ಸಮಾರಂಭವಾಗಿ ಜರುಗಲೆಂದು ಹಾರೈಸಲಾಗಿದೆ.

ಇತಿ ಶಿವಮ್

ಸಂದೇಶ

ಶ್ರೀಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು

ಸಂಸ್ಥಾನಮಠ. ಡಂಬಳ–ಗದಗ

ದಿ. ೧–೧–೧೯೮೮

ಸರಳ. ಸಜ್ಜನ. ಸುಸಂಸ್ಕೃತ ವ್ಯಕ್ತಿಯಾಗಿ. ವ್ಯಾಪಾರಿಯಾಗಿ. ಸಮಾಜಜೀವಿಯಾಗಿ ಬಹುಮುಖಿ ವ್ಯಕ್ತಿತ್ವ ಹೊಂದಿದ ಧಾರವಾಡದ ಶ್ರೀ ಜಿ. ಜಿ. ದೊಡವಾಡರ ಅಮೃತ ಮಹೋತ್ಸವ ಜರುಗುತ್ತಿರುವದು ಸಂತಸದ ಸಂಗತಿ.

ಸಮಕಾಲೀನ ವೀರಶೈವ ಸಮಾಜದ ಸುವಿಖ್ಯಾತ ವರ್ತಕರಾದ ಶ್ರೀ ಗುರುಪುತ್ರಪ್ಪನವರು ಬೆಳಗಾಗುವದರೊಳಗೆ ಪ್ರಸಿದ್ಧಿಗೆ ಬಂದವರಲ್ಲ. ಅನಾಯಾಸ ಆಕಸ್ಮಿಕ ಧನಯೋಗ ಪಡೆದವರಲ್ಲ. ಇನ್ನೊಬ್ಬರ ಸೊತ್ತಿನ ಸಹಾಯದಿಂದ ಮುಂದೆ ಬಂದವರಲ್ಲ. ಅವಿರತ ಪ್ರಯತ್ನ. ನಿರಂತರ ಪರಿಶ್ರಮ. ಪ್ರಾಮಾಣಿಕ ವ್ಯವಹಾರದಿಂದ ಹಂತ-ಹಂತವಾಗಿ ಬೆಳೆದು ಯಶಸ್ವೀ ಜೀವನದ ಸೋಪಾನವನ್ನೇರಿದವರು. ಯೋಚನೆ ಯೋಜನೆಗಳ ಸುಂದರ ಸಮನ್ವಯವನ್ನು ಸಾಧಿಸಿದ. ಸೋಲರಿಯದ ಸಾಹಸಿಗಳು.

ಅವರಿಗೆ ಬಸವಾದಿ ಪ್ರಮಥರು ಇನ್ನೂ ಹೆಚ್ಚಿನ ಆಯುಷ್ಯ ಆರೋಗ್ಯವನ್ನಿತ್ತು ಮುನ್ನಡೆಸಲೆಂದು ಶುಭ ಹಾರೈಕೆ.

ಇತಿ ಶಿವಂ

ಸಂದೇಶ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು

ಮೂರುಸಾವಿರಮಠ, ಹುಬ್ಬಳ್ಳಿ

ದಿ. ೧೮–೧–೧೯೮೮

ಇದೀಗ ಧಾರವಾಡದ ವಾಣಿಜ್ಯೋದ್ಯಮಿಗಳೂ, ಸಮಾಜ ಸೇವಾನಿಷ್ಠರೂ ಆದ ಶ್ರೀ ಗುರುಪುತ್ರಪ್ಪನವರು ಗುರುಪಾದಪ್ಪನವರು ದೊಡವಾಡ ಇವರ ಅಮೃತ ಮಹೋತ್ಸವ ಸಮಾರಂಭವನ್ನು ಆಚರಿಸಲಿರುವ ವಿಷಯ ಓದಿ ನಮಗೆ ತುಂಬಾ ಸಂತಸವಾಗಿದೆ.

ವಿಶಾಲ ಹೃದಯಿಗಳಾದ ಶ್ರೀ ದೊಡವಾಡರವರದು ಬಹುಮುಖ ವ್ಯಕ್ತಿತ್ವ. ಅವರು ಹೆಸರಿಗೆ ತಕ್ಕಂತೆಯೇ 'ಗುರುಪುತ್ರ'ರೇ ನಿಜ. ಅವರ ಸೇವೆ ಈ ಸಮಾಜಕ್ಕೆ ನಿತ್ಯ ನಿರಂತರವಾಗಿ ಸಲ್ಲುತ್ತಾ ಬಂದಿದೆ. ಅವರು ತಮ್ಮ ಸಾರ್ಥಕವಾದ ಎಪ್ಪತ್ತೇಳು ವಸಂತಗಳಲ್ಲಿ ವ್ಯಾಪಾರಿಗಳಾಗಿ, ವ್ಯವಹಾರ ಚಾಣಾಕ್ಷರಾಗಿ. ಸಮಾಜ ಜೀವಿಗಳಾಗಿ ಉಪಯುಕ್ತ ಬಾಳನ್ನು ಬದುಕಿದ್ದಾರೆ.

ಇಂತಹ ಪುಣ್ಯಜೀವಿಯೊಬ್ಬರ ಅಮೃತ ಮಹೋತ್ಸವದ ಆಚರಣೆ ನಿಜಕ್ಕೂ ಹೆಮ್ಮೆಯ ವಿಷಯ ! ಶ್ರೀಯುತರು ಇದಕ್ಕಿಂತ ಹೆಚ್ಚು ಸಮಾಜ ಸೇವೆ ಸಲ್ಲಿಸುತ್ತ, ಆರೋಗ್ಯಶಾಲಿಗಳಾಗಿ ಶತವಸಂತಗಳ ತುಂಬು ಬಾಳನ್ನು ಬಾಳಲಿ !! ಆ ಶಕ್ತಿಯನ್ನು ಜಗನ್ನಿಯಾಮಕನಾದ ಶ್ರೀ ಕರ್ತೃ ಜಗದ್ಗುರು ಗುರುಸಿದ್ಧೇಶ್ವರನು ದಯಪಾಲಿಸಲೆಂದು ಈ ಮೂಲಕ ಅಂತಃಕರಣಪೂರ್ವಕವಾಗಿ ಹಾರೈಸುತ್ತೇವೆ.

ಇತ್ಯಾಶಿಷಃ

ಸಂದೇಶ

ಶ್ರೀ ಶಿವಕುಮಾರ ಸ್ವಾಮಿಗಳು

ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ

ಶ್ರೀ ಜಿ. ಜಿ. ದೊಡವಾಡ ಅವರ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವುದು ಸಂತೋಷದ ವಿಷಯವಾಗಿರುತ್ತದೆ. ಇಡೀ ಜೀವನವನ್ನು ಸತ್ಯಶುದ್ಧ ಕಾಯಕಕ್ಕೆ ಅರ್ಪಿಸಿಕೊಂಡು ಗುರುಲಿಂಗ ಜಂಗಮ ಪ್ರೇಮಿಯಾಗಿ "ಅಜಾತ ಶತ್ರು" ವೆನಿಸಿಕೊಂಡಿರುವ ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅವರ ಅಮೃತ ಮಹೋತ್ಸವವನ್ನು ಪ್ರತಿಷ್ಠಿತರೆಲ್ಲಾ ಸೇರಿ ಮಾಡುತ್ತಿರುವುದು ಒಂದು ಸ್ತುತ್ಯವಾದ ಕಾರ್ಯವಾಗಿರುತ್ತದೆ. ಅಮೃತ ಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಲಿ. ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅವರು ತಮ್ಮ ಸತ್ಯ ಶುದ್ಧ ಕಾಯಕ, ಜೀವನದ ಬೆಳಕಿನಲ್ಲಿ ಆದರ್ಶಮಯವಾದ ತುಂಬುಜೀವನವನ್ನು ಸಾಗಿಸಿ, ಶತಾಯುಷಿಗಳಾಗಿ ಬಾಳುವಂತಾಗಿ, ಜನಪ್ರಿಯತೆಯ ಮೇರು ಶಿಖರವನ್ನೇರಲಿ. ಇನ್ನೂ ಅತಿಶಯವಾದ ಲೋಕ ಕಲ್ಯಾಣಕರವಾದ ಮಂಗಳ ಕಾರ್ಯಗಳನ್ನು ಮಾಡಲು, ಆವಶ್ಯಕವಾದ ಸಮಸ್ತ ಸಂಪತ್ಸಮೃದ್ಧಿಗಳನ್ನು ದಯಾಮಯನಾದ ಪರಶಿವನು ಕೃಪೆಯಿಂದ ಅವರಿಗೆ ಅನುಗ್ರಹಿಸಲೆಂದು ಹಾರೈಸುತ್ತೇವೆ.

ಸಂದೇಶ

ಚಿತ್ತರಗಿ ಶಿವಾನುಭವ ಚರವರ್ಯರು
ಶ್ರೀ ನಿ. ಪ್ರ. ಮಹಾಂತ ಸ್ವಾಮಿಗಳವರು

ಚಿತ್ತರಗಿ ಸಂಸ್ಥಾನಮಠ, ಇಲಕಲ್ಲ

ಶರಣರಾದ ಶ್ರೀ ಜಿ. ಜಿ. ದೊಡವಾಡ ಅವರು ತಮ್ಮ ತುಂಬು ಜೀವನದ ೭೭ ನೇ ವರ್ಷದಲ್ಲಿ ಪಾದಾರ್ಪಣೆ ಮಾಡುತ್ತಿರುವ ಈ ಮಂಗಲ ಸಂಗತಿಯಿಂದಾಗಿ ನಮಗೆ ಅಪಾರ ಸಂತೃಪ್ತಿಯಾಗಿದೆ. ಇವರ ಅಮೃತ ಮಹೋತ್ಸವವನ್ನು ಧಾರವಾಡ ಮಹಾನಗರದ ಪ್ರತಿಷ್ಠಿತ ನಾಗರಿಕರು ಆಚರಿಸುತ್ತಲಿರುವದು ಅತ್ಯಂತ ಸೂಕ್ತವಾಗಿದೆ.

ದಿ ೪–೧೦–೧೯೮೭ ರಂದು ಶ್ರೀಮಠದಿಂದ ನಡೆಯಿಸುತ್ತಿರುವ ಶರಣ ಸಿದ್ಧಾಂತ ವಿದ್ಯಾಪೀಠದ ೧೦ ನೆಯ ಶಿಬಿರವು ಶರಣ ಜಿ. ಜಿ. ದೊ ಡ ವಾ ಡ ಅವರ ಕಾರ್ಯಾಧ್ಯಕ್ಷತೆಯಲ್ಲಿ ಅವಿಸ್ಮರಣೀಯ ಶಿಬಿರವಾಗಿ ಜರುಗಿತು. ಇವರು ಬಸವ ತತ್ವಾಭಿಮಾನಿಗಳಾಗಿದ್ದು, ನಿಜವಾದ ಅರ್ಥದಲ್ಲಿ ಗುರು–ಲಿಂಗ–ಜಂಗಮ ಸೇವೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವರಾಗಿದ್ದಾರೆ.

ಇವರು ಕಷ್ಟಗಳ ಕುಲುಮೆಯಲ್ಲಿ ಹಾದು ಬಂದವರಾದುದರಿಂದ ಜೀವನವನ್ನು ಸರಿಯಾಗಿ ಅರ್ಥೈಸಿಕೊಂಡಿದ್ದಾರೆ. ಇವರು ತುಂಬು ಜೀವನವನ್ನು ನಡೆಸಿದ ಸಾರ್ಥಕ ಸಾಹಸಿಗಳಾಗಿದ್ದು ಸಮಾಜಕ್ಕೊಂದು ಸತ್ವಶಾಲಿ ಬೆಳಕಾಗಿದ್ದಾರೆ. ಇವರ ಅಮೃತ ಮಹೋತ್ಸವವನ್ನು ಪೂಜ್ಯ ಧಾರವಾಡ ಮಹಾಂತಪ್ಪಗಳವರ ಸನ್ನಿಧಿಯಲ್ಲಿ ಆಚರಿಸುತ್ತಿದ್ದುದು, ನಮ್ಮ ಹೃದಯಕ್ಕೆ ಜೇನು ಸುರಿದಷ್ಟು ಸಂತಸವನ್ನುಂಟು ಮಾಡಿದೆ.

ಈ ಸುಸಂದರ್ಭದಲ್ಲಿ ಅಭಿನಂದನ ಗ್ರಂಥವನ್ನು ಪ್ರಕಟಿಸಲು ಹಮ್ಮಿಕೊಂಡದ್ದು ಅತ್ಯಂತ ಸ್ತುತ್ಯವಾದ ಕಾರ್ಯವಾಗಿದೆ. ಸಮಾಜಕ್ಕಾಗಿ ಅಹರ್ನಿಶಿ ದುಡಿದವರಾದ ಇವರನ್ನು ಗೌರವಿಸುವದು ಸಮಾಜದ ನೈತಿಕ ಹೊಣೆಯಾಗಿದೆ.

ಶರಣ ಜಿ. ಜಿ. ದೊಡವಾಡ ಅವರಿಗೆ ಕಲ್ಯಾಣದಪ್ಪಗಳು ಹಾಗು ಚಿತ್ತರಗಿ ಶಿವಯೋಗಿಗಳು ಸರ್ವತೋಮುಖವಾಗಿ ಕಲ್ಯಾಣವನ್ನುಂಟು ಮಾಡಲೆಂದು ಹೃದಯಾರೆ ಹಾರೈಸುತ್ತೇವೆ.

ಶರಣುಗಳು

ಸಂದೇಶ

ವೀರೇಂದ್ರ ಹೆಗ್ಗಡೆಯವರು

ಧರ್ಮಸ್ಥಳ

ದಿ. ೧೮–೧–೧೯೮೮

ಆದರ್ಶ ಸಮಾಜಸೇವಕ ಶ್ರೀ ಜಿ. ಜಿ. ದೊಡಮಾದರ ಅಮೃತ ಮಹೋತ್ಸವವನ್ನು ಆಚರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು. ಔದ್ಯಮಿಕ, ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವರು ಗಣನೀಯ ಸೇವೆ ಸಲ್ಲಿಸಿದ್ದಾರೆ. ಅವರ ಸರಳ ಜೀವನ, ಉದಾತ್ತ ಗುಣಗಳು, ವಿಶಾಲ ಮನೋಭಾವ, ಸಹೃದಯತೆ ಎಲ್ಲರಿಗೂ ಆದರ್ಶಪ್ರಾಯ ವಾಗಿದೆ. ಅವರ ಗಣನೀಯ ಸೇವೆಯನ್ನು ಗುರುತಿಸಿ, ಗೌರವಿಸು ವುದರಿಂದ, ಅವರಿಗೆ ಇನ್ನೂ ಹೆಚ್ಚಿನ ಸೇವೆ ಮಾಡಲು ಪ್ರೇರಣೆ ನೀಡಿದಂತಾಗುತ್ತದೆ.

ಈ ಶುಭ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ಹೊರ ತರಲಿರುವ ವಿಚಾರ ತಿಳಿದು ಸಂತೋಷವಾಯಿತು. ಅವರ ಜೀವನ–ಸಾಧನೆಯನ್ನು ಚಿತ್ರಿಸುವ ವಿವಿಧ ವೈಚಾರಿಕ ಲೇಖನಗಳೊಂದಿಗೆ, ಸ್ಮರಣ ಸಂಚಿಕೆ ಸರ್ವಾಂಗ ಸುಂದರವಾಗಿ ಪ್ರಕಟವಾಗಲೆಂದು ಹಾರೈಸುತ್ತೇನೆ.

ಸನ್ಮಾನಿತ ಶ್ರೀ ದೊಡಮಾದರಿಗೆ ಶ್ರೀ ಮಂಜುನಾಥ ಸ್ವಾಮಿ ದೀರ್ಘಾಯುರಾರೋಗ್ಯವನ್ನಿತ್ತು ಸಕಲ ಸನ್ಮಂಗಳ ವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇನೆ.

ಇತಿ

ಡಿ. ವೀರೇಂದ್ರ ಹೆಗ್ಗಡೆ

ಶ್ರೀ ನಿ. ಪ್ರ. ಮಹಾಂತಸ್ವಾಮಿಗಳು
ಶ್ರೀ ಗುರು ಮೃತ್ಯುಂಜಯ ಮಹಾಸ್ವಾಮಿಗಳು

ಶ್ರೀ ಮುರುಘಾಮಠ, ಧಾರವಾಡ

ದಿ. ೧–೧–೧೯೮೮

ಆಧ್ಯಾತ್ಮಿಕ ಪ್ರವೃತ್ತಿಯುಳ್ಳವರಾಗಿದ್ದ ಧಾರವಾಡ ನಿವಾಸಿಗಳಾದ ಶ್ರೀ ದೊಡವಾಡ ಗುರುಪಾದಪ್ಪನವರ ಸುಪುತ್ರರಾದ ಗುರುಪುತ್ರಪ್ಪನವರು ನಿಜವಾಗಿಯೂ ಮಹಾಭಾಗ್ಯಶಾಲಿಗಳೆಂಬುದಕ್ಕೆ ನಮ್ಮ ಗುರುಗಳ ಕೃಪಾಪಾತ್ರರಾಗಿರುವುದೇ ಸಬಲ ಪ್ರಮಾಣವಾಗಿದೆ. ಜೀವನದಲ್ಲಿ ಪರಿಳಿತಗಳು ಹೇಗೆ ಸಂಭವಿಸುವವೆಂಬುದನ್ನು ಯಾರೂ ತಿಳಿಯಲಾರರು. ಅದೆಲ್ಲ ದೇವರ ಇಚ್ಛೆಗೆ ಸಂಬಂಧಿಸಿದ್ದಾಗಿದೆ. ಶ್ರೀ ಗುರುಪುತ್ರಪ್ಪನವರು ದೊಡವಾಡ ಇವರು ತೀರ ಚಿಕ್ಕ ವಯದಲ್ಲಿಯೇ ನಮ್ಮ ಗುರುಗಳು ಪ್ರಾರಂಭಿಸಿದ್ದ ಪ್ರಸಾದ ನಿಲಯದಲ್ಲಿಯೇ ಕೆಲಕಾಲ ಇದ್ದು ಅಭ್ಯಾಸ ಮಾಡಿ ಹೆಚ್ಚಿನ ಅಭ್ಯಾಸಕ್ಕೆ ಮನಗೊಡದೆ ಕೇವಲ ಧಾರ್ಮಿಕ ದೃಷ್ಟಿಯಿಂದ ವ್ಯವಹಾರವನ್ನು ಪ್ರಾರಂಭಿಸಿದರು. ಅದರಲ್ಲಿಯೂ ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯುತ್ತ ಗಣ್ಯ ವರ್ತಕರಿಂದ 'ವ್ಯವಹಾರ ಕುಶಲರು' ಎಂಬ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಈ ಪ್ರಸಿದ್ಧಿಗೆ ವ್ಯವಹಾರ ಕುಶಲರಾದ ಇವರ ಚಿರಂಜೀವಿಗಳು ಸಹಾಯಕರಾಗಿರುವುದು ನಮಗೆ ಪರಮ ಸಂತೋಷವನ್ನುಂಟು ಮಾಡಿದೆ. ಇಂಥವರ ಅಮೃತ ಮಹೋತ್ಸವವು ದಿನಾಂಕ ೨೯–೧–೮೮ ರಂದು ಜರುಗುತ್ತಿರುವುದು ಮಹಾಭಾಗ್ಯ.

ಗುರುಕೃಪೆ ಪಡೆದವರಿಗೆ ಯಾವುದೂ ಅಸಾಧ್ಯವಲ್ಲ ಎಂಬುದಕ್ಕೆ ಶ್ರೀ ಗುರುಪುತ್ರಪ್ಪನವರನ್ನೇ ನಿದರ್ಶನವಾಗಿಟ್ಟುಕೊಳ್ಳಬಹುದು. ಇವರಲ್ಲಿ ಸ್ವಾಭಾವಿಕವಾಗಿಯೇ ಆಧ್ಯಾತ್ಮಿಕ ಪ್ರವೃತ್ತಿಯು ಹುದುಗಿಕೊಂಡಿದ್ದು ಅದು ವಿಕಾಸವನ್ನು ಹೊಂದಲಿಕ್ಕೆ ಅವಕಾಶ ದೊರೆತಂತೆ ವಿಕಾಸವಾಗುತ್ತ ನಡೆದಿದೆ ಎಂಬುದು ನಮಗೆ ತಿಳಿದ ವಿಷಯ. ಸತ್ಯ ಶುದ್ಧವಾದ ವ್ಯವಹಾರವನ್ನು (ಕಾಯಕವನ್ನು) ನಿರ್ವಹಿಸುತ್ತ ಪಾರಮಾರ್ಥವನ್ನು ಸಾಧಿಸಿಕೊಳ್ಳುತ್ತಲೇ ಇರುವುದು ಇವರ ಪ್ರವೃತ್ತಿಯ ಕುರುಹಾಗಿದೆ.

ಸಂದೇಶ

ಏನಿರ್ದಡೇನು ನಿಜಗುರು ಬೋಧೆಯೊಂದಿಲ್ಲದಿರೆ
ಕಾನನದ ಬೆಳದಿಂಗಳಂದದಿ ವ್ಯರ್ಥವಹುದು.

ಎಂಬ ಅನುಭವಿಗಳ ದಿವ್ಯವಾಣಿಯನ್ನು ಜೀವನದಲ್ಲಿ ಇವರು ಸಂಪೂರ್ಣ ಅಳವಡಿಸಿಕೊಂಡಿದ್ದಾರೆ.

ಭೌತಿಕ ಸಂಪತ್ತನ್ನು ಹೇರಳವಾಗಿ ಸಂಪಾದಿಸಿ ಸಿರಿವಂತರೆಂದೆನಿಸಿದ್ದರೂ ಸುಜ್ಞಾನದ ಕೊರತೆಯೊಂದಿದ್ದರೆ ಅವರನ್ನು ದರಿದ್ರರನ್ನಾಗಿಯೇ ಭಾವಿಸಬೇಕೆಂದು ಅನುಭಾವಿಗಳು ಹೇಳಿದ್ದುಂಟು. ಭೌತಿಕ ಧನದ ದಾರಿದ್ರ್ಯಕ್ಕಿಂತ ಆಧ್ಯಾತ್ಮಿಕಾನುಭವದ ದಾರಿದ್ರ್ಯವು ಜೀವನಕ್ಕೆ ತೀರ ಸಂತಾಪಕರವು. ನರನನ್ನು ಹರನನ್ನಾಗಿ ಮಾಡುವುದೇ ಆಧ್ಯಾತ್ಮಿಕ ಜ್ಞಾನದ ಪ್ರಮುಖ ಗುರಿ. ಆ ಗುರಿಯನ್ನು ಮುಟ್ಟುವುದೇ ಜೀವನ ಸಾಫಲ್ಯದ ಕುರುಹು. ಇವಕ್ಕೆಲ್ಲ ಸತ್ಪುರುಷರ ಸಹವಾಸ ಅತ್ಯವಶ್ಯ.

ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ
ಪಾರಂ ದುಃಖೋದಧೇರ್ಗಂತುಂ ತರ ಯಾವನ್ನ ಭಿದ್ಯತೇ ॥

ಪುಣ್ಯರೂಪವಾದ ಹಣವನ್ನು ಸಮಾರ್ಜಿಸಿ ಶರೀರವೆಂಬ ನೌಕೆಯನ್ನು ಪಡೆದುಕೊಂಡದ್ದು ಸಂಸಾರವೆಂಬ ದುಃಖ ಸಮುದ್ರವನ್ನು ದಾಟುವದಕ್ಕಾಗಿಯೇ. ಈ ಶರೀರವೆಂಬ ನೌಕೆಯು ಒಡೆದು ಹೋಗುವುದರೊಳಗಾಗಿಯೇ ದುಃಖಾಂಬುಧಿಯನ್ನು ದಾಟಬೇಕು – ಎಂಬ ಸತ್ಪುರುಷರ ಅನುಭವೋಕ್ತಿಯು ಇಲ್ಲಿ ಸ್ಮರಣಾರ್ಹವಾಗಿದೆ.

ಜಾಣನು ಲೌಕಿಕ ಪರಮಾರ್ಥವೆರಡನು
ಮಾಣದೆ ಕೂಡಿ ನಡೆಸುತಿಹನು.

ಎಂಬ ನಿಜಗುಣರ ಅನುಭವೋಕ್ತಿಯು ಶ್ರೀ ಗುರುಪುತ್ರಪ್ಪನವರನ್ನು ಕಂಡಾಕ್ಷಣ ನಮ್ಮ ಸ್ಮರಣೆಗೆ ಬರುತ್ತದೆ.

ತಮ್ಮ ಕಾಯಕದಿಂದ ಸಂಪಾದಿಸಿದ್ದನ್ನು ಗುರು – ಲಿಂಗ – ಜಂಗಮಕ್ಕೆ ಅರ್ಪಿಸುತ್ತ–ಗುರುಲಿಂಗಜಂಗಮ ಪ್ರಸಾದವನ್ನೇ ಭೋಗಿಸುತ್ತ ಬಂದಿರುವ ಇವರು ಶತಾಯುಷಿಗಳಾಗಿ ಬಾಳಿ ಮುಂದೆ ಇವರ ವಂಶಪರಂಪರೆಯಲ್ಲಿ ಇದು ಅವಿಚ್ಛಿನ್ನವಾಗಿ ಸಾಗಲೆಂದು ನಾವು ನಮ್ಮ ಗುರುಗಳನ್ನು ಪ್ರಾರ್ಥಿಸುತ್ತೇವೆ.

ಇತ್ಯಾಶಿಷಃ
ಮಹಾಂತಸ್ವಾಮಿಗಳು

ಎಸ್. ಆರ್. ಬೊಮ್ಮಾಯಿ
ಕಂದಾಯ ಮತ್ತು ಯೋಜನಾ ಸಚಿವರು

ವಿಧಾನಸೌಧ
ಬೆಂಗಳೂರ–೧
ದಿ. ೨೫–೧–೮೮

ಸಂದೇಶ

ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅವರ ಅಮೃತ ಮಹೋತ್ಸವ ಸಮಾರಂಭವು ದಿನಾಂಕ ೨೯–೧–೮೮ ರಂದು ನಡೆಯಲಿರುವ ವಿಚಾರ ತಿಳಿಯಿತು ಹಾಗೂ ಅತ್ಯಾನಂದ ವಾಯಿತು. ಪ್ರಮುಖ ವಾಣಿಜ್ಯೋದ್ಯಮಿಯಾಗಿ, ಸಮಾಜ ಕಾರ್ಯಕರ್ತರಾಗಿ. ಧಾರ್ಮಿಕ ಮುಖಂಡರಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಇಂತಹ ಅನುಭವಿಗಳ ಅಮೃತ ಮಹೋತ್ಸವ ಸಮಾರಂಭ ಯಶಸ್ವಿಯಾಗಿ ಜರುಗಿ. ಸನ್ಮಂಗಳ ಉಂಟಾಗಲೆಂದು ಹಾರೈಸುವೆ.

ಎಸ್. ಆರ್. ಬೊಮ್ಮಾಯಿ

ಸಂದೇಶ

ಲಕ್ಷ್ಮೀನರಸಿಂಹಯ್ಯ
ರಾಜ್ಯ ವಿದ್ಯುತ್ ಸಚಿವರು

ವಿಧಾನಸೌಧ
ಬೆಂಗಳೂರು-೧
ದಿ. ೨೫-೧-೮೮

ಪೂರ್ವ ನಿಯೋಜಿತ ಕಾರ್ಯಕ್ರಮಗಳಿರುವುದರಿಂದ ನಿಮ್ಮ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ.

ಸಮಾರಂಭವು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಶತಾಯುಷಿ ಶ್ರೀಮತಿ ಗಂಗಮ್ಮನವರಿಗೆ ವಂದನೆಗಳು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ.
ಲಕ್ಷ್ಮೀನರಸಿಂಹಯ್ಯ

ಸಂದೇಶ

ಪಾಟೀಲ ಪುಟ್ಟಪ್ಪ
ಅಧ್ಯಕ್ಷರು,
ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ

ವಿಧಾನ ಸೌಧ
ಬೆಂಗಳೂರ–೧
ದಿ. ೨೭–೧–೮೮

ನಿಮ್ಮ ಅಮೃತ ಮಹೋತ್ಸವ ಇದೇ ದಿನಾಂಕ : ೨೯ ರಂದು ನಡೆಯಲಿದೆ ಎನ್ನುವುದನ್ನು ಕೇಳಿ ನನ್ನ ಮನಸ್ಸಿಗೆ ತುಂಬ ಸಂತೋಷ ಎನಿಸಿದೆ. ನೀವು ಸಫಲ ೭೫ ವರ್ಷಗಳನ್ನು ಕಳೆದ ಈ ಶುಭ ಸಮಾರಂಭದಲ್ಲಿ ನಾನು ಇರಬೇಕಾಗಿದ್ದಿತು. ಆದರೆ ಪೂರ್ವನಿಯೋಜಿತವಾದ ಕಾರ್ಯಕ್ರಮಗಳು ಬೇರೆ ಕಡೆಯಲ್ಲಿ ಇರುವುದರಿಂದ ನನಗೆ ಆ ದಿನ ಧಾರವಾಡದಲ್ಲಿ ಇರುವುದಕ್ಕೆ ಆಗುವುದಿಲ್ಲ ಎಂದು ವ್ಯಥೆ ಎನಿಸಿದೆ.

ನೀವು ಸದ್ದುಗದ್ದಲ ಇಲ್ಲದೆ ಬಹಳ ಉಪಯುಕ್ತವಾದ ಸಮಾಜ ಕಾರ್ಯಗಳನ್ನು ನೆರವೇರಿಸಿ ಶ್ರೀಸಾಮಾನ್ಯತೆಗೆ ಅಸಮಾನ್ಯತೆಯನ್ನು ತಂದು ಕೊಟ್ಟಿದ್ದೀರಿ. ನಿಮ್ಮಂಥ ಕಾಯ ಕಷ್ಟ ಮಾಡಿ ನಿರಪೇಕ್ಷ ಜೀವನ ಬದುಕಿ ಸಮಾಜಕ್ಕೆ ಅಲಂಕಾರ ಎನಿಸುವ ಕೆಲಸವನ್ನು ಮಾಡಿದವರು ಹೆಚ್ಚು ಜನ ಸಿಕ್ಕುವುದಿಲ್ಲ. ಕೀರ್ತಿ, ಪದವಿ, ಪ್ರತಿಷ್ಠೆಗಳಿಗೋಸುಗ ಬದುಕಿನ ಬಡಿದಾಟ ಮಾಡುವವರೇ ಹೆಚ್ಚು ಜನ ಇದ್ದಾರೆ. ನೀವು ಸತ್ಕಾರ್ಯದಲ್ಲಿ ವಿಶ್ವಾಸ ಇರಿಸಿ ಸಕಲರಿಗೂ ಲೇಸನ್ನೇ ಬಯಸುವ ಬಸವಾದಿ ಪ್ರಮುಖರ ಮನೋಭಾವನೆಯನ್ನು ಬೆಳೆಸಿಕೊಂಡು. ಜೀವನಕ್ಕೆ ಹತ್ತಿಕೊಂಡು. ಜೀವನಕ್ಕೆ ಹತ್ತಿಕೊಳ್ಳದಂತೆ ಶರಣ ಜೀವನವನ್ನು ಬದುಕಿದ್ದೀರಿ. ನೀವು ಇದೇ ರೀತಿ ನೂರು ಕಾಲ ಬೆಳಕು ಆಗುವಂತೆ ಬೆಳಗಬೇಕೆಂದು ನಾನು ಹೃದಯತುಂಬಿ ಹಾರೈಸುತ್ತಿದ್ದೇನೆ. ನಿಮ್ಮ ಜೀವನ ಅಮೃತಮಯವಾಗಲಿ, ಸದಾ ಕಾಲವೂ ಸಮಾಜಕ್ಕೆ ಅಮೃತವನ್ನೇ ಒದಗಿಸಲಿ ಎಂದು ನಾನು ಆ ದಯಾಮಯನಲ್ಲಿ ಪ್ರಾರ್ಥಿಸುತ್ತೇನೆ.

ಪ್ರೀತಿ ವಿಶ್ವಾಸಗಳೊಂದಿಗೆ,

ನಿಮ್ಮವ
ಪಾಟೀಲ ಪುಟ್ಟಪ್ಪ

ಸಂದೇಶ

ಜಗನ್ನಾಥರಾವ ಜೋಶಿ
ಮಾಜಿ ಲೋಕಸಭಾ ಸದಸ್ಯರು

ರಾಜೇಂದ್ರ ಪ್ರಸಾದ
ರಸ್ತೆ. ನವದೆಹಲಿ
೨೪-೧-೮೮

ಮಾನ್ಯ ಶ್ರೀ ಜಿ. ಜಿ. ದೊಡವಾಡ ಇವರ ಅಮೃತ ಮಹೋತ್ಸವದ ಸಮಾಚಾರ ಕೇಳಿ ಬಹಳ ಸಂತೋಷವಾಯಿತು. ನನಗೆ ಬಿಡುವು ಆಗಿದ್ದರೆ ನಾನು ನಿಶ್ಚಿತವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ಆದರೆ ಮೊದಲೇ ನಿಶ್ಚಿತ ಮಾಡಿದ ಕಾರ್ಯಕ್ರಮದ ಪ್ರಕಾರ ೨೯-೧-೮೮ ರಂದು ಬಿಜಾಪುರದಲ್ಲಿರುತ್ತೇನೆ. ಹೀಗಾಗಿ ಸಮಾರಂಭಕ್ಕೆ ಉಪಸ್ಥಿತ ಇರುವುದು ಸಾಧ್ಯವಿಲ್ಲ. ದಯವಿಟ್ಟು ಕ್ಷಮಿಸುವಿರಾಗಿ ನಂಬಿದ್ದೇನೆ.

ಮಾನ್ಯ ಶ್ರೀ ಜಿ. ಜಿ. ದೊಡವಾಡ ಇವರಿಗೆ ಉತ್ತಮ ಆಯುರಾರೋಗ್ಯವನ್ನು ನೀಡಿ ಇವರು ಶತಾಯುಷಿಗಳಾಗಬೇಕೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಜೀವೇಮ ಶರದಃ ಶತಮ್ ॥

ಇಂತಿ ನಿಮ್ಮ
ಜಗನ್ನಾಥರಾವ ಜೋಶಿ

Message

V. S. Malimath

Chief Justice

Chief Justice's Bungalow
Judge's Avenue
COCHIN–11

30–1–88

I am very happy to receive the invitation sent by Sri G. G. Dodwad Amrut Mahotsava Samiti, Dharwad. I am glad to know that Mahaswamijis of Chitradurga, Murughamath and the Tontadaryamath and Duradundeshwaramath and eminent personalities Hon'ble Sri B. D. Jatti and Hon'ble Sri D. M. Chandrashekhar will be participating in the Amrut Mahotsava celebrations.

There is nothing great in achieving success, name, fame and riches for oneself as they are the ultimate result of one's own personal ambition stemming from one's own self-interest. But to be able to give one's own time, energy and money and other resources to help others, is indeed sign of true greatness. Very few people in this World belong to this unique category. The fact that so many people from so many different walks of life have joined together to honour you for the services you have rendered to the people is an eloquent testimony to your great virtues of selflessness, self-sacrifice, compassion and philanthropic mind. One who works and dies for others lives eternally in the hearts of the people. I have no doubt that you have carved out for yourself a unique place in the hearts of the people by your simple living and generous helping to the people. I wish your function grand success and I pray God to give you long, happy and contented life and many many years of useful service to the community.

With best wishes,

Yours sincerely,
V. S. Malimath

Jayamma Mallikarjunaswamy
Member
Karnataka Legislative Council

Koramangala
Bangalore–34
26–1–88

Message

I am in receipt of your committee invitation dated 18th Jan. 88. Due to my pre-occupation I express my inability to attend the same.

I have gone through the life story of Sri G. G. Dodwad, and I am delighted to note this yeomen service to the society in different fields inspite of his heavy business schedule. Further I have found that he is utilising all the best available time of his life for the noble cause of the society.

On this happy occasion, I also join with you in praying Lord Sri Mahadeswara to grant him one hundred fruitful years to serve the society more.

Kindly convey my heart felt personal felicitations to Respected Smt. & Sri. G. G. Dodwad and regards to other office bearers and members of the Committee for remembering me on this happy occasion.

Yours sincerely,
Jayamma Mallikarjunaswamy

ಪರಿವಿಡಿ

ಚರಿತ್ರದೀಪ್ತಿ

ಈ ವಿಭಾಗದಲ್ಲಿ....

ಅಮೃತಬಿಂದು



● ಡಾ. ಚನ್ನಕ್ಕ ಎಲಿಗಾರ

ಶಿವಕೃಪೆಯ ಮಡಿಲಿನಲಿ
ತುಂಬಿ ತುಳುಕಿದೆ ಹರುಷ.
ಅಮೃತೋತ್ಸವ ಪುರುಷ
ಜೀವನವೇ ಸುಖವರುಷ.

ಅರಿವು ಪಡೆದ ಬಾಳರಥಕೆ
ಬೆಳಕೆ ಮಾರ್ಗದಾಯಿನಿ.
ಎಪ್ಪತ್ತೇಳು ವಸಂತಗಳೇ
ತುಂಬು ಸುಖದಾಯಿನಿ.

ಸದುವಿನಯಕೆ ಮನ ಬಯಸಿದೆ.
ಸೌಭಾಗ್ಯಕೆ ಶಿರ ಬಾಗಿದೆ.
ಗುರುಪುತ್ರನ ಬದುಕಿಗೆ
ಸ್ವಾಮಿಭಕ್ತಿಯ ಕೃಪೆ ಇದೆ.

ನಗೆಮೊಗ, ಮಾತು ಸರಳ
ನವಚೈತನ್ಯಕೆ ಸಾಕಾರ.
ನೀತಿಯ ನೆಲೆಗಟ್ಟು ಬಾಳಿಗೆ ಕಟ್ಟು
ಜೀವನದ ಸಿಹಿಗುಟ್ಟು.

ಲೇಸನೆ ಬಯಸುವ ಬಾಳು
ಹೃದಯು ಹಾಲುಜೇನು.
ನಡೆಯಂತೆ ಸವಿನುಡಿಯು
ಅನುಭವದ ಗಿರಿಸಾನು.

ಮಾನವ ಮಂದಾರದಲಿ
ಅರಳಲಿ ಭವ್ಯಚೇತನ.
ಅಣುಅಣುವಿನ ಕಿರಣ,
ಅಮೃತವರ್ಷ ಸಿಂಚನ.

ಶರತತ್ವದ ಸಾರ
ಬಾಳರಥಕೆ ಪೂರ.
ದಣಿವರಿಯದ ನಲುಮೆ
ಅಭಿನಂದನೆ ಗೆಲುಮೆ.

ಕೈಯಲ್ಲಿ ಕನ್ನಡಿ ಇರಲು ತನ್ನ ತಾ ನೋಡಬಾರದೆ ?
ಕನ್ನಡಿ ಕಾಯಕದ ರೇಮವ್ವೆ

ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೇ ?
ಲಕ್ಷ್ಮೀಶ

ಮನೆದೈವ ಮಹದೇಶ್ವರ



● ಶಾಂತಲಾ ಯೋಗೀಶ ಯಡ್ರಾವಿ

ಮಹದೇಶ್ವರಬೆಟ್ಟ ಕರ್ನಾಟಕ ಹಾಗೂ ತಮಿಳುನಾಡುಗಳ ಲಕ್ಷಾವಧಿ ಭಕ್ತರಿಗೆ ಪುಣ್ಯಕ್ಷೇತ್ರವಾಗಿದೆ. ಶಿವರಾತ್ರಿ ಕಾರ್ತಿಕಗಳಲ್ಲಿ ಲಕ್ಷೋಪಲಕ್ಷ ಜನರ ಪರಿಷೆ ಸೇರುತ್ತದೆ. ಕೊಳ್ಳೇಗಾಲದಿಂದ ಪೂರ್ವಮುಖವಾಗಿ ಮಧುವನಹಳ್ಳಿ, ಸಿಂಗಾನಲ್ಲೂರು, ಕಾಮಗೆರೆ, ಹನೂರು, ಅಜ್ಜೀಪುರ, ರಾಮಪುರ, ಕೌದಳ್ಳಿ ಮಾರ್ಗವಾಗಿ ಈ ಪವಿತ್ರಕ್ಷೇತ್ರಕ್ಕೆ ದಾರಿಯಿದೆ. ಕೌದಳ್ಳಿಯಿಂದ ಮುಂದೆ ಅರಣ್ಯಮಾರ್ಗವಾಗಿ ಹತ್ತುಮೈಲಿ ಹೋದರೆ ಶ್ರೀ ಮಲೆಯ ಮಹದೇಶ್ವರಸ್ವಾಮಿಯ ಬೆಟ್ಟದ ತಪ್ಪಲು ತಾಳಬೆಟ್ಟ ಸಿಗುತ್ತದೆ. ಅಲ್ಲಿಂದ ಏಳು ಬೆಟ್ಟಗಳನ್ನು ಹತ್ತಿ ಇಳಿದರೆ ನಡುಮಲೆ ಕಂಗೊಳಿಸುತ್ತದೆ. ತಾಳಬೆಟ್ಟದಿಂದ ನಡುಮಲೆಗೆ ಎರಡು ದಾರಿಗಳಿವೆ. ಒಂದು ಬಸವನ ದಾರಿ, ಇನ್ನೊಂದು ಸರ್ಪನ ದಾರಿ.

೩೦-೪೦ ಮೈಲಿಗಳ ವಿಸ್ತೀರ್ಣದ ಈ ರಮಣೀಯ ಸ್ಥಳವು ಮಹದೇಶ್ವರನ ಪುಣ್ಯಾಶ್ರಮವೂ, ಆತನ ಅರ್ಚಕರಾದ ತಮ್ಮಡಿಗಳ ನೆಲೆವೀಡೂ ಆಗಿದೆ. ಸಾಲದುಂಡಕ್ಕೆ ಸಾಲೂರಮಠ, ಶೇಷಣ್ಣೊಡೆಯರ ಸ್ಥಾನ, ಅಂತರಗಂಗೆ, ನಾಗಮಲೆ ಇತ್ಯಾದಿ ಮಹತ್ವದ ಸ್ಥಳಗಳೂ ಇವೆ. ಇಲ್ಲಿಗೆ ಅನತಿದೂರದಲ್ಲಿ ಅಂದರೆ ಕೊಳ್ಳೆಗಾಲಕ್ಕೆ ಎಂಟುಮೈಲು ದೂರದಲ್ಲಿ ಶ್ರೀ ಮಹದೇಶ್ವರರ ಗುರುಗಳಾದ ಶ್ರೀ ಆದಿಗಣನಾಥ ಪ್ರಭುಸ್ವಾಮಿಗಳ ಗದ್ದುಗೆ ಇದೆ. ಈ ಬೆಟ್ಟದ ಬುಡದಲ್ಲಿ ಮಹದೇಶ್ವರರು ಮಂಡಿಯೂರಿದ ಸ್ಥಳವಿದೆ. ಈ ಪ್ರಭುಸ್ವಾಮಿಗಳ ಬೆಟ್ಟಕ್ಕೆ ಮೂರುಮೈಲಿ ಅಂತರದಲ್ಲಿ ನಿರುಪಮ ನಿಜಗುಣ ಶಿವಯೋಗಿಗಳು ತಪಸ್ಸು ಮಾಡಿದ ಶಂಭುಲಿಂಗ ಬೆಟ್ಟವಿದೆ.

ಇವರು ನಿಂತೆಡೆ, ಮಲಗಿದಡೆ, ಪೂಜಿಸಿದೆಡೆ ಹೀಗೆ ಬೇರೆ ಬೇರೆ ಸ್ಥಳಗಳಲ್ಲಿ ಕುರುಹಾಗಿ ತೋರುಗದ್ದುಗೆಗಳಿವೆ. ಇವರ ಬಗೆಗೆ ಬಹಾದ್ದೂರ ಹೈದರಲ್ಲೀಖಾನನ

ಹಾಗೂ ಹೊಯ್ಸಳ ಬಲ್ಲಾಳದೇವರ ತಾಮ್ರಶಾಸನಗಳು ಮಾತ್ರ ಲಭ್ಯವಾಗಿವೆ. ಅಲ್ಲದೆ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರವರು ಕ್ರಿ. ಶ. ೧೮೩೮ ರಲ್ಲಿ ಬಂಗಾರದ ಕವಚವನ್ನೂ, ಅವರ ರಾಣೀವಾಸದವರು ಬೆಲೆಯುಳ್ಳ ಆಭರಣಗಳನ್ನೂ ಮಾಡಿಸಿಕೊಟ್ಟಿದ್ದಾರೆ. ಮುಂದೆ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರು, ಶಕೆ ೧೮೫೨ ರಲ್ಲಿ ರತ್ನವಿಚಿತ್ರ ವಿಭೂತಿಪಾಟಿಕ, ಸರ್ಪಕುಂಡಲ, ಗಂಗೆ ಅಲಂಕಾರ ಮೊದಲಾದವುಗಳಿಂದ ಸಿಂಗರಿಸಿ ಸುಂದರ ರಥವನ್ನು ಮಾಡಿಸಿದರು. ಶ್ರೀಮಜ್ಜಯ ಚಾಮರಾಜ ಒಡೆಯರು ಒಂದು ಧರ್ಮಶಾಲೆ ಕಟ್ಟಿಸಿದ್ದಾರೆ.

ನಮ್ಮ ದೇಶದ ದಕ್ಷಿಣದಿಸೆಯ ಆಗ್ನೇಯ ಅಂಚಿಗೆ ಸಮೀಪದಲ್ಲಿಯೇ ಹಬ್ಬಿದೆ ಉದಯಾಚಲ ಪಂಕ್ತಿ. ಕನ್ನಡನಾಡಿನ ಅಂಚಿನಲ್ಲಿ ಹರಿಯುವ ಕಾವೇರಿತೀರದಲ್ಲಿರುವ ಪೊನ್ನಾಚಿಬೆಟ್ಟ, ಅದರ ಒಂದು ಪ್ರಮುಖಶಾಖೆ. ಇಲ್ಲಿ ಗಿರಿಶಿಖರಗಳು, ನಿಬಿಡಾರಣ್ಯಗಳು ಕಣ್ಣೋಟವನ್ನು ಹೆಪ್ಪುಗಟ್ಟಿಸಿ ನಿಲ್ಲಿಸುವ ಪ್ರಕೃತಿಯ ರುದ್ರ ಮನೋಹರ ದೃಶ್ಯಗಳು ಅಸಂಖ್ಯ. ಅಂತೇ ಅವಿಸ್ಮರಣೀಯ. ಭೂದೇವಿಯದು ಬಯಲುಸೀಮೆಯಲ್ಲಿ ಒಂದೇ ಗತಿ. ಒಂದೇ ಲಯ, ಒಮ್ಮುಖ. ಆದರೆ ಮಲೆನಾಡಿನಲ್ಲಿ ಹಾಗಲ್ಲ: ಸಹಸ್ರಗತಿ, ಸಹಸ್ರಲಯ, ಸಹಸ್ರಮುಖ, ಸಹಸ್ರಬಾಹು, ಸಹಸ್ರಪದಪದ್ಮ: ಆ ರುದ್ರಮನೋಹರ, ದಿವ್ಯಭಯಂಕರ ಭವತಾರಿಣಿಯ ಸೌಂದರ್ಯವನ್ನು ನೋಡುವವನ ಕಣ್ಣಲ್ಲಿ, ಎದೆಯಲ್ಲಿ ಸಹಸ್ರದಳಪದ್ಮ ದಳದಳ ಅರಳಿ ನಳನಳಿಸುತ್ತಿದೆ.

ಸೃಷ್ಟಿಯ ವೈಚಿತ್ರ್ಯವೆಲ್ಲ ಇಲ್ಲಿ ಸಮ್ಮಿಳಿತವಾಗಿದೆ. ಒಂದೆಡೆ ಇದ್ದಂತೆ ಇನ್ನೊಂದೆಡೆ ಇಲ್ಲ. ಇನ್ನೊಂದೆಡೆ ಇದ್ದಂತೆ ಮತ್ತೊಂದೆಡೆ ಇಲ್ಲ. ಕಾಣುತ್ತಿವೆ ಹೆಜ್ಜೆ ಹೆಜ್ಜೆಗೂ ರಸಸೃಷ್ಟಿಯ ತಾಣಗಳು, ಕೇಳುತ್ತಿವೆ ರಾಗರಸ ತರಂಗಿಣಿಯ ತಾನಗಳು.

ಶಿರವೆತ್ತಿ ನೋಡುವ ಗಿರಿ ಶಿಖರದೊತ್ತಿಗೆ,
ಆಳ ಆಳದಲ್ಲಿ ಕಂದರಗಳು, ಕೊರಕಲುಗಳು.
ಗಗನಚುಂಬೀ ಹೆದ್ದೇಗಿನ ಮರಗಳೊತ್ತಿಗೆ,
ಕಾರಿ ಬಾರಿ ಕವಳಿಗಳ ಕಂಟಿಗಳು, ಪೊದೆಗಳು.
ಸ್ಫಟಿಕದಂತೆ ಶುಭ್ರ ತಿಳಿ ಹಳ್ಳಗಳೊತ್ತಿಗೆ,
ಹಸಿರು ಚಿಮ್ಮುವ ಹುಲ್ಲುಗಾವಲುಗಳು
ಎದೆ ಕಂಪಿಸುವ ಹುಲಿಯ ಗುಡುಗಿನೊಂದಿಗೆ,
ಕಿವಿಗಿಂಪಾದ ಕೋಗಿಲೆಯ ಗಾನದಲೆಗಳು,
ಅದಕ್ಕೆ ಒಂದೆಡೆ ಇದ್ದಂತೆ ಮತ್ತೊಂದೆಡೆ ಇಲ್ಲವೆಂದು ಹೇಳಿದ್ದು.

ಒಂದೆಡೆ ನೀಲ ಮುಗಿಲಿದ್ದರೆ, ಮತ್ತೊಂದೆಡೆ ಕಾರ್ಮುಗಿಲು, ಇನ್ನೊಂದೆಡೆ ಬೆಳ್ಮುಗಿಲು, ಗಿರಿಶಿಖರಗಳಲ್ಲಿ ವಿಹರಿಸುವ ಮೋಡಗಳು, ಕೆರೆಗಳು, ಕೊಳಗಳು, ಜಾರು ಬಂಡೆಯಾಡುವ ತೊರೆಗಳು, ಜಲಪಾತಗಳು, ಕಿರುವಳ್ಳಗಳು, ಹೊಳೆಗಳು, ಹಸಿರು ಮುರಿಯುವ ಬನಗಳು, ಹಸಿರು ಮೇಯುವ ದನಗಳು, ಮಾಲೆಮಾಲೆಯಾಗಿ ಬೆಟ್ಟ ಗಳು, ಘಟ್ಟಗಳು, ತರತರದ ಪಶುಪಕ್ಷಿಗಳು, ಎದೆಮಟ್ಟದ ವರೆಗೂ ಬೆಳೆದ ಹುಲ್ಲು, ಕಾಲು ತೊಡಕುವ ಬಳ್ಳಿಗಳು. ಅಲ್ಲಿ ಕಾಡಿಗೆ ಕೊನೆಯಿಲ್ಲ, ಹಕ್ಕಿಯ ಹಾಡಿಗೆ ವಿರಾಮ ವಿಲ್ಲ. ಮೋಡಗಳ ಸಾಲು ದೂರವಿಲ್ಲ. ಸೃಷ್ಟಿಯ ವೈಚಿತ್ರ್ಯ ಕಾಣುವದು ಇಲ್ಲಿ. ಸೌಂದರ್ಯ ಸೂರೆಯಾಗಿರುವದು ಇಲ್ಲಿ.

ಆನೆಮಲೆ, ಕಾನ್ಮಲೆ, ಜೇನ್ಮಲೆ, ಗುತ್ತೀಮಲೆ, ಚೆರುವಮಲೆ, ನೀಲಿಮಲೆ, ನಾಗಮಲೆ, ಪದ್ಮಮಲೆ, ಗೌಳಮಲೆ, ಮಂಜುಮಲೆ, ಗಾಳಿಪೂಜೆಯಮಲೆ, ನಡುಮಲೆ– ಇವೇ ಮೊದಲಾದ ಎಪ್ಪತ್ತೇಳು ಮಲೆಗಳ ಭವ್ಯಮಾಲೆ. ಆ ಮಾಲೆಯ ಸಾಲಿನ ಆಚೆಗೆ ನಲ್ಲಮಲೈ ಪರ್ವತಪಂಕ್ತಿ ಕರ್ನೂಲ ಜಿಲ್ಲೆಯಲ್ಲಿದೆ. ಈ ನಲ್ಲಮಲೈ ಪರ್ವತ ಪಂಕ್ತಿಯ ಒಂದು ದೊಡ್ಡಬೆಟ್ಟ ಶ್ರೀಶೈಲ. ಪುರಾತನಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಶಿವನ ಒಂದೊಂದು ಲೀಲೆಗಳನ್ನು ಮೆರೆದ ವಾರಣಾಸಿ, ಗಯಾ, ಪ್ರಯಾಗ, ನೈಮಿಷಕ್ಷೇತ್ರಗಳಲ್ಲಿ ಶ್ರೀಶೈಲವೂ ಒಂದು.

"ಶ್ರೀಶೈಲ ಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ"— ಎಂಬ ಜನಜನಿತ ಮಾತನ್ನು ನೆನಪಿಸಿಕೊಳ್ಳಬಹುದು. ಈ ಪವಿತ್ರ ಶಿವಕ್ಷೇತ್ರದ ಪರ್ವತಪ್ರದೇಶ, ಶಂಕ, ಮಾರ್ಕಂಡೇಯ, ಕಣಾದ, ಅಕ್ಷಪಾದ, ಶಿಲಾದ, ಅತ್ರಿ ಋಷಿಶ್ರೇಷ್ಠರ ತಪೋ ಭೂಮಿ. ಅನೇಕ ಸಿದ್ಧಿಗಳನ್ನು ಕರಗತಮಾಡಿಕೊಂಡ ಸಿದ್ಧರ ಪ್ರಸಿದ್ಧಭೂಮಿ. ಅಲ್ಲಮಪ್ರಭು, ಅಕ್ಕಮಹಾದೇವಿ ಗಣ್ಯಶರಣರ ಐಕ್ಯಭೂಮಿ. ಯೋಗಿ ಶಿವಯೋಗಿ ಗಳ ಯೋಗಭೂಮಿ. ಈ ಪವಿತ್ರ, ಪುಣ್ಯಭೂಮಿಯ ಸುಕ್ಷೇತ್ರದಲ್ಲಿ ನೆಲಸಿದ ಪರಶಿವನಿಗೆ ಇಲ್ಲಿ ಮಲ್ಲಿಕಾರ್ಜುನನೆಂದು ಹೆಸರು.

"ಮಹಾಂತ ಮಲ್ಲಯ್ಯ ಉಘೇ ಉಘೇ...
ಗಿರಿಮಲ್ಲಯ್ಯ ಉಘೇ ಉಘೇ..."

–ಎಂಬ ಯಾತ್ರಿಕರ ಜಯಘೋಷ, ಪ್ರತಿಧ್ವನಿಸಿ, ಅಂತರ್ಯದಲ್ಲಿ ಭಕ್ತಿರಸ ಉಕ್ಕಿ ಹರಿಯುತ್ತದೆ.

ಈ ಶ್ರೀಶೈಲದ ಅನತಿದೂರದಲ್ಲಿ ಉತ್ತಮಾಪುರ ಚಂದ್ರಶೇಖರಮೂರ್ತಿ ಉತ್ತರಾಜಮ್ಮ ಎಂಬ ಶರಣ ದಂಪತಿಗಳು. ಇಳಿವಯಸ್ಸಿನತ್ತ ಜಾರುತ್ತಿದ್ದರೂ ಕಂದ ನೊಬ್ಬ ಇವರ ಬೆಂದೆದೆಗೆ ಆನಂದ ಕೊಡಲಿಲ್ಲ. ನಿಟ್ಟುಸಿರು ನಿಲ್ಲಲಿಲ್ಲ. ತೊಟ್ಟಿಲು

ಕಟ್ಟುವ ಸಂಭ್ರಮ ಬರಲೇ ಇಲ್ಲ. ಅದರಲ್ಲೂ ಹೆಂಗಸಾದ ಉತ್ತರಾಜಮ್ಮನಿಗಂತೂ ತೀರಾ ಕಳವಳ, ಹಗಲಿರುಳೂ ತಳಮಳ. ಬೆಟ್ಟದ ತಪ್ಪಲಿನ ತಂಪು ಅವಳೆದೆಯನ್ನು ತಂಪುಗೊಳಿಸಲಿಲ್ಲ.

"ಕ್ರಿಮಿಕೀಟ, ಪ್ರಾಣಿ-ಪಕ್ಷಿಗಳಿಗೆಲ್ಲ ಮಕ್ಕಳಿರುವುದಾದರೆ ತನಗೇಕಿಲ್ಲ? ಅವಕ್ಕಿಂತ ತಾನು ಕೀಳಾದೆನೇ?... ಕಂದನಿಲ್ಲದ ನನ್ನ ಬಾಳು ಏನೊಂದು ಕರಕಷ್ಟವಾಯಿತಲ್ಲ?'— ಎಂದು ನಿರಾಸೆಯ ಪಾತಾಳಕ್ಕೆ ತನ್ನ ತಾನೆ ನೂಕಿಕೊಳ್ಳುವಳು.

'ಈ ತಾಪಕ್ಕೆ ತಂಪು ಚಿಮುಕಿಸುವರಾರೂ ನನ್ನ ಪಾಲಿಗೆ ಇಲ್ಲವೆ?" ಎಂದು ಹಲುಬುವಳು.

ದೂರದಲ್ಲಿ ಶ್ರೀಶೈಲಶಿಖರದ ಹೊನ್ನಕಳಸ ಕಣ್ಣಿಗೆ ಕಾಣುವದು. ಶಿವನೇ ನಿನಗಿನಿತು ಕರುಣೆಯಿಲ್ಲವೇ ಎಂದಳಲುವಳು. ಸರಿ; ಮಲ್ಲಿಕಾರ್ಜುನನ ಬೆನ್ನು ಬಿದ್ದಳು. ಪೂಜಿಸಿದಳು, ಆರಾಧಿಸಿದಳು, ವ್ರತ-ಉಪವಾಸ-ನೇಮಗಳಲ್ಲಿ ಮೈಮರೆತಳು. ಮಲ್ಲಿಕಾರ್ಜುನನು ಒಲಿದು ವರಕೊಟ್ಟ, ಫಲಕೊಟ್ಟ. ಅಂತೆಯೇ ಉತ್ತರಾಜಮ್ಮ ಇಳಿವಯಸ್ಸಿನಲ್ಲಿ ಮಗನನ್ನು ಪಡೆದಳು. ಹೊನ್ನಿನ ಮೈಬಣ್ಣ.

ಆ ಮನೆಯ ಗುರುಗಳು ಶ್ರೀ ವ್ಯಾಘ್ರಾನಂದರು. ಇವರಿಗೆ ಜ್ಞಾನಾನಂದರೆಂದು ಹೆಸರಿದ್ದರೂ ವ್ಯಾಘ್ರಾನಂದರೆಂದು ಕರೆಯಲು ಒಂದು ರೋಚಕ ಪ್ರಸಂಗ ಕಾರಣ. ಶ್ರೀಶೈಲದ ಕಗ್ಗಾಡಿನಲ್ಲಿ ಯೋಗಿಗಳು, ಶಿವಯೋಗಿಗಳು, ಸಿದ್ಧರು, ಮುನಿಮಾನಿಗಳು ತಪೋನಿರತರಾಗುತ್ತಿದ್ದು ಹುಲಿಗಳಿಂದ ತೊಂದರೆಯಾಗುತ್ತಿರುವದನ್ನು ಕಂಡ ಜ್ಞಾನಾನಂದರು ತಮ್ಮ ಸಿದ್ಧಿಯ ಬಲದಿಂದ ಕಾಡಿನಲ್ಲಿದ್ದ ಅವುಗಳನ್ನೆಲ್ಲ ತಮ್ಮ ಆಶ್ರಮದ ದೊಡ್ಡಿಯಲ್ಲಿ ಕಲಿಹಾಕಿ ಗೋವುಗಳಂತೆ ಸಾಕಿಕೊಂಡಿದ್ದರು. ಹುಲಿಗಳೆಲ್ಲ ಅವರು ಹೇಳಿದಂತೆ ಕೇಳುತ್ತಿದ್ದವಂತೆ. ಆದ್ದರಿಂದಲೇ ಅವರಿಗೆ ವ್ಯಾಘ್ರಾನಂದರೆಂಬ ಅನ್ವರ್ಥಕನಾಮ ಅಧಿಗತವಾಯಿತು.

ಆ ವ್ಯಾಘ್ರಾನಂದರು ಕೂಸಿನಲ್ಲಿ ತಾನೇ ತಾನಾಗಿ ವಿಜೃಂಭಿಸುವ ದೈವೀಕಳೆಯನ್ನೂ, ಯೋಗಲಕ್ಷಣಗಳನ್ನೂ ಕಂಡು ಹಾಗೂ ಶ್ರೀಶೈಲ ಮಲ್ಲಿಕಾರ್ಜುನನ ವರಪ್ರಸಾದದಿಂದ ಹುಟ್ಟಿರುವುದನ್ನು ಲಕ್ಷಿಸಿ,

ಮಹಾದೇವನ ಮರಿಯಂತಿರುವ ಈ ಕೂಸಿಗೆ 'ಮಹಾದೇವ' 'ಮರಿದೇವ'... ಎಂದೇ ಕರೆದರು.

ಮಗು ಎರಡು ವರ್ಷ ಕಳೆಯುವಷ್ಟರಲ್ಲಿ ತಂದೆ-ತಾಯಿಗಳಿಬ್ಬರನ್ನೂ ಕಳೆದುಕೊಂಡು ತಬ್ಬಲಿಯಾಯಿತು. ಸಾಯುವ ಮುನ್ನ ಉತ್ತರಾಜಮ್ಮ ಮಗುವನ್ನು ವ್ಯಾಘ್ರಾನಂದರ ಉಡಿಯಲ್ಲಿ ಹಾಕಿ—

"ನನ್ನ ಮಗುವಿಗೆ ನೀವೇ ತಂದೆ-ತಾಯಿ, ಗುರು-ಗತಿಮತಿ ಎಲ್ಲಾ ನೀವೇ..."— ಎಂದು ಒಪ್ಪಿಸಿ ಪ್ರಾಣಬಿಟ್ಟಿದ್ದಳು. ಕಂದನ ಕಿರುನಿದ್ರೆ ಮುಗಿಯುವ ಮುನ್ನವೇ ಉತ್ತರಾಜಮ್ಮ ಚಿರನಿದ್ರೆಯಲ್ಲಿ ಮುಳುಗಿದ್ದಳು. ಚೀರಿ ಚೀರಿ ಅಳುವ ಮಗುವಿನೆಡೆಗೆ ವ್ಯಾಘ್ರಾನಂದರ ಸಂನ್ಯಾಸೀ ಹೃದಯದಲ್ಲಿ ಕರುಣೆ ಚಿಮ್ಮಿ ಹರಿಯಿತು.

ಮಗು ಹಸಿವೆಯಿಂದ ಅತ್ತರೆ ವ್ಯಾಘ್ರಾನಂದರು ತಮ್ಮ ಕಮಂಡಲದ ಸಲಿಲದಲ್ಲಿ ಭಸ್ಮ ಬೆರೆಸಿ ಕುಡಿಸುತ್ತಿದ್ದರಂತೆ, ತಾಯಿಯ ಹಾಲಿನಿಂದಗಲಿದ ಆ ತಬ್ಬಲಿಗೆ ಸಂನ್ಯಾಸಿಯ ಭಸ್ಮರುಚಿಯೇ ಹೊಸ ಸೃಷ್ಟಿ ತೋರಿತು. ಅದರ ಮಹಿಮೆಯಿಂದಲೇ ಪ್ರಜ್ಞಾದೃಷ್ಟಿ ಬೆಳೆಯಿತು. ವ್ಯಾಘ್ರಾನಂದರು ಆ ಬಾಲಕನನ್ನು ಪ್ರೀತಿಯಿಂದ

"ಮರೀ... ಮರಿದೇವರೇ... ಶ್ರೀಶೈಲದ ಮರಿದೇವರೇ... ಮಾದೇವಾ..." ಎಂದು ಮುಂತಾಗಿ ಮುದ್ದು ಮಾಡುತ್ತಿದ್ದರು.

ಅತ್ತು ರಂಪಮಾಡಿದರೆ ಹುಲಿಯ ಮೇಲೆ ಕುಳ್ಳಿರಿಸಿಕೊಂಡು ಒಂದು ಸುತ್ತು ಆ ಕಾನನವನ್ನು ಸುತ್ತಿಸಿ ಸಂತೈಸುತ್ತಿದ್ದರು. ಹುಲಿಯ ಮರಿಗಳೇ ಅವನ ಸ್ನೇಹಿತರು: ಆಟಿಕೆಗಳೂ ಕೂಡಾ ಆದವು. ಹೀಗೆ ಮಹದೇವಮರಿ ಐದು ವರ್ಷದವನಾದಾಗ ವಿಧ್ಯುಕ್ತವಾಗಿ ಅಕ್ಷರಾಭ್ಯಾಸವನ್ನು ವ್ಯಾಘ್ರಾನಂದರು ಪ್ರಾರಂಭಿಸಿದರು. ಎಂಟನೆಯ ವಯಸ್ಸಿನಲ್ಲಿ ಕ್ರಮವತ್ತಾಗಿ ಸ್ವತಃ ತಾವೇ ಯೋಗಶಿಕ್ಷಣವನ್ನೂ ನೀಡತೊಡಗಿದರು. ಆ ಹಸುಳೆಯ ಹಸನಾದ ಹೃದಯದಲ್ಲಿ ಯೋಗಬೀಜಗಳನ್ನು ಬಿತ್ತಲು ವ್ಯಾಘ್ರಾನಂದರು ಹೆಚ್ಚು ಪರಿಶ್ರಮ ಪಡಬೇಕಾಗಲಿಲ್ಲ. ಎಳೆಸಿಕ್ಕರೆ ಹಚ್ಚಡ ನುಂಗುವ ಆ ಚಾಣಾಕ್ಷ ಬಾಲಕ ಬಲ್ಲಿದತನದತ್ತ ದಾಪುಗಾಲು ಹಾಕತೊಡಗಿದ.

ಹರಪೂಜೆ, ಗುರುಸೇವೆ ಆಶ್ರಮದ ಕಾರ್ಯಗಳೆಡೆಗೆ ಗಮನ, ದೊಡ್ಡಿಯಲ್ಲಿದ್ದ ಹುಲಿಗಳಿಗೆ ನೀರು ಕುಡಿಸಿಕೊಂಡು ಬರುವದು, ಆಹಾರಕ್ಕಾಗಿ ಬಿಡುವದು, ಮರಿಗಳಿಗೆ ಮೊಲೆಹಾಲು ಕುಡಿಸುವದು, ಅವುಗಳೊಡನೆ ಆಟವಾಡುವದು, ದೊಡ್ಡಿಯನ್ನು ಹಸನು ಮಾಡುವದು- ಇವೇ ಮುಂತಾದ ಕೆಲಸಗಳನ್ನು ಅತೀ ನಿಷ್ಠೆ-ಸಹನೆಯಿಂದ ಮಾಡುವ ಆ ಬಾಲಕನನ್ನು ಕಂಡು ವ್ಯಾಘ್ರಾನಂದರ ಅಂತಃಕರಣ ಅರಳುವದು. ಅವರ ಮನಸ್ಸೆಲ್ಲವನ್ನೂ ಸಂಪೂರ್ಣ ಆಕ್ರಮಿಸಿದ ಆತನಿಗೆ ಅವರು ತಮ್ಮೆಲ್ಲ ಯೋಗ ಶಕ್ತಿ, ಯೋಗವಿದ್ಯೆಯನ್ನು ಧಾರೆಯೆರೆದರು. ನಿರಂತರ ಹನ್ನೆರಡು ವರ್ಷಗಳ ಯೋಗಶಿಕ್ಷಣ ಅವನಲ್ಲಿ ವಶಾಗಿ ನಿಂತಿತು.

ಮೊದಲಿನ ಅವನ ಆಕರ್ಷಕ ವ್ಯಕ್ತಿತ್ವಕ್ಕೆ ಈಗ ಇನ್ನಷ್ಟು ಮೆರಗು ಸೇರಿತು. ಹೊನ್ನಿನ ಮೈಬಣ್ಣಕ್ಕೆ, ಯೋಗದ ವಜ್ರಕಾಂತಿ, ವೈರಾಗ್ಯದ ಮಿಂಚು ಸೇರಿ ಆ

ಮರೀದೇವನಿಗೆ ಬೆಳಕಿನ ಬಣ್ಣ ಮೈದುಂಬಿತು. ಶ್ರೀಶೈಲಕ್ಕೆ ಹೋಗಿ ಬರುವವರ ಜಯಘೋಷ...

“ಉಘೇ ಮಹಂತಮಲ್ಲಯ್ಯ...” ಎಂಬುದು ನಿತ್ಯ ಅವನ ಕಿವಿಗೆ ಬೀಳುತ್ತಿತ್ತು. ಅದೇ ಅವನಿಗೆ ಮಂತ್ರ. ಅದೇ ಅವನಿಗೆ ಧೈರ್ಯ. ಹಾಗೆಂದು ಕರೆದಾಗ ಆ ದೇವ ಮಲ್ಲಯ್ಯ “ಓ”.. ಎನ್ನುತ್ತಾನೆ ಎಂಬ ಬಲವಾದ ನಂಬಿಕೆ. ಅವನು ಚಣಕ್ಕೊಮ್ಮೆ ತನ್ನಷ್ಟಕ್ಕೆ ತಾನೇ... “ಉಘೇ ಮಲ್ಲಯ್ಯ, ಉಘೇ ಮಹಾಂತ ಮಲ್ಲಯ್ಯ...” ಎನ್ನುವನು. ಮತ್ತೊಮ್ಮೆ ಆ ಕಾನನವೇ ಪ್ರತಿಧ್ವನಿಸುವಂತೆ ಜಯ ಘೋಷವನ್ನು ಗರ್ಜಿಸುವನು. ಕಾನನದಲ್ಲಿ ಅನುರಣಿತವಾದ ಆ ಘೋಷ ಅವನಲ್ಲಿ ವಿಶ್ವೋನ್ಮತ್ತತೆಯನ್ನು ತುಂಬಿದರೆ ,ಶ್ರೀಗಿರಿ ಮಂಚದ ಮೇಲೆ ಮಲಗಿದ ಪರಶಿವನೆದೆ ಯನ್ನು ಕಂಪಿಸುವಂತೆ ಮಾಡುವದು. ಅಂತೂ ಆ ಎಳೆಯನಿಗೆ “ಉಘೇ ಮಹಾಂತ ಮಲ್ಲಯ್ಯ...” ಎಂಬುದು ಪರವಸ್ತುವನ್ನು ಎಚ್ಚರಿಸುವ, ಎಳೆದು ತರುವ ಸೂತ್ರ ವಾಯಿತು. ತೊಟ್ಟಿಲ ಶಿಶುವಾದಾಗಿನಿಂದ ಹಿಡಿದು ಆ ದಟ್ಟಡವಿಯಲ್ಲಿ ಶಿವಯೋಗದ ಸುಖ ಸವಿಯುವವರೆಗೆ ಆ ಜಯರವ ಆತನ ಅಣು ಅಣುವಿನಲ್ಲೂ ರಕ್ತದ ಕಣಕಣದಲ್ಲೂ ಮಾರ್ನುಡಿಯುತ್ತಿತ್ತು. ಬೇಸರವಾದಾಗಲೂ ಅದೇ, ಸಂತೋಷವಾದಾಗಲೂ ಅದೇ ಅದೇ ಜಯರವ “ಉಘೇ ಮಹಾಂತ ಮಲ್ಲಯ್ಯ...”

ಒಂದು ದಿನ, ಅದೇಕೋ ಮಹದೇವ ಮರಿದೇವನಿಗೆ ರಾತ್ರಿಯೆಲ್ಲ ಜಾಗರಣೆ; ಹೇಳಲಾರದ ತಳಮಳ. ಮಗ್ಗುಲು ಬದಲಿಸಿದಾಗೊಮ್ಮೆ ‘ಉಘೇ ಮಹಾಂತ ಮಲ್ಲಯ್ಯ...’ ಎಂದುಕೊಳ್ಳುವನು. ಅದೇಕೋ ಇದ್ದಕ್ಕಿದ್ದಂತೆ ಶ್ರೀಶೈಲದ ಮಲ್ಲಿಕಾರ್ಜುನನನ್ನು ಕಂಡು ಬರಬೇಕೆಂಬಾಸೆ, ಅವನಲ್ಲಿ ಪುಟಿದೆದ್ದಿತು. ಮಲಗಿದಲ್ಲಿಯೇ ಮೈ ಚಡಪಡಿಸಿತು. ಮಲಗಿದ ಮೈಯನ್ನಲ್ಲಿಯೇ ಬಿಸುಟು ಆತುರಗೊಂಡ ಮನಸ್ಸು ತಾಳೆಯುಮರವಾಗಿ ಮಲ್ಲಿಕಾರ್ಜುನ ದೇವಾಲಯದ ಬಾಗಿಲು ತೆರೆದಿವೆಯೋ ? ಎಂದು ಇಣುಕಿ ನೋಡಿತು; ಬಾಳೆಯು ಬನವಾಗಿ ತೂಗಿ ತೊನೆಯಿತು, ಪತ್ರಿಯು ವನವಾಗಿ ಪ್ರತಿ ಚಣವನ್ನೂ ಆ ಮಲ್ಲಿಕಾರ್ಜುನನ ಚರಣಗಳಲ್ಲಿ ಸಮರ್ಪಿಸಿತು. ಹಾಲ್ಗಡಲು ಉಕ್ಕಿದಂತೆ ಅವನ ಹೃದಯ ಉಕ್ಕುಕ್ಕಿ ನೈವೇದ್ಯವಾಯ್ತು. ಮಧ್ಯರಾತ್ರಿ ಸರಿದ ಸ್ವಲ್ಪ ಹೊತ್ತಿಗೆಲ್ಲ ಆತ ಎದ್ದುಬಿಟ್ಟನು. ಶಿವನ ಹೃದಯದೇಗುಲದ ಬಾಗಿಲು ಅಂದು ಅವನಿಗಾಗಿ ಬೇಗ ತೆರೆದಿತ್ತು. “ಉಘೇ ಮಹಾಂತ ಮಲ್ಲಯ್ಯ... ಉಘೇ ಮಹಾಂತ ಮಲ್ಲಯ್ಯ... ಉಘೇ...” ಎಡೆಬಿಡದೆ ಜಯಂಕಾರ ಮಾಡುತ್ತ ಮಲ್ಲಿಕಾರ್ಜುನನ ಮುಂದೆ ಸಾಷ್ಟಾಂಗವೆರಗಿದನು. ಮಂಡಿಯೂರಿ ನಮಿಸಿದನು. ಎದ್ದುನಿಂತು ಕರ ಜೋಡಿಸಿ ಶಿವನನ್ನು ನೋಡುತ್ತ–

"ತಂದೇ! ಇಂದೇಕೆ ಈ ಹೇಳಲಾರದ ತಳಮಳ ? ಕಾಯಿ ಕರ್ಪೂರವಿಲ್ಲ; ಧೂಪದೀಪಿಗೆಯಿಲ್ಲ; ಮಡಿಯಿಲ್ಲ; ಎಡೆಯಿಲ್ಲ; ಬಂದಿರುವೆ ನಿನ್ನ ಗುಡಿಗೆ... ತಂದೇ! ನಂಬಿರುವೆ ನಿನ್ನಡಿಗಳನ್ನು. ಹಾಡಿರುವೆ ಇರುಳೆಲ್ಲ— ಉಘೇ ಮಹಾಂತ ಮಲ್ಲಯ್ಯಾ ನೆಂದು. ಅಯ್ಯಾ... ನನ್ನಯ್ಯಾ... ಅಲ್ಲಮಪ್ರಭುವಿಗೆ ಆಶ್ರಯವಿತ್ತವನೇ... ನನ್ನಯ್ಯಾ, ಅಕ್ಕಮಹಾದೇವಿಗೆ ಐಕ್ಯದ ಸುಖ ತೋರಿದವನೇ. ನನಗೊಂದು ದಾರಿತೋರು......" ಎಂದು ಪ್ರಾರ್ಥಿಸುತ್ತ ಕುಳಿತುಬಿಟ್ಟನು.

"ಯೋಗದಿಂದ ಅಷ್ಟ ಮಹಾಸಿದ್ಧಿಗಳು ಪ್ರಾಪ್ತವಾಗುತ್ತವೆಯೋ ಹೊರತು ನಿಜವಾದ ಸುಖ, ಆನಂದ, ಶಾಂತಿ, ಐಕ್ಯಸ್ಥಿತಿ ಪ್ರಾಪ್ತವಾಗಬೇಕಾದರೆ ಶಿವಯೋಗ ದಿಂದಲೇ ಸಾಧ್ಯ." —ಎಂದು ಅವನ ಹೃದಯದಲ್ಲಿ ಯಾರೋ ಉಸುರಿದಂತಾಯ್ತು, ಥಕ್ಕನೇ ಕಣ್ಣುಬಿಟ್ಟ. ಎದುರಿಗೆ ಜನ ಇವನನ್ನೇ ಎವೆಯಿಕ್ಕದೇ ನೋಡುತ್ತಿದ್ದಾರೆ. "ಉಘೇ ಮಹಾಂತ ಮಲ್ಲಯ್ಯಾ" ಎಂದವನೇ ಅಲ್ಲಿಂದ ಹೊರಬಿದ್ದ.

ಜಗದ್ಗುರು ಪಂಡಿತಾರಾಧ್ಯರು ಇದೇ ಮಾತನ್ನು ಹೇಳಿದುದನ್ನು ಜ್ಞಾಪಿಸಿ ಕೊಳ್ಳುತ್ತ ಆಶ್ರಮಕ್ಕೆ ಮರಳಿದನು. ತನ್ನ ಮನದಿಂಗಿತವನ್ನು ಗುರುಗಳಿಗೆ ಹೇಳಿದಾಗ ಅವರೂ ಒಪ್ಪಿಕೊಂಡರು. ಅವರು ಪ್ರಾಮಾಣಿಕರು. ಆತನ ನಿಜವಾದ ಆತ್ಮೋನ್ನತಿ ಶಿವಯೋಗದಿಂದ ಮಾತ್ರ ಸಾಧ್ಯವೆಂದೂ ಹೇಳಬೇಕಾದ ಹಿತೋಪದೇಶ ಹೇಳಿ, ಒಲವನ್ನು ತುಂಬಿ, ಪ್ರೀತಿಯನ್ನು ಎರೆದು ಅಮೃತ ಸವಿನುಡಿಗಳನ್ನುಣಿಸಿ, ಬಾಚಿ ತಬ್ಬಿ ತಲೆದಡವಿ, ಕಣ್ಣಲ್ಲಿ ಕಣ್ಣಿಟ್ಟು ಕಣ್ಣೀರು ತೊಡೆದು,

"ಮರೀ... ಮಹಾದೇವಾ... ಮರೀ... ನನ್ನ ಮಹದೇವ ಮರಿ... ನನ್ನ ಕರ್ತವ್ಯ ನಾ ಪೂರೈಸಿದೆ, ಕೃತಾರ್ಥನಾದೆ... ಹೋಗಿ ಬಾ... ಮರೀ... ಇಗೋ ಗಂಡುಹುಲಿಯನ್ನು ಕಾಣಿಕೆಯಾಗಿ ಕೊಡುತ್ತೇನೆ. ನೀನೊಂದು ಚಣವಿರದಿದ್ದರೂ ಅದು ಅನ್ನಾಹಾರ ಸೇವಿಸದು. ದೀರ್ಘ ಪ್ರವಾಸದಲ್ಲಿ ಅದು ನಿನಗೆ ಅವಶ್ಯಕ ವಾಗಿದೆ..." —ಎಂದು ಬೀಳ್ಕೊಟ್ಟರು.

ಸುಮಾರು ೧೩೭೦ ರಲ್ಲಿ ಹೊರಟ ಮರಿದೇವರು ಸಂಚಾರ ಮಾಡುತ್ತ, ಗ್ರಾಮ ನಗರಗಳ ಹೊರವಲಯದಲ್ಲಿ ಸಾಗಿ ಹೋದರೂ ಹುಲಿಯೇರಿ ಬರುವ ಅವನ ಸುದ್ದಿ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹರಡಿ ಅವನೊಬ್ಬ ಅಲೌಕಿಕ ಪುರುಷನೆಂಬು ದನ್ನು ಜನತೆ ನಿರ್ವಿವಾದವಾಗಿ ಒಪ್ಪಿಕೊಂಡುಬಿಟ್ಟಿತು.

ಹೀಗೆ ಸಂಚಾರ ಮಾಡುತ್ತ ಬೆಂಗಳೂರಿನ ಬಳಿಯಿರುವ ರೇವಣಸಿದ್ಧೇಶ್ವರ ಬೆಟ್ಟಕ್ಕೆ ಬಂದರು. ಅಲ್ಲಿ ಕೆಲಕಾಲ ತಪೋನಿರತರಾದರು. (ಮುಂದೆ ಅದಕ್ಕೂ ಮಹದೇಶ್ವರ ಬೆಟ್ಟವೆಂದು ಕರೆದರು.) ಅಲ್ಲಿಂದ ಮುಂದೆ ಸುತ್ತೂರುಮಠಕ್ಕೆ

ಬಂದರು. ಅಲ್ಲಿಯ ಮಠಾಧೀಶ್ವರರು ಶ್ರೀ ಶ್ರೀ ಸಿದ್ಧನಂಜದೇಶಿಕರು. ಶಿವಯೋಗದ ಅಭೀಪ್ಸೆಯನ್ನು ಸಿದ್ಧನಂಜದೇಶಿಕ ಸ್ವಾಮಿಗಳೆದುರು ಇಟ್ಟಾಗ ಅವರು, "ಶರಣರಿಗೆ ಮೊದಲು ಕಾಯಕ. ನಂತರ ಉಳಿದ ವಿಚಾರ"— ಎಂದರು.

ಸುತ್ತೂರಿನ ಮಠದಲ್ಲಿ ರಥೋತ್ಸವ ಸಮಯದಲ್ಲಿ ಹಾವು ಕಡಿದು ಮಡಿದವನನ್ನು ಬದುಕಿಸಿದುದೂ, ಅಲ್ಲದೆ ಜಾತ್ರೆಯ ದನಗಳಿಗೆ ಗಂಭೀರ ಸ್ವರೂಪದ ರೋಗ ಬಡಿದು ಹೆಚ್ಚಿನ ಸಂಖ್ಯೆಯಲ್ಲಿ ಅವು ಸಾಯಲಿರುವದನ್ನು ಕಂಡು ನಿರುಪಾಯರಾದ ಜನರ ಕಳವಳ ನೋಡಿ ಅವುಗಳನ್ನು ಬದುಕಿಸಿದ ಮತ್ತೊಂದು ಘಟನೆ ತಪೋಮೂರ್ತಿಗಳಾದ ಸಿದ್ಧನಂಜೇಶರಿಗೆ ವಿದಿತವಾಯಿತು. ಮರಿದೇವರೆಸಗಿದ ಪವಾಡಗಳನ್ನು ನೆನೆಯುತ್ತ ಅವರನ್ನು ಅಡಿಯಿಂದ ಮುಡಿಯವರೆಗೆ ದೀರ್ಘವಾಗಿ ದಿಟ್ಟಿಸುತ್ತ—

"ಬಾಲಕ, ನೀನು ಕಿರಿವಯಸ್ಸಿನಲ್ಲಿಯೇ ಹಿರಿದಾದ ಯೌಗಿಕ ಅನುಭವಗಳನ್ನು ಪಡೆದಿದ್ದೀಯೆ. ಆದರೆ ಅತ್ಯಂತ ಅಗತ್ಯವಾದ ಲೋಕಾನುಭವ. ಜೊತೆಗೆ ತತ್ವಾನುಭವವನ್ನೂ ಪಡೆಯುವದು ಅವಶ್ಯಕ. ಅದಕ್ಕಿಂತಲೂ ಮೊದಲು ವೀರಶೈವರಿಗೆ ಇನ್ನೊಂದು ಮುಖ್ಯವಾದದ್ದಿದೆ. ಅದೇ ಕಾಯಕ.

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ,
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು,
ಜಂಗಮವಾದಡೂ ಕಾಯಕದಿಂದಲೇ ವೇಶದ ಪಾಶ ಹರಿವುದು,
ಇದು ಚೆನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗದ ಅರಿವು ॥

ಎಂದು ಕಾಯಕಯೋಗಿ ನುಲಿಯ ಚಂದಯ್ಯ ಹೇಳುತ್ತಾನೆ." ಎಂದಾಗ ಮರಿದೇವರು ನಸುನಗುತ್ತ—

"ಸ್ವಾಮೀ! ಈ ಮಠದಲ್ಲಿ ನನ್ನ ಕಾಯಕವಾವುದು?" –ಎಂದು ಕೇಳಿದಾಗ ದಾಸೋಹಕ್ಕಾಗಿ ರಾಗಿ ಬೀಸುವ ಕಾಯಕವನ್ನು ಒಪ್ಪಿಸುತ್ತಾರೆ ಸ್ವಾಮಿಗಳು. ಬೀಸುಕಲ್ಲಿನ ಮುಂದೆ ಕುಳಿತು ಕಲ್ಲಿಗೆ ಕೈ ತಾಕಿಸಿದರೆ ಸಾಕು; ಕಲ್ಲು ತನ್ನ ತಾನೇ ಗರಗರ ತಿರುಗಿ ಕುಕ್ಕೆಯಲ್ಲಿಯ ರಾಗಿ ಕರಗಿ ಹಿಟ್ಟಾಗಿಬಿಡುತ್ತಿತ್ತು. ಇದು ಸಿದ್ಧಿಗಳ ಪ್ರಭಾವ. ಕಾಯಕದಲ್ಲಿ ಮರಿದೇವರ ನಿಷ್ಠೆ ಬೆಳೆಯುವ ಮುನ್ನ ಸಿದ್ಧಿಗಳು ತಮ್ಮ ಸ್ವಾಮಿನಿಷ್ಠೆಯನ್ನು ಅಗಾಧವಾಗಿ ತೋರಿಸಿದ್ದರಿಂದ ಅವರಿಗೆ ಇನ್ನಲ್ಲಿ ಕೆಲಸವಿಲ್ಲದಾಯಿತು. ಶಿವಯೋಗದ ಸುಖವನ್ನು ತೋರುವ ಗುರು ಬೇರೊಂದುಕಡೆ ಮೀಸಲಾಗಿದ್ದ ಮೇಲೆ, ಅವರು ಶ್ರೀ ಸಿದ್ಧನಂಜೇಶರ ಅಪ್ಪಣೆ ಪಡೆದು ಅಲ್ಲಿಂದ ಮುಂದೆ ನಡೆದರು. ಸುತ್ತೂರಮಠದಲ್ಲಿ ಈಗಲೂ ಆ ಬೀಸುವಕಲ್ಲು ನಿತ್ಯಪೂಜೆಗೊಳ್ಳುತ್ತಿದೆ.

ಸುತ್ತೂರಿನಿಂದ ಹೊರಟ ಮರಿದೇವರು ಬದನಾವಳಿ, ಮುಡುಕುತೊರೆಗೂ, ಕಾವೇರಿಯನ್ನು ದಾಟಿ ಕಲಿಯೂರು ತೋಪಿಗೂ ಬಂದು ಅಲ್ಲಿಲ್ಲ ಒಂದಿಲ್ಲ ಒಂದು ಬಗೆಯಾಗಿ ಲೀಲೆಗಳನ್ನು ತೋರಿಸುತ್ತ ಕುಂತೂರಿಗೆ ಬಂದರು. ಊರ ಹೊರಗಿನ ಒಂದು ಪೊದೆಯಲ್ಲಿ ಹುಲಿಗೆ ವಾಸಿಸಲು ಹೇಳಿ ತಾವು ಪ್ರಭುದೇವರ ಬೆಟ್ಟಕ್ಕೆ ಹೋದರು.

ಪ್ರಭುಲಿಂಗಸ್ವಾಮಿಗಳಿಗೆ ಆಕರ್ಷಿತರಾಗಿ ಅವರ ಶಿಷ್ಯತ್ವ ವಹಿಸಿದ ಅನೇಕರಲ್ಲಿ ಕೋಗವಳ್ಳಿ ಮಲ್ಲಪ್ಪ, ಉಪ್ಪಿನಳ್ಳಿ ಬಸಪ್ಪ, ಕೆಬ್ಬೇಪುರದ ಕಾವಿ ಶಾಂತಲಿಂಗಯ್ಯ, ಕೆಬ್ಬೇಪುರದ ಶಂಕರಪ್ಪ, ಶೀಳುಕಲ್ಲುಪುರದ ಮೋಟುಕೈ ಬಸಪ್ಪ. ಕಂಚುಕಹಳ್ಳಿ ಸಂಗಪ್ಪ, ಇವರು ಮುಖ್ಯರು. ಇವರೆಲ್ಲ ಸದಾ ಗುರುಸೇವೆ, ಗುರೂಪದೇಶದಲ್ಲಿ ನಿರತರು. ಅಂತೆಯೇ ಮರಿದೇವರೂ ಕೂಡ ಇವರ ಜೊತೆ ಸೇರಿದರು. ಕೋಗಳ್ಳಿ ಮಲ್ಲಪ್ಪ ಹಾಗೂ ಮರಿದೇವರಿಗೂ ಗಾಢಸ್ನೇಹವಾಯ್ತು. ಪೂಜೆಗಾಗಿ ಕಾಡಿನಲ್ಲಿ ಪತ್ರಿ ಪುಷ್ಪ ತರಲು ಎಲ್ಲರೂ ಹೋಗುತ್ತಿದ್ದರು. ಮರಿದೇವರು ಏಕಾಂತದಲ್ಲಿ ಸಮಾಧಿಸ್ಥಿತಿಯಲ್ಲಿ ಕುಳಿತುಬಿಡುತ್ತಿದ್ದರು, ಅಥವಾ ಒಮ್ಮೊಮ್ಮೆ ಓರಿಗೆಯವರೊಡನೆ ಆಟ-ಚೇಷ್ಟೆಯಲ್ಲಿ ಮೈಮರೆತು ಬಿಡುತ್ತಿದ್ದರು.

ಹೀಗೆ ಆರೆಂಟು ವರ್ಷಗಳ ಕಾಲ ಶ್ರೀ ಪ್ರಭುಲಿಂಗಸ್ವಾಮಿಗಳ ಸನ್ನಿಧಿಯಲ್ಲಿ ಕಳೆದ ಮಹದೇಶ್ವರಸ್ವಾಮಿಗಳಿಗೆ ಶಿವಯೋಗದೃಷ್ಟಿ ಬಲಿಯಿತು. ಕಂಗಳಲ್ಲಿ ಕರುಣಾದೃಷ್ಟಿ ಹೊಮ್ಮಿತು. ಜೀವಮಾತ್ರರ ಮೇಲೆ ಅನುಕಂಪೆ ಚಿಮ್ಮಿತು. ಎಲ್ಲರಲ್ಲಿ ಎಲ್ಲದರಲ್ಲಿ ತನ್ನನ್ನು, ಶಿವನನ್ನು ಕಾಣುವ ಶಿವಮಾನಸದಿಂದ ಬೆಳಗಿ ನಿಂತರು. ಎಲ್ಲರೂ ತನ್ನ ಪ್ರತೀಕ್ಷೆಯಲ್ಲಿರುವಂತೆ, ಚಣಚಣಕ್ಕೆ ಆತುರ ಅಧಿಕವಾಯಿತು. ಈ ಅತಿಕ್ರಾಂತ ಭಾವನೆಯೂ ಕಂಪಿಸುವಂತೆ ಅನೇಕ ಕರೆಗಳು ಕರ್ಣಗಳನ್ನು ಪ್ರವೇಶಿಸುವವು. ಅನಾಥ ಶಿಶುವಿನ ಆಕ್ರೋಶದ ಕರೆ, ರೋಗಿಯ ನರಳಿಕೆಯ ಕರೆ, ಪರಿತ್ಯಕ್ತೆಯ ಕಂಬನಿಯ ಕರೆ, ಬಡವನ ನಿಟ್ಟುಸಿರಿನ ಕರೆ, ಪದಹೃತನ ಆಕ್ರಂದನದ ಕರೆ, ಭವಮಾನವನ ಉದ್ವಿಗ್ನ ಕರೆ...... ಒಂದೇ ಎರಡೇ ಸಾವಿರಾರು ಕರೆಗಳು.

ಮಹದೇಶ್ವರಸ್ವಾಮಿಗಳಿಗೆ ತಮ್ಮ ಪೀಠಾಧಿಕಾರವನ್ನು ಒಪ್ಪಿಸಿ ನಿಶ್ಚಿಂತರಾದ ಶ್ರೀ ಪ್ರಭುಲಿಂಗಸ್ವಾಮಿಗಳು ಶಿವನ ಕರೆಗೆ ಓಗೊಟ್ಟು ನಡೆದೇ ಬಿಟ್ಟರು. ಮಹದೇಶ್ವರಸ್ವಾಮಿಗಳಿಗೆ ಒಂದು ಪೀಠಕ್ಕಂಟಿ ಕುಳಿತುಕೊಳ್ಳುವದು ತಮ್ಮ ಕಾರ್ಯವಲ್ಲವೆನಿಸಿತು. ತಮ್ಮ ಶಿಷ್ಯರಲ್ಲಿ ಯೋಗ್ಯನಾದ ಒಬ್ಬನಿಗೆ ನಿರಂಜನ ಗಣೇಶ್ವರನೆಂಬ ಹೆಸರಿನಿಂದ ಉತ್ತರಾಧಿಕಾರಿಯನ್ನಾಗಿ ಮಾಡಿ, ಇನ್ನೊಬ್ಬ ನಚ್ಚಿನ ಶಿಷ್ಯ ಸಂಸಾರಿ ಸಂಗಪ್ಪನನ್ನು ಕರೆದುಕೊಂಡು ಕ್ರಿ. ಶ. ೧೩೮೫ ರಲ್ಲಿ ಕುಂತೂರಿನಿಂದ ಹೊರಟರು. ಪ್ರಭುಸ್ವಾಮಿ ಬೆಟ್ಟವಿಳಿದು ತಿರುಗಿ ನೋಡಿ ಕೈಯೆತ್ತಿ ಅಭಿವಂದಿಸಿ, ಮಂಡಿಯೂರಿ ಬಾಗಿ ನಮಿಸಿ

ದರು. ಬೆಟ್ಟದಲ್ಲಿದ್ದಾಗ ಜೊತೆಯಾದ ಒಂದು ಕೃಷ್ಣಸರ್ಪ, ಎತ್ತುಗಳು ತಮ್ಮ ಜೊತೆಯಾಗಿ ಹೊರಟಾಗ ಅವುಗಳನ್ನು ಮುದ್ದಾಡಿ ಸಂತೈಸಿ ಕಳಿಸಿದರು.

ವಾಣಿಜ್ಯಪುರಿಯಲ್ಲಿ ಕೆಲದಿನವಿದ್ದು ನಡುಮಲೆಯ ಕಡೆ ಪಯಣ ಬೆಳೆಸಿದರು. ಅವರು ಹುಲಿಯೇರಿ ನಡೆದರೆ ಸಂಸಾರಿ ಸಂಗಪ್ಪ ಅವರ ಮೈಗಾವಲಾಗಿ, ಹೊತ್ತು ಹೊತ್ತಿಗೆ ಗುರುಸೇವೆಯನ್ನು ಮಾಡುತ್ತ ನಡೆದಿದ್ದನು. ಕಾಡಿನಲ್ಲಿ ಕಠಿಣತರ ಜೀವನವನ್ನು ನಡೆಸುವ, ಚಣಚಣಕ್ಕೂ ಗಂಡಾಂತರ, ಕಷ್ಟ, ತೊಂದರೆಗಳನ್ನು ಎದುರಿಸಿ ಕಠಿಣ ಹೃದಯಿಗಳಾಗಿ ಬಾಳುವ ಕಾಡುಜನರನ್ನು ಕಂಡು ಮಹದೇಶ್ವರರು ಕನಿಕರಗೊಂಡರು. ನಿಜವಾಗಿ ಇವರನ್ನೇ ಉದ್ಧರಿಸಬೇಕೆಂದು ಅವರು ಸಂಕಲ್ಪಿಸಿದರು. ಅಂತೆಯೇ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾದವರು ಅದೆಷ್ಟೋ ಜನ. ಬೇಡರು, ಕಾಡುಕುರುಬರು, ಸೋಲಿಗರು ಮುಂತಾದ ಗಿರಿಜನರನ್ನು ಕಂಡು ಒಡನಾಡಿ, ತಿಳಿಸಿ, ತಿದ್ದಿ, ಪರೀಕ್ಷಿಸಿ, ಪವಾಡವೆಸಗಿ ಅವರಿಗೆ ಲಿಂಗದೀಕ್ಷೆಯಿತ್ತು ಉದ್ಧರಿಸಿದರು.

ಬೇಡದೊರೆ ರಾಯಣ್ಣನಾಯಕನೂ ಲಿಂಗಧಾರಿಯಾದ ಮೇಲೆ ಆತನ ಮಗಳು ಅನ್ನಸಾಲಮ್ಮನಿಗೂ, ತನ್ನ ನೆಚ್ಚಿನ ಶಿಷ್ಯ ಕುರುಬ ಒಕ್ಕಲಿಗನಿದ್ದು ಲಿಂಗಧಾರಿಯಾದ ಭಿಲ್ಲಯ್ಯನಿಗೂ ಮದುವೆ ಮಾಡಿಸಿದರು. ಎಲ್ಲ ಭಕ್ತರ ಮನೆಯಲ್ಲಿ ಸಹಪಂಕ್ತಿ ಭೋಜನ ಮಾಡಿ ನುಡಿದಂತೆ ನಡೆದರು.

ಬಸವಣ್ಣನವರ ಆದರ್ಶದಲ್ಲಿಯೇ ಮಹದೇಶ್ವರರು ಮುಂದುವರೆದರು. ದುಂಡಮ್ಮನೆಂಬ ಭಕ್ತೆಳ ಮನೆಯಲ್ಲಿ ಕಾಡುಸೀಗೆಯ ಸೊಪ್ಪಿನ ಸಾರು ಮಾಡಿಸಿ ಊಟ ಮಾಡುತ್ತಿದ್ದರಂತೆ. ಅವಳ ವಂಶೀಯರು ಇಂದಿಗೂ ಕಾಡುಸೀಗೆಯ ಸೊಪ್ಪನ್ನು ಹಾಲಲ್ಲಿ ಬೇಯಿಸಿ ಎಡೆ ಹಿಡಿಯುತ್ತಾರೆ. ಮಹದೇಶ್ವರರು ಒಂದು ಬೆಟ್ಟದ ಮೇಲೆ ಮೈಮರೆತು ಮಲಗಿದಾಗ ಒಂದು ಆನೆಯು ಅವರ ತಲೆಯ ಕೆಳಗೆ ದಿಂಬಾಗಿ ತನ್ನ ಸೊಂಡಿಲಿಟ್ಟು ತನ್ನ ನಿಸ್ಸೀಮನಿಷ್ಠೆಯನ್ನು ಪ್ರದರ್ಶಿಸಿದ ಕಥೆ ಅಲ್ಲಿಲ್ಲ ಪ್ರಚಲಿತವಿದೆ ಹಾಗೂ ಆ ಬೆಟ್ಟವನ್ನು ಇಂದಿಗೂ 'ಆನೆ ತಲೆದಿಂಬು' ಎಂದೇ ಕರೆಯುತ್ತಾರೆ.

ಸಾಮಾನ್ಯಜನತೆಗೆ ಕಿರುಕುಳ ಕೊಡುತ್ತ, ಅವರನ್ನು ಹಿಂಡಿ ಹಿಪ್ಪೆ ಮಾಡಿ, ಹೆಜ್ಜೆಹೆಜ್ಜೆಗೂ ಉಪಟಳ ಕೊಡುತ್ತಿದ್ದ ಬೇವಿನಕಾಳಿಯೆಂಬ ಧನಿಕಳನ್ನು, ಭಾನುಕೀರ್ತಿ ಎಂಬ ಶ್ರಮಣನನ್ನು, ರಾಯಣ್ಣನಾಯಕನ ಮಗಳು ಚೆಲುವೆ ದೇವಕಿಯನ್ನು ಬಯಸಿ ಕಿರುಕುಳಕೊಟ್ಟ ಕೊಂಗರಾಜನನ್ನು ಶಿಕ್ಷಿಸಿ ಅವರನ್ನು ಉದ್ಧಾರ ಮಾಡಿದರು. ಈ ಮೂರೂ ಜನರ ಕಥೆಗಳು ರೋಚಕವಾಗಿವೆ.

ಹೀಗೆ ಗಿರಿಜನರನ್ನು ಉದ್ಧಾರ ಮಾಡಿದ ಶ್ರೀ ಮಹದೇಶ್ವರರ ಮನಸ್ಸಿಗೆ ಈಗ ಸಮಾಧಾನವಾಗಿತ್ತು. ಶ್ರೀ ಮಾದೇಶ್ವರರು ಸುಲಭವಲ್ಲದ್ದನ್ನು ಸಾಧಿಸಿದ ಮಹಿಮಾನ್ವಿತರು. ತಮ್ಮ ಆಯುಷ್ಯದ ಎಂಭತ್ತೈದು ವರ್ಷಗಳನ್ನು ಇದರಲ್ಲಿಯೇ ಕಳೆದರು. ತಮ್ಮ ಮಹಾಮಣಿಹ ಪೂರೈಸಿತೆಂಬ ಸಂತೃಪ್ತ ಭಾವ ಅವರಲ್ಲಿ ತುಂಬಿ ನಿಂತಿತು. ನಿರಂತರ ಶಿವಯೋಗದಲ್ಲಿ ನೆಲೆನಿಲ್ಲಲು ಮನಸ್ಸು ಹವಣಿಸಿತು. ಈ ಜಂಜಡದಿಂದ ದೂರಾಗಿ ಅವರು ಪ್ರಶಾಂತ ಸ್ಥಳವನ್ನಾಯ್ದು ಒಂದು ಗುಹೆಯಲ್ಲಿ ಪದ್ಮಾಸನಸ್ಥರಾಗಿ ಕುಳಿತರು. ತಮ್ಮ ಶಿಷ್ಯ ಸಂಗಪ್ಪನನ್ನು ಕರೆದು—

“ನಮ್ಮ ಮಣಿಹ ಪೂರೈಸಿತು. ನಾವು ಚಿರಂತನ ಶಿವಯೋಗದಲ್ಲಿ ಉಳಿಯುತ್ತೇವೆ. ನೀವಾರೂ ಬಹಿರ್ಮುಖಗೊಳಿಸಲು ಪ್ರಯತ್ನಿಸಬೇಡಿರಿ. ನಾವು ಕುಳಿತಿರುವ ಆ ಗುಹೆಯ ಮೇಲಿರುವ ಶಿಲೆಯಲ್ಲಿ ನಾವಿರುವೆವೆಂದು ಪೂಜಿಸಿರಿ. ನಿಮಗೆಲ್ಲ ಕಲ್ಯಾಣವಾಗಲಿ.”– ಎಂದು ಆಶೀರ್ವದಿಸಿ ಶಿವಯೋಗದಲ್ಲಿ ಉಳಿದರು.

ಹಲವರು ಹುಟ್ಟುತ್ತಲೆ ದೊಡ್ಡವರು.
ಹಲವರು ದೊಡ್ಡಸ್ತಿಕೆಯನ್ನು ಸಂಪಾದಿಸುತ್ತಾರೆ.
ಹಲವರ ಮೇಲೆ ದೊಡ್ಡಸ್ತಿಕೆ ಹೇರಲ್ಪಡುತ್ತದೆ.

ಶೆಕ್ಸಪೀಯರ್

ಅನುಭವ



● **ಗುರುಪುತ್ರಪ್ಪ ದೊಡವಾಡ**

ವೇದಬೋಧನೆಯಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಮಾನವೋದ್ಧಾರದ ಪುರುಷಾರ್ಥಗಳನ್ನು ಬೋಧಿಸಿದ್ದರೆ, ಶರಣ ಸಿದ್ಧಾಂತ ಐದನೆಯದಾದ ಭಕ್ತಿಮಾರ್ಗವನ್ನು ಪ್ರತಿಪಾದಿಸುತ್ತದೆ. ಭಕ್ತಿಯು ಕರ್ಮ ಬದ್ಧನಾದ ಜೀವ ದೇವನಾಗುವ ಸಹಜವಾದ ಸುಲಭೋಪಾಯ. ತಾನು ತನ್ನನ್ನು ದೇವನಲ್ಲಿ ಅರ್ಪಿಸುವದು ಭಕ್ತಿ. ಯುಗಯುಗಾಂತರಗಳಿಂದ ಮಾನವ. ದೇವನಿಂದ ಜೀವಾತ್ಮನಾದ ಕಾರಣವನ್ನು ಕಂಡುಹಿಡಿಯಲು ಅಸಮರ್ಥನಾಗಿದ್ದಾನೆ. 'ಆರು ಅರಿಯರು ನೀನು ಬೇರಾದ ಪರಿಯನು' ಎಂದು, ಮನದ ಬುದ್ಧಿಯ ಅಸಮರ್ಥತೆಯನ್ನು ನಿರೂಪಿಸಿದವರು ಮಹಾತ್ಮರಾದ ಷಡಕ್ಷರಿ ಶಿವಾನುಭವಿಗಳು. 'ಆರು ಅರಿಯರು' ಎಂಬುದಕ್ಕೆ ಇವರ ಅನುಭವವಾಣಿಯೇ ಪ್ರಮಾಣವಾದರೂ ಮಾನವಭಾವನೆಗೆ ತಿಳಿಯದ, ಇನ್ನಾವುದೋ ಅರ್ಥದಲ್ಲಿ ಬೋಧಿಸಿರಬೇಕೆಂದು ಮಾನವರಾದ ನಾವು ಅರ್ಥೈಸಬೇಕು.

'ಈಶಾವಾಸ್ಯಮಿದಂ ಸರ್ವಂ' ಎಂಬ ಉಪನಿಷತ್ತಿನ ವಾಣಿಯಂತೆ, "ನಾನಾ ರೂಪದಿಂದ ಭೇದಾಕಾರವಾಗಿ ತೋರುವೀ ಜಗವಿದೆಲ್ಲ ದೇವತನವು". ಈ ಅನುಬಂಧಕ್ಕೆ ಇನ್ನೊಂದು ಶ್ರೀ ಷಣ್ಮುಖಸ್ವಾಮಿಗಳ ಅನುಭವವಾಣಿ. "ಎಲ್ಲಿ ನೋಡಿದಡಲ್ಲಿ, ಎಲ್ಲಿ ಭಾವಿಸಿದೊಡಲ್ಲಿ ನೀನೇ ದೇವ" ಎಂಬುದು ಅನುಭವಗೋಚರ. ಮಾನವ ತನ್ನ ಪ್ರತಿಷ್ಠೆಗೋಸುಗ ಸಲ್ಲದ ಆಚರಣೆಯಿಂದ, ಚಾರಿತ್ರಹೀನನಾಗಿ, ತನ್ನ ಬಾಳನ್ನೇ ಕುರೂಪಗೊಳಿಸಿಕೊಳ್ಳುತ್ತಿದ್ದಾನೆ. ಪುಣ್ಯಾರ್ಜನೆ, ಕೇವಲ ದಾನದಿಂದಲ್ಲದೇ, ಪವಿತ್ರವಾದ ಮನೋವಾಕ್ಕಾಯಗಳಿಂದಲೂ ಸಹಜ ಸಾಧ್ಯ

"ಸತ್ಯ ಮೃದುವಚನಂಗಳೇ ಸಕಲ ಜಪತಪಂಗಳಯ್ಯ", "ಬನ್ನಿರಿ, ಕುಳ್ಳಿರಿ, ಹದುಳ ವಿದ್ದಿರಾ ಎಂದು ಬೆಸಗೊಂಡೊಡೆ, ನಿಮ್ಮ ಮೈ ಮನ ಸಿರಿ ಹಾಳಾಗುವುದೇ" "ಇವನಾರವ ಎಂದೆನಿಸದೆ, ಇವ ನಮ್ಮವನೆಂದೆನಿಸಯ್ಯ" ಎಂಬ ಮಹಾನುಭಾವ ಬಸವಣ್ಣನವರ ಸಂದೇಶದಂತೆ ಮನುಕುಲ ತನ್ನ ಬಾಳನ್ನು ಸೊಗಸಾಗಿ ನಿರ್ವಹಿಸಿ ಕೊಂಡು ಜೀವನ ಸಾರ್ಥಕ ಮಾಡಿಕೊಳ್ಳಬೇಕು. ಈ ದೇವತ್ವವನ್ನರಿತು ಅಳವಡಿಸಿ ಕೊಂಡು ಧನ್ಯರಾಗಬೇಕೆಂದು ಪ್ರಾರ್ಥನೆ.

●


ದುರ್ಜನರಿಗಂಜುವುದು ಲೋಕವು
ಸಜ್ಜನರ ಲೆಕ್ಕಿಸದು

ಕುಮಾರವ್ಯಾಸ

ಬಡವರ ಮನೆಯು ಸೊಡರು ಕುಂದುವುದೆ ?

ರಾಘವಾಂಕ

ಶ್ರೀ ಗುರುಪುತ್ರಪ್ಪ ದೊಡವಾಡ ಅಣ್ಣನವರು



● ಎಸ್. ಎಸ್. ಭೂಸರಡ್ಡಿ

ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲೂಕಿನ ಪುಟ್ಟ ಗ್ರಾಮ ಕರೀಕಟ್ಟಿ. ಈ ಗ್ರಾಮದ ಪ್ರತಿಷ್ಠಿತ ಮನೆತನ ದೊಡವಾಡ ಅವರದು. ಆದರೆ ಅವರನ್ನು ಜನತೆ 'ಶೆಟ್ಟರು' ಎಂದೇ ಕರೆಯುತ್ತಿದ್ದರು. ವ್ಯಾಪಾರ, ಕೃಷಿ, ಸಮಾಜಸೇವೆಯಲ್ಲಿ ಸದಾ ಮುಂದು ಈ ಮನೆತನ. ಈ ಮನೆತನದ ಹೆಸರಾಂತ ವ್ಯಕ್ತಿ ಶ್ರೀ ಗುರುಪಾದಪ್ಪನವರು. ಇವರ ಧರ್ಮಪತ್ನಿ ಶ್ರೀಮತಿ ಗಂಗಮ್ಮನವರು. ಇವರದು ತುಂಬಿದ ಮನ, ತುಂಬಿದ ಮನೆ. ಮನೆತನದ ಘನತೆ-ಗೌರವವನ್ನು ಕಾಯ್ದುಕೊಂಡು ಬಂದವರು ಶ್ರೀಮತಿ ಗಂಗಮ್ಮನವರು. ಆಧ್ಯಾತ್ಮಿಕ ವಿಷಯಗಳ ಚಿಂತಕರಾದ ಶ್ರೀ ಗುರುಪಾದಪ್ಪನವರ ಮೇಲೆ ಸವದತ್ತಿಯ ಬೆಟಸೂರಮಠದ ಪಟ್ಟದ್ದೇವರ ಪ್ರಭಾವ ಸಾಕಷ್ಟಾಗಿತ್ತು. ಅವರು ಧರ್ಮವಂತರು, ಗುಣವಂತರು, ಧೈರ್ಯಶಾಲಿಗಳು. ಜೀವನದ ಹೋರಾಟದಲ್ಲಿ ಬರುವ ಕಷ್ಟ-ನಷ್ಟಗಳಿಗೆ ಎದೆಗೊಟ್ಟ ಧೀಮಂತರು. ಶ್ರೀ ನಿಜಗುಣ ಶಿವಯೋಗಿಗಳ ಗ್ರಂಥಗಳ ಪಠಣ-ಮನನ ಅವರ ಬಾಳನ್ನು ರೂಪಿಸುವದರಲ್ಲಿ ಮಹತ್ವದ ಪಾತ್ರವಹಿಸಿತ್ತು. ಇಂಥ ಪುಣ್ಯ ದಂಪತಿಗಳ ಗರ್ಭದಲ್ಲಿ ೧೩-೧-೧೯೧೨ ರಂದು ಜನ್ಮವೆತ್ತಿ ಬಂದವರು ಶ್ರೀ ಗುರುಪುತ್ರಪ್ಪನವರು.

ಶಿಕ್ಷಣ : ಜನ್ಮಸ್ಥಳವಾದ ಕರೀಕಟ್ಟಿಯಲ್ಲಿಯೇ ಶ್ರೀ ಗುರುಪುತ್ರಪ್ಪನವರು ಪ್ರಾಥಮಿಕ ಶಿಕ್ಷಣವನ್ನು ಪಡೆದರು. ಇನ್ನೂ ಹೆಚ್ಚು ಕಲಿಯಬೇಕೆಂಬ ಹಂಬಲದಿಂದ ಸವದತ್ತಿಯತ್ತ ಪಯಣ. ಅಲ್ಲಿ ಒಂದೆರಡು ವರುಷ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾರ್ಥಿ ಜೀವನ ಕಳೆದರು. ಕರ್ನಾಟಕದಲ್ಲಿಯೇ ವಿದ್ಯೆಯ ತವರುಮನೆಯೆಂದು ಹೆಸರಾದ ಧಾರವಾಡವು ಅವರ ಮನಸ್ಸನ್ನು ಆಕರ್ಷಿಸಿತು. ೧೯೨೮ ರಲ್ಲಿ ಧಾರವಾಡ ನಗರದ ಮಧ್ಯದಲ್ಲಿರುವ ಆರ್. ಎಲ್. ಎಸ್. ಹಾಯಸ್ಕೂಲಿನಲ್ಲಿ ಪ್ರವೇಶ ಪಡೆದರು.

ಆಧ್ಯಾತ್ಮವಾದಿಗಳಾದ ಪೂಜ್ಯ ಶ್ರೀ ಗುರುಪಾದಪ್ಪನವರಿಗೆ ತಮ್ಮ ಪುತ್ರ ಧಾರ್ಮಿಕ ವಾತಾವರಣದಲ್ಲಿ ಬೆಳೆಯಬೇಕೆಂಬ ಸದುದ್ದೇಶವಿತ್ತು. ಆಗಲೇ ಜನ-ಮನದಲ್ಲಿ ಅಚ್ಚೊತ್ತಿ ಮೂಡಿನಿಂತ ತ್ರಿವಿಧದಾಸೋಹಮೂರ್ತಿ, ಪರಮಪೂಜ್ಯ ಶ್ರೀ ಮೃತ್ಯುಂಜಯ ಶಿವಯೋಗಿಗಳು ಪ್ರಾರಂಭಿಸಿದ ಶ್ರೀ ಮುರುಘರಾಜೇಂದ್ರ ಪ್ರಸಾದನಿಲಯಕ್ಕೆ ಗುರುಪುತ್ರಪ್ಪನವರನ್ನು ಸೇರಿಸಿದರು. ಅದೊಂದು ಅವರ ಜೀವನದಲ್ಲಿ ಅಮೃತಯೋಗವೇ ಸರಿ. ಪರಮಪೂಜ್ಯ ಶ್ರೀ ಮೃತ್ಯುಂಜಯ ಶಿವಯೋಗಿಗಳ ಪರುಷದೃಷ್ಟಿಗೆ ಪಕ್ಕಾದರು. ಆ ಪ್ರಶಾಂತ ಹಾಗೂ ಪವಿತ್ರ ಪರಿಸರ ಅವರ ವಿದ್ಯಾರ್ಥಿ ಜೀವನಕ್ಕೆ ಹೊಸ ತಿರುವು ಕೊಟ್ಟವು. ಮಠದ ಕಟ್ಟು-ನಿಟ್ಟಿನ ನಿಯಮಗಳು ಅವರ ಭಾವೀ ಜೀವನದಲ್ಲಿ, ಶಿಸ್ತನ್ನು ಮೂಡಿಸುವಲ್ಲಿ ಕಾರಣವಾದವು. ಅಲ್ಲಿಯ ಮೂರು ವರುಷಗಳ ಸಹವಾಸ ಅವರ ಭವ್ಯ ಬಾಳಿನ ಬುತ್ತಿಯಾಯಿತು. ಇನ್ನೇನು, ಮಾಧ್ಯಮಿಕ ಶಿಕ್ಷಣ ಪೂರ್ತಿ ಆಯಿತೆನ್ನುವದರೊಳಗೆ ಅನಿವಾರ್ಯ ಕಾರಣಗಳ ಮೂಲಕ ಜನ್ಮಗ್ರಾಮ ಕರೀಕಟ್ಟಿಗೆ ಮರಳಬೇಕಾಯಿತು. ಇನ್ನೂ ಹೆಚ್ಚು ಕಲಿಯಬೇಕೆಂಬ ಹಂಬಲ ಪ್ರಬಲವಾಗಿದ್ದರೂ ಮನೆತನದ ವೃತ್ತಿಯಾದ ವ್ಯಾಪಾರವೇ ಅವರ ಮನವನ್ನು ಸೆಳೆಯಿತು.

ವ್ಯಾಪಾರೀ ರಂಗದಲ್ಲಿ ಪ್ರವೇಶ : ಕರೀಕಟ್ಟಿಯಲ್ಲಿ ಆಗ ಮನೆತನದ ಪರಿಸ್ಥಿತಿ ವಿಷಮಿಸಿತ್ತು. ನೌಕರಿಗಾಗಿಯೂ ಓಡಾಡಿದ್ದುಂಟು. ಇದಕ್ಯಾವುದಕ್ಕೂ ಗುರುಪುತ್ರಪ್ಪನವರು ಅಂಜಲಿಲ್ಲ. ಅಳುಕಲಿಲ್ಲ. ಆಶೆಯ ಜ್ಯೋತಿಯನ್ನೇ ಹೊತ್ತಿಸಿಕೊಂಡವರಿಗೆ ನಿರಾಶೆಯಲ್ಲಿಯದು ! ತಂದೆ ಗುರುಪಾದಪ್ಪನವರ ಪ್ರೇರಕಶಕ್ತಿ, ಪರಮಪೂಜ್ಯ ಮೃತ್ಯುಂಜಯ ಶ್ರೀಗಳವರ ಆಶೀರ್ವಾದ ಅವರ ಬೆಂಗಾವಲಾಗಿದ್ದವು. ನಡೆಮುಂದೆ, ನಡೆಮುಂದೆ, ನುಗ್ಗಿನಡೆಮುಂದೆ- ಮುನ್ನಡೆಯುವದೇ ಅವರ ಬಾಳಿನ ಸೂತ್ರ, ದೈವೀಪ್ರೇರಣೆ ಅವರನ್ನು ಧಾರವಾಡ ತಾಲೂಕಿನ ತಡಕೋಡಕ್ಕೆ ಕರೆದೊಯ್ದಿತು. ಅಲ್ಲೊಂದು ಚಿಕ್ಕ ಕಿರಾಣಿ ಅಂಗಡಿಯೊಂದಿಗೆ ಅವರ ಸ್ವಾವಲಂಬಿ ಜೀವನ ಪ್ರಾರಂಭವಾಯಿತು. ಮನೆತನದ ಬಳುವಳಿಯಾಗಿ ಬಂದ ವ್ಯಾಪಾರವು ಅವರಿಗೆ ಅಪರಿಚಿತವೇನಲ್ಲ. ಆದರೆ ಗುರುಪುತ್ರಪ್ಪನವರು ಈ ರಂಗದಲ್ಲಿ ನಡೆದು ಬಂದ ದಾರಿಯೇ ಬೇರೆ. ಎಲ್ಲವೂ ಅಚ್ಚು-ಕಟ್ಟು. ಆಗ ಅಂಗಡಿಯೇನೋ ಚಿಕ್ಕದಾದರೂ ವ್ಯವಹಾರ ಚೊಕ್ಕ-ಚಿನ್ನ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಸಾಮಾನುಗಳ ಪೂರೈಕೆ. ವ್ಯಾಪಾರವು ಅಭಿವೃದ್ಧಿ ಹೊಂದಿತು. ಅದರೊಂದಿಗೆ ಧಾರವಾಡ ನಗರದ ವ್ಯಾಪಾರಿಗಳೊಡನೆ ನಿಕಟ ಸಂಪರ್ಕವೂ ಬಂದಿತು. ಸಗಟು ವ್ಯಾಪಾರ ಮಾಡುವ ತಂತ್ರದ ಮರ್ಮ ತಿಳಿದುಕೊಂಡರು. ಒಂದು ರೀತಿಯಿಂದ ತಡಕೋಡದ ಅವರ ವ್ಯಾಪಾರೀಜೀವನ ಮುಂದಿನ ಅಶೋತ್ತರಗಳಿಗೆ ದಾರಿ ಮಾಡಿಕೊಟ್ಟಿತು, ಉತ್ತೇಜನ ನೀಡಿತು.

ಧಾರವಾಡದತ್ತ : ಶ್ರೀ ಗುರುಪುತ್ರಪ್ಪನವರ ಮನಸ್ಸು ಸದಾ ಚಿಂತನಶೀಲ. ವ್ಯಾಪಾರಿಕ್ಷೇತ್ರದ ವ್ಯಾಪ್ತಿಯನ್ನು ಇನ್ನೂ ವಿಶಾಲಗೊಳಿಸಬೇಕೆಂಬ ಕನಸು ನನಸಾಗುವ ಸುಯೋಗ ಬಂದೇ ಬಂದಿತು. ಅವರ ಇಚ್ಛಾಶಕ್ತಿ ಪ್ರಬಲವಾಗಿ ಅಂತೆಯೇ ಧಾರವಾಡವು ಅವರನ್ನು ಕೈಮಾಡಿ ಕರೆಯಿತು. ೧೯೪೬ ನೆಯ ಇಸ್ವಿ ಅವರ ಮಹತ್ವಾಕಾಂಕ್ಷೆ ಜೀವನದಲ್ಲೊಂದು ಮೈಲುಗಲ್ಲು. ಧಾರವಾಡನಗರದ ಹೊರ ವಲಯದ ಇನ್ನೊಂದು ಗ್ರಾಮ ಕಮಲಾಪೂರ. ಅಲ್ಲೊಂದು ಕಿರಾಣಿ ಅಂಗಡಿಯನ್ನು ಪ್ರಾರಂಭಿಸಿದರು. ಇಲ್ಲೊಂದು ನೂತನ ಪ್ರಯೋಗವನ್ನು ಬಳಕೆಗೆ ತಂದರು. ಅದೇನೆಂದರೆ ಉತ್ತಮ ಗುಣಮಟ್ಟದ ಗೋದಿಯನ್ನು ಖರೀದಿಸಿ ಅಚ್ಚು-ಕಟ್ಟಾದ ರೀತಿಯಲ್ಲಿ ರವೆಯನ್ನು ತಯಾರಿಸಿ, ವಿವಿಧ ಪ್ರಮಾಣದ ಪೊಟ್ಟಣಗಳಲ್ಲಿ ಪೂರೈಸ ಹತ್ತಿದರು. ಇದೊಂದು ಅತ್ಯಂತ ಯಶಸ್ವಿ ಪ್ರಯೋಗವಾಯಿತು. ದೊಡವಾಡ ಅವರ ವ್ಯಾಪಾರವು ಅಭಿವೃದ್ಧಿ ಹೊಂದಿತು. ಅವರ ಹೆಸರೂ ಧಾರವಾಡದಲ್ಲಿ ಕುಡಿ ಒಡೆಯಿತು. ಈ ಮೊದಲೇ ಅವರು ನಿಕಟ ಸಂಪರ್ಕ ಹೊಂದಿದ್ದ ಕಚ್ಛದ ವ್ಯಾಪಾರಿ ಶ್ರೀ ಸುಲೇಮಾನ ಶೇಠರಿಗೆ ದೊಡವಾಡರೆಂದರೆ ಅಭಿಮಾನ. ಇವರ ಪ್ರಾಮಾಣಿಕತೆ, ಅಚ್ಚುಕಟ್ಟುತನವನ್ನು ಮೆಚ್ಚಿಕೊಂಡಿದ್ದರು. ಇವರ ವ್ಯಾಪಾರ ಉದ್ಯೋಗದಲ್ಲೂ ಹೆಚ್ಚಿನ ಆಸ್ಥೆ ವಹಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯೋದಯ ವಾಯಿತು. ಶ್ರೀ ಸುಲೇಮಾನ ಶೇಠರು ತಾಯ್ನಾಡಿಗೆ ಮರಳಬಯಸಿದರು. ಆಗ ಧಾರವಾಡದ ಮಧ್ಯವರ್ತಿ ಕೇಂದ್ರದಲ್ಲಿದ್ದ ತಮ್ಮ ಅಂಗಡಿಯನ್ನು ಸುಲಭ ಕಂತುಗಳ ಆಧಾರದ ಮೇಲೆ ದೊಡವಾಡ ಅವರಿಗೆ ಕೊಡಮಾಡಿದರು. ಹಕ್ಕಿ ಗರಿಗೆದರಿದಂತೆ ದೊಡವಾಡ ಅವರ ವ್ಯಾಪಾರ ಸುತ್ತಲೂ ಹರಡಿ ನಿಂತಿತು. ವ್ಯಾಪಾರದ ಮಧ್ಯವರ್ತಿ ಸ್ಥಳ ನೆಹರೂ ಮಾರ್ಕೆಟ ಅವರ ಭಾಗ್ಯದ ಬಾಗಿಲನ್ನು ತೆರೆಯಿತು. ಸಗಟು ಖರೀದಿಗೆ ನಾಂದಿಯಾಯಿತು. ಕೆಲವೇ ವರುಷಗಳಲ್ಲಿ ಕಿರಾಣಿ ಅಂಗಡಿ ಸಗಟು (ಹೋಲಸೇಲ) ವ್ಯಾಪಾರದ ಕೇಂದ್ರವಾಯಿತು. ಲಕ್ಷ್ಮೀ ಕೈಹಿಡಿದಳು. ಧಾರವಾಡ ಮಹಾಜನತೆಯು ಪ್ರೋತ್ಸಾಹಿಸಿತು. ಸುತ್ತಮುತ್ತಲಿನ ಗ್ರಾಮದ ಚಿಕ್ಕ-ಪುಟ್ಟ ಅಂಗಡಿಕಾರರಿಗೆ ಶ್ರೀ ದೊಡವಾಡರ ಅಂಗಡಿ ಆಶ್ರಯತಾಣವಾಯಿತು. ಹಲವು ಗ್ರಾಹಕ ಕುಟುಂಬಗಳು ಬೆಳಕಿಗೆ ಬಂದವು.

ನಯವಿನಯ ಸೌಜನ್ಯಗಳ ಸಾಕಾರಮೂರ್ತಿಯಾದ ಶ್ರೀ ಗುರುಪುತ್ರಪ್ಪನವರು ಅಂಗಡಿಗೆ ಬಂದ ಎಲ್ಲ ಗ್ರಾಹಕರನ್ನು ಸಮಾನತೆಯಿಂದಲೇ ಕಾಣುತ್ತಿದ್ದರು. ಅವರ ಬೇಕು-ಬೇಡಿಕೆಗಳನ್ನು ಶಾಂತವಾಗಿ ಕೇಳಿಕೊಂಡು ವ್ಯವಸ್ಥಿತವಾಗಿ ಶೀಘ್ರವೇ ಪೂರೈಸುತ್ತಿದ್ದರು. ತಮ್ಮ ಅಂಗಡಿಯ ನೌಕರ ವರ್ಗದವರಿಗೂ ಸರಿಯಾದ ತರಬೇತಿ ಕೊಡುತ್ತಿದ್ದರು, ಇದರಿಂದ ಅವರೊಬ್ಬ ಸಮರ್ಥ ಅನುಭವಿಕ ಸಗಟು ವ್ಯಾಪಾರಸ್ಥ ರೆಂದು ಪ್ರಸಿದ್ಧಿ ಪಡೆದರು. ಇದೇ ಸಂದರ್ಭದಲ್ಲಿ ಇನ್ನೊಂದು ಮಹತ್ವದ ಸಂಗತಿ

ಯಿಂವರೆ ಶ್ರೀ ಗುರುಪುತ್ರಪ್ಪನವರು ಸ್ವತಃ ಸಿರ್ಸಿ, ಸಿದ್ದಾಪೂರ, ಸಾಗರ, ಶಿವಮೊಗ್ಗಾ ಮೊದಲಾದ ಮಹತ್ವದ ವ್ಯಾಪಾರಿಕೇಂದ್ರಗಳಿಗೆ ಹೋಗಿ ಅಲ್ಲಿ ದೊರೆಯುವ ಅಡಿಕೆ, ಜೇನುತುಪ್ಪ ಮೊದಲಾದ ಸಾಮಾನುಗಳನ್ನು ಖರೀದಿಸಿ ತರುತ್ತಿದ್ದರು. ಅವುಗಳನ್ನು ಸಂಸ್ಕರಿಸಿ ಅಚ್ಚುಕಟ್ಟಾಗಿ ಬೆಳಗಾಂವಿ ಮೊದಲಾದ ಸ್ಥಳಗಳಿಗೆ ಕಳಿಸತೊಡಗಿದರು. ಇದರಿಂದಾಗಿ ಬೆಳಗಾಂವಿ ಮೊದಲಾದ ಪಟ್ಟಣಗಳ ವ್ಯಾಪಾರಸ್ಥರ ಮೇಲೆ ಇವರ ವರ್ಚಸ್ಸು ಹೆಚ್ಚಿತು. ಬೆಳಗಾಂವಿ ಮೊದಲಾದ ಕಡೆಯಿಂದ ಉತ್ತಮಮಟ್ಟದ ಬೆಲ್ಲದ ಖರೀದಿ ಮಾಡತೊಡಗಿದರು. ಅವರ ವ್ಯಾಪಾರಿ ಕಾರ್ಯಕ್ಷೇತ್ರ ಹಬ್ಬಿ-ಹರಡಿ ದಾಂಗುಡಿ ಇಟ್ಟಿತು. ಆರ್ಥಿಕ ಪರಿಸ್ಥಿತಿಯು ಭದ್ರವಾಯಿತು. ಆಗಲೇ ಅವರ ಹಿರಿಯ ಮಗ ಸರಸಾನಂದರು ಇವರ ಗರಡಿಯಲ್ಲಿ ಪಳಗಿದ್ದರು. ಅವರಿಗೆ ಈ ಕಿರಾಣಿ ಸಗಟು ವ್ಯಾಪಾರದ ಅಂಗಡಿಯನ್ನು ವಹಿಸಿ ಕೊಟ್ಟರು. ಈಗ ಅವರು ದಕ್ಷಿಣ ಭಾರತದಲ್ಲಿಯೇ ಒಬ್ಬ ದೊಡ್ಡ ಎಣ್ಣೆ ವ್ಯಾಪಾರಸ್ಥರು 'ಆಯಿಲ್ ಕಿಂಗ' ಎಂದೇ ಹೆಸರುವಾಸಿಯಾಗಿದ್ದಾರೆ. ಅವರ ಇನ್ನೊಬ್ಬ ಪುತ್ರ ಶ್ರೀ ಸಂದೈವ ಅವರು ಬ್ಯಾಂಕಿಂಗ ವ್ಯವಹಾರದಲ್ಲಿ ಆಸ್ಥೆ ಇದ್ದುದರಿಂದ ಆ ಖಾತೆಗೆ ಸೇರಿ ಈಗ ಸ್ಟೇಟ ಬ್ಯಾಂಕ ಆಫ್ ಇಂಡಿಯಾ ಶಾಖೆಯ ಮುಖ್ಯ ಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ದಲಾಲಿ ಅಂಗಡಿ ಪ್ರಾರಂಭ : ಅವರ ಸುರಿತ ಹರಿತ ವ್ಯಾಪಾರಿ ಚಾಣಾಕ್ಷತೆ, ಮುಂಧೋರಣೆ, ದೂರದರ್ಶಿತ್ವ ಇನ್ನೊಂದು ಕ್ಷೇತ್ರದತ್ತ ಸೆಳೆಯಿತು. ಅದೇ ದಲಾಲಿ ಅಂಗಡಿಯ ಪ್ರಾರಂಭ (೧೯೬೧) ಧಾರವಾಡ ನಗರದ ಸುತ್ತಮುತ್ತಲಿನ ಹಳ್ಳಿಯ ಒಕ್ಕಲು-ಮಕ್ಕಳ ಬೆಳೆಗೆ ತಕ್ಕ ಬೆಲೆ ಸಿಗಬೇಕೆಂಬ ಮಹದಾಶೆ ಅವರದು. ಆದುದರಿಂದ ಅವರ ದಲಾಲಿ ಅಂಗಡಿಯ ವ್ಯಾಪಾರವೂ ಭರದಿಂದ ಬೆಳೆಯಿತು. ಅಂಗಡಿಗೆ ಮಾಲನ್ನು ಸಣ್ಣವರೇ ತರಲಿ, ದೊಡ್ಡವರೇ ತರಲಿ ಎಲ್ಲರಿಗೂ ಒಂದೇ ಬಗೆಯಾದ ಧೋರಣೆ. ಮಾಲನ್ನು ತಂದ ಯಾರಿಗೂ ಹಾನಿಯಾಗದಂತೆ ಲಕ್ಷ್ಯ ವಹಿಸಿದರು. ಅವರ ಅನುವು ಆಪತ್ತುಗಳಿಗೆ ಊರುಗೋಲಾದರು. ತಮ್ಮ ಅಂಗಡಿಗೆ ಬಂದ ಒಳ್ಳೆಯವರನ್ನೆಲ್ಲ ತಮ್ಮ ಆಪ್ತವರ್ಗಕ್ಕೆ ಸೇರಿಸುವ ಹಿರಿಯ ಗುಣ ಅವರದು. ತಾಳ್ಮೆ, ಸಹನೆ, ಸಹಕಾರ, ಸಹಾನುಭೂತಿ ಮೊದಲಾದ ಮಾನವೀಯ ಗುಣಗಳು ಅವರಲ್ಲಿ ರಕ್ತಗತವಾಗಿದ್ದವು. ಇದರ ಅಮೃತಫಲವೇ ಅವರೊಬ್ಬ ನಗರದ ಗಣ್ಯ ನಾಗರಿಕರಾದರು. ಹಳ್ಳಿಗರ ಅಚ್ಚು-ಮೆಚ್ಚುಗೆಗೆ ಪಾತ್ರರಾದರು.

ರೈಸಮಿಲ್ : ಮಲೆನಾಡಿನ ಸೆರಗಾದ ಧಾರವಾಡವು ಭತ್ತದ ಬೆಳೆಗೆ ಇನ್ನೊಂದು ಹೆಸರು. ಸುತ್ತಮುತ್ತಲಿನ ಹಳ್ಳಿಗರು ತಂದ ಭತ್ತವನ್ನು ಅಕ್ಕಿಯನ್ನಾಗಿ ಮಾಡುವ ಮೃತ್ಯುಂಜಯ ರೈಸ್‌ಮಿಲ್ ಸ್ಥಾಪಿಸಿದರು (೧೯೬೧). ಪರಮಪೂಜ್ಯ ಮೃತ್ಯುಂಜಯ ಶಿವಯೋಗಿಗಳ ಅಮೃತಹಸ್ತದಿಂದ ಪ್ರಾರಂಭವಾದ ಈ ಮಿಲ್ಲು

ಇಂದಿಗೂ ಪ್ರಗತಿಯಿಂದ ಪ್ರಗತಿಯತ್ತ ಅಭಿವೃದ್ಧಿ ಹೊಂದುತ್ತ ಸಾಗಿದೆ. ಛತ್ರದ ಬೆಳೆಗಾರರಿಗೆ ಇದೊಂದು ವರದಾನವಾಗಿದೆ. ಅದರ ಸಂಪೂರ್ಣ ಹೊಣೆಗಾರಿಕೆಯನ್ನು ಅವರ ಇನ್ನೊಬ್ಬ ಮಗ ಶ್ರೀ ಮನೋಹರ ಅವರಿಗೆ ವಹಿಸಿಕೊಟ್ಟಿರುವದು ಅವರ ಚಾಣಾಕ್ಷತೆಗೆ ಸಾಕ್ಷಿಯಾಗಿದೆ. ಇದೇ ವೇಳೆಗೆ ಧಾರವಾಡದ ಹೃದಯವಂತಿರುವ ಬೆಳಗಾವಿ, ಸವದತ್ತಿ ಮಾರ್ಗದ ಸೈದಾಪುರದ ಅಂಚಿನಲ್ಲಿ ವಿಶಾಲವಾದ ಪ್ರಶಾಂತವಾದ ನಿವೇಶನವನ್ನು ತೆಗೆದುಕೊಂಡು ಸ್ವತಂತ್ರವಾದ ಮನೆಯೊಂದನ್ನು ಕಟ್ಟಿಸಿದರು. ದೊಡವಾಡರು ವೃತ್ತಿಯಿಂದ ವ್ಯಾಪಾರಿಗಳೇನೋ ಹೌದು, ಆದರೆ ನಿಸರ್ಗ ಸೌಂದರ್ಯ ಪ್ರಿಯರೆಂಬುದಕ್ಕೆ ಅವರ ಮನೆಯ ಹೂದೋಟವೇ ನಿದರ್ಶನ. ಅದು ಯಾರೇ ಹೋದರೂ ಅಲ್ಲಿಯ ವಾತಾವರಣ ಮನಸ್ಸಿಗೆ ನೆಮ್ಮದಿಯನ್ನು ತರುವಂತಿದೆ. ಅದು ಅವರ ವ್ಯಕ್ತಿತ್ವದ ಇನ್ನೊಂದು ಮುಖ.

ಶಂಭುಲಿಂಗ ಕೃಪಾ : ಸರಕಾರವು ತನ್ನ ನೂತನ ಧೋರಣೆಯಂತೆ ದಲಾಲಿ ವ್ಯಾಪಾರದ ಸರ್ವತೋಮುಖವಾದ ಬೆಳವಣಿಗೆಗಾಗಿ ನೂತನವಾದ, ವಿಶಾಲವಾದ ನಿವೇಶನವನ್ನು ಒದಗಿಸಿತಷ್ಟೆ. ಅದು ಮೃತ್ಯುಂಜಯ ಶಿವಯೋಗಿಗಳ ಪುಣ್ಯ ಸ್ಮರಣೆಯಲ್ಲಿ ಮೂಡಿ ನಿಂತಿದೆ. ಶ್ರೀ ಗುರುಪುತ್ರಪ್ಪನವರು ಈ ಆವರಣದಲ್ಲಿ ತಮ್ಮ ಆರಾಧ್ಯ ದೇವತಾಪುರುಷನ ಹೆಸರಿನಲ್ಲಿ 'ಶಂಭುಲಿಂಗ ಕೃಪಾ' ಎಂಬ ಸಂಕೀರ್ಣವನ್ನು ಕಟ್ಟಿಸಿದರು (೧೯೬೯). ಹಳೆ ದಲಾಲಿ ಮಾರ್ಕೆಟ್ಟಿನಲ್ಲಿದ್ದ ತಮ್ಮ ಅಂಗಡಿಯನ್ನು ಇಲ್ಲಿಗೆ ಸ್ಥಳಾಂತರಿಸಿದರು. ಇಲ್ಲಿ ಅವರ ಇನ್ನೊಂದು ಗುಣವನ್ನು ಎತ್ತಿ ಹೇಳಬಹುದು– ತಮ್ಮ ಮಕ್ಕಳೆಲ್ಲರೂ ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ವ್ಯಾಪಾರದಲ್ಲಿ ಪರಿಣತರಾಗ ಬೇಕೆಂಬುದು. ಇನ್ನೊಬ್ಬ ಪುತ್ರ ಶ್ರೀ ದಯಾನಂದ ಅವರು ದಲಾಲಿ ವ್ಯವಹಾರ ವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಅವರ ಸಾಹಸದ ಇನ್ನೊಂದು ಫಲ – 'ದೊಡವಾಡ ಉದ್ಯಮ ಕೇಂದ್ರ'. ಇಲ್ಲಿ ರೈತರಿಗೆ ಬೇಕಾಗುವ ಉತ್ತಮ ಗುಣಮಟ್ಟದ ಶೇಂಗಾಬೀಜಗಳನ್ನು ಸಂಸ್ಕರಿ ಸಲ್ಪಡಲಾಗುವದು. ಧಾರವಾಡದಲ್ಲಿ ಇದೊಂದು ಮಾದರಿ ಉದ್ಯಮ. ಇದರ ಹೊಣೆಗಾರಿಕೆಯನ್ನು ತಮ್ಮ ಕಿರಿಯ ಮಗ ಶ್ರೀ ಕೈಲಾಸಪತಿಗೆ ವಹಿಸಿಕೊಟ್ಟರು. ಅವರು ಅದನ್ನು ಅತ್ಯಂತ ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ.

ಇನ್ನಿತರ ಸಂಘ ಸಂಸ್ಥೆಗಳ ಸ್ಥಾಪನೆ : ಶ್ರೀ ಗುರುಪುತ್ರಪ್ಪನವರು ಕೇವಲ ತಮ್ಮ ವೈಯಕ್ತಿಕ ಹಿತವನ್ನೇ ಬಯಸಿದವರಲ್ಲ. ತಮ್ಮಂತೆ ಇತರರೂ ವ್ಯಾಪಾರಿ ಕ್ಷೇತ್ರದಲ್ಲಿ ಬೆಳೆಯಬೇಕೆಂಬ ಹಿರಿದಾದ ಅಪೇಕ್ಷೆಯುಳ್ಳವರು. ಭಾರತೀಯ ಸಂಸ್ಕೃತಿಯ ಹಿರಿಯ ಗುಣ– 'ಬಾಳು ಇತರರನ್ನು ಬಾಳಗೊಡು' ಎಂಬ ಸೂಕ್ತಿಯನ್ನು ಒಪ್ಪಿ ಕೊಂಡವರು. ತಮ್ಮ ಸಮೀಪಕ್ಕೆ ಬಂದ ಆತ್ಮೀಯರನ್ನು ಕೂಡಿಕೊಂಡು ಅನೇಕ

ಸಂಘ ಸಂಸ್ಥೆಗಳ ಸ್ಥಾಪನೆಗೆ ಕಾರಣಪುರುಷರು. ಉದಾಹರಣೆಗಾಗಿ ಹೇಳಬೇಕೆಂದರೆ–ಶ್ರೀ ಚನ್ನಬಸವೇಶ್ವರ ಫಾಯನಾನ್ಸ ಕಾರ್ಪೊರೇಶನ್, ಶ್ರೀ ಉಳವಿ ಚನ್ನಬಸವೇಶ್ವರ ಜೆನ್ನಿಂಗ ಹಾಗೂ ಪ್ರೆಸ್ಸಿಂಗ ಫ್ಯಾಕ್ಟರಿ. ಇತ್ತೀಚೆಗೆ ಪ್ರಾರಂಭವಾದ ಶ್ರೀ ಮೃತ್ಯುಂಜಯ ಫಾಯನಾನ್ಸ ಕಾರ್ಪೊರೇಶನ್ ಇತ್ಯಾದಿ.

ಧಾರವಾಡದ ದಲಾಲ ಮತ್ತು ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾಗಿ ಅದರ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಈ ಸಂಘದ ಇತಿಹಾಸದಲ್ಲೇ ದಾಖಲೆಯಾಗುವ ಮಹತ್ವದ ಕಾರ್ಯವನ್ನು ಹಮ್ಮಿಕೊಂಡಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ಸ್ವತಂತ್ರವಾದ, ಭವ್ಯವಾದ ಕಟ್ಟಡ ನಿರ್ಮಾಣಗೊಂಡಿದೆ. ಅದನ್ನು ಆದಾಯಮೂಲ ಪ್ರಯೋಜನಕಾರಿಯಾಗುವಂತೆ ಯೋಜಿಸಿದ್ದು ಅವರ ಕರ್ತೃತ್ವ ದಕ್ಷತೆಗೆ ಕನ್ನಡಿ.

ಆಧ್ಯಾತ್ಮಿಕ ಚೇತನ : ಹಣ ಗಳಿಕೆಯೇ ಅವರ ವ್ಯಾಪಾರದ ಗುರಿಯಲ್ಲ. ಗಳಿಸಿದ್ದನ್ನು ಬಳಸುವದರಲ್ಲಿ ಅಷ್ಟೇ ನಿಪುಣರು. ಸತ್ಕಾರ್ಯಕ್ಕೆ ಅವರದು ಯಾವಾಗಲೂ ತೆರೆದ ಹೃದಯ. ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಕಲಾತ್ಮಕ, ಸಾರ್ವಜನಿಕ ಕಾರ್ಯಗಳಿಗೆ ಮುಕ್ತಹಸ್ತದಿಂದ ದಾನ ಮಾಡಿದ ಅನೇಕ ಉದಾಹರಣೆಗಳುಂಟು. ಆದರೆ ಅದೆಲ್ಲವೂ ಗುಪ್ತ. ಆದ್ದರಿಂದ ಅವರನ್ನು ಗುಪ್ತದಾನಿಯೆಂದು ಹೇಳಬಹುದು. ಧಾರವಾಡದ ಶ್ರೀ ಮುರುಘಾಮಠಕ್ಕೆ, ಪ್ರಸಾದನಿಲಯಕ್ಕೆ, ನವಲೂರಿನ ಸರಕಾರಿ ಹಾಯಸ್ಕೂಲಿಗೆ, ಮಹಾದೇವಪ್ಪ ಕ್ಯಾನ್ಸರ ಆಸ್ಪತ್ರೆಗೆ, ಸಾಹಿತಿಗಳ ಗ್ರಂಥಗಳ ಪ್ರಕಾಶನಕ್ಕೆ ಅವರ ಕೊಡುಗೆ ಅಪಾರವಾಗಿದೆ. 'ಮಾಡಬೇಕು, ಮಾಡದಂತಿರಬೇಕು, ಮಾಡುವ ಮಾಟದಲ್ಲಿ ತಾನಿಲ್ಲದಿರಬೇಕು' ಎಂಬ ಶರಣವಾಣಿಗೆ, 'ಕೊಟ್ಟದು ತನಗೆ ಬಚ್ಚಿಟ್ಟದ್ದು ಪರರಿಗೆ, ಕೊಟ್ಟದ್ದು ಕೆಟ್ಟಿತೆನಬೇಡ ಅದು ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ' ಎಂಬ ಸರ್ವಜ್ಞನ ಮಾತಿಗೆ ಇವರು ಉತ್ತಮ ಉದಾಹರಣೆಯಾಗಿದ್ದಾರೆ. ಧಾರವಾಡ-ಹುಬ್ಬಳ್ಳಿ ಮಹಾನಗರದಲ್ಲಿ ನಡೆಯುವ ಪ್ರತಿಯೊಂದು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಇವರ ಪಾತ್ರ ಹಿರಿದು. ಇವರ ದೈವೀ ಭಾವನೆ ಹಿರಿಯದಾಗಿದೆ. ಧಾರ್ಮಿಕ ಕಾರ್ಯಗಳೆಂದರೆ ಅವರಿಗೆ ಪಂಚಪ್ರಾಣ. ಪ್ರತಿಯೊಂದರಲ್ಲಿಯೂ ದೈವೀ ಅಂಶವನ್ನು ಕಾಣುವ ಅವರ ದೃಷ್ಟಿ ನಿಜವಾಗಿಯೂ ಒಂದು ಅನುಕರಣೀಯ ಆದರ್ಶ. ಆದುದರಿಂದಲೇ ಮೃತ್ಯುಂಜಯ ಮಾರುಕಟ್ಟೆಯ ಮಧ್ಯದಲ್ಲಿ ಎಲ್ಲರ ಸಹಕಾರದಿಂದ ನಿರ್ಮಾಣಗೊಂಡ 'ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿವರುಷ ಶಿವರಾತ್ರಿಯ ಶುಭಸಂದರ್ಭದಲ್ಲಿ ಸಾರ್ವತ್ರಿಕ ಜಲ್ವಾರ್ಚನೆ, ಶಿವಸ್ಮರಣೆ, ಕೀರ್ತನೆ ಮತ್ತು ದಾಸೋಹ ಮೊದಲಾದ ಕಾರ್ಯಗಳನ್ನು ತಾವೇ ಸ್ವತಃ ಮುಂದುನಿಂತು ನೆರವೇರಿಸುತ್ತಿರುವ ಸನ್ನಿವೇಶವು ಹೃದಯಸ್ಪರ್ಶಿ.

ನಡೆ-ನುಡಿ ಆಚಾರ-ವಿಚಾರಗಳ ಸುಂದರ ಸಂಗಮ ಶ್ರೀ ಗುರುಪುತ್ರಪ್ಪನವರು. ಅವರೆಲ್ಲಿಯೂ ಹೆಚ್ಚು ಮಾತನಾಡುವುದಿಲ್ಲ. ಮೌನದಲ್ಲಿಯೇ ಮಹಾಪೀಠ ನುಡಿಯುವವರು. ಮಾತನಾಡಿದರೆ ಮುತ್ತಿನಂತಹ ನಾಲ್ಕೇ ಮಾತು. ಆದರೆ ವೈಯಕ್ತಿಕವಾಗಿ ಅವರನ್ನು ಸಂಪರ್ಕಿಸಿದಾಗ ಸರಸ ಮಾತುಗಾರರಾಗಿರುವುದು ವ್ಯಕ್ತವಾಗದೇ ಇರದು. ಸಾಹಿತ್ಯ, ಸಂಗೀತ, ತತ್ವಜ್ಞಾನ, ಧರ್ಮಜಿಜ್ಞಾಸೆ, ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳ ವಿವೇಚನೆ ಧಾರಾಳವಾಗಿ ಪ್ರತಿಪಾದಿಸುವುದನ್ನು ನೋಡಿದರೆ ಓದು ಒಕ್ಕಾಲಾದರೂ ಬುದ್ಧಿ ಮುಕ್ಕಾಲು ಎಂಬ ಮಾತು ಸ್ಮರಣೆಗೆ ಬರುತ್ತದೆ. ಅವರು ದೇಶವನ್ನು ಬಲ್ಲರು, ಕೋಶವನ್ನೂ ಬಲ್ಲರು. ಅಂತೆಯೇ ಅವರು ಲೋಕಾನುಭವಿಗಳು. ಎಲ್ಲರನ್ನೂ ಆತ್ಮೀಯತೆಯಿಂದ ಕಾಣುವ. ಸಕಾಲಿಕ ಸಹಾಯ ನೀಡುವ ಅವರ ಪ್ರವೃತ್ತಿ, ಅವರ ಪ್ರವೃತ್ತಿಯೇ ಅವರ ಇಂದಿನ ಸಂತೃಪ್ತ ಜೀವನಕ್ಕೆ ಮುನ್ನುಡಿಯಾಗಿದೆ. ಗುಣ ಮೌಲ್ಯವನ್ನು ಗುರುತಿಸುವ ಗ್ರಾಹಕ ಶಕ್ತಿ ನಿಜವಾಗಿಯೂ ಶ್ಲಾಘನೀಯವಾಗಿದೆ. ಜೀವನದಲ್ಲಿ ಎಡೆಬಿಡದೆ ಬರುವ ಅನೇಕ ಸಂದಿಗ್ಧ, ಸಂಕೀರ್ಣ ಸಂದರ್ಭಗಳಲ್ಲಿಯೂ ಚಲ-ವಿಚಲರಾಗದ ಸ್ಥಿತಪ್ರಜ್ಞತೆ ಶರಣಜೀವನಕ್ಕೆ ಸಾಕ್ಷಿಯಾಗಿದೆ. ಸೂರ್ಯೋದಯದ ಮುನ್ನವೇ ಏಳುವ, ಪರಮಾತ್ಮನನ್ನು ಪ್ರಾರ್ಥಿಸುವ. ಲಿಂಗಪೂಜೆಯನ್ನು ಮಾಡುವ. ಬಂದವರನ್ನು ಆದರದಿಂದ ಬರಮಾಡಿಕೊಳ್ಳುವ ಆತ್ಮೀಯತೆ ಅವರ ಹೃದಯ ಶ್ರೀಮಂತಿಕೆಯನ್ನು ಎತ್ತಿತೋರಿಸುತ್ತದೆ.

ನಿಯಮಿತತನವನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿರುವ ದೊಡ್ಡವಾಡ ಅಣ್ಣನವರು ಶುಭ್ರ ಮನಸ್ಸಿನವರು, ಶುಭ್ರ ವಸ್ತ್ರಧಾರಿಗಳು. ಅವರು ಎಲ್ಲಿಯೇ ಇರಲಿ, ಇವರೇ ಗುರುಪುತ್ರಪ್ಪನವರೆಂದು ಕೂಡಲೆ ಗುರುತಿಸಬಹುದು. ಲಕ್ಷ-ಲಕ್ಷಗಟ್ಟಲೆ ಹಣವನ್ನು ಗಳಿಸಿದರೂ ಬಿಗಿದ ಹೊಡೆದವರಲ್ಲ. ಆನೆಯನೇರಿ ಕೊಂಡು ಹೋದವರಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಜನಜೀವನದಲ್ಲಿ ಸಮರಸ ಹೊಂದಿದವರು. ಇಲ್ಲಿ 'ರಸವೆ ಜನನ, ವಿರಸ ಮರಣ, ಸಮರಸವೇ ಜೀವನ' ಎಂಬ ಕಾವ್ಯರ್ಷಿ ಬೇಂದ್ರೆಯವರ ನುಡಿಮುತ್ತು ಸ್ಮರಣೆಗೆ ಬರುತ್ತದೆ.

ಶುಭಗಳಿಗೆ ಅಮೃತಗಳಿಗೆ

ಇದೀಗ ೭೭ನೆಯ ವರುಷದಲ್ಲಿ ಪದಾರ್ಪಣೆ ಮಾಡುತ್ತಿರುವ ಶ್ರೀ ಗುರುಪುತ್ರಪ್ಪನವರು ಇನ್ನೂ ಚೈತನ್ಯದ ಚಿಲುಮೆಯಾಗಿದ್ದಾರೆ, ಉತ್ಸಾಹದ ಬುಗ್ಗೆಯಾಗಿದ್ದಾರೆ. ಉದ್ಯಮದಲ್ಲಿ ಹೊಸ-ಹೊಸ ಆಯಾಮಗಳನ್ನು ಕಾಣುವ ದಾರ್ಶನಿಕರಾಗಿದ್ದಾರೆ. ಸದಾ ಮಲ್ಲಿಗೆಯಂತೆ ಮಂದಸ್ಮಿತ ಮುಗುಳುನಗೆ ಎಂಥವರನ್ನೂ ಉಲ್ಲಾಸಗೊಳಿಸುವಂತಹದು. ಹೆತ್ತ-ಹೊತ್ತ ಸಾಕಿ ಸಲುಹಿದ ಮಹಾತಾಯಿ ಶತಾಯುಷಿ (ಈಗ ೧೦೫ ವರುಷ) ಶ್ರೀಮತಿ ಗಂಗಮ್ಮನವರ ಸಮ್ಮುಖದಲ್ಲಿ ಶ್ರೀ ಗುರುಪುತ್ರಪ್ಪನವರ ಅಮೃತ ಮಹೋತ್ಸವ ಜರುಗುತ್ತಿರುವದು ಯೋಗಾಯೋಗವೇ ಸರಿ. ಈ ಬಗೆಯ ಅಮೃತ ಗಳಿಗೆ ಎಲ್ಲರಿಗೂ ಬರುವದು ದುರ್ಲಭ.

ಇಂದು ಮಾತನಾಡುವ ದೇವರೆಂತಿರುವ ಪರಮಪೂಜ್ಯ ಅಥಣಿ ಮುರುಘೇಂದ್ರ ಮಹಾಶಿವಯೋಗಿಗಳ ಉಜ್ವಲ ಪರಂಪರೆಯಲ್ಲಿ ಬಂದ ಮಹಾತಪಸ್ವಿ ಶ್ರೀ ಮಹಾಂತಪ್ಪಗಳ ಅಪ್ಪಣೆಯಂತೆ, ಧಾರವಾಡ-ಹುಬ್ಬಳ್ಳಿ ಮಹಾನಗರದ ವ್ಯಾಪಾರಿ ಬಂಧುಗಳ ಅಪೇಕ್ಷೆಯಂತೆ, ಹರ-ಗುರು-ಚರಮೂರ್ತಿಗಳ ಸಾನಿಧ್ಯದಲ್ಲಿ, ನಾಡಿನ ಗಣ್ಯವ್ಯಕ್ತಿಗಳ ಸಮ್ಮುಖದಲ್ಲಿ ಜರುಗುವ ಈ ಅಮೃತ ಮಹೋತ್ಸವ ವೈಶಿಷ್ಟ್ಯಪೂರ್ಣವಾಗಿದೆ. ನಾಡಿನ ಜನತೆಯ ಪರವಾಗಿ ಮಹಾನಗರದ ಅಮೃತ ಮಹೋತ್ಸವ ಸಮಿತಿಯು ಅವರ ಸವಿ ಸಂಸ್ಮರಣೆಗಳನ್ನು ಶರಣ ಸಂಸ್ಕೃತಿಯ ಸೌರಭ ಸೂಸುವ ಅಮೂಲ್ಯ ಲೇಖನಗಳನ್ನೊಳಗೊಂಡ 'ಧರ್ಮದೀಪ್ತಿ' ಅಭಿನಂದನಾ ಗ್ರಂಥ ಪ್ರಕಟಿಸುತ್ತಿರುವದು ಯಥಾಯೋಗ್ಯವಾಗಿದೆ. ಅಣ್ಣನವರು ಇನ್ನೂ ನೂರು ವರುಷಗಳ ಹರುಷದ ಹಸನಾದ ಬಾಳನ್ನು ಬಾಳಲೆಂದೂ ಅವರಿಗೆ ಪರಮಪೂಜ್ಯ ಶ್ರೀ ಮೃತ್ಯುಂಜಯಪ್ಪಗಳು ಕರುಣಿಸಲೆಂದು ಈ ಶುಭ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಅಲ್ಪ ವಿದ್ವತ್ತು ಅಪಾಯಕಾರಿ,
ಜ್ಞಾನದ ಬುಗ್ಗೆಯನ್ನು ಕಂಠಪೂರ್ತಿ ಕುಡಿ
ಇಲ್ಲವೇ ಮುಟ್ಟದಿರು.

ಸ್ಪ್ರಿಂಗ ಪೋಪ್

ಆಲಸಿಯಾದಾಗ ಒಂಟಿಗನಾಗಿರಬೇಡ,
ಒಂಟಿಗನಾಗಿದ್ದಾಗ ಆಲಸಿಯಾಗಿರಬೇಡ.

ಜೋನ್ಸನ್

ಶರಣ ಶ್ರೀ ಗುರುಪುತ್ರಪ್ಪನವರು



● ಯೋಗೀಶ ಯಡ್ರಾವಿ

ಹುಟ್ಟಿನಿಂದಲೇ ಶ್ರೀಮಂತರಾದವರು ಕೆಲವರಾದರೆ, ತಮ್ಮ ಪ್ರಾಮಾಣಿಕ ಪ್ರಯತ್ನ-ಪರಿಶ್ರಮಗಳಿಂದಲೂ, ಸತತೋದ್ಯೋಗದಿಂದಲೂ ಶ್ರೀಮಂತಿಕೆಯ ಸಿರಿ ಮಂಚವನ್ನೇರಿದವರು ಮತ್ತಿತರರು. ಹಾಗೆಯೇ, ಆಕಸ್ಮಿಕ ಧನಲಾಭದಿಂದ ಶ್ರೀಮಂತರಾದವರೂ ಬೇರೆ ಹಲವರು. ಇಂಥವರನ್ನು ಶ್ರೀಮಂತಿಕೆ ತಾನಾಗಿಯೇ ಹುಡುಕಿಕೊಂಡು ಬರುತ್ತದೆಂದು ಹೇಳಬಹುದು.

ಶರಣರಾದ ಶ್ರೀ ಗುರುಪುತ್ರಪ್ಪನವರು ಹುಟ್ಟಿನಿಂದಲೇ ಶ್ರೀಮಂತಿಕೆಯ ರುಚಿಯನ್ನು ಚೆನ್ನಾಗಿ ಉಂಡವರು. ಅದರ ಥಳಕು-ಬೆಳಕುಗಳನ್ನು ಕಂಡವರು. ಆದರೆ, ಅವರು ತಾರುಣ್ಯದಲ್ಲಿ ಕಾಲಿರಿಸುತ್ತಿದ್ದಂತೆಯೇ ದೈವವಶಾತ್ ಬಡತನದ ಬವಣೆಯೂ ಅವರ ಮನೆಯಲ್ಲಿ ಕಾಲಿರಿಸಿತ್ತು ! ಅವರು ತಮ್ಮ ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು. ಹೊಲ-ಮನೆಗಳ ಕಠಿಣತರ ಕೆಲಸಗಳಿಗೆ ಇನ್ನೂ ಬೆಳೆಯುವ ತಮ್ಮ ಎಳೆಯ ಹೆಗಲು ಕೊಡಬೇಕಾಯಿತು. ಇಂದು ಶರಣ ಗುರುಪುತ್ರಪ್ಪನವರ ಮನೆತನ ನಮ್ಮ ನಾಡಿನ ಬೆರಳೆಣಿಕೆಯ ಶ್ರೀಮಂತರಲ್ಲಿ ಒಂದು ! ಅವರ ಅಂದಿನ ಬಡತನದ ಬವಣೆ ಮುಂಬರುವ ಭಾಗ್ಯದೇವತೆಯ ಸಂದೇಶ ಹೊತ್ತು ತಂದ ಸೇವಕನಾಗಿತ್ತು.

ಕಾಯಕಯೋಗಿ : "ಕಾಯಕವೇ ಕೈಲಾಸ" ವೆಂಬುದು ಶರಣವಾಣಿ. ಶರಣರು ಸಾರಿದ ಕಾಯಕದಲ್ಲಿ ಮೇಲು-ಕೀಳು ಮೊದಲಾದ ಸಾಂಪ್ರದಾಯಿಕವಾಗಿ ಬೆಳೆದುಕೊಂಡು ಬಂದ ಯಾವ ಬಗೆಯ ಅನಿಷ್ಟಗಳೂ ಇರಲಿಲ್ಲ. ಕಾಯಕಯೋಗಿ "ಮೃತ್ಯುಲೋಕವೆಂಬುದು ಕರ್ತಾರನ ಕಮ್ಮಟ !" ಜೀವನಕ್ಕೆ ಬೇಸತ್ತೋ ಬೆದರಿಯೋ ಪಲಾಯನ ಸೂತ್ರವನ್ನು ಪಠಿಸುವವರನ್ನು ಅವನೆಂದೂ ಮೆಚ್ಚನು, ನಚ್ಚನು. ಅದರ ಬದಲು ಕಾಯಕಸೂತ್ರದಲ್ಲಿ ಅವನಿಗೆ ಪೂರ್ಣ ವಿಶ್ವಾಸ. ಈ ಮಹಾನ

ಸೂತ್ರದ ಎಳೆ-ಎಳೆಯನ್ನೂ ತನ್ನ ಬದುಕಿನಲ್ಲಿ ಅಳವಡಿಸಿಕೊಂಡ ಇವನಿಗೆ ಕಾಯಕವೇ ಕೈಲಾಸ. ಮಾಡಿದ್ದೆಲ್ಲವೂ ನಿಜವಾದ ಕಾಯಕ; ಅದುವೆ ಜೀವನಪೋಷಕ, ಆತ್ಮ-ತಾರಕ ಎಂಬುದು ಅವರ ಸರಳ ಹೃದಯಕ್ಕೆ ವೇದ್ಯವಾದ ಪರಮಸತ್ಯ. ಅಂತಲೇ ಅವರು ಸಣ್ಣ ರೀತಿಯಲ್ಲಿ ತಮ್ಮ ವ್ಯಾಪಾರವನ್ನು ಪ್ರಾರಂಭಿಸಿ, ದೊರೆತುದುದ-ರಲ್ಲಿಯೇ ಪರಿಣತೆದಳೆದು, ಯಥಾಲಾಭಸಂತುಷ್ಟರಾಗಿ ತಮ್ಮ ಬಾಳನೌಕೆಯನ್ನು ಅತ್ಯಂತ ಸಾವಧಾನದಿಂದ ನಿಧಾನವಾಗಿ ಮುನ್ನಡೆಸಿಕೊಂಡು ಬಂದವರು. ಅವರೆಂದೂ ಆತುರದ ಉದ್ಯೋಗದಲ್ಲಿ ತೊಡಗಿದವರಲ್ಲ. ಅವರು ಎಂದೆಂದೂ ಸ್ವಾಭಾವಿಕ ವಾದುದನ್ನೇ ಬಯಸಿದವರು. ಬಂದದ್ದೆಲ್ಲವನ್ನೂ ಬಂದಂತೇ ಬರಮಾಡಿಕೊಂಡರು. "ಬಂದ್ಹಾಂಗ ಹೋದರs ಬಂಧಾನೇ ಇಲ್ಲ !" ಅನ್ನುವ ಮಾತು ಇವರ ಕಾಯಕನಿಷ್ಠ ಜೀವನಕ್ಕೆ ಸಂಪೂರ್ಣವಾಗಿ ಅನ್ವಯಿಸುತ್ತದೆ.

ಕಾಯಕಯೋಗಿಗಳಾದ ಗುರುಪುತ್ರಪ್ಪನವರು ಸತ್ಯ-ಶುದ್ಧವಾಗಿ ಕಾಯಕವನ್ನು ಮಾಡುವದಲ್ಲದೆ, ಮನಃಪೂರ್ವಕವಾಗಿ ಮಾಡುತ್ತಿದ್ದಾರೆ; ಅಹಂಕಾರವಿಲ್ಲದೆ ಮಾಡು ತ್ತಿದ್ದಾರೆ. "ಕುರ್ವನ್ನೇವೇಹ ಜಿಜೀವಿಷೇಚ್ಛತಂ ಸಮಾಃ । ಏವಂ ತ್ವಯಿ ನಾನ್ಯಥೇ ತೋsಸ್ತಿ ನ ಕರ್ಮ ಲಿಪ್ಯತೇ ನರೇ ॥" ಇದು ಈಶಾವಾಸ್ಯೋಪನಿಷತ್ತಿನ ಮಹತ್ವದ ಮಂತ್ರ. "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ। ಮಾ ಫಲಹೇತುರ್ಭೂಃ ಮಾ ತೇ ಸಂಗೋsಸ್ತ್ವಕರ್ಮಣಿ ॥" ಎಂಬುದು ಗೀತೆಯ ಗುಟ್ಟು ! ಶ್ರೀ ಗುರುಪುತ್ರಪ್ಪ ನವರು ಕಾಯಕವನ್ನು ಶಿವಾರ್ಪಿತಬುದ್ಧಿಯಿಂದ ಮಾಡಿದವರು.

ಸಾತ್ವಿಕ ಛಲಗಾರ : ಶರಣರಾದ ಪೂಜ್ಯ ತಂದೆ ಶ್ರೀ ಗುರುಪಾದಪ್ಪನವರು ಎಲ್ಲ ಅರ್ಥದಲ್ಲೂ ಒಬ್ಬ ಮಹಾಚೇತನರು. ಅವರದು ಶಿಸ್ತಿನ ಜೀವನ; ಕಾಯಕನಿಷ್ಠ ಜೀವನ. ಅವರೊಬ್ಬ ಮಹಾನ್ ಛಲಗಾರರಾಗಿದ್ದರು. "ಕೊಲುವೆನೆಂಬುದು ದೇವಭಾಷೆ: ಗೆಲುವೆನೆಂಬುದು ಭಕ್ತಭಾಷೆ !" ಇದು ಅವರಿಗೆ ನೂರಕ್ಕೆ ನೂರರಷ್ಟೂ ಅನ್ವಯಿಸುತ್ತಿತ್ತು. ಅವರ ಪ್ರಭಾವ ಶ್ರೀ ಗುರುಪುತ್ರಪ್ಪನವರ ಮೇಲೆ ಗಾಢವಾಗಿ ಬಿದ್ದಿದೆ. ಅಂತಲೇ ಇವರ ಜೀವನದಲ್ಲೂ ಆ ಶಿಸ್ತನ್ನೂ, ಕಾಯಕನಿಷ್ಠೆಯನ್ನೂ ಕಾಣುತ್ತೇವೆ. ಏಕಾಏಕಿ ಅವರ ಮನೆತನದ ಮೇಲೆ ಬಂದೆರಗಿದ ಬಡತನ ಅವರಿಗೆ ದೈವದುರ್ವಿಪಾಕವಾಗಿ ಪರಿಣಮಿಸದೆ, ವಿವಿಧ ಮುಖವಾಗಿ ಒಳಿತನೆಸಗುವ ದೈವಲೀಲೆ ಯಾಗಿ ಕಂಗೊಳಿಸಿತು. ಶ್ರೀ ಗುರುಪುತ್ರಪ್ಪನವರ ಹೃದಯ ಇದಕ್ಕೆಲ್ಲಾ ಅನುರೂಪ ವಾಗಿಯೆ ಪ್ರತಿಕ್ರಿಯಿಸಿತು, ಪ್ರತಿಸ್ಪಂದಿಸಿತು. ಅವರಲ್ಲಿ ಸಹಜವಾಗಿರುವ ಅಚಾಟ ಧೈರ್ಯ, ಮೌನವಾಗಿ ಕಷ್ಟಗಳನ್ನೆದುರಿಸುವ ಮಹಾಗುಣ, ನಿರಂತರ ಉದ್ಯೋಗ ಶೀಲತೆ, ನಿಷ್ಠೆ, ಸಾತ್ವಿಕಛಲ— ಇವೆಲ್ಲವೂ ಅವರ ವ್ಯಕ್ತಿತ್ವದಲ್ಲಿ ಪಕಳೆ-ಪಕಳೆಯಾಗಿ ಅರಳಿ ಅವರ ಒಟ್ಟು ಜೀವನಕ್ಕೊಂದು ಅಪೂರ್ವ ಮೆರಗನ್ನು ತಂದುಕೊಟ್ಟವು.

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ" ಈ ಬಸವವಾಣಿಯಲ್ಲಿ ಬರುವ ಎಲ್ಲ ಮಾತುಗಳೂ ಶರಣರಾದ ಶ್ರೀ ಗುರುಪುತ್ರಪ್ಪನವರಿಗೆ ಅನ್ವಯಿಸುತ್ತವೆ. ಅವರಲ್ಲಿ ಅಗತ್ಯವಾದ ಸಾತ್ವಿಕ ಛಲವುಂಟು. ಅವರ ಮಿದುವಾದ ಮಾತು, ಮೃದು ಸ್ವಭಾವ. ಸದಾ ಅವರ ಮುಖದಲ್ಲಿ ಲಾಸ್ಯವಾಡುವ ಮುಗುಳ್ನಗೆ— ಇವು ಅವರ ಅಂತರಾಳದಲ್ಲಿ ಮನೆಮಾಡಿಕೊಂಡಿರುವ ಇಂತಹ ಛಲಗಾರಿಕೆಯನ್ನು ಗುರುತಿಸಲು ಸಾಮಾನ್ಯರಿಗೆ ಅಡ್ಡಿಯಾಗಬಹುದು. ಆದರೆ, ಅವರನ್ನು ಬಹು ಸಮೀಪದಿಂದ ಬಲ್ಲವರಿಗೆ ಈ ಬಗೆಯ ಸಾತ್ವಿಕ ಛಲದ ರೀತಿ ಅವರ ವ್ಯಕ್ತಿತ್ವದಲ್ಲಿಯ ಒಂದು ಅಮೂಲ್ಯಗುಣವಾಗಿರುವುದು ಸಹಜವಾಗಿಯೇ ಗೋಚರಿಸುತ್ತಿದೆ. ಹಿಡಿದ ಕೆಲಸವನ್ನು ಕೊನೆಮುಟ್ಟಿಸುವ ಛಲ ಅವರದು. ಬೇಡೆಂದು ಬಿಟ್ಟುದನ್ನು ಮತ್ತೊಮ್ಮೆ ತಿರುಗಿಯೂ ಸಹ ನೋಡದ ಛಲ ಅವರದು. "ಬಿಟ್ಟುದ ಹಿಡಿವನೆ ಶರಣ ? ಹಿಡಿದುದ ಬಿಡುವನೆ ಶರಣ ?" ಹಾಗೆಯೇ. ಉತ್ತಮ, ಉದಾತ್ತ ಬದುಕನ್ನು ನಡೆಸಬೇಕೆಂಬ ಛಲವೂ ಅವರಲ್ಲಿ ಒಡೆದು ಕಾಣುತ್ತದೆ.

ಶರಣ ಗುರುಪುತ್ರಪ್ಪನವರು ತಡಕೋಡದಲ್ಲಿದ್ದಾಗ, ಹಾಗೆಯೆ ಮುಂದೆ ೧೯೪೭ ರಿಂದ ಧಾರವಾಡದಲ್ಲಿ ಬಂದು ನೆಲೆಸಿದ ತರುಣದಲ್ಲಿ ಅವರು ಎದುರಿಸಿದ ಕಷ್ಟಗಳನ್ನು ನೆನೆಸಿಕೊಂಡಾಗ, ಅವರ ಸಾತ್ವಿಕ ಛಲದ ಮೋಹಕ ಚಿತ್ರವು ನಮ್ಮ ಮನಶ್ಚಕ್ಷುವಿನೆದುರು ತಾನೇ ತಾನಾಗಿ ನಿಲ್ಲುತ್ತದೆ. "ಎಡರಡಿಸಿದ ವೇಳೆಯೊಳಂ ಧೈರ್ಯವನು" ಎಂದು ಶ್ರೀ ನಿಜಗುಣ ಶಿವಯೋಗಿಗಳು ಹೇಳುವ ಹಾಗೆ. ಇವರು ತಮ್ಮ ಆ ಸಾತ್ವಿಕ ಛಲದ ಪರಿಣಾಮವಾಗಿ, ಮಹಾನ್ ಧೈರ್ಯದಿಂದ ಬದುಕಿ ಬಾಳಿದ್ದಾರೆ.

ವಿನಯದ ಮೂರ್ತಿ : ಶ್ರೀ ಗುರುಪುತ್ರಪ್ಪನವರು ಹುಟ್ಟಿನಿಂದಲೂ ಬಹು ಮೃದುಸ್ವಭಾವದವರು, ಕಷ್ಟಸಹಿಷ್ಣುಗಳು, ಕ್ಷಮಾಗುಣಸಂಪನ್ನರು. ಅವರ ಮೃದು ಸ್ವಭಾವವೇ ಅವರನ್ನು ಇಷ್ಟು ವಿನಯವಂತರನ್ನಾಗಿ ಮಾಡಿದೆ. ಅವರು ನಿಜವಾಗಿಯೂ ವಿನಯದ ಸಾಕಾರಮೂರ್ತಿಗಳು. ಅವರ ಸ್ವಭಾವಗತ ವಿನಯಕ್ಕೆ ಬಡತನ ಮತ್ತು ಶ್ರೀ ಮುರುಘಾಮಠದ ಅಂದಿನ ವಾತಾವರಣ ಹೆಚ್ಚಿನ ಕಳೆಯನ್ನು ತಂದುಕೊಟ್ಟಿವೆಂದು ಹೇಳಿದರೆ ತಪ್ಪಾಗದು. ನಿಜಕ್ಕೂ ಅವರಿಗೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸ್ನೇಹಿತರನ್ನೂ, ಅಭಿಮಾನಿಗಳನ್ನೂ ತಂದುಕೊಟ್ಟದ್ದೇ ಅವರಲ್ಲಿರುವ ಈ ವಿನಯಗುಣವು. ಯಾವ ಉಪಚಾರಕ್ಕೂ ಪ್ರೀತರಾಗದ ಜನ ವಿನಯಕ್ಕೆ ಸಂಪ್ರೀತರಾಗಿಯೇ ತೀರುತ್ತಾರೆ. ಆದ್ದರಿಂದಲೇ, ಶ್ರೀ ನಿಜಗುಣರು "ವಿನಮಿತನಹುದರಿಂದುಪಚಾರವುಂಟೆ ?" ಎಂದು ಅಪ್ಪಣೆ ಕೊಡಿಸಿದ್ದಾರೆ. ವಿನಮಿತನಾಗಿ ನಡೆದುಕೊಳ್ಳುವುದೇ ಶ್ರೇಷ್ಠವಾದ ಉಪಚಾರ.

ಶ್ರೀ ಗುರುಪುತ್ರಪ್ಪನವರು ತಾವು ಎಲ್ಲರಿಗಿಂತ ಕಿರಿಯರೆಂದೇ ಭಾವಿಸಿಕೊಂಡು ನಡೆಯುತ್ತಾರೆ. ಧನಮದ, ಅಧಿಕಾರಮದ, ಸ್ಥಾನಮದ, ಜನಮದ, ರೂಪಮದ, ಯೌವನಮದ, ವಿದ್ಯಾಮದ, ತಪೋಮದ– ಹೀಗೆ ಅಷ್ಟಮದಗಳೆಂದು ಪ್ರಸಿದ್ಧವಾದ ಮದಗಳುಂಟು. ಅದರಲ್ಲೂ ಧನ – ಅರ್ಥಾತ್, ಸಂಪತ್ತಿನ ಮದ ಬಹಳ ಘಾತುಕ ವೆಂದು ಹೇಳುತ್ತಾರೆ. ಯಾಕೆಂದರೆ, ಉಳಿದ ಮದಗಳು ತನ್ನನ್ನು ಮಾತ್ರ ಹಾಳು ಮಾಡಿದರೆ, ಈ ದುಡ್ಡಿನ ಮದ ತನ್ನನ್ನೂ, ಅನ್ಯರನ್ನೂ ಕೂಡಿಯೇ ಹಾಳು ಮಾಡುತ್ತದೆ. ಅಂತಲೇ, ಇದರ ಗಂಭೀರಸ್ವರೂಪವನ್ನರಿತ ಶ್ರೀ ನಿಜಗುಣರು, "ಸಿರಿವಡೆದು ಜೀವಿಸುವೆಡೆಯೊಳು ವಿನಯುವನು" ಎಂದು ಬೇಡಿಕೊಂಡಿದ್ದಾರೆ. ಇಂದು ಶ್ರೀ ಗುರುಪುತ್ರಪ್ಪನವರಿಗೆ ಧನಬಲವಿದೆ, ಸ್ಥಾನಬಲವಿದೆ, ಜನಬಲವಿದೆ. ಅನೇಕ ಸಾರ್ವಜನಿಕ ಸಂಘ-ಸಂಸ್ಥೆಗಳ ಅಧಿಕಾರದ ಸ್ಥಾನಗಳು ಅವರನ್ನು ತಾವಾಗಿಯೇ ಹುಡುಕಿಕೊಂಡು ಬರುತ್ತಿವೆ. ಇಷ್ಟೆಲ್ಲಾ ಇದ್ದರೂ, ಅವರು ಮಾತ್ರ ತಮ್ಮ ವಿನಯ ವಂತಿಕೆಯನ್ನು ಎಂಥ ಸಂದರ್ಭದಲ್ಲೂ ಕಡಮೆ ಮಾಡಿಕೊಂಡಿರುವದಿಲ್ಲ. ಇದು ನಿಜಕ್ಕೂ ಪರಮಾಶ್ಚರ್ಯದ ವಿಷಯವೇ. ಅವರು ಜನ್ಮಾಂತರದಲ್ಲಿ ಮಾಡಿದ ಸುಕೃತ ವಿಶೇಷದ ಪರಮಫಲವೇ ಇದು.

ಉದಾರ ದಾನಿ : ಶರಣ ಶ್ರೀ ಗುರುಪುತ್ರಪ್ಪನವರಲ್ಲಿ ವಿನಯವಿರುವಂತೆಯೇ ಔದಾರ್ಯವೂ ಇದೆ. ಅವರ ಬಾಗಿಲಿಗೆ ಬೇಡಲು ಬಂದು ಬರಿಗೈಯಿಂದ ಹಿಂದಿರುಗಿ ಹೋದವರು ಯಾರೂ ಇಲ್ಲ. ಕಷ್ಟಕಾಲದಲ್ಲಿ ತಮ್ಮ ಸಹಾಯವನ್ನು ಯಾಚಿಸಿ ಬಂದವರಿಗೆ ಅವರು ಮುಕ್ತಹಸ್ತದಿಂದ ತಮ್ಮ ಕೈಯಲ್ಲಾದ ಎಲ್ಲ ಸಹಾಯವನ್ನು ನೀಡುತ್ತಾರೆ. ಅನ್ಯರ ದುಃಖವನ್ನು ಕಂಡಾಗ ಅವರ ಹೃದಯತುಂಬಿ ಬರುತ್ತದೆ. ಅಂಥವರ ದುಃಖಪರಿಹಾರಕ್ಕಾಗಿ ಸಾಧ್ಯವಿದ್ದ ಎಲ್ಲಾ ಏರ್ಪಾಡನ್ನೂ ಮಾಡುತ್ತಾರೆ. ಹಿರಿಯರು ದುಡ್ಡು ಕೂಡಿಬಿದ್ದಷ್ಟೂ ಮನುಷ್ಯನನ್ನು ಲೋಭಿಯನ್ನಾಗಿ ಮಾಡುತ್ತ ದೆಂದು ಹೇಳುತ್ತಾರೆ. ಆದರೆ, ಈ ಲೋಭ ಬಹಳೇ ದೊಡ್ಡ ದುರ್ಗುಣವಾಗಿದೆ. ಶ್ರೀ ನಿಜಗುಣರು "ಕಡು ಲೋಭದಿಂದ ದುರ್ಗುಣವಾನ್ಯಮುಂಟೆ ?" ಎಂದು ನಿಜವನ್ನೇ ನುಡಿದಿದ್ದಾರೆ. ಗೀತೆಯಲ್ಲೂ ಸಹ ರಜೋಗುಣದಿಂದ ಉತ್ಪನ್ನವಾದ ಈ ಲೋಭದ ಭಯಂಕರತೆಯನ್ನು ಎತ್ತಿತೋರಿಸಲಾಗಿದೆ. ದುಡ್ಡು ಅಣ್ಣನಾದರೆ, ಲೋಭ ಅದರ ಹಿಂದೇ ಹುಟ್ಟಿಬರುವ ತಮ್ಮನಾಗಿದೆ. ಇಂಥದರಲ್ಲಿ ಶ್ರೀ ಗುರುಪುತ್ರಪ್ಪನವರು ಶ್ರೀಮಂತರಾಗಿದ್ದಷ್ಟೇ ಉದಾರ ದಾನಿಗಳೂ ಆಗಿದ್ದಾರೆ.

ಹೆಸರಿಗಾಗಿ ದಾನ ಮಾಡುವ ಜನರೇ ಹೆಚ್ಚು. ಆದರೆ ಶ್ರೀ ಗುರುಪುತ್ರಪ್ಪ ನವರು ಗುಪ್ತದಾನಿಗಳಾಗಿದ್ದಾರೆ. ವರ್ತಮಾನ ಪತ್ರದಲ್ಲಿ ತಮ್ಮ ಫೋಟೊ ಮತ್ತು ಹೆಸರು ಬರಲೆಂದು ಅವರೆಂದೂ ಆಶಿಸಿದವರಲ್ಲ. ತಾವು ಎಂಥ ಸಂದರ್ಭದಲ್ಲೂ

ಎಲೆಯ ಮರೆಯ ಹೂವಿನಂತಿದ್ದು ಹೋಗಲು ಬಯಸುತ್ತಾರೆ. ಅವರಿಂದ ಹಣದ ಸಹಾಯ ಪಡೆದ ಬಡವಿದ್ಯಾರ್ಥಿಗಳೆಷ್ಟೋ ! ಅವರು ಕೊಟ್ಟ ಧನಸಹಾಯವನ್ನು ಪಡೆದುಕೊಂಡು ಮುಂದೆ ಬಂದ ಕುಟುಂಬಗಳೆಷ್ಟೋ ! ಅವರಿಂದ ಆರ್ಥಿಕ ನೆರವು ಪಡೆದ ಸಂಸ್ಥೆಗಳೆಷ್ಟೋ ! ಅಲ್ಲದೆ, ಇನ್ನೂ ಮತ್ತು ಹಲವಾರು ರೀತಿಯಿಂದ ಅವರ ಸಹಾಯವನ್ನು ಪಡೆದವರೆಷ್ಟೋ ! ಆದರೆ, ಇದಾವುದೂ ಬೆಳಕಿಗೆ ಬರದಂತೆ ಕಾಳಜಿ ವಹಿಸುತ್ತಾರೆ, ಶರಣ ಗುರುಪುತ್ರಪ್ಪನವರು. ಅಂತೆಯೇ, ಅವರದು ಸಾತ್ವಿಕ ದಾನ; ನಿರುಪಾಧಿಕ ದಾನ ತಾಮಸಿಕ ಅಥವಾ ರಾಜಸಿಕ ಇಲ್ಲವೆ ಸೋಪಾಧಿಕ ದಾನ ಅವರದೆಂದೂ ಆಗಿರಲಾರದು. ಶ್ರೀ ನಿಜಗುಣರು ಹೇಳುವ ಹಾಗೆ, ಅವರದು "ಹಿತವಚನವೆ ತೊಡವೆನಿಪ ದಾನ" ! ಪಾತ್ರವರಿತು ಮಾಡುವ ಸಮೃದ್ಧ ದಾನ ಅವರದು. "ವಿತರಣದೊಡನೆ ಭೋಗಿಸುವ ಅರ್ಥದೊದವು" ಅವರದು ! "ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ !" ಎಂಬುದು ಅವರ ದಾನದ ಹಿಂದೆ ಇರುವ ನಿಜತತ್ವ. "ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ" ಎಂಬುದು ಅವರಿಗೆ ಯಾವ ಅರ್ಥದಲ್ಲೂ ಅನ್ವಯಿಸುವದಿಲ್ಲ.

ಸರಳ ಜೀವಿ : "Simple living and high thinking" ಎಂಬುದೊಂದು ಅನುಭವವಾಣಿ. "ಸರಳ ಜೀವನ ಮತ್ತು ಶ್ರೇಷ್ಠ ಆಲೋಚನ" ಎಂಬುದು ನಿಜಕ್ಕೂ ಮಾನವನ ಬದುಕನ್ನು ಬಂಗಾರವಾಗಿಸುತ್ತದೆ. ನಿಜವಾಗಿಯೂ, ಸರಳವಾದ ಜೀವನ ಸಾಗಿಸುವದರಲ್ಲಿ ಯಾವ ಆನಂದವಿದೆಯೋ, ಅದು ಥಳಕು-ಬೆಳಕಿನ ಟೊಳ್ಳು ಜೀವನದಲ್ಲಿ ಸಿಕ್ಕಲಾರದು. ಅಂಥಲ್ಲಿ ದಣಿವಿಗೇ ಆನಂದವೆಂಬರು ಅರೆಮರುಳುಗಳಾದ ಮಾನವರು ! ಸಾದಾಜೀವನ ಸರ್ವಾರ್ಥದಲ್ಲೂ ಸತ್ವಶಾಲಿಯಾಗಿರುತ್ತದೆ. ಇಂತಹ ಸರಳತೆಯ ಜೊತೆಗೆ ಗಂಭೀರವಾದ ಆಲೋಚನಾಪರತೆ ಸೇರಿಕೊಂಡರೆ, ಕೇಳುವದೇನಿದೆ ? ಸುವರ್ಣದ ಸುಮನೋಹರವಾದ ಪುಷ್ಪಕ್ಕೆ ಸುಗಂಧ ಒಡಮೂಡಿದಂತಾಗುತ್ತದೆ ! ಕೆಲವರು ಭಾವಿಸಿರುವಂತೆ, ವ್ಯಾಪಾರೀರಂಗದಲ್ಲಿ ಇಂತಹದೊಂದು ಆಕರ್ಷಕ ವ್ಯಕ್ತಿತ್ವವನ್ನು ಹೊಂದಿರುವದು ಬಹು ವಿರಳ; ಆದರೆ, ಅವರು ಶ್ರೀ ಗುರುಪುತ್ರಪ್ಪನವರನ್ನು ನೋಡಿದಾಗ ತಮ್ಮ ಅಭಿಪ್ರಾಯವನ್ನು ನಿಶ್ಚಯವಾಗಿಯೂ ಬದಲಿಸಬೇಕಾಗುತ್ತದೆ. ಶ್ರೀ ಗುರುಪುತ್ರಪ್ಪನವರು ಬಹು ಸರಳಜೀವಿಗಳು. ಅಷ್ಟೇ ಉದಾತ್ತ ಜೀವನ. ಅವರದು ನಡೆ-ನುಡಿಯಲ್ಲಿ ಸಾಮರಸ್ಯವನ್ನು ಸಾಧಿಸಿದ ಜೀವನ. ಸರಳ, ಸರಸಸಜ್ಜನಿಕೆಯ ನಿರ್ಮಲ ಬಾಳನ್ನು ಬದುಕುವುದೇ ಅವರ ಪರಮ ಗುರಿ.

ಶ್ರೀ ಗುರುಪುತ್ರಪ್ಪನವರು ತಮ್ಮ ನಿತ್ಯ ಬದುಕಿನಲ್ಲೂ ಕೂಡ ಯಾವುದೇ ಆಡಂಬರಕ್ಕೆ ಆಸ್ಪದ ಕೊಟ್ಟವರಲ್ಲ. ಊಟ-ಉಪಚಾರಗಳಲ್ಲೂ ಅವರದು ಸರಳತೆ. ಉಡುಗೆ-ತೊಡಿಗೆಗಳಲ್ಲೂ ಅಷ್ಟೇ. ಶುಭ್ರವಾದ ಧೋತರ, ಅಂಥದೇ ಶರ್ಟ

ಹಾಗೂ ಕೋಟು. ಅವೂ ಸಾದಾ ರೀತಿಯಲ್ಲಿ ಹೊಲಿಸಿದವುಗಳು. ಕವಿವಾಣಿಯಲ್ಲಿ ಹೇಳುವ ಹಾಗೆ, "ತೊಡುವ ಬಟ್ಟೆಯೊಳಗೇನಿದೆ ? ನಡೆವ ಬಟ್ಟೆಯ ಸಿರುಕಿಸು-! ಉಂಬ ಅನ್ನದೊಳಗೇನಿದೆ ? ಕಾಂಬ ಕಣ್ಣನು ಹದಗೊಳಿಸು ! ಆಡುವ ಮಾತಿನೊಳಗೇನಿದೆ ? ಮಾಡುವ ಕಾರ್ಯ ಹಸನಾಗಿಸು-!" ಎಂಬುದು ಅವರ ಜೀವನಸಿದ್ಧಾಂತವಾಗಿದೆ. ಅವರಿಗೆ ಇಂದು ದೊರಕಿದ ಜನಪ್ರಿಯತೆ, ಆದರಾಭಿಮಾನಗಳು ಅವರ ಸರಳ ಜೀವನ, ಉದಾತ್ತ ಆಲೋಚನ, ಆಚಾರ-ವಿಚಾರಗಳಲ್ಲಿಯ ಸಮತೋಲನದಲ್ಲಿ ಹೊಂದಿರುವ ನಿಷ್ಠೆಯಿಂದ ಸಂಪ್ರಾಪ್ತವಾಗಿವೆ. ಅಂತೆಯೇ, ಅವರಿಂದು ಅಮೃತಮಹೋತ್ಸವವನ್ನು ಅಭಿಮಾನಿಗಳಿಂದ ಆಚರಿಸಿಕೊಳ್ಳುವ ಅರ್ಹತೆಯನ್ನು ತಮ್ಮ ಅಮೃತಮಯ ಬದುಕಿನಲ್ಲಿ ಪಡೆಯಲು ಸಮರ್ಥರಾಗಿದ್ದಾರೆ. ಇದು ಅವರ ನಿಸ್ಪೃಹ ಜೀವನಕ್ಕೆ ಸಂದ ಒಂದು ಅಮೂಲ್ಯ ಶುಭ-ಮಂಗಲ ಪ್ರಸಂಗವಾಗಿದೆ.

ಪರಿಶುದ್ಧ ವ್ಯಾಪಾರಿ : ವ್ಯಾಪಾರ ಅಥವಾ ವಾಣಿಜ್ಯೋದ್ಯಮ ಭಾರತದಲ್ಲಿ ಬಹು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿರುವ ಒಂದು ಮಹಾನ್ ಉದ್ಯೋಗವಾಗಿದೆ. ಕೃಷಿ ಅಥವಾ ಬೇಸಾಯದಷ್ಟೇ ಪವಿತ್ರ ಭಾವನೆಯಿಂದ ಅದನ್ನೂ ಕೂಡ ನಮ್ಮವರು ಸಾಗಿಸಿಕೊಂಡು ಬಂದುದುಂಟು. ಕರ್ನಾಟಕದಲ್ಲಿ ಅದನ್ನು ಸತ್ಯ ಶುದ್ಧ ಕಾಯಕವೆಂಬಂತೆ ಸಾಗಿಸಿಕೊಂಡು ಬರುತ್ತಿರುವ ಕೆಲವರಾದರೂ ವ್ಯಾಪಾರಿಗಳಿದ್ದಾರೆ. ಬೆರಳೆಣಿಕೆಯಲ್ಲಿ ಸಿಕ್ಕುವ ಪ್ರಾಮಾಣಿಕ ವಾಣಿಜ್ಯೋದ್ಯಮಿಗಳಲ್ಲಿ ಶರಣ ಶ್ರೀ ಗುರುಪುತ್ರಪ್ಪನವರೂ ಒಬ್ಬರಾಗಿದ್ದಾರೆ. "ತತ್ವರಹಿತ ರಾಜಕಾರಣ, ಶ್ರಮರಹಿತ ಸಂಪತ್ತು, ನೀತಿರಹಿತ ವ್ಯಾಪಾರ..." ಹೀಗೇ ಈ ಸರವಾಲೆಯನ್ನು ಬೇಕಾದಷ್ಟು ಬೆಳೆಸಬಹುದು. ಅಂತಹದರಲ್ಲೂ ಶ್ರೀ ಗುರುಪುತ್ರಪ್ಪನವರು ತಮ್ಮ ತತ್ವನಿಷ್ಠ ಜೀವನ, ಉದ್ಯೋಗನಿಷ್ಠ ಸತ್ಪ್ರವೃತ್ತಿ, ಪ್ರಾಮಾಣಿಕ ವ್ಯಾಪಾರ - ಇವುಗಳನ್ನು ಉಳಿಸಿಕೊಂಡು ಬಂದಿರುವುದು ಅವರ ಉದಾತ್ತ ಜೀವನಕ್ಕೆ ಒಂದು ಸಾಕ್ಷಿಯಾಗಿದೆ. ಅವರು ತಮ್ಮ ಸಂಪತ್ತು-ಅಂತಸ್ತುಗಳಿಗಿಂತಲೂ ಹೆಚ್ಚಾಗಿ, ತಾವು ತಮ್ಮ ವ್ಯಾಪಾರೋದ್ಯೋಗವನ್ನು ನಿರ್ವಹಿಸುವ 'ರೀತಿ'ಯಿಂದಲೇ ಹಿರಿಮೆಯನ್ನು ಪಡೆದಿದ್ದಾರೆ. ಇಂದು ವ್ಯಾಪಾರದಿಂದ ಅವರಿಗೆ ದೊಡ್ಡತನ ಬರದೆ, ಅವರಿಂದ ವ್ಯಾಪಾರಕ್ಕೆ ದೊಡ್ಡತನ ಬಂದಿದೆ. ಇದೆಲ್ಲಾ ಅವರ ಪರಿಶುದ್ಧ ವ್ಯಾಪಾರದ ಸತ್ಪರಿಣಾಮ !

ಹಳ್ಳಿಗಳಿಂದ ಬರುವ ರೈತಬಾಂಧವರಿಗೆ ಶ್ರೀ ಗುರುಪುತ್ರಪ್ಪನವರ ಅಂಗಡಿಗೇ ತಮ್ಮ ಮಾಲನ್ನು ಹಚ್ಚಬೇಕೆಂಬ ಹಿರಿಯಾಸೆ. ಯಾಕೆಂದರೆ, ಅವರಿಗೆ ಇವರಲ್ಲಿ ತಮ್ಮ ಮಾಲಿಗೆ ಯೋಗ್ಯಬೆಲೆ ಸಿಗುತ್ತದೆಂಬ ವಿಶ್ವಾಸ. ಶ್ರೀ ಗುರುಪುತ್ರಪ್ಪನವರು ಪರಿಶುದ್ಧ ವ್ಯಾಪಾರಿಯಾಗಿರುವದರ ಜೊತೆಗೆ, ತಮ್ಮ ಉದ್ಯೋಗವ್ಯವಹಾರದಲ್ಲಿ ಅತ್ಯಂತ ದಕ್ಷರು, ವಿಚಕ್ಷಣರು, ನಿಪುಣರು. ಅವರಲ್ಲಿ ಕರ್ತವ್ಯನಿಷ್ಠೆ, ಕಾರ್ಯಶ್ರದ್ಧೆ

ಹಾಗೂ ಕ್ರಿಯಾತ್ಮಕತೆಗಳು ಅಪಾರ. ೨೫ ವರ್ಷದವರಿದ್ದಾಗ ಅವರಲ್ಲಿ ಇದ್ದಿರಬಹುದಾದ ಕಾರ್ಯೋತ್ಸಾಹವು ಇಂದು ಅವರಿಗೆ ೭೫ ವರ್ಷಗಳು ತುಂಬಿದಾಗಲೂ ಉಂಟು ಎಂಬುದು ಅವರ ಸಹವರ್ತಿಗಳಿಗೆಲ್ಲಾ ಗೊತ್ತಿರಲು ಸಾಕು.

ಸುಸಂಸ್ಕೃತ ಸಭ್ಯಗೃಹಸ್ಥ : ಮಾನವಸಹಜ ಗುಣಗಳು ದೈವೀಗುಣಗಳೊಂದಿಗೆ ಬೆರೆತುಕೊಂಡು ಬಂದಾಗ, ಅದಾವುದೋ ಒಂದು ಸುಂದರವಾದ ವ್ಯಕ್ತಿಚಿತ್ರ ನಮ್ಮ ಕಣ್ಣೆದುರು ಕಂಗೊಳಿಸುತ್ತದೆ. ಅಂತಹ ವ್ಯಕ್ತಿ ಅನೇಕ ಸಲ ನಮ್ಮ ಗೌರವಕ್ಕೆ ಪಾತ್ರನಾಗುವುದರ ಜೊತೆಗೆ ಬಹಳಷ್ಟು ಸಲ ಭಕ್ತಿಗೂ ಪಾತ್ರನಾಗುತ್ತಾನೆ. ಇಂತಹದೊಂದು ಸನ್ನಿವೇಶವನ್ನು ಮನದಂದಾಗ, ಶರಣರಾದ ಗುರುಪುತ್ರಪ್ಪನವರ ವ್ಯಕ್ತಿಚಿತ್ರ ನಮ್ಮೆದುರು ಬಂದು ನಿಲ್ಲುತ್ತದೆ. ಅವರ ಕಾರ್ಯವೈಖರಿಯನ್ನು, ಅವರ ಮಾತಿನ ಶೈಲಿಯನ್ನು, ಅವರ ಮೃದು-ಮಧುರ ಮುಗುಳ್ನಗೆಯ ರೀತಿಯನ್ನು ಒಟ್ಟಾರೆ, ಅವರ ಜೀವನ ವಿಧಾನವನ್ನು ನಾವು ನೆನಪಿಸಿಕೊಂಡಾಗ ಅವರನ್ನು ಒಬ್ಬ ಸುಸಂಸ್ಕೃತ ಸಭ್ಯಗೃಹಸ್ಥ ಎಂದು ನಮ್ಮ ಹೃದಯ ಒಪ್ಪಿಕೊಂಡು ಬಿಡುತ್ತದೆ. ಇನ್ನೊಬ್ಬರ ಮನಸಿಗೆ ನೋವಾಗಬಾರದೆಂದು ಅವರು ಬಹಳ ಕಾಳಜಿ ವಹಿಸುತ್ತಾರೆ. ಬಿರುಸುಮಾತುಗಳನ್ನು ಬಳಸುವದು ಅವರ ಸ್ವಭಾವಕ್ಕೇ ಪರಕೀಯವಾದುದು. ಅವರ ನುಡಿಯಲ್ಲಿ ನಯ. ನಡೆಯಲ್ಲಿ ವಿನಯ ತುಂಬಿ ತುಳುಕುತ್ತಿರುತ್ತವೆ. ಅವರು ಬಾಹ್ಯ ಶ್ರೀಮಂತಿಕೆಯ ಜೊತೆಗೆ ಆಂತರಿಕ ಅಥವಾ ಹೃದಯದ ಶ್ರೀಮಂತಿಕೆಯನ್ನೂ ಬೆಳೆಸಿಕೊಂಡು ಬಂದಿದ್ದಾರೆ.

ಶ್ರೀ ಗುರುಪುತ್ರಪ್ಪನವರ ವ್ಯಕ್ತಿತ್ವದಲ್ಲಿ ಕಣ್ಣುಕುಕ್ಕುವ ನಾಗರಿಕತೆಯಿರದೆ ಸಂಸ್ಕೃತಿಯ ಬೆಂಬೆಳಕು ಚೆಲ್ಲುವಂತಿದೆ: ಶ್ರೀ ಸಿದ್ಧಯ್ಯ ಪುರಾಣಿಕರ ಈ ವಚನವನ್ನು ಈ ಸಂದರ್ಭದಲ್ಲಿ ನಾವು ಸ್ಮರಿಸಿಕೊಳ್ಳಬಹುದಾಗಿದೆ :

ಮನೆಯ ಸಿರಿವಂತಿಕೆ ನಾಗರಿಕತೆಯ ಪ್ರತೀಕ,
ಮನದ ಸಿರಿವಂತಿಕೆ ಸಂಸ್ಕೃತಿಯ ಸಂಕೇತವಯ್ಯಾ !
ನಡಿಗೆ ನಾಗರಿಕತೆ, ನೃತ್ಯ ಸಂಸ್ಕೃತಿ:
ಮಾತು ನಾಗರಿಕತೆ, ಗೀತೆ ಸಂಸ್ಕೃತಿ;
ಬಣ್ಣ ನಾಗರಿಕತೆ, ಚಿತ್ರ ಸಂಸ್ಕೃತಿ;
ಶಿಲೆ ನಾಗರಿಕತೆ, ಶಿಲ್ಪ ಸಂಸ್ಕೃತಿ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕರ್ಮ ನಾಗರಿಕತೆ, ಕಾಯಕ ಸಂಸ್ಕೃತಿಯಯ್ಯಾ !"

ಬುದ್ಧಿಯ ಜ್ಞಾನ ನಾಗರಿಕತೆ: ಹೃದಯದ ಸಂಸ್ಕಾರ ಸಂಸ್ಕೃತಿ. ಹೃದಯದ ಸಂಸ್ಕಾರ ಪಡೆದ ಹಿರಿಯ ಚೇತನ ಶ್ರೀ ಗುರುಪುತ್ರಪ್ಪನವರು. ಅವರ ಸ್ವಭಾವ ಅತ್ಯಂತ

ವ್ಯದು. ಅವರು ಬಹು ಮಿತಭಾಷಿ. ಸದಾ ಹಸನ್ಮುಖಿ. ಬಾಳಿನಲ್ಲಿ ಬಹುಮುಖ ಕಷ್ಟಗಳನ್ನು ಅನುಭವಿಸಿದವರು. ಬಡತನದ ಕೊರಗು–ಕಾರ್ಪಣ್ಯಗಳನ್ನು ಕಂಡವರು. ಅಂತಲೇ, ಅವರು ಬಡವರ ದುಃಖವನ್ನು ದೂರಗೊಳಿಸಲು ಎಲ್ಲಾ ನೆರವು ನೀಡುತ್ತಾರೆ. ಅನಾಥರಿಗೆ ಸದಾ ಸಹಾಯ ಮಾಡುತ್ತಾರೆ. ಅವರನ್ನು ಒಬ್ಬ ಸುಸಂಸ್ಕೃತ ಸದ್ಗೃಹಸ್ಥರೆಂದು ಜನ ಕೊಂಡಾಡುವುದರಲ್ಲಿ ಅರ್ಥವಿದೆ.

ಸಮಾಜ–ಸೇವಕ : ಶರಣ ಗುರುಪುತ್ರಪ್ಪನವರ ಸಮಾಜ–ಸೇವೆ ಬಹುಮುಖವಾದುದು. ಅವರ ಸಾಮಾಜಿಕ ಪ್ರಜ್ಞೆ ನಿಜಕ್ಕೂ ಅಗಾಧವಾದುದು. ಅಂತಲೇ, ಅವರು ತಮ್ಮ ವ್ಯಾಪಾರರಂಗದಲ್ಲಿ ವೃತ್ತಿಬಾಂಧವರ ಹಿತರಕ್ಷಣೆಗಾಗಿ, ಅನೇಕ ಸಂಘ ಸಂಸ್ಥೆಗಳಿಗೆ ಕಾರಣೀಭೂತರಾದಂತೆಯೇ, ಧಾರ್ಮಿಕ ಹಾಗೂ ಶೈಕ್ಷಣಿಕ ರಂಗಗಳಲ್ಲೂ ಅವರ ಸಮಾಜ–ಸೇವೆ ಅರ್ಥಪೂರ್ಣವಾಗಿದೆ; ಆದರ್ಶಪೂರ್ಣವಾಗಿದೆ. ಧಾರವಾಡದಲ್ಲಿ ಸಮಸ್ತ ವ್ಯಾಪಾರಿಗಳ ಸಂಘವೊಂದು ಅಸ್ತಿತ್ವಕ್ಕೆ ಬರಲು ಅವರೇ ಕಾರಣೀಭೂತರಾಗಿದ್ದಾರೆ. ಆದರ ಮೂಲಕ ವಾಣಿಜ್ಯೋದ್ಯಮವು ವಿವಿಧ ಮುಖವಾಗಿ ಬೆಳೆದು ಬರಲು ಅಹೋ–ರಾತ್ರಿ ಶ್ರಮಿಸಿದ್ದಾರೆ. ಆ ದಿಶೆಯಲ್ಲಿ ತಮಗೆ ಏನೆಲ್ಲವೂ ಸಾಧ್ಯವೋ ಅದನ್ನೆಲ್ಲಾ ಸ್ವಯಂಪ್ರೇರಣೆಯಿಂದ ತಾವಾಗಿಯೇ ಮುಂದೆ ಬಂದು ಮಾಡಿದ್ದಾರೆ, ಮಾಡುತ್ತಿದ್ದಾರೆ. ಅಂತೆಯೆ, ಇಂದು ಅವರ ವೃತ್ತಿಬಾಂಧವರೆಲ್ಲರೂ ಉಳಿದ ಅವರ ಅಭಿಮಾನಿಗಳನ್ನು ಜೊತೆಗೂಡಿಕೊಂಡು ಒಳ್ಳೇ ಹೆಮ್ಮೆಯಿಂದ ಅವರ ಅಮೃತ ಮಹೋತ್ಸವವನ್ನು ಆಚರಿಸಲು ಅತ್ಯಂತ ವಿಜೃಂಭಣೆಯಿಂದ, ದೊಡ್ಡ ಪ್ರಮಾಣದಲ್ಲಿ ಆಚರಿಸಲು ಮುಂದಾಗಿದ್ದಾರೆ.

ಹಾಗೆಯೇ, ಶ್ರೀ ಗುರುಪುತ್ರಪ್ಪನವರು ಮಠ–ಮಾನ್ಯಗಳಿಗೂ ತಮ್ಮ ಉದಾರ ಕಾಣಿಕಾದಿಗಳನ್ನು ನೀಡಿ, ಅಲ್ಲಿ ಸಾಮಾಜಿಕ–ಸಾಂಸ್ಕೃತಿಕ–ಧಾರ್ಮಿಕ ಕಾರ್ಯಕ್ರಮಗಳು ಸರಾಗವಾಗಿ ಸಾಗಿಕೊಂಡು ಬರಲು ಅಸ್ಪದ ಮಾಡಿಕೊಟ್ಟಿದ್ದಾರೆ. ಅವರ ಸಕ್ರಿಯವಾದ ಸೇವೆಯಿಂದ ಕೆಲವು ಮಠಗಳು ಪುನಶ್ಚೇತನಗೊಂಡು ಇಂದು ಸಮಾಜ ಸೇವೆಯನ್ನು ಕೈಗೊಳ್ಳುವಲ್ಲಿ ತಮ್ಮ ಪಾಲಿನ ಪಾತ್ರವನ್ನು ಬಹು ಸಮರ್ಥವಾಗಿ ನಿರ್ವಹಿಸುತ್ತಿವೆ. ನಿಜಕ್ಕೂ ಸಮಾಜದ ಇಂತಹ ಗಣ್ಯವ್ಯಕ್ತಿಗಳು ಸೇವಾಮನೋಭಾವನೆಯಿಂದ ಪ್ರೇರಿತವಾಗಿ ಮಠಗಳಿಗೆ ಧನಸಹಾಯಾದಿಗಳನ್ನು ನೀಡುವುದು ಎಲ್ಲ ಕಾಲಕ್ಕೂ ಅಪೇಕ್ಷಣೀಯವಾಗಿದೆ.

ಶ್ರೀ ಗುರುಪುತ್ರಪ್ಪನವರ ಸಮಾಜ–ಸೇವೆ ಅನಂತಮುಖವಾದುದು. ಅವರು ಅದೆಷ್ಟೋ ಸಮಾಜಹಿತ ಕಾರ್ಯಗಳಿಗೆ ಕೈತುಂಬ ದೇಣಿಗೆಗಳನ್ನು ಕೊಟ್ಟಿದ್ದಿದೆ. ಕ್ಯಾನ್ಸರ್ ಆಸ್ಪತ್ರೆಗೆ ಸಾಕಷ್ಟು ನಿಧಿಯನ್ನು ನೀಡಿ ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಮೆರೆದಿದ್ದಾರೆ. ಶಿಕ್ಷಣಸಂಸ್ಥೆಗಳೂ ಸಹ ಅವರ ಧನಸಹಾಯಕ್ಕೆ ಹೊರತಾಗಿಲ್ಲ.

ಅವರು ಒಟ್ಟು ಹದಿನಾಲ್ಕು-ಹದಿನಾರು ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿಯೋ ಸದಸ್ಯರಾಗಿಯೋ, ಸಲಹೆಗಾರರಾಗಿಯೋ-ಹೀಗೆ ವಿವಿಧ ರೀತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಲ್ಲಿಸುತ್ತಿದ್ದಾರೆ. ಇಂದು ಅವರಿಲ್ಲದ ಶಿಬಿರಗಳಲ್ಲ; ಪರಿಷತ್ತುಗಳಿಲ್ಲ; ಯಾತ್ರಾ-ಮಹೋತ್ಸವಗಳಿಲ್ಲ; ಸಭೆ-ಸಮ್ಮೇಳನಗಳಿಲ್ಲ; ಮದುವೆ-ಮುಂಜಿವೆಗಳಿಲ್ಲ. ನಿಜವಾಗಿಯೂ ಅವರ ಸೇವಾ-ಮನೋಭಾವನೆ ಹಾಗೂ ಸಾಮಾಜಿಕ ಪ್ರಜ್ಞೆಗಳು ಅತುಲವಾಗಿವೆ. ಇವರಲ್ಲಿ ಯಾವದೇ ಉತ್ಪ್ರೇಕ್ಷೆಯೂ ಇಲ್ಲವೆಂದು ವಿನಯಪೂರ್ವಕ ಹೇಳಬಯಸುತ್ತೇನೆ. ಅವರ ಈ ನಿಃಸ್ವಾರ್ಥಸೇವೆ ಸಮಾಜಕ್ಕೆ ನೂರ್ಕಾಲ ಸಿಗಲೆಂದು ಹಾರೈಸುವೆ.

ಧಾರ್ಮಿಕವ್ಯಕ್ತಿ : ಶ್ರೀ ಗುರುಪುತ್ರಪ್ಪನವರು ಹುಟ್ಟು ಧಾರ್ಮಿಕ ಮನೋಭಾವವನ್ನು ಪಡೆದವರಾಗಿದ್ದಾರೆ. ಅದಕ್ಕೆ ಪೋಷಕವಾಗಿ ಅವರ ಮನೆಯಲ್ಲಿಯ ವಾತಾವರಣವೂ ಧಾರ್ಮಿಕ ಸ್ವರೂಪದ್ದಾಗಿತ್ತು. ಅವರ ಮೇಲೆ ಅವರ ಪೂಜ್ಯ ತಂದೆಯವರ ಪ್ರಭಾವವೇ ಅಧಿಕವಾಗಿ ಬಿದ್ದಿದೆ. ಶ್ರೀ ಗುರುಪಾದಪ್ಪನವರು ಒಬ್ಬ ದೊಡ್ಡ ಶರಣರೇ ಆಗಿದ್ದರೆಂದು ಹೇಳಿದರೆ ಅತಿಶಯೋಕ್ತಿಯೇನೂ ಅಲ್ಲ. ಅವರ ಜೀವನವೇ ಅವರ ಮಗ ಗುರುಪುತ್ರಪ್ಪನವರಿಗೆ ಪರಮಾದರ್ಶವಾಯಿತು. ಹಾಗೆಯೇ, ಅವರು ಮಾಧ್ಯಮಿಕ ಶಾಲೆ ಕಲಿಯಲು ಧಾರವಾಡಕ್ಕೆ ಬಂದಾಗ, ಅವರು ಶ್ರೀ ಮುರುಘರಾಜೇಂದ್ರ ಬೋರ್ಡಿಂಗಿನಲ್ಲಿ ಇರುವ ವ್ಯವಸ್ಥೆ ಮಾಡಲಾಯಿತು. ಶ್ರೀ ಮಠದ ವಾತಾವರಣವೂ ಅವರ ಧಾರ್ಮಿಕತೆಯನ್ನು ಮತ್ತಷ್ಟು ಬೆಳೆಸಿತು. ಅದರಿಂದ ಅವರ ಸಾತ್ವಿಕ ಅಂತಃಕರಣಕ್ಕೆ ಹೆಚ್ಚಿನ ಪ್ರಕಾಶ ಪ್ರಾಪ್ತವಾಯಿತು.

ಆಧುನಿಕ ನಾಗರಿಕತೆಯ ಮಧ್ಯದಲ್ಲಿಯೇ ಇರುತ್ತಿದ್ದರೂ ತಮ್ಮ ಧರ್ಮವನ್ನು ಚಾಚೂ ತಪ್ಪದೆ ನಡೆಸಿಕೊಂಡು ಬರುತ್ತಿರುವ ಶರಣ ಶ್ರೀ ಗುರುಪುತ್ರಪ್ಪನವರು ನಿಜಕ್ಕೂ ದೊಡ್ಡವರು. "ಧರ್ಮೋ ರಕ್ಷತಿ ರಕ್ಷಿತಃ।" ಎಂಬಂತೆ, ಅವರು ಧರ್ಮವನ್ನು ರಕ್ಷಿಸಿಕೊಂಡು ಬಂದಿದ್ದಾರೆ; ಅವರನ್ನು ಧರ್ಮ ಕಾಯುತ್ತಲೇ ಬಂದಿದೆ. ಅವರೆಂದೂ, ಎಂತಹ ಪರಿಸ್ಥಿತಿಯಲ್ಲೂ ಸ್ನಾನ-ಶಿವಪೂಜೆಗಳಿಲ್ಲದೆ ತಮ್ಮ ದೈನಂದಿನ ಜೀವನವನ್ನು ಪ್ರಾರಂಭಿಸುವುದೇ ಇಲ್ಲ. ಒಂದು ಸಲ ದಿಲ್ಲಿಗೆ ಹೋಗುವ ಪ್ರಸಂಗ ಬಂದಾಗ, ಗಾಡಿಯಲ್ಲಿಯಾದರೆ ಸ್ನಾನ-ಪೂಜೆಗಳಿಗೆ ವ್ಯತ್ಯಯವುಂಟಾದೀತೆಂಬ ಭಯದಿಂದ ವಿಮಾನದಿಂದಲೇ ಪ್ರವಾಸ ಮಾಡಿದರು! ಧರ್ಮದ ವ್ಯಾಖ್ಯೆಯನ್ನು "ಯತೋಽಭ್ಯುದಯ ನಿಃಶ್ರೇಯಸ ಸಿದ್ಧಿಃ ಸ ಧರ್ಮಃ।" ಎಂದು ಮಾಡಿದ್ದಾರೆ. ಯಾವುದರಿಂದ ಲೌಕಿಕ ಪ್ರಗತಿ-ಪರಮ ಪುರುಷಾರ್ಥ (ಮೋಕ್ಷ-) ಸಿದ್ಧಿಯುಂಟಾಗುತ್ತದೆಯೋ ಅದೇ ನಿಜವಾದ ಧರ್ಮ. ಅಂತಹ ಧರ್ಮವನ್ನೇ ಶರಣ ಗುರುಪುತ್ರಪ್ಪನವರು ಜೀವ-ಜೀವಾಳವನ್ನಾಗಿಸಿಕೊಂಡಿದ್ದಾರೆ.

ಪರಮ ಭಕ್ತ : ಶ್ರೀ ಗುರುಪುತ್ರಪ್ಪನವರ ತಂದೆ ಶ್ರೀ ಗುರುಪಾದಪ್ಪನವರು ತಮ್ಮ ಮನೆದೇವರಾದ ಶಂಭುಲಿಂಗ ಹಾಗೂ ಮಾದೇಶ್ವರರಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿದ್ದರು. ಇವರು ಭಕ್ತಿಯನ್ನು ತಮ್ಮ ಪೂಜ್ಯ ತಂದೆಯವರಿಂದಲೇ ಬಳುವಳಿಯಾಗಿ ಪಡೆದಿದ್ದಾರೆ. ಅವರ ಸತ್ವಭಾವ ಇವರ ಮೇಲೆ ಬಹು ಗಾಢವಾದ ಪರಿಣಾಮವನ್ನು ಬೀರಿದೆ. ಸಂಜೆ–ಮುಂಜಾವುಗಳಲ್ಲಿ ಶ್ರೀ ನಿಜಗುಣ ಶಿವಯೋಗಿಗಳ ನಾಮಸ್ಮರಣೆ ಮಾಡುತ್ತಿದ್ದ ಇವರ ಭಕ್ತಿಯ ಪರಮೋತ್ಕರ್ಷಕ ವಾತಾವರಣ ಗುರುಪುತ್ರಪ್ಪನವರ ಎಳೆಯ ವಯಸ್ಸಿನ ಮೇಲೆ ಪ್ರಗಾಢವಾದ ಪ್ರಭಾವ ಮುದ್ರೆಯನ್ನು ಒತ್ತಿರಲು ಸಾಕು. ಅಂತಲೇ ಅವರಿಂದು ಪರಮ ಭಕ್ತರು.

ಭಕ್ತಿಯಲ್ಲಿ ತಾಮಸಿಕ, ರಾಜಸಿಕ ಮತ್ತು ಸಾತ್ವಿಕವೆಂದು ಮೂರು ವಿಧ. ಅಪ್ಪಟ ಪ್ರೇಮವೇ ನಿಜವಾದ ಭಕ್ತಿಯ ಸ್ವರೂಪ. ಅದು ಪೂಜ್ಯರಾದವರಲ್ಲಿ ನಿರರ್ಗಳವಾಗಿ ಹರಿಯುವ ಸಹಜ ಪ್ರೀತಿಯ ಅಮೃತ ಪ್ರವಾಹ. ಶ್ರೀ ಗುರುಪುತ್ರಪ್ಪನವರ ನಿರ್ಮಲಭಕ್ತಿ ಬೆಳೆದುಬರಲು ಅಂದು ಶ್ರೀ ಮೃತ್ಯುಂಜಯ ಅಪ್ಪಗಳ, ಇಂದು ಶ್ರೀ ಮಹಾಂತಪ್ಪಗಳ ನಿಕಟ ಸನ್ನಿಧಿ, ಆತ್ಮೀಯ ಸಂಬಂಧಗಳು ಅಧಿಕ ಪ್ರಮಾಣದಲ್ಲಿ ಪ್ರಭಾವ ಬೀರಿವೆ. ಅವರ ಭಕ್ತಿಯಲ್ಲಿ ಹಮ್ಮು, ವಂಚನೆ, ಡಾಂಭಿಕತೆಗಳ ಸುಳಿವೂ ಸಹ ಇಲ್ಲ. ಇದನ್ನು ಶ್ರೀ ಮುರುಘಾಮಠದ ಅನೇಕ ಕಾರ್ಯಕ್ರಮಗಳಲ್ಲಿ ಅವರು ವರ್ತಿಸುವ ರೀತಿಯಿಂದ ನಾನು ಸ್ವತಃ ಕಂಡಿದ್ದೇನೆ. ಅವರ ಭಕ್ತಿಯಲ್ಲಿ ವಿನಯ, ಭಯ, ಆದರ, ಗೌರವ, ಪ್ರೇಮ-ಇವು ಸಮರಸಗೊಂಡಿವೆ. ಅವರದು ಅನನ್ಯ ಭಕ್ತಿ, ಜ್ಞಾನಭಕ್ತಿ, ಸಾತ್ವಿಕಭಕ್ತಿ.

ಶ್ರೀ ಗುರುಪುತ್ರಪ್ಪನವರ ಸಾತ್ವಿಕ ಸ್ವಭಾವಕ್ಕೆ ಈ ಸದ್ಭಕ್ತಿಯು ಸೇರುವೆ ಒಂದು ವಿಶಿಷ್ಟ ಸ್ವಾರಸ್ಯವನ್ನುಂಟು ಮಾಡಿದೆ. ಅವರ ಸರಳ, ನಿರಾಡಂಬರ ಜೀವನಕ್ಕೆ–ಹಾಲು–ಸಕ್ಕರೆಗೆ ಜೇನು ಬೆರಸಿದಂತೆ– ಈ ನಿರ್ಮಲಭಕ್ತಿ ಬೆರೆತು ರುಚಿಯನ್ನೂ, ಶುಚಿಯನ್ನೂ ತಂದುಕೊಟ್ಟಿದೆ. ಅವರಿಂದು ತಮ್ಮ ಸಾರ್ಥಕ ಬದುಕಿನ ಬೆಳಕಿನಲ್ಲಿ ಸಂತೃಪ್ತಿಯ ಸತ್ಫಲವನ್ನು ಸವಿಯಲು ಅವರ ಪರಮ ಭಕ್ತಿಯೇ ಅವರನ್ನು ಅರ್ಹರನ್ನಾಗಿ ಮಾಡಿದೆ.

ಸತ್ಸಂಗ ಪ್ರೇಮಿ : ಗುರುಪುತ್ರಪ್ಪನವರ ಪರಮಪೂಜ್ಯ ತಂದೆಯವರಾದ ಶ್ರೀ ಗುರುಪಾದಪ್ಪನವರು ಸವದತ್ತಿಯಲ್ಲಿರುವ ಶ್ರೀ ಬೆಡಸೂರಮಠದ ಮಹಾಸ್ವಾಮಿಗಳವರಲ್ಲಿ ಶ್ರೀ ನಿಜಗುಣರ ಶಾಸ್ತ್ರಗಳ ಮೇಲಿನ ಪ್ರವಚನ ಕೇಳಲು ಆಗಾಗ ಹೋಗುತ್ತಿದ್ದರು. ತಮ್ಮೊಡನೆ ಅದೆಷ್ಟೋ ಸಲ ಅವರು ಮಗನನ್ನೂ ಅಕ್ಕರೆಯಿಂದ ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಶ್ರೀ ನಿಜಗುಣರ ಶಾಸ್ತ್ರಗಳ ಮೇಲಿನ ಶ್ರೀ ಗುರುಪುತ್ರಪ್ಪನವರ ನಿಷ್ಠೆ ಎಷ್ಟಿದೆ ಎಂದರೆ, ಅವರು ಸ್ವತಃ

ಶ್ರೀ ಅಪ್ಪಗಳ ಅಪ್ಪಣೆ ತೆಗೆದುಕೊಂಡು ಶ್ರೀ ಮುರುಘಾಮಠದಲ್ಲಿ ಪಂ. ನಾಗಭೂಷಣ ಶಾಸ್ತ್ರಿಗಳಿಂದ ಅವರ ಆರೂ ಶಾಸ್ತ್ರಗಳು ನಡೆಯುವಂತೆ ತಕ್ಕ ಏರ್ಪಾಡು ಮಾಡಿ, ತಾವೂ ಅದರಲ್ಲಿ ಶ್ರವಣಯೋಗಿಗಳಾಗಿ ಭಾಗವಹಿಸಿ, ತಮ್ಮ ಸತ್ಸಂಗ-ಪ್ರೇಮವನ್ನೂ, ಶಾಸ್ತ್ರಜಿಜ್ಞಾಸಾ ಪ್ರೀತಿಯನ್ನೂ ತೋರಿಸಿಕೊಂಡರು.

ಸತ್ಸಂಗ, ಶರಣರ ಸಂಗ ಎಂಬ ಸುಂದರವಾದ ಹೂದೋಟದಲ್ಲಿ ಶಿವನ ಕೃಪೆ, ಭಗವಂತನ ಕರುಣೆ ಎಂಬ ತಂಗಾಳಿ ಸದಾ ಬೀಸುತ್ತಿರುತ್ತದೆ. ಅಲ್ಲಿ ಕಾಲಿರಿಸಿದವರೆಲ್ಲರಿಗೂ ಸದ್ವಾಸನೆಗಳ ಸುಗಂಧ ದೊರಕುವದಲ್ಲದೆ, ಆ ತಂಗಾಳಿಯ ಹಾಯಾದ ತಂಪೂ ಲಭಿಸುತ್ತದೆ. ಅದು ನಿಜಕ್ಕೂ ಸಂಸಾರ ತಾಪಹಾರಕವೂ, ಸುಜ್ಞಾನ-ಸಂತೃಪ್ತಿದಾಯಕವೂ ಆಗಿರುತ್ತದೆ. "ಮತಿಗೆ ಮಂಗಳವೀವುದಾವುದು ? ಸುಜನರ ಸಂಗ !" ಅದಕ್ಕಂದೇ ಶರಣ ಗುರುಪುತ್ರಪ್ಪನವರಿಗೆ ಅದರ ಮೇಲೆ ಪಂಚಪ್ರಾಣ ! ನಮ್ಮ ಮನೆಯಲ್ಲಿ ನನ್ನ ಪೂಜ್ಯ ಗುರುಗಳಾದ ಗೋಪನಕೊಪ್ಪದ ಪರಮಹಂಸ ಸದ್ಗುರು ಶ್ರೀ ಶ್ರೀಸಿದ್ಧವೀರ ಮಹಾಸ್ವಾಮಿಗಳ ವಾಸ್ತವ್ಯವಿದ್ದಾಗಲೆಲ್ಲಾ ಇವರು ತಮ್ಮ ಸ್ನೇಹಿತರಾದ ಶ್ರೀ ಮಲ್ಲನಗೌಡರೊಡನೆ ಬಂದು ಸತ್ಸಂಗದ ಸುಮಧುರ ಅಮೃತೋಪಮ ಫಲದ ಸವಿಯನ್ನುಂಡು ಹೋಗುತ್ತಿದ್ದರು. ಇವರು ನಮ್ಮ ಆಪ್ತರಲ್ಲಿ ಹಿರಿಯರೂ, ಬಹುಗೌರವಾನ್ವಿತರೂ ಆಗಿದ್ದರೆಂಬ ಕಾರಣಕ್ಕಿಂತ ಹೆಚ್ಚಾಗಿ, ಇವರ ಸತ್ಸಂಗಪ್ರೇಮ ನನ್ನ ಹೃದಯಕ್ಕೆ ಹೆಚ್ಚು ಹತ್ತಿರದವರನ್ನಾಗಿಸಿತು.

ಕುಟುಂಬ ವತ್ಸಲ : ಧರ್ಮ – ಭಕ್ತಿ – ಸತ್ಸಂಗ – ಅಧ್ಯಾತ್ಮ ಜಿಜ್ಞಾಸೆಗಳಲ್ಲಿ ಶರಣರಾದ ಶ್ರೀ ಗುರುಪುತ್ರಪ್ಪನವರು ತಮ್ಮ ಕೌಟುಂಬಿಕ ಜೀವನವನ್ನು ಕಡೆಗಣಿಸಿದವರಲ್ಲ. "ಜಾಣನು ಲೌಕಿಕ-ಪರಮಾರ್ಥವೆರಡನು । ಮಾಣದೆ ಕೂಡಿ ನಡೆಸುತಿಹ ನಿಂತು" ಎಂಬ ಶ್ರೀನಿಜಗುಣರ ಸುಂದರ ಸಮನ್ವಯ ಸಿದ್ಧಾಂತವು ಅವರ ಆದರ್ಶಮಯ ಬದುಕಿಗೆ ಅಕ್ಷರಶಃ ಅನ್ವಯಿಸುತ್ತದೆ. ಸಂಸಾರಕ್ಕಾಗಿ ಅಧ್ಯಾತ್ಮವನ್ನು ಕಡೆಗಣಿಸುವದಾಗಲಿ, ಪರಮಾರ್ಥಕ್ಕಾಗಿ ಪ್ರಪಂಚವನ್ನು ತ್ಯಜಿಸುವದಾಗಲೀ ಪೂರ್ಣ ಬದುಕಾಗಲಾರದು. "ವಿಷಮ ಸಂಸಾರವಿದನು ಕನಸೆಂದರಿ" ಎಂಬಲ್ಲಿರುವ ಸತ್ಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲದಿದ್ದರೂ ಅದಕ್ಕೊಂದು ಅರ್ಥಪೂರ್ಣವಾದ ವಿಶಿಷ್ಟತೆಯನ್ನು ಕೊಟ್ಟುಕೊಳ್ಳಲು ಸಾಧ್ಯವಿದೆ. ಇದನ್ನು ಸಾಧ್ಯ ಮಾಡಿಕೊಂಡವರು ಶ್ರೀ ಗುರುಪುತ್ರಪ್ಪನವರು. ಅವರಿಗೆ ಈ ಸಂಸಾರ ವಿಷಮವೂ ಆಗಲಿಲ್ಲ, ಕನಸೂ ಆಗಲಿಲ್ಲ. "Life is real; life is earnest !" ಎಂಬುದು ಅವರ ಅನುಭವಕ್ಕೆ ಬಂದ ವಿಷಯವಾಗಿದೆ. ಬದುಕು ಸತ್ಯ, ಅದು ಪ್ರಾಮಾಣಿಕ. ಅದಕ್ಕೊಂದು ನೆಲೆಯಿದೆ, ಬೆಲೆಯಿದೆ, ಭರವಸೆಯಿದೆ. ಇದು ಅವರ ನಿಜಾನುಭವ. ಅವರು ತಮ್ಮ ಸಂಸಾರವನ್ನು ವಿವೇಕದಿಂದ ನಡೆಸಿದ್ದಾರೆ, ನಡೆಸುತ್ತಲಿದ್ದಾರೆ. ಅವರ ಧರ್ಮಪತ್ನಿ

ಶ್ರೀಮತಿ ಶಾಂಭವೀತಾಯಿ ಪತಿಗೆ ತಕ್ಕ ಸತಿಯಾಗಿರುವಂತೆಯೇ ಅತ್ತೆ-ಮಾವಂದಿರಾದ ಶ್ರೀಮತಿ ಗಂಗಮ್ಮ ಶ್ರೀ ಗುರುಪಾದಪ್ಪನವರಿಗೆ ತಕ್ಕ ಸೊಸೆಯೂ ಹೌದು. ಅವರದು ಅತ್ಯಂತ ತ್ಯಾಗಮಯ ಜೀವನ. ಮನೆತನ ಮುಂದೆ ಬರಲಿಕ್ಕೆ ಪತಿಗೆ ಯೋಗ್ಯ ಸಹಕಾರ ನೀಡಿದ್ದಾಳೆ, ದುಡಿದಿದ್ದಾಳೆ. ಪ್ರತಿಯೊಬ್ಬ ಪುರುಷನ ಸಾಧನೆಗಳ ಹಿಂದೆ ಒಬ್ಬ ಮಹಿಳೆ ಇದ್ದೇ ಇರುತ್ತಾಳೆಂಬ ಮಾತು ಇಲ್ಲಿಯೂ ಸತ್ಯ. ಇವರಿಬ್ಬರದೂ ನಿಜಕ್ಕೂ ಆದರ್ಶ ಗೃಹಸ್ಥಜೀವನವಾಗಿದೆ.

"ಪುತ್ರರಯ್ದಾಗಿ" ಎಂಬ ಮಾತಂತೂ ಇವರಿಗಾಗಿಯೇ ಹೇಳಿದಂತಿದೆ ! ಇವರಿಗೆ ಹೆಣ್ಣುಮಕ್ಕಳಿಲ್ಲ. ಇದ್ದವರು ಐವರೂ ಗಂಡುಮಕ್ಕಳು.

ಹಾಗೆಯೇ, ಮನೆಯ ಮೊದಲನೆಯ ಮಗನಾಗಿ ಹುಟ್ಟಿಬಂದವರು ಸರಸಾನಂದ. ಮುದ್ದುಮುದ್ದಾಗಿ ಬೆಳೆದು ಮಕ್ಕಳ ಚಿಂತೆಯನ್ನು ದೂರಗೊಳಿಸಿದ ಮಗು ತಂದೆ ಯಂತೆ ಎಲ್ಲದರಲ್ಲೂ ಮುಂದೇ ಇದ್ದಾರೆ. ಮುಂದರಿದು ದುಡಿವ ಮಗ, ಸರಸಾನಂದ ! ಕುಂದದಲೆ ಗೈಯ್ವ ಸೊಸೆ, ಗಂಗಕ್ಕ !! ಅಂತಲೇ ಅವರ ಮನೆಗೆ 'ಬಿಂದಿಗೆಯ ಪೊನ್ನು. !!! ಒಬ್ಬ ಗುರು "ಶಿಷ್ಯಾದಿಚ್ಛೇತ್ ಪರಾಜಯಂ !" ಎಂದಂತೆಯೇ. ತಂದೆ "ಪುತ್ರಾದಿಚ್ಛೇತ್ ಪರಾಜಯಂ" ಎಂಬುದೂ ಸತ್ಯ. ಇಷ್ಟಿದ್ದರೂ, ಸರಸಾನಂದರು ತಂದೆಯ ಮುಂದೆ ತಾವೆಂದೂ ತಮ್ಮತನ ಮೆರೆದವರಲ್ಲ, ಗೌರವ ಯುತ ಅಂತರವನ್ನು ಯಾವಾಗಲೂ ಕಾಯ್ದುಕೊಂಡೇ ಬಂದರು.

ಇಂದು ಶ್ರೀ ಗುರುಪುತ್ರಪ್ಪನವರ ಮನೆ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳುಗಳಿಂದ ತುಂಬಿತುಳುಕುತ್ತಿದೆ. ಮಕ್ಕಳಿದ್ದ ಮನೆ ಹಕ್ಕಿಗಳಿದ್ದ ವನದಂತೆ ಆಹ್ಲಾದಕರ: ಮಕ್ಕಳೆಂದರೆ ಸಂಸಾರವೃಕ್ಷಕ್ಕೆ ಅರಳಿದ ಮಂದಾರ ಪುಷ್ಪಗಳು. ಇಂತಹ ಆಹ್ಲಾದವನ್ನು ಹೃದಯಾರೆ ಸವಿಯುವ ಮಹದ್ಭಾಗ್ಯ ಅವರದು. ಇಂತಹ ಈ ಕೌಟುಂಬಿಕ ವಾತ್ಸಲ್ಯದ ಕೇಂದ್ರಬಿಂದು ಅವರೇ, ನಿಜಕ್ಕೂ, ಶ್ರೀ ಗುರುಪುತ್ರಪ್ಪ ನವರು ತಮ್ಮ ತುಂಬಿದ ತೊಡೆಯ ಮೇಲೆ ಮೊಮ್ಮಕ್ಕಳನ್ನು ಆಡಿಸುವ ಆ ಮನ ಮೋಹಕದೃಶ್ಯ ಅವರು ಕುಟುಂಬ ವತ್ಸಲರೆಂಬ ಮಾತಿಗೆ ಬಲವಾದ ಸಾಕ್ಷಿಯಾಗಿ ಕಂಗೊಳಿಸುತ್ತದೆ. ಅವರ ಈ ಸುಂದರ ಸಂಸಾರದ ಚಿತ್ರ ಎಂದೆಂದೂ ಮಾಸದಂತೆ ಹಚ್ಚ-ಹಸಿರಾಗಿ ತೊಳಗಿ, ಬೆಳಗಲಿ.

ಸ್ನೇಹದ ಪರಮಾದರ್ಶ : "ಒಳ್ಳೆಯ ಜೀವನಕ್ಕಿಂತ ಒಳ್ಳೆಯ ತತ್ವವನರಿಯೆ ನಯ್ಯಾ: ಒಳ್ಳೆಯ ನಡತೆಗಿಂತ ಒಳ್ಳೆಯ ಮತವನರಿಯೆನಯ್ಯಾ: ಒಳ್ಳೆಯ ನುಡಿಗಿಂತ ಒಳ್ಳೆಯ ಹಿತವನರಿಯೆನಯ್ಯಾ-!" ಶರಣ ಗುರುಪುತ್ರಪ್ಪನವರ ಉದಾತ್ತಜೀವನದಲ್ಲಿ, ಉತ್ಕೃಷ್ಟ ನಡತೆಯಲ್ಲಿ, ಉತ್ತಮ ಮಾತುಗಳಲ್ಲಿ ಎಲ್ಲಾ ತತ್ವ, ಎಲ್ಲಾ ಮತ, ಎಲ್ಲಾ ಹಿತಗಳು ಅಡಕವಾಗಿವೆ. ಅಂತಲೇ ಅವರ ಸುತ್ತಲೂ ಬೆಲ್ಲಕ್ಕೆ ಇರುವೆಗಳು ಮುತ್ತಿರು

ವಂತೆ ಅನೇಕ ಸ್ನೇಹಿತರು ಮುತ್ತಿದ್ದಾರೆ. ಅವರನ್ನು ಗೆಳೆಯನಾಗಿ ಪಡೆದವರೆಲ್ಲರೂ ಧನ್ಯರು ! ಯಾಕೆಂದರೆ, ಇವರು ತಮ್ಮ ಮಿತ್ರರ ಕಷ್ಟ-ಸುಖಗಳಲ್ಲಿ, ಆಪತ್ತು-ಸಂಪತ್ತುಗಳಲ್ಲಿ ಸಮಭಾಗಿಗಳಾಗಿ ಅವರ ಬದುಕಿನಲ್ಲಿ ಸುಖ ಶಾಂತಿಗಳು ನೆಲೆಸುವಂತೆ ಮಾಡಿದ್ದಾರೆ. ಆಪತ್ತಿನಲ್ಲಿ ಆದವನೇ ನಿಜವಾದ ಮಿತ್ರ. "ಆಪತ್ಸುಮಿತ್ರಂ ಜಾನೀಯಾತ್ !", "A friend in need is a friend indeed !"— ಈ ಎಲ್ಲ ಮಾತುಗಳ ಮರ್ಮ ಇವರ ಸ್ನೇಹಿತರಿಗೆ ದಿನಬೆಳಗಾದರೆ ಅನುಭವಕ್ಕೆ ಬಂದ, ಬರುತ್ತಿರುವ ಮಾತಾಗಿದೆ. ಇಂತಹ ಗೆಳೆತನ ಬಹುಜನ್ಮಗಳ ಪುಣ್ಯರಾಶಿಯ ಪಕ್ವಫಲ, ದುರ್ಲಭವಾದುದರಲ್ಲಿಯೇ ದುರ್ಲಭವಾದುದು; ಇದು ಯಾರಿಗೆ ಸುಲಭವಾಗಿ ಸಿಕ್ಕಿದೆಯೋ ಅವರು ನಿಜಕ್ಕೂ ಕೃತಾರ್ಥರು.

"ಸಮಾನಶೀಲೇಷು ವ್ಯಸನೇಷು ಚ!" ಎನ್ನುವ ಹಾಗೆ ಸಮಾನರಲ್ಲಿ ಮಧುರ ಸ್ನೇಹವು ಬೆಳೆದು ಬರುತ್ತದೆ. "ಅಜಾತಶತ್ರು", "ಸರ್ವಸಂವಾದಿ" ಎಂಬ ವರ್ಣನೆ ಶ್ರೀ ಗುರುಪುತ್ರಪ್ಪನವರಿಗೆ ಸಲ್ಲುತ್ತದೆ. ಅಂತಲೇ ಅವರ ಮಿತ್ರರಲ್ಲಿ ಎಲ್ಲರೂ ಎಲ್ಲ ರೀತಿಯಲ್ಲಿಯೂ ಸಮಾನಶೀಲರೇ ಇರುವರೆಂದು ಹೇಳಲಿಕ್ಕೆ ಬರುವದಿಲ್ಲ. ಆದರೆ, ಇವರು ಮಾತ್ರ ಅವರೆಲ್ಲರೊಡನೆ ಒಂದೇ ಬಗೆಯಾಗಿ ನಡೆದುಕೊಳ್ಳುತ್ತಾರೆ. ಇದೇ ಅವರ ವ್ಯಕ್ತಿತ್ವದ ವೈಶಿಷ್ಟ್ಯ. "ಉತ್ಸವೇ ವ್ಯಸನೇ ಚೈವ ದುರ್ಭಿಕ್ಷೇ ಶತ್ರುನಿಗ್ರಹೇ । ರಾಜದ್ವಾರೇ ಸ್ಮಶಾನೇಚಯಃ ತಿಷ್ಠತಿ ಸಬಾಂಧವಃ ॥" ಇಂತಹ ನಿಜಬಾಂಧವರಾಗಿ ಅವರ ಸಮಸ್ತ ಕಾರ್ಯಗಳಲ್ಲಿಯೂ ಇವರು ಹೆಗಲುಗೊಟ್ಟು ನಿಂತು, ಸಕ್ರಿಯವಾಗಿ ಭಾಗವಹಿಸಿ ಅವು ಯಶಸ್ವಿಯಾಗುವಂತೆ ಶ್ರಮಿಸುತ್ತಾರೆ.

"ಒಳಿತನ್ನು ಮಾಡಿದವರಿಗೆ ಒಳಿತನ್ನು ಮಾಡುವವ ಮಾನವ: ಒಳಿತನ್ನು ಮಾಡದವರಿಗೂ ಒಳಿತನ್ನು ಮಾಡುವವ ಮಹಾಮಾನವ. ಕೆಡುಕನ್ನು ಮಾಡಿದವರಿಗೂ ಒಳಿತನ್ನು ಮಾಡುವವ ದೇವಮಾನವ ನೋಡಯ್ಯಾ !... ಪ್ರೀತಿಸಿದವರನ್ನು ಪ್ರೀತಿಸುವವ ಮಾನವ: ಪ್ರೀತಿಸದವರನ್ನೂ ಪ್ರೀತಿಸುವವ ಮಹಾಮಾನವ: ದ್ವೇಷಿಸುವವರನ್ನು ಪ್ರೀತಿಸುವವ ದೇವಮಾನವ ನೋಡಯ್ಯಾ !..." ಎಂಬೀ ವಚನದಲ್ಲಿ ವರ್ಣಿತವಾದ ಮೂರು ಹಂತಗಳಲ್ಲಿಯ ಮಾನವತೆ-ಮಾನವೀಯತೆಗಳೂ ಶರಣ ಶ್ರೀ ಗುರುಪುತ್ರಪ್ಪನವರಲ್ಲಿ ಸಹಜವಾಗಿ, ಅಕೃತಕವಾಗಿ ಹೆಣೆದುಕೊಂಡು ಬಂದಿವೆ. ಅದ್ದರಿಂದ, ಅವರಿಗೆ ಯಾರೂ ಶತ್ರುಗಳಾಗಿರಲಾರರು: ಮತ್ತೆ ಅವರ ಸಂಪರ್ಕದಲ್ಲಿ ಬಂದವರು ಯಾರೂ ಮಿತ್ರರಾಗದೆ ಉಳಿಯರು. ಅವರು ಎಲ್ಲರನ್ನೂ ಏಕಪ್ರಕಾರವಾಗಿ ಪ್ರೀತಿಸುತ್ತಾರೆ; ಎಲ್ಲರಿಗೂ ಸಮಾನವಾಗಿಯೇ ಒಳಿತನ್ನೆಸಗುತ್ತಾರೆ.

ಶ್ರೀ ಗುರುಪುತ್ರಪ್ಪನವರ ಮಿತ್ರವೃಂದದಲ್ಲಿ ಶ್ರೀ ಬಸವಣ್ಣನವರು ಲಕಮನಹಳ್ಳಿ, ಶ್ರೀ ಕೂಡಲಗಿಮಠರು, ಶ್ರೀ ಮಲ್ಲನಗೌಡರು ಮೊದಲಾದ ಸಮವಯಸ್ಸಿನ

ಗೆಳೆಯರಿರುವಂತೆಯೇ, ಶ್ರೀ ಈರಣ್ಣ ವಾಣಿ, ಶ್ರೀ ಸೀಮಿಕೇರಿಮಠರು ಮೊದಲಾದ ಕಿರಿಯ ವಯಸ್ಸಿನ ಸ್ನೇಹಿತರೂ ಉಂಟು. ಅವರೆಲ್ಲರೂ ಇವರ ಬಗೆಗೆ ಬಹಳಷ್ಟು ಆದರಾಭಿಮಾನಗಳನ್ನು ಇರಿಸಿಕೊಂಡವರು. ಯಾಕಂದರೆ, ಇವರು ಈ ಎಲ್ಲ ಮಿತ್ರ ರೊಡನೆ ಏಕಪ್ರಕಾರವಾಗಿ ನಡೆದುಕೊಳ್ಳುವದಲ್ಲದೆ, ಅವರು ತಮಗಿಂತಲೂ ಬಹಳೇ ಶ್ರೇಷ್ಠರೆಂಬಂತೆ ಸದ್ಭಾವನೆಯನ್ನಿರಿಸಿಕೊಂಡು ಅವರೊಡನೆ ಅತ್ಯಂತ ಗೌರವದಿಂದ ನಡೆದುಕೊಳ್ಳುತ್ತಾರೆ. ಅಂತಲೇ ಇವರ ಗೆಳೆತನ ಬಹು ಗಟ್ಟಿಯಾದ ಬುನಾದಿಯ ಮೇಲೆ ಕಟ್ಟಿದ ಮಹಾಸೌಧದಂತೆ ಸುಭದ್ರ, ಸುಮಧುರ, ಸುಂದರ.

ಶ್ರೀ ಗುರುಪುತ್ರಪ್ಪನವರು ತಮ್ಮ ಸ್ನೇಹಿತರ ಮನೆಗಳಲ್ಲಿ ಯಾವುದೇ ಕಾರ್ಯ ಜರುಗುತ್ತಿದ್ದರೆ, ಅದು ತಮ್ಮ ಮನೆಯ ಕಾರ್ಯವೆಂದೇ ಭಾವಿಸಿ, ತಾವು ಸ್ವತಃ ನಿಂತು ಅದರ ಉಸ್ತುವಾರಿಯನ್ನು ನೋಡಿಕೊಂಡ ಅನೇಕ ಪ್ರಸಂಗಗಳು ನನಗೆ ಗೊತ್ತಿವೆ. ಹೀಗೆ, ತಮ್ಮ ಉದ್ಯೋಗ-ವ್ಯವಹಾರಗಳನ್ನೂ ಲಕ್ಷಿಸದೆ, ಆ ಕಾರ್ಯದ ಸಂಪೂರ್ಣ ಯಶಸ್ಸಿಗೆ ಹಗಲಿರುಳೆನ್ನದೆ ಪರಿಶ್ರಮ ಮಾಡುವುದೂ ಅಲ್ಲದೆ, ಪ್ರಸಂಗ ಬಿದ್ದಾಗ ತಮ್ಮ ಕಿಸೆಯಿಂದಲೇ ಸಾವಿರಾರು ರೂಪಾಯಿಗಳನ್ನು ಯಾರಿಗೂ ಹೇಳ ದೆಯೇ ಖರ್ಚು ಮಾಡಿದ್ದೂ ಉಂಟು! ಅವುಗಳ ವಿವರಗಳು ಇಲ್ಲಿ ಸಾಧ್ಯವಿಲ್ಲದ್ದ ರಿಂದ ನಾನು ಆ ಕೆಲಸಕ್ಕೆ ಕೈ ಹಾಕುವದಿಲ್ಲ. ಒಟ್ಟಾರೆ, ಅವರದು ಸ್ನೇಹದ ಪರಮಾ ವರ್ಷವಾಗಿದೆ. ಅವರ ಸ್ನೇಹಿತರೆಲ್ಲರೂ "ಬಾಳು ಗೆಳೆಯ, ಬೆಳಗು, ನೀನೆಮಗೆಲ್ಲಾ ಹರುಷ! ಬೀಳು ಮನಸಿಲ್ಲ, ನೀನೆಮಗದಕೆ ನಿಜ ಪರುಷ! ಬಾಳು ಬಿದ್ದಂಗಳದಿ ನಿನ್ನ ನಗೆ ಬೆಳದಿಂಗಳ ವರ್ಷ! ಗೆಳೆಯ(ರ) ಬಳಗಕೆ ನಿನ್ನ ನಡೆ-ನುಡಿ ಬಹು ಸರಸ!!" ಎಂದು ಅವರನ್ನು ಹಾಡಿ ಹರಸುತ್ತಿದ್ದಾರೆ. ಅದರ ದ್ಯೋತಕವಾಗಿ ಅವರ ಅಮೃತ ಮಹೋತ್ಸವವನ್ನು ಆನಂದವಾಗಿ ಆಚರಿಸಿ, ತಮ್ಮ ಪಾಲಿನ ಕರ್ತವ್ಯವನ್ನು, ಅಲ್ಪವಾ ದರೂ ಆಗಲಿ, ಮಾಡಿದ ತೃಪ್ತಿಯನ್ನು ಪಡೆದು ಕೃತಕೃತ್ಯರಾಗುತ್ತಿದ್ದಾರೆ. ಎಳೆಯ ರಾದ ನಾವೂ ಅವರ ಗೆಳೆಯರ ಬಳಗದ ಈ ಹರಕೆಯಲ್ಲಿ, ಹಾರೈಕೆಯಲ್ಲಿ ನಮ್ಮದೂ ದನಿಗೂಡಿಸಿ ಧನ್ಯರಾಗೋಣ.

ದ್ವಂದ್ವಗಳಲ್ಲಿ ಸಮಭಾವಿ : ದುಃಖಗಳ ಚಕ್ರ ಮಾನವಜೀವನದಲ್ಲಿ ಸ್ವಾಭಾವಿಕವಾದುದು. ಕರ್ಮಚಕ್ರ, ಧರ್ಮಚಕ್ರ, ಕಾಲಚಕ್ರ, ಭವಚಕ್ರ ಎಂದು ಮುಂತಾಗಿ ಭಿನ್ನ ಭಿನ್ನ ಸಂದರ್ಭಗಳಲ್ಲಿ ಭಿನ್ನ-ಭಿನ್ನವಾಗಿ ಗುರುತಿಸಲಾಗುತ್ತಿರುವ ಈ ದ್ವಂದ್ವಗಳ ಚಕ್ರ ನಿರಂತರವಾಗಿ ತಿರುಗುತ್ತಿರುತ್ತದೆ. ಆದ್ದರಿಂದ ಸುಖ ಬಂದಾಗ ಹಿಗ್ಗುವದಾಗಲಿ, ದುಃಖ ಬಂದಾಗ ಕುಗ್ಗುವದಾಗಲೀ ನಿಜವಾಗಿಯೂ ಸರಿಯಾದುದಲ್ಲ. "ದುಃಖೇಷು ಅನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।" ಇದು ವಿವೇಕಪ್ರಜ್ಞೆ ಯನ್ನು ಸದಾ ಜಾಗೃತವಿರಿಸಿಕೊಂಡವನ ನಿಜ ಸ್ಥಿತಿ. ಶರಣ ಗುರುಪುತ್ರಪ್ಪನವರೂ ಸಹ ಯಾವುದರಿಂದಲೂ ವಿಚಲಿತರಾಗದೆ, ಹಿಗ್ಗು-ಕುಗ್ಗುಗಳಿಗೆ ತಮ್ಮ ಜೀವನದಲ್ಲಿ

ಅವಕಾಶ ಕೊಡದೆ ಬದುಕಿನ ಆಹ್ವಾನಗಳನ್ನು ಸಮಚಿತ್ತರಾಗಿ ಎದುರಿಸುತ್ತ ಬಂದಿದ್ದಾರೆ. ಅವರು ದ್ವಂದ್ವಮಯ ಪ್ರಸಂಗಗಳಲ್ಲೆಲ್ಲಾ ಸಮಭಾವಿಯಾಗಿ ವರ್ತಿಸಿದ್ದಾರೆ; ಬಂದುದನ್ನು ಬಂದಂತೆ ಬರಮಾಡಿಕೊಂಡಿದ್ದಾರೆ. ನಿಜಕ್ಕೂ, ಅವರಲ್ಲಿ ವಿವೇಕಪ್ರಜ್ಞೆ ಯಾವಾಗಲೂ ಎಚ್ಚರವಾಗಿರುತ್ತದೆ. ಅವರ ಲೌಕಿಕ ಅಭ್ಯುದಯ ಅಭಿವೃದ್ಧಿಗಳ ಹಿಂದೆ ಈ ಮಾನಸಿಕ ಸ್ಥಿತಿಯ ಬೆಂಬಲವಿದೆ. ಅವರು ನಿರ್ವಿಕಾರವಾಗಿ, ನೇರವಾಗಿ, ನಿರ್ಭಯವಾಗಿ ತಮ್ಮ ಜೀವನದಲ್ಲಿ ಬಂದ ಸಮಸ್ತ ಸಮಸ್ಯೆಗಳನ್ನು ಸಮರ್ಥವಾದ ರೀತಿಯಲ್ಲಿ ಎದುರಿಸುತ್ತ ಬಂದಿದ್ದಾರೆ. ಅವರೆಂದೂ ನಿರಾಶೆಗೆ ಆಸ್ಪದ ಕೊಟ್ಟವರಲ್ಲ.

ಶರಣ ಗುರುಪುತ್ರಪ್ಪನವರು ವಿವೇಕವನ್ನೇ ತಮ್ಮ ಜೀವನ ನೌಕೆಯ ಚುಕ್ಕಾಣಿಯನ್ನಾಗಿ ಮಾಡಿಕೊಂಡವರು. "ಕಷ್ಟ-ಸುಖಗಳು ಬರಲು ತಗ್ಗುಬ್ಬಬೇಡ । ಅಸ್ಥಿರವು ಇವು ಸತ್ಯ, ಸಮತೆಗೆಡಬೇಡ ॥" ಎಂಬ ನೈಜವಾದ ನಿಲುವು ಅವರದು. "ತಾಪವನ್ನು ತಾಳಿಕೊಳ್ಳುವುದೇ ತಪ: ಗುರಿಯನ್ನು ನೆನೆದುಕೊಳ್ಳುವುದೇ ಜಪ: ಸಹನತೆಯನ್ನು ಕಳೆದುಕೊಳ್ಳದಿರುವುದೇ ಸಮತೆ: ಸಮತೆಯ ಸ್ಥಿರೀಕರಣವೇ ಸಮಾಧಿ. ಆಗು-ಹೋಗುಗಳಿಂದ ಬೇರಾಗದಿರುವುದೇ ಯೋಗ!" ಇದು ಅವರ ಸಂಸಾರ ಯೋಗದ ನಿಜವಾದ ಸ್ವರೂಪ : ಇವರಂತೆಯೇ ಎಲ್ಲರೂ ಸಂಸಾರಯೋಗದ ಸಿದ್ಧಿ-ಸಾಧನೆಗಳನ್ನು ಗಳಿಸಿಕೊಂಡರೆ, ಬೇರೆ ಬೇರೆ ಯೋಗಗಳಲ್ಲಿ ಬಳಲಿ, ಬೆಂದು ಬೆಂಡಾಗುವ ಬೇಡಾದ ಯೋಗವೇ ಬರುವದಿಲ್ಲ. ಇಂತಹ ಪೂರ್ಣಸಿದ್ಧಿ ಅವರಿಗೆ ಪ್ರಾಪ್ತವಾದದ್ದೇ ಅವರಲ್ಲಿ ಅಳವಟ್ಟ ಈ ದ್ವಂದ್ವಗಳಲ್ಲಿಯ ಸಮಚಿತ್ತತ್ವ ಎಂಬ ಮಹಾನ್ ಗುಣದಿಂದ. "ಕುಗ್ಗನ್ನ ಹೃದಯದ ಹಿಗ್ಗಿಸಿರಯ್ಯ ಹೆಚ್ಚಿನ ಹಿಗ್ಗಿಗಾಗಿ! ಕುಗ್ಗನ್ನ ಬಗೆಯ ಹೊಲವ ಹರಗಿ ಬಿತ್ತಿರಯ್ಯ ಹೊಸ ಸುಗ್ಗಿಗಾಗಿ !!" ಎಂಬುದೇ ಅವರ ಬಾಳಿಗೊಂದು ನಂಬಿಕೆಯಾಯಿತು. "ಕುಗ್ಗಿನಿಂದ ಸಹನಶಕ್ತಿಯ ವಿಕಾಸ, ಸಹನಶಕ್ತಿಯ ವಿಕಾಸದಿಂದ ಶೀಲ-ಪ್ರಕಾಶ, ಶೀಲಪ್ರಕಾಶದಿಂದ ಸದ್ಭಾಗ್ಯವಿಲಾಸ, ಅಭ್ಯುದಯ-ನಿಃಶ್ರೇಯಸ !" ಎಂಬುದೇ ಅವರ ತಿಳಿವಳಿಕೆಯಾಯಿತು. "ಕುಗ್ಗಿನ ಮೊಗ್ಗೆಯಲ್ಲಿ ಹಿಗ್ಗಿನ ಪರಿಮಳವ ಪಡೆವ ಛಲ ನನ್ನದಾಗಿರಲಯ್ಯ !" ಎಂಬುದೇ ಅವರ ಅಂತರಂಗದಾಳದಿಂದ ಹೊರಹೊಮ್ಮಿದ ಪ್ರಾರ್ಥನೆಯಾಯಿತು.

ಶ್ರೀ ಗುರುಪುತ್ರಪ್ಪನವರು ಗಟ್ಟಿಗರು, ಛಲಗಾರರು, ವಿವೇಕಶಾಲಿಗಳು; ನಿರ್ಭೀತರು, ಸಮಚಿತ್ತರು. ದುಃಖಕ್ಕೆ, ನಿರಾಶೆಗೆ, ಹಾನಿಗೆ, ಅಪಕೀರ್ತಿಗೆ, ತೆಗಳಿಕೆಗೆ, ನಿಂದೆಗೆ ಅಂಜಿ-ಅಳುಕಿ, ಹೆದರಿ-ಬೆದರಿ ಹೌಹಾರಿದವರಲ್ಲ; ಭಯ-ಭೀತರಾಗಿ ಬವಣೆಗೊಂಡವರಲ್ಲ ! ಅವರು ತಮ್ಮ ಸಮಚಿತ್ತತೆಯ ಕುಲುಮೆಯಲ್ಲಿ ಇವುಗಳನ್ನೆಲ್ಲಾ ಕಾಸಿ ಸೋಸಿ ದುಃಖವನ್ನೆ ಸುಖವನ್ನಾಗಿ, ನಿರಾಶೆಯನ್ನೆ ಆಶೆಯನ್ನಾಗಿ ಹಾನಿಯನ್ನೆ ಲಾಭವನ್ನಾಗಿ, ಅಪಕೀರ್ತಿಯನ್ನೆ ಕೀರ್ತಿಯನ್ನಾಗಿ, ತೆಗಳಿಕೆ

ಯನ್ನ ಪೊಗಳಿಕೆಯನ್ನಾಗಿ, ಹಾಗೆಯೆ, ನಿಂದೆಯನ್ನೆ ಸ್ತುತಿಯನ್ನಾಗಿ ಮಾರ್ಪಡಿಸಿಕೊಂಡು ತಮ್ಮ ಬದುಕನ್ನು ಬಂಗಾರವಾಗಿಸಿಕೊಂಡವರಾಗಿದ್ದಾರೆ. ಅವರ ಸಮಚಿತ್ತತೆಗೆ ಉದಾಹರಣೆಯಾಗಿ ಇಲ್ಲಿ ಒಂದೇ ಒಂದು ಘಟನೆಯನ್ನು ನಾನು ಸ್ಮರಿಸಿಕೊಳ್ಳಬಯಸುತ್ತೇನೆ. ಹತ್ತಾರು ವರ್ಷಗಳ ಹಿಂದೊಮ್ಮೆ ಯಲುವಿಗಿಯ ಹತ್ತಿರ ಸಂಭವಿಸಿದ ಭಯಂಕರ ರೈಲು ದುರಂತದ ಸಂಗತಿ ಸರ್ವವಿದಿತ. ದುರಂತಕ್ಕೀಡಾದ ಡಬ್ಬಿಯ ಹಿಂದಿನ ಡಬ್ಬಿಯಲ್ಲಿಯೇ ಇವರಿದ್ದರು. ಹಿರಿಯರಾದ ಪೂಜ್ಯ ಡಾ. ಆರ್.ಸಿ. ಹಿರೇಮಠರೂ ಅದೇ ಡಬ್ಬಿಯಲ್ಲಿದ್ದರಂತೆ. ಆಗ ಶರಣ ಗುರುಪುತ್ರಪ್ಪನವರು ತೋರಿದ ಚಿತ್ತಸ್ಥೈರ್ಯ ಹಾಗೂ ಸಾಂದರ್ಭಿಕ ಪ್ರಜ್ಞೆ (**Presence of mind**) ಗಳು ಅತುಲವಾಗಿದ್ದವು. ಆಗ ಅವರು ತಮ್ಮ ಕಡೆಗೆ ಗಮನಕೊಡದೆ, ಹಾಗೆಯೇ, ಭಯ-ಕಂಪನಗಳಿಗೆ ಒಳಗಾಗದೆ, ಕೂಡಲೆ ಆಕ್ರಂದನ ಗೈಯುತ್ತಿದ್ದ ಆರ್ತರ ನೆರವಿಗೆ ಧಾವಿಸಿದರು. ಇದೆಲ್ಲವೂ ಇಂದು ನಮಗೆ ಒಂದು ರೋಮಾಂಚನಕಾರಿಯಾದ ಘಟನೆಯಾಗಿ ಗೋಚರಿಸುತ್ತದೆ !

ಒಟ್ಟಿನಲ್ಲಿ, ಶರಣ ಶ್ರೀ ಗುರುಪುತ್ರಪ್ಪನವರು ಯಾವ ಬಗೆಯ ದ್ವಂದ್ವಗಳಲ್ಲೂ ತಮ್ಮ ಚಿತ್ತದ ಸಮತೋಲತೆಯನ್ನು ಕಳೆದುಕೊಂಡವರಲ್ಲ. ಸಾಗರದ ಹೆದ್ದೆರೆಗಳ ಮುಂದೆ ಬಂಡೆಗಲ್ಲಾಗಿ ಬಾಳಿದವರು. ಬಿರುಸಾಗಿ ಬೀಸುವ ಭಯಂಕರ ಬಿರುಗಾಳಿಯ ಆರ್ಭಟೆಯ ಎದುರು ಎಳೆಹುಲ್ಲಾಗಿ ಬಾಗಿದವರು. ಬದುಕಿನ ಬಯಲಿನಲ್ಲಿ ತೇಲುತ್ತಿದ್ದ ಕಾರ್ಮೋಡಗಳಿಂದ ತೂರಿಬಂದ ಗುಡುಗು-ಮಿಂಚುಗಳ ಮುಂದೆ ಕರಮುಗಿದು, ಶಿರಬಾಗಿ ನಿಂತವರು. ಅವರಿಗೆ ಇಂತಹ ಅಪರೂಪದ ತಾಳ್ಮೆ, ವಿವೇಕ ಬಲ, ಸಮತ್ವಬುದ್ಧಿಗಳು ಅವರು ತಮ್ಮ ಜೀವನದ ತುಂಬೆಲ್ಲಾ ಬೆಳೆಸಿಕೊಂಡು ಬಂದಿರುವ ಧಾರ್ಮಿಕಪ್ರಜ್ಞೆ, ದೈವೀಭಕ್ತಿಗಳಿಂದ ಪ್ರಾಪ್ತವಾಗಿವೆಯೆಂದು ಹೇಳಬಹುದು.

ಉಪಸಂಹಾರ : ಬೆಳಕಿನ ಕಿರಣಗಳ ಬಾಲಲೀಲೆಗಳಲ್ಲಿ ಪ್ರಾರಂಭವಾದ ಶರಣ ಶ್ರೀ ಗುರುಪುತ್ರಪ್ಪನವರ ತುಂಬುಜೀವನ ಇಂದು ಪ್ರಫುಲ್ಲಿತ ಪ್ರಕಾಶದಲ್ಲಿ ಪ್ರಶಾಂತವಾಗಿ ಬೆಳಗುತ್ತಿದೆ. ಅಮೃತಮಹೋತ್ಸವದ ಅಭ್ಯುದಯಕ್ಕೆ ಅರ್ಹವಾದ ಭವ್ಯ ಬದುಕು ಅವರದಾಗಿದೆ. ಅವರು ಜೀವನದುದ್ದಕ್ಕೂ ಬದುಕಿದ, ಬದುಕುತ್ತಿರುವ ಬಾಳಿನ ರೀತಿ-ನೀತಿಗಳನ್ನು ಡಿ. ವ್ಹಿ. ಜಿ. ಯವರ ಮಾತಿನಲ್ಲಿ ಹೀಗೆ ಹೇಳಬಹುದು :

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ-ಸಕ್ಕರೆಯಾಗು ದೀನ-ದುರ್ಬಲರಿಂಗೆ ।
ಎಲ್ಲರೊಳಗೊಂದಾಗು-ಮಂಕುತಿಮ್ಮ ॥

ನಿಜಕ್ಕೂ, ಅವರ ವಿನಯ, ವಾತ್ಸಲ್ಯ, ಚಿತ್ತಸ್ಥೈರ್ಯ, ಔದಾರ್ಯ, ಪ್ರೇಮಳ ಸ್ವಭಾವ, ಮೃದು–ಮಧುರವಾಣಿ-ಇವೆಲ್ಲವೂ ಅವರ ಆಕರ್ಷಕವಾದ ವ್ಯಕ್ತಿತ್ವದಲ್ಲಿ ಅಕೃತಕವಾಗಿ ಹೆಣೆದುಕೊಂಡು ಬಂದಿವೆ. ಸಭಾರಂಜಕರಾದ ಶ್ರೀ ಹುಕ್ಕೇರಿ ಬಾಳಪ್ಪ ನವರು ಇವರನ್ನು "ಸಮಾಜರತ್ನ ಗುರುಪುತ್ರಪ್ಪನವರು" ಎಂದೇ ತಮ್ಮ ಪತ್ರಗಳ ಲ್ಲೆಲ್ಲಾ ಸಂಬೋಧಿಸಿದ್ದಾರೆ. ಅವರ ವಿನೋದಗಾರ ಮಿತ್ರರಾಗಿದ್ದ ಶ್ರೀ ಮಲ್ಲನಗೌಡರು ಇವರನ್ನು "ಆಧುನಿಕ ಜಕಣಾಚಾರಿ" ಎಂದು ಒಕ್ಕೇ ಅನಂದದಿಂದ ಕರೆಯುದುಂಟು. ಹೀಗೆ, ಇನ್ನೂ ಬಹು ದೊಡ್ಡಸಂಖ್ಯೆಯಲ್ಲಿರುವ ಸ್ನೇಹಿತರು, ಅಭಿಮಾನಿಗಳು, ಆಪ್ತರು, ಸತ್ಪುರುಷರು, ಇವರನ್ನು ಬಹು ಗೌರವದಿಂದ "ಯಜಮಾನ" ರೆಂದೂ, "ಅಣ್ಣಾ ಅವರು" ಎಂದೂ ಸಂಬೋಧಿಸಿ ಸಂತೋಷಿಸುತ್ತಿದ್ದಾರೆ.

ಶ್ರೀ ಗುರುಪುತ್ರಪ್ಪನವರಿಗೆ ನಾವೇನು ಹೇಳಬಹುದು ?—ಅವರದು ದಣಿ ವಿಲ್ಲದ ದುಡಿಮೆ, ಸೋಲರಿಯದ ನಿಷ್ಠೆ, ಕಷ್ಟ-ಕಠಿಣತೆಗಳಿಗೆ ಹಿಂಜರಿಯದ ಕಾಯಕ ತತ್ಪರತೆ, ಅವಿಶ್ರಾಂತ, ಉದ್ಯೋಗಶೀಲತೆ! ಅವರಿಗೆ "ಏನು ಪಡೆದೆವೆಂಬುದು ಮುಖ್ಯವಲ್ಲ, ಹೇಗೆ ದುಡಿದೆವೆಂಬುದು ಮುಖ್ಯ ! ಏನು ನುಡಿದೆವೆಂಬುದು ಮುಖ್ಯ ವಲ್ಲ, ಹೇಗೆ ನಡೆದೆವೆಂಬುದು ಮುಖ್ಯ ! ಏನು ಗಳಿಸಿದೆವೆಂಬುದು ಮುಖ್ಯವಲ್ಲ. ಹೇಗೆ ಬಳಸಿದೆವೆಂಬುದು ಮುಖ್ಯ !" ಇದು, ಅವರ ಹೃದಯಾಂತರಾಳದಿಂದ ಅಪ್ರಯತ್ನವಾಗಿ ಹೊರಹೊಮ್ಮುವ ಪ್ರಾರ್ಥನೆಯ ತಿರುಳು ಇದಾಗಿದೆ ಎಂದು ಹೇಳಬಹುದು.

ಕೊನೆಯದಾಗಿ, ಇಂತಹ ಅಮೃತಮಹೋತ್ಸವ, ಅಭಿನಂದನ ಗ್ರಂಥ— ಇವೆಲ್ಲವೂ ದೊಡ್ಡದೊಡ್ಡ ಮಠಾಧಿಪತಿಗಳ, ಮಹಾಸ್ವಾಮಿಗಳವರ, ಮಂತ್ರಿಮಾನ್ಯರ ಮಹಾಕವಿಗಳ, ಪ್ರಖ್ಯಾತಿ ಪಡೆದ ಸಾಹಿತಿಗಳ, ಪ್ರಸಿದ್ಧರಾದ ಶಿಕ್ಷಣತಜ್ಞರ ವಿಷಯ ವಾಗಿ ನಡೆದುಕೊಂಡು ಬರುತ್ತಿವೆ. ಇದರಲ್ಲಿ ಯಾವುದೂ ಆಶ್ಚರ್ಯವಾಗಿ ಕಾಣುವ ದಿಲ್ಲ. ಆದರೆ, ಇಂದು ಇದೆಲ್ಲಾ ನಡೆದಿರುವುದು ವಾಣಿಜ್ಯರಂಗದಲ್ಲಿ ಹೆಸರು ಗಳಿಸಿದ ಒಬ್ಬ ವ್ಯಾಪಾರಿಗಳಾದ ಶ್ರೀ ಗುರುಪುತ್ರಪ್ಪನವರ ಸಲುವಾಗಿ ! ಇದು ಒಂದರ್ಥದಲ್ಲಿ ಆಶ್ಚರ್ಯದ ಸಂಗತಿಯಾಗಿರುವಂತೆಯೇ, ಎಲ್ಲಾ ಅರ್ಥದಲ್ಲೂ ಆನಂದದ, ಅಭಿ ಮಾನದ ಸಂಗತಿಯೂ ಆಗಿದೆ. ನಿಜಕ್ಕೂ ಶ್ರೀ ಗುರುಪುತ್ರಪ್ಪನವರು ಶರಣ ಜೀವನ ವನ್ನು ಬದುಕುತ್ತಿರುವ ಮಹಾಮಾನವರಾಗಿದ್ದಾರೆ. ಅವರು ನಮ್ಮ ಸಮಾಜದ ಒಂದು ದೊಡ್ಡ ಆಸ್ತಿಯಾಗಿದ್ದಾರೆ. ಯುವಜನಾಂಗಕ್ಕೆ ಅವರ ಬದುಕು ಭವ ಆದರ್ಶವೊಂದನ್ನು ಒದಗಿಸುವಂತಹದಾಗಿದೆ. "ಬಾಳು ನೀ ಶತವರುಷ । ಅದೆ ನಮಗೆ ನಿಜ ಹರುಷ !" ಎಂದು ಹಾರೈಸುವೆ. ಇನ್ನು, ಮಂಗನ ಅಮೃತಮಹೋ ತ್ಸವದಾಚರಣೆಯಲ್ಲಿ ಭಾಗವಹಿಸುತ್ತಿರುವ ಶತಾಯುಷಿ ಶ್ರೀಮತಿ ಗಂಗಮ್ಮತಾಯಿ

ನಿಜವಾಗಿಯೂ ಧನ್ಯಳು. ತಾಯಿಯ ಶತಮಾನೋತ್ಸವದಲ್ಲಿ ತನ್ನ ಅಮೃತಮಹೋತ್ಸವವನ್ನು ಅಭಿಮಾನಿಗಳಿಂದ, ಆಪ್ತರಿಂದ ಆಚರಿಸಿಕೊಳ್ಳುತ್ತಿರುವ ಮಗ ಶ್ರೀ ಗುರುಪುತ್ರಪ್ಪನವರು ಕೃತಾರ್ಥರು: ಇದನ್ನೆಲ್ಲಾ ಕಣ್ಣಾರೆ ಕಂಡು, ಮನವಾರೆ ಸವಿದು, ಹೃದಯಾರೆ ಆನಂದಿಸುವ ಅವರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಆಪ್ತರು, ಬಂಧು ಬಳಗದವರಾದ ನಾವೆಲ್ಲರೂ ಕೃತಕೃತ್ಯರು !!

●

ಮನುಜರ ಮನ್ನಣೆಯೆಂದು ಮಸೆದಲಗಿನ ಗಾಯ

ಸಿದ್ಧರಾಮನವಚನ



ನಾ ಕಂಡಂತೆ ನಮ್ಮ ತಂದೆ

● **ಸರಸಾನಂದ ದೊಡವಾಡ**

ಒಳ್ಳೆಯ ತಂದೆಗೆ ಒಳ್ಳೆಯ ಪುತ್ರನಾಗುವುದು ಯಾವುದೋ ಜನ್ಮಜನ್ಮಾಂತರದ ಪುಣ್ಯಫಲ. ಜಂಗಮಪ್ರೇಮಿ, ಲಿಂಗದ ನೇಮಿ, ಶರಣಧರ್ಮ ಹಿರಿಮೆ ಸಾಧಿಸಿದವರು ನನ್ನ ಹೆತ್ತವರು. ಶರಣರು ಜಗತ್ತಿಗೆ ಕೊಟ್ಟ ಕಾಯಕವನ್ನೇ ತಪಸ್ಸನ್ನಾಗಿಸಿ ಪಾಲಿಸಿ ಕೊಂಡು ಬಂದವರು. ಬದುಕಿನಲ್ಲಿ ಸಿಹಿ ಕಹಿಗಳನ್ನುಂಡು ಮಾಗಿ ಪಕ್ವಫಲವಾಗಿ ನಿಂತವರು. ಸತ್ಯಶುದ್ಧ ಕಾಯಕದಿಂದ ತನು ಮನ ಧನಗಳನ್ನು ಗುರು ಲಿಂಗ ಜಂಗಮಕ್ಕೆ ಸಮರ್ಪಿಸಿದವರು.

ತಂದೆಯ ಗುಣವರಿತು ಮುಂದಡಿಯಿಡುವ ತಾಯಿ ಶಾಂಭವಿದೇವಿ ಶರಣ ಸಂಪ್ರದಾಯದಿಂದಲೇ ಬಂದವಳು. ನಮ್ಮ ತಂದೆಯವರ ನಿತ್ಯದ ದಿನಚರಿ ತಾಯಿಯವರ ಬದುಕಿಗೆ ಒಂದು ಹೊಸಕಟ್ಟಡನ್ನು ಹಾಕಿ ಕೊಟ್ಟಿದೆಯೆನ್ನಬೇಕು. ಈ ದಂಪತಿಗಳ ಉದರದಲ್ಲಿ ಹುಟ್ಟಿದವರು ನಾವು ಐವರು ಗಂಡುಮಕ್ಕಳು. ಅದರಲ್ಲಿ ನಾನು ಹಿರಿಮಗನಾದ್ದರಿಂದ ಜವಾಬ್ದಾರಿ ನನ್ನ ಜೊತೆಗೆ ಹುಟ್ಟಿ ಬಂದಿತ್ತು. ಓದಬೇಕೆಂಬ ತುಂಬು ಹವ್ಯಾಸದಲ್ಲಿದ್ದರೂ ತಂದೆಯವರ ಉದ್ಯೋಗದ ಒತ್ತಡವನ್ನು ಕಣ್ಣಾರೆ ಕಂಡ ನಾನು ವಾಣಿಜ್ಯಕ್ಷೇತ್ರದಲ್ಲಿ ಏಕಾಂಗಿಯಾಗಿ ನಿಂತ ತಂದೆಯವರಿಗೆ ನೆರವಾಗಬೇಕಾಯಿತು. ಇಂದು ಆ ಕ್ಷೇತ್ರದಲ್ಲಿ ನಾನು ಬೆಳೆದು ಹೆಮ್ಮರವಾಗಿ ನಿಂತಿದ್ದರೂ ನಮ್ಮ ತಂದೆಯವರಿಗೆ ಹಿರಿಯ ಮಗುವಿನ ಶಿಕ್ಷಣಕ್ಕೆ ಅಡ್ಡಿ ಮಾಡಿದೆನೆಂಬ ಅಳುಕು ಬಿಟ್ಟಿಲ್ಲ. ಅವರ ವ್ಯಾಪಾರದ ಗರಡಿಯಲ್ಲಿಯೇ ಪಳಗಿದ ನಾನು ಅಂದು ನನ್ನಿಚ್ಛೆಯಂತೆ ಓದನ್ನು ಮುಂದುವರೆಸಿದ್ದರೆ ಇಂದು ಈ ಹಂತಕ್ಕೆ ಏರುತ್ತಿರಲಿಲ್ಲವೆಂದೆನಿಸುತ್ತದೆ. ಇಂದು ಅವರ ಸಾನಿಧ್ಯ, ವ್ಯಾಪಾರದ ಕ್ಷೇತ್ರದಲ್ಲಿ ನನಗೆ ಅಚಲ ನಂಬಿಕೆಯನ್ನು ತಂದುಕೊಟ್ಟಿದೆ.

ಮಕ್ಕಳನ್ನೂ ಮೊಮ್ಮಕ್ಕಳನ್ನೂ ವಾತ್ಸಲ್ಯದಿಂದ ಕಾಣುವ ಅವರು ಯಾರ ತಪ್ಪುಗಳನ್ನೂ ನೋವಾಗದಂತೆ ತಿದ್ದುವದರಲ್ಲಿ ಜಾಣರು. ಬದುಕಿನಲ್ಲಿ ಎಂಥ ಸಮಸ್ಯೆಗಳು ಬಂದರೂ ಧೈರ್ಯದಿಂದ ಎದುರಿಸುವುದು ಇವರ ಜನ್ಮಜಾತ ಗುಣ. ಮನೆತನಕ್ಕೆ ಸಂಬಂಧಪಟ್ಟ ಸಮಸ್ಯೆಗಳಷ್ಟೇ ಅಲ್ಲ, ಬಂಧುಬಾಂಧವರು, ವ್ಯಾಪಾರಿ ಬಾಂಧವರು, ರೈತಬಾಂಧವರು ಅವರು ಯಾರೇ ಇರಲಿ ಎಲ್ಲರ ಸಮಸ್ಯೆಗಳನ್ನು ಸಮಾಧಾನದಿಂದ ಸಮಚಿತ್ತದಿಂದ ಬಿಡಿಸುವ ಇವರ ಮನೋಧೈರ್ಯ ಮೆಚ್ಚು ವಂತಹದು. ಸಮಸ್ಯೆಗಳನ್ನು ಬಿಡಿಸುವಲ್ಲಿ ಇವರು ಪರಿಣಿತರಾದಂತೆ ಅಷ್ಟೇ ಸ್ನೇಹ ಜೀವಿಗಳು. ತಮ್ಮ ಕರ್ತವ್ಯ ಕಾಯಕಕ್ಕೆ ಜೀವನದಲ್ಲಿ ಎಂದಿಗೂ ಕುಂದು ತಂದು ಕೊಂಡವರಲ್ಲ.

ತಂದೆಯವರದು ತುಂಬ ಪರಿಶ್ರಮದ ಸ್ವಭಾವ. ಆ ಪ್ರಯತ್ನದ ಫಲ ದಿಂದಲೇ ಇಂದು ವ್ಯಾಪಾರೋದ್ಯಮ ಬೆಳೆದು ನಮ್ಮೆಲ್ಲರಿಗೂ ಆಶ್ರಯತಾಣವೆನಿಸಿದೆ. ಈ ಇಳಿವಯಸ್ಸಿನಲ್ಲಿಯೂ ಅವರದು ಮೀರಿದ ಉತ್ಸಾಹ; ಸಮಾಜಸೇವೆಯಲ್ಲಿನ ಲವಲವಿಕೆ ಎಂಥವರನ್ನೂ ಆಶ್ಚರ್ಯಗೊಳಿಸುವಂಥದು.

ಇವರು ಮೂಢನಂಬಿಕೆಗಳಿಗೆ ಬೆಲೆ ಕೊಟ್ಟವರಲ್ಲ. ಮನೆಗೆ ಬಂದ ಅತಿಥಿಗಳು ಯಾರೇ ಇರಲಿ ಉಪಚಾರ, ಅವರ ಹಿತಚಿಂತನೆ ಮಾಡದೆ ಇವರ ಮನಕ್ಕೆ ನೆಮ್ಮದಿ ಎಂಬುದಿಲ್ಲ. ಆಧ್ಯಾತ್ಮ ಚಿಂತನೆ, ಧ್ಯಾನ, ಪೂಜೆ ಇವು ನಮ್ಮ ಅಜ್ಜ ಗುರುಪಾದಪ್ಪ ನವರಿಂದ ಬಂದ ಸಂಸ್ಕೃತಿ. ೧೦೫ ವರ್ಷಗಳ ತುಂಬು ಬಾಳನ್ನು ಶರಣೆಯಾಗಿ ಬಾಳಿದ ಅಜ್ಜಿ ಗಂಗಮ್ಮನವರೂ ಸಹ ಅಜ್ಜನಿಗೆ ತಕ್ಕ ಧರ್ಮಪತ್ನಿ. ಒಬ್ಬನೇ ಮಗ ನೆಂದು ನಮ್ಮ ತಂದೆಯವರನ್ನು ಮುದ್ದಿನಿಂದ ಬೆಳೆಸಿದರೂ ಅಷ್ಟೆ ಎಚ್ಚರಿಕೆಯಿಂದ ವಿದ್ಯೆ ಸಂಸ್ಕೃತಿಯನ್ನು ಒದಗಿಸಿಕೊಟ್ಟವರು. ನಮ್ಮ ಅಜ್ಜ ತಂದೆಯವರಿಗೆ ಹಾಕಿ ಕೊಟ್ಟ ಕಟ್ಟುನಿಟ್ಟಿನ ಪಾಠ ನೆನಪಾದಾಗ ನಮ್ಮ ಅಜ್ಜನವರ ಫೋಟೋ ನೋಡುತ್ತೇನೆ. ಈಗಲೂ ಫೋಟೋದಲ್ಲಿರುವ ಅಜ್ಜನ ಭಾವಚಿತ್ರ 'ಶ್ರೀಗುರು ವಚನೋಪದೇಶವ ನಾಲಿಸಿದಾಗಳೆಹುದು ನರರಿಗೆ ಮುಕುತಿ' ಎಂಬ ವಚನ ಪಠಿಸಿದಂತೆ ಭಾಸವಾಗುತ್ತದೆ.

ತಂದೆಯವರು ತುಂಬು ಬಳಗದಲ್ಲಿ ಹುಟ್ಟಿದ ಪುಣ್ಯವಂತರು. ಅವರ ಐದು ಜನ ಅಕ್ಕ ತಂಗಿಯರದು ಅಣ್ಣನ ಮೇಲೆ ಹೆಚ್ಚಿನ ಅಕ್ಕರತೆ. ವಯೋವೃದ್ಧೆ, ಶರಣೆ ತಾಯಿಯ ಮೇಲೆ ಅಪಾರ ಭಕ್ತಿ. ದಿನದ ಅರ್ಧಗಂಟೆಯಾದರೂ ತಾಯಿಯ ಯೋಗಕ್ಷೇಮ ಮಾತುಕತೆ ನಡೆಯಲೇಬೇಕು. ನೂರಐದು ವರ್ಷಗಳ ತುಂಬ ಬಾಳನ್ನು ಕಳೆದ ಗಂಗಮ್ಮನವರ ತುಲಾಭಾರ ಪೂಜ್ಯ ಮಹಾಂತಪ್ಪಗಳ ಆಶೀರ್ವಾದದಿಂದ ಬಳಗದಿಂದೊಡಗೂಡಿದ ಆಗುತ್ತಿರುವುದು ನಮಗೆ ಸಂತೋಷ ತಂದಿದೆ.


ನಮ್ಮ ತಾಯಿ ಶಾಂಭವಿದೇವಿಯವರು ಬಹಳ ಚಟುವಟಿಕೆಯ ಸ್ವಭಾವದವರು. ಅವರ ಮನೆಕೆಲಸವೂ ತುಂಬ ಅಚ್ಚುಕಟ್ಟು. ನಮ್ಮ ಮನೆಯಲ್ಲಿ ನವರಾತ್ರಿಯಲ್ಲಿ ಪರಂಪರಾಗತವಾಗಿ ಬಂದ 'ದೇವೀ ಪಾರಾಯಣ' ನಡೆಯುವ ಪದ್ಧತಿ ಬಹಳ ದಿನಗಳ ಹಿಂದಿನಿಂದ ಬಂದಿದೆ. ಆಗ ನಮ್ಮೆಲ್ಲರಿಗೂ ಒಂದು ಸಂಭ್ರಮವೇ. ಮನೆ ತುಂಬ ಉತ್ಸಾಹ, ಭಕ್ತಿಯ ವಾತಾವರಣ. ಆಗ ನಮ್ಮ ತಂದೆಯವರು ದೇವೀಪುರಾಣದ ಪಾರಾಯಣದಲ್ಲಿ ಅವಳ ಚರಿತ್ರೆಯನ್ನು ದೇಹ ರಚನೆಗೆ ಹೋಲಿಸಿ ತತ್ವಾರ್ಥವನ್ನು ಬಿಚ್ಚಿ ಹೇಳುತ್ತಾರೆ. ಅವರ ದೈವೀಭಕ್ತಿ ಕೃಪೆಯಿಂದ ನಾವು ಅನೇಕ ಸಂಕಷ್ಟಗಳನ್ನು ದಾಟಿ ಬಂದಿದ್ದೇವೆ.

ಯಾವುದೇ ಕೆಲಸ ಮಾಡಿದರೂ ಮನಸಿಟ್ಟು ಮಾಡಬೇಕೆಂಬುದು ಅವರ ಅಭಿಪ್ರಾಯ. ಪ್ರತಿದಿನ ನಾವು ಏನು ಮಾಡುತ್ತಿದ್ದೇವೆ ಎಂಬುದರ ಕಡೆಗೆ ಲಕ್ಷವಿರಬೇಕು. ಹೀಗೆ ತಂದೆಯವರ ರೀತಿ ನೀತಿ, ನಡೆ ನುಡಿಗಳು ಪ್ರತಿಯೊಂದೂ ನನ್ನನ್ನು ಜಾಗೃತಗೊಳಿಸಿವೆ.

ತಂದೆಯವರು ಇಲ್ಲಿಗೆ ಎಪ್ಪತ್ತೇಳು ವಸಂತಗಳನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ನಾನು ಮತ್ತು ಅವರ ಅಭಿಮಾನಿಗಳು ಅವರ ಅಮೃತ ಮಹೋತ್ಸವದ ವಿಷಯ ಎತ್ತಿದಾಗ ಅವರು 'ನಾನೇನು ಅಂಥ ದೊಡ್ಡ ಮನುಷ್ಯ ಅಲ್ಲ, ನನಗ್ಯಾಕೆ ಇದೆಲ್ಲ' ಎಂದು ನಿರಾಕರಿಸುದುದನ್ನು ನೋಡಿದರೆ ಅವರೆಂತಹ ನಿರಾಡಂಬರ ವ್ಯಕ್ತಿ ಎಂದು ಅನಿಸದೇ ಇರಲಿಲ್ಲ.

೧೯೮೮ ಜನೇವರಿ ೨೯ ರಂದು ಜರುಗುವ ಅವರ ಅಮೃತ ಮಹೋತ್ಸವ, ಶತಾಯುಷಿ ಅಜ್ಜಿಯ ತುಲಾಭಾರ, ನಮ್ಮ ಹೊಸಮನೆ ಸರಸಗಂಗಾದ ಗೃಹಪ್ರವೇಶ ಈ ಮುಪ್ಪುರಿ ಶುಭ ಸಮಾರಂಭ ನಮ್ಮೆಲ್ಲರ ಮನಸ್ಸಿಗೆ ಸಂತೋಷಧಾರೆಯನ್ನೆರೆದಿವೆ. ಇಂಥ ಶುಭ ಸಮಾರಂಭಗಳು ನಮ್ಮ ಮನೆಯಲ್ಲಿ ಮೇಲಿಂದ ಮೇಲೆ ಬರಲಿ, ಮನೆದೈವ ಮಹದೇಶ್ವರ ಸ್ವಾಮಿಯ ಅನಂತಕೃಪೆ ಶುಭಾಶೀರ್ವಾದ ನಮಗೆಂದಿಗೂ ಇರಲಿ ಎಂದು ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ನಾವು ಕಂಡಂತೆ ನಮ್ಮ ಮಾವ



● **ಶ್ರೀಮತಿ ಗಂಗಾದೇವಿ ಸ. ದೊಡವಾಡ**

ಸಿಂಹದ ಹೊಟ್ಟೆಯಲ್ಲಿ ಸಿಂಹದ ಮರಿಯೇ ಹುಟ್ಟಿದಂತೆ, ಶಿವಶರಣರ ಉದರದಲ್ಲಿ ಶಿವಶರಣರೇ ಜನಿಸಿಬರುತ್ತಾರೆ ಎಂಬುದು ಗೃಹಿಕೆ. ಸೂರ್ಯ ಪೂರ್ವಕ್ಕೆ ಹುಟ್ಟುವದು ಎಷ್ಟು ಸತ್ಯವೋ, ಅಷ್ಟೇ ಸತ್ಯವೆನಿಸಿದವರು ನಮ್ಮ ಪೂಜ್ಯ ಮಾವ ಶ್ರೀ ಗುರುಪುತ್ರಪ್ಪನವರು ದೊಡವಾಡ. ಅಂಗೈಯಲ್ಲಿಟ್ಟು ಪೂಜಿಸುವ ಲಿಂಗಯ್ಯನಂತೆ ನಿರ್ಲಿಪ್ತ ಸ್ವಭಾವದ ನಮ್ಮ ಮಾವ 'ಅರಿವೇ ಗುರು'ವೆಂಬುದನ್ನು ಸಾಧಿಸಿ ಸಿದ್ಧಿಪಡೆದ ಮಹಾನುಭಾವರು. ಅವರದು ಒಂದರ್ಥದಲ್ಲಿ ಅರಿವಿಗೆ ಅರಿವು, ಎಚ್ಚರಿಕೆಗೆ ಎಚ್ಚರಿಕೆ, ಮೈತುಂಬ ಕಣ್ಣು. ಮನತುಂಬ ಸದ್ವಿಚಾರ, ಭಾವತುಂಬ ಕರುಣಾರಸ, ಹೆಜ್ಜೆ ಇಟ್ಟರೆ ಕೀಟಕಕ್ಕೂ ನೋವಾದೀತೆಂಬ ಅನುಕಂಪ.

ಇಂಥ ಪುಣ್ಯವಂತರ ಮನೆಗೆ ಹಿರಿಯಸೊಸೆಯಾಗಿ ಹೊಸ್ತಿಲದ ಮೇಲೆ ಇರಿಸಿದ ತುಂಬಿದ ಸೇರನ್ನು ನೂಕಿ ಒಳಗೆ ಬಂದವಳು ನಾನು. ಅಂದು ದುಗಿಸಿಬಂದ ಸೇರಿನ ದವಸಧಾನ್ಯ ಮನೆತುಂಬ ಚಲ್ಲುವರಿದಂತೆ ಇಂದು ಸೌಭಾಗ್ಯ, ಸೌಜನ್ಯ, ಪ್ರಾಮಾಣಿಕತೆ ಮನೆಯ ಒಳಗೂ ಹೊರಗೂ ಎದ್ದುಕಾಣುತ್ತಿದೆ. ಚಿಕ್ಕವಯಸ್ಸಿನಲ್ಲಿಯೇ ನಾನವರ ಮನೆಗೆ ಸೊಸೆಯಾಗಿ ಬಂದೆ. ಅಂದಿನಿಂದ ಇಂದಿನವರೆಗೂ ಅವರ ನಡೆನುಡಿ, ಆಚಾರ ವಿಚಾರಗಳು ನನ್ನ ಮೇಲೆ ಬೀರಿದ ಪ್ರಭಾವ, ಕೆತ್ತಿ ತೆಗೆದರೂ ಬಿಟ್ಟು ಹೋಗದ ಅಚ್ಚೆ ಪ್ರಿಂಟು. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ' ಎಂಬುದು ಬಲ್ಲವರ ನುಡಿ. ಅದರ ಸವಿಯನ್ನು ಸುಖವನ್ನು ಮನಗಂಡಿದ್ದು ನಾನು ಈ ಮನೆಯ ಸೊಸೆಯಾದ ನಂತರವೇ.

ಆಗಸದ ಕೆಂಪು ಸೂರ್ಯನಿನ್ನೂ ತಾಯಿಯ ಮಡಿಲಲ್ಲಿರುವಾಗ, ಸುಮಗಳ ಸುವಾಸನೆ ವಾಯುವಿನಲ್ಲಿ ಬೆರೆಯುದ ಮುನ್ನ, ನಮ್ಮ ಮನೆಯ ಪೂಜಾಗೃಹದಿಂದ ಗಂಟೆಯನಿನಾದ, ಸುವಾಸಿತ ಬತ್ತಿಯ ಸುಮಧುರ ಪರಿಮಳ, ಕಿವಿದೆರೆದು ಕೇಳಿದರೆ

ಪೂಜೆ, ಪ್ರಾರ್ಥನೆ, ದೇವಿಪುರಾಣ, ಹೊತ್ತಾರೆ ಎದ್ದು ಕಣ್ದೆರೆವ ಮಾನವನಿಗೆ ಇದಕ್ಕಿಂತ ಪುಣ್ಯಪರಿಸರ ಇನ್ನೇನು ಬೇಕು. ಸಾದಾತನ, ಸಾತ್ವಿಕತೆ ಯಾರೂ ಕೊಡಿಸುವದಲ್ಲ, ಯಾರೂ ರೂಪಿಸಿ ಕೊಡುವದಲ್ಲ. ಇದು ಜನ್ಮಜನ್ಮಾಂತರ ಸಂಸ್ಕಾರದ ಫಲ, ಶರಣಸಾಹಿತ್ಯದ ಸತತ ಅಧ್ಯಯನದ ಫಲ, ಪ್ರಾಮಾಣಿಕ ಬದುಕಿನ ಸತ್ಫಲ.

ನಡೆ ನುಡಿ ಎರಡೂ ಒಂದೇ ಆದ ಶರಣಜೀವನ ಇವರದು. ಶರಣರು ನಡೆದ ಧರೆ ಪಾವನವೆಂಬಂತೆ, ಪಾವನ ಧರೆಯ ಮೇಲೆಯೆ ಕಾಲಿಟ್ಟವರು ನಮ್ಮ ಮಾವನವರು. ಕೆಟ್ಟ ಕೆಲಸ ಮಾಡುವದೊತ್ತಟ್ಟಿಗಿರಲಿ, ಕೆಟ್ಟ ಭಾವನೆ ಮನದಲ್ಲಿ ಸುಳಿಯದು. ಇವರಿಗಿದ್ದಿರುವ ಪರಿಸರದ ಪ್ರಜ್ಞೆ ಅಪಾರ. ಆಪತ್ತಿನಲ್ಲಿದ್ದವರಿಗೆ ಇವರದು ಕೈತುಂಬ ಮನತುಂಬ ಸಹಾಯ.

ಇವರು ನಿತ್ಯವ್ಯವಹಾರಕ್ಕೆ ಕುಳಿತುಕೊಳ್ಳುವ ಸ್ಥಳಗಳು ಸುತ್ತುವರಿದ ಮಹಾತ್ಮರ ಭಾವಚಿತ್ರಗಳಿಂದ, ನಮ್ಮ ಪಾಲಿಗೆ ಕಾಶಿ ಪ್ರಯಾಗಗಳೆನಿಸಿವೆ. ಶಂಭುಲಿಂಗ ಕೃಪಾ, ಮೃತ್ಯುಂಜಯ ರೈಸ್ ಮಿಲ್, ದೊಡವಾಡ ಉದ್ಯಮ ಕೇಂದ್ರ ಇವನ್ನು ಸಂದರ್ಶಿಸಿದಾಗ ನಿಜಕ್ಕೂ ಆನಂದ. ಶಂಭುಲಿಂಗ ದಲಾಲಿ ಅಂಗಡಿಯ ಒಳಗೆ ಸುತ್ತಲೂ ಹಾಕಿಕೊಂಡಿರುವ ಶಿವಶರಣರ ಭಾವಚಿತ್ರಗಳು. ಮಧ್ಯದಲ್ಲಿ ಕುಳಿತಿರುವ ಶಿವಯೋಗಿ, ಎದುರಿಗಿರುವ ಜಗಜ್ಯೋತಿ ಬಸವಣ್ಣನವರು, ಹೆತ್ತ ತಂದೆ ಗುರುಪಾದಪ್ಪನವರು, ಚಳ್ಳಗುರ್ಕಿ ಮಹಾಸ್ವಾಮಿಗಳು, ಮುರಗೋಡ ಮಹಾಂತ ಶಿವಯೋಗಿಗಳು, ಮುರುಘಾಮಠದ ಪೂಜ್ಯ ಮಹಾಂತಪ್ಪಗಳು, ಮೃತ್ಯುಂಜಯಪ್ಪಗಳ ತುಂಬು ಮುಖಮಂಡಲದ ಭಾವಚಿತ್ರಗಳು ಅವರ ಭಕ್ತಿಪೂರಿತ ಭಾವನೆಗೆ ಪ್ರೇರಣೆಯನ್ನೀಯುವಂತಿವೆ. ದೊಡವಾಡ ರೋಡ ಲೈನ್ಸ್ ಮೇಲೆ ಶ್ರೀ ಮದಘ ಶಿವಯೋಗಿಗಳ ಭಾವಚಿತ್ರ ಇವರ ಸದಭಿರುಚಿಗೆ, ಭಕ್ತಿಸೇವೆಗೆ ಪೂರಕವೆನಿಸಿವೆ. ನಮ್ಮ ಮಾವನವರು ದೇವರಲ್ಲಿ ಇರಿಸಿದ ಅಪಾರ ನಂಬಿಕೆ ನಮ್ಮನ್ನು ಎಷ್ಟೋ ಆಘಾತಗಳಿಂದ ದಾಟಿಸಿದೆ. ಒಂದು ಸಲ ನಮ್ಮ ಲಾರಿ ಅಪಘಾತಕ್ಕೀಡಾದಾಗ ಲಾ ಹೇಳಲು ಹೆಸರಿಲ್ಲದಷ್ಟು ನುಚ್ಚು ನೂರಾಯಿತು. ಆದರೆ ಒಳಗಿದ್ದ ಯಾರ ಕೂದಲೂ ಕೊಂಕಾಗದುದೂ, ಲಾರಿಯ ಮೇಲಿದ್ದ ಶಿವಯೋಗಿಗಳ ಭಾವಚಿತ್ರ ಸುರಕ್ಷಿತವಾಗಿದ್ದುದು ನಮ್ಮ ನಂಬಿಕೆಗೆ ಸಾಕ್ಷಿಯೆನಿಸಿದೆ. ಅದರಲ್ಲಿದ್ದ ಡ್ರೈವರು ದೇವರ ಪುಣ ದಿಂದ ಸುರಕ್ಷಿತವಾಗಿ ಇದ್ದುದು ಇದಕ್ಕೆ ಇನ್ನೊಂದು ಸಾಕ್ಷಿ.

ಇವರ ಮನೋಸ್ಥೈರ್ಯ, ಕಠಿಣ ಸಮಸ್ಯೆಗಳನ್ನು ಬಿಡಿಸುವ ಜಾಣ್ಮೆ, ತಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಸ್ವಾವಲಂಬನೆಯ ನೀತಿ, ಚಿಕ್ಕಮಕ್ಕಳಲ್ಲಿರು ವಾತ್ಸಲ್ಯ, ಕಾರ್ಯತತ್ಪರತೆ ಕಂಡಾಗ ನನಗೆ ಮಹಾತ್ಮಾ ಗಾಂಧೀಜಿಯವ ನೆನಪು ಬರುತ್ತದೆ. ಎಂಥ ಆಪತ್ತಿನ ಸಂದರ್ಭದಲ್ಲಿಯೂ ಧೈರ್ಯಗೆಡದೆ ಕಾಯ ನಿರ್ವಹಿಸಬೇಕೆಂಬುದು ಇವರ ಉಪದೇಶ.

ಪ್ರತಿವರ್ಷದ ಉಳವಿ ಚೆನ್ನಬಸವೇಶ್ವರ ಜಾತ್ರಾಮಹೋತ್ಸವದಲ್ಲಿ ವಿಶೇಷ ಪೂಜಾ ಪುರಸ್ಕಾರಕ್ಕೆ ಸೇವೆಸಲ್ಲಿಸುವುದು ನಮ್ಮ ಮನೆತನದ ಪದ್ಧತಿ. ಮನೆ ಮಂದಿಯೆಲ್ಲ ಜಾತ್ರೆಗೆ ಹೋಗಿ ಭಕ್ತಿಯಿಂದ ಪೂಜೆ ಸಲ್ಲಿಸುವ ವಾಡಿಕೆ ಇಂದಿಗೂ ನಡೆದು ಬಂದಿದೆ. ಮನೆಯ ಮಕ್ಕಳಲ್ಲಿಯೂ ಇದೇ ಭಕ್ತಿಭಾವ, ವಿನಯತೆಯನ್ನು ಅವರು ರೂಢಿಗೆ ತಂದಿರುವರು.

ಮನೆತನದ ಆಧಾರಸ್ತಂಭವಾದ ಅವರು ಸಹನೆಯ ಸಮುದ್ರ. ಮನೆಯಲ್ಲಿ ಯಾರಿಂದಲಾದರೂ ತಿಳಿದೋ ತಿಳಿಯದೆಯೋ ತಪ್ಪು ಘಟಿಸಿದರೆ ಅದನ್ನು ತಿದ್ದಿ ತಿಳಿಸಿ ಮತ್ತೊಮ್ಮೆ ತಪ್ಪು ಮಾಡದಂತೆ ಎಚ್ಚರಿಕೆ ನೀಡುವುದು ನಮ್ಮ ಮಾವನವರ ಸ್ವಭಾವ. ಅದು ಅವರ ಬಹು ದೊಡ್ಡ ಗುಣ. ಅವರು ಅಪ್ಪಿ ತಪ್ಪಿ ಸಿಟ್ಟಿಗೆದ್ದರೆ ಅದೇ ನಮ್ಮ ಭಾಗ್ಯ. ಅಲ್ಲಿ ಏನಾದರೂ ತಪ್ಪು ಆಗಿರಲಿಕ್ಕೇ ಬೇಕು ಎಂಬುದಕ್ಕೆ ಸಾಕ್ಷಿ.

ವಿದ್ಯಾಪ್ರೇಮಿಗಳಾದ ಇವರು 'ಧನವ ಗಳಿಸಬೇಕೆಂಥಾದ್ದು ನರಜನರಿಗೆ ಕಾಣಿಸ ದಂಥಾದ್ದು' ಎನ್ನುವ ಭಾವನೆಯುವರು. ಓದಿನ ವಿದ್ಯೆಯೊಂದಿಗೆ ವ್ಯವಹಾರದ ವಿದ್ಯೆ ಯನ್ನು ಅಪಾರವಾಗಿ ಮಕ್ಕಳಿಗಿತ್ತಿರುವರು.

ಪೂಜ್ಯ ಅಜ್ಜ ಗುರುಪಾದಪ್ಪ, ತಂದೆಯಂತಿರುವ ಪೂಜ್ಯ ಮಾವ ಗುರುಪುತ್ರಪ್ಪ ನವರ ಸನ್ಮಾರ್ಗ ನಮಗೆ ದಾರಿದೀಪವಾಗಿದೆ. ಹಿರಿಯರಲ್ಲಿದ್ದ ಕಲ್ಯಾಣ ಗುಣ ನಮ್ಮ ವಂಶದ ಕುಡಿಗಳಲ್ಲಿ ಒಡಮೂಡಲಿ, ಮುರುಘಾಮಠಾಧೀಶನ ಕೃಪಾಕಟಾಕ್ಷ ನಿರಂತರ ವಾಗಿ ನಮ್ಮನ್ನು ರಕ್ಷಿಸಲಿ, ಮಾವನವರ ಶತಮಾನೋತ್ಸವ ಆಚರಿಸುವ ಭಾಗ್ಯ ನಮ್ಮದಾಗಲಿ.

●

ನೀವು ಹಸುಗೂಸಿನಂತಾಗದೆ ಸ್ವರ್ಗದಲ್ಲಿ ಕಾಲಿಡಲಾರಿರಿ.

ಬೈಬಲ್

ಆತ್ಮಾಭಿಮಾನಿ



● ಶ್ರೀಮತಿ ಕಮಲಾದೇವಿ ಸುದ್ದೈವ ದೊಡವಾಡ

ನಂಬಿದ ಶ್ರೀಗುರುವಿನ ಪಾದಕಮಲದಲ್ಲಿ ನಂಬಿಕೆಯನ್ನಿಟ್ಟು ಮುನ್ನಡೆಯುತ್ತಿರುವ ಪೂಜ್ಯರು ಶ್ರೀ ಗುರುಪುತ್ರಪ್ಪ ಮಾವನವರು. ಸುಖ ದುಃಖಗಳಿಗೆ ಹಿಗ್ಗದೆ, ಜಗ್ಗದೆ, ಮಿತ್ರ, ಶತ್ರುವಿನಲ್ಲೂ ಮಾತೃತ್ವ ಕಾಣುವ ಸಾಮರ್ಥ್ಯ ಅವರದು. ನಡೆ ನುಡಿಗಳಲ್ಲಿಯು ಪರಿಶುದ್ಧತೆ, ಉಟ್ಟ ಶುಭ್ರ ಬಟ್ಟೆಯಷ್ಟೇ ಶುಚಿ. ಬದುಕಿನಲ್ಲಿ ಒಂದೂ ಚಟವಿಲ್ಲದೆ, ಕಾಯಕಚಟಕ್ಕೆ ಅಂಟಿಕೊಂಡ ವ್ಯಕ್ತಿ. ಅರಿತುಕೊಂಡವರಿಗೆ ಪ್ರೇಮದ ಮೂರ್ತಿ, ಕರುಣೆಯ ಸಾಕಾರಶಕ್ತಿ, ಆತ್ಮಾಭಿಮಾನಿ, ನಿಜಗುಣ ತತ್ವಜ್ಞಾನಿ.

ಹೆತ್ತ ತಾಯಿಯ ಮೇಲಿರಿಸಿದ ಅಪಾರಭಕ್ತಿ, ಗುರುವಿನ ಪಾದಕಮಲದಲ್ಲಿ ನಿರ್ಮಲಭಕ್ತಿ, ನಡೆನುಡಿಗಳಲ್ಲಿ ಪರಿಶುದ್ಧತೆ ಇವರದು. ತಾವು ಕೈಕೊಂಡ ಕಾಯಕದಲ್ಲಿಯೇ ಅನುಪಮ ಶ್ರದ್ಧೆ ಇವರಿಗೆ. ಕಾಯಕ ಪ್ರಾಮಾಣಿಕವಾಗಿರಬೇಕು. ಶುದ್ಧ ಭಾವದಿಂದೊಡಗೂಡಿರಬೇಕು. ಅದರಿಂದ ಬರುವ ಪ್ರತಿಫಲ ಜೀವನ ನಿರ್ವಹಣೆಗೆ ಆಧಾರವಾಗಿರಬೇಕೇ ಹೊರತು ಸಂಪತ್ತಿನ ಸಂಗ್ರಹಣೆಯ ಸಾಧನವಾಗಿರಬಾರದು ಎಂಬುದು ನಮ್ಮ ಮಾವನವರು ನಂಬಿ ನಡೆದುಕೊಂಡು ಬಂದ ರೀತಿ ಇದನ್ನು ಅಕ್ಷರಶಃ ಪಾಲಿಸುತ್ತಿರುವ ಇಂಥ ಮಾವನವರನ್ನು ಪಡೆದ ನಾವೇ ಧನ್ಯರು.

ಮಾವನವರ ಜೀವನದಲ್ಲಿ ಜ್ಞಾನ ಹಾಗೂ ಪ್ರೇಮದ ಹೊಂದಾಣಿಕೆ ಇದೆ. ಪ್ರತಿಯೊಂದು ಗುಣವನ್ನು ತೂಗಿ ನೋಡುವ, ಅದಕ್ಕೆ ಸೂಕ್ತ ಬೆಲೆ ಕಟ್ಟುವ ಯೋಗ್ಯತೆ ಅವರಿಗಿದೆ. ಅವರು ಜೀವನದಲ್ಲಿ ಇರಿಸಿಕೊಂಡು ಬಂದ ಹಿರಿಯಗುಣ ಆತ್ಮಾಭಿಮಾನ. ಹಿಡಿದ ಕೆಲಸದಲ್ಲಿ ತನ್ಮಯತೆ ಬೇಕು: ದೃಢನಿಷ್ಠೆ, ಆತ್ಮವಿಶ್ವಾಸ ಇಟ್ಟು ದುಡಿಯಬೇಕೆಂಬುದು ಅವರು ಕಿರಿಯರಿಗೆ ಹೇಳಿಕೊಡುವ ಕಿವಿಮಾತು. ಇಂದು ಇವರು ಹಾಕಿಕೊಟ್ಟ ಉನ್ನತ ಮಾರ್ಗದರ್ಶನದಿಂದ ವ್ಯಾಪಾರಿಕ್ಷೇತ್ರದಲ್ಲಿ ಅನೇಕರು ಮುಂದೆ ಬಂದಿದ್ದಾರೆ. ದೀಪ ತಾನೊಂದು ಹೊತ್ತಿ ತನ್ನೊಂದಿಗೆ ಇತರ

ರನ್ನು ಹೊತ್ತಿಸುವಂತೆ ಇವರ ಜೀವನ. ಬೆಳಕಿಗೆ ಬೆಳಕು ಕೂಡಿದಾಗ ಮಹಾಬೆಳಕಾಗುವಂತೆ ಜ್ಞಾನಿಗಳ ಜೊತೆಗೆ ಒಡನಾಡಲು ಜ್ಞಾನಿಗಳು ಮಹಾಜ್ಞಾನಿಗಳೆನಿಸುವರು.

ಮಾತನಾಡುವ ಪ್ರತಿಯೊಂದು ಪದವನ್ನು ತೂಗಿ ನೋಡಿ ಮಾತಾಡುವುದು ಇವರ ಗುಣ. 'ಪದವಿಟ್ಟಳುಪದೊಂದಗ್ಗಳಿಕೆ' ಎಂಬ ಕುಮಾರವ್ಯಾಸನ ಮಾತಿನಂತೆ ಒಂದು ಸಲ ಬರೆದಿದ್ದನ್ನು ಅಳಿಸಿ, ಮತ್ತೊಮ್ಮೆ ಬರೆಯುವದಿಲ್ಲ. ಮಾತನಾಡಿದ ಮಾತನ್ನು ಇನ್ನೊಮ್ಮೆ ಮಾತನಾಡಿದರೆ ಅವರಿಗೆ ಬರುವ ಸಿಟ್ಟು ಅಷ್ಟಿಷ್ಟಲ್ಲ. ಒಂದೇ ಮಾತಿನಲ್ಲಿ ಅದೂ ಕಿರಿದರಲ್ಲಿ ಸಮರ್ಥವಾಗಿ ಹೇಳಿದರೆ ಅವರ ಮನಸ್ಸು ಹಿಗ್ಗಿ ಹೋಗುತ್ತದೆ. ಹೆಚ್ಚಿನ ಓದು, ತಾಳ್ಮೆ, ಜಾಣತನವನ್ನು ನಮ್ಮ ಮಾವನವರು ತುಂಬ ಮೆಚ್ಚಿಕೊಳ್ಳುತ್ತಾರೆ, ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುತ್ತಾರೆ.

ತಮ್ಮ ಮಕ್ಕಳಿಗೆ ಹೆಜ್ಜೆಹೆಜ್ಜೆಗೆ ಮಾರ್ಗದರ್ಶನ ಮಾಡುವಂತೆ ತಮ್ಮ ಮೊಮ್ಮಕ್ಕಳಿಗೂ ಸೂಕ್ತ ಮಾರ್ಗದರ್ಶನ ಅವರದು. ಮಕ್ಕಳಿಗೆ ಒಳ್ಳೆಯ ವ್ಯವಹಾರದೆಡೆ ಗಮನ ಸೆಳೆಯಲು, ಪ್ರಾಮಾಣಿಕ ಜೀವನ ನಡೆಸಲು ಪದೇ ಪದೇ ಉಪದೇಶಿಸುತ್ತಾರೆ. ತಮ್ಮ ನಿಲುಮೆಯಂತೆ ಅವರನ್ನು ತಿದ್ದುಪಡಿ ಮಾಡಲು ಸದಾ ಯತ್ನಿಸುತ್ತಿರುತ್ತಾರೆ.

ನಮ್ಮ ಮಾವನವರಿಗೆ ಮಾತೋಶ್ರೀ ಗಂಗಮ್ಮನವರ ಮೇಲೆ ಅಪಾರ ಭಕ್ತಿ. ಶತಾಯುಷಿ ತಾಯಿಯನ್ನು ಮುಂದಿರಿಸಿಕೊಂಡು ತಮ್ಮ ಅಮೃತಮಹೋತ್ಸವ, ತಾಯಿಯ ತುಲಾಭಾರ ನೋಡುವ, ಕಂಡು ಸಂತೋಷಿಸುವ ಪುಣ್ಯ ಎಷ್ಟು ಜನರ ಜೀವನದಲ್ಲಿ ಬರುವುದಕ್ಕೆ ಸಾಧ್ಯ. ಇತ್ತೀಚೆಗೆ ನಮ್ಮ ಮನೆಯಲ್ಲಿ ಹುಟ್ಟಿದ ಒಂದು ಶಿಶು ಮಾತೋಶ್ರೀ ಗಂಗಮ್ಮನವರಿಗೆ ೫ನೆಯ ತಲೆಮಾರಿನ ಮಗು. ಅಂದರೆ ಮರಿ ಮೊಮ್ಮಗಳ ಮಗ. ಇಷ್ಟು ತುಂಬು ಬದುಕನ್ನು ಪಡೆದ ನಮ್ಮ ಅಜ್ಜಿ ಗಂಗಮ್ಮ, ನಮ್ಮ ಮಾವನವರು ಧನ್ಯರಲ್ಲದೇ ಇನ್ನೇನು !

ತಂದೆ ತೋರಿದ ದಾರಿ, ತಾಯಿ ತಿಳಿಸಿದ ಮಾರ್ಗದಲ್ಲಿ ಮುಂದುವರೆದ ನಮ್ಮ ಮಾವನವರು ಅದರಂತೆ ಇನ್ನುಳಿದವರಿಗೂ ಸೂಕ್ತ ತಿಳುವಳಿಕೆ ನೀಡುತ್ತ ಬಂದಿದ್ದಾರೆ. ಮಾವನವರ ರೀತಿಯಂತೆ ಹೆತ್ತ ತಂದೆ ತಾಯಿಗಳನ್ನು ಮಮತೆಯಿಂದ ಕಾಪಾಡುವವರಿಗೆ ಅವರ ಆಶೀರ್ವಾದ ಸದಾ ಇದೆ. ದೊಡ್ಡಮಾಡ ಮನೆತನಕ್ಕೆ ತಂದೆಯೇ ಗುರು, ತಾಯಿಯೇ ಜಂಗಮ, ಮಾವನವರೇ ಭಕ್ತರು. ಇಂಥ ಮಹನೀಯರ ಅಮೃತಮಹೋತ್ಸವ ಯಶಸ್ವಿಯಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

●

ಉದ್ಯೋಗ ಶಿಲ್ಪಿ



● ಮನೋಹರ ದೊಡವಾಡ

ಅಜ್ಜ ತಾತಂದಿರ ಕಾಲದಿಂದಲೂ ನಮ್ಮದು ಶರಣ ಸಂಪ್ರದಾಯ, ಸುಸಂಸ್ಕೃತ ಮನೆತನ. ನಮ್ಮ ತಂದೆ, ಅಜ್ಜರು ಹಾಕಿಕೊಟ್ಟ ಮಾರ್ಗದಲ್ಲಿಯೆ ಮುಂದುವರೆದು ಬಂದವರು, ಸದಾಚಾರ ಸಂಪನ್ನರು, ದೇವಿ ಆರಾಧಕರು. ಗುರು ಲಿಂಗ ಜಂಗಮ ಪೂಜಾ ನಿರತರು, ಪರಮ ಕಾಯಕಯೋಗಿಗಳು.

ಮಿತಭಾಷಿ, ಆಡದೆ ಮಾಡುವ ಕರ್ತೃತ್ವಶಕ್ತಿ ಅವರ ಜನ್ಮಜಾತಗುಣ. ಸತ್ಯಶುದ್ಧ ಕಾಯಕ ಅವರ ಬದುಕಿನ ಮುಖ್ಯ ಗುರಿ. ನಾನು ಚಿಕ್ಕವನಿದ್ದಾಗಿನ ಕೆಲ ವಿಷಯಗಳು ನನಗಿನ್ನೂ ನೆನಪಿದೆ. ನಮ್ಮ ಅಜ್ಜ ಗುರುಪಾದಪ್ಪನವರು ಮಗನನ್ನು ಹತ್ತಿರ ಕರೆದು ಹತ್ತಾರು ಪ್ರಶ್ನೆಗಳನ್ನಿತ್ತು ಅವರನ್ನು ಚರ್ಚೆಗೆ ಎಳೆಯುತ್ತಿದ್ದರು. ಅಜ್ಜನವರ ಕ್ಲಿಷ್ಟವಾದ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಡುವ ನಮ್ಮ ತಂದೆಯ ಬುದ್ಧಿಮತ್ತೆಯನ್ನು ಕಂಡಾಗ ನಮ್ಮ ಅಜ್ಜನವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅಂದೇ ನಮ್ಮಜ್ಜ ತಿಳಿದುದು, ಈತ ನನ್ನ ಕನಸನ್ನು ನನಸು ಮಾಡುವ ಮಗನಾಗುವನೆಂಬುದು. ತಂದೆಯವರ ಉತ್ತಮ ಸ್ವಭಾವ ಕಂಡ ನಮ್ಮ ಅಜ್ಜ ನಗುನಗುತ್ತಲೇ ಶಿವಸಾಯುಜ್ಯ ಹೊಂದಿದರು. ಅಂದು ನಮ್ಮಜ್ಜ ಮಾಡಿದ ತುಂಬು ಆಶೀರ್ವಾದ ನಮ್ಮ ಅಪ್ಪನ ಪಾಲಿಗೆ ಸನ್ಮಾರ್ಗವೆನಿಸಿದೆ. ಕೈಕೊಂಡ ಸತ್ಯಶುದ್ಧ ಕಾಯಕ ಸಮಾಜದ ಬಗೆಗೆ ಅವರಿಗಿರುವ ಕಳಕಳಿ, ವ್ಯಾಪಾರಸ್ಥರ ಬಗ್ಗೆ ಅವರಿಗಿರುವ ಮಾತೃಪ್ರೇಮ ಇವೆಲ್ಲ ನಮ್ಮ ಅಜ್ಜ ಅವರಿಗೆ ಕೊಟ್ಟುಹೋದ ಪ್ರೀತಿಯ ಬಳುವಳಿ ಎನಿಸಿದೆ.

'ಮಾಡಿದೆನೆಂಬುದು ಮನದಲಿ ಹೊಳೆದರೆ ಏಡಿಸಿಕಾಡಿತ್ತು ಶಿವನ ಡಂಗುರ' ಎಂಬ ಬಸವವಾಣಿಯನ್ನು ನಂಬಿ ನಡೆದವರು ನಮ್ಮ ತಂದೆಯವರು. 'ಮಾಡಿದೆನೆಂಬ ಭಾವ' ಅವರ ಕನಸು ಮನಸ್ಸಿನಿಂದಲೂ ಬಹುದೂರ. ಸಾರ್ವಜನಿಕ ರಂಗಕ್ಕೆ ಅವರು ಮಾಡಿದ ಸೇವೆ ಅವರ ಎಡಗೈಗೂ ಗೊತ್ತಿರಲಿಕ್ಕಿಲ್ಲ. ನಾವು ಮಕ್ಕಳು ತಿಳಿದುಕೊಳ್ಳುವುದಂತೂ ದೂರದ ಮಾತು. 'ಪರರಿಗೆ ಒಳ್ಳೆಯದು ಬಯಸಿದ

ಒಳ್ಳೆಯದು ನಮಗೆ ಬರುತ್ತದೆ' ಎಂದು ನಂಬಿದವರಿವರು. ಅಂತೆಯೇ ನಡೆಯುವ ಮಾರ್ಗದಲ್ಲಿ ಎಷ್ಟೇ ತೊಂದರೆಗಳು ಬಂದರೂ ಮುಂದಿಟ್ಟ ಹೆಜ್ಜೆಯನ್ನು ಎಂದಿಗೂ ಹಿಂದಿಟ್ಟವರಲ್ಲ. ವಾಣಿಜ್ಯಕ್ಷೇತ್ರ ಅವರ ಪಾಲಿಗೆ ಶಿವಪೂಜೆ. ಅವರ ಪೂಜೆಯ ಪ್ರತಿಫಲಗಳೇ ಇಂದು ಅವರು ನಡೆಸಿಕೊಂಡು ಬರುತ್ತಿರುವ ಹತ್ತಾರು ಸಂಘ ಸಂಸ್ಥೆಗಳು. ತರ್ಕಶಾಸ್ತ್ರ, ಮನಶ್ಶಾಸ್ತ್ರ, ಧರ್ಮಶಾಸ್ತ್ರಗಳು ಅವರಿಗೆ ಕರತಲಾಮಲಕ ಅವರು ಅಷ್ಟೇ ಶಿಕ್ಷಣಪ್ರೇಮಿಗಳು, ವ್ಯಾಪಾರಿರಂಗದಲ್ಲಿ ಹಣ ಗಳಿಸುವವರೇ ಹೆಚ್ಚಾದ ಇಂದಿನ ದಿನಗಳಲ್ಲಿ ಜನಗಳಿಕೆಯೇ ನಮ್ಮ ಅಪ್ಪನ ಗಳಿಕೆ. ನಮಗೂ ಅವರು ಕಲಿಸಿದ ಪಾಠ ಇದೇ.

'ಸತ್ಯಂ ವಧ ಧರ್ಮಂ ಚರ', 'ಸತ್ಯಮೇವ ಜಯತೆ', 'ಕಾಯಕವೇ ಕೈಲಾಸ', 'ಪ್ರಾಮಾಣಿಕತೆಯೆ ಉದ್ಯೋಗದ ಸಕಲ ಸರ್ವಸ್ವವು', 'ಅರಿತು ಆಚರಿಸು', ವ್ಯಕ್ತಿಯ ಘನತೆಯು ರಾಷ್ಟ್ರಾಭಿಮಾನದಿಂದ ಹೆಚ್ಚುವುದು ಎಂಬ ಅವರ ಹಿತೋಪದೇಶಗಳು ನಮ್ಮ ಪಾಲಿಗೆ ನುಡಿಮುತ್ತಾಗಿವೆ.

ಮಕ್ಕಳಿಗೆ ಮೊಮ್ಮಕ್ಕಳಿಗೆ ನಮ್ಮ ತಂದೆಯವರು ಮಾಡಿದ ನಾಮಕರಣವೂ ಅಷ್ಟೇ ಮಹತ್ವದ್ದೆನಿಸಿದೆ. ಇಟ್ಟ ಹೆಸರು ವ್ಯಕ್ತಿಗೆ ಸೂಕ್ತವಾದಂತೆ ಹೆಸರಿಗೆ ತಕ್ಕ ರೀತಿಯಲ್ಲಿ ಮನುಷ್ಯ ಬದುಕಬೇಕೆಂಬುದು ನಮ್ಮ ತಂದೆಯವರ ವಿಚಾರ. ಇದು ನಮ್ಮ ಅಜ್ಜನವರ ಕೊಡುಗೆ. ಅವರವರ ಜಾತಕಫಲಗಳ ಮೇಲೆ ನಾಮಕರಣ ಮಾಡುವ ಪದ್ಧತಿ ನಮ್ಮ ಮನೆಯದು. ನಮ್ಮ ಹಿರಿಯಣ್ಣನಿಗೆ ನಮ್ಮ ಅಜ್ಜನವರು ಇಟ್ಟ ಹೆಸರು ಸರಸಾನಂದ. ಹೆಸರಿನ ರೀತಿಯಲ್ಲಿ ನಮ್ಮ ಅಣ್ಣ ಇಂದು ವಾಣಿಜ್ಯ ಕ್ಷೇತ್ರದಲ್ಲಿ ಸರಸ ಆನಂದನೇ, ಹೀಗೆ ನಮ್ಮ ತಂದೆಯವರು ಮನೆಯ ಮಕ್ಕಳಿಗೆ ಹಾಕಿಕೊಟ್ಟ ಮಾರ್ಗದರ್ಶನ ಉನ್ನತಮಟ್ಟದ್ದು, ಅದನ್ನು ನೆನಸಿಕೊಂಡಾಗ ನನಗೆ ಒಂದು ಶ್ಲೋಕ ನೆನಪಾಗುತ್ತದೆ.

ನರಸ್ಯಾಭರಣಂ ರೂಪಂ । ರೂಪಸ್ಯಾಭರಣಂ ಗುಣಃ ॥
ಗುಣಸ್ಯಾಭರಣಂ ಜ್ಞಾನಂ । ಜ್ಞಾನಸ್ಯಾಭರಣಂ ಕ್ಷಮಾಃ ॥

ಮನುಷ್ಯನಿಗೆ ರೂಪವೇ ಚಂದ, ರೂಪವುಳ್ಳ ಮನುಷ್ಯನಿಗೆ ಗುಣವೇ ಚಂದ. ಗುಣವುಳ್ಳ ಮನುಷ್ಯನಿಗೆ ಜ್ಞಾನವೇ ಚಂದ. ಜ್ಞಾನವುಳ್ಳ ಮನುಷ್ಯನಿಗೆ ಕ್ಷಮೆಯೆ ಚಂದ. ನಮ್ಮ ತಂದೆಯವರು ಈ ಎಲ್ಲ ಗುಣಗಳುಳ್ಳ ಅಪರೂಪದ ವ್ಯಕ್ತಿ.

ನಮ್ಮ ಉದ್ದಿಮೆಯ ಪರಿಳಿತಗಳ ಸಂದರ್ಭದಲ್ಲಿ ನಮ್ಮ ತಂದೆ ಸಿಟ್ಟಿಗೆದ್ದವರಲ್ಲ. ಹೆಚ್ಚು ಸಂಪಾದಿಸಿದರೆ ಹೊಗಳಲೂ ಇಲ್ಲ; ಹಾನಿಯಾದಾಗ ಸಿಟ್ಟಿಗೆದ್ದೂ ಇಲ್ಲ. ಇಂಥ ಸ್ಥಿತಪ್ರಜ್ಞ ಸ್ವಭಾವ ಅವರದು. ಇಂಥ ಪೂಜ್ಯರ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ, ಅವರ ಶತಮಾನೋತ್ಸವ ಆಚರಿಸುವ ಭಾಗ್ಯ ನಮ್ಮದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ.



ಆದರ್ಶಜೀವನ ಶಿಲ್ಪಿ

● ಶ್ರೀಮತಿ ಇಂದುಮತಿ ಮ. ದೊಡವಾಡ

ಸೃಷ್ಟಿಯಲ್ಲಿ ಗಿಡಬಳ್ಳಿಗಳು ಬೆಳೆದು ಹೂಹಣ್ಣುಗಳನ್ನು ಪರರಿಗಿತ್ತು ಸಂತೋಷಪಡಿಸಿ ಬದುಕನ್ನು ಸಾರ್ಥಕಪಡಿಸಿಕೊಳ್ಳುತ್ತವೆ. ಗಂಧದ ಕೊರಡು ಸಾಣೆಯಕಲ್ಲಿಗೆ ತೆಯ್ದಷ್ಟು ಸುಗಂಧವನ್ನು ಕೊಟ್ಟು ಜೀವನವನ್ನು ಪಾವನಗೊಳಿಸಿಕೊಳ್ಳುತ್ತದೆ. ಹಾಗೆ ನಮ್ಮ ಮಾವನವರು ಜೀವನವೆಂಬ ಕೊರಡನ್ನು ತೆಯ್ದು ಸಮಾಜಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

ಅವರು ಬಾಲ್ಯದಿಂದಲೂ ಹೆತ್ತವರ ಪಾಲಿನ ವಾತ್ಸಲ್ಯಮಯೀ ಪುತ್ರ. ಅವರ ಅಚ್ಚುಮೆಚ್ಚಿನ ಆಜ್ಞಾಧಾರಕ ವ್ಯಕ್ತಿ. ತಮ್ಮ ತಂದೆಯವರು ಆಚರಿಸಿದ ಪೂಜೆ ಪುನಸ್ಕಾರಗಳ ಪ್ರಭಾವದಲ್ಲಿ ಬೆಳೆದುದರಿಂದ ಅವರು ನಡೆದು ಬಂದ ಹಾದಿಯೇ ನಮ್ಮ ಮಾವನವರ ಬಾಳಿಗೆ ಮಾರ್ಗದರ್ಶಕವೆನಿಸಿದೆ.

ಗುರುಸೇವೆ ಹರಪೂಜೆ ಬಾಲ್ಯದಿಂದಲೂ ಅವರು ಆಚರಿಸಿಕೊಂಡು ಬಂದ ಪರಿಪಾಠ. ಶ್ರೀ ಮುರುಘಾಮಠದ ಪರಮಪೂಜ್ಯ ಮೃತ್ಯುಂಜಯಪ್ಪಗಳವರ ಆಶ್ರಯದಲ್ಲಿ ವಿದ್ಯೆಯನ್ನು ಕಲಿತು, ಸಂಸ್ಕಾರವನ್ನು ಪಡೆದು ದೊಡ್ಡವರಾದ ಮಾವನವರು ಇಂದಿಗೂ ದೊಡ್ಡವರೇ ಆಗಿದ್ದಾರೆ.

ಉದ್ದಿಮೆಯನ್ನು ಸಣ್ಣಪ್ರಮಾಣದಲ್ಲಿಯೇ ಪ್ರಾರಂಭ ಮಾಡಿದ್ದರೂ ಅವರ ಸತತ ಪರಿಶ್ರಮ ಪ್ರಾಮಾಣಿಕ ದುಡಿಮೆಯಿಂದ ಅದು ಬರಬರುತ್ತ ವೃದ್ಧಿಸಿ ಇಂದು ಹೆಮ್ಮರವಾಗಿ ನಿಂತಿದೆ. ದೊಡ್ಡ ಉದ್ದಿಮೆಯಷ್ಟೇ ದೊಡ್ಡ ಮನಸ್ಸು ಅವರದು. 'ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು' ಎಂಬ ಸರ್ವಜ್ಞನ ನುಡಿಯನ್ನು ಬಾಳಿನಲ್ಲಿ ಬಿಡದೇ ಆಚರಿಸಿಕೊಂಡು ಬಂದವರು ಮಾವನವರು. ದಾನಧರ್ಮಗಳಲ್ಲಿ ಅವರದು ಎತ್ತಿದ ಕೈ. ನಗುಮುಖ, ವಿನಯ ತುಂಬಿ ಬಾಗಿದ ವ್ಯಕ್ತಿತ್ವ,

ಬಾಯಿ ತೆಗೆದರೆ ಉದುರುವ ಹಿತನುಡಿಗಳು, ಅವರ ಬದುಕನ್ನು ನೋಡಿಯೇ ನಾವು ಕಲಿಯಬೇಕಾದುದು ಇನ್ನೂ ಸಾಕಷ್ಟಿದೆ. ಹೆತ್ತ ಐದುಜನ ಮಕ್ಕಳನ್ನು ಸೂಕ್ತ ಮಾರ್ಗದರ್ಶನದಲ್ಲಿ ಮುನ್ನಡೆಸುತ್ತಿರುವ ಅವರು ಉಳಿದ ವ್ಯಾಪಾರಸ್ಥರಿಗೂ ಮಾರ್ಗದಾಯಿಯೆನಿಸಿದ್ದಾರೆ. ನಾವು ಐದು ಜನ ಸೊಸೆಯರ ಪಾಲಿಗೆ ಹೆತ್ತ ತಂದೆಯ ಸ್ಥಾನದಲ್ಲಿದ್ದಾರೆ. ಇನಾಮದಾರ ಮನೆತನದ ಗೌರವಾರ್ಹ ವ್ಯಕ್ತಿಯಾದ ನಮ್ಮ ತಂದೆಯನ್ನು ಬಾಲ್ಯದಲ್ಲಿಯೇ ಕಳೆದುಕೊಂಡ ನನಗೆ ತಂದೆಯ ಪ್ರೀತಿ ವಾತ್ಸಲ್ಯದ ಸ್ಥಾನವನ್ನು ತುಂಬಿಕೊಟ್ಟಿದ್ದಾರೆ. ಮೊಮ್ಮಕ್ಕಳ ಮೇಲೆಯೂ ಅವರ ಪ್ರೀತಿ ಅಪಾರ. ಅವರ ಉದಾತ್ತ ಆದರ್ಶಗಳ ಬೆಳಕಿನಲ್ಲಿ ನಾವು ಮುಂದೆ ನಡೆಯುತ್ತಿದ್ದೇವೆ.

ದೇವರು ಕಣ್ಮುಚ್ಚಿ ಅವರಿಗೆ ಶ್ರೀಮಂತಿಕೆಯನ್ನಿತ್ತಿದ್ದರೂ, ಹೃದಯ ಬಿಚ್ಚಿ ದಾನ ಮಾಡುವ ಸ್ವಭಾವ ಕೊಟ್ಟಿದ್ದಾನೆ. ಸಮಾಜದ ಬಗೆಗೆ ತುಂಬ ಕಳಕಳಿ ಅವರಿಗಿದೆ. ಇಂಥ ಮಾವನವರ ಅಮೃತ ಮಹೋತ್ಸವದ ಹಬ್ಬದಲ್ಲಿ ಭಾಗಿಗಳಾದ ನಮ್ಮದೇ ಸುದೈವ. ಅವರು ಬೇಗನೆ ಶತಮಾನೋತ್ಸವ ಆಚರಿಸಲಿ ಎಂಬುದು ನಮ್ಮ ಆಸೆ.

ಮನುಜರ ಮನ್ನಣೆಯಂದು ಮಸೆದಲಗಿನ ಗಾಯ

ಸಿದ್ಧರಾಮನ ವಚನ

ಸುಖವಾದಡೆ ಎನ್ನಿಂದಾಯಿತೆಂಬರು
ದುಃಖವಾದಡೆ ದೈವಮಾಡಿತೆಂಬರು

ಪುರಂದರದಾಸರು





ಪಿತೃದೇವೋಭವ

● ದಯಾನಂದ ದೊಡವಾಡ

● ಲಲಿತಾದೇವಿ ದೊಡವಾಡ

ದಿನಾಂಕ ೨೯-೧-೧೯೮೮ ನಮ್ಮ ಜೀವಮಾನದಲ್ಲಿಯೇ ಒಂದು ಚಿರಸ್ಮರಣೀಯ ದಿನ. ನನ್ನ ಜನ್ಮದಾತನ ತುಂಬು ಜೀವನದ ಅಮೃತಮಹೋತ್ಸವ ಆಚರಿಸುತ್ತಿರುವ ದಿನ. ಮಕ್ಕಳಾಗಿ ಹುಟ್ಟಿದವರಿಗೆ ಜೀವನದಲ್ಲಿ ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು. ನಮಗಾಗಿರುವ ಹರುಷ ಆನಂದಕ್ಕೆ ಮಿತಿಯೇ ಇಲ್ಲ. ಈ ಮಹಾದಿನ ನಮ್ಮ ಪಾಲಿಗಂತೂ ಪುಣ್ಯದ ದಿನವೇ ಎನಿಸಿದೆ.


ಈಗಾಗಲೇ ನನ್ನ ೪೨ ವಸಂತಗಳು ತಂದೆಯವರ ಒಡನಾಟದಲ್ಲಿ ಕಳೆದಿವೆ. ಅವರ ಕಲ್ಲುಸಕ್ಕರೆಯಂತಹ ಹೃದಯ, ಬೆಣ್ಣೆಯಂತಹ ಮನಸ್ಸು, ಕಟ್ಟುನಿಟ್ಟಿನ ಜೀವನ ನನ್ನನ್ನು ತುಂಬ ಪ್ರಭಾವಿತನನ್ನಾಗಿ ಮಾಡಿವೆ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಅವರ ಮನಸ್ಸು. ಕೆಟ್ಟುದಕ್ಕೆ ಎಷ್ಟು ಕಠೋರವೋ, ಒಳ್ಳೆಯದಕ್ಕೆ ಕುಸುಮದಂತೆ ಕೋಮಲ. ಅಕ್ಕರೆಯ ಮಕ್ಕಳಾದ ನಮ್ಮನ್ನು ವ್ಯಾಪಾರದ ಪಾಠಶಾಲೆಯಲ್ಲಿ ಪಳಗಿಸಿ ಉದ್ಯೋಗಕ್ಕೆ ಅಣಿಗೊಳಿಸಿಕೊಟ್ಟಿದ್ದಾರೆ. ತಂದೆಯಾಗಿ ಮಕ್ಕಳಿಗೆ ಮಾಡಬೇಕಾದ ಕರ್ತವ್ಯವನ್ನು ಪೂರ್ತಿಗೊಳಿಸಿದ್ದಾರೆ.

ಇತ್ತೀಚಿನ ಅನೇಕ ವರುಷಗಳು ನನ್ನ ತಂದೆಯವರ ಬಗೆಗೆ ನನಗೆ ಅಭಿಮಾನದ ದಿನಗಳೆನಿಸಿದೆ. 'ಕಾಯಕವೇ ಕೈಲಾಸ'ವೆಂಬ ಕಟ್ಟುನಿಟ್ಟಿನ ದಿನಚರಿ ನನ್ನ ಪಾಲಿಗೆ ಸ್ಫೂರ್ತಿಯ ಸೆಲೆಯೆನಿಸಿವೆ. ಅವರ ದಿನನಿತ್ಯದ ಧಾರ್ಮಿಕಶ್ರದ್ಧೆ, ಆಧ್ಯಾತ್ಮಿಕ

ಜೀವನ ನಮ್ಮ ಪಾಲಿಗೆ ಆದರ್ಶಪ್ರಾಯವೆನಿಸಿವೆ. ಶ್ರೀ ನಿಜಗುಣ ಶಿವಯೋಗಿಗಳ ಗ್ರಂಥದ ತಿರುಳನ್ನು ಅರಗಿಸಿಕೊಂಡು ಅದನ್ನು ಜೀವನದಲ್ಲಿ ಆಚರಣೆಗೆ ತರಲು ಪ್ರಯತ್ನಿಸಿದವರು. ಮುರುಘಾಮಠದ ಪರಮಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳು, ಪೂಜ್ಯ ಮಹಾಂತಪ್ಪಗಳವರ ಪರಮಭಕ್ತರಾಗಿ ಅವರ ಆಶೀರ್ವಾದದಲ್ಲಿಯೆ ಮುನ್ನಡೆ ಯುತ್ತಿರುವವರು ನಮ್ಮ ತಂದೆ. ಭಕ್ತಿಯಲ್ಲಿ ಅವರಿಟ್ಟ ಹೆಜ್ಜೆ ಮುಂದು, ಅಂತೆಯೇ ಮುಂದಾಳತ್ವದಲ್ಲಿಯೂ ಅವರ ಸ್ಥಾನ ಮುಂದು. ಅನೇಕ ವರುಷಗಳಿಂದ ಚೇಂಬರ ಆಫ್ ಕಾಮರ್ಸದ ಪ್ರೆಸಿಡೆಂಟರಾಗಿ, ದಲಾಲಿ ಹಾಗೂ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾಗಿ, ಮಾರ್ಕೆಟ ಕಮಿಟಿಯ ಸದಸ್ಯರಾಗಿ, ಬೇರೆ ಬೇರೆ ಸಂಘ ಸಂಸ್ಥೆಗಳ (ಬ್ಯಾಂಕು, ಹಣಕಾಸಿನ ಸಂಸ್ಥೆ, ಜಿನ್ನಿಂಗ ಫ್ಯಾಕ್ಟರಿ ಇತ್ಯಾದಿ) ಡೈರೆಕ್ಟರರಾಗಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಅವರ ಕರ್ತೃತ್ವಶಕ್ತಿ, ವಿಚಾರಶಕ್ತಿ ಅಪಾರ. ಬೆಣ್ಣೆ ಯಂತಹ ಮನಸ್ಸು ಕಠಿಣ ಹೃದಯದವರನ್ನೂ ಕರಗಿಸುವಂಥದು. ಸೌಮ್ಯರೀತಿಯ ಅವರ ವಿಚಾರ, ಆಳ ಗಂಭೀರಭಾವ ಯಾರ ಮನಸ್ಸನ್ನೂ ಆಕರ್ಷಿಸದೆ ಬಿಡದು.

ನಮ್ಮ ತಂದೆಯವರ ಜೀವನ ಒಂದು ವರ್ಣಮಯ ಸಂಪುಟ. ಕಠಿಣ ಪರಿಶ್ರಮದಿಂದ ಲಕ್ಷ್ಮೀಕೃಪಾಕಟಾಕ್ಷ ಪಡೆದುಕೊಂಡವರು. ಅವರು ಕಲಿತ ವಿದ್ಯೆ ಕಡಿಮೆ, ಪಡೆದ ಅನುಭವ ಅಪಾರ. ಅನುಭವವೇ ಅವರ ಪಾಠಶಾಲೆಯೆನಿಸಿದೆ. ವ್ಯಾಪಾರಕ್ಕೆ ಬರುವ ಗಿರಾಕಿಗಳೇ ಅವರ ಪಾಲಿನ ದೇವರು. ಮಾಡುವ ಪ್ರಾಮಾಣಿಕ ಸೇವೆಯೇ ಅವರ ಪೂಜೆಯೆನಿಸಿದೆ. ತಮ್ಮ ಮಕ್ಕಳನ್ನೂ ಅದೇ ಮಾರ್ಗದಲ್ಲಿ ಮುಂದುವರೆಸಿರುವರು. ನಮ್ಮ ಮನೆತನದಲ್ಲಿ ವ್ಯಾಪಾರಕ್ಕೆ ಭದ್ರಬುನಾದಿ ಹಾಕಿಸಿರು ವರು. ಇಂದು ಅವರ ಕರ್ತೃತ್ವಶಕ್ತಿಯಿಂದ ನಮ್ಮ ವ್ಯಾಪಾರೋದ್ಯಮ ಹತ್ತಾರು ಕವಲುಗಳೊಡೆದು ನಿಂತಿದೆ. ಅವರ ಪ್ರಯತ್ನದ ಪ್ರತೀಕಗಳೆನಿಸಿವೆ.

ವ್ಯಾಪಾರಕ್ಷೇತ್ರದಲ್ಲಿ ಇಂದು ನಮ್ಮ ತಂದೆಯವರೇ ನಮಗೆ ಮಾರ್ಗದರ್ಶಕರು. ಆದರ್ಶನೀಯ ವ್ಯಕ್ತಿಗಳು. ಅವರ ಆದರ್ಶ ನಮಗೆ ಅಭಿಮಾನ ಕೊಟ್ಟಿದೆ. ಅವರ ಸದ್ಗುಣಗಳಲ್ಲಿ ಕೆಲವಾದರೂ ನಮ್ಮವುಗಳಾಗಬೇಕು, ನಮ್ಮ ತಂದೆ ಸಮಾಜದಲ್ಲಿ ಇನ್ನೂ ಎತ್ತರಕ್ಕೆ ಏರಬೇಕು. ಅಗ್ರಗಣ್ಯರೆನಿಸಿಕೊಂಡು ಬಾಳಬೇಕು. ದೇವರು ಅವರಿಗೆ ಆಯುರಾರೋಗ್ಯವನ್ನಿತ್ತು ಕಾಪಾಡಲಿ. ನಾವು 'ಪಿತೃದೇವೋಭವ' ಎಂದಿಟ್ಟ ನಂಬಿಕೆ ಚಿರಕಾಲ ಉಳಿಯಲಿ ಎಂಬುದು ನನ್ನ ಪತ್ನಿ ಲಲಿತಳ ಅನನ್ಯ ಹಾರೈಕೆ.



ಪ್ರಾಮಾಣಿಕತೆಯ ಶಿಲ್ಪಿ

● **ಕೈಲಾಸಪತಿ ದೊಡವಾಡ**

'ಪ್ರಾಮಾಣಿಕತೆಯು ಉದ್ಯೋಗದ ಸಕಲ ಸರ್ವಸ್ವವು' ಎಂಬುದನ್ನು ನಮ್ಮ ಪೂಜ್ಯ ತಂದೆಯವರು ನಮಗೆ ಪರಿಪೂರ್ಣವಾಗಿ ಅರಿವು ಮಾಡಿಕೊಟ್ಟಿರುವರು. ಆದರಂತೆ ನಾವು ಮಕ್ಕಳು ವಾಣಿಜ್ಯಕ್ಷೇತ್ರದಲ್ಲಿ ಮುಂದುವರೆದಿರುವೆವು.

೧೯೭೪ ರಲ್ಲಿ ನಾನು ಬಿ. ಎಸ್‌ಸಿ. ಪದವೀಧರನಾದಾಗ ಸರಕಾರಿ ನೌಕರಿ ಮಾಡಲಿಚ್ಛಿಸಿದ್ದೆ. ಪೂಜ್ಯರು ಅದಕ್ಕೆ ಅವಕಾಶ ಕೊಡದೇ ನನ್ನ ಗಮನವನ್ನು ತಮ್ಮ ಕ್ಷೇತ್ರ ವ್ಯಾಪಾರೋದ್ಯಮದತ್ತ ಸೆಳೆದುದು ಇಂದು ಒಳ್ಳೆಯದೇ ಆಗಿದೆ.

ಪೂಜ್ಯರಿಂದ ನಾನು ಇಂದು ಕಲಿತ ಹೊಸಪಾಠವೆಂದರೆ ವ್ಯವಹಾರದ ರೀತಿ, ಮಾತುಗಾರಿಕೆಯಲ್ಲಿ ಸೌಜನ್ಯತೆ, ಕಾರ್ಯದಲ್ಲಿ ತಾಳ್ಮೆ ತನ್ಮಯತೆ, ಪ್ರಾಮಾಣಿಕತೆ, ಇವೇ ನನ್ನ ಬದುಕಿನ ಮೌಲ್ಯಯುಕ್ತ ಪಾಠಗಳೆನಿಸಿವೆ.

●



ಕಾರುಣ್ಯಮಯಿ

● **ಪ್ರಭಾವತಿ ಕೈಲಾಸಪತಿ ದೊಡವಾಡ**

"ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ವಚನವನ್ನು ಅಕ್ಷರಶಃ ಸತ್ಯ ಮಾಡಿ ತೋರಿಸಿದವರು ನಮ್ಮ ಮಾವನವರು. 'ದುಡಿತವೇ ದುಡ್ಡಿನ ತಾಯಿ' ಎಂಬುದನ್ನು ಇವರಿಂದಲೇ ಕಲಿಯಬೇಕು. ಅತೀ ಕಷ್ಟದ ಪರಿಸ್ಥಿತಿಯಲ್ಲಿಯೂ ನಿಶ್ಚಲ ನಿರ್ಮಲವಾದ ಮನದಿಂದ, ದುಡಿತದಿಂದ, ಅತೀ ಸರಳ, ಪ್ರಾಮಾಣಿಕ, ಸತ್ಯದಿಂದ ಚಾಣಾಕ್ಷತನದಿಂದ ಉದ್ಯೋಗದ ಸೂತ್ರವನ್ನರಿತು ದುಡಿದು ಮುಂದೆ ಬಂದವರು. ಸುವಿಚಾರಗಳಿಂದ ತುಂಬಿದ ಮನಸ್ಸು ಇವರದು. ಪರಿಸರವನ್ನು ಸುವಾಸನೆಗೊಳಿಸುವ ಪುಷ್ಪಗಳಂತೆ, ಇವರ ಉದಾರ ಹೃದಯವು ಸದಾ ದಾನ, ಧರ್ಮ ಕರ್ಮಗಳಿಗೆ ತಲೆ ಬಾಗಿದ ಜೀವ ಇವರದು.

ಶ್ರೀಮದಘಣಿ ಮುರುಘೇಂದ್ರ ಮಹಾಶಿವಯೋಗಿಗಳ ಕೃಪಾಶ್ರಯದಲ್ಲಿ ಬೆಳೆದ ಇವರು ಸಹಜವಾಗಿಯೇ ಆಧ್ಯಾತ್ಮಶೀಲ ಒಲವನ್ನು ಬೆಳೆಸಿಕೊಂಡಿರುವರು. ಸದಾ ಗುರುಹಿರಿಯರಲ್ಲಿ ಭಯಭಕ್ತಿಯುಳ್ಳವರು. ಪರರಿಗೆ ಹಿತವಚನವನ್ನು ನುಡಿಯುವ ಇವರು ಎಂದಿಗೂ ಯಾರಿಗೂ ಕೆಡುಕನ್ನು ಮಾಡಿದವರಲ್ಲ. ಮಿತಭಾಷಿಗಳಾದ ಇವರು ಕರ್ತವ್ಯನಿಷ್ಠರು. ಎಂತಹ ಕಷ್ಟಬಂದರೂ ಎದುರಿಸುವೆ ಎಂಬ ದೃಢ ಸಂಕಲ್ಪವುಳ್ಳವರು. ಸದಾ ಹಸನ್ಮುಖಿಗಳಾದ ಇವರು ತಮ್ಮ ದುಃಖದುಮ್ಮಾನಗಳನ್ನು ಬದಿಗೊತ್ತಿ ಪರರಿಗೆ ಉಪಕಾರ ಮಾಡುವದನ್ನು ನಾನು ಕಂಡಿರುವೆ.

ಪರೋಪಕಾರಾಯ ಫಲಂತಿ ವೃಕ್ಷಃ ।
ಪರೋಪಕಾರಾಯ ವಹಂತಿ ನದ್ಯಃ ।

ಪರೋಪಕಾರಾಯ ಮಹಂತಿ ಗಾವಃ ।
ಪರೋಪಕಾರಾರ್ಥಮಿದಂ ಶರೀರಂ ॥

ಎಂಬ ತತ್ತ್ವವುಳ್ಳ ಇವರು ಸದಾ ಪರರಿಗಾಗಿ ದುಡಿಯುವುದೇ ಇವರ ಧರ್ಮ. "ಪರೋಪಕಾರಾಯ ಪುಣ್ಯಃ ಪಾಪಾಯ ಪರಪೀಡನಃ" ಎಂಬಂತೆ ಪರೋಪಕಾರದಿಂದಲೇ ಪುಣ್ಯ ಬರುವುದು ಅಂತೆಯೇ ಪಾಪವು ನಾಶವಾಗುವುದು ಎಂಬ ಮನಸ್ಸಿನವರು ಇವರು. ತುಂಬಾ ಶ್ರಮಜೀವಿಗಳು: ಆಧುನಿಕ ಜೀವನಕ್ಕೆ ಮಾರು ಹೋದವರಲ್ಲ. ವಿಲಾಸಿಗಳಲ್ಲ, ಆಲಸಿಗಳಲ್ಲ. ಕೀರ್ತಿಗಾಗಿ ಯಾಚಿಸಿ ದಾನಧರ್ಮ ಮಾಡಿದವರಲ್ಲ.

ಇವರು ಸದಾಚಾರವುಳ್ಳವರೂ ಅಂತರಂಗ ಬಹಿರಂಗ ಶುದ್ಧಮನಸ್ಸಿನವರೂ ಆಗಿರುವರು. ಅವರಲ್ಲಿ ಒಣ ಆಡಂಬರ, ಅರ್ಥವಿಲ್ಲದ ಜಂಬ, ದುರಹಂಕಾರ ಇವುಗಳನ್ನು ನಾನು ಎಂದೂ ಕಂಡಿಲ್ಲ. ಇಂತಹ ನಿಗರ್ವಿವ್ಯಕ್ತಿಗಳನ್ನು ನಾನು ಜೀವನದಲ್ಲಿಯೇ ಕಂಡಿರುವುದು ಕೆಲವೇ ಕೆಲವು ಸಲ.

ಮೂಲತಃ ದೇವಿಆರಾಧಕರಾದ ಇವರು ಶಿವಭಕ್ತರು. ಶಿವಪೂಜೆ, ದೇವಿಪುರಾಣ, ಇವರ ನಿತ್ಯ ಉಪಾಸನೆ. ಆಧ್ಯಾತ್ಮದ ಪುಸ್ತಕಗಳತ್ತ ಇವರದು ತುಂಬಾ ಒಲವು. ತಮ್ಮ ಬಿಡುವಿನ ವೇಳೆಯಲ್ಲಿ ಧಾರ್ಮಿಕ ಕೃತಿಗಳ ಅಧ್ಯಯನ ಮಾಡುವರು: ಮೊಮ್ಮಕ್ಕಳೊಂದಿಗೆ ಆಟ ಆಡುವರು. ಮೊಮ್ಮಕ್ಕಳನ್ನು ಸುಸಂಸ್ಕೃತರು ಮತ್ತು ವಿದ್ಯಾವಂತರನ್ನಾಗಿ ಬೆಳೆಸಬೇಕೆಂಬುದು ಇವರ ಆಸೆ. ಕಷ್ಟದಲ್ಲಿ ಒಳಗಾದವರಿಗೆ ಅನುಕೂಲ ಒದಗಿಸಿಕೊಡುವ ಇವರ ಮನೋಭಾವ ಹಿರಿದು.

ಸೊಸೆಯರೊಂದಿಗೆ ಮಕ್ಕಳೋಪಾದಿಯಲ್ಲಿ ನಡೆದುಕೊಳ್ಳುವ ಇವರು ನಮ್ಮ ತವರುಮನೆಯವರನ್ನು ಮರೆಸಿದ್ದಾರೆ.

"ತನು, ಮನ, ಧನವ ನಿವೇದಿಸಿದವರ ಮನೆಯ ಮಗ ನಾನಯ್ಯ ಕೂಡಲ ಸಂಗಮದೇವಾ" ಎಂಬ ವಚನವು ಇವರನ್ನು ಕಂಡಾಗಲೊಮ್ಮೆ ನನಗೆ ನೆನಪಾಗುವುದು. ನಗರದ ಅನೇಕ ಸಂಘ, ಸಂಸ್ಥೆ, ಆಶ್ರಮ, ಗುಡಿಗುಂಡಾರ, ಕಟ್ಟಡ ಮತ್ತು ವಿದ್ಯಾ ಸಂಸ್ಥೆಗಳಿಗೆ ಮಾಡಿದ ದಾನಧರ್ಮ ಅವರ ಉನ್ನತ ವ್ಯಕ್ತಿತ್ವಕ್ಕೆ ಸೂಚನೆಯೆನಿಸಿದೆ.

ವೃಷಭನಾಮ ಸಂವತ್ಸರ ಪುಷ್ಯ-ಮಾಘ ಮಾಸದಲ್ಲಿ ನಡೆಯುವ ಈ ಅಮೃತ ಮಹೋತ್ಸವವು ವೈಭವದಿಂದ ನಡೆದು ಇವರ ಕೀರ್ತಿ ಇನ್ನೂ ಹೆಚ್ಚಲಿ ಎಂದು ಹಾರೈಸುವೆ. ಶರಣ ಸಂಪ್ರದಾಯದ ಸುಸಂಸ್ಕೃತರಾದ ಪೂಜ್ಯರಿಗೂ, ಮಾತೋಶ್ರೀಯವರಾದ ಗಂಗಮ್ಮನವರಿಗೂ ಹೊಸ ವರುಷದ ಹೊಸ ಚಿಗುರಿನಂತೆ ಸದಾ ನವಚೇತನವನ್ನು ದೇವರು ಕೊಡಲಿ, ದೇವರು ದೀರ್ಘಾಯುಷ್ಯಾರಾಮವನ್ನು ದಯಪಾಲಿಸಲೆಂದು ಬೇಡಿಕೊಳ್ಳುತ್ತೇನೆ.

ವಾತ್ಸಲ್ಯದ ಅಜ್ಜ



● ಶ್ರೀಮತಿ ಸುಮಾ ಶ್ರೀಕಾಂತ ಪಾಟೀಲ

ಅಜ್ಜ ಎನ್ನುವ ಪದ ಬಹಳ ಅರ್ಥಪೂರ್ಣವಾದದ್ದು. ನಾವು ಸ್ವಾಮೀಗಳಿಗೂ ಸಹ 'ಅಜ್ಜನವರು' ಎಂದು ಭಯ-ಭಕ್ತಿಯಿಂದ ಕರೆಯುತ್ತೇವೆ. 'ಅಜ್ಜಾ' ಎಂದು ಗೌರವಸೂಚಕವಾಗಿ ಹಿರಿಯರಿಗೆ ಕರೆಯುತ್ತೇವೆ. ದೇವರಿಗೆ ನಮಸ್ಕರಿಸುವಾಗ ಕೂಡ "ಸ್ವಾಮಿ ಅಜ್ಜಯ್ಯಗ ನಮಸ್ಕಾರ ಮಾಡು ಪುಟ್ಟಾ" ಎಂದು ಮಕ್ಕಳಿಗೆ ಹೇಳುತ್ತೇವೆ. ಇಲ್ಲಿ ಅಜ್ಜನೆಂದರೆ ಹಿರಿಯ, ರಕ್ಷಣೆಕೊಡುವುದರ ಸಂಕೇತವಾಗಿದ್ದಾನೆ.

ನಾವು ನಮ್ಮ ಅಜ್ಜನವರಿಗೆ 'ಅಜ್ಜಾರ' ಎಂದು ಕರೆದರೆ ಈ ಎಲ್ಲ ಅರ್ಥಗಳೂ ಅವರಲ್ಲಿ ತುಂಬಿವೆ. ಅದಕ್ಕಾಗಿಯೇ ಏನೋ ಎಲ್ಲರೂ ಅವರನ್ನು "ದೊಡವಾಡ ಅಜ್ಜಾರು" ಎಂದು ಪ್ರೀತಿಯಿಂದ ಕರೆಯುವುದು. ನಾನು ಅವರ ಮೊದಲ ಮೊಮ್ಮಗು. ಅಲ್ಲಿಂದ ಇಲ್ಲಿಯವರೆಗೆ ೧೯ ಜನ ಮೊಮ್ಮಕ್ಕಳಾಗಿದ್ದರೂ ಸಹ ಅವರು ನಡೆ-ನುಡಿಗಳಲ್ಲಿ ವೇಷ-ಭೂಷಣದಲ್ಲಿ ಸ್ವಲ್ಪವೂ ಬದಲಾಯಿಸಲಿಲ್ಲ; ಶಾರೀರಿಕ ಬದಲಾವಣೆ ಸ್ವಲ್ಪ ಮಾತ್ರ. ಆಗ ಅಚ್ಚ-ಕಪ್ಪಗಿದ್ದ ಕೂದಲುಗಳು ಈಗ ಬೆಳ್ಳಗಾಗಿವೆ. ಹಲ್ಲುಗಳು ಮಾತ್ರ ಒಂದೂ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ಈ ಇಳಿವಯಸ್ಸಿನಲ್ಲಿ ಸಹಜವಾಗಿರುವ ಶಾರೀರಿಕ ಕಂಪ್ಲೇಂಟುಗಳಿಂದ ವಿಮುಕ್ತರಾಗಿದ್ದಾರೆ; ದೇವರು ಅವರಿಗೆ ಇದೇ ತರಹ ಆರೋಗ್ಯಸಂಪತ್ತನ್ನು ಕೊಟ್ಟು, ಅವರ ಶತಮಾನೋತ್ಸವವನ್ನು ನಾವೆಲ್ಲರೂ ಸೇರಿ ಆಚರಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇವೆ.

ಬಹಳಷ್ಟು ಜನ ವೃದ್ಧಾವಸ್ಥೆಯಲ್ಲಿ ತಾವಿನ್ನು ಯಾರಿಗಾಗಿ ಬದುಕಬೇಕು ? ಏತಕ್ಕಾಗಿ ಬದುಕಬೇಕು ? ಎಂದು ಗೊತ್ತುಗುರಿಯಿಲ್ಲದೇ ಕೊರಗುವದನ್ನು ನೋಡಿದ್ದೇನೆ. ಇದಕ್ಕೆ ಅತಿ ವಿಶ್ರಾಂತಿಯೇ ಕಾರಣವೆಂದು ಕಾಣುತ್ತದೆ. ಇವರು ವೃದ್ಧಾವಸ್ಥೆಯನ್ನು ವಿಶ್ರಾಂತಿ ಪಡೆಯುವ ಅವಸ್ಥೆ ಎಂದು ತಿಳಿದೇ ಇಲ್ಲ. "ಶಕ್ತಿ

ಇರುವವರೆಗೂ ಪ್ರತಿಯೊಬ್ಬ ಮನುಷ್ಯನೂ ಕೆಲಸ ಮಾಡಿಯೇ ಊಟಮಾಡಬೇಕೆಂದು, ಕೆಲಸದವರು ಸಹಾಯಕ್ಕಾಗಿ ಮಾತ್ರ" ಎಂಬುದು ಇವರ ಅಭಿಪ್ರಾಯ. ನಮ್ಮ ಪರಿಚಯದವರೊಬ್ಬರು ಹೇಳುತ್ತಿದ್ದರು : 'ಮೊನ್ನೆ ಕನ್ಯಾ ನೋಡಾಕ ಹೋಗಿದ್ವಿ, ಬರುವಾಗ ತಡ ಆತು, ಕಾರ ಮನೀಗೆ ಬಿಡ್ತೀವಿ ಅಜ್ಜಾರ ಅಂದ್ರ, ಬ್ಯಾಡ ಅಂತ್ಹೇಳಿ ಅಂಗಡಿಗೇ ಇಳಿದ್ರು ನೋಡ್ರಿ' ಎಂದರು. ಇದೇ ಸ್ವಭಾವ ನಮ್ಮ ತಂದೆ ಶ್ರೀ ಸರಸಾನಂದ ಅವರಲ್ಲಿದೆ. ಅವರಿಗೆ ಕರ್ತವ್ಯ. ಹಾಗೆ, ಮನೋರಂಜನೆ ಎಲ್ಲವೂ ವ್ಯಾಪಾರವೇ ಆಗಿದೆ. ವಿಶ್ರಾಂತಿ ತೆಗೆದುಕೊಳ್ಳುವುದೇ ಮನಸ್ಸನ್ನು ಶಾಂತವಾಗಿ ಉಲ್ಲಸಿತವಾಗಿಡುವುದಕ್ಕೆ, ತಾನೇ, ಇಲ್ಲದಿದ್ದರೆ ವಿಶ್ರಾಂತಿಯಿಂದಲೂ ಉಪಯೋಗವಿಲ್ಲ.

ಹಿಂದೂ ಧರ್ಮದಲ್ಲಿ ನಾಲ್ಕು ಆಶ್ರಮಗಳಿವೆ. ಬ್ರಹ್ಮಚರ್ಯ ಗೃಹಸ್ಥಾಶ್ರಮ ವಾನಪ್ರಸ್ಥಾಶ್ರಮ ಸನ್ಯಾಸಾಶ್ರಮ. ಅಜ್ಜನವರು ಈ ಆಶ್ರಮಗಳನ್ನು ಅರಿತು ಆಚರಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಪೂಜ್ಯ ಮೃತ್ಯುಂಜಯಪ್ಪಗಳ ದಿವ್ಯ ಸಾನಿಧ್ಯದಲ್ಲಿ ಮುಗಿಸಿದ ಪುಣ್ಯವಂತರು. ಕುಂ॥ ಸೌ॥ ಶಾಂಭವಿಯವರ ಕೈಹಿಡಿದು ಗೃಹಸ್ಥಾಶ್ರಮವನ್ನು ಪ್ರವೇಶಿಸಿದರು. ಆಗಿನ್ನೂ ನಮ್ಮ ಅಜ್ಜಿಯವರು ೭-೮ ವರ್ಷದ ಹುಡುಗಿ. ಇವರ ಬಾಳಬಳ್ಳಿಯಲ್ಲಿ ನಮ್ಮ ತಂದೆ ಸರಸಾನಂದ, ಸುದೈವ, ಮನೋಹರ, ದಯಾನಂದ ಹೀಗೆ ನಾಲ್ಕು ಜನ ಗಂಡುಮಕ್ಕಳಾದ ಮೇಲೆ ಜನಿಸಿದಳು 'ಶಾಶ್ವತ'. ಆದರೆ ಅವಳು ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡಳು. ನಂತರ ಚಿಕ್ಕಪ್ಪ ಕೈಲಾಸಪತಿಯವರು ಹುಟ್ಟಿದರು.

ಅಜ್ಜನವರಿಗೆ 'ಅಲ್ಸರ್' ಆಗಿತ್ತು. ಆಪರೇಶನ್‌ಗಾಗಿ 'ಮಿರಜ'ಕ್ಕೆ ಹೋಗಬೇಕಾಗಿತ್ತು. ಆ ದಿನಗಳಲ್ಲಿ ಆಪರೇಶನ್ ಅಂದರೆ ಜೀವಭಯವಿರುತ್ತಿತ್ತು. ಆಪರೇಶನ್ನಿಗಾಗಿ ಅರ್ಧದಾರಿಯ ವರೆಗೆ ಹೋದ ಅಜ್ಜನವರು ಮರಳಿ ಹಿಂದಿರುಗಿದರು. ದೇವಪೂಜೆಯಲ್ಲಿ ನಂಬಿಕೆಯಿಟ್ಟರು. ನಮ್ಮ ತಂದೆಯವರ ಮದುವೆಯನ್ನು ಮುರಿಗೆಪ್ಪ ಹತ್ತೀಕಾಳರ ಮಗಳು ಗಂಗಾದೇವಿಯೊಡನೆ ಮಾಡಿದರು. ಅವರ ಮದುವೆಯ ಮಂಟಪವನ್ನೂ, ಅಂದು ಸಿಡಿಸಿದ ಮದ್ದಿನ ಸೊಬಗನ್ನು ನೋಡಿದವರು ಈಗಲೂ ನೆನೆಸಿಕೊಳ್ಳುತ್ತಾರೆ. ಮದುವೆಯ ಮೆರವಣಿಗೆಗೆ ಹಡಗಿನ ಅಲಂಕಾರ ಮಾಡಿದ್ದರಂತೆ. ಅಜ್ಜನವರು ತಮ್ಮ ಡೈರಿಯಲ್ಲಿ ಮದುವೆಯ ಮೆರವಣಿಗೆಯನ್ನು ವರ್ಣಿಸುತ್ತ "ಚಿ॥ ಸರಸಾನಂದನ ಸಂಸಾರದ ಹಡಗು ಭವಸಾಗರದಲ್ಲಿ ತೇಲಿ ಬರುತ್ತಿರುವಂತೆ ಕಾಣಿಸುತ್ತಿತ್ತು" ಎಂದು ಬರೆದಿದ್ದಾರೆ.

ಸೊಸೆ ಮನೆಗೆ ಕಾಲಿಡುತ್ತಿದ್ದಂತೆ ಅವರ ಅನಾರೋಗ್ಯ ಹೇಳಹೆಸರಿಲ್ಲದಂತೆ ಓಡಿ ಹೋಯಿತು. ವಾನಪ್ರಸ್ಥಾಶ್ರಮ ಸೇರಿದ ಅಜ್ಜನವರಿಗೆ ನಾವು ಮೊಮ್ಮಕ್ಕಳು ಸಂತೋಷದ ಚಿಲುಮೆಗಳಾಗಿದ್ದೆವು. ಹಿರಿಯವಳಾದ ನಾನು ಅಂದರೆ ಸುಮಂಗಲಾ,

ರಾಜೇಶ್ವರಿ ಹುಟ್ಟಿದೆವು. ನಂತರ ಹುಟ್ಟಿದವರು ಗುರು, ಮೃತ್ಯುಂಜಯ ಕರುಣಾಕರ. ನಾವು ಐವರು ಶ್ರೀ ಸರಸಾನಂದ ಅವರ ಮಕ್ಕಳು. ದಿನಾಲು ಬೆಳಿಗ್ಗೆ ರಾಜಕ್ಕ ನನ್ನನ್ನು ಎಬ್ಬಿಸುತ್ತಿದ್ದಳು. ಮುಖ ತೊಳೆದುಕೊಂಡು ಅಜ್ಜಾ ಇದ್ದಲ್ಲಿಗೆ ಓಡುತ್ತಿದ್ದೆವು. ಅಜ್ಜಾರು ಗಿಡಗಳಿಗೆ ಗೊಬ್ಬರವನ್ನೋ ಬೂದಿಯನ್ನೋ ಹಾಕುತ್ತಿರುತ್ತಿದ್ದರು. ನಾವು ಮನೆಯಲ್ಲಿ ನಡೆದ ವಿಷಯಗಳನ್ನೊ, ಸ್ಕೂಲಿನಲ್ಲಿ ನಡೆದುದನ್ನೊ ಕೆಲಸದವರ ಕಿತಾಪತಿಯನ್ನೊ, ಮನೆಗೆ ಯಾರು ಬಂದಿದ್ದರು, ಏತಕ್ಕೆ ಬಂದಿದ್ದರೆಂಬುದನ್ನು ಅಜ್ಜನವರಿಗೆ ವರದಿ ಒಪ್ಪಿಸುತ್ತಿದ್ದೆವು. ನಾನು ಮಾತಾಡು ವಾಗ ಸುತ್ತು ಬಳಸಿ ಮಾತಾಡುತ್ತಿದ್ದೆನೆಂದು ಕಾಣುತ್ತದೆ, "ಸುತ್ತು ಬಳಸಿ ಮಾತಾಡ ಬೇಡಾ, ಸಂಕ್ಷಿಪ್ತ ಹೇಳವಾ" ಎಂದು ಅಜ್ಜ ಹೇಳುತ್ತಿದ್ದುದು ನೆನಪು. ಆದರೆ ನನಗೆ ಆವಾಗ 'ಸುತ್ತುಬಳಸಿ' ಮತ್ತು 'ಸಂಕ್ಷಿಪ್ತ' ಈ ಪದಗಳ ಅರ್ಥವೇ ತಿಳಿಯುತ್ತಿರಲಿಲ್ಲ. "ಇಲ್ರಿ, ಸಂಕ್ಷಿಪ್ತನ ಹೇಳಾಕತ್ತೇನ್ರಿ' ಎಂದು ಮತ್ತೆ ಪ್ರಾರಂಭಿಸುತ್ತಿದ್ದೆ. ಅದಕ್ಕೆ ಅಜ್ಜನವರು "ಸುಮಕ್ಕನ್ನವು ಮಾತ ಬಾಳ" ಎನ್ನುತ್ತಿದ್ದರು.

ಗಿಡಗಳಿಗೆ ನೀರು ಹಾಕಲು ಹೇಳುತ್ತಿದ್ದ ಅಜ್ಜ. 'ನೀರು ಹಾಕುವುದರಿಂದ ಅವುಗಳ ಮೇಲೆ ಪ್ರೀತಿ ಬೆಳೆಯುತ್ತದೆ' ಎಂದು ಹೇಳುತ್ತಿದ್ದರು. ಹೂ ಕೀಳುವಾಗ ಗಿಡದಲ್ಲಿ ಎರಡು-ಮೂರು ಹೂಗಳನ್ನು ಬಿಡಬೇಕು, ಮರೆಯಲ್ಲಿರುವ ಹೂಗಳನ್ನು ಕೀಳಬೇಕು, ದೀಪವನ್ನು ಬೆಳಗಿಸುವಾಗ ದೀಪ ಮುತ್ತಿನಂತೆ ಉರಿಸಬೇಕು, ದೇವರಿಗೆ ಯಾರಾದರೂ ಹೂ ಕೇಳಿದರೆ ಇಲ್ಲವೆಂದು ಹೇಳಬಾರದು ಎಂದು ಹೇಳುತ್ತಿದ್ದರು. ಅಂಗಡಿಯಿಂದ ಯಾರು ಎಷ್ಟೇ ತಡವಾಗಿ ಬಂದರೂ ಆಕಳುಗಳಿಗೆ ಒಂದು ಓಡಿ ಮೇವು ಹಾಕಿ ಬರುವ ಸಂಪ್ರದಾಯ ಮನೆಯಲ್ಲಿ. ಈಗಲೂ ಸಹ ಆಕಳುಗಳಿಗೆ ಮುಂಜಾನೆ ಅಜ್ಜನವರೇ ಹಿಂಡಿ ಕಲೆಸಿ ಇಡುವವರು.

ನಮ್ಮ ಅಜ್ಜಿ ಹಸಿಹಾಲನ್ನು ಹಿಂಡಿದ ತಕ್ಷಣ ದನದ ಮನೆಯಲ್ಲಿಯೇ ಕುಡಿಯಲು ಕೊಡುತ್ತಿದ್ದರು. ದಿನವೂ ಸಾಯಂಕಾಲ ನನಗೂ, ರಾಜಕ್ಕನಿಗೂ ಎಣ್ಣೆ-ನೀರು ಹಾಕಿ, ಸವುತೆಬೀಜದ ಪಾಯಸ, ಅನ್ನ-ಸಾರು ಊಟ ಮಾಡಿಸಿ ಮಲಗಿಸಿ ಬಿಡು ತ್ತಿದ್ದರು. ಉಳವಿ ಜಾತ್ರೆ ನಮಗೊಂದು ಸಂಭ್ರಮ. ಒಂದು ವಾರ ಮೊದಲೇ ಉಳವಿಗೆ ಕೂಡಲಮಠ ಅಜ್ಜಾರು, ಗೌಡ್ರು ಅಜ್ಜಾರು, ನಮ್ಮ ಅಜ್ಜಾರು ಹೊರಡು ತ್ತಿದ್ದರು. ನಾನು-ರಾಜಕ್ಕ ತಪ್ಪದೇ ತಯಾರಾಗುತ್ತಿದ್ದೆವು. ಆಗ ನನಗೆ ತಲೆ ಬಾಚುವ ಸ್ನಾನಮಾಡಿಸುವ ಕೆಲಸ ಅವರದೇ. ನಂತರ ನಮ್ಮ ಅಜ್ಜಿ-ತಾಯಿ, ಬಳಗದವರೆಲ್ಲ ಉಳವಿಗೆ ಬರುತ್ತಿದ್ದರು. ಅಜ್ಜ-ಅಜ್ಜಿಯವರು ಸ್ವಾಮಿಗಳ ಜೊತೆ ಆಕಳಗವಿಗೆ ಹೊರಟರೆ ನಾವೂ ತಯಾರಾಗುತ್ತಿದ್ದೆವು. ಆಗ 'ಮನುಕಾಕಾ' ಹೆದರಿಸಿ ನಮ್ಮನ್ನು ತಮ್ಮ ಹತ್ತಿರ ಇರಿಸಿಕೊಳ್ಳುತ್ತಿದ್ದರು.

ತಮ್ಮಂದಿರಾದ ಗುರು ಮತ್ತು ಮುತ್ತು ಬೆಡ್‌ಶೀಟ್‌ಗಳಿಂದ ಅಂಗಡಿ ಕಟ್ಟಿ ಆಟ ಆಡಿಕೊಳ್ಳುತ್ತಿದ್ದರು. ಗುರುಗಂತೂ ಆಟದಲ್ಲಿ ಅಜ್ಜಾರ ಪಾತ್ರವಹಿಸುವದೆಂದರೆ ಬಹಳ ಇಷ್ಟ. ಸೊಂಟಕ್ಕೆ ಕೀಲಿಕೈ ಕಟ್ಟಿ, ದೋತರ ಉಟ್ಟು, ಅಂಗೈಯಲ್ಲಿ ಲಿಂಗ ಹಿಡಿದು ಶಿವಪೂಜೆಗೆ ಕುಳಿತುಕೊಳ್ಳುತ್ತಿದ್ದ. ಭುಜದ ಮೇಲೆ, ಕೈಮೇಲೆ, ತಲೆಯ ಮೇಲೆ ಹೂ ಇಡಿರಿ ಎಂದು ನಮಗೆ ಹೇಳುತ್ತಿದ್ದ. ಅದೇ ರೀತಿ ಪೂಜೆಗೆ ಕುಳಿತುಕೊಳ್ಳುವ ಭಂಗಿ ಇಂದಿಗೂ ಅವನಲ್ಲಿ ಉಳಿದಿದೆ.

ಯಲುವಿಗಿ ಟ್ರೇನ್ ಎಕ್ಸಿಡೆಂಟ್‌ನಲ್ಲಿ ಕೂದಲು ಕೊಂಕದಂತೆ ಅಜ್ಜ ಪಾರಾದುದು ದೇವರು ನಮ್ಮ ಮೇಲಿರಿಸಿದ ಅಪಾರ ಕರುಣೆ. ೧೯೬೯ ರಲ್ಲಿ ವಿಶ್ವಹಿಂದೂ ಪರಿಷತ್‌ನ ಸಮ್ಮೇಳನಕ್ಕೆ ನಾನೂ, ಅಜ್ಜನವರೊಂದಿಗೆ ಹೋಗಿದ್ದೆ. ಉಡುಪಿಯಲ್ಲಿ ಊಟಕ್ಕೆ ಕುಳಿತುಕೊಂಡಾಗ ಅಜ್ಜ ಬದಿಗೆ ಕುಳಿತವರೊಂದಿಗೆ ಹೇಳುತ್ತಿದ್ದರು : "ನಮ್ಮ ಹುಡುಗಗ ಎಕ್ಸಿಡೆಂಟ್ ಆಗೇತ್ರಿ, ತಾರ ಬಂತು" ಎಂದು. "ಯಾರಿಗರಿ ಅಜ್ಜಾರ" ಎಂದು ನಾನು ಕೇಳಿದೆ. "ದಾದಾಗಽಪ್ಪಾಽಽ ಪಾಽಪಽಽ k.m.c ಗೆ ಹಾಕ್ಯಾರಂತ. ಕಾಲು ಫ್ರ್ಯಾಕ್ಚರ ಆಗೇತಂತ, ಶಿವಯೋಗಿ ಕಾಽದಾಽಽನ" ಎಂದರು. ಕಷ್ಟಗಳಿಗೆ ಕುಗ್ಗದೇ ಸುಖಕ್ಕೆ ಹಿಗ್ಗದೇ ಎಲ್ಲವೂ ಶಿವಯೋಗಿಯ ಕೃಪೆ ಎನ್ನುವುದು ಅಜ್ಜನವರ ಅಚಲ ನಂಬಿಕೆ. ಸಮಸ್ಯೆಗಳು ಬಂದಾಗ "ಅವು ಯಾಕ ಬಂದವು ಎಂದು ಕೊರಗುವುದಕ್ಕಿಂತ ಅವನ್ನು ಹೇಗೆ ಬಿಡಿಸಬೇಕು ಎಂದು ವಿಚಾರ ಮಾಡಬೇಕು" ಎನ್ನುವ ಅಜ್ಜನವರು ಪರಿಚಯದವರ, ಸಂಬಂಧಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಆಸ್ತಿ ವಿಕ್ರಯಕ್ಕೂ ಹೋಗಿದ್ದಾರೆ. ಕನ್ಯಾ ನೋಡಲು, ಮದುವೆ_ಮಾತುಕತೆಗಳಿಗೂ ಇವರು ಬೇಕೇ ಬೇಕು.

ಮನೆಗೆ ಹಿರಿಯರಾದ ಅವರೆಂದೂ ಸರ್ವಾಧಿಕಾರಿಯಾಗಿಲ್ಲ. ಎಲ್ಲರ ಅಭಿಪ್ರಾಯಗಳನ್ನೂ ತಿಳಿದುಕೊಳ್ಳುತ್ತಾರೆ. ನನ್ನನ್ನು ಕಾಲೇಜಿಗೆ ಕಳಿಸಲು ಅವರಿಗೆ ಇಷ್ಟವಿರಲಿಲ್ಲ. ಆದರೆ ನಮ್ಮ ತಂದೆ–ತಾಯಿಗಳಿಗೆ ಕಳಿಸುವ ಇಚ್ಛೆ ಇದ್ದುದರಿಂದ ತಾವೇ ಆ್ಯಡ್ಮಿಶನ್ ಮಾಡಿಸಿದರು. ನಾವು ಐದೂ ಜನರನ್ನು ಇಂಗ್ಲೀಷ್ ಮಿಡಿಯಂ ಸ್ಕೂಲಿಗೆ ಸೇರಿಸುವ ಆಶೆ ನಮ್ಮ ಕಾಕಾಗಳಿಗೆಲ್ಲ. ಅಜ್ಜನವರಿಗೆ ಕನ್ನಡದ ಅಭಿಮಾನ ಜಾಸ್ತಿ. ನಾನು ಒಂದು ಪರೀಕ್ಷೆ ಮುಗಿಸಿ ಬಂದೆ. "ಇವತ್ತ ಯಾವ ಪೇಪರ ಇತ್ತವಾಽಽ" ಎಂದು ಕೇಳಿದರು ನಾನು, 'ಕನ್ನಡಾ ಇತ್ತರಿ' ಎಂದೆ. "ಹಂಗೆಲ್ಲಾ ಹೇಳಬಾರದು ಕನ್ನಡದ ಬಗೆಗೆ ಸೇರಿಕಿಲ್ಲದ ಮಂದಿ ಹಂಗ ಕೆಡಿಸಿ ಅಂತಾರ." "ಕನ್ನಡ" ಅನ್ನಬೇಕು ಎಂದು ತಿಳಿಸಿಹೇಳುತ್ತಿದ್ದರು.

ನಾವೆಲ್ಲಾ ವಿದ್ಯಾಗಿರಿ ಮನೆಗೆ ಹೋದಾಗ ಅಜ್ಜನವಲ್ಲದೇ ನಮಗೆ ಯಾರದೋ ಜೊತೆ ಬೇರೆಯವರ ಮನೆಯಲ್ಲಿ ಇದ್ದಂತೆ ಅನಿಸುತ್ತಿತ್ತು. ನಂತರ ನನ್ನದೂ

ರಾಜಕ್ಕನದೂ ಮದುವೆ ಆಯಿತು. ೧೯೮೩ ರಲ್ಲಿ ಧರ್ಮಸ್ಥಳದಲ್ಲಿ ನಡೆದ ವಿಶ್ವ ಹಿಂದೂ ಪರಿಷತ್‌ಗೆ ಅಜ್ಜನವರು ನನ್ನನ್ನೂ ಕರೆದೊಯ್ದರು. ಆಗ ಅಜ್ಜನವರು ವಿಶ್ವಹಿಂದೂ ಪರಿಷತ್ತಿನ ಅಧ್ಯಕ್ಷರಾಗಿದ್ದರು. ನಾನು ಗರ್ಭಿಣಿ ಇದ್ದಾಗ ಹಳೆಯ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಸಾಂತ್ವನದ ಮಾತಾಡುತ್ತಿದ್ದರು. ಸ್ನಾನಕ್ಕೆ ನೀರನ್ನೂ ಸಹ ತೋಡಿ ಇಟ್ಟಿರುತ್ತಿದ್ದರು. ಆಗ ನಮ್ಮ ಅಜ್ಜಿ, "ಅಡಿವೆಪ್ಪಜ್ಜ ತನ್ನ ಮಗಳಿಗೆ ಹಿಂಗ ನೀರ ತೋಡಿ ಇಡುತ್ತಿದ್ದ" ನೋಡು ಎಂದರು. ನಮ್ಮಜ್ಜ ತಮಗೆ ಮಗಳಿಲ್ಲವೆಂದು ಕೊರಗಿದವರೂ ಅಲ್ಲ, ಹಾಗೆಂದು ಹೇಳುವುದೂ ಇಲ್ಲ. ನಮಗೆ ಅಪಾರ ಪ್ರೀತಿ ತೋರಿಸಿದ್ದಾರೆ. ಈಗಲೂ ನನ್ನ-ನನ್ನ ತಂಗಿಯ ಸ್ಕೂಲಿನ ಗೆಳತಿಯರೆಲ್ಲಾ ಅಜ್ಜಾರನ್ನು ಮಾತಾಡಿಸುತ್ತಾರೆ, ಅಷ್ಟೇ ಪ್ರೀತಿಯಿಂದ ಅಜ್ಜಾರೂ ಮಾತಾಡಿಸುತ್ತಾರೆ. ಪ್ರೀತಿಯ ಅಜ್ಜನಾಗಿದ್ದ ನಮ್ಮ ಅಜ್ಜನವರು ಈಗ ಮುತ್ತಜ್ಜನೂ ಆಗುವವರಿದ್ದಾರೆ. ಈ ವರ್ಷ ನಮ್ಮ ಮನೆಯಲ್ಲಿ ಉತ್ಸವಗಳು ಸಾಲು ಹಿಡಿದಿವೆ. ಮುತ್ತಜ್ಜಿಗೆ ಶತಮಾನೋತ್ಸವ, ಅಜ್ಜನ ಅಮೃತಮಹೋತ್ಸವ, ಅಮ್ಮನ ಷಷ್ಠ್ಯಬ್ದಿ, ನನ್ನ ತಂಗಿಗೆ ಪುತ್ರೋತ್ಸವ, ಈ ಶುಭ ಸಂದರ್ಭ ಹೀಗೆಯೇ ಅನವರತ ನಮ್ಮ ಮನೆಯಲ್ಲಿ ಜರುಗಲಿ ಎಂಬುದು ನನ್ನ ಅಭಿಲಾಷೆ.

ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಲ್ಲ.

ಕೊಟ್ಟಣದ ಸೋಮಮ್ಮೆಯ ವಚನ

ದುರುಳಜನಸಂಗವೆಂಬುದು ಎಂದಿಗೂ ನೊಣ ಬೆರಸಿದ ಊಟ

ಶ್ರೀ ವಿಜಯದಾಸರು

ಕಾಯಕಯೋಗಿ



● ಡಾ. ನಿತಿನ್‌ಚಂದ್ರ ಹತ್ತೀಕಾಳ

೧೯೪೫ರಲ್ಲಿ ಜಪಾನದ ಹಿರೋಶಿಮವನ್ನು ನಾಶ ಮಾಡಿದ ಅಸ್ತ್ರದೊಂದಿಗೆ ಇತ್ತೀಚಿನ ಆಧುನಿಕ ಅಸ್ತ್ರಗಳನ್ನು ಹೋಲಿಸಿದರೆ, ಮಾರಕಶಕ್ತಿಯ ದೃಷ್ಟಿಯಿಂದ ಕೆಲವೊಂದು ರಾಷ್ಟ್ರಗಳು ಯಾವ ದಿಶೆಯಲ್ಲಿ ಮುಂದುವರೆದಿವೆ ಎಂಬುದು ಸ್ಪಷ್ಟವಾಗುವದು. ಜನರಲ್ಲಿ ಪರಸ್ಪರ ಮತ್ತು ಸಾಮಾಜಿಕ ಹಿತಚಿಂತನೆಯ ಪ್ರವೃತ್ತಿ ಕುಸಿದಿದೆ. ಎಲ್ಲೆಡೆ ದುಷ್ಟ ಪ್ರವೃತ್ತಿ ಹೆಡೆ ಎತ್ತಿ ನಿಂತಿದೆ.

ಇಂಥದರಲ್ಲಿಯೂ ಮನುಷ್ಯನ ಸತ್‌ಪ್ರವೃತ್ತಿಗೆ ಸಾಕ್ಷಿಯಾಗಿ ದುಡಿಯುವ ಸಂಘಟಿತ ಸಂಸ್ಥೆಗಳೂ ಇಲ್ಲದಿಲ್ಲ. ಮಠಗಳ ಮುಖಾಂತರ ವಿದ್ಯಾದಾನ, ಒಳ್ಳೆಯ ಪುಸ್ತಕಗಳ ಪ್ರಕಾಶನ ಮತ್ತು ಪ್ರಚಾರ ಅಲ್ಲದೇ ಅನ್ನದಾನಗೈಯುವ ಸ್ವಾಮಿಗಳು ಅಲ್ಲಲ್ಲಿ ಇದ್ದಾರೆ. ತಮ್ಮ ಸ್ವಂತ ಸುಖ, ವಿಶ್ರಾಂತಿಯನ್ನು ಬದಿಗೊತ್ತಿ ರೋಗಿಗಳ ಸೇವೆಯಲ್ಲಿ, ಪರಜನ ಹಿತದಲ್ಲಿ ನಿರತರಾದ ಕೆಲವು ಡಾಕ್ಟರರನ್ನೂ ಕಾಣುತ್ತೇವೆ.

ಸಮಾಜಕ್ಕುಪಕಾರಿಯಾಗಿ, ಹಸಿದ ಜನರಿಗೆ ಅನ್ನ ನೀಡುವ, ಶ್ರೇಷ್ಠ, ನೈತಿಕ, ಆಧ್ಯಾತ್ಮಿಕ ಜೀವನಕ್ಕೆ ಪ್ರೋತ್ಸಾಹ ಕೊಡುವ ಕೆಲ ಜನರೂ ಇಲ್ಲದಿಲ್ಲ. ವ್ಯಾಪಾರೋದ್ದಿಮೆಯೇ ತಮ್ಮ ಕಸುಬಾದರೂ ಆಧ್ಯಾತ್ಮಿಕ ಸಾಧನೆ ಮತ್ತು ಧರ್ಮಕಾರ್ಯಗಳಿಗೆ ಒತ್ತುಕೊಟ್ಟು "ಕಾಯಕವೇ ಕೈಲಾಸ" ಎಂದು ನಂಬಿ ಬಾಳುವ ಹಲವು ವ್ಯಾಪಾರಸ್ಥರನ್ನೂ ಕಾಣುತ್ತೇವೆ.

ಇಂಥವರಲ್ಲೊಬ್ಬರು ನಮ್ಮ ದೊಡ್ಡಮಾವ ಶ್ರೀ ಗುರುಪುತ್ರಪ್ಪನವರ ದೊಡವಾಡ. ರಕ್ತಸಂಬಂಧಕ್ಕಿಂತಲೂ ಸದ್ಗುಣ ಸದಾಚಾರಗಳ ಸಂಬಂಧ ಅಥವ ನಡೆಕೊಳ್ಳುವಿಕೆ ಮೇಲ್ಮಟ್ಟದ್ದು. ಈ ದೃಷ್ಟಿಯಿಂದಲಂತೂ ಇವರು ನನಗೆ ಇನ್ನೂ ಹತ್ತಿರದ ಸಂಬಂಧಿ.

ನಾನು ೮-೯ನೇ ಕ್ಲಾಸಿನಲ್ಲಿ ಓದುತ್ತಿದ್ದಾಗಿನಿಂದಲೂ ಗುರುಪುತ್ರಪ್ಪ ಮಾವನವರು ಮಾಡುವ ಪೂಜೆ ಪುನಸ್ಕಾರಗಳ ಬಗ್ಗೆ, ಮುರುಘಾಮಠಕ್ಕೆ ಭಕ್ತಿಯಿಂದ ನಡೆದುಕೊಳ್ಳುವ ಬಗ್ಗೆ, ಸದ್ಗ್ರಂಥಗಳ ಪಠಣದಲ್ಲಿ ಸಮಯದ ಸದ್ವಿನಿಯೋಗದ ಬಗ್ಗೆ ನನಗೆ ಮಾಹಿತಿ ಇದೆ, ನೆನಪಿದೆ.

"ಗುರುಪುತ್ರಪ್ಪ"ನವರ ಮತ್ತು ಅವರ ಪುತ್ರರತ್ನ ಎಂದು ನಿರರ್ಗಳವಾಗಿ ಹೇಳಬಹುದಾದ ಹಿರಿಯ ಮಗ "ಸರಸಾನಂದ"—ಇವರಿಬ್ಬರ ಜೀವನ ರೀತಿನೀತಿಗಳು ನನ್ನ ಅಧ್ಯಾತ್ಮಿಕ ಮತ್ತು ವೈದ್ಯಕೀಯ ಜೀವನದ ಮೇಲೆ ವಿಶೇಷ ಪ್ರಭಾವ ಬೀರಿವೆ.

ಸ್ವಾಮಿ ಚಿದಾನಂದ ಅವರು ತಪೋವನಕ್ಕೆ ಬಂದಾಗ ಹೇಳಿದ ಮಾತುಗಳು ನನಗೆ ಬಹಳೇ ನೆನಪುಳಿದಿವೆ. "ಪ್ರತಿಯೊಂದು ವ್ಯಕ್ತಿಯನ್ನು, ಪ್ರತಿಯೊಂದು ರಾಷ್ಟ್ರವನ್ನು ಮಹತ್ವಿಕೆಗೇರಿಸಲು ಮೂರು ಸಂಗತಿಗಳು ಬೇಕು. ಒಂದು – ಒಳಿತಿನ ಶಕ್ತಿಯಲ್ಲಿ ಅಚಲ ವಿಶ್ವಾಸ; ಎರಡು – ಸಂಶಯ, ಅಸೂಯೆಗಳ ಅಭಾವ, ಮತ್ತು ಮೂರು – ತಾವು ಒಳ್ಳೆಯವರಾಗಲು ಯತ್ನಿಸುತ್ತ, ಇತರರಿಗೆ ಒಳಿತನ್ನು ಮಾಡಲೆತ್ನಿಸುವ, ಎಲ್ಲರಿಗೂ ಸಹಾಯ ಮಾಡುವ ಪ್ರವೃತ್ತಿ." ಈ ಮೇಲಿನ ವಾಕ್ಯಗಳಿಗೆ ಅನುಗುಣವಾಗಿ ನಡೆದುಕೊಂಡಿದ್ದಾರೆ ಗುರುಪುತ್ರಪ್ಪನವರು.

ನಿಜವಾಗಿಯೂ ನಾವು ಹಿರಿಯರಿಂದ ಕಲಿಯಬೇಕಾದುದು ಎಷ್ಟೋ ಇದೆ. ಕಾರಣ–ಅವರಿಗಿರುವ ಅನುಭವ. ಕಲಿಯಲು ಒಪ್ಪದವನು ಸತ್ತಂತೆ. ಒಳಿತಾದುದೆಲ್ಲವನ್ನೂ ಇತರರಿಂದ ಕಲಿಯಬೇಕು. ಆದರೆ, ನಮ್ಮದೇ ಆದ ರೀತಿಯಲ್ಲಿ ಅದನ್ನು ಸ್ವೀಕರಿಸಿ ಅರಗಿಸಿಕೊಳ್ಳಬೇಕು. ನಾವು ಇತರರಾಗಬಾರದು, ನಾವು ನಾವೇ ಆಗಬೇಕು. ನಾನು ಮಾವನವರಿಂದ ಕಲಿತ ಪಾಠ ಇದು.

ಗುರುಪುತ್ರಪ್ಪ ಮಾವನವರ ಮಾತು ಮತ್ತು ವಿಚಾರಗಳಲ್ಲಿ ನಾನು ಹೆಚ್ಚಾಗಿ ಒಳ್ಳೆಯದನ್ನೇ ಕೇಳಿದ್ದೇನೆ ಇನ್ನೊಬ್ಬರನ್ನು ನಿಂದಿಸಿ ನುಡಿಯುವದಾಗಲೀ ಅಥವಾ ಅವರಲ್ಲಿಯ ನ್ಯೂನತೆ, ದುರ್ಗುಣಗಳ ಬಗ್ಗೆ ಮಾತನಾಡುವದಾಗಲೀ ನಾನು ಕೇಳಿಲ್ಲ. ಸ್ವಾಮಿ ವಿವೇಕಾನಂದರು ಹೇಳಿದಂತೆ—Doing is very good, but that comes from thinking. Fill the brain therefore with high thoughts, highest ideals; place them day & night before you and out of that will come great work. ನಮ್ಮ ವಿಚಾರಗಳು ಚೆನ್ನಾಗಿದ್ದಲ್ಲಿ ಒಳ್ಳೆಯ ಕೃತಿಗಳು ಅಂಕುರಿಸುವ ಸಾಧ್ಯತೆಗಳೇ ಹೆಚ್ಚು.

ಮಾವನವರಿಗೆ ಬಡಜನರ ಬಗ್ಗೆ ಇರುವ ಅಂತಃಕರಣ ಸಹ ಮೆಚ್ಚುವಂತಾದ್ದು. ಬಡಜನರ ದುಃಖ ಸಂಕಟಗಳನ್ನು ದೂರಮಾಡಲು ಪ್ರತಿಯೊಬ್ಬರೂ ತಮ್ಮ

ಕೈಲಾದುದನ್ನು ಮಾಡಬೇಕು. ಬದುಕು ಬರಿ ಬಳಲುವುದಕ್ಕಲ್ಲ. ಸಾರ್ಥಕ ಆನಂದ ಮಯ ಜೀವನ ಸಾಗಿಸುವುದಕ್ಕೆ ಎಂಬುದನ್ನು ಎಲ್ಲರೂ ಮನಗಾಣಬೇಕು. ಈ ನಿಟ್ಟಿನಲ್ಲಿ ಗುರುಪುತ್ರಪ್ಪ ಮತ್ತು ಸರಸಾನಂದ ಮಾವನವರು ಜೀವನ ಸಾರ್ಥಕ್ಯ ಪಡೆದಿದ್ದಾರೆ ಎಂದು ನನ್ನ ಅನಿಸಿಕೆ.


ಆಗಿಹೋದ ಲೆಕ್ಕವಿಲ್ಲದಷ್ಟು ಶರಣರಂತೆ ಈ ಇಬ್ಬರೂ ಆ ಪರಮಾತ್ಮನ ಅಸ್ತಿತ್ವವನ್ನು ಅನುಭವಿಸಿ, ಆ ಅನುಭವವನ್ನು ತಮ್ಮ ಜೀವನ ಮತ್ತು ಚಾರಿತ್ರ್ಯದ ಮೂಲಕ ತೋರಿಸಿಕೊಟ್ಟಿದ್ದಾರೆ. ಪರಮಾತ್ಮನಲ್ಲಿ ಶ್ರದ್ಧೆಯನ್ನು ಇರಿಸಿಕೊಂಡವರಾಗಿದ್ದಾರೆ.

ಸದ್ಗುಣಗಳನ್ನು ಕಲಿಹಾಕಿ ಆಚರಣೆಯಲ್ಲಿ ತರಬಯಸುವ ತರುಣರಿಗೆ ಆದರ್ಶಪ್ರಾಯರಾಗಿದ್ದಾರೆ. ದೇವರಲ್ಲಿ ಅಚಲ ನಂಬಿಕೆ, ಪ್ರೀತಿ, ತ್ಯಾಗ, ಸೇವೆ ಮುಂತಾದವುಗಳು ಕೇವಲ ಭಾಷಣಕ್ಕೆ ಉಪಯೋಗಿಸುವ ಶಬ್ದಗಳು ಎಂದು ತಿಳಿದವರಿಗೆ ಇವರು ಸವಾಲಾಗಿದ್ದಾರೆ.

ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರು
ಅಕ್ಕಮಹಾದೇವಿಯ ವಚನ

ಹದ ಮಣ್ಣಲ್ಲದೆ ಮಡಿಕೆಯಾಗದು
ವ್ರತಹೀನನ ಬೆರೆಯಲಾಗದು.
ಕೇತಲದೇವಿಯ ವಚನ

ಸೋದರಮಾವ



● ಡಾ. ಸುಖಪೂರ್ಣ ಸಂಕನಗೌಡರ

'ಹೆತ್ತ ತಾಯಿಯ ಅರ್ಧಭಾಗ ಸೋದರಮಾವ' ಎಂಬುದು ನಮ್ಮ ಪ್ರಾಚೀನರ ನಂಬಿಕೆ. ತಾಯಿಯ ಮಮತೆ, ಪ್ರೀತಿ ವಾತ್ಸಲ್ಯಗಳ ಇನ್ನೊಂದು ಮುಖವನ್ನು ಕಂಡಿದ್ದು ನಮ್ಮ ಸೋದರಮಾವ ಶ್ರೀ ಗುರುಪುತ್ರಪ್ಪ ದೊಡಮಾಡ ರಲ್ಲಿ. ನನ್ನ ವಿದ್ಯಾಭ್ಯಾಸದ ಅಧಿಕ ಅವಧಿ ಕಳೆದುದು ನನ್ನ ಮಾವನ ಮನೆಯಲ್ಲಿ. ಶಾಲೆಯಲ್ಲಿ ಗುರುಗಳಿಂದ ಕಲಿತ ಜ್ಞಾನ ಒಂದು ಮುಖವಾದರೆ, ಸೋದರಮಾವ ನಿಂದ ನಾನು ಮನೆಯಲ್ಲಿ ಕಲಿತ ಜ್ಞಾನ ಇನ್ನೊಂದು ಮುಖ, ನನ್ನ ಪಾಠದಲ್ಲಿ, ಪಠ್ಯದಲ್ಲಿ, ನನ್ನ ಬದುಕಿನ ಸರ್ವತೋಮುಖ ಬೆಳವಣಿಗೆಯಲ್ಲಿ ನನಗೆ ಸಹಕಾರ ನೀಡಿದವರು ನನ್ನ ಮಾವ. ಅವರ ಸಹಾಯ ಸಹಕಾರದ ಪ್ರತಿಫಲವೇ ನಾನಿಂದು ಮೆಡಿಕಲ್ ಆಫೀಸರ್ ಆಗಿ ಪ್ರಾಮಾಣಿಕ ಸೇವೆ ಸಲ್ಲಿಸಲು ಸಹಕಾರಿಯಾದುದು.

ಮಾವನವರಿಂದ ನಾನು ಕಲಿತ ಉತ್ತಮ ಪಾಠವೆಂದರೆ ಸ್ವಂತ ಪರಿಶ್ರಮದ ಮೇಲೆ ಜೀವನ ರೂಪಿಸಿಕೊಳ್ಳುವ ರೀತಿ. ನೈತಿಕ ಶುಚಿ, ಪ್ರಾಮಾಣಿಕತೆ, ಸತತ ದುಡಿಮೆ, ಆತ್ಮವಿಶ್ವಾಸ ಮಾವನವರಿಂದ ನನ್ನ ಜೀವನಕ್ಕೆ ದೊರೆತ ಉತ್ತಮ ಮಾರ್ಗಗಳು. ಮಾವ ಅಂದು ಹಾಕಿಕೊಟ್ಟ ಮನೋಧೈರ್ಯ ಅವರ ಸೂಕ್ತ ಮಾರ್ಗ ದರ್ಶನ ಇಂದು ನನ್ನನ್ನು ಒಬ್ಬ ಮನುಷ್ಯನನ್ನಾಗಿ ಮಾಡಿದೆ. ತುಂಬು ಬಳಗದಲ್ಲಿ ಹುಟ್ಟಿದ ನನಗಾಗಲಿ, ನನ್ನ ಬಂಧುಬಾಂಧವರಿಗಾಗಲಿ ನಮ್ಮ ಸೋದರಮಾವರ ದಾರಿಯೇ ದಾರಿ. ಇವರ ರೀತಿ ನೀತಿಗಳೇ ನಮಗಿಂದು ಮಾರ್ಗದರ್ಶಕವೆನಿಸಿವೆ. ಅವರೊಬ್ಬ ನಮ್ಮ ಮನೆತನದ ಗುರುರೂಪದ ವ್ಯಕ್ತಿಯೆನಿಸಿದ್ದಾರೆ.

ದಿನನಿತ್ಯ ಎದ್ದು ದೇವರ ಫೋಟೋ ನೋಡುವಾಗ ದೇವರ ನೆನಪಿ ನೊಂದಿಗೆ ನನ್ನ ಮನದಲ್ಲಿ ಮೂಡುವ ಇನ್ನೊಂದೂ ನೆನಪು ನನ್ನ ಸೋದರಮಾವರದು-

ಅಂಥವರ ಅಮೃತಮಹೋತ್ಸವ ಆಚರಿಸುತ್ತಿರುವ ಈ ಶುಭಸಂದರ್ಭದಲ್ಲಿ ಅವರು ಇನ್ನೂ ಅಧಿಕ ಕಾಲ ಆಯುರಾರೋಗ್ಯದಿಂದ ಬಾಳಲಿ, ಅವರಿಂದ ನಮ್ಮ ಮನೆತನಕ್ಕಷ್ಟೇ ಅಲ್ಲ, ನಾಡಿನ ಹಲವು ರಂಗಗಳ ಬೆಳವಣಿಗೆಗೆ ಅಧಿಕ ನೆರವು ಸಿಗಲಿ, ಅವರ ಮಾರ್ಗದರ್ಶನದಿಂದ ನಾವೆಲ್ಲ ನಮ್ಮ ಬದುಕನ್ನು ಇನ್ನೂ ತಿದ್ದಿಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ.

●

ಕೈತಪ್ಪಿ ಕೆತ್ತಲು ಕಾಲಿಗೆ ಮೂಲ
ಮಾತ ತಪ್ಪಿ ನುಡಿಯಲು ಬಾಯಿಗೆ ಮೂಲ
ಬಾಚಿಕಾಯಕದ ಬಸವಣ್ಣಗಳ ಧರ್ಮಾಂಗನೆಯ ವಚನ

ತಲೆಗೆ ಮೂರು ಚಿಪ್ಪು, ಅಂಗಕ್ಕೆ ಆರು ಚಿಪ್ಪು
ಮಿಕ್ಕಾದ ಸರ್ವಾಂಗಕ್ಕೆಲ್ಲಕ್ಕೂ ಒಂದೆ ಚಿಪ್ಪಿನ ಕಂಪ್ಪಸ
ಸೂಜಿಕಾಯಕದ ರಾಮಿತಂದೆಗಳ ವಚನ

ಆದರ್ಶ ಗೃಹಸ್ಥ



● ಬಿ. ಎಸ್. ಲಕಮನಹಳ್ಳಿ

ಶ್ರೀಮಾನ್ ಗುರುಪುತ್ರಪ್ಪನವರು ದೊಡವಾಡ ಅವರನ್ನು ನಾನು ಕಳೆದ ಮೂರ್ನಾಲ್ಕು ದಶಕಗಳಿಂದಲೂ ಚೆನ್ನಾಗಿ ಬಲ್ಲೆ. ಅವರು ಧಾರವಾಡದ ದೊಡ್ಡ ವರ್ತಕರು. ಆದರಂತೆ ಆದರ್ಶ ಗೃಹಸ್ಥರೂ ಹೌದು. ಅವರು ಇಲ್ಲಿ ಅಡತಿ ಅಂಗಡಿಯನ್ನು ಪ್ರಾರಂಭಿಸಿದ ಮೊದಲ ದಿನಗಳಲ್ಲಿ ಅವರೊಡನೆ ನನಗೆ ಹೆಚ್ಚಿನ ಸಂಪರ್ಕ ಬಂದಿತು. ಅವರು ಶ್ರೀ ಮುರುಘಾಮಠಕ್ಕೆ ಮೇಲಿಂದ ಮೇಲೆ ಬರುತ್ತಿದ್ದರು. ಪರಮಪೂಜ್ಯರಾದ ಮೃತ್ಯುಂಜಯ ಅಪ್ಪಗಳ ಬಗ್ಗೆ ಹಾಗೂ ಪೂಜ್ಯರಾದ ಮಹಾಂತ ಅಪ್ಪಗಳ ಬಗೆಗೆ ಅವರಿಗಿರುವ ಆದರ ಗೌರವ ಭಕ್ತಿಗಳು ಅಪಾರ. ಅವರ ಸಜ್ಜನಿಕೆ, ನಯವಿನಯ, ಸೇವಾ ಮನೋಭಾವನೆಗಳು ಅವರನ್ನು ದೊಡ್ಡ ವ್ಯಕ್ತಿಯನ್ನಾಗಿ ಮಾಡಿವೆ. ಅವರಲ್ಲಿ ಶ್ರೀಮಂತಿಕೆ ಗರ್ವ ಎಳ್ಳಿನಿತಿಲ್ಲ. ಹೀಗಾಗಿ ಶ್ರೀ ಮುರುಘಾಮಠದ ಬಳಗದಲ್ಲಿ ಅವರು ಸಹಜವಾಗಿ ಒಬ್ಬರಾಗಿ ಹೋಗಿದ್ದಾರೆ.

ಶ್ರೀ ಮುರುಘಾಮಠದ ಟ್ರಸ್ಟ ಕಮೀಟಿಯ ಚೇರಮನ್ನನಾಗಿ ನಾನು ಹೊಣೆಗಾರಿಕೆಯನ್ನು ಹೊತ್ತುಕೊಂಡಾಗ ಶ್ರೀಮಾನ್ ಗುರುಪುತ್ರಪ್ಪನವರು ನನ್ನ ಬೆಂಗಾವಲಾಗಿ ನಿಂತಿದ್ದಾರೆ. ಕಮಿಟಿಯ ಸದಸ್ಯರಲ್ಲಿ ಒಬ್ಬರಾಗಿ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತ ಬಂದಿರುವರು.

ಶ್ರೀಮಾನ್ ಗುರುಪುತ್ರಪ್ಪನವರು ವ್ಯಾಪಾರೋದ್ಯಮದಲ್ಲಿ ತುಂಬಾ ಜಾಣರು. ಮುಂಧೋರಣೆಯುಳ್ಳವರು. ಅವರು ಸ್ವಂತ ಬುದ್ಧಿವಂತಿಕೆಯಿಂದಲೂ ಸತತ ಪರಿಶ್ರಮದಿಂದಲೂ ತಮ್ಮ ವಹಿವಾಟನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿಕೊಂಡು ಬಂದಿರುವರು. ಅವರಂಥ ನಿಗರ್ವಿ, ಪರೋಪಕಾರಿ ಜೀವಿಗಳು ಇಂದಿನ ಸಮಾಜದಲ್ಲಿ ವಿರಳವಾಗಿ ದೊರೆಯುತ್ತಾರೆ. ಅವರು ಒಳ್ಳೆಯ ಪರೋಪಕಾರಿ ಜೀವಿಗಳಾಗಿದ್ದು

ತಮ್ಮೊಡನೆ ಅನೇಕ ವ್ಯಾಪಾರೀ ಬಾಂಧವರನ್ನು ಮುಂದೆ ತಂದಿರುವರು. ಅವರು ಶ್ರೀ ಮುರುಘಾಮಠಕ್ಕೆ ಧನಸಹಾಯ ಮಾಡಿರುವರಲ್ಲದೆ ಅನೇಕ ರೀತಿಯಿಂದ ಮನಸಾ ದಂಡಿದು ಸೇವೆ ಸಲ್ಲಿಸುತ್ತಿರುವರು.

ಇಂಥ ಸಜ್ಜನರೂ ಸಮಾಜಜೀವಿಗಳೂ ಶ್ರೀಮಂತರೂ ಉದಾರಿಗಳೂ ಆದ ಶ್ರೀಮಾನ್ ಗುರುಪುತ್ರಪ್ಪನವರ ಅಮೃತಮಹೋತ್ಸವವನ್ನು ಮಾಡುವದು ಅತ್ಯವಶ್ಯವಾಗಿದೆಯೆಂದು ಬಹಳ ದಿನಗಳಿಂದಲೂ ನನ್ನ ಮನದಲ್ಲಿ ಜಾಗೃತವಾಗಿಯೇ ಇತ್ತು. ಅದಕ್ಕೆ ಪರಮಪೂಜ್ಯರಾದ ಮಹಾಂತಪ್ಪಗಳ ಅಪ್ಪಣೆಯೂ ಆಯಿತು. ಆದ್ದರಿಂದ ಶ್ರೀಮಾನ್ ಗುರುಪುತ್ರಪ್ಪನವರ ಮನವೊಲಿಸಿ ಈ ಕಾರ್ಯಕ್ಕೆ ನಾನೇ ಮುಂದಾಗಿ ನಗರದ ಪ್ರಮುಖರ ಒಂದು ಸಭೆಯನ್ನು ಸೇರಿಸಿ ಪ್ರಸ್ತಾಪಮಾಡಿದೆ. ಎಲ್ಲರಿಗೂ ಇದು ಒಂದು ಆತ್ಮಾನಂದದ ಹಾಗೂ ಅಭಿಮಾನದ ಸಂಗತಿಯಾಗಿ ಪರಿಣಮಿಸಿತು. ಆ ದಿಶೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುನ್ನಡೆಯಲಾಯಿತು.

ಶ್ರೀಮಾನ್ ಗುರುಪುತ್ರಪ್ಪನವರಂಥ ಒಳ್ಳೆಯ ಹಾಗೂ ದೊಡ್ಡ ಮನುಷ್ಯರು ಇಂದಿನ ಸಮಾಜದಲ್ಲಿ ಸೇವಾಪ್ರವೃತ್ತರಾಗಿರುವದು ತೀರಾ ಅಗತ್ಯವಿದೆ. ಅವರ ಸೇವೆ ಮಾರ್ಗದರ್ಶನ ಎಲ್ಲರಿಗೂ ಬೇಕು. ಅವರು ಉತ್ತಮವಾದ ಆರೋಗ್ಯದೊಂದಿಗೆ ದೀರ್ಘಾಯುಷ್ಯ ಹೊಂದಿ ಇನ್ನೂ ಹೆಚ್ಚು ಹೆಚ್ಚಿನ ಸೇವೆಯನ್ನು ಸಮಾಜವು ಪಡೆಯುವಂತಾಗಲಿಯೆಂದು ನಾನು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿಕೊಳ್ಳುವೆ.

ಸದಾಚಾರ ಹಾ ಥೋರ ಸಾಂಡೂನಯೇ ತೋ
ಜನೀ ತೋಚಿ ತೋ ಮಾನವೀ ಧನ್ಯ ಹೋತೋ

ಸಮರ್ಥ ರಾಮದಾಸಸ್ವಾಮಿ



ಅನ್ವರ್ಥಕನಾಮ

● ಆರ್. ಬಿ. ಜಾಧವ

ಒಂದು ಬದಿಯಿಂದ ಉದ್ದುದ್ದ ಹಬ್ಬಿದೆ ಹೊಸಬಡಾವಣೆ, ಮತ್ತೊಂದು ಬದಿಯಲ್ಲಿ ಇದ್ದಲ್ಲಿಂದ ಎದ್ದಿವೆ ಹಳೆ ಛಾವಣಿ. ನಡುವೆ ಹಾಯ್ದಿದೆ ರಾಷ್ಟ್ರೀಯ ಹೆದ್ದಾರಿ. ಇದಕ್ಕೆ ಹತ್ತಿದ ಮರಾಠಾ ಕಾಲನಿ ರಹದಾರಿಯ ಕೊನೆಯ ಏರಿ ಇಳಿಯುವಾಗ ಮುಂಜಾನೆ ಎದುರಿಗೆ ಸೂರ್ಯನಮಾರಿ. ಬಲಗಡೆ "ಗೌರಿಕೃಪಾ" ಬೆಲ್ಲದ ಗುರಪ್ಪನವರ ಮನೆ, ಹಳೆ-ಹೊಸಗಳ ಸಂಗಮ. ಎಡಗಡೆ "ಗುರುಪ್ರಸಾದ" ಗುರುಪುತ್ರಪ್ಪ ದೊಡವಾಡ ಅವರ ಮನೆ, ಹೊಸ-ಹಳೆಯುಗಳ ಮಿಲನ. ಎರಡೂ ನನಗೆ ದಾಸೋಹ, ಅರವಟ್ಟಿಗೆ ಇದ್ದಂತೆ. ದೊಡವಾಡರ ಮನೆಯೂ ಘನ, ಮನವೂ ಸಂಪನ್ನ, ಇದು ಸಮ್ಮಿಲನ.

ಶ್ರೀ ಗುರುಪುತ್ರಪ್ಪ ದೊಡವಾಡರ ಸ್ನೇಹ ಬೆಳೆದದ್ದು, ನನ್ನ ಆತ್ಮೀಯ ಮಿತ್ರರಾದ ಶ್ರೀ ಚಂದ್ರಕಾಂತ ಬೆಲ್ಲದವರ ಮುಖಾಂತರ. ಹಾಗೆ ನೋಡಿದರೆ ನಾವಿಬ್ಬರೂ, ಕೂಡದ ಸಮಾಂತರ ರೇಖೆಗಳು. ಸಮಾಂತರ ರೇಖೆಗಳು ಕೂಡಿದರೆ ಅಪಘಾತಗಳೇ ಹೆಚ್ಚು. "ಶಿವಪಥವನರಿವೊಡೆ ಗುರುಪಥವೆ ಮೊದಲು" ಎಂಬಂತೆ ನನ್ನ ವೃತ್ತಿ ನಿವೃತ್ತಿಯಾಗಿದ್ದರೂ, ಶ್ರೀ ದೊಡವಾಡರು ಸದಾ ವ್ಯಾಪಾರಿ ಪ್ರವೃತ್ತಿಯವರಾಗಿದ್ದರೂ, ಬಸವಪಥದಲ್ಲಿ ನಾವು ಸಹಯಾತ್ರಿಕರು, ಆದ್ದರಿಂದ ಅವರ ಸಂಗ ಶರಣರ ಸಂಗ.

ಶ್ರೀ ದೊಡವಾಡರ ಹೆಸರು, ತಂದೆಯ ಹೆಸರು, ಅಡ್ಡ ಹೆಸರು ಮೂರೂ ತ್ರಿವಿಧ ವ್ಯವಹಾರನಾಮಗಳಾಗಿರದೇ, ಅನ್ವರ್ಥಕನಾಮಗಳೆಂದು ನಾನು ಹೇಳಲೇಬೇಕಾಗಿದೆ. ಯಾಕಂದರೆ "ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ" ಹುಟ್ಟೂರು ಕರೀಕಟ್ಟಿ ಪುಟ್ಟೂರು. ಇವರದೊಂದೇ ಒಂದು ದೊಡ್ಡ ವಾಡೇ-ವಾಡೆ

ಅಂದರೆ (ಶ್ರೀಮಂತರ ಮನೆ) ಬಳಕೆಯಿಂದ ದೊಡವಾಡ ಆಗಿರಲಿಕ್ಕೆ ಸಾಕು. ತಂದೆ ಗುರುಪಾದಪ್ಪನವರು, ತಮ್ಮ ಕಾಯಕನಿಷ್ಠೆಯಿಂದ, ಜೀವನವನ್ನು ಶರಣಸಂಪ್ರದಾಯಕ್ಕೆ ಅಳವಡಿಸಿಕೊಂಡವರು. ಶಿಕ್ಷಣ ಪ್ರಸಾರವು ಸಸಾರವಿಲ್ಲದ ಕಾಲದಲ್ಲಿ ಜನಿಸಿದ ಗುರುಪುತ್ರಪ್ಪನವರಿಗೆ, ತಂದೆಯವರಾದ ಗುರುಪಾದಪ್ಪನವರೇ ಅರಿವಿನ ಗುರು. ಅದ್ದರಿಂದ, ಗುರು-ಪಿತಾ-ಪುತ್ರ ತ್ರಿಯೋಗ ತಮ್ಮ ಬಾಲ್ಯಕಾಂಡವೆಂದು, ಭಕ್ತಿಯಿಂದ ಮತ್ತು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಗುರುಪುತ್ರಪ್ಪನವರ ನೆನಪು ಅವರ ಬಾಳಿನ ಬುತ್ತಿ ಮತ್ತು ಅನುಭವಗಳ ಅಕ್ಷಯ ನಿಧಿ. ಈ ಭಂಡವಾಲದಿಂದ ಚಿಕ್ಕಂದಿನಿಂದಲೇ ಕಾಯಕದಲ್ಲಿ ನಿರತರಾಗಿ ಪ್ರಾಮಾಣಿಕ ವ್ಯಾಪಾರಿ ವೃತ್ತಿಗಿಳಿದರು. ಧಾರವಾಡದ ಶಿಕ್ಷಣ, ವಾತಾವರಣ, ಲಿಂಗಾಂಗ–ಸಮರತೆಯನ್ನೂ ದೇಹ-ಬುದ್ಧಿಗಳೆರಡರಲ್ಲೂ ಹಾಸು-ಹೊಕ್ಕಾಗಿ ಬೆಳೆಸಿಕೊಂಡು ತಮ್ಮ ಜೀವನದಲ್ಲಿ ಸಾರ್ಥಕತೆ ಪಡೆದರು. ಶ್ರೀ ಗುರುಪಾದಪ್ಪನವರಿಗೆ ಸ್ವಾಮಿಗಳೆಂದರೆ ರತ್ನತ್ರಯಗಳ ಘನಭಕ್ತಿ. ಸಮ್ಯಗ್‌ಚರಿತ್ರ, ಸಮ್ಯಗ್‌ಸೃಷ್ಟಿ, ಮತ್ತು ಸಮ್ಯಗ್‌ದರ್ಶನಗಳನ್ನು ಅವರು ಧಾರವಾಡದ ಮೃತ್ಯುಂಜಯ ಅಪ್ಪಗಳ ಸನ್ನಿಧಿಯಲ್ಲಿ ಸಂಪಾದಿಸಿದರು. ಈ ಗುರು ಮನೆ ಅವರ ಮಹಾಮನೆಯಾಯಿತು.

“ಶಂಕರನಿಗೆ ಬೇಕಾದರೆ ಶಾಂತಿ, ಹತ್ತಿರ ಬೇಕೇಬೇಕು ಪಾರ್ವತಿ” ಎಂಬಂತೆ. ಧರ್ಮಪತ್ನಿ ಶಾಂಭವಿಯಮ್ಮನವರು, ಜಡೆಯಿಂದ ಹರಿಸುವ ಗಂಗೆಯಲ್ಲದೆ, ಮನೆಯನ್ನು ಶೃಂಗರಿಸುವ ಗೌರಿಯಾದರು. ಧಾರವಾಡದ ಅರ್ಧನಾರೀ-ನಟೇಶ್ವರನ ಭೌತಿಕ ಚಿತ್ರ ಚೈತನ್ಯವನ್ನೀವ ಚಿತ್ತಗಳಿಂದ ಪುಲಕಿತರಾದ ದೊಡವಾಡರಿಗೆ ಬೇಕು, ಬೆಳವಲದ ಬೆಳಕು ಮಲೆನಾಡಿನ ಸೆಳಕು. ಶಿವದಾರದಲ್ಲಿಯ ಶಿವನ ಗಂಟು, ಜನಿವಾರದಲ್ಲಿಯ ಬ್ರಹ್ಮಗಂಟು, ಎರಡೂ ಇವರಿಗೆ ಉಡಿಯಲ್ಲಿಯ ಅಂಟು. ಸಂಬಂಧಿತ-ಮಡಿಯುವವರ ಉಡದಾರ ಗಟ್ಟಿ ಇರಲಿಕ್ಕೆ ಮೂಲ ಕಾರಣ ಇವರ ನಂಟು. ಮೂರು ವರುಷ ಸತತ ಬರಗಾಲವಿದ್ದರೂ, ಒಕ್ಕಲಿ (Producer) ದಲಾಲಿ (Trader) ಹಮಾಲಿ (Worker) ಮೂವರೂ, ಗುರು, ಲಿಂಗ, ಜಂಗಮ, ತ್ರಿವಿಧ ದಾಸೋಹದ ಅವಿಚ್ಛಿನ್ನ ಭಾಗಗಳೆಂದು ವರ್ತಿಸುತ್ತಾ ಬಂದಿದ್ದಾರೆ. ಸೃಷ್ಟಿಯ ದೃಷ್ಟಿಯಿಂದ ಅನಾವೃಷ್ಟಿಯಾದರೂ “ಸೋಹಂ ಎನ್ನದೆ ದಾಸೋಹಂ” ಎಂದು ಬಗೆದು ದೊಡವಾಡರು ಉಳಿದ ಎರಡೂ ಘಟಕಗಳನ್ನು ನೋಡುವುದು ಕಾಯಕದ ಭಾಗವೆಂದು ಪರಿಗಣಿಸುತ್ತಾ ಬಂದಿದ್ದಾರೆ. “ಬಂದ ಬರವನರಿವಡೆ, ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ” ಅನ್ನುವ ನಡೆಯವರು. ವಿಶೇಷವಾಗಿ ನವಲೂರೆಂಬ ಗ್ರಾಮದ ಮನೆ ಮನೆಯಲ್ಲಿ ದೊಡವಾಡರೇ ದೊಡ್ಡವರು. ಕಾರಣ ಅದು ಅವರ ಕಾರ್ಯಕ್ಷೇತ್ರ. ಶಿಕ್ಷಣಕ್ಕಾಗಿ ಸಾಕಷ್ಟು ದಾಸೋಹ ಮಾಡಿದ್ದಾರೆ. ಆದರೂ “ದಾನಿ ಅನ್ನಿಸಿಕೊಳ್ಳುವ ಹವ್ಯಾಸವಿಲ್ಲ” ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ ಬೇಡಿದ್ದ

ನೀವ ಕೂಡಲಸಂಗಮದೇವ, ಎಲೆಯುಮರೆಯು ಹಣ್ಣುಕಾಯಿಯಾಗಿ ಸಣ್ಣಲಿ ಸೀಕರಣೆ ಯುಂತಿದ್ದಾರೆ ದೊಡವಾಡ ಗುರುಪುತ್ರಪ್ಪನವರು.

ಶ್ರೀ ದೊಡವಾಡರು ಮತ್ತು ನಾನು ಉಳಿದ ಸ್ನೇಹಿತರ ಸಂಗಡ ಧಾರವಾಡದ ಕೆಲವು ಸಂಘ ಸಂಸ್ಥೆಗಳಲ್ಲಿ ಕೂಡಿ ಕೆಲಸಮಾಡುತ್ತಿದ್ದೇವೆ. ದೊಡವಾಡರ ಹೃದಯ ಅನುಭವ, ವರ್ತನೆ, ಅವರಿಗಿಂತಲೂ ಹೆಚ್ಚು ದೊಡ್ಡವಾದವುಗಳು. ಅವರು ವಿನಯವನ್ನೇ ಹಣದಂತೆ ಉಪಯೋಗಿಸುತ್ತಾ ಬಂದಿದ್ದಾರೆ. "ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ. ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರುಹಿನ ಕೇಡು" ವೆಂಬ ತಾತ್ವಿಕ ನಡೆ–ನುಡಿ ಇದ್ದ ದೊಡವಾಡರು ಯಾರ ಮನಸ್ಸನ್ನೂ ನೋಯಿಸುವವರಲ್ಲ. "ಶಿವಭಕ್ತರ ನೋವೆ, ಅದು ಲಿಂಗದ ನೋವು" ಎಂದು ತಿಳಿದುಕೊಂಡವರು. ಮೀಟಿಂಗಿನಲ್ಲಿ ಅವರದು ಕಿವಿಗೊಟ್ಟು ಕೇಳುವ ಕೆಲಸ ಹೆಚ್ಚು. ಎಲ್ಲರೂ ಹೇಳಿದಮೇಲೆ ಹಾಳಿಯಪಾಳಿ ಬಂದಾಗ್ಗೆ ಸ್ಫಟಿಕದ ಸಲಾಖೆಯಂತೆ ಮಾತನಾಡಿ ಮುಗಿಸುತ್ತಾರೆ. ಹಿತ ಶಬ್ದಕೋಶದ ಮಿತಭಾಷಿ ದೊಡವಾಡರು ಮಾತನಾಡಿದರೆ ಹಸಿಗೋಡೆಯಮೇಲೆ ಹಳ್ಳು ಒಗೆದಂತೆ ಆಗುತ್ತದೆ, ಹುಸಿಯಾಗುವ ದಿಲ್ಲ. ಹೃದಯವಿಶಾಲತೆಯಿಂದ ಹದ ಬರುತ್ತದೆ ಹೊರತು ಹಾಡಿದ್ದೇ ಹಾಡುವ ಪದ ಅವರಲ್ಲಿ ಅಪವಾದ. ಅವರು ಯಾರ ವೈರತ್ವವನ್ನೂ ಕೊಂಡುಕೊಳ್ಳುವವರಲ್ಲ, ಯಾವಬೆಲೆಗೂ ಯಾರ ವೈರತ್ವವನ್ನೂ ಮಾಡುವವರಲ್ಲ. ಇದರರ್ಥ ಮನಸ್ಸಿನಲ್ಲಿಟ್ಟು ಕೊಳ್ಳುತ್ತಾರೆಯೇ– ಎಂಬ ಶಂಕೆಗೆ ಹೃದಯದಲ್ಲಿಯ ಜಾಗಾ ಅನುಕಂಪ ವ್ಯಾಪಿಸಿರುವ ಪ್ರಯುಕ್ತ ನಿಂತುಹೋಗುವ ಯಾತ್ರಿಕನಾಗುವ ಅವಕಾಶ ಸಿಕ್ಕುವುದಿಲ್ಲ. ಅವರ ಅನುಭವ ವಯಸ್ಸೇ ಮನಸಾದ್ದರಿಂದ, ಬೇರೆಕಡೆಯಿಂದ ಮನಸ್ಸಿಗೆ ತಿನಿಸು ತರುವ ಕಣಸನ್ನೂ ಕಾಣರು. ಎನಗೆ ನಾ ನೇ ಹಗೆ ನೋಡಯ್ಯಾ, ಎನಗೆ ನಾನೇ ಕೆಳೆ ನೋಡಯ್ಯಾ, ಅನ್ಯ ಹಗೆ ಎಲ್ಲಿ, ಕೆಳೆ ಎಲ್ಲಿ ? ಬಾಗಿದ ತಲೆಯ ಮುಗಿದ ಕೈಯಾಗಿಸು" ಈ ನಡತೆಯನ್ನು ನಾನೇ ಪ್ರತ್ಯಕ್ಷ ಅನುಭವಿಸಿದ್ದೇನೆ. ಸಮಾಜದಲ್ಲಿ ಭಿಡೆ ಮುರು ವತ್ತಿಗೆ ಬಲೆ ಬೀಳುವುದು ಸಹಜ. ವ್ಯಾಪಾರಿಗಂತೂ ಬಹಳ. ದೊಡ್ಡ ವ್ಯಾಪಾರಿ, ಶ್ರೀಮಂತರನ್ನೂ ವೈರಿಗಳನ್ನೂ ಹಣಿಯುವುದಕ್ಕಾಗಿ ಉಪಯೋಗಿಸುವುದಕ್ಕೋಸ್ಕರ, "ಬ್ರಹ್ಮಪದವಿ, ವಿಷ್ಣುಪದವಿ, ಕೊಡುತ್ತೇವೆಂದು ಯಾರಾದರೂ ಯೋಜನೆಮಾಡಿ ದೊಡವಾಡದವರ ಹತ್ತಿರಬಂದರೆ, ಅಂಥ ಯೋಜನೆಗೆ ಭೋಜನವೆಂದೂ ಸಿಕ್ಕ ಲಾರದು. ಮುರುವತ್ತಿಗೆ ಹೂ ಎಂದರೂ, ಹೃದಯ ಕೊರೆಯುವ ಕರಗಸ ಅವರ ಸ್ನೇಹವೂ ಬಿಡದು. ಕೂಡಲೇ ಸಂಬಂಧಿತ ಪುಡಾರಿಯನ್ನು ಕಂಡು ಪಾಪ–ಪುಣ್ಯ ಎರಡನ್ನೂ ಕೊಳ್ಳಲಾರೆ ಎಂದು ಹೇಳಿ, ಮುಂದಿಟ್ಟ ಒಂದು ಹೆಜ್ಜೆಯನ್ನು ಹಿಂದಕ್ಕೆ ಎರಡು ಹೆಜ್ಜೆ ಸರಿಸಿ ಇಡುತ್ತಾರೆ. "ನಿಂದಿಸುವನೊಬ್ಬ ಸ್ತುತಿಸುವನೊಬ್ಬ, ಇವ ರಿಬ್ಬರೂ ಶಿವನ ಪರಮ ಬಂಧುಗಳಯ್ಯಾ" ಎಂದು ಹೇಳಿ ತಮ್ಮ ಅಸಹಾಯಕತೆ

ಯನ್ನು ಸಹಜ ಅಸಹಕಾರದೊಂದಿಗೆ ಮುಕ್ತಾಯಗೊಳಿಸುತ್ತಾರೆ. ಇದು ಇವರ ಸಜ್ಜನಿಕೆ. ಸ್ತುತಿ, ನಿಂದೆಗಳೆರಡಕ್ಕೂ ಸಮಾಧಾನ ಮಾಡುವ ಸಾವಧಾನ ನಡುವಳಿಕೆ. ಹಂಚಿಕೆಮಾಡುವ ವಂಚಕರ್ಯಾರಾದರೂ ಬಂದರೆ, ಕಿಂಚಿತ್ತು ಕಾಂಚನಕ್ಕೆ ಯುಕ್ತಿಮಾಡಲು ಬಿಟ್ಟು, ತಾವು ಮುಕ್ತರಾಗಿ ಬಿಡುತ್ತಾರೆ. ಪಾಪಿಗಳ ಕಾಪಿ ಮಾಡುವುದಕ್ಕಿಂತ ವ್ಯಾಪಾರ ದಕ್ಕಿದ್ದವರಿಗೆ, ಇಂಥ ಪ್ರಾಯಶ್ಚಿತ್ತ ಲೇಸೆಂಬ ಅವರ ಭಾವನೆ. ಅವರಿಗೆ ಕೀರ್ತಿ ಬೇಡ ವಂತಿಲ್ಲ. ಪ್ರೀತಿಯಿಂದ ಬರಬೇಕಲ್ಲದೇ ಬೇಸರಾಗುವ ಪ್ರೀತಿ ಅವರಿಗೆ ಅಪ್ರೀತಿ. ಇದನ್ನು ನಾನು ದೊಡವಾಡರಲ್ಲಿ ಕಂಡುಕೊಂಡ ಸ್ವಭಾವ ರೀತಿ. ಕೀರ್ತಿಯು ಶನಿಯಾಗಿ ಕಾಡಬಾರದು, ಸಜ್ಜನಿಕೆ ಸಹಜವಾಗಿರಬೇಕೆಂಬುದೇ ಅವರು ನಡೆದು ಬಂದ ದಾರಿ. ಹಣ ಮತ್ತು ಗುಣ, ಎರಡಕ್ಕಿಂತಲೂ ತಾವು ದಾಸೋಹಮಾಡುವ ವಸ್ತು ಸಂತೋಷ, ಕೇವಲ ತಮ್ಮ ತೃಪ್ತಿಗಾಗಿ ಅಲ್ಲ— ಸಂಗಡಿಗರ, ಸಂಬಂಧಿಕರ ಸಂತೃಪ್ತಿಗಾಗಿ ಎಂದು ತಿಳಿದುಕೊಂಡ ಜೀವ ದೊಡವಾಡರು. ಧಾರವಾಡದ ಸಾರ್ವತ್ರಿಕ ಜೀವನಕ್ಕೆ ಇವರದು ತ್ರಿಕರಣಪೂರ್ವಕ ಕೊಡುಗೆ. ಅಂಗಡಿ ದೊಡ್ಡದು, ವ್ಯಾಪಾರ ದೊಡ್ಡದು, ಮನೆ ದೊಡ್ಡದು, ಮನಸ್ಸು ಎಲ್ಲವುಗಳಿಗಿಂತಲೂ ದೊಡ್ಡದು. ಧಾರವಾಡದಲ್ಲಿ ದೊಡ್ಡದೆಂಬುದೇ ದೊಡವಾಡರು. ಇವರ ಈ ಅಗ್ಗಳಿಕೆಯು ಸಂಗ, ಸಂಗಾತಿಗಳ ಗಳಿಕೆ.

ಈಗ ಅವರ ಮೊಳಕೆಗಳು ಬೆಳೆದು ಬಲವಾಗಿ ಫಲ ಕೊಡುವ ವೃಕ್ಷಗಳಾಗಿವೆ. ತಮ್ಮ ಆಲದ ಗಿಡದ ಕೆಳಗೆ ಹುಲ್ಲು ಕೂಡಾ ಬೆಳೆಯಲಿಕ್ಕಿಲ್ಲವೆಂಬ ವ್ಯಾವಹಾರಿಕ, ವೈಜ್ಞಾನಿಕತೆಯಿಂದ. ಪಂಚಪುತ್ರ ಸಂಚಯಕ್ಕೆ ಕಾರ್ಯ ಹಂಚಿಕೊಟ್ಟು ವ್ಯಕ್ತಿವಿಕಾಸಕ್ಕೆ ವ್ಯವಸ್ಥೆಮಾಡಿಕೊಟ್ಟಿದ್ದಾರೆ. ಗುರುಪುತ್ರಪ್ಪನವರು. ಮಕ್ಕಳಿಗೆ ಅವಕಾಶದ ಪ್ರಕಾಶ. ಇಂಥ ಬೆಳಕಿನಲ್ಲಿ ಅವರ ಜೇಷ್ಠ ಚಿರಂಜೀವಿ ಶ್ರೀ ಸರಸಾನಂದರು ಹೆಸರಿನಂತೆ ಎಣ್ಣೆಯ ವ್ಯಾಪಾರದಲ್ಲಿ ದಕ್ಷಿಣ ಭಾರತದಲ್ಲಿಯೇ ಅದ್ಭುತ ಸಾಧನೆ ಮಾಡಿದ್ದಾರೆ. "ಆಯಿಲ್ ಕಿಂಗ್" ವೆಂಬ ಅಭಿದಾನಕ್ಕೆ ಪಾತ್ರರಾದ ಸರಸಾನಂದರು ತಂದೆಯಂತೆ ನಿಗರ್ವಿ, ನಿರ್ವ್ಯಸನಿ. ನಿರಾಡಂಬರ ವ್ಯಕ್ತಿ. ಕೊಡುಗೈದೊರೆ. ಯಾರನ್ನೂ ಮರೆಸುವ ಹಾಗಿದ್ದಾರೆ. ಉಳಿದವರು ಕೂಡಾ ತಮ್ಮ ಕಾಲುಗಳನ್ನು ಕಂಬಗಳನ್ನಾಗಿ ಮಾಡಿ ತಾವು ಕಟ್ಟಬೇಕಾದ ಕಟ್ಟಡಗಳ ಕಾಲಂಗಳಿಗೆ ಗಟ್ಟಿ ಕಾಂಕ್ರೀಟ ಹಾಕಿದ್ದಾರೆ. ದೊಡವಾಡ ಸಮೂಹ. ಧಾರವಾಡದ ಮೋತು. ಹೀಗಿದೆ ಗುರುಪುತ್ರಪ್ಪನವರ ಗುರುತ್ವಪುತ್ರರ ಮೇರು.

ಇಷ್ಟಾದರೂ, ರಾಜಕೀಯ ಪಾಂಚಜನ್ಯ ಊದಲು ಬಂದರೆ ಮತ್ತೊಂದು ಕಿವಿಯಲ್ಲಿ ತಮ್ಮ ಕಾಯಕದ ಓಂಕಾರವನ್ನೂ ಧ್ವನಿಸುವ ಶಂಖವನ್ನು ಹಿಡಿದು ಕೊಂಡೇ ಕೇಳುತ್ತಾರೆ. "ಲೋಕದ ಡೊಂಕು ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆ

ಯುವರ ದುಃಖಕ್ಕೆ ಆಳುವವರ ಮೆಚ್ಚು" ಎಂಬುದು ಇವರ ನಿಲುವು. ಮೇಳಿವಾಳಿಯಾದ ಇವರು ತಾಳಿ ಬಾಳುವ ಜೀವ. "ಅವ್ಯಾಪಾರೇಷು ವ್ಯಾಪಾರಃ" ಎಂದೂ ಮಾಡಲಾರರು. ದಲಾಲಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಇವರು, ಎಲ್ಲ ವ್ಯಾಪಾರಸ್ಥರ ಕಷ್ಟ-ಕಾರ್ಪಣ್ಯಗಳನ್ನು ಪರಿಹರಿಸುವ ಮಾರ್ಗದರ್ಶಕರೂ ಹೌದು. ಇವರು ಗಳಿಸಿದರೆನ್ನುವುದಕ್ಕಿಂತ ಬೆಳೆಸಿದರೆನ್ನುವುದು ಕಣ್ಣುಮುಂದಿನ ಚಿತ್ರ. ಹಣವನ್ನು ಮಾಯೆಯೆಂದು ಭಾವಿಸದೆ, ಪವಿತ್ರವೆಂದು ಪುರಸ್ಕರಿಸಿ, ಗುಣದ ದೀಕ್ಷೆಕೊಟ್ಟು ಕಾಯಕಕ್ಕೆ ಹಚ್ಚಿದ ದೊಡವಾಡರ ಹೃದಯ ಮತ್ತು ವಿವೇಕ ಕೂಡಲಸಂಗಮ. ಅರಿಸ್ಟಾಟಲ್ ಅಂದಂತೆ "The world needs a good man, than a good citizen" ನಾನು ಕಂಡ ಗುರುಪುತ್ರಪ್ಪ ದೊಡವಾಡರು ನೂರುವರುಷ ಎಲ್ಲರಿಗಾಗಿ ಬಾಳುವರು—

●

ಶಿಷ್ಯರ ವಿತ್ತವನ್ನು ಅಪಹರಿಸುವ ಗುರುಗಳು ಅನೇಕರು
ಶಿಷ್ಯರ ಹೃದಯದ ತಾಪವನ್ನು ಅಪಹರಿಸುವ ಗುರು ಮಾತ್ರ ದುರ್ಲಭ.

ಸಂಸ್ಕೃತ ಶ್ಲೋಕ

ವೀರರ ಚಿತ್ತವೆಂಬ ರತ್ನವನ್ನು ವಜ್ರ ಕೂಡ ಒಡೆಯಲಾರದು.

ಕಥಾಸರಿತ್ಸಾಗರ

ಲಿಂಗಪೂಜಾಸಕ್ತ



● ಈರಣ್ಣ ವಾಣಿ

ಹೆಸರೇ ಸೂಚಿಸುವಂತೆ ದೊಡವಾಡ ದೊಡ್ಡಸ್ಥಳವೆಂದೇ ಅರ್ಥ. ದೊಡ್ಡವರಿರುವ ಸ್ಥಳವೆಂದೇ ಅರ್ಥ. ಈ ಅರ್ಥ ದೊಡ್ಡತನದಲ್ಲಿ ಅಷ್ಟೇ ಅಲ್ಲ, ಮಾನವೀಯತೆಯಲ್ಲಿ, ಆತ್ಮೀಯತೆಯಲ್ಲಿ, ವಿನಯಶೀಲತೆಯಲ್ಲಿ ಸರಳ ಮೃದುಸ್ವಭಾವದಲ್ಲಿ, ಅಚ್ಚುಕಟ್ಟುತನದಲ್ಲಿ ಜೊತೆಗೆ ದೇವಭಕ್ತಿಯಲ್ಲಿ ಕೂಡ. ನಮ್ಮ ವ್ಯಾಪಾರೀ ಮಂಡಳದಲ್ಲಿ ಇವರು ದೊಡ್ಡತನದಲ್ಲಿಯೂ ಅಣ್ಣನೇ. ನನಗಿಂತ ಇಪ್ಪತ್ತು ವಸಂತಗಳನ್ನು ಮೊದಲೇ ಇವರು ಕಂಡಿದ್ದರೂ ಅವರೊಂದಿಗೆ ನನ್ನದು ಅಷ್ಟೇ ನಿಕಟ ಸಂಪರ್ಕ. ವಿನಯಶೀಲತೆ ವ್ಯವಹಾರ ಚತುರತೆಯೇ ನಮ್ಮಿಬ್ಬರನ್ನು ಬಂಧಿಸಿದ ಬಂಧನ. ಅವರದ ನಡುವಳಿಕೆ, ಕಿರಿಯರಲ್ಲಿ ಕಾಣುವ ಹಿರಿತನ ಅದೇ ನಮ್ಮ ಗೌರವಾದರಗಳಿಗೆ ತಳಹದಿಯೆನಿಸಿವೆ. ಇದರ ಒಂದು ಸಂದರ್ಭ ಹೀಗೆ.

ಅಖಿಲ ಭಾರತೀಯ ಜನಸಂಘದ ಕರ್ನಾಟಕ ಪ್ರಾಂತೀಯ ಅಧಿವೇಶನವನ್ನು ಪ್ರಥಮಬಾರಿ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಉಣಕಲ್ಲ ಸಿದ್ದಪ್ಪಜ್ಜನ ಮಠದ ಸಮೀಪದ ದಿ. ಶ್ರೀ ಸಂಗಪ್ಪನವರು ಕೊರವಿ ಇವರ ಸ್ಥಳದಲ್ಲಿ ಸಮಾರಂಭಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಜೊತೆಗೆ ಅಧಿವೇಶನದ ನಿಧಿಸಂಗ್ರಹಕಾರ್ಯವೂ ಭರದಿಂದ ನಡೆದಿತ್ತು. ಸಂಗ್ರಹದ ಗುರುತರ ಜವಾಬ್ದಾರಿಯನ್ನು ಹೊತ್ತವರಲ್ಲಿ ನಾನೂ ಒಬ್ಬ. ನನಗೆ ಮೊದಲು ನೆನಪಾದವರು ಅಣ್ಣನವರು.

ಒಳ್ಳೆಯ ಮುಹೂರ್ತದಲ್ಲಿಯೇ ಸಂಧಿಸಿದೆನೆನ್ನಿ. ಆದರ, ಗೌರವ ನನ್ನ ಬಯಕೆಗಿಂತ ಅಧಿಕವೇ ಸಿಕ್ಕಿತ್ತು. ಅವರ ಆತ್ಮೀಯ ನುಡಿ ನಮ್ಮನ್ನು ಸಮೀಪಕ್ಕೆ ತಂದಿತು. ಧೈರ್ಯದಿಂದ ವಿಷಯ ಪ್ರಸ್ತಾಪಿಸಿದೆ. 'ನಿಮ್ಮಿಂದಲೇ ನಿಧಿ ಸಂಗ್ರಹ ಪ್ರಾರಂಭ' ಎಂದೆ. ಅವರು ಕೇಳಿದ್ದು 'ನನ್ನಿಂದ ಎಷ್ಟು ಅಪೇಕ್ಷೆ ಪಡುವಿರಿ' ಎಂದು 'ನಿಮಗೆ ತಿಳಿದಷ್ಟು' ಎಂದೆ. ಆದರೆ ಸಿಕ್ಕಿದ್ದು ಯೋಗ್ಯತೆಗೆ ಮಿಗಿಲಾದುದು.

ಇದಕ್ಕಿಂತ ನಾನು ದೊಡ್ಡತನವನ್ನು ಕಂಡದ್ದು ತಾವು ಕೊಟ್ಟುದನ್ನು ಬಹಿರಂಗಪಡಿಸ ಬಾರದೆಂಬ ಕಟ್ಟು ನಿರ್ಬಂಧನೆ. ಅನೇಕ ಕಾರ್ಯಗಳ ಹೊಣೆಹೊತ್ತು ಅವರ ಮುಂದೆ ಕೈಚಾಚಿದರೂ ಬರಿಗೈಯಿಂದ ಬಂದ ನೆನಪು ನನಗಿಲ್ಲ, 'ಇಷ್ಟು ಕೊಟ್ಟೆ' ಎಂದು ಹೇಳಿಕೊಳ್ಳದ ಮನವನ್ನು ನಾ ಕಂಡಿಲ್ಲ.

ನಾವಿಷ್ಟು ನಿಕಟವೆಂದೇ ತಿಳಿಯಬೇಡಿ. ನಮ್ಮಲ್ಲಿ ವಾದವಿವಾದಗಳಿಗೂ ಕೊನೆ ಮೊದಲಿಲ್ಲ. ನಾನು ಒಂದು ಜೋರು ಹಠವಾರಿ, ನನ್ನ ವಾದವೇ ಒಪ್ಪಿಗೆಯಾಗ ಬೇಕೆಂಬ ಆಗ್ರಹ. ಆದರೆ ಅವರ ದೊಡ್ಡತನ ತಮ್ಮ ಅಭಿಪ್ರಾಯವನ್ನು ಎಂದೂ ನನ್ನ ಮೇಲೆ ಹೇರದಿರುವುದು.

ಇಪ್ಪತ್ತೆರಡು ವರ್ಷಗಳ ದೀರ್ಘ ಅವಧಿಯಲ್ಲಿ ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳ ಬೆಳವಣಿಗೆಯಲ್ಲಿ ಅವರ ಭುಜಕ್ಕೆ ಭುಜ ಹಚ್ಚಿರುವೆ. ವಿಷಯಕ್ಕೆ ಭಿನ್ನಾಭಿ ಪ್ರಾಯ ಬಂದರೂ ವ್ಯಕ್ತಿತ್ವಕ್ಕೆ, ಅನ್ಯೋನ್ಯ ಸಂಬಂಧಕ್ಕೆ ಭಿನ್ನಾಭಿಪ್ರಾಯ ಎಂದೂ ಬಂದಿಲ್ಲ, ಬರುವುದೂ ಬೇಡ. ಸಾರ್ವಜನಿಕ ವಿಷಯವೇ ಆಗಿರಲಿ, ಕೌಟುಂಬಿಕ ವಿಷಯವೇ ಆಗಿರಲಿ, ಅವರ ಸಹಾನುಭೂತಿ, ಆತ್ಮೀಯತೆ, ಪ್ರಾಮಾಣಿಕ ಪ್ರಯತ್ನ, ಉದಾರಹೃದಯ ದೊಡವಾಡವೇ ಅನಿಸಿದೆ.

ಜೀವನದಲ್ಲಿ ಏರುಪೇರು, ನೋವು ನಲಿವುಗಳು ಕತ್ತಲೆ ಬೆಳಕಿನಂತೆ. ಸೂರ್ಯನ ಪ್ರಕಾಶ ಕಂಡು ಕರುಬದವರಿಗೂ ಬಡತನವಿಲ್ಲ. ಅಣ್ಣನವರ ಬದುಕು ನಿರ್ಲಿಪ್ತ. 'ಹಿಂಡನಗಲಿದ ಗಜದಂತೆ', ಆದರೆ ಆನೆ ನಡೆದುದೇ ಮಾರ್ಗವಲ್ಲವೇ. ಅವರ ಸೌಜನ್ಯತೆಯ ದುರುಪಯೋಗದಲ್ಲಿ ಕೈ ಸುಟ್ಟುಕೊಂಡವರಿದ್ದಾರೆ. ಅಪಹಾಸ್ಯ ಮಾಡಿ ಆನಂದಪಡುವ ವಿಕೃತಮನಸ್ಸಿನ ನಯವಂಚಕರ ಬಗೆಗೆ ತುಂಬ ಉದಾಸೀನ. ಪ್ರತೀಕಾರಕ್ಕೆ ಪ್ರತಿಯಾಗಿ ಪುರಸ್ಕಾರ. ಸಂಗ್ರಾಮಕ್ಕೆ ಬದಲಾಗಿ ಸಂಗಮ. ಪಾಲಿಗೆ ಬಂದ ಸೋಲು ಗೆಲುವು ಜೀವನ, ಆ ದೇವ ದೇವನ ವರಪ್ರಸಾದವೆಂದು ನಂಬಿದವರಿಗೆ ದೊಡ್ಡತನ ಯಾವ ಲೆಕ್ಕ.

ರಾಜಕೀಯಕ್ಷೇತ್ರ ಅವರಿಂದ ಬಹುದೂರ. ಧಾರ್ಮಿಕ, ಶೈಕ್ಷಣಿಕಕ್ಷೇತ್ರ ಅವರ ಬದುಕಿನ ಅಂಗಳ. ಉಡುಪಿಯಲ್ಲಿ ಜರುಗಿದ ವಿಶ್ವಹಿಂದೂ ಪರಿಷತ್ತಿನ ಕರ್ನಾಟಕ ಪ್ರಾಂತೀಯ ಸಮ್ಮೇಳನದಲ್ಲಿ ಆತ್ಮೀಯಮಿತ್ರ ಲಿಂ. ಮಲ್ಲನಗೌಡರು ಪಾಟೀಲ (ಕಮಲಾಪುರ)ರೊಂದಿಗೆ ಭಾಗವಹಿಸಿ ಸೇವೆ ಕೈಕೊಂಡುದು, ಅವರ ಸೇವಾಕಾರ್ಯಕ್ಕೆ ಮೆಚ್ಚಿಕೊಂಡುದು, ಅದಕ್ಕಾಗಿ ತನು, ಮನ, ಧನದ ಸೇವೆ ಸಲ್ಲಿಸಿದುದು ಕೊನೆಗೆ ಆ ಸಂಸ್ಥೆಯ ಜಿಲ್ಲಾ ಅಧ್ಯಕ್ಷತೆ ಹೊತ್ತುದು, ಧಾರವಾಡದ ಅನೇಕ ಸಂಘ ಸಂಸ್ಥೆಗಳ ಅಸ್ತಿತ್ವಕ್ಕೆ ಬೆನ್ನೆಲುಬಾದುದು.

ನವರಾತ್ರಿಯ ಒಂಬತ್ತು ದಿವಸಗಳ ದೇವಿ ಉಪಾಸನೆ, ಪುರಾಣ ಪಠಣ ಎಷ್ಟೋ ವರ್ಷಗಳಿಂದ ಮುನ್ನಡೆದು ಬಂದ ಪರಿಪಾಠ, ಇಂದಿಗೂ ಅದನ್ನು ಅಷ್ಟೇ

ಶ್ರದ್ಧೆ ಭಕ್ತಿಗಳಿಂದ ನಡೆಯಿಸಿಕೊಂಡು ಬಂದ ರೀತಿ. ೧೯೬೭ ನೆಯ ಇಸ್ವಿ ಎಂದು ನೆನಪು. ನವರಾತ್ರಿ ಸಮಯದಲ್ಲಿ ದಿಲ್ಲಿಯ ಸರ್ವೋಚ್ಚನ್ಯಾಯಾಲಯದಲ್ಲಿ ಒಂದು ದಾವೆಯ ಪ್ರಕರಣ ಬೋರ್ಡಿಗೆ ಬರಲು ದಿಲ್ಲಿಯ ಪ್ರವಾಸ ಅನಿವಾರ್ಯವಾಯಿತು. ಪೂಜಾವ್ರತಕ್ಕೆ ಬರುವ ಅಡ್ಡಿಯನ್ನು ಮನಗಂಡು ಪ್ರವಾಸವನ್ನು ಕೈಬಿಡುವ ಯೋಜನೆಯೂ ನಡೆಯಿತು. ಈ ಪ್ರಸ್ತಾಪ ಒಂದು ದಿನ ನನ್ನ ಗಮನಕ್ಕೆ ಬಂತು. ಜೊತೆಗೆ ಒಂದು ಹೊಸ ಯೋಜನೆಯೂ ಬಂದಿತು. ಕೂಡಲೇ ಕಾರ್ಯತತ್ಪರನಾದೆ. ಆಗ ಸಂಸತ್ ಸದಸ್ಯರಾಗಿದ್ದ ಶ್ರೀ ಜಗನ್ನಾಥರಾವ ಜೋಶಿಯವರು ದಿಲ್ಲಿಯಲ್ಲಿ ವಾಸ್ತವ್ಯ ಮಾಡಿದ್ದರು. ಅವರಿಗೆ ಈ ವಿಷಯವನ್ನು ತಿಳಿಸಿದಾಗ ಅವರು ದಿಲ್ಲಿಯ ತಮ್ಮ ವಾಸ್ತವ್ಯದಲ್ಲಿ ಯಾವ ಅಡಚಣೆ ಆಗದಂತೆ ವ್ಯವಸ್ಥೆ ಮಾಡುವದಾಗಿ ಭರವಸೆ ಕೊಟ್ಟ ಮೇಲೆ ನನ್ನ ಮನಕ್ಕೆ ನೆಮ್ಮದಿ. ಸರ್ವೋಚ್ಚನ್ಯಾಯಾಲಯದ ಆತ್ಮೀಯ ಮಿತ್ರ ನ್ಯಾಯವಾದಿ ಶ್ರೀ ಶಾಂತಿಸ್ವರೂಪ ಖಂಡೋಜಾ ಅವರಿಗೂ ಪತ್ರ ಬರೆದು ಉಳಿದ ಸಹಾಯ ಸಹಕಾರ ಕೇಳಿದೆ.

ಧಾರವಾಡದಿಂದ ದಿಲ್ಲಿಗೆ ಎರಡು ದಿವಸಗಳ ಪ್ರವಾಸದಲ್ಲಿ ಅವರ ಪೂಜಾವ್ರತಕ್ಕೆ ಅನಾನುಕೂಲವಾಗದಂತೆ ಅಂದು ಬೆಳಿಗ್ಗೆ ಪೂಜೆ ಮುಗಿಸಿ ಬೆಳಗಾವದಿಂದ ವಿಮಾನ ಮಾರ್ಗವಾಗಿ ದಿಲ್ಲಿಗೆ ಪ್ರಯಾಣ ಮಾಡಿದೆವು.

ಶ್ರೀ ಜಗನ್ನಾಥರಾವ ಜೋಶಿಯವರು ತಮ್ಮ ಬಂಗ್ಲೆಯಲ್ಲಿಯೇ ಒಂದು ಪ್ರತ್ಯೇಕ ಕೋಣೆಯಲ್ಲಿ ಪೂಜೆಗಾಗಿ ವ್ಯವಸ್ಥೆ ಮಾಡಿಸಿದ್ದರು. ಸಂಜೆಗೆ ದಿಲ್ಲಿ ತಲುಪಿ ಅವರ ಮನೆಯಲ್ಲಿಯೇ ವಸತಿ ಮಾಡಿದೆವು.

ಬೆಳಗಿನ ಸಿಹಿನಿದ್ದೆಯಲ್ಲಿದ್ದಾಗ ನನಗೊಮ್ಮೆಲೇ ಎಚ್ಚರವಾಯಿತು. ಸಿಥಾನವಾಗಿ ಕಣ್ಣುಬಿಟ್ಟರೆ ಎಲ್ಲವೂ ಅಪರಿಚಿತ ಪರಿಸರವೇ. ಒಂದು ಕ್ಷಣ ನನ್ನನ್ನೇ ನಾನು ಸಾವರಿಸಿಕೊಳ್ಳಬೇಕಾಯಿತು. ಕೈಗಡಿಯಾರ ನೋಡಿದರೆ ಆಗ ೫ ಗಂಟೆ ೫೦ ನಿಮಿಷ. ಪಕ್ಕದ ಕೋಣೆಯಿಂದ ಬರುವ ಸ್ಪಷ್ಟವಾದ ಮಂತ್ರೋಚ್ಚಾರ ನನ್ನನ್ನು ನಿಚ್ಚಳಗೊಳಿಸಿತು. ದೀಪದ ಮಂದಪ್ರಕಾಶ, ಊದಿನಕಡ್ಡಿಯ ಸುವಾಸಿತ ಪರಿಮಳ ಸಮಸ್ತ ಪರಿಸರವನ್ನು ಪವಿತ್ರಗೊಳಿಸಿದಂತಿತ್ತು. ಪದ್ಮಾಸನ, ಅಂಗೈಯಲ್ಲಿ ಲಿಂಗಧರಿಸಿ, ದೃಷ್ಟಿ ನಿಮೀಲಿತಗೊಂಡ ದೃಶ್ಯ, ಸುಮಧುರ ಸ್ವರದಲ್ಲಿ ಹೊರಡುವ ಶಿವಮಂತ್ರ, ನನಗೆ ಬೇರೆ ಲೋಕವನ್ನೇ ನೆನಪಿಸಿತು. ದೊಡ್ಡತನದ ಮರ್ಮವನ್ನು ನಾನಿಲ್ಲಿ ಕಂಡೆ.

ಒಂದು ವಾರದ ಅವಧಿಯಲ್ಲಿ ದಿಲ್ಲಿಯ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನವೂ ಆಯಿತು. ಆಗ್ರಾ, ತಾಜಮಹಲ, ಫತ್ತೆಪೂರ ಸಿಕ್ರಿ, ಹರಿದ್ವಾರಗಳ ದರ್ಶನ ಮನಕ್ಕೆ ಹೊಸ ಹರ್ಷವನ್ನು ತಂದುಕೊಟ್ಟವು. ಅಂದಿನಿಂದ ಇಂದಿನವರೆಗೂ ಶ್ರೀ ಜಗನ್ನಾಥರಾವ ಜೋಶಿ ಮತ್ತು ನಮ್ಮೀರ್ವರ ಸಂಬಂಧ ಅಷ್ಟೇ ಮಧುರವಾಗಿ ಮುಂದುವರೆದುಕೊಂಡು ಬಂದಿದೆ.

೧೯೮೮ರ ಜನೇವರಿ ೧೨ಕ್ಕೆ ತಮ್ಮ ಚೈತನ್ಯಪೂರ್ಣ ತುಂಬುಬಾಳಿನ ೭೭ ವಸಂತಗಳನ್ನು ಕಾಣುತ್ತಿರುವ ದೊಡವಾಡ ಅಣ್ಣನವರು ದೈಹಿಕವಾಗಿ, ಮಾನಸಿಕವಾಗಿ ಇನ್ನೂ ೩೭ರ ಯುವಕನಾಗಿ ಕಾರ್ಯತತ್ಪರರಾಗಿರುವುದನ್ನು ಕಂಡಾಗ ಇವರಿಂದ ಕಲಿಯುವುದು ಇನ್ನೂ ಬಹಳಷ್ಟಿದೆ ಎಂದುಕೊಂಡಿರುವವರಲ್ಲಿ ನಾನೂ ಒಬ್ಬ. ಇಂಥವರು ನಮಗೆ ಆದರ್ಶಪ್ರಾಯರು. ಇಂಥವರ ಬದುಕು ನಮಗೆ ದಾರಿದೀಪ. ದೀಪ ಹೊಂದು ತಾ ಬೆಳಗುವುದಲ್ಲದೆ ತನ್ನೊಂದಿಗಿನ ಎಲ್ಲ ದೀಪಗಳನ್ನು ಬೆಳಗಿಸುವ ಮಹಿಮೆ ಹೊಂದಿದುದು. ಇಂಥ ದೀಪ ನೂರುಕಾಲ ಬೆಳಗಿ ನಾಡನ್ನು, ಜನಮನವನ್ನು ಬೆಳಗಿಸಲೆಂಬುದೇ ನನ್ನ ಅನನ್ಯ ಹಂಬಲ.

●

ಮನಾ ಸರ್ವಥಾ ನೀತಿ ಸೋಡೂ ನಕೋ ಹೋ
ಮನಾ ಅಂತರೀ ಸಾರ ವಿಚಾರ ರಾಹೋ

ಸಮರ್ಥ ರಾಮದಾಸಸ್ವಾಮಿ

ದೇಹೇ ತ್ಯಾಗಿತಾ ಕೀರ್ತಿ ಮಾಗೇ ಉರಾವೀ
ಮನಾ ಸಜ್ಜನಾ ಹೇಚಿ ಕ್ರಿಯಾ ಧರಾವೀ ॥

ಸಮರ್ಥ ರಾಮದಾಸಸ್ವಾಮಿ

ಸಹೃದಯಿ



● ಪಿ. ಎಸ್. ಕುಸುಗಲ್ಲ

ಸತ್ಯ ನಿಷ್ಠುರ ಬದುಕಿನ ವ್ಯಕ್ತಿ ಯಾವಾಗಲೂ ಲೋಕ ವಿರೋಧಿಯೇ ಆಗಿರು
ತ್ತಾನೆ. ಆತನ ತತ್ವನಿಷ್ಠೆಯು ದಾಕ್ಷಿಣ್ಯಹೇಡಿ ಜನರಿಗೆ ನುಂಗಲಾರದ ತುತ್ತಾಗು
ತ್ತದೆ ಮಾಯಾ ಮೋಹ, ಸ್ವಾರ್ಥಸಾಧನೆಗೊಳಗಾದ ಲೋಕದ ಜನ ಕುರಿಗಳಂತೆ,
ತತ್ವಭ್ರಷ್ಟ ಬದುಕಿನ ಕೊಳ್ಳಕ್ಕೆ ಬೀಳಲು ಸಾಗಿದರೆ, ತತ್ವನಿಷ್ಠ ಶರಣ ಮಾತ್ರ ಲೋಕ
ವನ್ನೇ ಎದುರು ಹಾಕಿಕೊಂಡು ಸಿಂಹದಂತೆ ಬದುಕಬಲ್ಲ—ಈ ಮೇಲಿನ ಉಕ್ತಿಗೆ
ಸಹೃದಯಿ ಶ್ರೀ ಗುರುಪುತ್ರಪ್ಪನವರೊಂದು ಉದಾಹರಣೆ. ಹೆಸರನ್ನು ಅನ್ವರ್ಥಕ
ಮಾಡಿಕೊಂಡ ವ್ಯಕ್ತಿ: ದೊಡ್ಡ ಗುಣಗಳ ಸಾಕಾರ ಮೂರ್ತಿ: ಸೌಜನ್ಯ ಕರುಣಾ
ಮೂರ್ತಿ ಅವರು. ಅಂತೆಯೇ ಗುರುಪುತ್ರಪ್ಪನವರು ನನಗೆ ಮಿತ್ರಸ್ವರೂಪ. ಅವರ
ದಯೆ, ಸಹಾನುಭೂತಿ, ಅನುಕಂಪಗಳು ಅನುಪಮ. ಅವರನ್ನು ಎಷ್ಟು ವರ್ಣಿಸಿದರೂ
ಕಡಿಮೆಯೇ ಎಂಬ ಭಾವನೆ, ಅನಿಸಿಕೆ ನನ್ನದು.

ಕಾಯಕದಲ್ಲಿ ನಿರತನಾದೊಡೆ ಗುರು-ಜಂಗಮುವನಾದರೂ ಮರೆಯಬೇಕು-ಎಂಬ
ಬಸವಣ್ಣನವರ ಸಿದ್ಧಾಂತ ತತ್ವಗಳನ್ನು ವ್ಯವಹಾರದಲ್ಲಿ, ತಮ್ಮ ನಿತ್ಯದ ಕಾಯಕವಾದ
ದಲಾಲಿ ಅಂಗಡಿಯಲ್ಲಿ ರೂಢಿಸಿಕೊಂಡು ಬಂದ ವ್ಯಕ್ತಿ-ದೊಡವಾಡವರು. ಸತ್ಯಶುದ್ಧ
ಕಾಯಕಜೀವಿಯಾಗಿ, ವೀರಶೈವ ಮತಾಭಿಮಾನಿಯಾಗಿ, ಬಂದುದರಲ್ಲಿ ಶಿವಯೋಗಿ
ಪುಂಗವರಿಗೆ ಅರ್ಪಣೆಗೈಯುತ್ತ ತನು-ಮನ-ಧನಗಳಿಂದ ಸೇವೆ ಸಲ್ಲಿಸಿ, ಪೂಜ್ಯರ ಕೃಪೆ
ಪಾತ್ರರಾಗಿರುವ ಅವರೇ ಧನ್ಯರೆಂದು ಹೇಳಿದರೆ ತಪ್ಪಾಗಲಾರದು. ತ್ರಿವಿಧ ದಾಸೋಹ
ಮೂರ್ತಿಗಳಾದ ಶ್ರೀ. ನಿ. ಪ್ರ. ಮೃತ್ಯುಂಜಯ ಅಪ್ಪಗಳು ಧಾರವಾಡ ಹಾಗು
ಸದ್ಯದ ಮುರುಘಾಮಠಾಧ್ಯಕ್ಷರು ತ್ರಿವಿಧ ದಾಸೋಹಮೂರ್ತಿಗಳಾದ ಶ್ರೀ ಮ
ನಿ. ಪ್ರ. ಮಹಾಂತಪ್ಪಗಳ ಕೃಪಾದೃಷ್ಟಿಗೆ ಪಾತ್ರರಾದ ಶ್ರೀ ಗುರುಪುತ್ರಪ್ಪನವರ
ನಿಜವಾದ ಗುರುಪುತ್ರರೆಂದೇ ಹೇಳಬಹುದು. ಅವರು ಸ್ವಾಮಿ, ಶಿವಯೋ

ಗಳ ಹಾಗೂ ಅನೇಕ ಮಠಮಾನ್ಯಗಳ ಉನ್ನತಿಗೆ ಸರ್ವತೋಮುಖ ಅಭಿವೃದ್ಧಿಗಾಗಿ ಮುಕ್ತಹಸ್ತದಿಂದ ಸಹಾಯ ಸಹಕಾರ ನೀಡಿ ತನು-ಮನ-ಧನಗಳಿಂದ ಸೇವೆಸಲ್ಲಿಸುವ ಧೀರ ದೈವಭಕ್ತರಾಗಿದ್ದು, ಅವರ ಕಾರ್ಯಸಾಧನೆ ಶ್ಲಾಘನೀಯವಾಗಿದೆ.

ವಿದ್ಯಾಪ್ರೇಮಿಗಳು, ಸಮಾಜಸೇವಕರು, ಕ್ರೀಡಾಭಿಮಾನಿಗಳು ಆದ ಸಹೃದಯಿ ತತ್ವನಿಷ್ಟ ವ್ಯಕ್ತಿ ಪೂಜ್ಯ ಶ್ರೀ ಗುರುಪುತ್ರಪ್ಪನವರು. ಅವರ ಪ್ರೋತ್ಸಾಹದ ಅಭಯ ಹಸ್ತ, ಅವರ ಉದಾರತೆ, ಪ್ರತಿಭೆಗೆ ಸಾಕ್ಷಿಯೆನಿಸಿವೆ.

ನವಲೂರಿನಲ್ಲಿಯ ಹೈಸ್ಕೂಲಿಗೆ ೬೧ ಸಾವಿರ ರೂ. ಗಳನ್ನು ನೀಡಿ ಉದಾರ ದಾನಿಗಳೆನಿಸಿದರೆ, ಕ್ಯಾನ್ಸರ ಆಸ್ಪತ್ರೆಗೆ ೨೫ ಸಾವಿರ ರೂ. ಗಳ ಕಾಣಿಕೆ ನೀಡಿ ರೋಗಿಗಳ ಶುಶ್ರೂಷೆಗಾಗಿ ತಮ್ಮ ಸಹಾಯ ಸಲ್ಲಿಸಿದರು. ಧಾರವಾಡದ ಶ್ರೀ ಆರ್. ಎನ್. ಶೆಟ್ಟಿ ಕ್ರೀಡಾಂಗಣಕ್ಕಾಗಿ ೨೫ ಸಾವಿರ ರೂಪಾಯಿ ಸಹಾಯ ನೀಡಿದ್ದಾರೆ. ಇನ್ನೂ ಅದೆಷ್ಟೋ ಸಂಘ ಸಂಸ್ಥೆಗಳ ಸಕ್ರಿಯ ಸದಸ್ಯರಾಗಿ ಅವುಗಳ ಪ್ರಗತಿ, ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಧೀಮಂತ ವ್ಯಕ್ತಿಯಷ್ಟೇ ಅಲ್ಲ, ಅವರೊಂದು ಶಕ್ತಿಯಾಗಿ ಪರಿಣಮಿಸಿರುವರು. ಸಮಾಜದ ಪ್ರತಿಷ್ಠಿತ ಗಣ್ಯವ್ಯಕ್ತಿ, ಶಕ್ತಿಯಾಗಿ ದೊಡವಾಡ ಅಣ್ಣನವರು ಅನ್ಯಾಯದ ವಿರುದ್ಧ ನಿರಂತರ ಹೋರಾಡುತ್ತ ಬಂದಿರುವರು.

ದೊಡವಾಡರು ಸ್ಪರ್ಶಮಣಿಯಂತೆ ತಮ್ಮ ಸಮೀಪಕ್ಕೆ ಬಂದವರೆಲ್ಲರನ್ನೂ ಆಕರ್ಷಿಸಿದ ವ್ಯಕ್ತಿ. ತಮ್ಮ ಶಕ್ತಿ, ಸಾಮರ್ಥ್ಯವನ್ನು ಪರರಿಗೂ ನೀಡಿ ಅವರನ್ನು ಉನ್ನತಿಗೆ ತಂದ ಹಿರಿಯರು. ತರುಣ, ಉದಯೋನ್ಮುಖ ವ್ಯವಹಾರಸ್ಥರಿಗೆ ಸಹಾಯ, ಪ್ರೋತ್ಸಾಹ ನೀಡುತ್ತಾ ಬಂದಿರುವ ಅವರ ಗುಣ ವರ್ಣನಾತೀತವೆಂದೇ ಹೇಳಬಹುದು. ನನ್ನ ಸರ್ವತೋಮುಖ ವೃದ್ಧಿಗೆ ಶ್ರಮಿಸಿದ ಹಾಗೂ ವ್ಯಾಪಾರ ಉದ್ದಿಮೆ ವ್ಯವಸಾಯ ರಂಗದಲ್ಲಿ ಮುಂದೆ ಬರಲು ಸರ್ವರೀತಿಯಿಂದಲೂ ಅಭಿಮಾನ ಪೂರ್ಣ ಆಶೀರ್ವಚನವಿತ್ತು ತಮ್ಮ ಚಿರಂಜೀವಿ ಎಂದು ಪೋಷಿಸಿ, ಬೆಳೆಸಿದ ಅವರ ಕಾರುಣ್ಯ, ದಯೆಯನ್ನು ಎಷ್ಟು ಸ್ಮರಿಸಿದರೂ ಕಡಿಮೆ !

ಒಟ್ಟಾರೆ ದೊಡ್ಡಗುಣದ, ಶ್ರೇಷ್ಠ ತತ್ವನಿಷ್ಠೆಯ ಸಾಕಾರ ವ್ಯಕ್ತಿ ಪೂಜ್ಯ ಗುರುಪುತ್ರಪ್ಪನವರು ವ್ಯಕ್ತಿಯಲ್ಲ ಅವರೊಂದು ಶಕ್ತಿ, ಸಮಾಜಕ್ಕೊಂದು ಆಧಾರ ಸ್ತಂಭ. ಇಂಥವರಿಂದಲೇ ನಾಡಿನ ಉನ್ನತಿ ಪ್ರಗತಿ.

ಇಂತಹ ಮಹಾನುಭಾವ, ಪೂಜ್ಯರಿಗೆ ಹೆಚ್ಚಿನ ಆಯುರಾರೋಗ್ಯ, ಸಿರಿ-ಸಂಪದವನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸುವೆ.

●

ವರ್ತಕರ ನಿಜಬಂಧು



● **ಮಲ್ಲಿಕಾರ್ಜುನ ನಡಕಟ್ಟಿ**

ಶ್ರೀ ಗುರುಪುತ್ರಪ್ಪನವರದು ಮಾಗಿದ ಜೀವನ. ತಮ್ಮ ದಿನನಿತ್ಯದ ಬದುಕಿನಲ್ಲಿ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಂಡವರು. ಯಾರಿಗೂ ಎಂದಿಗೂ ಬಿರುನುಡಿಗಳನ್ನಾಡಿದವರಲ್ಲ. 'ಇವನಾರವ-ಇವನಾರವ' ಎನ್ನದೆ 'ಇವ ನಮ್ಮವ ಇವ ನಮ್ಮವ' ಎಂಬ ಬಸವಣ್ಣನವರ ನುಡಿಮುತ್ತಿನಂತೆ ಎಲ್ಲರನ್ನು ಅಪ್ಪಿಕೊಂಡವರು.

ನಮ್ಮ ವರ್ತಕ ಸಂಘದ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣ ಪುರುಷರು. ಅವರ ಅವಿರತ ಪರಿಶ್ರಮದ ಫಲವಾಗಿ ಅಪೂರ್ವವಾದ ಬೃಹತ್ ಕಟ್ಟಡ ನಿರ್ಮಿತವಾಗಿದೆ. ಸಂಘದ ಪ್ರತಿಯೊಬ್ಬ ಸದಸ್ಯನಿಗೆ ಅಭಿಪ್ರಾಯ ವ್ಯಕ್ತ ಮಾಡುವ ಸ್ವಾತಂತ್ರ್ಯ ಕೊಟ್ಟಿದ್ದಾರೆ.

ಅವರ ಇಂದಿನ ಯಶಸ್ಸಿಗೆ ಕಾರಣವೇನಾದರೂ ಇದ್ದರೆ ಅದಕ್ಕೆ ಅವರು ಅನುಸರಿಸಿಕೊಂಡು ಬಂದಿರುವ ಸಮಾನದೃಷ್ಟಿ. ಅಂಗಡಿಯಲ್ಲಿ ಕೆಲಸಮಾಡುತ್ತಿರುವ ಕಾರಕೂನರೇ ಇರಲಿ, ಹಮಾಲರೇ ಇರಲಿ ಎಲ್ಲರನ್ನೂ ಸಮಾನ ಗೌರವದಿಂದ ಕಾಣುತ್ತಾರೆ. ತಾವು ಮಾಲೀಕರು ಎಂಬ ಭಾವನೆ ಬರದಂತೆ ಕಾಳಜಿ ವಹಿಸುವ ಸೂಕ್ಷ್ಮ ದೃಷ್ಟಿ ಅವರದು. ಅವರ ಮಾರ್ಗದರ್ಶನದಲ್ಲಿ ಅನುಭವ ಪಡೆದ ಶ್ರೀ ಎಸ್. ಎಸ್. ಹಿರೇಕೇರಿಮಠ, ಶ್ರೀ ಎಫ್. ಬಿ. ಕಂಬಾರ, ಶ್ರೀ ಜಿ. ಬಿ. ಹಿರೇಮಠ, ಶ್ರೀ ಬಿ. ಎಸ್. ಕುಸುಗಲ್ ಮಹಾನಗರ ಸಭೆಯ ಸದಸ್ಯರು, ಶ್ರೀ ಹಡಗಲಿ ಮೊದಲಾದವರು ಇಂದು ಸ್ವತಂತ್ರವಾಗಿ ವ್ಯಾಪಾರೀ ಕ್ಷೇತ್ರದಲ್ಲಿ ಹೆಸರುಗಳಿಸಿದ್ದರೆ ಅದಕ್ಕೆ ಶ್ರೀ ಗುರುಪುತ್ರಪ್ಪನವರೇ ಕಾರಣ. ಇಂದಿಗೂ ಅವರೆಲ್ಲರೂ ಅಣ್ಣನವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ನಾನೂ ಸಹ ಇವರ ಗರಡಿಯಲ್ಲೇ ತಯಾರಾದವನು. ಅವರ ಹಿರಿಮೆ ಗುಣಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ಮಾನ್ಯ ಶ್ರೀ ದೊಡವಾಡ ಅಣ್ಣನವರ ಬದುಕು ವೈವಿಧ್ಯಮಯ. ವ್ಯಾಪಾರಿಗಳೊಡನೆ ಉದ್ಯಮಿಯಂತೆ, ಆಧ್ಯಾತ್ಮಿಗಳೊಡನೆ ಆಧ್ಯಾತ್ಮಿಯಂತೆ, ಸಾಹಿತಿಗಳೊಡನೆ ಸಾಹಿತಿಯಂತೆ ವರ್ತಿಸುವ ಸನ್ನಿವೇಶಗಳು ಹೃದಯಂಗಮ.

ಲಿಂಗಪೂಜಾನಿಷ್ಠರಾದ ಅಣ್ಣನವರು ಗುರು-ಲಿಂಗ-ಜಂಗಮ ಪ್ರೇಮಿಗಳು.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
ಕೊಟ್ಟದ್ದು ಕೆಟ್ಟಿತನಬೇಡ ಜಗದಲಿ
ಅದು ಮುಂದೆ ಕಟ್ಟಿಟ್ಟ ಬುತ್ತಿ ಸರ್ವಜ್ಞ

ಎಂಬ ಸರ್ವಜ್ಞನ ವಾಣಿಯಂತೆ ಅಣ್ಣನವರು ಮಹಾದಾನಿಗಳು. ಅವರ ನಿರಾಡಂಬರ ಜೀವನದ ಒಂದು ಉದಾಹರಣೆಯನ್ನು ಇಲ್ಲಿ ಎತ್ತಿ ಹೇಳಿದರೆ ತಪ್ಪಾಗಲಾರದು. ವ್ಯಾಪಾರಿ ಬಂಧುಗಳಾದ ನಾವೆಲ್ಲರೂ ಸೇರಿಕೊಂಡು ಅವರ ಅಮೃತ ಮಹೋತ್ಸವವನ್ನು ಆಚರಿಸುವ ವಿಚಾರವನ್ನು ಅವರ ಮುಂದಿಟ್ಟಾಗ "ನಾನೇನೂ ಅಂಥ ಸಮಾರಂಭಕ್ಕೆ ಯೋಗ್ಯನಲ್ಲ" ಬೇಡವೆಂದರು. ನಾವೆಲ್ಲರೂ ಒತ್ತಾಯ ಮಾಡಿದಾಗ ಒಪ್ಪಿಕೊಂಡರು. ಇನ್ನೊಂದು ಮಾತು— ನನ್ನ ದೃಷ್ಟಿಯಲ್ಲಿ ಅವರೊಬ್ಬ ಆದರ್ಶ ವ್ಯಾಪಾರಸ್ಥರು !

●

ಭಾವದ ಮಱೆಯು ಬ್ರಹ್ಮವಾಗಿಪ್ಪ
ಚನ್ನಮಲ್ಲಿಕಾರ್ಜುನನ ನಿಲವನಱಿಯಬಾರದು
ಮಹದೇವಿಯಕ್ಕ

ಸಮ್ಯಜ್ಞಾನವೆಂಬ ದಳ್ಳುರಿ
ಸೌರಾಷ್ಟ್ರ ಸೋಮೇಶ್ವರನ ತೋಱಿ ಭವಗೆಡಿಸಿತ್ತು.
ಆದಯ್ಯ



ಭಾಗ್ಯವಂತ

● **ಕಾಶೀನಾಥಸ್ವಾಮಿ ಚ. ಸಾರಂಗಮಠ**

ತನು, ಮನ, ಧನ ತ್ರಿಕರಣಪೂರ್ವಕ ಶ್ರೀಗುರು ಸೇವೆಯಲ್ಲಿಯೇ ಸದಾ ನಿರತರಾಗಿರುವ ಶರಣ ಶ್ರೀ ಗುರುಪಾದಪ್ಪ ಜಿ. ದೊಡವಾಡ ಅವರು ಭಾಗ್ಯವಂತರೂ ಹೌದು, ಅಲ್ಲದೇ ಎಷ್ಟೋ ಬಡಕುಟುಂಬಗಳ ಭಾಗ್ಯವಿಧಾತರೂ ಹೌದು. ಅವರನ್ನು ಕಂಡಾಗಲೆಲ್ಲ ವರಕವಿ ಬೇಂದ್ರೆಯವರ 'ಸಮರಸವೇ ಜೀವನ' ಎಂಬ ಕವಿವಾಣಿ ಸಾರ್ಥಕವಾಗಿ, ಸತ್ಯಕ್ಕೆ ಸಮೀಪವಾಗಿ ಅನುಭವಕ್ಕೆ ಬರದಿರದು.

ಅವರ ನಗುಮೊಗದ ಸ್ವಾಗತ, ಮೃದು ಮಧುರವಾಣಿ, ಹಿತ ಮಿತ ಮಾತುಗಳು, ಸರಳ ಜೀವನ, ಉಚ್ಚ ವಿಚಾರ, ದೇವರಲ್ಲಿದ್ದ ಅವರ ಅಪಾರ ಭಕ್ತಿ, ಶ್ರೀ ಗುರುವಿನಲ್ಲಿಟ್ಟ ಅಪೂರ್ವ ಶ್ರದ್ಧೆ, ಸರ್ವಧರ್ಮ ಬಾಂಧವರೊಂದಿಗೆ ಇದ್ದ ಅವರ ಹಾಲು ಹೃದಯ, ಇವೆಲ್ಲ ಶ್ರೀ ಗುರುಪಾದಪ್ಪನವರ ಸಮರಸ ಘನ ವ್ಯಕ್ತಿತ್ವಕ್ಕೆ ಕೈಗನ್ನಡಿಯಾಗಿವೆ.

ಶುದ್ಧ ಕಾಯಕಯೋಗಿಗಳಾಗಿಯೂ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಈ ಮುಂತಾದ ಎಲ್ಲ ರಂಗಗಳಲ್ಲಿಯೂ ತಮ್ಮ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವ ದಣಿವರಿಯದ ಧನಿಕರಿವರು, ದಕ್ಷ ಮತ್ತು ಮೌನ ಮಾರ್ಗದರ್ಶಕರೂ ಇವರು. ಮುಂಜಾವಿನಿಂದ ಸಂಜೆಯವರೆಗೂ ತಮ್ಮ ನಿತ್ಯಕಾಯಕದಲ್ಲಿ ನಿರತರಾಗಿ, ಕಾರ್ಯಪರಿಣಿತರಾಗಿ, ವ್ಯಾಪಾರಿ ಬಾಂಧವರಿಗೆ ದಾರಿದೀಪವಾಗಿ, ದಲಾಲಿ ಸಂಘದ ನಿಷ್ಠಾವಂತ ನೇತಾರರಾಗಿ ಅದನ್ನು ಒಂದು ಆದರ್ಶ ಸಂಸ್ಥೆಯನ್ನಾಗಿ ಮೆರೆಸಿದ್ದಾರೆ. ದಲಾಲಿ ಸಂಘವೆಂದರೆ ಮಾನ್ಯ ಶ್ರೀ ಜಿ. ಜಿ. ದೊಡವಾಡ ಅಣ್ಣಾ ಅವರೇ ಎನ್ನುವಷ್ಟು ಅದರ ಎಲ್ಲ ಚಟುವಟಿಕೆಗಳಲ್ಲಿ ಹಾಸು ಹೊಕ್ಕಾಗಿದ್ದಾರೆ. ಮಕ್ಕಳ ಮನೆ, ಬಸವತತ್ವ ಪ್ರಸಾರ ಶಿಬಿರಗಳು, ಕೂಡಲಸಂಗಮ ಕ್ಷೇತ್ರ ಆಂದೋಲನ, ವಿಶ್ವ

ಹಿಂದೂ ಪರಿಷತ್, ಗಣೇಶೋತ್ಸವಗಳಂತಹ ಸಾರ್ವಜನಿಕ ಕಾರ್ಯಗಳನ್ನು ಸದ್ದುಗದ್ದಲವಿಲ್ಲದೇ ಮುಂಚೂಣಿಯಲ್ಲಿ ನಿಂತು ಮುಕ್ತ ಮನಸ್ಸಿನಿಂದ ನಿರ್ವಹಿಸುವ ನಿಸ್ವಾರ್ಥ ಸಮಾಜ ಸೇವಕರಿವರು.

ಇತ್ತೀಚಿತ್ತಲಾಗಿ ೪-೫ ವರ್ಷಗಳಿಂದ ಧಾರವಾಡ ಭಾರತೀಯ ವಿದ್ಯಾಕೇಂದ್ರದ ಅನಾಥ ಶಿಶುಗಳಂತಿದ್ದ ಜಯದೇವಿತಾಯಿ ಬಾಲಕಿಯರ ಪ್ರೌಢಶಾಲೆ, ಭಾರತೀಯ ಕಲಾಕೇಂದ್ರ ಹಾಗೂ ಹೊಸೂರು-ಹುಬ್ಬಳ್ಳಿಯ ವೀರಮ್ಮ ಬಸ್ತಿ ಬಿ. ವ್ಹಿ. ಕೆ. ಬಾಲಕಿಯರ ಪ್ರೌಢಶಾಲೆಗಳಿಗೆ ಕಾರ್ಯಾಧ್ಯಕ್ಷರಾಗಿ ತಮ್ಮ ದಕ್ಷ ಆಡಳಿತದಿಂದಾಗಿ, ಸೂಕ್ತ ಮಾರ್ಗದರ್ಶನ ನೀಡುತ್ತ ಉದಾರ ಮನೋಭಾವಿಗಳಾಗಿ ಕ್ಷೀಣಸ್ಥಿತಿಯಲ್ಲಿದ್ದ ಈ ಸಂಸ್ಥೆಗಳಿಗೆ ಸಂಜೀವಿನಿ ಶಕ್ತಿಯಾಗಿ ನಿಂತಿದ್ದಾರೆ. ಇವರು ಬಂದ ಕಾಲಗುಣವೋ, ನಿಂದ ನೆಲದ ಗುಣವೋ ಎಂಬಂತೆ ಇವರು ಕಾರ್ಯಾಧ್ಯಕ್ಷರಾಗುತ್ತಲೇ ಜಯದೇವಿ ತಾಯಿ ಬಾಲಕಿಯರ ಪ್ರೌಢಶಾಲೆಯ ಮ್ಯಾಟ್ರಿಕ್ ಪರೀಕ್ಷೆಯ ಪರಿಣಾಮ ನೂರಕ್ಕೆ ನೂರರಷ್ಟು ಆಯಿತು. ಸಾಲದ್ದಕ್ಕೆ ವಾರ್ಷಿಕ ಕ್ರೀಡಾಕೂಟಗಳಲ್ಲಿ ಧಾರವಾಡ ಜಿಲ್ಲೆಗೇನೆ ಪ್ರಪ್ರಥಮವಾಗಿ ಗೆದ್ದು ಬಂದು ವೀರಾಗ್ರಣಿ ಪಟ್ಟವನ್ನು ಗಿಟ್ಟಿಸುತ್ತ ಬಂದಿದೆಯೆಂದರೆ ಇವರು ಭಾಗ್ಯವಿಧಾತರಲ್ಲದೆ ಮತ್ತೇನು ? ಮಾನ್ಯ ಶ್ರೀ ಗುರುಪಾದಪ್ಪಣ್ಣನವರ ನಿತ್ಯ ನಿಯಮಗಳಲ್ಲಿ, ಶುದ್ಧ ಆಚರಣೆಗಳಲ್ಲಿ ಆಧ್ಯಾತ್ಮಿಕ ಒಲವು ಆಳವಾಗಿ ಬೇರೂರಿ ಮೈವೆತ್ತಿ ನಿಂತಿದೆ. ಇವರು ಬಡತನದಲ್ಲಿ ಬೆಳೆದರೂ ತಮ್ಮ ಕ್ರಿಯಾಶೀಲತೆಯಿಂದ ಭಾಗ್ಯವಂತರೆನಿಸಿದ್ದಾರೆ. ಅಲ್ಲದೇ ಅನೇಕ ಹತಭಾಗ್ಯ ಕುಟುಂಬಗಳಿಗೆ, ಸಂಘ ಸಂಸ್ಥೆಗಳಿಗೆ ತಮ್ಮ ವರದ ಹಸ್ತನೀಡಿ ಉದ್ಧಾರಗೈದ ಭಾಗ್ಯವಿಧಾತರೆನಿಸಿದ್ದಾರೆ.

ಅಯ್ಯಾ ಎನ್ನಂತರಂಗದಲ್ಲಿ ಇದ್ದು ತೋರುತ್ತಿಹ
ನಿಮ್ಮ ನಿಜವನು ನಿಮ್ಮಿಂದಱಿದೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ

ಸ್ವತಂತ್ರ ಸಿದ್ಧಲಿಂಗೇಶ್ವರ



ಕೊಡುಗೈದೊರೆ

● ಸೋಮಶೇಖರ ಅ. ಕೊಂಗಿ

ಯಜಮಾನರಾದ ಶ್ರೀ ಜಿ. ಜಿ. ದೊಡವಾಡ ಅವರ ೭೫ನೆಯ ಹುಟ್ಟುಹಬ್ಬದ ನಿಮಿತ್ತ ಅಮೃತಮಹೋತ್ಸವದ ಶುಭ ಪ್ರಸಂಗದಲ್ಲಿ ಅವರನ್ನು ತುಂಬು ಹೃದಯ ದಿಂದ ನೆನೆಯುತ್ತೇನೆ. ನಾನು ಅವರನ್ನು ಸಂಪರ್ಕಿಸಿದ್ದು ಬಹಳ ಕಡಿಮೆಯಾದರೂ ಆ ಕೆಲವು ಕ್ಷಣಗಳನ್ನು ಇಲ್ಲಿ ನೆನಪಿಸಿಕೊಂಡು ನಾಲ್ಕು ಮಾತುಗಳನ್ನು ಇಲ್ಲಿ ವ್ಯಕ್ತ ಪಡಿಸುತ್ತಿದ್ದೇನೆ.

ವ್ಯಾಪಾರ ವೃತ್ತಿಯನ್ನೇ ಮುಖ್ಯವಾಗಿಟ್ಟುಕೊಂಡು ಪ್ರಾಮಾಣಿಕ ವ್ಯಕ್ತಿಗಳಾಗಿ ಭೌತಿಕ ಜೀವನವೇ ಶ್ರೇಷ್ಠವೆಂದು ತಿಳಿಯದೆ, ಧಾರ್ಮಿಕ ಬದುಕನ್ನು ಬದುಕಿದವರ ಉಲ್ಲೇಖ ಹಿಂದಿನಿಂದಲೂ ಪರಂಪರೆಯಾಗಿ ಬಂದಿದೆ. ವ್ಯಾಪಾರಿಗಳು ತಮ್ಮ ವ್ಯಾಪಾರ ದಿಂದ ಗಳಿಸಿದ ಹಣವನ್ನು ಸತ್ಕಾರ್ಯ, ಸದ್ಧರ್ಮಗಳಿಗಾಗಿ ಉಪಯೋಗಿಸುವದರ ಮೂಲಕ ತಾವು ಪುಣ್ಯಶಾಲಿಗಳೆಂದು ಭಾವಿಸುತ್ತಿದ್ದರು. ದಾನ ಪ್ರತಿಪಾಲನೆ, ಧರ್ಮ ಕಾರ್ಯ ಅಂದಿನಿಂದ ಇಂದಿನವರೆಗೂ ಚಾಚೂ ತಪ್ಪದೆ ಒಂದಿಲ್ಲೊಂದು ರೀತಿಯಲ್ಲಿ ನಮ್ಮ ಭಾರತೀಯ ಪರಂಪರೆಯಲ್ಲಿ ನಡೆದುಕೊಂಡು ಬಂದಿವೆ. ಧಾರ್ಮಿಕ ಶ್ರದ್ಧೆ, ತ್ಯಾಗ ಗುಣ, ಭಕ್ತಿಭಾವಗಳು ದೈವೀ ಸಂಪತ್ತುಗಳೆಂದು ಪರಿಗಣಿಸಲ್ಪಟ್ಟಿವೆ. ಯಜಮಾನ ರಾದ ಶ್ರೀ ಜಿ. ಜಿ. ದೊಡವಾಡರು ದೇವಕಾರ್ಯ, ಸಮಾಜಕಾರ್ಯಗಳಿಗೆ ದಾನ ನೀಡುವ ಸಂದರ್ಭಗಳಲ್ಲಿ ಮೊದಲಿಗರೆಂದರೆ ತಪ್ಪಾಗಲಿಕ್ಕಿಲ್ಲ. ಅವರ ಸಾತ್ವಿಕ ವ್ಯಕ್ತಿತ್ವದ ದರ್ಶನ ಮಾಡಿಕೊಂಡವರೆಲ್ಲ ಇಂದು ಸನ್ಮಾರ್ಗದಲ್ಲಿ ಮುನ್ನಡೆದಿದ್ದಾರೆ, ಬದುಕಿನಲ್ಲಿ ಯಶಸ್ಸನ್ನು ಕಂಡಿದ್ದಾರೆ.

ಪ್ರತಿ ವರುಷ ಐರಣಿ ಹೊಳೆಮಠಕ್ಕೆಂದು ಶಿವಭಜನಾ ಸಪ್ತಾಹಕ್ಕೆ ಧಾರವಾಡ ಸದ್ಭಕ್ತರು ಹೋಗುತ್ತಿದ್ದೆವು. ಶಿವಭಜನಾ ಸಪ್ತಾಹದ ಜನಸ್ತೋಮಕ್ಕೆ ಅನೇಕ

ದಾಸೋಹಿಗಳು ಬಂದು ಅನ್ನಸಂತರ್ಪಣೆಯ ಸೇವೆಯನ್ನು ಸಲ್ಲಿಸುವ ಪರಿಪಾಠ. ಧಾರವಾಡದವರ ದಾಸೋಹವನ್ನು ಅಲ್ಲಿ ಪ್ರಾರಂಭಿಸಲು ಲಿಂಗೈಕ್ಯ ಶ್ರೀ ಶ್ರೀ ಬಸವರಾಜ ಮುಪ್ಪಿನಾರ್ಯ ಮಹಾತ್ಮಾಜಿಯವರ ಅಪ್ಪಣೆಯ ಮೇರೆಗೆ ನಾವು ಸಿದ್ಧರಾದೆವು. ಪ್ರಾರಂಭದಲ್ಲಿ ಧಾರವಾಡ ಭಕ್ತರಿಂದ ಹಣರೂಪದಲ್ಲಿ ಕೂಡಿಸಿದ ಕಾಣಿಕೆಯನ್ನು ಶ್ರೀಪಾದಕ್ಕೆ ಅರ್ಪಿಸುವ ಪರಿಪಾಠವಿದ್ದುದು, ಬರುಬರುತ್ತ ಕಾಣಿಕೆಯು ಅಕ್ಕಿ, ಬೆಲ್ಲ, ಹಣ ಈ ವಿಧದಲ್ಲಿ ಸಂಗ್ರಹವಾಗತೊಡಗಿತು. ಈ ರೀತಿ ಬೆಳೆಯಲು ಯಜಮಾನರಾದ ಶ್ರೀ ದೊಡವಾಡರವರೇ ಕಾರಣರು.

ನಮ್ಮ ೩-೪ ಜನ ಮಿತ್ರರೊಂದಿಗೆ ನಾನು ಯಜಮಾನರಾದ ಶ್ರೀ ದೊಡವಾಡ ಅವರ ದಲಾಲಿ ಅಂಗಡಿಗೆ ಶಿವಭಜನಾ ಸಪ್ತಾಹಕ್ಕೆಂದು ಕಾಣಿಕೆಯನ್ನು ಕೇಳಲು ಹೋದಾಗಿನ ಪ್ರಸಂಗ ನಮ್ಮ ಕಣ್ಮುಂದೆ ಇಂದೂ ಅಚ್ಚ ಹಸಿರಾಗಿಯೇ ಇದೆ. ಅಂದು ಬಹುಶಃ ಮಂಗಳವಾರವಿದ್ದಿರಬೇಕು. ಅವರ ಅಂಗಡಿಗೆ ಹೋದಾಗ, ನಮ್ಮನ್ನು ವಿನಯದಿಂದ ಬರಮಾಡಿಕೊಂಡರು. ಐರಣಿಮಠದಿಂದ ಬಂದ ಆಮಂತ್ರಣ ಪತ್ರಿಕೆ ಹಾಗೂ ಪಾವತಿ ಪುಸ್ತಕವನ್ನು ಯಜಮಾನರ ಮುಂದೆ ಇಟ್ಟೆವು. ಬಿಡುವಿಲ್ಲದ ಅಂಗಡಿಯ ಕೆಲಸ ಕಾರ್ಯಗಳ ಮಧ್ಯೆ ನಮಗೆ ಪ್ರೋತ್ಸಾಹದ ಹಿತನುಡಿಗಳನ್ನು ಆಡಿದರು. ಧಾರ್ಮಿಕ ಕಾರ್ಯಗಳು ನಡೆಯುವದಕ್ಕೆ ಧನಸಹಾಯ ನೀಡಿ ಮುಂದುವರಿಸಲು ತಿಳಿಸುವದರ ಜೊತೆಗೆ ಇನ್ನುಳಿದ ದಲಾಲಿ ವ್ಯಾಪಾರಸ್ಥರಲ್ಲಿ ದೇಣಿಗೆ ಕೇಳಲು ಅವರ ಪರಿಚಯಗಳನ್ನು ಮಾಡಿಸಿದರು. ಶ್ರೀ ಅಥಣಿಮಠ ಮುಂತಾದ ವರ್ತಕರು ತಮ್ಮ ಪಾಲಿನ ದೇಣಿಗೆಯನ್ನು ಸತ್ಕಾರ್ಯ, ಸದ್ಧರ್ಮಗಳಿಗಾಗಿ ನೀಡುತ್ತ ಬಂದರು. ಈ ಪ್ರಸಂಗ ಹೇಳುವದರ ತಾತ್ಪರ್ಯವಿಷ್ಟೇ, ಅನ್ನಸಂತರ್ಪಣೆ ಎಲ್ಲಿ ಎಲ್ಲಿ ನಡೆಯುತ್ತದೆಯೋ ಅಲ್ಲಿ ಉದಾರವಾಗಿ ದಾನಕೊಡುವ ಇಂಥ ಮಹನೀಯರು ಸಿಕ್ಕುವದು ವಿರಳವೆಂದು ನಾನು ಭಾವಿಸಿದ್ದೇನೆ. ಶರಣರೊಬ್ಬರು 'ಜೋ ದೇತಾ ಹೈ ವಹ ಪಾತಾಹೀ ರಹತಾ ಹೈ' ಅರ್ಥಾತ್ ಯಾರು ಕೊಡುಗೈ ದಾನಿಗಳೋ ಅವರು ಪಡೆಯುತ್ತ ಇರುತ್ತಾರೆಂಬ ಸತ್ಯಸ್ಯ ಸತ್ಯ ನುಡಿ ನನಗೆ ಮತ್ತಷ್ಟು ಖಚಿತವೆನಿಸಿತು.

●

ಸ್ನೇಹಚಿಂತಕ



● ಡಾ. ವಾಮನ ಬೇಂದ್ರೆ

ಶ್ರೀ ಜಿ. ಜಿ. ದೊಡವಾಡ ಇವರಿಗೆ ವ್ಯಾಪಾರಿ ಬಂಧುಗಳೆಲ್ಲ 'ಅಣ್ಣಾವರು' ಎಂದೇ ಕರೆಯುವ ರೂಢಿ: ಬೇಂದ್ರೆಯವರನ್ನು ಆಪ್ತೇಷ್ಟರೆಲ್ಲ 'ಅಣ್ಣಾ' ಎಂದೇ ಕರೆಯುತ್ತಿದ್ದರು. ಬೇಂದ್ರೆಯವರು ಜೀವಿಸಿದ್ದ ಕಾಲದಲ್ಲಿ ಬೇಂದ್ರೆ ಮತ್ತು ದೊಡವಾಡ ಅವರ ಪ್ರತ್ಯಕ್ಷ ಪರಿಚಯ ಬೆಳೆಯದಿರಲು ಅವರಿಬ್ಬರ ಕಾರ್ಯರಂಗದ ವೈಶಿಷ್ಟ್ಯವೇ ಕಾರಣ. ಬೇಂದ್ರೆಯವರು ಸಾಹಿತ್ಯ ಪ್ರಚಾರ, ಪ್ರಸಾರ ಮತ್ತು ಸಲಹಕಾರರಾಗಿ ಕೆಲಸ ಮಾಡಿದಂತೆ: ದೊಡವಾಡ ಅವರು ವ್ಯಾಪಾರ ಪ್ರಚಾರ, ಪ್ರಸಾರ ಮತ್ತು ಸಲಹೆಗಾರರಾಗಿ ಅನೇಕ ವ್ಯಾಪಾರಿಸಂಸ್ಥೆಗಳನ್ನು ಕಟ್ಟಿದರು, ಬೆಳೆಸಿದರು ಮತ್ತು ಈಗಲೂ ಬೆಳೆಸುತ್ತಿದ್ದಾರೆ.

ಭೂಗರ್ಭದೊಳಗಿನ ಗುಪ್ತ ಖನಿಜಗಳು ತಮ್ಮ ತಮ್ಮ ಸಂಬಂಧವನ್ನು ಗುಪ್ತವಾಗಿಯೆ ಇಟ್ಟುಕೊಂಡಿರುವಂತೆ ದೊಡವಾಡ ಅವರು ಬೇಂದ್ರೆ ಪ್ರವೃತ್ತಿ ಮತ್ತು ಅವರ ಸಾಹಿತ್ಯದೊಳಗಿನ ಆಧ್ಯಾತ್ಮಿಕತೆಯೊಂದಿಗೆ ಗುಪ್ತ ಆರಾಧನೆ ಇಟ್ಟುಕೊಂಡಿದ್ದರು ಎಂಬುದು, ದೊಡವಾಡ ಮತ್ತು ಸುರೇಶ ಕುಲಕರ್ಣಿ ಇವರ ಆಪ್ತವ್ಯ ಸಂಬಂಧದಲ್ಲಿ ಇತ್ತೀಚೆ ಪ್ರಕಟವಾಯಿತು. ಅದು ಬೆಳೆಯುತ್ತ ಹೊರಟಿದ್ದು ಆಶ್ಚರ್ಯದ ವಿಷಯವಾದರೂ ಸತ್ಯಕ್ಕೆ ಬಹಳ ಸಮೀಪ.

ದೊಡವಾಡ ಮನೆತನ ಮೊದಲಿನಿಂದಲೂ ಆಧ್ಯಾತ್ಮ ಸಾಧನೆಯ ಪುಂಜ. ಹೀಗಾಗಿ ಶ್ರೀ ಜಿ. ಜಿ. ದೊಡವಾಡ ಅವರೂ 'ಸತ್ಯಂ, ಶಿವಂ, ಸುಂದರಂ, ತತ್ವದ ಆರಾಧಕರಾಗಿ ಅನೇಕ ವ್ಯಾಪಾರಿ ಬಂಧುಗಳಿಗೆ ಮಾರ್ಗದರ್ಶಕರಾಗಿದ್ದಾರೆ. 'ವ್ಯಾಪಾರಂ ದ್ರೋಹ ಚಿಂತನಂ' ಎಂಬುದು ಕೆಲವರಿಗೆ ಒಪ್ಪಿಗೆಯಾದರೆ, 'ವ್ಯಾಪಾರಂ ಸ್ನೇಹ ಚಿಂತನಂ' ಎಂಬುದು ದೊಡವಾಡ ಇವರ ಜೀವನದ ಧ್ಯೇಯವಾಕ್ಯ. ಬೇಂದ್ರೆಯವರದು 'ಒಲವೇ ನಮ್ಮ ಬದುಕು' ಎಂಬುದು ಹೃದಯ ವಾಕ್ಯ. ಹೀಗಾಗಿ

ಸ್ನೇಹದ ಸೆಲೆ ಮತ್ತು ಆಧ್ಯಾತ್ಮದ ನೆಲೆ ಬೇಂದ್ರೆ ಮತ್ತು ದೊಡವಾಡ ಇವರ ಸಂಬಂಧಸೂತ್ರ ಎಂದು ನನ್ನ ಭಾವನೆ.

ಬಾಲರಂಗ ಪೂರಕ ಪರಿಸರ ನಿರ್ಮಾಣ ಕೇಂದ್ರ ಮತ್ತು ನವನಗರದ 'ಯವನಿಕಾ' ಸಂಘಟನೆಗಳು, 'ಬೇಂದ್ರೆ ರಂಗಾವಳಿ' ಎಂಬ ರಂಗಶಿಬಿರದ ಜವಾಬ್ದಾರಿಯನ್ನು ಹೊತ್ತಿವೆ ಎಂಬುದು ಸುರೇಶ ಕುಲಕರ್ಣಿಯವರಿಂದ ತಿಳಿದಾಗ, ದೊಡವಾಡ ಅವರೂ ಈ ಕಾರ್ಯದಲ್ಲಿ ಸಹಭಾಗಿಯಾಗುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಲ್ಲದೆ ೩-೧೧-೧೯೮೭ ರಿಂದ ಪ್ರಾರಂಭವಾದ ರಂಗಶಿಬಿರದ ಉದ್ಘಾಟಕರಾಗಿ ಅಂಬಿಕಾತನಯದತ್ತ ವೇದಿಕೆಗೆ ಆಗಮಿಸಿ, ರಂಗಶಿಬಿರಕ್ಕೆ ಯಶಸ್ಸನ್ನು ಹಾರೈಸಿದರು. ಇದು ದೊಡವಾಡ ಅವರ ಸಾಹಿತ್ಯ ಹೃದಯದ ಬಗೆ! ಈ ಹೃದಯವಂತಿಕೆಗೆ ನನ್ನ ಅಂತಃಕರಣಪೂರ್ವಕ ಧನ್ಯವಾದಗಳನ್ನು ಅರ್ಪಿಸುವ ನಿಮಿತ್ತವಾಗಿ ಈ ಚಿಕ್ಕ ಲೇಖನವನ್ನು ಬರೆದಿರುವೆ.

ದೊಡವಾಡ ಅವರ ಅಮೃತಮಹೋತ್ಸವವು ಬೇಗನೆ ವೈಭವಪೂರ್ಣವಾಗಿ ಸಾಗಲಿದೆ. ದೊಡವಾಡ ಅವರ ಸ್ನೇಹ ಸಂಬಂಧಿಗಳೆಲ್ಲ ಈ ಮಹೋತ್ಸವದಲ್ಲಿ ಸಹಭಾಗಿಗಳಾಗುತ್ತಿರುವುದು ಅವರ ಉದಾತ್ತ ಉದಾರಗುಣದ ಪ್ರತೀಕವಾಗಿದೆ. ದೊಡವಾಡ ಅವರು ಇಂದಿನವರೆಗೆ ಬೆಳೆಸುತ್ತ ಬಂದಿರುವ, ಅಮೃತವಾದ ಸ್ನೇಹ ವೃಕ್ಷವು ಹೀಗೆಯೇ ಹಬ್ಬುತ್ತ ಇರಲಿ, ಹೂವು ಮತ್ತು ಹಣ್ಣುಗಳಿಂದ ತೃಪ್ತಿಕೊಡಲಿ ಎಂದು ಹಾರೈಸಿ, ದೊಡವಾಡ ಅವರಿಗೆ ಪರಮಾತ್ಮನು ಆಯುಷ್ಯ, ಆರೋಗ್ಯ, ಸಕಲ ಭಾಗ್ಯವನ್ನು ದಯಪಾಲಿಸಲಿ ಎಂದು ಇಂದಿನ ಅರುಣೋದಯದ ಕಾಲದಲ್ಲಿ ಪ್ರಾರ್ಥಿಸುವೆ.

●

ನೀನೆನ್ನ ಭವವ ಕೊಂದೆಹೆನೆಂದು ಜಂಗಮಲಾಂಛನವಾಗಿ ಬಂದೊಡೆ
ನಾನು ಭಕ್ತನೆಂಬ ವಾಹನವಾಗಿರ್ದೆನು ಕಾಣಾ ಕೂಡಲಸಂಗಮದೇವ

ಬಸವಣ್ಣನವರ ವಚನ

ಸದ್ಗುಣಗಳ ತ್ರಿವೇಣಿ



● **ಸುದೈವ ದೊಡವಾಡ**

ಸಾತ್ವಿಕ ಜೀವಿಗಳು, ಸದುವಿನಯ, ಸ್ನೇಹಜೀವಿಗಳು– ಈ ಮುಪ್ಪುರಿ ಗುಣ ಒಂದೆಡೆ ಕೂಡುವುದು ಅಪರೂಪ. ಅಂಥ ಸದ್ಗುಣಗಳ ತ್ರಿವೇಣಿ ಸಂಗಮ ನಮ್ಮ ತಂದೆಯವರು. ಇವರ ದ್ವಿತೀಯ ಪುತ್ರ ನಾನು. ಆ ಗುಣಗಳಲ್ಲಿಯೂ ದ್ವಿತೀಯ ಸ್ಥಾನ ಪಡೆಯಬೇಕೆಂಬ ಹಂಬಲ ನನ್ನದು.

ನಾನು ಚಿಕ್ಕವನಾಗಿದ್ದಾಗಿನಿಂದಲೂ ಅವರದು ಅದೇ ಉತ್ಸಾಹ, ನಡತೆ. ಅವರ ನಡೆ ನುಡಿಯೇ ನಮಗೆಲ್ಲರಿಗೆ ಆದರ್ಶ. ಅವರ ಉದಾತ್ತ ಮನೋಭಾವ, ಸಹನಶೀಲತೆ ಮಾದರಿಯೆನಿಸಿವೆ. ಮಕ್ಕಳೇ ಸರ್ವಸ್ವವೆಂದು ಪ್ರೀತಿಸಿದ ತಂದೆ ಅವರು. ಯಾವುದೇ ವಿಷಯಕ್ಕೆ ಬಂದರೂ ಅಷ್ಟೇ ಕಟ್ಟುನಿಟ್ಟು.

ಅವರ ಮೆಚ್ಚಬೇಕಾದ ಗುಣವೆಂದರೆ ಯಾರ ಮೇಲೂ ತಮ್ಮ ಅಭಿಪ್ರಾಯ ಹೇರದಿರುವುದು. ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಂಡು ಅವರ ಅಭಿರುಚಿಯನ್ನು ತಿಳಿದು, ಅವರ ಬಗ್ಗೆ ಅವರಿಗಿರುವ ಸ್ಪಷ್ಟ ಅಭಿಪ್ರಾಯ ತಿಳಿದುಕೊಂಡು ಮಾರ್ಗದರ್ಶನ ಮಾಡುತ್ತಿದ್ದಾರೆ. ನನ್ನ ಮನೋಧರ್ಮವನ್ನು ಮನಗಂಡು, ಸರಕಾರಿ ನೌಕರಿಯಲ್ಲಿ ಅಭಿರುಚಿ ಇದ್ದದ್ದು ಗಮನಿಸಿ, ನನಗೆ ಬ್ಯಾಂಕಿನಲ್ಲಿ ಕೆಲಸ ಹಚ್ಚಿಕೊಟ್ಟು ಉತ್ತಮ ಮಾರ್ಗದರ್ಶನ ಮಾಡಿದ್ದಾರೆ.

ಮೊಮ್ಮಕ್ಕಳ ಬಗ್ಗೆ ಅವರಿಗೆ ಅಪಾರ ಪ್ರೀತಿ. ಅವರು ಒತ್ತುಕೊಟ್ಟುದು ಮುಖ್ಯವಾಗಿ ಓದುವದಕ್ಕೆ. ತಾವು ಓದಿದ ಒಳ್ಳೆಯ ಪುಸ್ತಕಗಳನ್ನು ಮೊಮ್ಮಕ್ಕಳಿಗೆ ಓದಲು ಕೊಡುತ್ತಾರೆ. ಸ್ನಾನ ಮಾಡಿಸುವುದು; ಓದಲು ಬರೆಯಲು ಹೇಳಿಕೊಡುವುದು. ಶರಣರ ರೀತಿನೀತಿಗಳು– ಅವರ ಉದಾತ್ತ ವಿಚಾರಗಳನ್ನು ಮೊಮ್ಮಕ್ಕಳಿಗೆ ತಿಳಿಸಿ ಕೊಡುವದು. ಅವರ ಪ್ರೀತಿಯ ಹವ್ಯಾಸಗಳು.

ಅವರ ಸ್ನೇಹ ಬಳಗವೂ ಅಷ್ಟೇ ಚೆನ್ನಾಗಿದೆ. ಬಳ್ಳಿ, ತಾನೊಂದು ಬೆಳೆದು ಹೂಬಿಟ್ಟು ತನ್ನ ಸುತ್ತಲೂ ಪರಿಮಳ ಪಸರಿಸುವಂತೆ, ನಮ್ಮ ತಂದೆಯವರು. ಅವರ ಉದಾರ ಗುಣ, ಉದಾತ್ತ ವಿಚಾರಗಳು ಇಂದು ಮನೆತನವನ್ನು ತುಂಬ ಮುಂದೆ ತಂದಿವೆ. ಇಂದು ಅವರ ಅಮೃತ ಮಹೋತ್ಸವ ನಮ್ಮೆಲ್ಲರಿಗೆ ತುಂಬ ಸಂತೋಷ ತಂದಿದೆ. ದೇವರು ಅವರಿಗೆ ಇನ್ನೂ ಹೆಚ್ಚಿನ ಆಯುರಾರೋಗ್ಯ ಕೊಟ್ಟು ಸುಖದಿಂದ ಕಾಪಾಡಲಿ ಎಂಬುದು ನಮ್ಮ ಹಾರೈಕೆ.

●

ಕೂಡಲಸಂಗಮದೇವಾ, ಎನ್ನ ಮನವೆಂಬ
ಮರ್ಕಟನ ದಾಳಿಯುನೆಂದಿಂಗೆ ನೀಗಿ ನಿಮ್ಮೊಡಗೂಡುವೆನಯ್ಯ

ಬಸವಣ್ಣನ ವಚನ

ಮಲಹರನೆ ನಿಮ್ಮ ಕರುಣಶೇಷವನಿತ್ತು
ನೆಲೆಗೊಳಿಸೊ ಶ್ರೀಗುರುವೆ ಯೋಗಿನಾಥ

ಸಿದ್ಧರಾಮನ ವಚನ

ಎಪ್ಪತ್ತಾರರ ತರುಣ



● **ಬಸವೇಶ್ವರ ಗೋವಿಂದಪ್ಪ ದೊಡಮನಿ**

ಎತ್ತರದ ನಿಲುವು, ಧರಿಸಿದ ಬಿಳಿ ಕೋಟು, ಧೋತರ, ಕರಿ ಟೊಪ್ಪಿಗೆ, ಕೈಯಲ್ಲೊಂದು ಛತ್ರಿ, ಅಗಲವಾದ ಹಣೆಯ ಮೇಲೆ ಸದಾ ರಾರಾಜಿಸುತ್ತಿರುವ ಮೂರು ಬೆರಳು ವಿಭೂತಿ, ಎಂಥವರನ್ನೂ ಆಕರ್ಷಿಸುವ ವ್ಯಕ್ತಿತ್ವ. ಇದರ ಪರಿಚಯ ನನಗಾದುದು ಕಳೆದ ಮೂವತ್ತೈದು ವರ್ಷಗಳ ಮೊದಲು. ನಿಕಟ ಸಂಪರ್ಕ ಬಂದುದು ಹದಿಮೂರು ವರ್ಷಗಳಿಂದ ಇತ್ತೀಚೆಗೆ. ನಮ್ಮೆಲ್ಲ ಮಿತ್ರರ ಸಾಮೂಹಿಕ ಪ್ರಯತ್ನದ ಫಲ ಶ್ರೀ ಚನ್ನಬಸವೇಶ್ವರ ಫಾಯನಾನ್ಸ ಕಾರ್ಪೊರೇಶನ್ ರೂಪುಗೊಂಡಿತು.

ಇವರ ಸ್ನೇಹಪೂರ್ಣ ವ್ಯಕ್ತಿತ್ವಕ್ಕೆ ಮುಖಗಳು ಹಲವಾರು. ಶಾಂತಸ್ವಭಾವ, ನಿಷ್ಕಲ್ಮಷವಾದ ಮನಸ್ಸು, ಕ್ಲಿಷ್ಟವಾದ ವಿಷಯವಿದ್ದರೂ ಕೂಲಂಕಷವಾಗಿ ವಿಚಾರಿಸುವ, ತಿಳಿಯದವರಿಗೆ ತಿಳಿಸಿ ಹೇಳುವ ಸಮಾಧಾನ ಪ್ರವೃತ್ತಿ. ಸದಾ ಕರ್ತವ್ಯಶೀಲತೆ, ಪರರ ಬಗೆಗೆ ಸಹಾನುಭೂತಿ, ಸರ್ವರಿಗೂ ಹಿತ ಬಯಸುವಿಕೆ, ಇರುವೆಯ ಮನಕ್ಕೂ ನೋವಾಗದ ರೀತಿಯಲ್ಲಿ ನಡೆದುಕೊಳ್ಳುವ ರೀತಿ, ಮನಸ್ತಾಪ, ದುಃಖ, ಬೇಸರವನ್ನು ಮನದಲ್ಲಿ ಮಡುಗಿ ನಗುಮೊಗ ಹೊಂದಿದ ಜೀವ, ದಯಾಮಯಿ, ಕೊಡುಗೈದಾನಿಗಳು. ಗುರುವಿನಲ್ಲಿಟ್ಟ ಶ್ರದ್ಧೆ, ವಿಶ್ವಾಸ, ಭಕ್ತಿ ಇವರ ತುಂಬು ಸಂತೃಪ್ತ ಬದುಕಿನ ಒಳಗುಟ್ಟು.

'ಭಾವ ಚೆನ್ನಾಗಿದ್ದರೆ ಭಾಗ್ಯಕ್ಕೇನು ಕಡಿಮೆ' ಎನ್ನುವಂತೆ ತುಂಬು ಸಂಸಾರ. ಮೂರು ತಲೆಮಾರುಗಳನ್ನು ಕಂಡ ಪುಣ್ಯವಂತಿಕೆ. ಇಂತಹ ತುಂಬುಬಾಳು ಭರಿತ ಹಿರಿಯರನ್ನು ಪಡೆದ ನಾವೇ ಭಾಗ್ಯಶಾಲಿಗಳು.

'ಬಿತ್ತಿದಂತೆ ಬೀಜ, ಬೆಳೆಸಿದಂತೆ ಫಲ' ಎನ್ನುವಂತೆ ಹೆತ್ತಮಕ್ಕಳು ಪುಣ್ಯಶಾಲಿಗಳು. ಹಿರಿಯ ಪುತ್ರ ಸರಸಾನಂದ ಎಲ್ಲರಿಗೂ ಸರಸ ಆನಂದನೇ, ಅವರು ಪಡೆದ

'ಆಯಿಲ್ ಕಿಂಗ್' ಬಿರುದು ಅವರ ವ್ಯಾಪಾರಿ ಸಾಮರ್ಥ್ಯಕ್ಕೆ ಸಂಕೇತ. ತಂದೆಯ ಉದಾರತೆ ಇವರಲ್ಲಿಯೂ ಬಳುವಳಿಯಾಗಿ ಬಂದಿದೆ. ಇನ್ನುಳಿದ ಮಕ್ಕಳೂ ತಮ್ಮ ತಮ್ಮ ಸೇವೆಯಲ್ಲಿ ಮನವಿಟ್ಟು ನಡೆಯುವವರು. ಇಂಥ ಸಂತಾನಭಾಗ್ಯದ ದೊಡವಾಡರು ನಿಜವಾಗಿಯೂ ಧನ್ಯರು.

ಮಿತ್ರಮಂಡಳಿಗೆ ಇವರೊಬ್ಬ ಹಿರಿಯಣ್ಣ. ಇವರ ಮುಂದಾಳತ್ವ ನಮಗೆಲ್ಲ ದಾರಿದೀಪ. ದೊಡ್ಡವಾಡರ ಅಮೃತಮಹೋತ್ಸವ ಶುಭ ಸಂದರ್ಭದಲ್ಲಿ ನಮ್ಮೆಲ್ಲರ ಹರಕೆ ಇಷ್ಟೇ.

ಇವರಿಂದ ಹೆಚ್ಚಿನ ಸಮಾಜಸೇವೆ ಸಲ್ಲಲಿ,
ಆಯುರಾರೋಗ್ಯ ಸಕಲ ಸೌಭಾಗ್ಯ ದೊರಕಲಿ
ಹೂಲಿ ಅಜ್ಜನ ತುಂಬು ಆಶೀರ್ವಾದ ಇವರಿಗಿರಲಿ.

●

ಈ ಶರೀರ ಸ್ಥಿರವೆಂದು, ಈಶ ನಿಮ್ಮನು ಮಱೆದು
ಘಾಸಿಯಾದೆನು ಗುರುವೆ ಯೋಗಿನಾಥ
ಸಿದ್ಧರಾಮನ ವಚನ

ಅಱಿದಱಿದು ನಿಮ್ಮ ಶರಣನು ಆಚರಿಸುವ
ಆಚರಣೆಯ ಕಂಡು ಕಣ್ದೆಱೆದೆನಯ್ಯ ಕೂಡಲಸಂಗಮದೇವ
ಬಸವಣ್ಣನವರ ವಚನ

ಅನುಕರಣೀಯ ಜೀವ



● ರಾಜಶೇಖರಪ್ಪ ಬಸಪ್ಪ ಮಿಣಜಗಿ

ಅಣ್ಣನವರೆಂದೇ ಜಯಪ್ರಿಯರಾಗಿರುವ ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಇವರ ನಿಕಟ ಸಂಬಂಧ ಮೂರು ದಶಕಗಳಿಂದಲೂ ನನಗಿದೆ. ನಯ ವಿನಯದ ಸಾಕಾರಮೂರ್ತಿ, ಮೃದು ಸ್ವಭಾವದ ಶ್ರೀ ಗುರುಪುತ್ರಪ್ಪನವರು ಸ್ವಪ್ರಯತ್ನ, ಸ್ವಾವಲಂಬನ, ಸಾಹಸ ಪ್ರವೃತ್ತಿಯಿಂದಲೇ ಮುಂದೆ ಬಂದಿದ್ದಾರೆ.

"I will be happy but, I wont be happy until and unless I make you all happy too" ಎಂಬಂತೆ, ವಿಶಾಲ ಬಾಂಧವ್ಯ ಗುಣದವರಾದ ಇವರು ತಾವಷ್ಟೇ ಬೆಳೆಯದೆ, ತಮ್ಮನ್ನು ಆಶ್ರಯಿಸಿದವರೆಲ್ಲರನ್ನು ಪೋಷಿಸಿದರು. ಯೋಗಾಯೋಗವೆಂಬಂತೆ ಗುರುಪುತ್ರಪ್ಪನವರ ಯೋಗ್ಯತೆಗೆ ತಕ್ಕಂತೆ ಅವರ ಚಿರಂಜೀವರೆಲ್ಲರೂ ಅವರ ಕೀರ್ತಿಯನ್ನು ಹೆಚ್ಚಿಸಿರುವದು ಸುಕೃತವೇ ಸರಿ.

ವ್ಯಾಪಾರ - ವ್ಯವಹಾರದಲ್ಲಿ ಪಾದಾರ್ಪಣೆ ಮಾಡಬೇಕೆನ್ನುವವರಿಗೆ ಇವರ ಜೀವನ ಅನುಕರಣೀಯ. ಶ್ರೀ ಗುರುಪುತ್ರಪ್ಪನವರ ಪುಣ್ಯವಿಶೇಷವೆಂದರೆ ಅವರಿಗೆ ಜನ್ಮವಿತ್ತ ಮಹಾಮಾತೆ ಶ್ರೀಮತಿ ಗಂಗಮ್ಮನವರು (೧೦೫ ವರ್ಷದ) ಶತಾಯುಷಿಗಳಾಗಿ ಇನ್ನೂ ನಮ್ಮ ಮಧ್ಯದಲ್ಲಿರುವದು. ಶ್ರೀ ಗುರುಪುತ್ರಪ್ಪನವರು ದಲಾಲ ಮತ್ತು ವ್ಯಾಪಾರಸ್ಥರ ಸಂಘದ ದಕ್ಷ ಅಧ್ಯಕ್ಷರಾಗಿ ಕಳೆದ ನಾಲ್ಕು ವರ್ಷಗಳಿಂದಲೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಅವಧಿಯಲ್ಲಿ ಅನೇಕ ವರ್ಷಗಳಿಂದ ಸ್ಥಗಿತಗೊಂಡಿದ್ದ ಸಂಘದ ಸ್ವತಂತ್ರವಾದ ಕಟ್ಟಡವು ಸಮಸ್ತ ವ್ಯಾಪಾರಿ ಬಂಧುಗಳ ಸಹಕಾರದಿಂದ ನಿರ್ಮಾಣಗೊಂಡಿದೆ. ಈ ಕಟ್ಟಡವು ಸುಂದರವೂ ಬಹೂಪಯೋಗಿಯೂ ಆದಾಯದ ಮೂಲವೂ ಆಗಿದೆ. ಇದು ವರ್ತಕ ಸಮುದಾಯದ ಉನ್ನತಿಗೆ ಕಾರಣೀಭೂತವಾಗಿದೆ. ಇದು ಅವರ ಸಂಘಟನಾಶಕ್ತಿಗೆ ಸಾಕ್ಷಿಯಾಗಿದೆ. ಹಾಗೆಯೇ ವ್ಯಾಪಾರಿ ಬಂಧುಗಳಿಗೆ ಇವರ ಸಕಾಲಿಕ ಸಹಾಯ, ಸಹಕಾರದ ಹಸ್ತ ಸದಾ ಸಿದ್ಧ.

ಅಮೃತ ಮಹೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ಸಾಂಗಗೊಳ್ಳಲಿ. ಅವರ ಭಾವೀ ಜೀವನವು ಸುಖಮಯವಾಗಲಿ ಮತ್ತು ಬರಲಿರುವ ದಿನಗಳಲ್ಲಿ ಇವರಿಂದ ಇನ್ನೂ ಹೆಚ್ಚು - ಹೆಚ್ಚಿನ ಸಮಾಜ ಕಾರ್ಯವು ನೆರವೇರುವಂತಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

●

ಅಪಾರಮಹಿಮ ಚೆನ್ನಮಲ್ಲಿಕಾರ್ಜುನಾ
ನೀನೆನ್ನೊಳಗೆ ಅಡಗಿಪ್ಪ ಪರಿಯ ಬೇರಿಲ್ಲದೆ ಕಂಡು ಕಣ್ದೆರೆದೆನು
ಮಹಾದೇವಿಯಕ್ಕನ ವಚನ

ಕಪಿಲಸಿದ್ಧ ಮಲ್ಲಿನಾಥಯ್ಯ, ನೀನೇ
ಎನ್ನ ಕಾಯದ ಜೀವದ ಹೊಲಿಗೆಯ ಬಿಚ್ಚಿ ಬಿಸಾಡಿಸಾ ನಿಮ್ಮ ಧರ್ಮ
ಸಿದ್ಧರಾಮನ ವಚನ

ಅಮೃತಸ್ಮರಣೆ

● **ಸುರೇಶ ಕುಲಕರ್ಣಿ**



ಅಮೃತಮಹೋತ್ಸವದ ಸಲುವಾಗಿ ಶನಿವಾರ ದಿ. ೧೫-೭-೧೯೮೭ ರ ಮಧ್ಯಾಹ್ನ ೧ ಘಂಟೆಗೆ ಶ್ರೀ ಜಿ. ಜಿ. ದೊಡವಾಡ ಅವರ ದಲಾಲಿ ಅಂಗಡಿಯಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವೀರಣ್ಣಾ ವಾಣಿ ಮತ್ತು ಜಿ. ಜಿ. ದೊಡವಾಡ ಅವರನ್ನು ಭೇಟಿ ಮಾಡಿಸಿದವರು ಶ್ರೀ ಘಂಟೆಣ್ಣವರ. ನಾನು ಅಂದು ಬೆಳಿಗ್ಗೆ ಶಾಲೆಗೆ ಬಂದವನು, ಚೈತನ್ಯ ಮಂಡಲದ ಕಾರ್ಯಕ್ರಮಗಳನ್ನು ಮುಗಿಸಿಕೊಂಡೆ. ಅರ್ಧ ಘಂಟೆಯಲ್ಲಿ ಅಣ್ಣಾನವರ ಭೇಟಿಯ ಕಾರ್ಯ ಮುಗಿಯಬಹುದೆಂದು ತಿಳಿದ ನನಗೆ ೩ ಘಂಟೆಗಳ ಕಾಲ ನಡೆದ ಚರ್ಚೆ ಒಂದು ರಸನಿಮಿಷವಾಗಿ ಪರಿಣಮಿಸಿತು. ಅದೊಂದು ಅಮೃತಘಳಿಗೆ. ಅವಿಸ್ಮರಣೀಯವಾದ ಕ್ಷಣಗಳು. ಶ್ರೀ ದೊಡವಾಡರ ಅಂಗಡಿ ಬಗ್ಗೆ ಶ್ರೀ ಕೆ. ಟಿ. ವಾಜಪೇಯಿವರಿಂದ ಕೇಳಿ ತಿಳಿದ ನನಗೆ, ದೊಡವಾಡರ ಪ್ರತ್ಯಕ್ಷ ವ್ಯಕ್ತಿತ್ವ ಅಮೃತಮಹೋತ್ಸವದ ಸಿದ್ಧತೆಯ ಸಮಯದಲ್ಲಿ ಅನುಭವಕ್ಕೆ ಬಂತು.

ಗುರುವಾರ ದಿ. ೨೩-೭-೧೯೮೭ ರಂದು ಶ್ರೀ ದೊಡವಾಡ ಅಣ್ಣಾ ಅವರನ್ನು ಕಾಣಲು ಹೋದಾಗ ರಾತ್ರಿ ೭-೩೦ ಘಂ. ಅವರು ಯಾವದೇ ಕಾರ್ಯಕ್ರಮದ ಗಡಿಬಿಡಿಯಲ್ಲಿರಲಿಲ್ಲ. ಧಾರವಾಡದಾಗ ಎಲ್ಲಾ ಕಡೆಗೆ ಲೈಟ ಹೋಗಿದ್ವು, ಮೇಣ ಬತ್ತಿ ಹಚ್ಚಿಕೊಂಡು ಮಾತಿಗೆ ಸುರುಮಾಡಿದರ 'ಬಾದರಾಯಣ ಕಾಲದ ಸಂಬಂಧ ಅದ' ಅನ್ನೋಹಾಂಗ ಮಾತುಗಳು ಪ್ರಾರಂಭಾದ್ವು.

'ಅಣ್ಣಾ ಅವರ, ನೀವು ಇಷ್ಟ ಮುಂದ ಬರಲಿಕ್ಕೆ ಕಾರಣ ಕರ್ತರು ಯಾರು ?' ಅಂತ ಘಂಟೆಣ್ಣವರ ಪ್ರಶ್ನಿಸಿದರು.

ಅದಕ್ಕೆ ಶ್ರೀ ದೊಡವಾಡ ಅಣ್ಣಾ ಅವರು ಉತ್ತರಿಸುತ್ತ—

"ನನ್ನ ಪೂಜ್ಯ ತಂದೆಯವರಾದ ಶ್ರೀ ಗುರುಪಾದಪ್ಪನವರು. ಅವರು ಆಧ್ಯಾತ್ಮ ಜೀವಿಗಳು" ಅವರು ನನಗ ಉಪದೇಶ ಮಾಡಿದ್ದು ಅಂದ್ರ 'ನಿನ್ನ ಜೀವನದಾಗ ಎಷ್ಟ ಘಳಿಸಿ ಏನ ಮಾಡಾವ ? ಮನುಷ್ಯಗ ದುಡ್ಡ ಒಂದs ಮಹತ್ವದ್ದಲ್ಲ. ಅದರ ಜೊತೆಗೆ ಸತ್ವನಿಷ್ಠುರವಾಗಬೇಕು. ನೀತಿ, ನಿಯಮಗಳಿಂದ ಸತ್ಯವನ್ನು ಕಾಪಾಡಬೇಕು. ಪರೋಪಕಾರಿ ಆಗಬೇಕು'. ಹೀಂಗ ಹೇಳಿದ ಮಾತುಗಳು ನನ್ನ ಒಳ್ಳೆಯ ಜೀವನಕ್ಕ ಆಶ್ರಯ ಆಗ್ಯಾವ. ಮೃತ್ಯುಂಜಯ ಅಪ್ಪಗಳು, ಶ್ರೀ ಬೆಟಸೂರ ಪಟ್ಟದದೇವರು ನನಗ ಚಿಕ್ಕಂದಿನಿಂದನs ಆಧ್ಯಾತ್ಮದ ಜ್ಞಾನಕೊಟ್ಟು ಕರುಣೆಸಿದವರು" ಅಂತ ಭಕ್ತಿಯಿಂದ ವಿವರಿಸಿದರು.

"ಮಾನವನ ಜೀವನ ಪಾಪ-ಪುಣ್ಯಗಳ ಮಿಶ್ರಣ. ಅವು ಪ್ರವಾಹ ರೂಪದಾಗ ಪ್ರತಿನಿತ್ಯ ಬರತಾವು ಹೋಗತಾವು. ಅವನಲ್ಲಿಯ ಅಜ್ಞಾನದಿಂದ ದುಃಖಿಸುತ್ತಾನೆ; ಜ್ಞಾನದಿಂದ ಆನಂದ ಪಡತಾನ. ಆನಂದವೇ ಶಾಶ್ವತ ಅಂತ ವೈಮರತಾ ಅಂದ್ರ ಪ್ರಗತಿ ಕುಂಠಿತವಾಗಿ ಮತ್ತ ದುಃಖದಾಗ ಬೀಳತಾನ. ಈ ಸುಖಾ-ದುಃಖ ಅನ್ನೋವು ಯಾವೂ ಶಾಶ್ವತ ಅಲ್ಲ, ಯಾವಾಗಲೂ ಮನುಷ್ಯ ಮನುಷ್ಯನಾಗಿ ಇರಲಿಕ್ಕೆ ಪ್ರಯತ್ನಿಸಬೇಕು" ಅಂತ ನನ್ನ ಆಧ್ಯಾತ್ಮದ ಹೊಸ ಲೋಕಕ್ಕ ಹೇಳಿ ಒಯ್ದರು.

"ಕರ್ಮಗಳು— ಮನಸ್ಸಿನಿಂದ, ಮಾತಿನಿಂದ ಮತ್ತು ಕೃತಿಗಳಿಂದ ಆಗತಾವು. ಕೆಟ್ಟ ವಿಚಾರದಿಂದ ಪಾಪಕರ್ಮ ಹೆಚ್ಚತsದ. ಉತ್ತಮ ವಿಚಾರ ಮಾಡೋದರಿಂದ ಪುಣ್ಯ ಹೆಚ್ಚತ್ತsದ. ಕೆಟ್ಟ ವಿಚಾರದಿಂದ ಪ್ರಯೋಜನ ಇಲ್ಲಾ ಅಂತ ಗೊತ್ತಿದ್ರೂ ಮನುಷ್ಯ ಕೆಟ್ಟ ವಿಚಾರ ಮಾಡತಾನ, ಕೆಟ್ಟದಾಗಿ ಮಾತಾಡತಾನ, ಮತ್ತೊಬ್ಬರಿಗೆ ಕೆಟ್ಟದ್ದನ್ನು ಬಗೀತಾನ. ತಾನಾಗೀ ಪಾಪವನ್ನು ಆಹ್ವಾನಿಸ್ತಾನ. ಪಾಪಕ್ಕ ಗುರಿಯಾಗತಾನ !"

"ಪುಣ್ಯ ಘಳಸಬೇಕಂದ್ರ— ಉತ್ತಮ ವಿಚಾರ ಮಾಡೋಣ, ಉತ್ತಮವಾಗಿ ನಾಲ್ಕು ಮಾತುಗಳನ್ನು ಆಡೋಣ, ಒಳ್ಳೆಯದನ್ನೇ ಸಕಲರಿಗೆ ಬಯಸೋಣ, ಉತ್ತಮ ಕಾರ್ಯದಲ್ಲಿ ತೊಡಗಿದರ ಪುಣ್ಯದ ಘಳಿಕಿ ಆಗತsದ, ಇದರಿಂದ ಕರ್ಮಫಲ ನಿಶ್ಚಿತ ಸಿಗತsದ" ಅಂತ ಮಾರ್ಮಿಕವಾಗಿ ಸಂದೇಶ ಕೊಟ್ರು.

ಇವರಿಗೆ ವ್ಯಾಪಾರಿಕಲಾ ಆನುವಂಶೀಯವಾಗಿ ತಂದೆಯವರಿಂದ ಬಂದ ಉಡುಗೊರೆ. ಇವರ ದೈವ ಇವರನ್ನು ಕರೀಕಟ್ಟಿ, ತಡಕೋಡ, ಧಾರವಾಡ ಹೀಂಗ ಅಲೆದಾಡಿಸಿ ಧಾರವಾಡದಾಗ ನೆಲೆಮಾಡಿಕೊಟ್ಟದ. ಇವರು ಆರು ವರ್ಷದವರಿದ್ದಾಗ ತಂದೆಯವರೊಂದಿಗೆ ಬೆಟ್ಟದಪುರದ ದೊಡ್ಡ ಮಠಕ್ಕ ಹೋಗಿ ಬಂದಾರ. ಕೊಳ್ಳೆಗಾಲ

ತಾಲೂಕಿನ ಶ್ರೀ ಮಹದೇಶ್ವರಸ್ವಾಮಿ ಮಠ (ಮೈಸೂರ ಹತ್ತಿರ) ದ ದರ್ಶನ ಭಾಗ್ಯ ಪಡದಾರ. ವಿದ್ಯಾರ್ಥಿಯಾಗಿದ್ದಾಗ ವಿರಿತಾತನ ದರ್ಶನ, ಉಗರಗೋಳ ಸ್ವಾಮಿಗಳ ದರ್ಶನ ಆಗೇದ. ಮೃತ್ಯುಂಜಯ ಅಪ್ಪಗಳ ಸಾಮೀಪ್ಯ ದರ್ಶನ ಪಡದಾರ. ಅವರ ಸೇವಾನೂ ಮಾಡಿ ಸಂಸ್ಕಾರ ಪಡದಾರ. ಋಷಿಕೇಶ, ಪ್ರಯಾಗ, ಪಂಜಾಬದ ಸುವರ್ಣಮಂದಿರ... ಹೀಂಗ ಅನೇಕ ಕಡೆ ಸುತ್ತಿ 'ಜಗತ್ತು ಪರಮಾತ್ಮನ ಸ್ವರೂಪದಾಗ ಅದ' ಅಂತ ಕಂಡಾರ. ಇವರಿಗೆ ಹೆಚ್ಚು ಹಿಡಿಸಿದ್ದು ಅಂದ್ರ 'ಶರಣಧರ್ಮ'- ಸಕಲ ಜೀವಾತ್ಮರಿಗೆ ಲೇಸ ಬಯಸಿದ ಧರ್ಮ.

ಇವರಿಗೆ ಉದ್ಯೋಗ ಸಣ್ಣದಾಗಿರಲಿ, ದೊಡ್ಡದಾಗಿರಲಿ, ಮನಸ್ಸಿಗೊಟ್ಟು ಪ್ರಾಮಾಣಿಕವಾಗಿ ದುಡಿಯೋದೊಂದೇ ಗೊತ್ತು. ಉದ್ಯೋಗ ಸಣ್ಣದಂತ ಹಿಂಜರಿದಿಲ್ಲ. ದೊಡ್ಡದಾತು ಅಂತ ನಿರ್ಲಕ್ಷ ಮಾಡಿಲ್ಲ. ಇವರು ಧಾರವಾಡಕ್ಕ ಅಂಗಡಿ ಮಾಡಿ, ರವಾ, ಅಡಿಕಿ, ಅಜವಾನ, ಜೀನತುಪ್ಪದ ರುಚಿಯನ್ನು ಬೆಳಗಾವಿಯವರಿಗೆ ತೋರಿಸಿದರು. ಬೆಳಗಾವಿಯ 'ಮೋದಗಿ ಬೆಲ್ಲ'ದ ರುಚಿಯನ್ನು ಧಾರವಾಡದವರಿಗೆ ತೋರಿಸಿದರು. ವ್ಯಾಪಾರದಾಗ ತೂಕ ಮತ್ತು ಪ್ರಮಾಣದ ಅಳತೆಯನ್ನು, ವಸ್ತುವಿನ ಗುಣಮಟ್ಟವನ್ನು ಉಳಿಸಿಕೊಂಡು ಎಲ್ಲರ ವಿಶ್ವಾಸ ಗಳಿಸಿದರು. 'ದೇವರು ಯಾರಿಗೂ ಮುಷ್ಟಿ ಕೊಡೋದಿಲ್ಲಾ, ದುಡಿಯಾಂವಗ, ಬುದ್ಧಿ ಮತ್ತು ಅಸಾಧಾರಣ ಶಕ್ತಿ ಕೊಡತಾನ' ಅನ್ನೋದನ್ನ ಅರಿತವರು.


ತಮ್ಮಲ್ಲಿರುವ ಅಸಾಧಾರಣ ಶಕ್ತಿಯಿಂದ, ಬುದ್ಧಿವಂತಿಕೆಯಿಂದ ೧೯೪೭ ರಲ್ಲಿ ಧಾರವಾಡದಾಗ ಚಿಕ್ಕದಾದ ಕಿರಾಣಿ ಅಂಗಡಿ ಪ್ರಾರಂಭಿಸಿ, ದಲಾಲಿ ಅಂಗಡಿ (೧೯೬೧) ರೈಸ್‌ಮಿಲ್ (೧೯೬೩) ಸೇಂಗಾ ಒಡೆಯುವ ಮಿಲ್ (೧೯೮೩) ಸ್ನೇಹಿತರೊಂದಿಗೆ ಜಿನ್ನಿಂಗ ಮತ್ತು ಪ್ರೆಸ್ಸಿಂಗ್ ಫ್ಯಾಕ್ಟರಿ (೧೯೮೬) ಹೀಂಗ ವರ್ಷವರ್ಷಕ್ಕ ಹೊಸ ಕೆಲಸಗಳ ಜವಾಬ್ದಾರಿ ಹೊತ್ತು ದೊಡವಾಡ ಸಾವಕಾರ ಆದರು.

ತಮ್ಮ ಕೆಲಸ ಅಂತ ಮಾಡತಾರ ಅಂತಿಲ್ಲ. ಅನೇಕ ಸಾರ್ವಜನಿಕ ಸಂಘ- ಸಂಸ್ಥೆಗಳಲ್ಲಿಯೂ ದಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುರುಘಾಮಠದ ಟ್ರಸ್ಟಿಯಾಗಿ (೧೯೬೧-೭೨) ಅರ್ಬನ್ ಬ್ಯಾಂಕದ ಡೈರೆಕ್ಟರರಾಗಿ, ಚೇರಮನ್ನರಾಗಿ (೧೯೬೭), ವಿಶ್ವಹಿಂದೂ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿ (೧೯೭೨), ಚೆನ್ನಬಸವೇಶ್ವರ ಫೈನಾನ್ಸ ಕಾರ್ಪೋರೇಶನ್‌ದ ಡೈರೆಕ್ಟರ ಮತ್ತು ಚೇರಮನ್ನರಾಗಿ (೧೯೭೫), ಭಾರತೀಯ ಕಲಾಕೇಂದ್ರದ ಅಧ್ಯಕ್ಷರಾಗಿ (೧೯೮೩), ದಲಾಲಿ ಮತ್ತು ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾಗಿ (೧೯೮೩), ಅಖಿಲ ಭಾರತ ಶಿವಾನುಭವ ಸಂಸ್ಥೆಯ ಉಪಾಧ್ಯಕ್ಷರಾಗಿ (೧೯೮೬), ಮೃತ್ಯುಂಜಯ ಫೈನಾನ್ಸ ಕಾರ್ಪೋರೇಶನ್‌ದ ಸಂಸ್ಥಾಪಕರಾಗಿ (೧೯೮೭). ಹೀಗೆ ದೊಡ್ಡ ಪಟ್ಟಿಯೇ ಇದೆ. ಅನೇಕ ಸಂಘ ಸಂಸ್ಥೆಗಳ ಭಾರಹೊತ್ತು ದಕ್ಷರೀತಿ

ಯಿಂದ ಕಾರ್ಯನಿರ್ವಹಿಸುತ್ತಿರುವದು ಅವರ ಅಸಾಧಾರಣ ವ್ಯಕ್ತಿತ್ವದ ದ್ಯೋತಕವಾಗಿದೆ.

'ಇಷ್ಟೆಲ್ಲಾ ಕಾರ್ಯಗಳನ್ನು ನೀವು ಹ್ಯಾಂಗ ನಿಭಾಯಿಸಿಕೊಂಡು ಹೋಗತೀರಿ ?' ಅಂತ ಕೇಳಿದ ಪ್ರಶ್ನೆಗೆ 'ಎಲ್ಲಾ ವಿಶ್ವಾಸ. ನಾನು ಜನರ ಮೇಲೆ ವಿಶ್ವಾಸ ಇಡತೀನಿ, ಅವರು ನನ್ನ ಮೇಲೆ ವಿಶ್ವಾಸ ಪ್ರೀತಿ ತೋರಸ್ತಾರ. ಮತ್ತೊಬ್ಬರ ವಿಚಾರ ಏನದ ಅಂತ ಮೊದಲಿಗೆ ಸರಿಯಾಗಿ ತಿಳಕೋತೇನಿ ಆಮೇಲೆ ಅವರಿಗೆ ತಿಳಿಯೋ ರೀತಿಯೊಳಗ ಸ್ಪಷ್ಟ ಹೇಳತೀನಿ. ಇದರಿಂದ ಅವಿಶ್ವಾಸಕ್ಕ ಎಡೆ ಇಲ್ಲಾ, ಕಾರ್ಯ ಸುಗಮವಾಗಿ ಸಾಗತಾವು' ಅಂದ್ರು.

'ನಂಬಿಗೆಯು ಕಾರಣ ಸಾಂಬನೊಲಿಯುಲು', ಎನ್ನುವ ವಿಚಾರ, 'ನಂಬಿಗೀನ ಸೋರಿದರ ಬಲಾ ಇಲ್ಲಾ' ಅನ್ನೋ ಬೇಂದ್ರೆಯವರ ತತ್ವವನ್ನು ಇವರು ಕಾರ್ಯ ರೂಪದಲ್ಲಿ ತಂದಾರ. ಇವನ್ನೆಲ್ಲಾ ನೋಡಿದಾಗ ಇವರೊಬ್ಬ ನಿರ್ವಿವಾದ ವ್ಯಕ್ತಿಗಳು, ವಾದಕ್ಕೆ ಇಳಿಯೋದಿಲ್ಲಾ. ಮತ್ತೊಬ್ಬರ ಸಮಸ್ಯೆ ಅರಿತುಕೊಂಡು, ಸಾರಾಸಾರ ವಿಚಾರಮಾಡಿ ನಿರ್ಣಯ ತೆಗೆದುಕೊಳ್ಳುವ ಮನೋಭಾವದವರು. ಜನರ ಬಗ್ಗೆ ವಿಶ್ವಾಸ ಇಟ್ಟುಕೊಂಡವರು. ಜನರೊಂದಿಗೆ ಆತ್ಮೀಯತೆ ಬೆಳೆಸಿಕೊಂಡಿರುವದರಿಂದ ಅನೇಕ ಕ್ಷೇತ್ರಗಳಲ್ಲಿ ಕಾರ್ಯವನ್ನು ದಕ್ಷರೀತಿಯಿಂದ ಮಾಡಲು ಸಾಧ್ಯವಾಗಿದೆ. ಅವರ ಕಾರ್ಯವನ್ನು ಮೆಚ್ಚಿ ಅನೇಕರು ಅವರ 'ಅಮೃತ ಮಹೋತ್ಸವ' ಕಾರ್ಯಕ್ರಮ ಮಾಡಲು ದುಡಿಯುತ್ತಿದ್ದಾರೆ. ಇದೊಂದು ಅಪರೂಪದ ಕಾರ್ಯ ಮತ್ತು ಆಗಲೇ ಬೇಕಾದ ಕಾರ್ಯ. ಈ ಕಾರ್ಯದಲ್ಲಿ ಅವರೊಂದಿಗೆ ನಿಕಟಸಂಪರ್ಕ ಹೊಂದಿದ ಅನೇಕರಲ್ಲಿ ಕೆಲವರನ್ನು ಪ್ರತ್ಯಕ್ಷ ಕಂಡು ಸಂದರ್ಶನ ಮಾಡಲು ಶ್ರೀ ಘಂಟೆಣ್ಣವರನ್ನು ಕರೆದುಕೊಂಡು ಹೋದಾಗ ಶ್ರೀ ದೊಡವಾಡರ ಬದುಕಿನ ಎಷ್ಟೋ ಅಪರೂಪದ ಮಗ್ಗಲುಗಳು ಕಂಡುಬಂದವು. ಅವುಗಳನ್ನು ಇಲ್ಲಿ ಸಂಗ್ರಹಿಸಲು ಪ್ರಯತ್ನಿಸಿರುವೆ.



ಶ್ರೀ ಎಸ್. ಎಸ್. ಸಿಮಿಕೇರಿಮಠ

ಅವರಿಗೆ ಈಗ ೪೨ ವರ್ಷ. ಇವರು ಶ್ರೀ ಎಸ್. ವಿ. ಅಥಣಿಮಠ ಫರ್ಮ ನಡೆಸುತ್ತಿದ್ದಾರೆ. ಇವರು ೨೦ ವರ್ಷದ ತಾರುಣ್ಯದಲ್ಲಿ ಶ್ರೀ ದೊಡವಾಡ ಅಣ್ಣಾ

ಅವರ ಗರಡಿಯಲ್ಲಿ ತಯಾರಾದವರು. ಅವರನ್ನು ದಿ. ೧೪-೯-೧೯೮೭ ರಂದು ಭೇಟಿಯಾಗಿ 'ದೊಡವಾಡ ಅಣ್ಣಾ ಅವರ ಬಗ್ಗೆ ನಿಮ್ಮ ಅನಿಸಿಕೆ ಹೇಳ್ರಿ' ಅಂತ ಕೇಳಿದಾಗ–

'ನಾನು ಚಿಕ್ಕವನಿದ್ದಾಗ ನಮ್ಮ ತಂದೀಯವರು ಕುಸ್ತಿಕಲಿಸೋದರ ಸಲುವಾಗಿ ನಮ್ಮೂರಾದಂಥ ಕೆಂಗಾನೂರನಿಂದ ಕರೀಕಟ್ಟಿಗೆ ಬಂದು ವಾಸವಾಡಿದರು. ಆವಾಗ ಶ್ರೀ ದೊಡವಾಡವರ ಪರಿಚಯ ಆತು. ನಮ್ಮ ತಂದೀಯವರು ದೊಡವಾಡ ಅಣ್ಣಾ ಅವರ ಬಗ್ಗೆ ಮತ್ತು ಅವರ ಮಗ ಸರಸಾನಂದರ ಬಗ್ಗೆ ನನಗ ಆದರ್ಶ ಹೇಳತಿದ್ರು, ಹೀಂಗಾಗಿ ನನಗೆ ಬಾಲ್ಯದಿಂದಲೇ ಇವರು ಆದರ್ಶ ವ್ಯಕ್ತಿಗಳಾದರು. ಇವರ ಬಗ್ಗೆ ಗೌರವ, ಆದರ ಭಾವನೆಗಳು ಬೆಳೆದವು.

ನಾನು ೧೯೬೪ರಾಗ ಬೆಳಗಾವಿಯೊಳಗ ಕಲೀತಿದ್ದೆ. ನನ್ನ ಕಲಿಯುವಿಕೆಯ ಬಗ್ಗೆ ನನ್ನ ತಂದೆಯವರಿಗೆ ಅರ್ಥವಾಗಿ, ವ್ಯಾಪಾರದಲ್ಲಿ ಸರಸಾನಂದ ಅವರನ್ನು ತಯಾರ ಮಾಡಿದಂಥ ಶ್ರೀ ದೊಡವಾಡರಲ್ಲಿ ಇಟ್ಟರ ನಾನು ಸುಧಾರಿಸ್ತೇನಿ ಅಂತ ತಿಳಿದು, ನಮ್ಮ ತಂದೆಯವರು ಒಂದು ದಿನಾ ಶ್ರೀ ದೊಡವಾಡ ಅಣ್ಣಾಅವರ ಹತ್ತಿರ ಹೋಗಿ 'ನಮ್ಮ ಹುಡಗನ್ನ ನಿಮ್ಮ ಅಂಗಡೀಗೆ ಕಳಸ್ತೇನಿ. ಅವಗ ಮಾರ್ಗದರ್ಶನ ಮಾಡ್ರಿ' ಅಂತ ಕೇಳಿದಾಗ, ಅಣ್ಣಾವ್ರು ಅಂದ್ರು 'ಅಂವಾ ಇನ್ನೂ ಸಣ್ಣಾವಾ ಇದ್ದಾನ. ಅವಗ ಶಿಕ್ಷಣಾ ಕೊಡಸರಿ. ನಿಮಗ ಶಿಕ್ಷಣಾ ಕೊಡಸಲಿಕ್ಕೆ ಏನಾರ ತೊಂದರೆ ಆದರೆ ನಾವು ಅಂವಗ ಕಲಸ್ತೇವಿ.' ಅಂತ ಶಿಕ್ಷಣದ ಅವಶ್ಯಕತೆ ಬಗ್ಗೆ ಹೇಳಿದರು. ನಮ್ಮ ತಂದೆ ಯವರು 'ಅಂವಗ ಶಿಕ್ಷಣ ಕೊಡಸಲಿಕ್ಕೆ ನಮಗೇನೂ ತೊಂದರೆ ಇಲ್ಲಾ. ನಮ್ಮ ಮಗನಿಗೆ ವ್ಯಾಪಾರದಾಗ ಮುಂದ ತರೋದೈತಿ.' ಅಂತ ಅಂದಾಗ 'ಯಾಕಾಗ ವಲ್ದು ಕಳಿಸಿಕೊಡ್ರಿ' ಅಂತ ಒಪ್ಪಿದರು. ಇದರಿಂದ ನಾನು ೧೯೬೪ ರಾಗ ದೊಡವಾಡ ಅಣ್ಣಾ ಅವರ ಕಡೆಗೆ ಬಂದೆ. ಧಾರವಾಡ ನನಗ ಪೂರ್ಣ ಹೊಸದಾಗಿತ್ತು.

ಚಿಕ್ಕಂದಿನೊಳಗ ದೊಡವಾಡ ಅಣ್ಣಾಅವರ ಬಗ್ಗೆ ಕೇಳಿ ತಿಳಿದು ಗೌರವಭಾವನೆ ಇದ್ದ ನನಗೆ, ಅವರ ಅಂಗಡಿಯೊಳಗ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡೋ ಭಾಗ್ಯ ಸಿಕ್ಕಿತಲ್ಲಾ ಅಂತ ಸಂತೋಷ ಒಂದಕಡೆಗಾದರ, ಗೌರವಕ್ಕ ಕುಂದು ಬರದ್ಹಂಗ ಇವರೊಂದಿಗೆ ನಡಕೊಳ್ಳೋದು ಹ್ಯಾಂಗ ಅಂತ ಮತ್ತೊಂದು ಕಡೆಗೆ ಅನಸ್ತು.

ಮೊದಲನೇ ದಿವಸ ಅಣ್ಣಾವ್ರು ಅಂಗಡಿಗೆ ಹೋದೆ. ತಮ್ಮ ಅಂಗಡಿಯೊಳಗ ಕೆಲಸದ ಬಗ್ಗೆ ಅರಿತವರನ್ನು ನುರಿತವರನ್ನು ಕರೆದು 'ಇವರಿಗೆ ಎಲ್ಲಾ ಮಾಹಿತಿ ಕೊಡ್ರಿ' ಅಂದ್ರು. ಪ್ರತಿದಿನ ಇವರ ಅಂಗಡಿಗೆ ನೌಕರಿ ಮಾಡೋ ಜನರು, ರೈತ ಜನರು, ದಿನಗೂಲಿ ಜನರು ಹೀಂಗ ಅನೇಕ ರೀತಿಯ ಜನರು ಬರತಿದ್ರು. ಅವರೆಲ್ಲರ ಜೊತೆಗೆ ನಯ–ವಿನಯದಿಂದ ಹ್ಯಾಂಗ ಮಾತಾಡಬೇಕು ಅನ್ನೋದನ್ನ ಇವರ

ಅಂಗಡ್ಯಾಗ ಇದ್ದಾಗ ತಿಳಕೊಂಡೆ. ಅಣ್ಣಾಅವರ ಸ್ವಭಾವ ಅಂದ್ರ 'ಯಾರ ಜೊತೆಗೆ ಮಾತಾಡಬೇಕಾದ್ರೂ ಮೊದಲು ಸ್ಪಷ್ಟವಾಗಿ ತಿಳಕೊಂಡು ಮಾತಾಡಬೇಕು' ಅಂತ ತಿಳಿಸಿ ಹೇಳ್ತಿದ್ರು.

ಅವರನ್ನ ನೋಡಿಯೇ ನನ್ನಲ್ಲಿ ಸುಧಾರಣೆಯಾದದ್ದು ಅಂದ್ರ 'ಯಾವದ ಕೆಲಸ ಮಾಡಬೇಕಾದ್ರೂ ನಿಯಮಿತತನ ಇರೋದು. ಹಿಡಿದ ಕೆಲಸ ಪೂರ್ಣ ಮಾಡೋದು ಸ್ವತಃ ನಿಂತು ಸಮಕ್ಷಮದಲ್ಲಿ ಕೆಲಸ ಮಾಡಸೋದು'.

'ವ್ಯಾಪಾರ ಬೆಳೀಬೇಕಂದ್ರ ವ್ಯವಹಾರದ ಚಾಕಚಕ್ಯತೆಗಿಂತ ವಸ್ತುಗಳ ಪ್ರಮಾಣ ಮತ್ತು ಅವುಗಳ ಗುಣಮಟ್ಟ ಕಾಯ್ದುಕೊಂಡು 'ಗಿರಾಕಿಗಳು ಅಂದ್ರ ದೇವರು' ಅನ್ನೋ ಭಾವನೆಯಿಂದ ವಸ್ತುಗಳನ್ನ ಕಟ್ಟಿಕೊಡಬೇಕಾದ್ರ ಅನಸಬೇಕು. ಇದರಿಂದ ಕೊಳ್ಳುವವರ ನಂಬಿಕೀ ಪಡೀಬಹುದು. ಪರಸ್ಪರರ ನಂಬಿಕಿಯಿಂದ ಏನ ಬೇಕಾದ್ರೂ ಸಾಧಿಸಬಹುದು' ಅನ್ನೋದನ್ನ ತೋರಿಸಿಕೊಟ್ರು.

ಅಣ್ಣಾವ್ರು, 'ಕೇವಲ ವ್ಯಾಪಾರ ಒಂದನ್ನೇ ಗುರಿಯಾಗಿ ಇಟಕೊಂಡಿಲ್ಲ. ದೇವರ ಧ್ಯಾನ, ಪೂಜೆಗಳ ಬಗ್ಗೆ ದಿನನಿತ್ಯ ಚಿಂತನ ಮಾಡತಾರು. ಯೋಗ್ಯರಿಗೆ–ಸತ್‌ಪಾತ್ರರಿಗೆ ದಾನ, ಧರ್ಮ ಮಾಡತಾರು. ಮತ್ತೊಬ್ಬರ ಬಗ್ಗೆ ಎಂದೂ ಕೆಟ್ಟ ವಿಚಾರ ಮಾಡೋದಿಲ್ಲ. ಸತ್‌ಸಂಗ ಮಾಡಿ, ತತ್ವಜ್ಞಾನದ ತಿರುಳನ್ನು ತಿಳೀಲಿಕ್ಕೆ ಇಚ್ಛಾಪಡತಾರು. ಹೀಂಗಾಗಿ ಇವರಿಗೆ ಗುರುಬಲ ಅದ. ದೈವಬಲವುಳ್ಳವರು. ಜನ ಬಲವಿದೆ, ಮತ್ತು ಸ್ವತಃ ದುಡಿಯುವ ಭುಜಬಲ ಹೊಂದಿದ ಚತುರ್ಬಲರು.

ತಮ್ಮ ಮಕ್ಕಳಿಗೆ ತೋರಿಸೋ ಪ್ರೀತಿ, ವಿಶ್ವಾಸವನ್ನು ನನಗೂ ತೋರಿಸಿದ್ರು. ಇದರಿಂದ ಇವರ ಅಂಗಡ್ಯಾಗ ನಾನಿದ್ದಾಗ ಅವರ ಮಕ್ಕಳಲ್ಲಿ ನಾನೂ ಒಬ್ಬಾವ ಅಂತ ತಿಳೀದಿದ್ರು. ಅವರ ಅಂಗಡಿಯೊಳಗ ಶ್ರೀ ಜಿ. ಬಿ. ಹಿರೇಮಠ, ಶ್ರೀ ಫಕ್ಕೀರಪ್ಪಾ ಕುಂಬಾರ, ಶ್ರೀ ಪರಪ್ಪ ನಿಂಗಪ್ಪ ಕುಸುಗಲ್ ಇವರೆಲ್ಲರೂ ದುಡದು ಈಗ ಬೇರೆ ಕಡೆಗೆ ಹೋಗಿ ಸ್ವತಂತ್ರವಾಗಿ ಉದ್ಯೋಗ ಮಾಡತಾ ಇದ್ದಾರ. ಅಣ್ಣಾ ಅವರ ಅಂಗಡಿಯೊಳಗ ದುಡದು ಹೋದವರಿಗೆ ಅನ್ನ ಎಂದೂ ಕಡಿಮಿ ಆಗಿಲ್ಲಾ. ಇವರೆಲ್ಲರೂ ಸ್ವತಂತ್ರವಾಗಿ ವ್ಯವಹಾರ ಮಾಡಿದರೂ ಅಣ್ಣಾ ಅವರ ಬಗ್ಗೆ ನಮಗೆಲ್ಲರಿಗೂ ಆದರ ಗೌರವ ಭಾವನೆ ಅದ.

ಹೆಚ್ಚಿನ ವ್ಯಾಸಂಗಕ್ಕಾಗಿ ವಿಶ್ವವಿದ್ಯಾಲಯಕ್ಕೋ, ಪಾಶ್ಚಿಮಾತ್ಯ ದೇಶಕ್ಕೋ ಹೋಗಿ ಅಭ್ಯಾಸ ಮಾಡಿ ಬರೋಹಂಗ, ವ್ಯಾಪಾರದ ಬಗ್ಗೆ ತಿಳಕೋಬೇಕಂದ್ರ ದೊಡಮಾಡವರ ವಿಶ್ವವಿದ್ಯಾಲಯಕ್ಕೆ ಬಂದ್ರ, ಪ್ರಾಮಾಣಿಕ ವ್ಯವಹಾರಕ್ಕ ಬೇಕಾಗೋ ರೀತಿನೀತಿಗಳನ್ನು ಕಲೀತೀವಿ. ಶ್ರದ್ಧೆ, ಪರಿಶ್ರಮಗಳ ಬಗ್ಗೆ ಕಲೀತೀವಿ.

ನಾನು ಇವರಲ್ಲಿ ಕಲಿತವ್ನಾಲೆ ಬೆಳಗಾವಿಗೆ ಅಂಗಡಿ ಮಾಡಬೇಕು ಅಂತ ವಿಚಾರ ಮಾಡಿ ಬಂದಾವ. ಮುಂದ ಧಾರವಾಡದಾಗ ಮಾಡಬೇಕನ್ನೋ ವಿಚಾರಾನ ದೊಡವಾಡ ಅಣ್ಣಾ ಅವರಿಗೆ ಹೇಳಿದೆ. ಆವಾಗ "ನಿನ್ನ ಊರು ಧಾರವಾಡ ಅಲ್ಲ, ಸುತ್ತಮುತ್ತಲಿನ ಹಳ್ಳಿ ರೈತರು ನಿನಗ ಗೊತ್ತಿಲ್ಲ. ಅಂಗಡಿ ಮಾಡಬೇಕಾದ್ರ ಇನ್ನೂ ಪರಿಚಯ ಆಗಬೇಕು. ಅನುಭವ ಬೇಕು ಹ್ಯಾಂಗ ಮಾಡತಿ ?" ಅಂತ ಅಣ್ಣಾವ್ರು ಕೇಳಿದರು. ನಾನು ಹೇಳಿದೆ 'ನೀವು ಮಾರ್ಗದರ್ಶನ ಮಾಡಿರಿ' ಎಂದು. ಆಗ ಸಂತೋಷದಿಂದ ಒಪ್ಪಿಕೊಂಡು ಶಿವಯ್ಯ ವಸ್ತ್ರದ ಅವರ ಅಂಗಡೀನ ಯೋಗ್ಯ ಭಾಡಿಗೆಗೆ ಕೊಡಿಸಿ ತಮ್ಮ ಅಂಗಡ್ಯಾಗಿನ ಮೃತ್ಯುಂಜಯ ಅಪ್ಪನವರ ಫೋಟೋ ಇಟ್ಟು ಅದರ ಎರಡೂ ಬದಿಗೆ ಶ್ರೀ ಮಹಾಲಕ್ಷ್ಮೀ ಮತ್ತು ಶ್ರೀ ಮಹಾಸರಸ್ವತಿಯರ ಫೋಟೋ ಇಟ್ಟು, ಸ್ವಹಸ್ತದಿಂದ ಮತ್ತು ಸ್ವಸಂತೋಷದಿಂದ ಪೂಜೆ ಮಾಡಿಕೊಟ್ಟು 'ನಿನಗೆ ಛೊಲೋ ಆಗಲಿ' ಅಂತ ಹರಿಸಿದರು.

ಇದಾದ ಕೆಲವು ದಿನಗಳ ನಂತರ ನಮ್ಮ ತಂದೆಯವರು ದೊಡವಾಡ ಅಣ್ಣಾ ಅವರನ್ನ ಕಂಡು 'ನಮ್ಮ ಹುಡುಗಾ ಧಾರವಾಡಕ್ಕ ಅಂಗಡಿ ಮಾಡಿದ್ದು ತಪ್ಪಾಗೇತಿ. ನಾನು ಬೆಳಗಾವಿಗೆ ಮಾಡಲಿಕ್ಕೆ ಹೇಳಿದ್ದೆ. ತಾವು ತಪ್ಪ ತಿಳೀಬಾರದು ಅವಗ ಬುದ್ಧಿ ಹೇಳ್ರಿ...' ಅಂದಾಗ

'ಏನೂ ತಪ್ಪಿಲ್ಲ, ವ್ಯಾಪಾರ ಅಂದ್ರ ಸಮುದ್ರ ಇದ್ಹಾಂಗ. ಅದರಾಗಿನ ಕೊಡ ನೀರು ತಕ್ಕೊಂಡ್ರ ಕಡಲು ಕರಗತದೇನು ?' ಇಲ್ಲೇ ಮಾಡಲಿ. ನನಗೇನೂ ತೊಂದರೆ ಇಲ್ಲಾ' ಅಂತ ಅಣ್ಣಾ ಅವರು ಅಂದಾಗ ಅವರ ಬಗ್ಗೆ ಇದ್ದ ಹೆಮ್ಮೆ ಇಮ್ಮಡಿಸಿತು. ಅಂದು ಅವರು ಸಿದ್ಧ ಹಸ್ತದಿಂದ ನೆಟ್ಟ ಸಸಿ ಇಂದು ದೊಡ್ಡ ಮರವಾಗಿ ಬೆಳೆದಿದೆ ಎಂದು ಹೇಳಲಿಕ್ಕೆ ಸಂತೋಷ ಆಗತದ.

ಅವರು ಕಿರಾಣಿ ಅಂಗಡಿಯಿಂದ ಪ್ರಾರಂಭಿಸಿ, ದಲಾಲಿ ಅಂಗಡಿ, ರೈಸಮಿಲ್ .. ಹೀಂಗ ಅನೇಕ ಶಾಖೆ, ಉಪಶಾಖೆಗಳಾಗಿ ದೊಡ್ಡ ಆಲದಮರವಾಗಿ ಸ್ಥಿರವಾಗಿ ನಿಂತಾಗಲೂ ಅವರಲ್ಲಿ ಶ್ರೀಮಂತಿಕೆಯ ಮದವಿಲ್ಲ. ತಮ್ಮ ಹಿಂದಿನ ಕಷ್ಟಗಳನ್ನು ಮರೆತಿಲ್ಲಾ. ಹಣ ಅದ ಅಂತ ವಿನಾಕಾರಣ ಖರ್ಚು ಮಾಡಿಲ್ಲಾ. ಯೋಗ್ಯ ಅನಿಸಿದ್ದಕ್ಕ ಎಂದೂ ಸಹಾಯ ಮಾಡದೇ ಹಿಂಜರಿದಿಲ್ಲ. ದುಃಖದಲ್ಲಿದ್ದವರ ದುಃಖ ಅರಿತು ಅವರ ದುಃಖ ಪರಿಹರಿಸಲಿಕ್ಕೆ ಸಹಾಯ ಮಾಡತಾ ಇರೋದೇ ಇವರಲ್ಲಿರೋ ದೊಡ್ಡ ಶ್ರೀಮಂತಿಕೆ. ಗುರುವಿನಂಗಳದ ಗಿಡಾ ಬಳ್ಳಿಯಾಗಿ ಹೊಸಾ ಹೂವನ್ನು ಸುರಿಸ್ಯಾರ. ತಾಯಿ ಪಾದದಾನಂದ ಗಂಧ ಉಂಡು, ಬೆಂದವರ ಜೀವ ಬೆರೆಸಿದ ಮಹಾತ್ಮರು. ಅನೇಕ ಸಂಘ-ಸಂಸ್ಥೆಗಳಿಗೆ ಹೊಸ ಸ್ವರೂಪ ಕೊಟ್ಟು ಚೈತನ್ಯ ನೀಡಿದ ಮಹನೀಯರು.

'ಉದ್ಯೋಗ ಒಂದs ಅಲ್ಲ. ಸಮಾಜಸೇವೆ ಮಾಡೋ ಮನೋಭಾವನೆ ಬೆಳೆಸಿಕೊಳ್ರಿ. ವೇಳೆ ವ್ಯರ್ಥ ಹಾಳಮಾಡಬೇಡ್ರಿ, ಕಳದ ಹೋದ ವೇಳೆ ಹುಡಕೀದ್ರು ಸಿಗೋದಿಲ್ಲಾ, ಇದ್ದ ವೇಳೆ ಸದುಪಯೋಗ ಮಾಡಿಕೊಳ್ರಿ. ಬಿಡುವಿಲ್ಲದ ದುಡಿರಿ. ದುಡದು ದಣೇಬ್ಯಾಡ್ರಿ, ದುಡದು ದೊಡ್ಡವರಾಗರಿ' ಅಂತ ಮಾರ್ಗದರ್ಶನ ಮಾಡಿ ನಮಗೂ ಬಿಡುವಿಲ್ಲದ್ಹಂಗ ದುಡಿಲಿಕ್ಕೆ ಹಚ್ಚ್ಯಾರ.

ಅವರ ಅಮೃತಮಹೋತ್ಸವ ನಡದದ್ದು ಬಹಳ ಸಂತೋಷ. ಸಸಿಯಾಗಿದ್ದ ನಮ್ಮನ್ನು ಪಾಲನೆ, ಪೋಷಣೆಮಾಡಿ ಬೆಳೆಸಿದ್ದಾರೆ. ಸಲಹೆ–ಸೂಚನೆಗಳೊಂದಿಗೆ ಮಾರ್ಗದರ್ಶನವನ್ನು ಮಾಡುತ್ತಿದ್ದಾರೆ, ಅವರಿಂದ ನನಗೆ ಮತ್ತು ಸಮಾಜಕ್ಕೆ ಮಹದುಪಕಾರವಾಗಿದೆ. ಅಂಥವರು ಪ್ರಾತಃಸ್ಮರಣೀಯರು. ಈ ಸಂದರ್ಭದಲ್ಲಿ ಅವರ ಬಗ್ಗೆ ಇರುವ ಅನಿಸಿಕೆಗಳನ್ನು ಮೆಲಕು ಹಾಕಲು ಅವಕಾಶ ಕಲ್ಪಿಸಿಕೊಟ್ಟದ್ದಕ್ಕೆ ನನ್ನ ಜೀವನ ಪಾವನವಾಗಿದೆ. ದೊಡವಾಡ ಅಣ್ಣಾ ಅವರಿಗೆ ಅನಂತ ನಮನಗಳು.



ಶ್ರೀ ಫಕ್ಕೀರಪ್ಪಾ ಬಸವಂತಪ್ಪಾ ಕುಂಬಾರ

ಫಕ್ಕೀರಪ್ಪಾ ಕುಂಬಾರ ಅವರು ೧೯೬೪ ರಿಂದ ಶ್ರೀ ದೊಡವಾಡ ಅಣ್ಣಾ ಅವರ ಅಂಗಡ್ಯಾಗ ಕೆಲಸಕ್ಕ ಅಂತ ಬಂದಾಗ ಅವರಿಗೆ ೨೯ ವರ್ಷ. ಅವರಲ್ಲಿ ಏಳು ವರ್ಷಗಳ ವರೆಗೆ ಇದ್ದು ಅನುಭವ ಪಡೆದರು. ೩೫ನೇ ವಯಸ್ಸಿಗೆ 'ಜ್ಯೋತಿ ಟ್ರೇಡಿಂಗ ಕಂಪನಿ' ಪಾರ್ಟನರ ಆಗಿ, ದಲಾಲಿ ಅಂಗಡಿ ಮಾಡಿದರು. ಈಗ ಮೃತ್ಯುಂಜಯ ಮಾರ್ಕೆಟದಾಗ ಫಕ್ಕೀರಪ್ಪಾ ಕುಂಬಾರ ಅವರು ಸ್ವತಂತ್ರವಾಗಿ ದಲಾಲಿ ಅಂಗಡಿ ಪ್ರಾರಂಭಿಸಿದರೂ ಶ್ರೀ ದೊಡವಾಡ ಅಣ್ಣಾ ಅವರ ಬಗ್ಗೆ ಪೂಜ್ಯಭಾವನೆ ಇದೆ. ಅವರನ್ನು ದಿ. ೧೬–೯–೮೭ ರಂದು ಸಂದರ್ಶಿಸಿದಾಗ—

'ನಮ್ಮ ತಂದೀಯವರು ಹಳ್ಳ್ಯಾಗ ಇರೋದು ಬ್ಯಾಡಾ, ಶಹರದಾಗ ಇರಲಿ ಅಂತ ಧಾರವಾಡಕ್ಕ ನನ್ನನ್ನು ಕರಕೊಂಡು ಬಂದು ಕಟಗಿಯವರಲ್ಲಿ ತಂದು ಇಟ್ರು. ಅಲ್ಲಿ ಹತ್ತ ವರ್ಷ ಕೆಲಸ ಮಾಡಿದೆ. ನನಗ ವ್ಯಾಪಾರದಾಗ ವಿಶೇಷ ಅನುಭವ

ಬೇಕು ಅಂತ ಅನಿಸ್ತು. ಹೀಂಗಾಗಿ ೧೯೬೯ ರೊಳಗ ದೊಡ್ಡವಾಡ ಅಣ್ಣಾ ಅವರ ಸಾಮೀಪ್ಯಕ್ಕೆ ಬಂದು, ಅವರ ಮಾರ್ಗದರ್ಶನದಲ್ಲಿ ಬೆಳೆದೆನು.

ಅವರ ಅಂಗಡಿಯಲ್ಲಿ ಏಳು ವರ್ಷ ಕಳೆದಾಗ ನನ್ನ ಜೀವನದಲ್ಲಿ ಬದಲಾವಣೆಯಾಯಿತು. 'ಜೀವನದಾಗ ಗುರಿ ಹ್ಯಾಂಗ ಸಾಧಿಸಬೇಕು, ನಮ್ಮ ರೀತಿ-ನೀತಿ ನಡಾವಳಿ ಹ್ಯಾಂಗ ಇರಬೇಕು, ಅನ್ನೋದನ್ನ ಅಣ್ಣಾ ಅವರ ಪಾಠಶಾಲೆಯೊಳಗ ಕಲತೆ. 'ತಮ್ಮಾ, ಅಂಗಡಿಗೆ ತಿಳಿದವರೂ ಬರತಾರ, ತಿಳೀದವರೂ ಬರತಾರ. ಅವರು ಹ್ಯಾಂಗ ಬೇಕು ಹಂಗ ಮಾತನಾಡತಾರ, ಅವರು ತಿಳೀದ ಮಾತಾಡಿದರೂ ನೀವು ಸಿಟ್ಟಿಗೇಳದ ಸಮಾಧಾನದಿಂದ ಮಾತಾಡಬೇಕು' ಅಂತ ಹೇಳಿ ನನಗ ವ್ಯಾವಹಾರಿಕ ದೃಷ್ಟಿಯನ್ನು ಕೊಟ್ಟರು.

ಪ್ರತಿನಿತ್ಯ ಅಣ್ಣಾವರು ಬೆಳಿಗ್ಗೆ ಎದ್ದಕೂಡಲೇ ತಮ್ಮ ಹೂದೋಟದೊಳಗ ಅಡ್ಡಾಡಿ ಗಿಡ-ಮರಗಳ, ಹೂ ಗಿಡಗಳ ಯೋಗಕ್ಷೇಮ ತೊಗೋತ್ತಿದ್ರು. ಭಾವಿ ನೀರು ಜಗ್ಗಿ ಗಿಡಕ್ಕ ಹಾಕತಿದ್ರು. ಸ್ನಾನಾ ಪೂಜೆ ಮುಗಿಸಿ ತಮ್ಮ ಎಲ್ಲಾ ಕಾರ್ಯ ಕ್ರಮಗಳನ್ನು ವೇಳೆಗೆ ಸರಿಯಾಗಿ ಮಾಡಿ ಮುಗಸ್ತಿದ್ರು. ಇವತ್ತಿಗೂ ಅವರು ವ್ಯಾಳ್ಯಾಕ್ಕ ಬಹಳ ಮಹತ್ವ ಕೊಡತಾರ.

ಅಂಗಡಿಗೆ ಭಾಳ ಜನರು ಬರತಿದ್ರು. ಶ್ರೀ ಲಕಮನಹಳ್ಳಿ ಅವರು ಬಂದ್ರು ಅವರೊಂದಿಗೆ ಮಠದ ಬಗ್ಗೆ ವಿಚಾರಿಸುತ್ತಿದ್ದರು. ಕಮಲಾಪುರ ಶ್ರೀ ಮಲ್ಲನಗೌಡರು ಮತ್ತು ಶ್ರೀ ಜಿ. ಎಸ್. ಕೂಡಲಮಠ ಅವರು ಬಂದ್ರು ಅವರೊಂದಿಗೆ ಆಧ್ಯಾತ್ಮ ವಿಷಯದ ಬಗ್ಗೆ ವಿಚಾರವಿನಿಮಯ ಆಗುತ್ತಿತ್ತು. ಹುಕ್ಕೇರಿ ಬಾಳಪ್ಪನವರು ಬಂದ್ರು ಜಾನಪದ ಸಂಗೀತ ಕಾರ್ಯಕ್ರಮ ನಡೀತಿತ್ತು. ಅದಲ್ದ ಶ್ರೀಯುತ ಮಲ್ಲಿಕಾರ್ಜುನ ಮನಸೂರವರು, ಶ್ರೀ ಎಂ. ಎಸ್. ಪಾಟೀಲರು, ಶ್ರೀ ಈರಣ್ಣಾ ವಾಣಿಯವರು ಹೀಂಗ ಭಾಳ ಜನರು ಬರತಿದ್ರು. 'ಸತ್‌ಸಂಗ' ಕೂಡಲಿಕ್ಕೆ ಕಾಲ, ದಿವಸ ಅಂತ ನಿರ್ಣಯ ಇರತಿದ್ದಿಲ್ಲ. ಅನೇಕ ಸತ್‌ಸಂಗಗಳ ಹೊಸ ಅನುಭವ ಪಡೆದೆ.

ಅಣ್ಣಾ ಅವರ ಹತ್ತರ— ಕೆಲಸ ಕೇಳಲಿಕ್ಕೆ ಅಂತ ಕಲಿತವರು ಬರತಿದ್ರು. ವ್ಯವಹಾರ ಕಲೀಲಿಕ್ಕೆ ಅಂತ ಬರತಿದ್ರು. ಶೇತಕಿ ಕೆಲಸ ಕೊಡ್ರಿ ಅಂತ ಬರತಿದ್ರು. ದಿನಗೂಲಿ ಜನರೂ ಬರತಿದ್ರು. ಯಾರೇ ಬರಲಿ ಅವರ ಬಗ್ಗೆ ವಿವರವಾಗಿ ವಿಚಾರ ಮಾಡಿ, ಅವರ ಇಡೀ ಇತಿಹಾಸ ತಿಳಕೊಂಡು ಆಮೇಲೆ ಅವನಿಗೆ ಸರಿಯಾಗಿ ಸಹಾಯ ಮಾಡತಿದ್ರು. ಯಾರ ಮನಸ್ಸಿಗೂ ನೋವಾಗದ್ಹಂಗ ಕಾರ್ಯ ಸಾಧಿಸುವದರಲ್ಲಿ ನಿಸ್ಸೀಮರು.

ದೊಡವಾಡ ಅಣ್ಣಾ ಅವರ ಹತ್ರ ನಾ ಕಂಡ ಇನ್ನೊಂದು ದೊಡ್ಡ ಗುಣ ಅಂದ್ರ 'ಸತ್ಯ ಇದ್ರ ಅದನ್ನ ಎತ್ತಿ ಹಿಡೀತಾರ, ಉಳಸಲಿಕ್ಕೆ ಹೋರಾಡತಾರ. ದುಷ್ಟ ಇದ್ದಾನ, ಸುಳ್ಳು-ತಗಲು ಹೇಳತಾರ ಅಂತ ಮನಗಂಡ್ರ, ಅಂಥವರಿಗೆ ಇಲ್ಲೆ ಏನೂ ಸಿಗೋದಿಲ್ಲಾ, ಇಲ್ಲೆ ನೀನು ಬರಾಕಹೋಗಬ್ಯಾಡಾ' ಅಂತ ನೇರವಾಗಿ ಹೇಳಿಯೂ ಬಿಡತಾರ.

ಅನೇಕ ಸಂಘ-ಸಂಸ್ಥೆಗಳವರು ಸಹಾಯ ಕೇಳಲಿಕ್ಕೆ ಬರತಿದ್ರು. ಊರಿಗೆ ಪ್ರಸ್ತಾ ಹಾಕತೇವಿ ಅಂತ ಬರತಿದ್ರು. ಅದನ್ನೆಲ್ಲಾ ತಿಳಕೊಂಡು ತಮ್ಮ ವಂತಿಕೆ ಏನ ಕೊಡಬೇಕೋ ಅದನ್ನ ಕೊಟ್ಟು ಕಳಿಸಿಬಿಡತಿದ್ರು. ಬರಿಗೈಯಿಂದ ಯಾರನ್ನೂ ಕಳಿಸಿಲ್ಲ.' 'ದೊಡವಾಡ ಅಣ್ಣಾ ಅವರು ಅಂದ್ರ ಕೊಡುಗೈದೊರೆಗಳು. ಅವರ ಅಮೃತಮಹೋತ್ಸವ ಅಂದ್ರ ನಮಗೆಲ್ಲಾ ಸ್ಫೂರ್ತಿಯ ಸೆಲೆ ಒಡದ್ಹಂಗ' ಅಂತ ಬಹಾಳ ಸಂತೋಷಪಟ್ಟು ಹೇಳಿದರು.



ಶ್ರೀ ಜಿ. ಬಿ. ಹಿರೇಮಠ

ಶ್ರೀ ಜಿ. ಬಿ. ಹಿರೇಮಠರಿಗೆ ಈಗ ೬೦ ವರ್ಷ. ಅವರು ೩೫ ವರ್ಷದವರಿದ್ದಾಗ (೧೯೬೧) ಶ್ರೀ ಜಿ. ಜಿ. ದೊಡವಾಡವರ ದಲಾಲಿ ಅಂಗಡಿಯೊಳಗ ಗುಮಾಸ್ತರಾಗಿ ಇದ್ದರು. ಅವರನ್ನು ೧೦-೧೦-೧೯೮೭ ರಂದು ಸಂದರ್ಶಿಸಿದಾಗ,

'ಅವರಲ್ಲಿದ್ದಾಗಿನ ಒಂಬತ್ತು ವರ್ಷದ ಅನುಭವ ಅಂದ್ರ ದೊಡವಾಡ ಅಣ್ಣಾ ಅವರು ಎಲ್ಲರಿಗೂ ಬಹಳ ಗೌರವದಿಂದ ಕಾಣತಿದ್ರು. ಸಿಟ್ಟ ಅಂತೂ ಇಲ್ಲೇ ಇಲ್ಲಾ, ನಾನಿದ್ದಾಗಂತೂ ಯಾರಿಗೂ ಬೈದದ್ದು ಕೇಳಿಲ್ಲಾ. ಅಂಗಡಿಗೆ ಮಲ್ಲನಗೌಡರು, ಕೂಡಲಮಠ ಸ್ವಾಮಿಗಳು ಬರತಿದ್ರು. ಅವರೊಂದಿಗೆ ಮುರಘಾಮಠಕ್ಕೆ ಹೋಗಿ ಬರತಿದ್ರು. ಆಧ್ಯಾತ್ಮದ ಬಗ್ಗೆ ಭಾಳ ಮಾತಾಡತಿದ್ರು. ರಾಜಕಾರಣ ಅವರ ಮನಸಿನ್ಯಾಗೂ ಬರತಿರಲಿಲ್ಲ. ವಚನ ಸಾಹಿತ್ಯ, ನಿಜಗುಣ ಶಿವಯೋಗಿಗಳ ಬಗ್ಗೆ, ಮೃತ್ಯುಂಜಯ ಅಪ್ಪಗಳ ಬಗ್ಗೆ ವಿಶೇಷ ಆಸಕ್ತಿ, ಒಲವು ಇತ್ತು. ಯಾರನ್ನೇ ಆಗಲಿ ಅವರನ್ನು ಮೆಚ್ಚಿಕೊಂಡ್ರು ಅಂದ್ರ ಅವರನ್ನು ತಮ್ಮ ಮನೀಯವರ್ಹಂಗ ಕಾಣತಿದ್ರು.

ಮುಂಜಾನೆ ತಮ್ಮ ಪೂಜಾ-ಪುನಸ್ಕಾರ ಮುಗಿಸಿಕೊಂಡು ೯ ಗಂಟೆಗೆ ಅಂಗಡಿಗೆ ಬಂದ್ರು ಅಂದ್ರ, ರಾತ್ರಿ ೧೨ ಗಂಟೆಯವರೆಗೂ ಕೆಲಸ ಮಾಡತಿದ್ರು. ರಾತ್ರಿ ೧೨ ಗಂಟೆಗೆ ಸರಸಾನಂದ ಅವರು ಅಂಗಡಿಯೊಳಗ ಇರತಿದ್ರು. ಕುಸುಬಿ, ಮೆಣಸಿನಕಾಯಿ ಹತ್ತಿ ಖರೀದಿ ಆದ್ರ ಪ್ರತಿದಿವಸ ೫೦,೦೦೦ ರೂಪಾಯಿಗಳ ವರೆಗೆ 'ಪೇಮೆಂಟ' ಇರುತ್ತಿತ್ತು. ಪೇಮೆಂಟದ ಬಗ್ಗೆ ಯಾರಿಗೂ ಎಂದಿಗೂ ತೊಂದರೆ ಇರಲಿಲ್ಲ. ಅಣ್ಣಾ ಅವರು ಇಷ್ಟೆಲ್ಲಾ ವ್ಯವಹಾರದಾಗ ತೊಡಗಿದರೂ ಮುರುಘಾಮಠಕ್ಕ ಬಹಳ ನಡಕೋತಿದ್ರು. ಕೆಲಸ ಎಷ್ಟೇ ಇರಲಿ, ಸವಡು ಮಾಡಿಕೊಂಡು ಮಠಕ್ಕ ಹೋಗಿ ಬರೋ ಪರಿಪಾಠ ಇಟಕೊಂಡಿದ್ರು. ಮುರುಘಾಮಠದ ಕೆಲಸದ ಬಗ್ಗ ಬಹಳ ಅಭಿಮಾನ ಅವರಿಗೆ.

ದೊಡವಾಡದವರ ಅಂಗಡ್ಯಾಗ ಇದ್ದಾರ ಅಂತ ನನಗ ಜನರು ಬಹಳ ಗೌರವ ಕೊಡತಿದ್ರು, ಆದರದಿಂದ ಕಾಣತಿದ್ರು. ಅಂಥಾ ವರ್ಚಸ್ಸಿತ್ತು ಅಣ್ಣಾ ಅವರದು. ಅವರ ಅಮೃತ ಮಹೋತ್ಸವ ನಡೆಯುತ್ತಿರುವದು ನಮ್ಮೆಲ್ಲರ ಆನಂದೋತ್ಸವ. ಶರಣರಾದ, ಕರ್ಮಯೋಗಿಗಳಾದ ದೊಡವಾಡ ಅಣ್ಣಾ ಅವರಿಗೆ ಅಂತಃಕರಣ ಪೂರ್ವಕವಾದ ನಮಸ್ಕಾರಗಳು' ಎಂದು ಹೇಳಿ ನಮ್ಮನ್ನು ಬೀಳ್ಕೊಟ್ಟರು.

ಶ್ರೀ ಪರಪ್ಪ ಕಟ್ಟಿ, ನವಲೂರು

ಶ್ರೀ ಪರಪ್ಪ ಕಟ್ಟಿಯವರು ನವಲೂರಿನ ನಾಲ್ಕೈದು ಜನ ಹಿರಿಯರಲ್ಲಿ ಒಬ್ಬರು. ಪ್ರಮುಖ ರೈತರು. ೮೫ ವರ್ಷದ ವಯೋವೃದ್ಧರು. ಶ್ರೀ ಜಿ. ಜಿ. ದೊಡವಾಡ ಅವರನ್ನು ೨೫ ವರ್ಷಗಳಿಂದ ಚನ್ನಾಗಿ ಬಲ್ಲವರು. ದಿ. ೧೧-೧೦-೮೭ ರಂದು ಬೆಳಿಗ್ಗೆ ಇವರನ್ನು ಭೇಟಿಯಾಗಲು ನವಲೂರಿಗೆ ಹೋಗಿ, ನಾವು ದೊಡವಾಡ ಅಣ್ಣಾ ಅವರ ಕಡಿಯಿಂದ ಬಂದೀವಿ, ಅವರ ಬಗ್ಗೆ ತಮಗ ಗೊತ್ತಿದ್ದನ್ನು ಹೇಳಬೇಕು ಅಂತ ಕೇಳಿದಾಗ—

'ಒಳಗ ಬರ್ರಿ' ಅಂತ ಅತೀ ಆತ್ಮೀಯತೆಯಿಂದ ಸ್ವಾಗತಿಸಿ ಕಂಬಳಿ ಹಾಸಿ, ಕೂಡಲಿಕ್ಕೆ ಹೇಳಿ ನಾವೆಲ್ಲರೂ ಹಳೆಯ ಪರಿಚಯಸ್ಥರು ಅನ್ನೋ ರೀತಿಯೊಳಗ ಮಾತಾಡಲಿಕ್ಕೆ ಪ್ರಾರಂಭಿಸುವದಕ್ಕಿಂತ ಪೂರ್ವದಲ್ಲಿ ವ್ಯಾಖ್ಯಾ ಇಟಗೊಂಡು ಕೇಳ್ರಿ: ನಾನು ಹೇಳತೀನಿ.' ಅಂತ ತಮ್ಮ ಅನುಭವದ ಸುರಳಿ ಬಿಚ್ಚಿದರು.

'ನಾನು ಓದೋವಲ್ಲ, ಬರೆಯೋವಲ್ಲ. ಅವರ ಬಗ್ಗೆ ನನ್ನ ಅನುಭವದ ಮಾತಿನ ಮ್ಯಾಗ ಹೇಳಬೇಕಂದ್ರ - ಇವರ ತಂದೀಯವರು ಮಹಾ ಶಿವಭಕ್ತರು.

ವ್ಯವಹಾರ ಮಾಡೋದಷ್ಟ ಅಲ್ಲಾ, ಪದ್ಧತಿಸೀರ-ಪೂಜಾ-ಪುನಸ್ಕಾರ ಮಾಡಿ, ಮಠದ ಸೇವಾ ಮಾಡಕೋತ ಬಂದಂಥಾ ಶಿವಭಕ್ತರು. ಅವರಲ್ಲೆ ಕೆಟ್ಟಗುಣಾ ಅನ್ನೋ ವೇನೂ ಇರಲಿಲ್ಲ. ಕೊಡೋವುದು ಒಂದ ಪೈಸಾನು ಇಟಗೊಂಡವರಲ್ಲ. ಕೈಲೆ ಸಾಧ್ಯ ಆದಷ್ಟು ಮತ್ತೊಬ್ಬರಿಗೆ ಸಹಾಯ ಮಾಡೋದು ಅವರ ಗುಣಾ ಆಗಿತ್ತು. ಇಂಥಾ ಎಲ್ಲಾ ಗುಣಾನೂ ತಮ್ಮ ಮಕ್ಕಳಿಗೆ ಆಸ್ತಿಯಾಗಿ ಬಿಟ್ಟು 'ಇದೇ ರೀತಿ ನಡೀ ಬೇಕು' ಅಂತ ಕಲಿಸಿ ಹೋದ ದೊಡ್ಡ ಶಿವಭಕ್ತರು.

ತಂದೆಯವರ ಆಶೀರ್ವಾದದಿಂದ, ಮೃತ್ಯುಂಜಯ ಅಜ್ಜಾ ಅವರ ಕೃಪೆಯಿಂದ ಅವರ ಮಕ್ಕಳು ಉತ್ತಮವಾಗಿ ಬೆಳೆದರು. ವ್ಯಾಪಾರ ಯಾವದೇ ಮಾಡಿದರೂ ಪದ್ಧತಿಸೀರ ಮಾಡತಾರ. ಬಹಳ ಕಷ್ಟದಿಂದ ಪರಿಶ್ರಮವಹಿಸಿ ಮುಂದ ಬಂದವರು. ತಮ್ಮ ವ್ಯವಹಾರ ಅಷ್ಟs ಮುಖ್ಯ ಅಲ್ಲ ಅವರಿಗೆ, ನಮಗೂ ಫಾಯದೇ ಮಾಡಿ ಕೊಟ್ಟಾರು. ನಮ್ಮ ಮಾಲನ್ನು ಒಯ್ದು ಅವರ ಅಂಗಡಿಗೆ ಹಚ್ಚಿದಾಗ, ಕಡಿಮಿ ಕಿಮ್ಮತ್ತಿಗೆ ಕೊಡದ, ಅದಕ್ಕ ಧಾರಣಿ ಬಂದಾಗ ಮಾರಿ ನಮಗೂ ಫಾಯದೆ ಮಾಡಿ ಕೊಟ್ಟಾರ. ಹೀಂಗ ನಮ್ಮ ಕಾಳಜೀನು ಮಾಡತಾರು. ನನಗೊಬ್ಬಗs ಅಲ್ಲ, ಅವರಲ್ಲಿ ಯಾರs ಹೋಗಲಿ ಅವರೆಲ್ಲರ ಕಾಳಜಿ ಮಾಡತಾರ. ನವಲೂರ ಮಾಲಿಗೆ ಕಿಮ್ಮತ್ತು ಕೊಟ್ಟು ಮಾರಿ ಕೊಡತಾರ. 'ಭೋಲೋ ದುಡದರ ಶಿವನ ಕೃಪಾ ಇರತದ' ಅಂತ ಹೇಳತಾರ.


ಧರ್ಮದ ವಿಷಯದಾಗ ಅವರು ನಮ್ಮ ಗುರುಗಳು. ಅವರನ್ನು ಇವತ್ತಿಗೂ ಕೇಳಿಕೊಂತ ಬಂದೀವಿ, ಅದರಿಂದ ನಮಗ ದೇವರು ಸುಖಾ ಕೊಟ್ಟಾನ. ದೊಡವಾಡ ದವರು ಇವತ್ತ ಛೊಲೋಸ್ಥಿತಿಗೆ ಬಂದ ಮ್ಯಾಲೆ— ಸ್ವಾಮಿಗಳನ್ನೆಲ್ಲಾ ಮನಿಗೆ ಕರಕೊಂಡು ಹೋಗಿ, ಸ್ವಾಮಿಗಳಿಗೆ ಪೂಜಿ–ಪುನಸ್ಕಾರ ಮಾಡಿ ಅವರ ಆಶೀರ್ವಾದ ಪಡದ ಭಾಗ್ಯವಂತರು. ಇವತ್ತ ಮಠಕ್ಕ ಇಷ್ಟ ಕೊಡಬೇಕು ಅಂತ ಅನಿಸಿದಾಗ ಕೊಟ್ಟಾರ. ಮಠದಿಂದ ಆಶೀರ್ವಾದ ಪಡದಾರ, ಇದು ಬಹಿರಂಗ ಮಾತೋಡದಲ್ಲ, ಆದರ ಅನುಭವಕ್ಕ ಬಂದದ್ದನ್ನು ಹೇಳತೀನಿ.

ದೊಡವಾಡ ಸಾವಕಾರಲ್ಲಿ ಭಕ್ತಿ ಅನ್ನೋದು ತುಂಬ ತುಂಬೈತಿ. ಅದರ ಮ್ಯಾಗ ಅವರು ಬೆಳದಾರ. ಇವರು ನವಲೂರಿಗೆ ಬಹಳ ಸಹಾಯ ಮಾಡ್ಯಾರು. ಮಕ್ಕಳು ಕಲೀಲಿ, ವಿದ್ಯಾವಂತರಾಗಲಿ ಅಂತ ನವಲೂರ ಹೈಸ್ಕೂಲಿಗೆ ೬೧,೦೦೦ ರೂ. ಕೊಟ್ಟಾರ. ರೈತರಿಗೆ ಬೀಜಕ್ಕ ರೊಕ್ಕ ಇಲ್ಲಾ ಅಂದ್ರ ಸಹಾಯ ಮಾಡ್ಯಾರ. ಬೇಕಾ ದಂಥ ಬಡವ ಬರಲಿ ಅಂವಾ ದುಡಿಯಾಂವಿದ್ರ ಸಹಾಯ ಮಾಡ್ಯಾರ.

ತಂದೆ ಶ್ರೀ ಗುರುಪಾದಪ್ಪನವರಿಂದ ಬಂದ ಗುಣ ಶ್ರೀ ಜಿ. ಜಿ. ದೊಡವಾಡ ರಲ್ಲೆ ಬಂದಾವು. ಇವರ ಗುಣ, ಇವರ ಮಕ್ಕಳಲ್ಲಿ ಬಂದಾವು. ಇವರ ಮಗ

ಸರಸಾನಂದ ಕೆಟ್ಟ ಹೆಸರು ತೊಗೊಳ್ದ ವ್ಯಾಪಾರದಾಗ ರಾಜ್ಯಕ್ಕ ಒಂದನೇ ನಂಬರ ಬಂದ್ರೂ ನೀತಿ-ನಿಯಮ ಬಿಟ್ಟಿಲ್ಲ. ಇವತ್ತಿಗೂ ಇವರು ಯಾರ ಕಡೀಂದಾನೂ ಬಟ್ಟ ಇಡಿಸಿಕೊಂಡು ಅನಿಸಿಕೊಂಡಿಲ್ಲಾ. ಇವರ ತಾಯಿಯವರಿಗೆ ಈಗ ನೂರರ ಮ್ಯಾಲ ವರ್ಷ ಇರಬೇಕು. ಅವರು ತಮ್ಮ ಮಕ್ಕಳ ಮತ್ತು ಮೊಮ್ಮಕ್ಕಳ ಪ್ರಗತಿ ನೋಡತಾ ಇದ್ದಾರ.

ಶಿವಭಕ್ತರಾದ, ವ್ಯವಹಾರ ಚತುರರಾದ, ಮತ್ತೊಬ್ಬರ ಕಷ್ಟದಲ್ಲಿ ಸಹಾಯಕರಾದ ಶ್ರೀ ಜಿ. ಜಿ. ದೊಡವಾಡ ಅವರ ಅಮೃತಮಹೋತ್ಸವ ನಡೀತಿರೋದು ಬಹಳ ಸಂತೋಷ. ನಾವೂ ಭಾಗಿ ಆಗತೇವಿ, ಅಂತ ಪ್ರೈತುಂಬಿ, ತಮ್ಮ ಅನುಭವ ಹೇಳಿ ಬೀಳ್ಕೊಟ್ಟರು.



ಶ್ರೀ ನಿಂಗಪ್ಪ ಹನುಮಂತಪ್ಪ ಮಾಯಣ್ಣವರ

ನಲವತ್ತಾರು ವರ್ಷ ವಯಸ್ಸಿನ ಶ್ರೀ ನಿಂಗಪ್ಪ ಮಾಯಣ್ಣವರ ಅವರು ೧೯೬೪ ರಿಂದಲೇ ದೊಡವಾಡದವರ ಅಂಗಡಿಗೆ ಬರತಾ ಇದ್ದವರು. ಇವರ ತಂದಿ ಹನುಮಂತಪ್ಪನವರು ಇರುವಾಗಲೇ ಇವರ ಬಗ್ಗೆ ಪೂರ್ಣ ಪರಿಚಯವಿದ್ದ ನಿಂಗಪ್ಪ ಅವರನ್ನು ಕೇಳಿದಾಗ—

ಶ್ರೀ ದೊಡವಾಡ ಸಾವಕಾರರು ನನಗ ಮಾರ್ಗದರ್ಶಕರು. ನಾ ಏನ ಹೊಸಾ ಕೆಲಸ ಮಾಡಲಿ, ಅವರನ್ನ ಕೇಳಿ ಮಾಡಕೋತ ಬಂದೀನಿ. ಇದರಿಂದ ನನಗ ಬಹಳ ಛೊಲೋ ಆಕ್ಕೋತ ಬಂದೈತಿ. ನಮ್ಮ ಹೊಲದಾಗ ಏನs ಬೆಳೀಲಿ ಅವರ ಅಂಗಡಿಗೆ ಹಚ್ಚಿದಾಗ, ಅವೆಲ್ಲಾ ತಮ್ಮವು ಅಂತ ತಿಳದು, ಮಾರಿ ನನಗ ಲಾಭ ಮಾಡಿಕೊಟ್ಟಾರ.

ರೈತರ ಬಗ್ಗೆ ಬಹಳ ಕಾಳಜಿ. ರೈತರು ಆನಂದದಿಂದ ಇದ್ರ ಅವರಿಗೆ ಖುಷಿ. ಅವರಿಗೆ ಏನಾದರೂ ತೊಂದರೆ ಆದರ, ಅವರ ತೊಂದರೆ ತಿಳಕೊಂಡು ಸಹಾಯ

ಮಾಡತಾರ. ಬರೇ ನಮ್ಮೂರಿನವರಿಗೆ ಅಂತಲ್ಲಾ, ಅವರ ಅಂಗಡಿಗೆ ಬರೋ, ಹನಸಿ, ಸಿರಕೋಳ, ತಡಕೋಡ, ಅಮ್ಮಿನಭಾವಿ, ಮರೇವಾಡ, ನರೇಂದ್ರ, ಶಿವಳ್ಳಿ ಶಿಬಾರಗಟ್ಟಿ, ಮಾರಡಗಿ ಹಿಂಗ ಬೇರೆ ಹಳ್ಳಿಗಳಿಗೂ ಬಹಾಳ ಸಹಾಯ ಮಾಡ್ಯಾರ.

ನಮ್ಮೂರಾಗ ಹುಡುಗರು ಕಲೀಲಿ, ವಿದ್ಯಾವಂತರಾಗಲಿ ಅಂತ ಸಾಲಿ ಕಟ್ಟಿಸಲಿಕ್ಕೆ ೬೧,೦೦೦ ರೂ. ಕೊಟ್ಟರು. ಊರಾಗ ಮಳಿ ಹೋಗಿ ಬಸವಣ್ಣಗ ಪ್ರಸ್ತಾ ಮಾಡತೀವಿ ಅಂತ ಹೇಳಿದಾಗ 'ಮಾಡ್ರೆಪಾ, ನಿಮ್ಮ ಸುಖಾ ಅಂದ್ರು ನಮ್ಮ ಸುಖಾ' ಅಂತ ಸಹಾಯ ಮಾಡ್ಯಾರ. ಮಳಿ ಹೋಗಿ ಬರ ಬಂದೈತಿ ಅಂತ ತಿಳಕೊಂಡು ಬೀಜ ಕೊಟ್ಟಾರ, ರೊಕ್ಕದ ಸಹಾಯ ಮಾಡ್ಯಾರ, ದುಡಿಯೋವ್ರು ಸಣ್ಣಮಾರಿ ಮಾಡಿಕೊಂಡು ಕುಂತ್ರ ಹಿಂಗ್ಯಾಕ ಅಂತ ಅವರ ಸುಖ ದುಃಖ ಕೇಳಿ ದುಃಖ ಪರಿಹಾರ ಮಾಡ್ಯಾರ. ಎಲ್ಲಾ ಹಳ್ಳಿ ರೈತರ ನೆಲಿ ಅವರಿಗೆ ಗೊತ್ತೈತಿ. ವೈಗಳ್ಳರಿಗೆ, ಮೋಸಗಾರರಿಗೆ ಇವರಲ್ಲಿ ಸ್ಥಾನ ಇಲ್ಲ. ದುಡಿಯೋವರಿಗೆ ಪ್ರಾಮಾಣಿಕರಿಗೆ ಕೊಡೋ ಅಷ್ಟ ಬೆಲಿ ಮಂತ್ಯಾರಿಗೂ ಕೊಡೋದಿಲ್ಲಾ. ಅಂಥವರ ಮ್ಯಾಲೆ ಪೂರ್ಣ ವಿಶ್ವಾಸ. ಪ್ರೀತಿ ತೋರಿಸಿ ಸಹಾಯ ಮಾಡತಾರು. ಅಂಥವರ ಅಮೃತ ಮಹೋತ್ಸವ ಅಂದ್ರ 'ನಮ್ಮನೀ ಹಬ್ಬ.'



ಶ್ರೀ ಕೆ. ವಿ. ಘಂಟೆಣ್ಣವರ

ಶ್ರೀ ಕೆ. ವಿ. ಘಂಟೆಣ್ಣವರಿಗೆ ಈಗ ೬೭ ವರ್ಷ. ಅವರು ೧೯೪೩ ರಲ್ಲಿ ಮಿಲಿಟರಿ ಸೇವೆ ಸಲ್ಲಿಸಿ, ಅವರ ತಂದೆಯವರು ತೀರಿಕೊಂಡ ಮೇಲೆ ಸ್ವತಂತ್ರವಾಗಿ ವ್ಯಾಪಾರ ಪ್ರಾರಂಭಿಸಿದವರು. ದೊಡವಾಡರ ಅಂಗಡಿಯೊಳಗ ಸಾಮಾನುಗಳನ್ನು ಖರೀದಿಸುವದರಿಂದ ಪರಿಚಯ ಆದವರು. ಅವರನ್ನು ಸಂದರ್ಶಿಸಿದಾಗ,

'ದೊಡವಾಡ ಸಾವುಕಾರು ಒಬ್ಬರಿಗೂ ಕೆಟ್ಟ ಬಯಸೋವ್ರಲ್ಲ. ಇಟ್ಟ ವಿಶ್ವಾಸಕ್ಕ ಎರಡು ಬಗೆಯೋವ್ರಲ್ಲ. ಸಮಾಧಾನ ಮನಸ್ಸಿನವರು. ಅವರಿಗೆ ಇಷ್ಟ ಇದ್ರೂ ಗರ್ವ ಅನ್ನೋದು ಎಳ್ಳಕಾಳಷ್ಟೂ ಇಲ್ಲಾ. ಮಂತ್ರೊಬ್ಬರಿಗೆ ಭೋಲೋ

ಮಾಡಬೇಕನ್ನೂ ಗುಣದವರು. ನನಗ ಕಷ್ಟದ ಕಾಲದಾಗ ಸಹಾಯ ಮಾಡ್ಯಾರ. ಪ್ರೋತ್ಸಾಹ ಕೊಟ್ಟಾರ. ಅದರಿಂದನs ಇವತ್ತ ಪ್ರಗತಿ ಸಾಧಿಸೇವಿ. ನಮ್ಮ ತಂದೀ ಸಮಾನ ಅಂತ ಅವರೊಂದಿಗೆ ಇವತ್ತಿಗೂ ನಡಕೋತ ಬಂದೀವಿ. ಏನ ಕಾರ್ಯ ಬರಲಿ, ಅವರು ನಮಗ ದುಡ್ಡಿನ ಸಹಾಯ, ವ್ಯಾಪಾರದ ಸಹಾಯ ಮಾಡ್ಯಾರ. ಲಗ್ನಕ್ಕೂ ಕೂಡಾ ಸಹಾಯ ಮಾಡ್ಯಾರ. ಅವರ ಸಹಾಯ ಸಹಕಾರದಿಂದನs ಗೌರವದಿಂದ ಇದ್ದೀವಿ ಅನ್ನಲಿಕ್ಕೆ ಏನೂ ಅಡ್ಡಿ ಇಲ್ಲಾ. ಇವತ್ತಿಗೂ ತಮ್ಮ ಮನಿಯೊಳಗ ಏನಾರ ಕಾರ್ಯ ಇದ್ರ ನಮಗೆಲ್ಲಾ ಆಮಂತ್ರಣ ಇರತsದ. ನಾವ್ರ ಬಂದs ಮನಿಯವರಂಗ ಇದ್ದೇವಿ. ಅವರ ಅಮೃತ ಮಹೋತ್ಸವ ಬಗ್ಗೆ ಕೇಳಿ ಮನಿಮಂದಿಗೆಲ್ಲಾ ಆನಂದಾಗೇದ ಅಂತ ಅವರ ಮನಿಯವರೂ ಧ್ವನಿಗೂಡಿಸಿದರು.

× × × ×

ಶ್ರೀ ಸಿ. ಎಸ್. ಘಂಟೆಣ್ಣವರನ್ನು ಕರೆದುಕೊಂಡು ದೊಡವಾಡರ ಗರಡಿಯ ಹುಲಿಗಳನ್ನು ಸಂಪರ್ಕಿಸಿ ತನ್ಮೂಲಕ ಶ್ರೀ ಜಿ. ಜಿ. ದೊಡವಾಡ ಅಣ್ಣಾ ಅವರ ವ್ಯಕ್ತಿತ್ವದ ಸಮೀಕ್ಷೆ ಮಾಡಿದಾಗ, ಅವರು ಬಂಗಾರದ ಘಟ್ಟಿ ಅನ್ನುವುದು ತಿಳಿಯಿತು. ತಮ್ಮ ಅಮೃತ ಮಹೋತ್ಸವದ ಸಂದರ್ಭದಲ್ಲಿ ಇವರೆಲ್ಲರ ಗಾಢವಾದ ಸ್ನೇಹ ಬೆಳೆಸಿಕೊಳ್ಳಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಶ್ರೀ ಜಿ. ಜಿ. ದೊಡವಾಡ ಅಮೃತ ಮಹೋತ್ಸವ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸುವೆ.

ಅಸಾಧಾರಣ ಶಕ್ತಿಯುಳ್ಳ, ಮೃದು-ಮಿತಭಾಷಿಗಳಾದ, ಉದಾರ ಕೊಡುಗೆಯ ದಾನಿಗಳಾದ, ಕರ್ಮಯೋಗಿಗಳಾದ, ವ್ಯಾಪಾರ ಚತುರರಾದ, ತತ್ತ್ವಜ್ಞಾನಿಗಳಾದ ರೈತರ ಪುತ್ರರಾದ ಶ್ರೀ ಜಿ. ಜಿ. ದೊಡವಾಡ ಅವರಿಗೆ ಅಂತಃಕರಣಪೂರ್ವಕವಾದ ನಮನಗಳನ್ನು ಹೇಳಿ ಕೊನೆಯಲ್ಲಿ ವರಕವಿ ದ. ರಾ. ಬೇಂದ್ರೆಯವರ ನಾಲ್ಕು ಸಾಲುಗಳೊಂದಿಗೆ ಈ ಲೇಖನ ಮಾಲಿಯನ್ನು ಮುಗಿಸುವೆ.

'ಕೂಡಿ ಓದಿ ಕೂಡಾಡಿ ಕೂಡಿ ಅರಿಯೋಣ ಕೂಡಿ ಕೂಡಿ,
ಕೂಡಿ ತಿಂದು ಕೂಡುಂಡು ಕುಡಿದು ದುಡಿಯೋಣ ಕೂಡಿ ಕೂಡಿ,
ಕೂಡಿ ನಡೆದು ಒಡಗೂಡಿ ಪಡೆದು ನುಡಿ ಹೇಳಿ ಕೇಳಿ ಕೂಡಿ,
ಕೂಡಿ ಬೆಳೆದು ಬೆಳಗೋಣ ದೇವರೊಲು ಕೂಡಿ ಕೂಡಿ ಕೂಡಿ ॥



ಶತಾಯುಷಿ ಮಾತೋಶ್ರೀ ಗಂಗಮ್ಮನವರೊಂದಿಗೆ
ಶ್ರೀ ಜಿ. ಜಿ. ದೊಡವಾಡರು



ಶ್ರೀ ಜಿ. ಜಿ. ದೊಡವಾಡರ ಊರಹಿರಿಯರೂ ಮತ್ತು ಆತ್ಮೀಯ ಹಿತಚಿಂತಕರಾದ
೧. ಮನೆಯ ಸ್ವಾಮಿಗಳಾದ ಶಿವಬಸಯ್ಯನವರು ಹಿರೇಮಠ ೨. ಪರಮೇಶ್ವರ ಮಟ್ಟಿ
೩. ಶ್ರೀ ಕಲ್ಲಪ್ಪ ಹಲಗತ್ತಿ ೪. ಶ್ರೀ ಸಿದ್ದಪ್ಪ ಯಾದವ



ಶ್ರೀ ಜಿ. ಜಿ. ದೊಡವಾಡರು ಹುಟ್ಟಿದ ಮನೆ
ಕರಿಕಟ್ಟಿ (12-1-1912)



ಧಾರವಾಡದಲ್ಲಿ ಶ್ರೀ ಜಿ. ಜಿ. ದೊಡವಾಡ ಅವರ
ನಿವಾಸ



1948ರಲ್ಲಿ ಧಾರವಾಡ ನೆಹರೂ ಮಾರ್ಕೆಟಿನಲ್ಲಿ
ಪ್ರಾರಂಭಿಸಿದ ಕಿರಾಣಿ ಅಂಗಡಿ



ಮೃತ್ಯುಂಜಯ ಮಾರ್ಕೆಟಿನಲ್ಲಿರುವ
ದಲಾಲಿ ಅಂಗಡಿ



1963 ರಲ್ಲಿ ಶ್ರೀ ಮತ್ತ್ಯುಂಜಯ ರೈಸ ಮಿಲ್‌ದ
ಉದ್ಘಾಟನೆ. ಲಿ. ಮೃತ್ಯುಂಜಯ ಮಹಾಸ್ವಾಮಿಗಳ
ಅಮೃತ ಹಸ್ತದಿಂದ ನೆರವೇರಿತು.



ಶ್ರೀ ಎಸ್. ಜಿ. ದೊಡವಾಡರ ನೆಹರೂ ಮಾರ್ಕೆಟದಲ್ಲಿರುವ
ಸಗಟು ಎಣ್ಣೆ ವ್ಯಾಪಾರದ ಕೇಂದ್ರ



ಯರಗಟ್ಟಿಯಲ್ಲಿ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿಧಾನದಲ್ಲಿ
ಶ್ರೀ ಜಿ. ಜಿ. ದೊಡವಾಡರನ್ನು ಸತ್ಕರಿಸುತ್ತಿರುವದು



ಹುಬ್ಬಳ್ಳಿ-ಧಾರವಾಡ ಅರ್ಬನ್ ಬ್ಯಾಂಕ್. ಹುಬ್ಬಳ್ಳಿ ಶಾಖೆಯನ್ನು ಉದ್ಘಾಟಿಸಿದ
ಮೂರುಸಾವಿರ ಮಠದ ಪೂಜ್ಯ ಜಗದ್ಗುರುಗಳನ್ನು ಸ್ವಾಗತಿಸುತ್ತಿರುವ
ಶ್ರೀ ಜಿ. ಜಿ. ದೊಡವಾಡರು



ಶ್ರೀ ಚನ್ನಬಸವೇಶ್ವರ ಫೈನಾನ್ಸ ಕಾರ್ಪೋರೇಶನ್‌ದ ಸಮಾರಂಭದಲ್ಲಿ
ಗದುಗಿನ ಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಮಹಾಂತಪ್ಪಗಳೊಡನೆ
ಶ್ರೀ ಜಿ. ಜಿ. ದೊಡವಾಡರು



ಶಿವರಾತ್ರಿಯ ನಿಮಿತ್ತವಾಗಿ ಮೃತ್ಯುಂಜಯ ಮಾರ್ಕೆಟದಲ್ಲಿ
ಅನ್ನಸಂತರ್ಪಣೆ ಮಾಡುತ್ತಿರುವ ಶ್ರೀ ಜಿ. ಜಿ. ದೊಡವಾಡವರು



ಬಸವ ಜ್ಯೋತಿಯನ್ನು ಸ್ವಾಗತಿಸುತ್ತಿರುವ
ಶ್ರೀ ಜಿ. ಜಿ. ದೊಡವಾಡರು



ಜೇಲಿಮಠದ ಪೂಜ್ಯ ಸ್ವಾಮಿಗಳಿಂದ ವಿಶ್ವ ಹಿಂದು ಪರಿಷತ್ತಿನ ಶಿಬಿರದಲ್ಲಿ
ಜಿಲ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೀ ಜಿ. ಜಿ. ದೊಡವಾಡ ಅವರನ್ನು
ಸನ್ಮಾನಿಸುತ್ತಿರುವದು



ಧಾರವಾಡ ಜಿಲ್ಲಾ ವಿಶ್ವ ಹಿಂದು ಪರಿಷತ್ತಿನ ಅಂಗವಾದ
'ಸಂಜೀವಿನಿ' ಆಸ್ಪತ್ರೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷ
ಶ್ರೀ ಜಿ. ಜಿ. ದೊಡವಾಡರು



ಅಮ್ಮಿನಭಾವಿಯಲ್ಲಿ ಸರಕಾರಿ ಆಸ್ಪತ್ರೆಯ ಉದ್ಘಾಟನಾ
ಸಮಾರಂಭದಲ್ಲಿ ಮುಖ್ಯ ಅತಿಥಿಗಳಾದ
ಶ್ರೀ ಜಿ. ಜಿ. ದೊಡವಾಡರು



ವರ್ಲ್ಡ್ ಬ್ಯಾಂಕಿನ ಅಧಿಕಾರಿಗಳನ್ನು
ಎ. ಪಿ. ಎಂ. ಸಿ. ಯಾರ್ಡಿಗೆ ಸ್ವಾಗತಿಸುತ್ತಿರುವ
ಶ್ರೀ ಜಿ. ಜಿ. ದೊಡವಾಡರು




ಶ್ರೀ ಚನ್ನಬಸವೇಶ್ವರ ಫೈನಾನ್ಸ ಕಾರ್ಪೋರೇಶನ ಲಾಟರಿಯೋಜನೆಯ
ಪ್ರಥಮ ಬಹುಮಾನದ ಕಾರನ್ನು ಹಸ್ತಾಂತರಿಸುತ್ತಿರುವ
ಶ್ರೀ ಜಿ. ಜಿ. ದೊಡವಾಡ



ದಲಾಲ ಮತ್ತು ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡ
ಶ್ರೀ ಜಿ. ಜಿ. ದೊಡವಾಡ ಅವರಿಗೆ ಸ್ವಾಗತ



ದಲಾಲ ಮತ್ತು ವ್ಯಾಪಾರಸ್ಥರ ಸಂಘದ ಸರ್ವಸದಸ್ಯರ ಸಭೆಯಲ್ಲಿ
ಮಾತನಾಡುತ್ತಿರುವ ಶ್ರೀ ಜಿ. ಜಿ. ದೊಡವಾಡರು



'ಬೇಂದ್ರೆ ರಂಗಾವಳಿ' ಉದ್ಘಾಟಕರು
ಶ್ರೀ ಜಿ. ಜಿ. ದೊಡವಾಡರು



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭದ ಕಾರ್ಯಕ್ರಮದಲ್ಲಿ
ಕರ್ನಾಟಕ ಹೈಸ್ಕೂಲಿಗೆ 'ಸೂಕ್ಷ್ಮದರ್ಶಕ'ವನ್ನು ಕಾಣಿಕೆಯಾಗಿ ಕೊಡುತ್ತಿರುವ
ಶ್ರೀ ಜಿ. ಜಿ. ದೊಡವಾಡರು



ಪೂಜ್ಯ ಶ್ರೀ ಆತ್ಮಾನಂದರ ಪುಣ್ಯಸ್ಮರಣೆಯ ಸಮಾರಂಭದ ಅಧ್ಯಕ್ಷತೆ ವಹಿಸಿದ
ಶ್ರೀ ಜಿ. ಜಿ. ದೊಡವಾಡರು



ಹತ್ತನೆ ಶಿವಾನುಭವ ಶಿಬಿರದ ಸ್ವಾಗತಾಧ್ಯಕ್ಷರಾಗಿ ಮಾತನಾಡುತ್ತಿರುವ
ಶ್ರೀ ಜಿ. ಜಿ. ದೊಡವಾಡರು

೨೯-೧-೧೯೮೮

॥ಶ್ರೀ ಮಹದೇಶ್ವರಪ್ರಸನ್ನ॥

ವೇದ ಬೋಧಿತ [illegible] ಜೀವನೋದ್ಧಾರದ ಪುರುಷಾರ್ಥಗಳಾದ, ಧರ್ಮ, ಅರ್ಥ, ಕಾಮ, ಮೋಕ್ಷ, ಎಂಬ ನಾಲ್ಕು ಸಾಧನೆಗಳನ್ನು ಬೋಧಿಸಿದರೆ, ಶರಣ ಸಿದ್ಧಾಂತ ಐದನೆಯದಾದ ಭಕ್ತಿಯನ್ನು ಪ್ರತಿಪಾದಿಸುತ್ತದೆ. ಭಕ್ತಿ, ಧರ್ಮಬದ್ಧವಾದ ಜೀವನವು ದೇವನಾಗುವ ಸಹಜವಾದ [illegible]. [illegible] ತನ್ನನ್ನು ದೇವನಲ್ಲಿ ಅರ್ಪಿಸುವುದೇ ಭಕ್ತಿ.

ಯುಗ ಯುಗಾಂತರಗಳಿಂದ ಮಾನವ ದೇವನಿಂದ ಜೀವಾತ್ಮನಾದ ಕಾರಣವನ್ನು ಕಂಡು ಹಿಡಿಯಲು ಅಸಮರ್ಥನಾಗಿದ್ದಾನೆ. “ಆರು ಅರಿಯರು, ನೀನು ಬೇರಾದ ಪರಿಯನು” ಎಂದು ಮಾನವ, ಬುದ್ಧಿಯ ಅಸಮರ್ಥತೆಯನ್ನು ಸಾರಿಹೇಳಿದವರು ಮಹಾತ್ಮರಾದ [illegible] ಧ್ಯಾನ ಭಾವಗಳು. ‘ಆರು ಅರಿಯರು’, ಎಂಬುದಕ್ಕೆ ಇವರ ಅನುಭವ [illegible] ಪ್ರಮಾಣ ಬೇಕಾದರೂ, ಮಾನವ ಭಾವನೆಗೆ ಅನಂತವಾದ ಇಷ್ಟವು ಯಾವ ಅರ್ಥದಲ್ಲಿ ಬೋಧಿಸಿರಬೇಕೆಂದು, ಮಾನವರಾದ ನಾವು ಅರ್ಥೈಸಬೇಕು.

“[illegible]” ಎಂಬ ಉಪನಿಷ[illegible] [illegible] ನಾಮ[illegible] [illegible] ರು [illegible] ಜಗವಿದೆಲ್ಲ [illegible].

ಗುರುಪುತ್ರ. ಗುರುಪಾದಪ್ಪ. [illegible]

ಶ್ರೀ ಗುರುಪುತ್ರಪ್ಪನವರ ಹಸ್ತಾಕ್ಷರದ ಮಾದರಿ

ಧರ್ಮದೀಪ್ತಿ

ಈ ವಿಭಾಗದಲ್ಲಿ ....

ಬಸವಣ್ಣನವರ ವಚನಗಳ ಆಶಯ



● **ಚೆನ್ನವೀರ ಕಣವಿ**

ಪ್ರಬಲವಾದ ಆತ್ಮಶಕ್ತಿಯಿಂದ ಪರಿಸರದೊಡನೆ ಹೋರಾಡಿ ತನ್ನ ಯುಗದ ಮನೋಧರ್ಮವನ್ನೇ ಪರಿವರ್ತಿಸಿದ ಬಸವಣ್ಣನ ಮುಖ್ಯ ಕಾರ್ಯ ಧಾರ್ಮಿಕವಾಗಿದ್ದರೂ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರವನ್ನು ಅದು ವ್ಯಾಪಿಸಿಕೊಂಡಿತು. ಉದಾರವೂ ಉದಾತ್ತವೂ ಆದ ತತ್ವಗಳನ್ನೊಳಗೊಂಡ ವೀರಶೈವಧರ್ಮ ಅವರ ಕ್ರಿಯಾತ್ಮಕ ಧೋರಣೆಯಿಂದ ಹೊಸ ಚೈತನ್ಯವನ್ನು ಪಡೆದು ಮಾನವಧರ್ಮದ ಮಹಾಭಾಗ್ಯವನ್ನು ಜನತೆಗೆ ನೀಡುವಂತಾಯಿತು. ಜನಸಾಮಾನ್ಯರ ಉದ್ಧಾರವೇ ಅವರ ಮುಖ್ಯ ಗುರಿಯಾಗಿದ್ದರೂ ಅವರ ಹೃದಯದಿಂದ ಹೊರಹೊಮ್ಮಿದ ನುಡಿಗಳು ಭಾವತೀವ್ರತೆ, ಅನುಭವದ ಸಹಜ ಅಭಿವ್ಯಕ್ತಿ ಹಾಗೂ ವಚನ ಪ್ರಭೇದದ ಸೊಗಸಿನಿಂದ ಅವರನ್ನು ವಚನಕಾರರ ಶ್ರೇಷ್ಠ ಪ್ರತಿನಿಧಿಯನ್ನಾಗಿ ಮಾಡಿವೆ.

ಬಿಜ್ಜಳನ ಕೈಕೆಳಗೆ ಒಂದು ಪ್ರಧಾನವಾದ ಅಧಿಕಾರದಲ್ಲಿದ್ದ ಬಸವಣ್ಣನವರಿಗೆ ರಾಜಕೀಯ ಜೀವನದ ನಿಕಟ ಪರಿಚಯವಿದ್ದಿತಲ್ಲದೆ ಅದರ ಅಸ್ಥಿರತೆಯ ಅರಿವೂ ಇದ್ದಿತು.[೧] ಧರ್ಮದ ನಿಜಸ್ವರೂಪ ಮಸುಳಿಸಿ, ಅಂಧಶ್ರದ್ಧೆ, ಅಹಂಕಾರ, ಆಡಂಬರಗಳೇ ಅಟ್ಟಹಾಸಗೈಯುತ್ತಿರುವಾಗ ಸಾಮಾಜಿಕ ಜೀವನ ವೈಷಮ್ಯಭಾವದಿಂದ ಕಲುಷಿತಗೊಂಡು ಸುಲಿಗೆ ಶೋಷಣೆಗಳಿಂದ ಸಂಕಟಕ್ಕೆ ಒಳಗಾದಾಗ, ಬಸವಣ್ಣನವರು ಅದನ್ನು ಅತ್ಯಂತ ಧೈರ್ಯದಿಂದ ಪ್ರತಿಭಟಿಸಿ ಮೂಲಭೂತವಾದ ಬದಲಾವಣೆಗೆ ಕೈಹಾಕಿದರು. ಸ್ವತಂತ್ರ ವಿಚಾರಶೀಲತೆಯ, ಸರ್ವಸಮಾನತೆಯ, ನವಸಮಾಜ ನಿರ್ಮಾಣದಿಂದ ಪ್ರೇರಿತರಾಗಿ ಲೋಕದ ವಿರೋಧವನ್ನೂ ಲೆಕ್ಕಿಸದೆ ಅದನ್ನು ಪ್ರತ್ಯಕ್ಷವಾಗಿ ಕಾರ್ಯರೂಪದಲ್ಲಿ ತಂದು ನಿಜವಾದ ಕ್ರಾಂತಿಕಾರಿಯೆನಿಸಿದರು. ಭಕ್ತಿಸಾಧನೆಯ ಭಾವಶುದ್ಧಿಯಿಂದ, ನೈತಿಕ ನಿಷ್ಠೆಯಿಂದ, ಆತ್ಮಶೋಧನೆಯ ಬಲದಿಂದ, ಗಂಡು

ಹೆಣ್ಣೆನ್ನದೆ, ಉಚ್ಚ ನೀಚ ಕುಲವೆನ್ನದೆ, ಆತ್ಮೋನ್ನತಿಯ ಆಧ್ಯಾತ್ಮಿಕ ಪಥವನ್ನು ಎಲ್ಲರಿಗೂ ಮುಕ್ತಗೊಳಿಸಿ ಮಹಾಮಾನವತಾವಾದಿಯೆನಿಸಿದರು. ಧಾರ್ಮಿಕ, ಸಾಮಾಜಿಕ ಸುಧಾರಕರಾಗಿ ಅವರ ಮನಸ್ಸನ್ನು ತೀವ್ರವಾಗಿ ಕಾಡಿದ ಅಂಶಗಳು ಸಾಮಾಜಿಕ ಸಂವೇದನೆಯಿಂದ ಅವರ ವಚನಗಳಲ್ಲಿ ಅಭಿವ್ಯಕ್ತಿ ಪಡೆದಿವೆ. ತನ್ನ ಕಾಲದ ಅಗತ್ಯಗಳನ್ನೆಲ್ಲ ಅರಿತು. ಸಮಾಜದ ಬದುಕಿನೊಂದಿಗೆ. ಅದರ ಕಷ್ಟ ಸುಖ ಗಳೊಂದಿಗೆ ಸ್ಪಂದಿಸಿ, ಅದನ್ನು ಧ್ವನಿಸುವ ವಾಣಿಯಾದ ಬಸವಣ್ಣನವರ ವಚನಗಳಲ್ಲಿ ಅವರ ಆಶಯವನ್ನು ಸ್ಪಷ್ಟವಾಗಿ ಗುರುತಿಸಬಹುದು.

ವ್ಯಕ್ತಿಯು ಬೋಧೆ ಜನಮನದಲ್ಲಿ ನಾಟಬೇಕಾದರೆ ಅವನ ಆಚಾರ ವಿಚಾರಗಳು ಪರಿಶುದ್ಧವಾಗಿರಬೇಕು, ಅವನ ನಡೆಯೇ ಒಂದು ಆದರ್ಶವಾಗಿ ತೋರಬೇಕು. ಹಾಗೆ ನಡೆದು ನುಡಿದು ತೋರಿಸಿದ ಬಸವಣ್ಣನವರು ಒಳ ಹೊರ ಜಗತ್ತಿನ ಹೊಂದಾಣಿಕೆಯನ್ನು ಸಾಧಿಸಿದರು. ಅಂತರಂಗ ಶುದ್ಧಿಗೆ ಪ್ರಥಮಸ್ಥಾನವನ್ನು ನೀಡಿ. ತಮ್ಮ ಮನಸ್ಸನ್ನು ತಾವೇ ಪರೀಕ್ಷಿಸಿಕೊಂಡು, ಪರಮಾತ್ಮನ ಸಾಕ್ಷಾತ್ಕಾರ ಪಡೆಯುವ ವರೆಗಿನ ಹೋರಾಟದ ಏಳು ಬೀಳುಗಳನ್ನೆಲ್ಲ ಅನುಭವಿಸಿದ್ದರಿಂದ ಅವರ ಭಕ್ತಿಸಾಧನೆಯಲ್ಲಿ ಮನುಷ್ಯತ್ವದಿಂದ ದೇವತ್ವಕ್ಕೇರಿದ ಮನುಷ್ಯ ಸಹಜವಾದ ರಸಭಾವ ವಿಶೇಷಗಳು ನಮಗೆ ಹೆಚ್ಚು ಆತ್ಮೀಯವಾಗಿ ತೋರುತ್ತವೆ.

'ಭಕ್ತಿ ಎನ್ನುವುದು ಭಗವಂತನಲ್ಲಿರುವ ನಿಶ್ಚಲ ಪ್ರೇಮ: ತನ್ನ ಅವಗುಣ ಗಳೊಡನೆ. ಅರಿಷಡ್ವರ್ಗದೊಡನೆ ನಡೆಸುವ ಒಂದು ಹೋರಾಟ: ಮನಸ್ಸನ್ನು ಪರಮಾತ್ಮನಲ್ಲಿ ಸೇರಿಸುವ ಒಂದು ಸಾಧನೆ'.[೨] ಶುದ್ಧಾಂತಃಕರಣದಿಂದ ಮೂಡಿದ ವಿಚಾರಪೂರ್ವಕವಾದ ಶ್ರದ್ಧೆ ಬಸವಣ್ಣನವರ ಭಕ್ತಿಯ ಸ್ವರೂಪವನ್ನು ಬೆಳಗಿಸಿದೆ. ಜಗತ್ತನ್ನು ಉದ್ಧಾರಮಾಡಲು ಹೊರಡುವ ಮೊದಲು ತನ್ನನ್ನು ತಾನು ತಿದ್ದಿ ಕೊಂಡು, ತನ್ನ ಲೋಪದೋಷಗಳನ್ನು ನಿವಾರಿಸಿಕೊಳ್ಳುವುದು ಅತ್ಯಗತ್ಯ.

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ ॥

(ಬ. ಷ. ವ, ೧೨೪)

ತನ್ನ ತನುಮನದ ಶುದ್ಧಿ ಭಕ್ತಿಯ ಪ್ರಥಮ ಸೋಪಾನ. ಹಾಗೆಯೇ ಸಮಾಜೋದ್ಧಾರಕ್ಕೆ ಹೊರಡುವವರಿಗೂ ಇದು ಬಸವಣ್ಣನವರು ಹೇಳಿದ ಕಿವಿಮಾತು. ಹೊರಗೆ ಸುಂದರವಾಗಿ ಕಂಡರೂ ಒಳಗೆ ಕಲುಷಿತಗೊಂಡು ಈಶನ ವಾಸಕ್ಕೆ ಯೋಗ್ಯವಾಗಿರದ

'ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯ' ಎಂದುಕೊಂಡ ಬಸವಣ್ಣನವರು, ಮನೆಯ ಮುಂದೆ ಹುಲ್ಲು ಬೆಳೆದು, ಮನೆಯೊಳಗೆ ಧೂಳು ತುಂಬಿದ್ದರೆ ಆ ಮನೆಗೆ ಯಾರೂ ದಿಕ್ಕಿಲ್ಲವೆಂಬುದನ್ನು ಸೂಚಿಸುವಂತೆ 'ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ' ಎಂದು ಕೂಡಲಸಂಗಮದೇವನಲ್ಲಿ ತಮ್ಮ ಮನಸ್ಸನ್ನು ತೋಡಿಕೊಂಡರು. 'ಮರನನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾರುತ್ತಿರುವ ಮನದ ಚಂಚಲತೆಯನ್ನು, ಹೊರಗಿನ ಆಕರ್ಷಣೆಗೆ ಒಳಗಾಗಿ, ಬಯಸಿ ಬೆನ್ನುಹತ್ತಿ 'ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆ' ಅದು ಪಡುವ ನೋವನ್ನು, ಒಂದು ಕ್ಷಣ ಉಚ್ಚ ವಿಚಾರದಲ್ಲಿ, ಮಗ್ನವಾಗಿದೆಯೆಂದುಕೊಂಡರೂ ಮರುಕ್ಷಣದಲ್ಲಿ 'ಅಂದಣವನೇರಿದ ಸೊಣಗನಂತೆ ಕಂಡೊಡೆ ಬಿಡದ' ಅದರ ಸ್ವಭಾವವನ್ನು 'ಕಂಬಳಿಯಲ್ಲಿ ಕಣಕವ ನಾದಿದಂತೆ'. ಒಳಿತಾದುದನ್ನೂ ತನ್ನಂತೆ ಕೆಡಿಸುವದರಲ್ಲಿಯೇ ತೊಡಗುವ ಅದರ ವೃತ್ತಿಯನ್ನು ಕಂಡುಂಡ ಅವರು ತಮ್ಮನ್ನು 'ಲಿಂಗವ್ಯಸನಿ ಜಂಗಮಕ್ಕೆ ಪ್ರೇಮಿ,' ಎಂದೆನಿಸಿ 'ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು' ಎಂದು ಆರ್ತಭಾವದಿಂದ ಬೇಡಿಕೊಂಡಿದ್ದಾರೆ.

ಮನದ ಪರಿ ಹೀಗಾದರೆ ಇರವಿನ ಪರಿ ಅದಕ್ಕೂ ಶೋಚನೀಯ. 'ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ' ತನಗರಿವಿಲ್ಲದೆಯೇ ಅದು ಮೃತ್ಯುವಿಗಧೀನವಾಗಿದೆ. 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು,' ಮನುಷ್ಯ ಜೀವನದ ದುರಂತತೆಯನ್ನೇ ಕಣ್ಣೆದುರು ನಿಲ್ಲಿಸಿದಂತಿದೆ ಈ ವಚನ. "ಕೊಂದವರುಳಿದರೇ" ಎಂಬ ಪ್ರಶ್ನೆಯಿಂದ ಬಸವಣ್ಣನವರು ಹಿಂಸಾಪರವಾದ ಇಡಿಯ ಮಾನವ ಜನಾಂಗದ ಕಣ್ಣನ್ನೇ ತೆರೆದಿದ್ದಾರೆ. ಆದುದರಿಂದ 'ಕೆಡುವೊಡಲ ನಚ್ಚಿ ಕಡು ಹುಸಿಯನೆ ಹುಸಿದು, ಒಡಲ ಹೊರೆವರ' ಭಗವಂತ ಒಲ್ಲ, ಅವನನ್ನರಿಯಲು ವೇದ ಶಾಸ್ತ್ರಾದಿಗಳು ಸಹಕಾರಿಗಳಲ್ಲ; ಆತ 'ನಾದಪ್ರಿಯನಲ್ಲ, ವೇದಪ್ರಿಯನಲ್ಲ, ಭಕ್ತಿಪ್ರಿಯ'. ಜೀವನದ ಘನೋದ್ದೇಶವನ್ನು ಮರೆತು ದುಃಖಭಾಗಿಯಾಗದೆ ಅರಿತು ಶರಣನಾಗಬೇಕಾದರೆ ಭಕ್ತಿಭಾವ ಅತ್ಯವಶ್ಯ. ಆದರೆ ಭಕ್ತಿಯ ಹಾದಿ ಅಷ್ಟು ಸುಲಭವಲ್ಲ. ನಿಶ್ಚಲವಾದ ನಿಷ್ಕಪಟವಾದ ಆತ್ಮಾರ್ಪಣೆಗೆ ಭಕ್ತ ಸಿದ್ಧನಾಗಬೇಕು. 'ಭಕ್ತಿಯೆಂಬುದ ಮಾಡಬಾರದು, ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು,' ಅಷ್ಟೊಂದು ತೀಕ್ಷ್ಣಪರೀಕ್ಷೆಗೆ ಭಕ್ತನಾದವನು ಒಳಗಾಗಬೇಕಾಗುತ್ತದೆ:

ನಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆಮಾರುವೋದೆನೆಂದರೆ
ತನುವನಲ್ಲಾಡಿಸಿ ನೋಡುವೆ ನೀನು,
ಮನವನಲ್ಲಾಡಿಸಿ ನೋಡುವೆ ನೀನು,

ಧನವನಲ್ಲಾಡಿಸಿ ನೋಡುವೆ ನೀನು,
ಇದಕ್ಕೆಲ್ಲ ಅಂಜದಿದ್ದರೆ ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ ॥
(ಬ. ಷ. ವ. ೨೧೪)

ವಿನಯ ಭಕ್ತಿಯ ಪ್ರಥಮ ಲಕ್ಷಣ. 'ಸದುವಿನಯವೇ ಸದಾಶಿವನ ಒಲುಮೆಯಯ್ಯಾ'. ಆದರೆ ಆ ವಿನಯ, ನಮ್ರತೆಗಳು ಸತ್ವಪೂರ್ಣವಾಗಿರಬೇಕು. 'ಬೀಗಿ ಬೆಳೆದ ಗೊನೆಬಾಳೆಯಂತೆ ಬಾಗಿಕೊಂಡಿದ್ದರೆ' ಬೇಡಿದ ಪದವಿ. 'ದಿಟಪುಟಭಕುತಿ ಸಂಪುಟ' ನೆಲೆಗೊಳ್ಳಬೇಕಲ್ಲದೆ ತೋರಿಕೆಯದಲ್ಲ. ಇಲ್ಲದಿದ್ದರೆ 'ಹೆಂಡದ ಮಡಕೆಯ ಹೊರಗೆ ತೊಳೆದಂತೆ' ಒಳಗಿನ ಅಶುದ್ಧಿ ಡಾಂಭಿಕತೆಯ ದುರ್ಗುಣವನ್ನೇ ಮೆರೆಯುತ್ತದೆ. ನಿಜವಾದ ಭಕ್ತ ಮೈತುಂಬ ಎಚ್ಚರವುಳ್ಳವನಾಗಿರಬೇಕು. 'ಕೋಟಿ ಸನ್ಮಾನವ ಮಾಡಿದರೇನು ? ನಿಮಿಷದ ಉದಾಸೀನ ಕೆಡಿಸಿತ್ತು.' ತತ್ಕಾಲ ಪ್ರೇಮವ ನರಿಯದೆ ವಿಭವಕ್ಕೆ ಮಾಡಿದವನ ಭಕ್ತಿ 'ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ' ನಿರುಪಯುಕ್ತ ಹಾಗೂ ವ್ಯರ್ಥ. 'ಓಡಲಾಗದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ' ಅದು ಅಸಾಮರ್ಥ್ಯದ ಅನಿವಾರ್ಯತೆಯಾಗಬಾರದು. ತನುವುಕ್ಕಿ ಮನವುಕ್ಕಿ ಭಕ್ತಿಯನ್ನು ಮಾಡಬೇಕು, ಮಾಡಿಸಿಕೊಳ್ಳಬೇಕು.

ಸಂಸಾರವೇ ಸಾರಸರ್ವಸ್ವವೆಂದೂ ಅದೇ ಶಾಶ್ವತಸುಖವೆಂದೂ ಭ್ರಮಿಸಿ, ಅದರಲ್ಲಿಯೇ ಮಗ್ನನಾದವನಿಗೆ ಭಕ್ತಿ ಕೈವಶವಾಗದು. ಸಂಸಾರದಲ್ಲಿರುವ ವರೆಗೆ ಅಂಥವನು ತಾನು, ತನ್ನದು ಎಂದು 'ಊರ ಸೀರೆಗೆ ಅಗಸ ತಡಬಡಿಹಡೆದಂತೆ' ಕಾತರಗೊಳ್ಳುವದೇ. 'ಸಂಸಾರ ಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯ', ಎಂದು ಅದರಿಂದ ತನಗಾದ ವಿಪತ್ತನ್ನು ಕಂಡುಕೊಂಡು 'ಶೂಲದ ಮೇಲಣ ಭೋಗವೇನಾದರೇನೋ' ಎಂದು ಅದರ ದುರಂತ ಪರಿಣಾಮವನ್ನು ಬಸವಣ್ಣನವರು ಬಣ್ಣಿಸಿದ್ದಾರೆ. ಆದರೆ ಈ ಜಗತ್ತು, ಸಂಸಾರ, ಮದುವೆ, ದುಃಖ, ತಾಮಸ ಇದೂ ಕೂಡ ಭಗವಂತನೇ ಮಾಡಿದ್ದಲ್ಲವೇ ? ಅವನ ಅನುಗ್ರಹವಿಲ್ಲದೆ ಸಂಸಾರ ಬಿಡದು. 'ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿದೇಕೆ ?' ಎಂಬ ಪ್ರಾಮಾಣಿಕ ಅನುಭವ ಅವರದು. ಮನಸ್ಸು ಅದರಲ್ಲಿ ಮುಳುಗಿ ಹೋಗಿ ಕೂಡಲಸಂಗನ ಸೇವೆಗೆ ವೇಳೆ ಇಲ್ಲದಾಗಿದೆ. 'ಜಿರಣಿಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲೆನಗೆ', ಎಂದು ಕಳವಳಗೊಂಡು

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ;
ಪಶುವೇನ ಬಲ್ಲುದು ? ಹಸುರೆಂದೆಳಸುವದು.
ವಿಷಯರಹಿತನ ಮಾಡಿ ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬುದಕವನೆಱೆದು,
ನೋಡಿ ಸಲಹಯ್ಯಾ, ಕೂಡಲಸಂಗಮದೇವಾ ॥
(ಬ. ಷ. ವ, ೫೧)

ಎಂದು ಮನಸ್ಸನ್ನು ತನ್ನತ್ತ ಎಳೆದುಕೊಂಡು ಕರುಣಿಸುವಂತೆ ಮೊರೆಯಿಟ್ಟಿದ್ದಾರೆ. 'ನಿಮ್ಮ ಸೊಮ್ಮ ನಿಮಗೆ ಸಲಿಸುವೆನು', 'ನಿಮ್ಮ ನಿಲುವಿಂಗೆ ಕುದಿವೆನಲ್ಲದೆ ಎನ್ನೊ ಡಲವಸರಕ್ಕೆ ಕುದಿದೆನಾದರೆ ತಲೆದಂಡ' ಎಂಬ ಧೀರತನದಿಂದ ಕೂಡಲಸಂಗಮನಲ್ಲಿ ಸಮಾಧಾನಪಟ್ಟುಕೊಂಡು ಅವರು ತಮ್ಮ ಅಂತರಂಗದ ಬೆಳವಣಿಗೆಗೆಲ್ಲ ಭಗವಂತನನ್ನೇ ಸಾಕ್ಷಿಯಾಗಿಟ್ಟುಕೊಂಡು ಸಾಗಿದರು. 'ಎನ್ನ ತಪ್ಪನೊಪ್ಪ ಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.' ಎಂದು ಬೇಡಿಕೊಳ್ಳುತ್ತ 'ಕೆಲಕ್ಕೆ ಶುದ್ಧನಾದೆನಲ್ಲದೆ' ಎನ್ನ ಮನಕ್ಕೆ ಶುದ್ಧನಾಗೆನಯ್ಯ' ಎಂದು ಹಲವು ವಿಧದಲ್ಲಿ ತಮ್ಮನ್ನೇ ತಾವು ಪರೀಕ್ಷೆ ಮಾಡಿಕೊಳ್ಳುತ್ತಿದ್ದರು. ಯಾರಾದರೂ ಮೆಚ್ಚಿ ಹೊಗಳಿದರೆ ಅದಕ್ಕೆ ಎಳ್ಳಷ್ಟೂ ಮನಸೋಲದ ನೈತಿಕ ನಿಷ್ಠುರತೆ ಅವರದು. 'ನೀನೆನಗೊಳ್ಳಿದನಾದರೆ, ಎನ್ನ ಹೊಗಳ್ತೆಗಡ್ಡಬಾರಾ ಧರ್ಮೀ' ಎಂದು ಕೂಡಲಸಂಗಮದೇವನಲ್ಲಿ ಅವರ ನಿರಂತರ ಪ್ರಾರ್ಥನೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ,' ಎಂಬ ಕಿಂಕರತ್ವ ದಿಂದ 'ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ' ಎಂಬ ನಿರಹಂಭಾವ ದಿಂದ ಪರಮಾತ್ಮನ ನೆನಹೇ ಜೀವನವಾದ ಸರ್ವಸಮರ್ಪಣ ಭಕ್ತಿಯ ಭಾವದಲ್ಲಿ ಪರಾಕಾಷ್ಠತೆಯನ್ನು ಪಡೆದಿದ್ದಾರೆ :

ಎನ್ನ ಕಾಯವ ದಂಡಿಗೆಯ ಮಾಡಯ್ಯ;
ಎನ್ನ ಸಿರವ ಸೋರೆಯ ಮಾಡಯ್ಯಾ;
ಎನ್ನ ನರವ ತಂತಿಯ ಮಾಡಯ್ಯಾ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ;
ಬತ್ತೀಸರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ ॥

(ಬ. ಷ. ವ. ೫೦೦)

ಇಂಥ ಒಂದು ಪರಮಾನಂದ ಸ್ಥಿತಿಯನ್ನು ಪಡೆದ ಅವರ ಹೃದಯದಲ್ಲಿ ಪರಮಾತ್ಮನ ದರ್ಶನವಾಗಿ 'ಸಮರತಿ ಸಮಕಳೆ ಸಮಸುಖ'ವನರಿತು 'ನದಿಯೊಳಗೆ ನದಿ ಬೆರಸಿ ದಂತಾ'ಯಿತು.

ಹೀಗೆ ಅಂತರಂಗ ನಿರೀಕ್ಷಣೆ, ಆತ್ಮಪರೀಕ್ಷೆ, ಭಕ್ತಿಯ ಪರಾಕಾಷ್ಠತೆಗಳಿಂದ ವಿಶಿಷ್ಟವಾದ ಆಶಯಕ್ಕೆ ಅವರ ವಚನಗಳು ಕನ್ನಡಿ ಹಿಡಿದಿವೆ. ಇಂಥ ಒಂದು ಅತ್ಯುಚ್ಚ ಅನುಭವವನ್ನು ಪಡೆದ ಮೇಲೆ ಬಸವಣ್ಣನವರು ಈ ಲೋಕವನ್ನು, ಜನತೆ ಯನ್ನು ಮರೆತು ಬಿಡಲಿಲ್ಲ. ಭಕ್ತರ ಒಡನಾಟದಲ್ಲಿ, ಅವರ ಸೇವೆಯಲ್ಲಿ ಮುಕ್ತಿಸುಖ ವನ್ನು ಕಾಣುತ್ತ ಶರಣರ ಮಧ್ಯದಲ್ಲಿರುವದನ್ನೇ ಅವರು ಬಯಸಿದರು.

ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ,
ರುದ್ರ ಪದವಿಯನೊಲ್ಲೆ,

ಮತ್ತಾವ ಪದವಿಯನೊಲ್ಲೆನಯ್ಯಾ!
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ
ಪಾದವನರಿದಪ್ಪ ಮಹಾಪದವಿಯನೆ ಕರುಣಿಸಯ್ಯಾ॥

(ಬ. ಷ. ವ. ೩೬೦)

ಇಂಥ ಒಂದು ಹಿರಿಯ ಆದರ್ಶದ ಸಾಧನೆಯಲ್ಲಿ ಬಸವಣ್ಣನವರಿಗೆ ತಮ್ಮ ಅಂದಂದಿನ ಕುಂದುಕೊರತೆಗಳು ಸ್ವಲ್ಪ ಹೆಚ್ಚಾಗಿಯೇ ಕಂಡಿರಬೇಕು. ಕೆಲವರಿಗೆ ಇದು ಅಲ್ಲಲ್ಲಿ ಆತ್ಮದೂಷಣೆಯಾಗಿಯೂ ತೋರಬಹುದು. ಆದರೆ 'ಅವರ ಆತ್ಮದೂಷಣೆ ಸಾಮಾನ್ಯ ಮನುಷ್ಯನ ಆತ್ಮದೂಷಣೆಗಿಂತ ಭಿನ್ನ. ಬಸವಣ್ಣನ ಹಾಗೂ ಬೇರೆ ಶರಣರ ವಚನಗಳನ್ನು ವಿಮರ್ಶಿಸುವಾಗ ಈ ವ್ಯಕ್ತಿತ್ವನಿಷ್ಠವಾದ ನಿರ್ವಚನವನ್ನು ಮಾಡಬೇಕು. ಅವುಗಳಲ್ಲಿ ಆಧ್ಯಾತ್ಮಿಕ ಭಾವಗೀತೆಯ ಸತ್ವವಿದೆಯೆಂಬುದನ್ನು ಕಾಣಬೇಕು.[೩] ಎಂಬ ಅಭಿಪ್ರಾಯವನ್ನು ಇಲ್ಲಿ ಗಮನಿಸಬೇಕು. ಬಸವಣ್ಣನವರು 'ಹೀಗೆ ವಿಶ್ವಪಾತ್ರರಾಗಿ ಏರ್ಪಟ್ಟಿರುವದು ಅವರು ಮಾನವಜನ್ಮಕ್ಕೆ ಸಾಮಾನ್ಯವಾದ ಸ್ಥಾಯಿಭಾವ, ರಸವಿಶೇಷಗಳಿಗೆ ಆಶ್ರಯರಾಗಿರುವದರಿಂದಲೇ: ಅವುಗಳ ಪರಿಣಾಮದಿಂದ ಮಾನಸಿಕ ವ್ಯಾಪಾರವನ್ನು ಪ್ರಕಾಶಪಡಿಸಿರುವದರಿಂದಲೇ'[೪] ಎಂಬುದನ್ನು ಜೊತೆಯಲ್ಲಿಯೇ ನೆನೆಯಬೇಕು.

ಬಸವಣ್ಣನವರು ತತ್ಕಾಲೀನ ಜನಜೀವನದ ಸಮಸ್ಯೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅಂದಿನ ಸಮಾಜದ ಲೋಪದೋಷಗಳನ್ನು ಅವರು ನಿರ್ದಾಕ್ಷಿಣ್ಯವಾಗಿ ತೋರಿಸಿಕೊಟ್ಟಿದ್ದಾರೆ. ಸಮಾಜದ ಕಟುಟೀಕೆಯಲ್ಲೂ ಅಂಥ ವ್ಯವಸ್ಥೆಯ ಬಗ್ಗೆ ಸಾತ್ವಿಕ ಸಂತಾಪ ಒಡೆದು ಕಾಣುತ್ತದಲ್ಲದೆ ದ್ವೇಷಭಾವನೆಯಿಲ್ಲ. ಕೆಲವು ಆಚರಣೆಗಳು ಒಳ್ಳೆಯ ಉದ್ದೇಶದಿಂದಲೇ ಪ್ರಾರಂಭವಾಗಿದ್ದರೂ ಬರಬರುತ್ತ ಅವು ಬರಿ ಸಂಪ್ರದಾಯವಾಗಿ, ಜಡವಾಗಿ, ಸಮಾಜಕ್ಕೆ ಅಹಿತಕಾರಿಯಾಗಿ ಪರಿಣಮಿಸುತ್ತವೆ. ವಿಚಾರಶೀಲರೂ ಆಜನ್ಮಕ್ರಾಂತಿಕಾರಿಗಳೂ ಆದ ಬಸವಣ್ಣನವರು ಧರ್ಮದ ಸ್ವರೂಪವನ್ನು ವಿಶಾಲವಾದ ಅರ್ಥದಲ್ಲಿ ನೋಡಿ ಗೊಡ್ಡು ಆಚಾರಗಳಿಂದ, ಮೂಢನಂಬಿಕೆಗಳಿಂದ ಅದನ್ನು ಬಿಡಿಸಿ ಮನುಷ್ಯನ ಹೃದಯ-ಬುದ್ಧಿಗಳ ಸಮುಚಿತವಾದ ಬೆಳವಣಿಗೆಗೆ ಅದು ನೆರವಾಗುವಂತೆ ಮಾಡಿದರು. ಮನುಷ್ಯ ಮನುಷ್ಯರಲ್ಲಿಯ ಭಿನ್ನಭೇದಗಳನ್ನು, ವರ್ಣಗಳ ಜಾತಿಗಳ ತಾರತಮ್ಯಗಳನ್ನು ಹಾಗೂ ಸಾಮಾಜಿಕ ಅನ್ಯಾಯಗಳನ್ನು ಕಂಡು ಅವರ ಮನಸ್ಸು ಕುದಿಯಿತು. ಕೆಳಗೆ ತಳ್ಳಲ್ಪಟ್ಟ ಜನವನ್ನು ಮೇಲೆತ್ತಿ ಎಲ್ಲರಿಗೂ ಧಾರ್ಮಿಕ ಸಮಾನತೆಯನ್ನು ಕೈಗೂಡಿಸಿಕೊಟ್ಟರು. ಜನರ ಮೂಢನಂಬಿಕೆಗಳನ್ನೇ ಅವಲಂಬಿಸಿದ್ದ ಹಲವಾರು ಕ್ಷುದ್ರದೈವಗಳ ಆರಾಧನೆಯನ್ನು ಅವರು ತಪ್ಪಿಸಿ ಏಕದೇವೋಪಾಸನೆಯನ್ನು ಬಿಂಬಿಸಿದರು.

ಅರಗು ತಿಂದು ಕರಗುವ ದೈವ,
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ
ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ ?
ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೈವ ॥

(ಬ. ಷ. ವ. ೫೫೮)

ಎಂದು ಮನಸ್ಸಿಗೆ ನಾಟುವಂತೆ ವಿಡಂಬನೆ ಮಾಡಿದರು. 'ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವವು ?' ಎಂದು ಚುಚ್ಚಿ ಕೇಳಿದರು. ಇಂಥ 'ನೂರು ಮಡಕೆಗೆ ನಮ್ಮ ಕೂಡಲಸಂಗಮದೇವ ಶರಣೆಂಬುದೊಂದುದಡಿಸಾಲದೆ ?' ಎಂದು ಸಮರ್ಥವಾಗಿ ಪ್ರತಿಪಾದಿಸಿದರು. ಹಾಗೆಯೇ ಸಾಮಾನ್ಯ ಜನತೆಗೆ ಜ್ಯೋತಿಷ್ಯ ಮೊದಲಾದ್ದರಲ್ಲಿಯ ಅತಿಯಾದ ನಂಬಿಕೆ ಅವರನ್ನು ಪರಾವಲಂಬನೆಗೂ, ಆಲಸ್ಯಕ್ಕೂ ಈಡು ಮಾಡಿದ್ದಿತು. ಅದಕ್ಕಾಗಿ

ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ,
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ ॥

ಎಂದು ಅವರಲ್ಲಿ ಕಾರ್ಯಪ್ರವೃತ್ತಿಯನ್ನು, ಉತ್ಸಾಹವನ್ನು ತುಂಬಿದರು.

ಬಸವಣ್ಣನವರು ರೂಪಿಸಿಕೊಂಡ ಸಾಮಾಜಿಕ ವ್ಯವಸ್ಥೆಯಲ್ಲಿ ಮತ ವೃತ್ತಿ ಲಿಂಗಭೇದಗಳೆಲ್ಲ ಅಳಿದು ಶಿವಭಕ್ತಿ ಸಾಧನೆಯೊಂದೇ ತಳಹದಿಯಾಯಿತು. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನೆಲ್ಲ ಒಂದೇ' ಎಂಬ ಅವರ ಉದಾರವಾದ ಮನೋಧರ್ಮ, ಕುಲ, ಜಾತಿ, ರೂಢಮೂಲವಾದ ಪರಂಪರೆಗಳಿಗೆ ಮಹತ್ವಕೊಡದೆ ಗುಣ, ಯೋಗ್ಯತೆ, ಶೀಲಗಳಿಗೆ ಪ್ರಾಶಸ್ತ್ಯವಿತ್ತಿತು. ಮಾನವರಲ್ಲಿಯೇ ಒಂದು ವರ್ಗವನ್ನು ಹೊಲೆಯರೆಂದು ಮುಟ್ಟಿಸಿಕೊಳ್ಳದೆ ಊರ ಹೊರಗಿಟ್ಟು ನಡೆಸಿಕೊಳ್ಳು ತ್ತಿದ್ದ ರೀತಿ ಅವರ ಮನಸ್ಸನ್ನು ಆಳವಾಗಿ ಕಲಕಿತು. ಹೊಲೆಯೆನ್ನುವದು ಒಂದು ಜಾತಿಯಲ್ಲ. ಎಲ್ಲ ವರ್ಗದಲ್ಲಿಯೂ. ಎಲ್ಲ ಸಮಾಜದಲ್ಲಿಯೂ ಅಂಥವರು ಇದ್ದೇ ಇದ್ದಾರೆ.

ಕೊಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ !
ಕುಲವೇನೋ, ಆವಂದಿರ ಕುಲವೇನೋ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು ॥

(ಬ. ಷ. ವ. ೫೯೨)

ಸಕಲ ಜೀವಿಗಳಿಗೂ ಒಳಿತನ್ನು ಬಯಸಿದ ನಿಜವಾದ ಸಮಾಜವಾದ ಇದು. ತಾವು ಉತ್ತಮಕುಲದಲ್ಲಿ ಹುಟ್ಟಿದವರೆಂಬ ಮಾತೇ ಬಸವಣ್ಣನವರಿಗೆ ಕಷ್ಟತನದ ಹೊರೆಯಾಗಿತ್ತು. ಸದ್ಗುಣ ಸದಾಚಾರಗಳು ಯಾವುದೇ ಜಾತಿಗೆ ಮೀಸಲಾದವುಗಳಲ್ಲ, ಇಲ್ಲವೇ ಹುಟ್ಟಿನಿಂದ ಬಂದವುಗಳೂ ಅಲ್ಲ. ಈ ಅಸ್ಪೃಶ್ಯತಾ ಭಾವನೆಯನ್ನು ಬಸವಣ್ಣನವರು ಸಂಪೂರ್ಣವಾಗಿ ತೆಗೆದುಹಾಕಿ. 'ಹೊಲೆಯ ಹೊಲಬಿಗನಾದರೆ ಅವನ ಹೊಲೆಯುಲಿಪ್ಪುದು ಲೇಸು ಕಂಡಯ್ಯಾ' ಎಂದು, ಹೀನಕುಲದಲ್ಲಿ ಜನಿಸಿದರೂ ಶಿವಭಕ್ತರಾದ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ಅವರನ್ನು ಹಿರಿಯರಂತೆ ಭಾವಿಸಿ ನಿತ್ಯಜೀವನದಲ್ಲಿ ಅದನ್ನು ಆಚರಣೆಗೆ ತಂದರು.

ಬಸವಣ್ಣನವರು ಏರ್ಪಡಿಸಿದ ಸಮಾಜದಲ್ಲಿ ಸ್ವಾತಂತ್ರ್ಯ, ಸರ್ವಸಮಾನತೆ, ಪರಸ್ಪರ ಬಂಧುಭಾವಗಳು ಅದರ ಮೂಲಾಧಾರಗಳಾಗಿವೆ. 'ಅಂಗದ ಮೇಲೆ ಲಿಂಗವ ಧರಿಸಿದವರೆಲ್ಲ ಕೂಡಲಸಂಗ' ನೆಂದೇ ಅವರ ದೃಢವಾದ ಭಾವನೆ. ಭಕ್ತರೆಲ್ಲ ಒಂದೇ ಜಾತಿ, ಪರಸ್ಪರ ಸಮಾನರು. ಅವರ ವೃತ್ತಿ ಯಾವುದಾದರೂ ಆಗಿರಲಿ, ಲಿಂಗಧಾರಿಗಳಾಗುವ ಮೊದಲು ಯಾವ ಜಾತಿಯವರೇ ಆಗಿದ್ದಿರಲಿ ಅವುಗಳನ್ನು ಗಮನಿಸದೆ ಸಹಭೋಜನ, ವೈವಾಹಿಕ ಸಂಬಂಧಗಳು ಬೆಳೆದುಬರುವಂತೆ ಪ್ರೋತ್ಸಾಹಿಸಿದರು.

ಉಂಬಲ್ಲಿ ಉಡುವಲ್ಲಿ ಕ್ರೀಯುಳಿಯಿಂತೆಂಬರು
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು
ಎಂತಯ್ಯಾ, ಅವರ ಭಕ್ತರೆಂಬೆ ?
ಎಂತಯ್ಯಾ, ಅವರ ಯುಕ್ತರೆಂಬೆ ? ॥

(ಬ. ಷ. ವ. ೬೨೯)

ಎಂಬ ಮಾರ್ಮಿಕವಾದ ಪ್ರಶ್ನೆಯಿಂದ ಅಂಥವರ ಮನಸ್ಸಿನ ಅಳುಕನ್ನು ನಿವಾರಿಸಿದರು.

ಬಹುಕಾಲದಿಂದ ಸ್ತ್ರೀಯನ್ನು ಅವಜ್ಞೆಯಿಂದ ಕಾಣುತ್ತ ಬಂದುದನ್ನು ಬಸವಣ್ಣನವರು ಸಹಿಸಲಿಲ್ಲ. 'ನಡುವೆ ಸುಳಿಯುವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ' ಎಂದ ದೇವರದಾಸಿಮಯ್ಯನ ಮಾತನ್ನು ಎಲ್ಲ ವಚನಕಾರರೂ ಅನುಸರಿಸಿದರು. ಸ್ತ್ರೀಯನ್ನು ಹೀಗಳೆದು ಸಂಸಾರವನ್ನು ಕಡೆಗಣಿಸುವದು ಅವರ ಮಾರ್ಗವಾಗಿರಲಿಲ್ಲ. ಸ್ತ್ರೀಯರಿಗೆ ಪುರುಷರಂತೆಯೇ ಸಮಾನವಾದ ಹಕ್ಕುಗಳನ್ನೂ ಗೌರವವನ್ನೂ ನೀಡಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸ್ತ್ರೀ ಪುರುಷರೊಡನೆ ಸಮಾನಳೆಂಬುದನ್ನು ಬಸವಣ್ಣನವರು ಎತ್ತಿ ಹಿಡಿದರು. 'ಪರವಧುವನ್ನು ಮಹಾದೇವಿ' ಎಂದು ಕಂಡರು. ಸ್ತ್ರೀಯರಿಗೂ ಲಿಂಗದೀಕ್ಷೆ ಮತ್ತು ಷಟ್ಸ್ಥಲ ಸಾಧನ

ಮಾರ್ಗವನ್ನು ತೆರೆದು ಸಮಾನಾವಕಾಶವನ್ನು ನೀಡಿದರು. ಇದರಿಂದ ನೂರಾರು ಶರಣಶರಣೆಯರು ನಿಸ್ಸಂಕೋಚವಾಗಿ ಅನುಭವ ಮಂಟಪದ ಆಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸುವಂತಾಯಿತು. ಭಕ್ತಿಯ ಸಾಧನೆಯಲ್ಲಿ ಸತಿಪತಿಗಳೊಂದಾಗಿದ್ದರೆ, ಅವರ ಬಾಳು ಸಫಲಗೊಳ್ಳುವದು. 'ಗಂಡ ಶಿವಲಿಂಗ ದೇವರ ಭಕ್ತ; ಹೆಂಡತಿ ಮಾರಿ ಮಸಣಿಯ ಭಕ್ತೆ' ಹೀಗೆ 'ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತೆ.'

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದರೇನೋ ಶಿವಶಿವಾ; ಹೋದರೇನೋ ॥

'ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ' ಅಲ್ಲಿ ಸಾಮರಸ್ಯ ನೆಲೆಗೊಳ್ಳಲಾರದು.

ಸುಭದ್ರವಾದ ಸಮಾಜ ರಚನೆಗೆ ಅದರ ಆರ್ಥಿಕ ವ್ಯವಸ್ಥೆ ಸರಿಯಾಗಿರುವಂತೆ ನೋಡಿಕೊಳ್ಳುವದು ಅವಶ್ಯ. ಹಾಗಾಗಬೇಕಾದರೆ ಪ್ರತಿಯೊಬ್ಬನೂ ಉದ್ಯೋಗ ನಿರತನಾಗಿ ಅದರಿಂದಲೇ ಅವನು ಉಪಜೀವನ ನಡೆಸಬೇಕು. ಆದರೆ ಈ ಉದ್ಯೋಗ ಗಳೇ ಅವರ ಜಾತಿಯ ಮೇಲು ಕೀಳನ್ನು ಸೂಚಿಸುವ ಅನಿಷ್ಟ ಪದ್ಧತಿಯನ್ನು ಬಸವಣ್ಣನವರು ಹೋಗಲಾಡಿಸಿ ಪ್ರತಿಯೊಬ್ಬನೂ ತನ್ನ ಉದ್ಯೋಗದಲ್ಲಿ ಶ್ರದ್ಧೆ ಯನ್ನೂ ಗೌರವವನ್ನೂ ತಾಳುವಂತೆ ಮಾಡಿದರು. ಗುಣಕರ್ಮಗಳ ನೆಲೆಯಿಂದ ವರ್ಣಗಳು ನಿರ್ಣೀತವಾಗಿದ್ದರೆ ವೃತ್ತಿಗಳಿಂದ ಉಂಟಾದ ಜಾತಿಗಳನ್ನು ಆಗ ಸ್ವಾರ್ಥಿ ಗಳು ತಮ್ಮ ಹಿತಕ್ಕೆ ನಿರ್ಮಿಸಿಕೊಂಡಿರಬೇಕು.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ ॥

ಎನ್ನುವಲ್ಲಿ ಯಾವ ಕೆಲಸವೂ ತನ್ನಷ್ಟಕ್ಕೆ ಮೇಲುಕೀಳಲ್ಲ ಎನ್ನುವದನ್ನು ಸ್ಪಷ್ಟಪಡಿಸಿ ದ್ದಾರೆ. ದುಡಿಯದವನಿಗೆ ಜೀವಿಸುವ ಹಕ್ಕು ಇಲ್ಲ. ಸಮಾಜದಲ್ಲಿ ಕೆಲವರು ಮೈಮುರಿ ದುಡಿಯುವದು ಉಳಿದವರು ಅದರ ಫಲವನ್ನುಂಡು ಜೀವಿಸುವದು ಸಲ್ಲದು. ಬಡವ ಬಲ್ಲಿದರೆನ್ನದೆ ಎಲ್ಲರೂ ದುಡಿದಾಗ ಸಮಾಜ ಸ್ವಯಂಪೂರ್ಣವಾಗುತ್ತದೆ. ಕಾಯಕದಲ್ಲಿ ನಿಷ್ಠೆಯುಳ್ಳವನಿಗೆ, ಅದೇ ಅವನ ಆಧ್ಯಾತ್ಮಿಕ ಸಾಧನೆಯಾಗಿ ಮುಕ್ತಿ ದೊರೆಯುತ್ತದೆಂದು 'ಕಾಯಕಕ್ಕೆ' ಹೊಸ ಅರ್ಥವನ್ನೂ, ಜೀವಕಳೆಯನ್ನು ತುಂಬಿದ ಬಸವಣ್ಣನವರು ಲೌಕಿಕ-ಆಧ್ಯಾತ್ಮಗಳನ್ನೂ ಒಂದುಗೂಡಿಸಿದರು. ತನ್ನ ಕೆಲಸವನ್ನು ನಿಷ್ಠೆಯಿಂದ, ಆತ್ಮಸಂತೋಷದಿಂದ, ಭಗವಂತನ ಆರಾಧನೆಯೆಂದೇ ಮಾಡಿದಾಗ ಅದರ ಹಿರಿಮೆ ಗೊತ್ತಾಗುತ್ತದೆ. ಕಾಯಕದಿಂದ ಬಂದ ಹಣವನ್ನು ಗುರು ಲಿಂಗ

ಜಂಗಮ ಈ ತ್ರಿವಿಧ ದಾಸೋಹಕ್ಕೆ ವ್ಯಯಿಸಬೇಕು. ಅಂದರೆ ಗಳಿಸಿದ ಹಣವನ್ನೆಲ್ಲ ತನಗಾಗಿಯೇ ಇಟ್ಟುಕೊಳ್ಳದೆ ದಾಸೋಹಭಾವದಿಂದ ಸಮಾಜಕ್ಕೆ ಅರ್ಪಿಸಬೇಕು. ಇದರಿಂದ ವ್ಯಕ್ತಿ ಸಮಾಜದ ಸಮನ್ವಯವೂ ಸಾಧಿತವಾಯಿತು. 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ' ಎಂದು ಕಾಯಕಕ್ಕೆ ಹೊರತಾದ ಅಲ್ಲಸಲ್ಲದ ರೀತಿಯಿಂದ ಬರುವ ಧನವನ್ನು ಬಸವಣ್ಣನವರು ತಿರಸ್ಕರಿಸಿದ್ದಾರೆ. 'ತನು ಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯ ಎನಗೆ' ಎಂದು ಅಂಥವರನ್ನು ಕೊಂಡಾಡುವಲ್ಲಿ ಸತ್ಯ ಶುದ್ಧ ಕಾಯಕದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಇದಕ್ಕೆ ಹೊಂದಿಕೊಂಡಂತೆಯೇ ವ್ಯಕ್ತಿಸ್ವಾತಂತ್ರ್ಯದ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ನಿಂತ ಬಸವಣ್ಣನವರು ಸ್ಥಾವರಲಿಂಗ ಪೂಜೆಯನ್ನು ನಿಷೇಧಿಸಿ ಧರ್ಮದ ಹೆಸರಿನಲ್ಲಿ, ದೇವಾಲಯಗಳ ರೂಪದಲ್ಲಿ ನಡೆಯುವ ದುರುಪಯೋಗವನ್ನು, ಶೋಷಣೆಯನ್ನು ತಡೆಹಿಡಿದರು. ದೇವಾಲಯ ಪ್ರವೇಶ ಸಾಮಾನ್ಯವಾಗಿ ಎಲ್ಲರಿಗೂ ಇಲ್ಲದಾಗಿ ಆ ಸಂಸ್ಥೆ ಸಂಪ್ರದಾಯಕ್ಕೆ ಕಟ್ಟುಬಿದ್ದಾಗ, ಹೆಚ್ಚಾಗಿ ಹಣವಂತರ ಅಧಿಕಾರಕ್ಕೆ ಅದು ಒಳಗಾಗಿರುವಾಗ, ಬಸವಣ್ಣನವರ ಇಷ್ಟಲಿಂಗೋಪಾಸನೆಗೆ ಇನ್ನೂ ಹೆಚ್ಚಿನ ಅರ್ಥ ಒದಗಿತು :

ಉಳ್ಳವರು ಶಿವಾಲಯವ ಮಾಡುವರು :
ನಾನೇನ ಮಾಡುವೆ ? ಬಡವನಯ್ಯಾ,
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಸಿರ ಹೊನ್ನ ಕಳಸವಯ್ಯಾ
ಕೂಡಲಸಂಗಮದೇವ, ಕೇಳಯ್ಯ;
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ॥

(ಬ. ಷ. ವ. ೮೨೦)

ಗುರು ನೀಡಿದ ಇಷ್ಟಲಿಂಗದಲ್ಲಿ ಕೈಯಲ್ಲೇ ಪರಮಾತ್ಮನನ್ನು ತಂದಿರಿಸಿ ಎಂಥ ಬಡವರಿಗೂ ಅವರವರ ಆತ್ಮಶಕ್ತಿಯ ವಿಕಾಸವನ್ನು ಸಾಧಿಸುವ ಸಹಜ ಸೌಲಭ್ಯವನ್ನು ಒದಗಿಸಿದರು. ಭಕ್ತನಿಗೂ ದೇವರಿಗೂ ನಡುವೆ ಬೇರೆಯವರ ಅವಶ್ಯಕತೆಯಿಲ್ಲ: ತಾನು ಸ್ವತಃ ಮಾಡಬೇಕಾದುದನ್ನು ಅವರಿಂದ ಮಾಡಿಸಬಹುದೆ ?

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?

ಎಂದು ಅವರು ತೀಕ್ಷ್ಣವಾಗಿಯೇ ಕೇಳುತ್ತಾರೆ. 'ಇದು ಪರಂಪರೆಯಿಂದ ಬಂದ ಪುರೋಹಿತ ಸಂಪ್ರದಾಯದ ವ್ಯವಸ್ಥೆಗೆ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ

ಶೋಷಣೆಗೆ, ದೇವಾಲಯಗಳ ದುರುಪಯೋಗಕ್ಕೆ ಕುಠಾರಪ್ರಾಯವಾಯಿತು: ಸಾಮಾಜಿಕ ಶಕ್ತಿಯಾಯಿತು. ವ್ಯಕ್ತಿಯ ಸರ್ವಾಂಗೀಣ ವಿಕಾಸಕ್ಕೆ ಕಾರಣವಾದ ಸ್ವಯಂಪೂರ್ಣ ಸಮಾಜವನ್ನು ನಿರ್ಮಿಸುವ ಶರಣರ ಸಾಧನೆಗೆ ಈ ವ್ಯಕ್ತಿಸ್ವಾತಂತ್ರ್ಯ ಭದ್ರವಾದ ಬುನಾದಿ ಹಾಕಿತು.'[೫]

ದೀನರನ್ನು, ಜಾತಿಹೀನರನ್ನು, ಬಡವರನ್ನು ಕಂಡು ಮರುಕಗೊಳ್ಳುತ್ತಿದ್ದ ಬಸವಣ್ಣನವರು ಶ್ರೀಮಂತರ ಸ್ವಭಾವವನ್ನು ಚೆನ್ನಾಗಿ ಅರಿತವರಾಗಿದ್ದರು. 'ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ' ಅಹಂಕಾರದಿಂದ ಅವರು ಕಣ್ಣನ್ನೇ ತೆರೆಯುವದಿಲ್ಲ, ಆದರೆ 'ಬಡತನವೆಂಬ ಮಂತ್ರವಾದಿ ಹೋಗಲು ಒಡನೆ ನುಡಿವರು!' ಆದರೆ ಭಕ್ತರ ಸಂಸ್ಕೃತಿಯೇ ಬೇರೆ, 'ಮನೆ ನೋಡಾ ಬಡವರು, ಮನ ನೋಡಾ ಘನ:' ಅಂಥವರನ್ನು ಹೇಗೆ ನಡೆಸಿಕೊಳ್ಳಬೇಕೆಂಬ ಸಾಮಾಜಿಕ ರೀತಿನೀತಿಯನ್ನೂ ಅಹಂಕಾರಿಗಳು ಅರಿಯರು.

'ಏನಿ ಬಂದಿರಿ ಹದುಳವಿದ್ದರೆ ?' ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಶಿರಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದೊಡೆ,
ಕೆಡಹಿ ಮೂಗ ಕೊಯ್ಯದೆ ಮಾಬ್ಬನೆ ಕೂಡಲಸಂಗಮದೇವನು ?

(ಬ. ಷ. ವ ೨೪೧)

ಎಂದು ಕಟುವಾಗಿ ಕೇಳಿ, ಅಂಥವರ ಕಣ್ಣು ತೆರೆಯಿಸಿ ಮಾನವೀಯತೆಯ ಗುಣವನ್ನು ಬೆಳೆಸಿ, ಸಾಮಾಜಿಕ ಮೌಲ್ಯಗಳನ್ನು ಸಮುಚಿತವಾಗಿ ಬಿಂಬಿಸಿದ್ದಾರೆ.

ಆನೆಯನೇರಿಕೊಂಡು ಹೋದಿರೆ ನೀವು,
ಕುದುರೆಯನೇರಿಕೊಂಡು ಹೋದಿರೆ ನೀವು,
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ;
ಸತ್ಯದ ನಿಲವನರಿಯದೆ ಹೋದಿರಲ್ಲಾ !

(ಬ. ಷ. ವ ೬೩೯)

ಹೀಗೆ ಐಶ್ವರ್ಯ ಮದದಿಂದ ಸದ್ಗುಣವನ್ನು ಬೆಳೆಸದೆ, ವಿಧಿಗೆ ಗುರಿಯಾಗಿ ಹೋದವರನ್ನು ಕಂಡು ಮರುಗಿದ್ದಾರೆ. ಬಸವಣ್ಣನವರು ಬಡವರ ಬಗೆಗೆ ತೋರಿದ ಅನುಕಂಪವನ್ನು, ಸಿರಿವಂತರ ಮನಸ್ಸನ್ನು ತಿದ್ದಿದ ಬಗೆಯನ್ನು ಇಂಥ ವಚನಗಳಲ್ಲಿ ಕಾಣಬಹುದು.

ಧರ್ಮದಲ್ಲಿ ಒಂದು ಮುಖ್ಯಭಾಗವಾದ ಸಮಾಜ ಹಿತಚಿಂತನೆಗೆ ನೀತಿಯೇ ನೆಲಗಟ್ಟು. ಆದುದರಿಂದ ಸದಾಚಾರ, ಸದ್ವರ್ತನೆಗಳಿಗೆ ಬಸವಣ್ಣನವರು ಒತ್ತು ಕೊಟ್ಟು ಹೇಳಿದ್ದಾರೆ. ನಿತ್ಯಜೀವನದಲ್ಲಿ ಅವರು ಪಾಲಿಸಬೇಕಾದ ನಿಯಮಗಳನ್ನು ಸರಳವಾಗಿ ಸುಲಭವಾಗಿ ಯಾವ ಅಧಿಕಾರದ ಸೋಂಕೂ ಇಲ್ಲದೆ ಅರ್ಥವಾಗುವಂತೆ, ಆಡಿದ ಮಾತು ವ್ಯರ್ಥವಾಗದಂತೆ ಆತ್ಮೀಯವಾಗಿ ಕಳಕಳಿಯಿಂದ ಒಡನುಡಿದಿದ್ದಾರೆ.

ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ:
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ ॥

(ಬ. ಷ. ವ. ೨೩೫)

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಭೋ !
ಸತ್ಯವ ನುಡಿವುದೇ ದೇವಲೋಕ: ಮಿಥ್ಯವ ನುಡಿವುದೇ ಮರ್ತ್ಯಲೋಕ!
ಆಚಾರವೇ ಸ್ವರ್ಗ, ಅನಾಚಾರವೇ ನರಕ–
ಕೂಡಲಸಂಗಮದೇವಾ, ನೀವೆ ಪ್ರಮಾಣು ॥

(ಬ. ಷ. ವ. ೨೩೯)

ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ:
ದಯವೇ ಧರ್ಮದ ಮೂಲವಯ್ಯಾ;
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ ॥

(ಬ. ಷ. ವ. ೨೪೭)

ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ;
ಮೃದು ವಚನಗಳೇ ಸಕಲ ಜಪಂಗಳಯ್ಯಾ,
ಮೃದು ವಚನಗಳೇ ಸಕಲ ತಪಂಗಳಯ್ಯಾ,
ಸದುವಿನಯವೇ ಸದಾಶಿವನೊಲುಮೆಯಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ ॥

(ಬ. ಷ. ವ. ೨೪೪)

ತೊಳೆಯಿರಿ ಮೀವಣ್ಣಗಳಿರಾ, ತೊಳೆಯಿರಿ ಮೀವ ಸ್ವಾಮಿಗಳಿರಾ,
ತೊಳೆಯಿರಿಂಭೋ, ತೊಳೆಯಿರಿಂಭೋ,

ಪರನಾರಿಯ ಸಂಗವ ತೊಱೆಯಿಂಭೋ !
ಪರಧನದಾಮಿಷವ ತೊಱೆಯಿಂಭೋ !
ಇವ ತೊಱೆಯದೆ ಹೋಗಿ ತೊಱೆಯ ಮಿಂದರೆ,
ಬಱಿದೊಱೆಹೋಹುದು, ಕೂಡಲಸಂಗಮದೇವಾ ॥

(ಬ. ಷ. ವ. ೬೪೪)

ಇಂಥ ನೂರಾರು ವಚನಗಳಲ್ಲಿ ಮಿಡಿಯುವ ಆಪ್ತಸ್ವರ, ಪ್ರೇಮಪೂರಿತ ಹಿತವಚನ, ಆತ್ಮೀಯ ಸಂಬೋಧನೆ ಕೇಳುಗರನ್ನು ತಾನಾಗಿಯೇ ಸೆಳೆದುಕೊಳ್ಳುತ್ತವೆ. ‘ಆ ಮಾತುಗಳಲ್ಲಿ ಅಷ್ಟೊಂದು ಮಾಧುರ್ಯವಿದೆ, ಅನುಭವವಿದೆ, ಪ್ರೇಮವಿದೆ, ಹಿತವಿದೆ, ಅವುಗಳಿಂದ ಆಕರ್ಷಿತರಾಗಿ ಅವರ ಪಾದದೆಸೆಯಲ್ಲಿ ಕುಳಿತು ಕೇಳೋಣವೆನ್ನಿಸುತ್ತದೆ.’[೬]

ಈ ಬಗೆಯಾಗಿ ನೀತಿಗಳನ್ನು ಆಚರಿಸಿ ಈ ಲೋಕದಲ್ಲಿ ಸರಿಯಾಗಿ ಬಾಳಿದವರಿಗೆ ಪರದಲ್ಲಿ ಸದ್ಗತಿಯುಂಟು. ಇಹಪರಗಳ ಸುಂದರ ಸಮನ್ವಯವೇ ಬಸವಣ್ಣನವರ ಘನವಾದ ಆಶಯ. ಅದಕ್ಕಾಗಿ ಇಲ್ಲಿಯ ಜೀವನವನ್ನು ಶುದ್ಧವಾಗಿ ಸುರುಚಿರವಾಗಿ ಬಾಳಬೇಕು. ಈ ಮಾನವಜನ್ಮವನ್ನು ನಮ್ಮ ಧ್ಯೇಯವನ್ನು ಈಡೇರಿಸಲು ಸಾರ್ಥಕವಾದ ಸಾಧನವನ್ನಾಗಿ ಮಾಡಿಕೊಳ್ಳಬೇಕು.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ !
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂಡಲಸಂಗಮದೇವಾ ॥

(ಬ. ಷ. ವ. ೧೫೫)

ಮರ್ತ್ಯಲೋಕವು ಭಗವಂತನ ಟಂಕಸಾಲೆ. ಇಲ್ಲಿ ಈ ಜೀವನಾಣ್ಯ ಸರಿಯಾದ ಮುದ್ರೆಯನ್ನು ಹೊಂದಿ ಝಣಝಣಿಸಿದರೆ ಎಲ್ಲಿ ಹೋದರೂ, ಪರಲೋಕದಲ್ಲೂ ಚಲಾವಣೆ ಪಡೆಯುತ್ತದೆ. ಇಹದ ಬಾಳಿನ ಶುಚಿಗೆ, ಶುದ್ಧಿಗೆ ಸಾರ್ಥಕತೆಗೆ ಬಸವಣ್ಣನವರು ನೀಡಿದ ಪಾವಿತ್ರ್ಯ ಮಹತ್ವಪೂರ್ಣವಾದುದು. ‘ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ’ ಎಂಬ ಇನ್ನೊಂದು ವಚನದಲ್ಲಿ ಕಬ್ಬು ತುದಿಗಿಂತ ಬುಡದ ಕಡೆ ಹೆಚ್ಚು ರಸಭರಿತವಾಗಿರುವದನ್ನು ಸೂಚಿಸಿರುವದು ಅರ್ಥಪೂರ್ಣವಾಗಿದೆ.

ಹೀಗೆ ಬಸವಣ್ಣನವರು ನವಸಮಾಜದ ದರ್ಶನವನ್ನೂ ಪಡೆದವರಾಗಿದ್ದು ವ್ಯಕ್ತಿಯ ಮತ್ತು ಸಮಾಜದ ಜೀವನದಲ್ಲಿ ಸಮನ್ವಯವನ್ನೂ ಪರಿಪೂರ್ಣತೆಯನ್ನೂ ಸಾಧಿಸುವ ಮಾರ್ಗವನ್ನು ರೂಪಿಸಿದರು. ಆದರ್ಶವನ್ನು ವ್ಯಾವಹಾರಿಕ ಸತ್ಯವಾಗಿ ಮಾರ್ಪಡಿಸಿ ತೋರಿಸಿದುದೇ ಅವರ ಹಿರಿಮೆ. ಸ್ವತಂತ್ರವಾದ ವಿಚಾರ

ದೃಷ್ಟಿಯಿಂದ ಜೀವನದ ಗುರಿಯನ್ನು ಕಂಡುಕೊಂಡು. ಅದನ್ನು ಈಡೇರಿಸುವ ದಾರಿಯಲ್ಲಿ ಬರುವ ಕಷ್ಟನಿಷ್ಠುರಗಳನ್ನು ಧೈರ್ಯದಿಂದ ಎದುರಿಸಿದ ವೀರವ್ರತಾಚಾರಿ ಅವರು :

ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ
ಲೋಕವಿರೋಧಿ, ಶರಣನಾರಿಗಂಜುವನಲ್ಲ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥
(ಬ. ಷ. ವ. ೭೫೩)

ಧರ್ಮದಲ್ಲಿ, ದಯೆಯಲ್ಲಿ, ಸಮಾಜ ಸುಧಾರಣೆಯ ಕಾರ್ಯದಲ್ಲಿ ಅವರು 'ವೀರ'ದ ನಿಜವಾದ ಬೆಲೆಯನ್ನು ಕಂಡುಕೊಂಡರು. 'ಬಸವಯುಗಕ್ಕೆ ಹಿಂದಿನದಾದ ಪಂಪಯುಗದಲ್ಲಿ ಮಾನವನಿಗೆ ಬೆಲೆ ಬರಲು 'ವೀರ' ಪ್ರಶಸ್ತಿಯು ಅವಶ್ಯಕತೆಯಿತ್ತು. ಆದರೆ ಬಸವಯುಗದಲ್ಲಿ ಧರ್ಮ ದಯಾರ್ದ್ರ ಧರ್ಮಪ್ರಶಸ್ತಿಯು ಅವಧಾರಣೆಯನ್ನು ಪಡೆಯಿತು. ಅಂದ ಮಾತ್ರಕ್ಕೆ ಬಸವಯುಗದ 'ಧರ್ಮ'ವು ಅಂಜುಬುರುಕುತನದಿಂದ ಕೂಡಿದ ಹೇಡಿಗಳ ಹೀನತನವಾಗಿರಲಿಲ್ಲ. 'ವೀರ'ವೆಂಬುದು ದ್ವೇಷ-ಅಸೂಯೆಗಳಿಗಾಗಿಯಲ್ಲದೆ ಪ್ರೇಮಕ್ಕಾಗಿ ಮತ್ತು ಸಮಾಜದ ಸರ್ವಾಂಗೀಣ ಸುಂದರ ಸಂವರ್ಧನೆಗಾಗಿ ಬಳಕೆಯಾಗಬೇಕೆಂಬುದರ ಅರಿವೂ ಬಸವಣ್ಣನವರಿಗಿದ್ದಿತು. ಆದುದರಿಂದಲೇ ಅವರ ವೀರವು ಸಾತ್ವಿಕವಾದುದು ಮತ್ತು ದೃಢವಾದುದು.'[೭]

ತಮ್ಮ ಕಾಲದ ನೂರಾರು ಶಿವಶರಣರಿಂದ ಬಸವಣ್ಣನವರು ಸ್ಫೂರ್ತಿಯನ್ನು, ಉತ್ಸಾಹವನ್ನೂ, ಮಾರ್ಗದರ್ಶನವನ್ನೂ ಪಡೆದದ್ದು ನಿಜ. ಹನ್ನೆರಡನೆಯ ಶತಮಾನದಲ್ಲಿ ನಡೆದ ಸಾಮೂಹಿಕ ಕ್ರಾಂತಿಯ ಯಶಸ್ಸು ಅವರೆಲ್ಲರಿಗೂ ಸಲ್ಲಬೇಕಾದದ್ದು. ಆದರೆ ಅವರೆಲ್ಲರಿಗೂ ಕೇಂದ್ರ ವ್ಯಕ್ತಿಯಾಗಿದ್ದ ಬಸವಣ್ಣನವರ ಕರ್ತವ್ಯ ಶಕ್ತಿ ಪ್ರಜ್ಞೆ ಮತ್ತು ಬಹುಮುಖ ವ್ಯಕ್ತಿತ್ವಗಳ ದೈವಿಕ ಸಾಧನೆ, ಅದಕ್ಕೆ ಮುಖ್ಯವಾದ ಪ್ರೇರಕ ಶಕ್ತಿಯಾಗಿದ್ದಿತು. 'ಅವರ ಸ್ವಭಾವದ ಪರಿಶೀಲನೆಯನ್ನು ಮಾಡಿದರೆ ಅವರಲ್ಲಿ ಒಬ್ಬ ಶ್ರೇಷ್ಠ ನಾಯಕನ ಎಲ್ಲ ಗುಣಗಳೂ ಸಮನ್ವಿತವಾಗಿರುವದು ಕಂಡುಬರುತ್ತದೆ. ನಿಸ್ವಾರ್ಥ, ವಿನಯ, ತ್ಯಾಗ, ಸದುದ್ದೇಶ, ಮೃದುತ್ವ ಮತ್ತು ಕಠೋರತೆ, ಭಾವಾವೇಶ ಮತ್ತು ವಾಕ್ಶಕ್ತಿ, ನಿರ್ಭೀತಿ, ಬಿಚ್ಚುಮನಸ್ಸು, ಸೇವಾಮನೋಧರ್ಮ ಇವೆಲ್ಲವೂ ಶ್ರೇಷ್ಠ ನಾಯಕನ ಗುಣಗಳು.'[೮] 'ಬಸವಣ್ಣನೆಂಬ ಜ್ಯೋತಿಯಲ್ಲಿ ತೊಳಗಿ ಬೆಳಗಿದ್ದು, ಶಿವನ ಪ್ರತಾಪ' ಎಂದು ಶರಣರೆಲ್ಲರಿಗೂ ಗುರುವೆನಿಸಿದ್ದ ಅಲ್ಲಮಪ್ರಭುಗಳೇ ಬಸವಣ್ಣನವರ ಮಹಿಮಾತಿಶಯವನ್ನು ಕೊಂಡಾಡಿರುವದರಲ್ಲಿ ಅತಿಶಯೋಕ್ತಿಯಿಲ್ಲ.

ವಿಶ್ವಶಾಂತಿಯ ಮೂಲತತ್ವಗಳನ್ನೂ, ವಿಶ್ವಧರ್ಮದ ಮುಖ್ಯ ಲಕ್ಷಣಗಳನ್ನೂ ಬಸವಣ್ಣನವರ ಬಾಳಿನಲ್ಲಿ, ಬೋಧೆಯಲ್ಲಿ, ಬರೆಹದಲ್ಲಿ, ಸ್ಪಷ್ಟವಾಗಿ ಗುರುತಿಸ

ಬಹುದು. 'ಸಕಲ ಜೀವಾತ್ಮರಿಗೆ ಲೇಸ ಬಯಸಿ' ಮನುಷ್ಯಕುಲ ಒಂದಾಗಿ ಬಾಳ ಬೇಕೆಂಬುದೇ ಅವರ ಹಂಬಲ. 'ಕಾಗೆ ಕೋಳಿಗಳಿಗಿಂತ ಕರಕಷ್ಟ' ವಾಗದೆ 'ತನ್ನರಿವೇ ತನಗೆ ಗುರು'ವಾಗಿ ಸಫಲವಾದ ತುಂಬುಜೀವನ ಆತನದಾಗಬೇಕೆಂಬುದೇ ಅವರ ರಚನೆಗಳಲ್ಲಿ ದೊರೆಯುವ ಧ್ವನಿಯಾಗಿದೆ. ವೈಯಕ್ತಿಕವಾದ ಧ್ಯಾನ, ಪೂಜೆ, ಆರಾಧನೆಗಳು ಎಷ್ಟು ಮುಖ್ಯವೋ, ಜನತಾ ಸಂಪರ್ಕವೂ ಜನಹಿತ ಸಾಧನೆಯೂ ಅವರಿಗೆ ಅಷ್ಟೇ ಮುಖ್ಯವಾಗಿದ್ದಿತು. 'ಜಲವ ತಪ್ಪಿದ ಮತ್ಸ್ಯ ಬದುಕುವದೇ ಸೋಜಿಗ: ಗಣ ತಿಂತಿಣಿಯೊಳಗಿರಿಸೆನ್ನನು ಲಿಂಗವೇ', 'ಇವನಾರವ, ಇವನಾರವ, ಇವನಾರವ ? ಎಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ನೆಂದೆನಿಸಯ್ಯಾ' ಎಂಬುದೇ ಹೃದಯದ ಕೋರಿಕೆಯಾಗಿದ್ದಿತು. ಶರಣರನ್ನೆಲ್ಲ ಕೂಡಲ ಸಂಗನೆಂದೇ ತಿಳಿಯುತ್ತ ಅವರ ಸೇವೆಯಲ್ಲಿಯೇ ಮುಕ್ತಿಸುಖವನ್ನು ಅನುಭವಿಸುತ್ತ, ಮತ್ತಾವ ಪದವಿಯನ್ನೂ ಬಯಸದೆ. 'ಸದ್ಭಕ್ತರ ಪಾದವನರಿದಿಪ್ಪುದೇ ಮಹಾ ಪದವಿ'ಯೆಂದು ಭಾವಿಸಿ ಭೂಲೋಕವನ್ನೇ ಕೈಲಾಸಕ್ಕಿಂತ ಹೆಚ್ಚೆಂದು ಭಾವಿಸಿದರು.

> ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ ? ಹೇಳಯ್ಯಾ :
> ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ !
> ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
> ಜಂಗಮ ಲಿಂಗ, ನೀನೆ. ಅಯ್ಯಾ ! ಕೂಡಲಸಂಗಮದೇವಾ ॥
>
> (ಬ. ಷ. ವ. ೮೯೩)

ಬಸವಣ್ಣನವರ ತಾತ್ವಿಕ, ಆಧ್ಯಾತ್ಮಿಕ ವಿಚಾರಗಳು ಅವರ ಎಲ್ಲ ವಚನ ಗಳಲ್ಲಿಯೂ ಸಾಮಾನ್ಯವಾಗಿ ಆಯಾ ವಸ್ತುವಿನಲ್ಲಿಯೇ ಮೂಡಿ ಬಂದಿವೆ. ಹೀಗಿರು ವಾಗ ವೀರಶೈವ ಮತಸಿದ್ಧಾಂತಕ್ಕೆ ಬಸವಣ್ಣನವರ ವಚನಗಳ ಕೊಡುಗೆಯನ್ನು ಕುರಿತು ಪ್ರತ್ಯೇಕವಾಗಿ ನಿರೂಪಿಸುವ ಅಗತ್ಯವಿಲ್ಲವೆಂದು ತೋರುತ್ತದೆ. ಸಾಮಾನ್ಯ ಜನತೆಯ ಉದ್ಧಾರ ಅವರ ಮುಖ್ಯ ಗುರಿಯಾಗಿದ್ದಿತಲ್ಲದೆ ಸಿದ್ಧಾಂತ ಪ್ರತಿಪಾದನೆ ಅಲ್ಲವೆಂಬುದನ್ನು ಇಲ್ಲಿ ನೆನಪಿಡಬೇಕು. ಆದರೂ ಬೇರೆ ಬೇರೆ ಸಂದರ್ಭಗಳಲ್ಲಿ ಮೇಲೆ ಉದಾಹರಿಸಿದ ಅವರ ವಚನಗಳಲ್ಲಿ ವೀರಶೈವಧರ್ಮದ ಸ್ವರೂಪವನ್ನು ಕಂಡುಕೊಳ್ಳಬಹುದಾಗಿದೆ. ಆ ಧರ್ಮದ ಆಧಾರಭೂತವಾದ ತತ್ವಗಳನ್ನು ಶರಣರು ಬೌದ್ಧಿಕವಾಗಿ ಚರ್ಚಿಸಿ, ಅದರ ಸಿದ್ಧಾಂತವನ್ನು ರೂಪಿಸಿ ತೃಪ್ತರಾಗದೆ ಅದರ ಪ್ರೇರಣೆಯಿಂದ ತಮ್ಮದೇ ಆದ ವಿಚಾರಧಾರೆಯನ್ನು ಸಮಾಜಕ್ಕೆ ಎರೆದು ವಚನ ಗಳಲ್ಲಿ ಅದಕ್ಕೆ ಅಭಿವ್ಯಕ್ತಿ ನೀಡಿದರು. ಷಟ್ಸ್ಥಲ (ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ), ಅಷ್ಟಾವರಣ (ಗುರು, ಲಿಂಗ, ಜಂಗಮ. ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ), ಪಂಚಾಚಾರ (ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ, ಗಣಾಚಾರ)— ಇವು ವೀರಶೈವಧರ್ಮದ ಮುಖ್ಯ

ಅಂಗಗಳು. ಚೆನ್ನಬಸವಣ್ಣ ಹಾಗೂ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಈ ಸಿದ್ಧಾಂತವನ್ನು ನಿರ್ಣಯಿಸಿ ನಿಶ್ಚಿತಗೊಳಿಸಿದವರಲ್ಲಿ ಮುಖ್ಯರು. ಮಗ್ಗೆಯ ಮಾಯಿದೇವರು ಬಸವಣ್ಣನವರನ್ನು 'ವೀರಶೈವ ನಿರ್ಣಯ ಪರಮಾವತಾರ'[೯] ಎಂದು ಕರೆದಿದ್ದರೂ, ಬಸವಣ್ಣನವರು 'ಷಡುಸ್ಥಲದ ಮೂರ್ತಿಯಾಗಿ ಬಂದೆಯಲ್ಲಾ ಚೆನ್ನಬಸವಣ್ಣಾ' ಎಂದು ಚೆನ್ನಬಸವಣ್ಣನಿಗೆ ಆ ಗೌರವವನ್ನು ನೀಡಿರುವದು ಯಥೋಚಿತವಾಗಿದೆ.

ಅನುಭವ ಮಂಟಪದಲ್ಲಿ ಒಂದು ನಿರ್ದಿಷ್ಟ ವಿಚಾರವನ್ನು ಕುರಿತು ಚರ್ಚೆ ನಡೆದಾಗ ಬಹುಶಃ ಆ ವಿಷಯಕ್ಕೆ ಸಂಬಂಧ ಪಟ್ಟಂತೆ ಸ್ಥಲಾನುಸಾರವಾಗಿ ಈ ವಚನಗಳನ್ನು ಹೊಂದಿಸಿರಬಹುದಾದರೂ ಉಳಿದ ಸಂದರ್ಭಗಳಲ್ಲಿಯ ಶರಣರ ವೈಯಕ್ತಿಕ ಅನಿಸಿಕೆಗಳು, ಸಹಜಸ್ಫೂರ್ತವಾದ ಭಾವಾಭಿವ್ಯಕ್ತಿಗಳು ಬಿಡಿಬಿಡಿಯಾಗಿ ಮುಕ್ತಕಗಳಾಗಿಯೇ ಮೂಡಿಬರಬಹುದೆಂದು ತೋರುತ್ತದೆ. 'ಹಲವರು ಬಸವಣ್ಣನವರ ಇಲ್ಲವೆ ಇನ್ನಿತರ ವಚನಕಾರರ ವಚನಗಳು ಬಿಡಿ ಬಿಡಿಯಾಗಿಯೇ ರಚಿತವಾದವು; ಅವುಗಳಿಗೆಲ್ಲ ಪರಸ್ಪರ ಸಂಬಂಧವನ್ನು ಸಂಕಲ್ಪಿಸಿ, ಸ್ಥಳಕಟ್ಟುಗಳನ್ನು ಬಹುಕಾಲದ ತರುವಾಯ ಬೇರೆಯವರು ಮಾಡಿರಬೇಕು ಎಂದು ಊಹಿಸುತ್ತಾರೆ. ಆದರೆ ಈ ಊಹೆಗೆ ಬಲವತ್ತರವಾದ ಆಧಾರಗಳು ಇದ್ದಂತೆ ನಮಗೆ ತೋರುವದಿಲ್ಲ.'[೧೦] ಎಂದಿರುವ ಶಿ. ಶಿ. ಬಸವನಾಳರು ಈ ವಚನಗಳು 'ಷಟ್‍ಸ್ಥಳದ ವಚನಗಳು' ಎಂದೆ ತಾಳೆವೋಲೆಯ ಪತ್ರಿಕೆಗಳಲ್ಲಿ ದೊರೆಯುತ್ತಿರುವದನ್ನೂ, ಕೈಬರೆಹದ ಪ್ರತಿಗಳಲ್ಲೆಲ್ಲ ಈ ವಚನಗಳನ್ನು ಷಟ್‍ಸ್ಥಳಾನುಸಾರವಾಗಿಯೇ ವಿಭಾಗ ಮಾಡಿದುದು ಕಂಡುಬರುತ್ತಿರುವದನ್ನೂ ತಿಳಿಸಿದ್ದಾರೆ.

'ಎತ್ತೆತ್ತ ನೋಡಿದರತ್ತತ್ತ ನೀನೇ ದೇವಾ. ಸಕಲ ವಿಸ್ತಾರದ ರೂಹು ನೀನೇ ದೇವಾ' ಎಂದು ಸೃಷ್ಟಿಕರ್ತನ ಸ್ವರೂಪವನ್ನೂ ವ್ಯಾಪ್ತಿಯನ್ನೂ ಅನುಭಾವಿಯ ನಿಲವಿನಿಂದ ಬಸವಣ್ಣನವರು ಕಂಡು, 'ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡಬೇಡ. ದೇವನೊಬ್ಬನೇ ಕಾಣಿರೋ' ಎಂದು ಸಾರಿದ್ದಾರೆ. ಅಖಂಡ ಬ್ರಹ್ಮಾಂಡದ ದಿವ್ಯಶಕ್ತಿಯು ಸಂಕೇತವಾಗಿ ಇಷ್ಟಲಿಂಗ ರೂಪುಗೊಂಡಿರುವದನ್ನು ಅವರ ಒಂದು ವಚನ ಸುಂದರವಾಗಿ ನಿರೂಪಿಸುತ್ತದೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ;
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮಕುಟ !
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ !!

(ಬ. ಷ. ವ. ೭೪೩)

ಹೀಗೆ ಅದು ಸರ್ವರಲ್ಲಿಯೂ ಅಡಗಿರುವ ಮಹಾಚೈತನ್ಯದ ರೂಪು. ಅದನ್ನು ಬಸವಣ್ಣನವರು ಲೋಕೋದ್ಧಾರದ ಕ್ರಾಂತಿಕಾರಕವಾದ ಕಾರ್ಯಕ್ಷೇತ್ರಕ್ಕೆ ಕಾರಣಶಕ್ತಿಯಾಗಿ ಅಳವಡಿಸಿಕೊಂಡಿರುವದು ವೈಶಿಷ್ಟ್ಯಪೂರ್ಣವಾಗಿದೆ. ಈ ಇಷ್ಟಲಿಂಗೋಪಾಸನೆಯಲ್ಲಿ ಸಗುಣದಿಂದ ನಿರ್ಗುಣಕ್ಕೆ, ಸಾಕಾರವಿಡಿದು ನಿರಾಕಾರಕ್ಕೇರುವ ಸಮನ್ವಯ ಮಾರ್ಗ ಒಡಮೂಡಿದೆ. ಅವರ ಲಿಂಗಭಕ್ತಿಗೆ ಗುರು ಮತ್ತು ಜಂಗಮಶಕ್ತಿ ಅವಲಂಬನೆಯಾದವು. 'ಗುರುವಚನವಿಲ್ಲದೆ ಲಿಂಗವೆನಿಸದು', 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' ಇಂಥ ಮಾತುಗಳಲ್ಲಿ ತ್ರಿವಿಧ ದಾಸೋಹದ ರಹಸ್ಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಅಂಗನೂ ಕೊನೆಯಲ್ಲಿ ಲಿಂಗಸ್ವರೂಪನಾಗಿ ಲಿಂಗದಲ್ಲಿ ಸಮರಸನಾಗಿ ಪರಿಣಮಿಸುವನೆಂಬ ಹಿನ್ನೆಲೆಯಲ್ಲಿ ಮೋಕ್ಷದ ನಿಲವನ್ನು ಬಸವಣ್ಣನವರು ನಿರೂಪಿಸಿದ್ದಾರೆ.

ಬಯಲರೂಪ ಮಾಡಬಲ್ಲಾತನೇ ಶರಣನು;
ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ,
ಬಯಲರೂಪ ಮಾಡಲಱಿಯದಿದ್ದರೆ ಎಂತು ಶರಣನೆಂಬೆ ?
ಆ ರೂಪ ಬಯಲ ಮಾಡಲಱಿಯದಿದ್ದರೆ ಎಂತು
ಲಿಂಗಾನುಭಾವಿಯೆಂಬೆ ?
ಈ ಉಭಯವೊಂದಾದರೆ ನಿಮ್ಮಲ್ಲಿ ತೆಱಹುಂಟೆ,
ಕೂಡಲಸಂಗಮದೇವಾ ?

(ಬ. ಷ. ವ. ೯೨೨)

ಆತ್ಮನು ಅಡಗುವದಕ್ಕೆ ಆ ಪರವಸ್ತುವೇ ಆಶ್ರಯ
ಸಮಸ್ತ ಕತ್ತಲೆಯ ಮಸಕಳೆದಿಪ್ಪ ಇರುವ ನೋಡ !
ಬೆಳಗಿಂಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ,
ಕೂಡಲಸಂಗಯ್ಯ ತಾನೇ ಬಲ್ಲ ॥

(ಬ. ಷ. ವ. ೯೫೭)

ಹೀಗೆ ಉಭಯ ಒಂದಾಗಿ ಬೆರೆಯಬೇಕು ಬೆಳಗು ಬೆಳಗನ್ನು ಕೂಡಿದಂತೆ ಆಗಬೇಕೆಂಬುದೇ ಬಸವಣ್ಣನವರು ಸೂಚಿಸಿದ ಮೋಕ್ಷದ ಮೂಲಸೂತ್ರ. ಇಲ್ಲಿಯೂ ಶಾಸ್ತ್ರೀಯ ಪರಿಭಾವನೆಗಿಂತ ಅಂತರಂಗದ ಅನುಭವಕ್ಕೆ ಅವರು ಪ್ರಾಧಾನ್ಯ ನೀಡಿದ್ದಾರೆ. 'ಏನೆಂಬೆನೇನೆಂಬೆ ಎರಡೊಂದಾದುದ ? ಏನೆಂಬೆನೇನೆಂಬೆನವಿರಳ ಘನವ !' 'ಘನ ಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯಾ' ಎಂಬಿವೇ ಮೊದಲಾದ ನುಡಿಗಳಲ್ಲಿ ಅದರ ಅರ್ಥವ್ಯಾಪ್ತಿಯನ್ನರಿಯಬಹುದು. ಈ ಕಲ್ಪನೆ ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತ ಸಿದ್ಧಾಂತದ ಹಿನ್ನೆಲೆಗೆ ಅನುಗುಣವಾಗಿಯೇ

ಇದೆ. ಆದರೂ ಇದು ಅನುಭಾವಪೂರ್ವಕವಾದುದೆಂಬುದನ್ನು ಗಮನಿಸಬೇಕು. ತನ್ನ ವ್ಯಕ್ತಿತ್ವವನ್ನು ಪರಿಪೂರ್ಣ ಶೂನ್ಯದಲ್ಲಿ ವಿಲೀನಗೊಳಿಸಿ ಅದರಲ್ಲಿ ಸಮರಸ ವಾಗುವದು ಎಂಬ ಅರ್ಥವನ್ನು ಶರಣರ 'ಬಯಲು' ಶಬ್ದ ಧ್ವನಿಸುತ್ತದೆ. ಬೌದ್ಧರ 'ನಿರ್ವಾಣಕ್ಕೂ' ಶರಣರ 'ಬಯಲಿ'ಗೂ ಇರುವ ವ್ಯತ್ಯಾಸವೇ ಇದು. 'ನಿರ್ವಾ ಣವು' ಆಶೆ ದ್ವೇಷ ಮೋಹಗಳನ್ನೆಲ್ಲಾ ನಿರಸನಗೊಳಿಸಿದ ನಂತರ ಉಳಿಯುವ ಅಭಾವ ಸ್ಥಿತಿ: ಆದರೆ ಬಯಲು ಅವನ್ನೆಲ್ಲಾ ನಿರಸನಗೊಳಿಸಿದ ನಂತರ ವಿಕಾಸ ಗೊಂಡ ಆತ್ಮವು ವಿಶ್ವಾತ್ಮನೊಡನೆ ಸಮರಸಗೊಳ್ಳುವ ಪರಿಪೂರ್ಣ ಸ್ಥಿತಿ. ನಿರ್ವಾಣ ದಲ್ಲಿ ವ್ಯಕ್ತಿ ಏನೂ ಇಲ್ಲದವನಾಗುತ್ತಾನೆ. ಆದರೆ ಬಯಲು ಎಲ್ಲವೂ ತಾನೇ ಆಗಿ ಪರಿಣಮಿಸುವ ನಿಲವು'.೧೧

ಆಧ್ಯಾತ್ಮಿಕ ಅನುಭವದ ವಿಕಾಸವೇ ಷಟ್‌ಸ್ಥಲಕ್ಕೆ ತಳಹದಿ. ಶಿವಾಗಮಗಳ ಕಾಲದಿಂದ ಇಂದಿನವರೆಗೂ ಷಟ್‌ಸ್ಥಲದ ಬಗೆಗೆ ಅದರ ಅನುಸಂಧಾನದ ಬಗೆಗೆ ವಿವೇಚನೆ ನಡೆಯುತ್ತ ಬಂದಿರುವದನ್ನು ಕಾಣುತ್ತೇವೆ. ಅನುಭಾವ ಮಾರ್ಗವಾಗಿ ಅದು ಶಿವಾನುಭವದ ರಹಸ್ಯವನ್ನು ಮಾರ್ಮಿಕವಾಗಿ ಭೇದಿಸುತ್ತದೆ: ಬೋಧಿಸು ತ್ತದೆ. ಶಿವಯೋಗದ ನೆಲೆಯನ್ನು, ನಿಲವನ್ನು ತೋರಿಸುತ್ತದೆ. ಸಿದ್ಧಾಂತವಾಗಿ ಜೀವ, ಜಗತ್ತು, ಈಶ್ವರ ಇವುಗಳ ಪರಸ್ಪರ ಸಂಬಂಧವನ್ನು ತನ್ನದೇಯಾದ ಸ್ವತಂತ್ರ ವಿಚಾರಸರಣಿಯಿಂದ ವಿವರಿಸುತ್ತದೆ.'೧೨ ತಾತ್ವಿಕ ಸಿದ್ಧಾಂತ ಮತ್ತು ಆಚರಣೆ ಇವರಲ್ಲಿ ಸಮನ್ವಯಗೊಳ್ಳುತ್ತದೆ. ಭಕ್ತಸ್ಥಲದ ಮೊದಲನೆಯ ಹಂತ ಪಿಂಡಸ್ಥಲ. ಅಲ್ಲಿ ಶಿವತತ್ವ ಸುಪ್ತವಾಗಿ ಅಡಗಿರುವದನ್ನು ಬಸವಣ್ಣನವರು ಸುಂದರವಾದ ಸಾದೃಶ್ಯದೊಡನೆ ಸೂಚಿಸಿದ್ದಾರೆ.

ಉದರದೊಳಗೆ ಬಯ್ಚಿಟ್ಟ ಬಯ್ಕೆಯು ಕಿಚ್ಚಿನಂತಿದ್ದಿತ್ತು:
ಸಸಿಯೊಳಗಣ ರುಚಿಯಂತಿದ್ದಿತ್ತು;
ನನೆಯೊಳಗಣ ಪರಿಮಳದಂತಿದ್ದಿತ್ತು;
ಕೂಡಲಸಂಗಮದೇವಾ ಕನ್ನೆಯ ಸ್ನೇಹದಂತಿದ್ದಿತ್ತು ॥

(ಬ. ಷ. ವ. ೧)

ತಾನು ಪಡೆದುದೆಲ್ಲವನ್ನೂ ಲಿಂಗಕ್ಕೆ ಅರ್ಪಿಸಿಕೈಕೊಳ್ಳುವುದು ಪ್ರಸಾದತತ್ವ. ತನ್ನನ್ನೇ ಸಂಪೂರ್ಣವಾಗಿ ಲಿಂಗಕ್ಕೆ ಅರ್ಪಿಸಿಕೊಳ್ಳುವದು ಇನ್ನೂ ಮುಂದಿನ ಮೆಟ್ಟಿಲು. 'ಪ್ರಾಣವನು ಬೀಸರವೋಗದೆ ಪೀಸಲಾಗಿ ಅರ್ಪಿಸಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.' 'ಶರಣ'ನಿಗೆ ತನಗಾಗಿ ಮಾಡಿಕೊಳ್ಳಬೇಕಾದುದೇನೂ ಉಳಿದಿಲ್ಲ. ಸಮಾಜದ ಸೇವಕನಾಗಿ ಆತ ದುಡಿಯಬೇಕು: 'ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು' ಆತನ ಕ್ರಿಯೆಯೆಲ್ಲವೂ ಸಮಾ

ಜದ ಒಳಿತಿಗಾಗಿ ಎಂಬುದು ಆಧ್ಯಾತ್ಮಿಕ ದರ್ಶನಕ್ಕೆ ಬಸವಣ್ಣನವರು ನೀಡಿದ ವಿಶೇಷ ಕೊಡುಗೆಯಾಗಿದೆ.

ವ್ಯಕ್ತಿತ್ವದ ಪೂರ್ಣವಿಕಾಸ ಶಿವಯೋಗದ ಗುರಿ, ಆಚಾರ-ವಿಚಾರಗಳೆರಡಕ್ಕೂ ಶಿವಯೋಗದಲ್ಲಿ ಪ್ರಮುಖಸ್ಥಾನವೆಂಬುದನ್ನೂ ಆ ಮಾರ್ಗದ ಬೆಳವಣಿಗೆಯನ್ನು ಮುಂದಿನ ವಚನ ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತದೆ;

ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು.
ಆಚಾರವೆಂಬ ಕಾಯಾಯಿತ್ತು.
ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ ॥

(ಬ. ಷ. ವ. ೫೨೭)

ಇಷ್ಟಲಿಂಗವನ್ನು ಕೇಂದ್ರವಾಗಿಟ್ಟುಕೊಂಡು ಏಕಾಗ್ರತೆಯ ಧ್ಯಾನಧಾರಣಾದಿಗಳ ಅವರ ಅನುಭವ ಹೀಗಿದೆ :

ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟಲುವ ಮುಚ್ಚಿದು
ತಂಟಿ ಮಿಡುಕದೆ ಅಟ್ಟೆಯಾಡಿತ್ತಲ್ಲಾ !
ಬಿಟ್ಟ ಕಣ್ಣು ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ
ಕಟ್ಟು ಗುಡಿಯ ಕೂಡಲಸಂಗಮದೇವ ಹಿಡಿವಡೆದ ॥

(ಬ. ಷ. ವ. ೮೧೪)

ಅಷ್ಟಾವರಣಗಳು ಕೇವಲ ಬಹಿರಂಗ ಸಾಧನಗಳಾಗಿರದೆ ಒಳಗಿನ ಅರಿವು ಹೊರರೂಪವನ್ನು ತಾಳಿರುವ ಸಂಕೇತಗಳು. ವೀರಶೈವಧರ್ಮದಲ್ಲಿ ಗುರುವೇ ಎಲ್ಲ ಆಧ್ಯಾತ್ಮಿಕ ಸಾಧನೆಗೂ ಮೂಲ :

ಮಡಕೆಯ ಮಾಡುವಡೆ ಮಣ್ಣೆ ಮೊದಲು;
ತೊಡುಗೆಯ ಮಾಡುವಡೆ ಹೊನ್ನೆ ಮೊದಲು;
ಶಿವಪಥವನರಿವಡೆ ಗುರುಪಥವೆ ಮೊದಲು.

(ಬ. ಷ. ವ. ೭೦)

ಎನ್ನುತ್ತಾರೆ ಬಸವಣ್ಣನವರು. ಲಿಂಗದೀಕ್ಷೆಯನ್ನು ಕೊಟ್ಟು ಸರಿಯಾದ ಸಾಧನೆಯಲ್ಲಿ ತೊಡಗಿಸುವವನು ಗುರು. ಜಂಗಮದ ಕಲ್ಪನೆಯೂ ವಿಶಿಷ್ಟವಾದುದೆ. ಅವನ ನಿಲವು ಗುರುವಿಗಿಂತ ಒಂದು ರೀತಿಯಲ್ಲಿ ಮುಂದಿನ ಹಂತದ್ದು; ವ್ಯಾಪಕಾರ್ಥವುಳ್ಳದು. ಸಾಮಾಜಿಕ ಹಾಗೂ ಅಧ್ಯಾತ್ಮಿಕ ದೃಷ್ಟಿಯಿಂದ ನೋಡಿದಾಗಲೂ ಜಂಗಮ ತನ್ನ ಸಾಧನೆಯಿಂದ ಜಗದ್ಭರಿತನಾಗಿ ಬೆಳೆದ ಒಂದು ಮಹಾಚೇತನ. ಸ್ಥಾಪನೆಗೊಂಡ ಲಿಂಗಸ್ಥಾವರವೆನಿಸಿದರೆ, ನಡೆದಾಡುವ ಜನವೆಲ್ಲ ಜಂಗಮವೆಂದೇ ಬಸವಣ್ಣನವರ ಭಾವನೆ. ಜಂಗಮತ್ವ ಒಂದು ಜಾತಿಯಲ್ಲ, ಅದು ಯಾವದೇ ವ್ಯಕ್ತಿ ತನ್ನ ಸಾಧನೆಯಿಂದ ಪಡೆಯಬಹುದಾದ ಉಚ್ಚವಾದ ಆಧ್ಯಾತ್ಮಿಕ ನಿಲವು. ಅದು ನಿಸ್ಸೀಮವಾದ ವ್ಯಕ್ತಿತ್ವ :

ಸ್ಥಾವರ ಭಕ್ತಂಗೆ ಸೀಮೆಯಲ್ಲದೆ
ಘನಲಿಂಗ ಜಂಗಮಕ್ಕೆ ಸೀಮೆಯಲ್ಲಿಯದು ?
ಅಂಬುಧಿಗೆ ಸೀಮೆಯಲ್ಲದೆ
ಹರಿವ ನದಿಗೆ ಸೀಮೆಯಲ್ಲಿಯದು ? .
ಭಕ್ತಂಗೆ ಸೀಮೆಯಲ್ಲದೆ
ಜಂಗಮಕ್ಕೆ ಸೀಮೆಯುಂಟೆ, ಕೂಡಲಸಂಗಮದೇವಾ ॥

(ಬ. ಷ. ವ. ೪೧೮)

ಸಾಧನೆಯಲ್ಲಿ ಏಕಾಗ್ರತೆಯನ್ನು ತಂದುಕೊಳ್ಳಲು ಮಂತ್ರ ಜಪ ಕಾರಣವಾಗಬಹುದು. 'ಕರಿಯಂಜುವದು ಅಂಕುಶಕ್ಕೆ' ಹಾಗೆಯೇ 'ಪಂಚಮಹಾಪಾತಕ ಅಂಜುವದು ಕೂಡಲಸಂಗನ ನಾಮಕ್ಕೆ'. ಕ್ಷುದ್ರಶಕ್ತಿಗಳನ್ನು ಮೆಟ್ಟಿಹಾಕಿ ಅಂತರಂಗದಲ್ಲಡಗಿರುವ ಶಿವಶಕ್ತಿಗಳನ್ನು ಪ್ರಚೋದಿಸುವ ಮಹಾಶಕ್ತಿಯೇ ಈ ಮಂತ್ರ. 'ಓಂನಮಶ್ಶಿವಾಯ' ಎಂಬ ಮಂತ್ರ ಸರ್ವಜನವಶ್ಯ ಎಂದಿದ್ದರೂ 'ದೇವರ ನೆನೆವುದೇ ಮಂತ್ರ' ಎಂದು ಬಸವಣ್ಣನವರು ತಮ್ಮ ಮನಸ್ಸಿನ ವೈಶಾಲ್ಯವನ್ನೂ ಉದಾರವಾದ ಮಾನವತೆಯನ್ನೂ ಮೆರೆದಿದ್ದಾರೆ.

ಪಂಚಾಚಾರದಲ್ಲಿ ವೀರಶೈವಧರ್ಮದ ನೈತಿಕ ನಿರೂಪಣೆಯು ವ್ಯಾಪಕ ಸ್ವರೂಪವಿದೆ. ನೈತಿಕ ನಿಷ್ಠೆ, ಧಾರ್ಮಿಕ ಸಾಧನೆಗಳೆರಡನ್ನೂ ಒಳಗೊಳ್ಳುವ ಪೂರ್ಣ ದೃಷ್ಟಿಯನ್ನು ಇದರಲ್ಲಿ ಕಾಣಬಹುದು. ಈ ನೀತಿನಿಯಮಗಳನ್ನು ಯಾಂತ್ರಿಕವಾಗಿ ಪಾಲಿಸಿದರೆ ಆಗದು. ಅಂಗಗುಣಗಳೆಲ್ಲ ಲಿಂಗಗುಣಗಳಾಗಿ ಪರಿವರ್ತಿತವಾಗುವದೇ ನಿಜವಾದ ಆಚಾರ. ಜ್ಞಾನ ಮತ್ತು ಕ್ರಿಯೆಗಳೆರಡನ್ನೂ ಅದು ಒಳಗೊಂಡಿದೆ. ಒಳ್ಳೆಯ ನಡತೆಯಿಲ್ಲದ ಹೀನ ಮನದವನಿಗೆ ದೀಕ್ಷೆ ಕೊಟ್ಟರೆ 'ಕುಂಬಳಕಾಯಿಗೆ ಕಬ್ಬುನದ ಕಟ್ಟು' ಕೊಟ್ಟಂತೆ, 'ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಂತೆ'.

ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯ:
ಅವರಾರಾಧನೆ ದಂಡ !
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ,
ಕೂಡಲಸಂಗಮದೇವ, ಭೂಭಾರಕರ !

(ಬ. ಷ. ವ. ೬೫೨)

ಅಹಿಂಸೆ, ಸತ್ಯನಿಷ್ಠೆಗಳು ಸದಾಚಾರದ ವ್ರತಗಳೇ. 'ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪನಂತೆ !' ಭೃತ್ಯಾಚಾರದ ಸಾಕಾರಮೂರ್ತಿಗಳಾದ ಬಸವಣ್ಣನವರು 'ಕಾಗೆ ಪಿಶ್ಶಿಸುವ ಹೊನ್ನ ಕಳಶವಹುದರಿಂದ, ಒಡೆಯರು ಜೈಗೈಸುವ ಚಮ್ಮಾವುಗೆಯ ಮಾಡಯ್ಯ' ಎಂದು ಬೇಡಿಕೊಂಡಿದ್ದಾರೆ. ತಾವು ನಂಬಿ ನಡೆದ ತತ್ತ್ವಕ್ಕಾಗಿ ಮತ್ತು ಅದರ ಸಾಧನೆಗಾಗಿ ತನ್ನ ಸರ್ವಸ್ವವನ್ನೂ ಅರ್ಪಿಸಿಕೊಳ್ಳುವ ಅವರ ವೀರನಿಷ್ಠೆ 'ಅರ್ಥವನರ್ಥವ ಮಾಡಿ ಕೋಳಾಹಳಂಗೈಯುತ್ತಿರಲಿ' ಎಂಬಂಥ ವಚನದಲ್ಲಿ ಭೇರೀನಾದದಂತೆ ಮೊಳಗಿದೆ. ಧರ್ಮದ ಸಾರ್ಥಕತೆಯಿರುವದು ಆಚಾರದಲ್ಲಿ ಎಂಬುದು ಪಂಚಾಚಾರಗಳಲ್ಲಿ ಸ್ಪಷ್ಟವಾಗಿದೆ. ತಾವು ಕೈಕೊಂಡ ಸಾಮಾಜಿಕ ಹಿತದ ಕ್ರಾಂತಿಸಾಧನೆಯಲ್ಲಿ 'ಮರಣವೇ ಮಹಾನವಮಿ' ಎಂಬುದನ್ನು ಬಸವಣ್ಣನವರು ಕಾರ್ಯತಃ ಸಾಧಿಸಿ ತೋರಿದರು. ಧಾರ್ಮಿಕ ಆಚರಣೆಗಳು ವೈಯಕ್ತಿಕ ಹಿತವನ್ನು ಸಾಧಿಸುವದರ ಜೊತೆಗೆ ಸಾಮಾಜಿಕ ಹಿತವನ್ನೂ ಸಾಧಿಸಬೇಕೆಂಬುದು ಈ ಆಚಾರಗಳ ಉದ್ದಕ್ಕೂ ಕಂಡುಬರುವ ಮಾತಾಗಿದೆ.

ಈ ಬಗೆಯ ಧಾರ್ಮಿಕ ಪ್ರಕ್ರಿಯೆಗಳನ್ನು ಬೋಧಿಸುವಾಗಲೂ ಅವರು ಯಾವುದೇ ಸಂಪ್ರದಾಯದ ಕಟ್ಟುಕಟ್ಟಳೆಗೆ ಒಳಗಾಗಲಿಲ್ಲ; ಸಮಾಜದ ಹಿತಕ್ಕೆ ವಿರೋಧವಾದುದನ್ನು ಹೇಳಲಿಲ್ಲ. ಪ್ರತಿಯೊಂದು ಆಚರಣೆಯನ್ನು ಅವರವರ ಅನುಭವದ ಒರೆಗಲ್ಲಿಗೆ ಒಡ್ಡಿ ನೋಡುವಂತೆ ಮಾಡಿದ್ದಲ್ಲದೆ ಎಲ್ಲಿಯೂ ಮಿತಿಯಾದ ಸಂಕುಚಿತತೆಗೆ ಒಳಗಾಗಿ ವರ್ತಿಸಲಿಲ್ಲ. ಬಸವಣ್ಣನವರ ಈ ನಡೆ ಲೋಕದ ಮುಂದಿರುವ ಶಾಶ್ವತವಾದ ಆದರ್ಶವಾಗಿದೆ.

ಅಡಿ ಟಿಪ್ಪಣಿಗಳು :

೧ ಶಿ. ಶಿ. ಬಸವನಾಳ(ಸಂ.) : ಬಸವಣ್ಣನವರ ಷಟ್‌ಸ್ಥಳದ ವಚನಗಳು. ಪು. ೧೬೭.

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ :
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು, ನೋಡಾ !
ಒಬ್ಬ ಜಂಗಮದಭಿಮಾನದಿಂದ
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು,
ಸಂದಿತ್ತು, ಕೂಡಲಸಂಗಮದೇವಾ, ನಿಮ್ಮ ಕವಳಿಗೆಗೆ !

೨ ಎಂ. ಆರ್. ಶ್ರೀನಿವಾಸಮೂರ್ತಿ : ವಚನಧರ್ಮಸಾರ, ಪು. ೩೧
೩ ರಂ. ಶ್ರೀ ಮುಗಳಿ : ಕನ್ನಡ ಸಾಹಿತ್ಯಚರಿತ್ರೆ, ೧೯೬೪,ಪು. ೧೬೮
೪ ಎಂ. ಆರ್. ಶ್ರೀನಿವಾಸಮೂರ್ತಿ : ಭಕ್ತಿಭಾಂಡಾರಿ ಬಸವಣ್ಣನವರು, ಪು. ೩೨
೫ ಎಚ್. ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವಧರ್ಮ, ಪು. ೩೧೦
೬ ಎಂ. ಆರ್. ಶ್ರೀನಿವಾಸಮೂರ್ತಿ : ಭಕ್ತಿಭಾಂಡಾರಿ ಬಸವಣ್ಣನವರು, ಪು. ೯೫
೭ ಎಲ್. ಬಸವರಾಜು : ಬಸವಣ್ಣನವರ ವಚನಗಳು, ಪು. ೪೨
೮ ಎಂ. ಚಿದಾನಂದಮೂರ್ತಿ : ಬಸವಣ್ಣನವರು, ಪು. ೯೩
೯ ಮೊಗ್ಗೆಯ ಮಾಯಿದೇವ : ಶಿವಾಧವಾಶತಕ, ೨
೧೦ ಶಿ. ಶಿ. ಬಸವನಾಳ(ಸಂ.) : ಬಸವಣ್ಣನವರ ಷಟ್‌ಸ್ಥಳದ ವಚನಗಳು, ೧೯೫೧, ಪು. xiv
೧೧ ಎಚ್. ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವಧರ್ಮ, ಪು. ೧೨೬
೧೨ ಆರ್. ಸಿ. ಹಿರೇಮಠ : ಷಟ್‌ಸ್ಥಲ ಪ್ರಭೆ, ನಿವೇದನೆ

ತನ್ನ ತಾನರಿದಡೆ ನುಡಿಯೆಲ್ಲ ತತ್ವಸೋಡಾ
ತನ್ನ ತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ

ಅಲ್ಲಮನ ವಚನಚಂದ್ರಿಕೆ

ಏನಾದಡೆಯೂ ಸಾಧಿಸಬಹುದು
ಮತ್ತೇನನಾದಡೆಯೂ ಸಾಧಿಸಬಹುದಯ್ಯ
ತಾನಾರೆಂಬುದ ಸಾಧಿಸಬಾರದು

ಬಸವಣ್ಣನವರ ವಚನ

ಶಿವಶರಣರ ಸಾಮಾಜಿಕ ಮೌಲ್ಯಗಳು



● ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನ ಶಿವಶರಣ ಸಮುದಾಯ ಮಾಡಿದ ಕ್ರಾಂತಿ, 'ಮಾನವೋದ್ಧರಣದ ಮಹಾಪ್ರಯೋಗ'. ದೇವನೇ ಮೂಲ, ದೇವನೇ ಚೂಲವಾದ ಭಾರತೀಯ ಧರ್ಮದೃಷ್ಟಿಯನ್ನು ಇಹಲೋಕದ ಮಾನವನತ್ತ ಹೊರಳಿಸಿ, ಅದಕ್ಕೇ ಒತ್ತುಕೊಟ್ಟುದು, ಬಸವಾದಿ ಪ್ರಮಥರ ಒಂದು ವಿಶೇಷ ಪ್ರಯತ್ನ. ಸ್ವರ್ಗಸಾಧನೆ, ಕೈವಲ್ಯಪ್ರಾಪ್ತಿ, ಸನ್ಯಾಸ ಸ್ವೀಕಾರ, ಸಂಸಾರ ಜೀವನ ತ್ಯಾಜ್ಯ ಮುಂತಾದ ನೈಜಜೀವನ ವಿಮುಖವಾದ ಜೀವನದೃಷ್ಟಿ-ವೇದಾಂತವನ್ನು ಮಾನವವಿಕಾಸ, ಸಾಮಾಜಿಕಕ್ಷೇಮ, ಸಂಸಾರವಮಾನ್ಯತೆ, ಲೌಕಿಕವನ್ನು ನಿರಸನ ಗೊಳಿಸದ ಆಧ್ಯಾತ್ಮಿಕ ದೃಷ್ಟಿ ಇವು ಭಾರತೀಯ ವೇದಾಂತ ದೃಷ್ಟಿಗೆ ಶಿವಶರಣರು ನೀಡಿದ ವಿಶೇಷ ಕಾಣಿಕೆ. ವ್ಯಕ್ತಿ-ಸಂಸಾರ-ಸಮಾಜಗಳಿಗಿರುವ ಅವಿನಾಭಾವ ಸಂಬಂಧ ವನ್ನು ಗುರುತಿಸಿ, ಒಂದರಿಂದೊಂದು ಸಂಪುಷ್ಟವಾಗಿ ಬೆಳೆದು, ಜನಪರವಾದ, ಲೌಕಿಕ ಮೂಲವಾದ, ಎಂದಿಗೂ ವ್ಯವಹಾರಯೋಗ್ಯವಾದ, ಮಾನವೀಯವಾದ, ಬದುಕಿನ ಕಲ್ಪನೆ, ಜೀವನದ ಆದರ್ಶ, ಶಿವಶರಣರು ಪರಿಷ್ಕರಿಸಿದ ವೀರಶೈವಧರ್ಮದ ವೈಶಿಷ್ಟ್ಯ. ಇದು ಒಬ್ಬ ವ್ಯಕ್ತಿ, ತನ್ನ ದಿವ್ಯ ಅನುಭವದಲ್ಲಿ ಪಡೆದ ಸತ್ಯದರ್ಶನವನ್ನು ಜನತೆಗೆ ನೀಡುವುದಲ್ಲ, ಹಲವಾರು ಶರಣರು, ತಮ್ಮ ಸ್ವಾನುಭವ ದರ್ಶನವನ್ನು ಸಮೀಕರಿಸಿ ನೀಡಿದ, ಸಾಮೂಹಿಕ ಜೀವನದೃಷ್ಟಿ; ಸಾಮುದಾಯಿಕ ವೇದಾಂತ, ಈ ವೀರಶೈವ ಶರಣರದ್ದು. ಅವರು ರೂಪಿಸಿದ ಶರಣಧರ್ಮವನ್ನು 'ಅತ್ಯಂತ ಪರಿಷ್ಕೃತ, ಇತ್ತೀಚಿನ ಹಿಂದೂ ಧರ್ಮ' ಎಂದು ಕರೆದುದು ಉಚಿತವಾದುದು.

ಸರ್ವಸಮಾನತೆ :

ಶರಣಧರ್ಮದ ತಳಹದಿ ಸಮಾನತೆ-ಸರ್ವಸಮಾನತೆ. 'ಹಾರುವ ಮೊದಲು ಶ್ವಪಚ ಕಡೆಯಾಗಿ ಶಿವಭಕ್ತರಾದವರನ್ನೆಲ್ಲ ಒಂದೇ ಎಂಬೆ' ಎಂಬುದು ಬಸವನ ಭಾಷೆ.

ವಿಶ್ವಾತ್ಮನ ದಿವ್ಯಜ್ಯೋತಿಯ ಕಿರಣಗಳಾದ ಎಲ್ಲ ಮಾನವರೂ, ಎಲ್ಲ ಪ್ರಾಣಿಗಳೂ ಸಮಾನರು; ಮೇಲು–ಕೀಳು, ಹೆಣ್ಣು–ಗಂಡು, ಹಿರಿದು–ಕಿರಿದೆಂಬುದೆಲ್ಲ ಕೃತಕ, ಸ್ವಾರ್ಥಪ್ರೇರಕ. ಕಾರಣ ಇದು ಸಮಾಜಕ್ಷೇಮಕ್ಕೆ ಘಾತಕ. ಅದು ಶರಣಧರ್ಮಕ್ಕೆ ಮಾನ್ಯವಲ್ಲ. ಕಾರಣ, ಶಿವಶರಣರ ಜೀವನದೃಷ್ಟಿಗೆ ಈ 'ಸಮಾನತೆ' ಮೊದಲ ಹೆಜ್ಜೆ.

'ದೇವರು' ಎಂಬ ಪರಿಕಲ್ಪನೆ, ಶತಮಾನಗಳಿಂದ ಮಾನವ ಸಮಾಜ ಕಲ್ಪಿಸಿಕೊಂಡು ಬಂದ ಮಹತ್ವದ ವಿಚಾರ. ಅನೇಕ ದೇವರುಗಳನ್ನು ನಿರ್ಮಿಸಿ, ಅವರಿಗೂ ಮಾನವರ ಆಸೆ-ಆಮಿಷ, ನಿದ್ದೆ–ನೀರಡಿಕೆಗಳನ್ನು ಆರೋಪಿಸಿ, 'ಸುಪ್ರಭಾತ'ಗಳಿಂದ ಎಬ್ಬಿಸಿ, ಎಣ್ಣೆಮಜ್ಜನ ಮಾಡಿಸಿ, ಜೆಣ್ಣೆ ಪೂಜೆ ಮಾಡಿಸಿ, ದೇವದಾಸಿಯರಿಂದ ಛತ್ರ, ಚಾಮರ, ನರ್ತನಸೇವೆ ಮಾಡಿಸಿ, ಬೇಕಾದ ಭಕ್ಷ್ಯಭೋಜ್ಯಗಳನ್ನು ಅರ್ಪಿಸಿ, ತಾನೇ ತಿಂದು ತನ್ನ ದೇವರ ಭಕ್ತಿಯನ್ನು ಮೆರೆಯುವ ಪರಂಪರೆಯ ಸಾಧನೆ ಇಂದಿಗಂತೂ ಮಾನ್ಯವಲ್ಲ. ದೇವದೇವರಲ್ಲಿ ಹಿರಿದು–ಕಿರಿದನ್ನು ಗಣಿಸಿದ, ಮಾನವನ ಕುಬುದ್ಧಿ ಚಾತುರ್ಯವನ್ನು ಖಂಡಿಸಿ 'ಒಬ್ಬನೇ ದೇವರು, ಭಕ್ತಿಯೊಂದೇ ಅದಕ್ಕೆ ದಾರಿ, ಸೇವೆಯೊಂದೇ ಅದರ ಮಂತ್ರ' ಎಂಬುದನ್ನು ಬೋಧಿಸಿದ ಶರಣರು, ಪ್ರಭು ಪೂಜಾರಿಗಳ ಹಿಡಿತದಿಂದ ದೇವರುಗಳನ್ನು ಪಾರುಮಾಡಿ, ಜನತೆಯ ಮೌಢ್ಯವನ್ನು ಹೊಡೆದೋಡಿಸಿ, ಏಕದೇವೋಪಾಸನೆಯನ್ನು ಮರುಪ್ರತಿಷ್ಠಾಪಿಸಿ, ಭೈರವ-ಬೇತಾಳ ಮೈಲಾರ-ಮಾಳಜಿ, ಮಾರಿ-ಮಸಣಿಯನ್ನು ಜನತೆಯಿಂದ ಓಡಿಸಿದುದು ಶಿವಶರಣರ ಮಹತ್ವದ ಸಾಧನೆ. ಅವರು ಕಂಡ ಸಾಮಾಜಿಕ ದೃಷ್ಟಿಗೆ ಈ ಏಕದೇವೋಪಾಸನೆ ಅದು 'ಸತ್-ಚಿತ್-ಆನಂದ' ಸ್ವರೂಪವಾದ ಸ್ವಯಂಭೂಶಕ್ತಿಯ ಉಪಾಸನೆಯತ್ತ ಜನಮನವನ್ನು ತಿರುಗಿಸಿದುದು ಇನ್ನೊಂದು ಮಹತ್ವ ಹೆಜ್ಜೆ: ಪ್ರಮುಖ ಹೆಜ್ಜೆಯೂ ಅಹುದು.

ವ್ಯಕ್ತಿತ್ವಕ್ರಾಂತಿ–ಪರಿಪೂರ್ಣ ಜೀವನ :

ಇಂಥ ಸಾಧನೆಗೆ ಅತಿ ಮುಖ್ಯವಾದುದು, ವ್ಯಕ್ತಿತ್ವ ಕ್ರಾಂತಿ. ಅದು ಸಾಧ್ಯವಾಗುವುದು, ಕಂದಾಚಾರಗಳನ್ನು ಹೊಡೆದೋಡಿಸುವ, ವಿಚಾರ ಸ್ವಾತಂತ್ರ್ಯ, ನಿಷ್ಠೆ, ಸೇವೆ ಅನುಸಂಧಾನಗಳಿಂದ. 'ತೇನವಿನಾ ತೃಣಮಪಿ ನ ಚಲತಿ' ಎನ್ನುತ್ತ ವ್ಯಕ್ತಿ ಪ್ರಯತ್ನಗಳನ್ನು ನಿಷ್ಕ್ರಿಯಗೊಳಿಸಿ, ಕಂದಾಚಾರಗಳನ್ನು ಪ್ರೇರಿಸುವ ಗೊಡ್ಡು ವಿಚಾರವನ್ನು ಶಿವಶರಣರು ದೂರೀಕರಿಸಿದರು. 'ನಿನ್ನ ಅದೃಷ್ಟವನ್ನು ರೂಪಿಸಿಕೊಳ್ಳುವವನು ನೀನೇ.' ಪೂರ್ಣಜೀವನವ ಸಂಪೂರ್ಣ ಫಲ ಪಡೆಯುವುದೇ ಜೀವನದ ಸಾರ್ಥಕತೆ; ಅದರ ಸಾಧನೆಗೆ ಶಿವಾನುಭವ ಯೋಗದ ಅನುಸರಣೆಯೇ ದಾರಿ. ಅದು ಹಟಯೋಗವಲ್ಲ, ರಾಜಯೋಗವಲ್ಲ, ಅದು ಶಿವಯೋಗ; ಅದಕ್ಕೆ ಬೇಕು, ವ್ಯಕ್ತಿತ್ವ ಶುದ್ಧಿ, ಆಚಾರ–ವಿಚಾರ ಸಮನ್ವಯದ ನಡೆ. ಮರ್ತ್ಯವೇ

ಮಾನವ ಮೂರ್ತಿಗಳನ್ನು ಸಿದ್ಧಗೊಳಿಸುವ ಕರ್ತಾರನ ಕಮ್ಮಟ, ಪುಣ್ಯ-ಪಾಪಗಳ ಫಲಭೋಗ ಇಲ್ಲಿಯೇ; ಈ ಜನ್ಮದಲ್ಲಿಯೇ. ಸಾಧನೆ-ಸಿದ್ಧಿಗಳೆಲ್ಲ ಈ ಮಣ್ಣಿನ ಮನೆಯಲ್ಲಿಯೇ! ಈ ಮೃಣ್ಮಯದಲ್ಲಿಯೇ ಚಿನ್ಮಯದ ಸಾಧನೆ! ಅದೂ ಈ ನೈಜಮಾನವ ಜೀವನ ಪ್ರಪಂಚದಲ್ಲಿ!! ಈ ಮಾನವೀಯ ಪ್ರಯತ್ನ-ಫಲ ಸಾಧನೆ–ತ್ಯಾಗಮೂಲವಾದ ಭೋಗ, ಶಿವಶರಣರ ಸಾಮಾಜಿಕ ಸಿದ್ಧಾಂತದ ಸೌಧಕ್ಕೆ ಇನ್ನೊಂದು ಮೂಲೆಗಲ್ಲು-ಕೋನಶಿಲೆ.

ಸ್ತ್ರೀ, ಸೂತಕಿ–ಪಾತಕಿಯಲ್ಲ, ಮಾತೆ ಸಹಭಾಗಿ :

ಬಸವಾದಿಗಳ ಕ್ರಾಂತಿದೃಷ್ಟಿ ಅವರು ನೀಡಿದ 'ಸ್ತ್ರೀ ಸ್ವಾತಂತ್ರ್ಯ'ದಲ್ಲಿದೆ. ಸ್ತ್ರೀ ಶೂದ್ರಳಲ್ಲ, ಸೂತಕಿ–ಪಾತಕಿಯಲ್ಲ; ಆಕೆ ಮನೆಯ ಮಡದಿ, ಸಂಸಾರದ ಕೇಂದ್ರ ಬಿಂದು. 'ಹೆಣ್ಣು ಮಾಯೆಯಲ್ಲ, ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ಸಿದ್ಧರಾಮೇಶ್ವರರ ನುಡಿ, ಶರಣಧರ್ಮದ ಕಹಳೆ! ನಿಜ, ತಾಯಿ ದೇವರೆಂದು ಹೇಳಿತ್ತು ವೇದ. ಆದರೆ ಆಕೆಯನ್ನು ಶೂದ್ರಳಂತೆ ನಡೆಯಿಸಿ ಕೊಂಡಿತು: ಕಡೆಗಣಿಸಿತು; ಆದರೆ ಬಸವಧರ್ಮ ಹೆಣ್ಣು ದೇವರೆಂದಿತು; ಆಕೆ ಮುಕ್ತಿಗೆ ದಾರಿ ಎಂದಿತು. ಆಕೆ ಮಾಯೆಯಲ್ಲ, ತಾಯಿ. ಶೂದ್ರಳಲ್ಲ ಶ್ರೀದೇವಿ. ಸತಿ-ಪತಿಗಳಿಬ್ಬರಿಗೂ ಲಿಂಗದೇವರೇ ಪತಿ, ಅದರ ಉಪಾಸನೆಯೇ ಸಂಸಾರ ಜೀವನದ ಮರ್ಮ, ಇಂದ್ರಿಯಾನುಭವದ ಗುಟ್ಟು. ಅದೇ ದಾಸೋಹ ಪಥ; ಕಾಯಕದ ದಾರಿ.

ಸಂಸಾರ ಸಂಹಿತೆ :

ಈ ಸಂಸಾರ ಮಾನ್ಯತೆಯ ಶರಣರ ದೃಷ್ಟಿ, ಸನ್ಯಾಸವೇ ಶ್ರೇಷ್ಠವೆಂಬ ವಿಪರೀತ ವಾದವನ್ನು ತಳ್ಳಿಹಾಕಿ, ಮಾನವೀಯ ಬದುಕಿಗೆ, ಸಾಮಾಜಿಕ ಸಂಬಂಧಗಳಿಗೆ ಅರ್ಥ ಪೂರ್ಣತೆಯನ್ನು ಒದಗಿಸಿತು; ಸಾರ್ಥಕತೆಯನ್ನು ನೀಡಿತು. ಬಹುಪಾಲು ಶಿವ ಶರಣ–ಶರಣೆಯರೆಲ್ಲ ಸಂಸಾರಿಗಳು. ಅವರೆಲ್ಲ ಕಾಯಕ ನಿರತರಾಗಿ, ದಾಸೋಹ ನೆರವೇರಿಸಿ, 'ಸತಿ-ಪತಿಭಾವ'ದ ಜೀವಂತ ಉದಾಹರಣೆಗಳಾಗಿ ಬಾಳಿದರು. ಅವರ ಸ್ವಾನುಭವದ ನುಡಿಗಳಲ್ಲಿ ಸತ್ವ ತುಂಬಿರುವಂತೆ, ಕೇಳುವವರ ನಂಬಿಕೆಗೂ ಕಾರಣ ವಾಗುವ ದೃಷ್ಟಿ ಇದೆ. ಅವರು ಒಣ ವೇದಾಂತಿಗಳಲ್ಲ, ಹಸಿ ಮಾನವೀಯತೆಯ ವಾದಿಗಳು. ಅಷ್ಟೇ ಅಲ್ಲ, ಅದರ ಸಾರ್ಥಕತೆಯ ಪ್ರತಿಪಾದಿಗಳೂ ಅಹುದು. ಶಿವಶರಣರ ನುಡಿಗಣ ಸಂಸಾರ ಸಂಹಿತೆ. ಇದು ಅವರ ಸಾಮಾಜಿಕ ಜೀವನದೃಷ್ಟಿಗೆ ಇನ್ನೊಂದು ಮಹತ್ವವನ್ನೊದಗಿಸಿತು. ಇದು ಅವರ ಅತ್ಯಂತ ಪ್ರಾಗತಿಕ ದೃಷ್ಟಿ ಯನ್ನು ಬಿಂಬಿಸುತ್ತದೆ.

> ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ
> ಆವ ಪದಾರ್ಥವಾದಡೇನು,
> ತಾನಿದ್ದೆಡೆಗೆ ಬಂದುದ, ಲಿಂಗಾರ್ಪಿತವ ಮಾಡಿ,

ಭೋಗಿಸುವದೇ ಆಚಾರ,
ಕೂಡಲಸಂಗಮದೇವನ ಒಲಿಸ ಬಂದ ಪ್ರಸಾದಕಾಯವ ಕೆಡಿಸಲಾಗದು ॥

ಬಸವಣ್ಣನವರ ಈ ಅನುಭವದ ನುಡಿ, ಶಿವಶರಣರ ಸಾಮಾಜಿಕ ದೃಷ್ಟಿಗೆ ದಿಕ್ಸೂಚಿ.

ಕಾಯಕ : ಬದುಕಿನ ಸೌಧದ ಕೋನಶಿಲೆ :

ಅಂಗ ಕಾಯಕ ಲಿಂಗಪೂಜೆ. ಅದೇ ಜೀವನದ ದಾರಿ ಎಂಬುದು ಶಿವಶರಣ ಸಮಾಜದ ಇನ್ನೊಂದು ವೈಶಿಷ್ಟ್ಯ. ದುಡಿಮೆ ಬದುಕುವುದಕ್ಕೆ ಮಾತ್ರವಲ್ಲ, ಧರ್ಮಸಾಧನೆಗೂ ಅದೇ ದಾರಿ. ದುಡಿಮೆ ಬೇರೆ ಬೇರೆಯಾದರೂ ದುಡಿವವರೆಲ್ಲ ಒಂದೇ, ಅವರೆಲ್ಲರ ಸಾಧನಮಾರ್ಗ ಒಂದೇ. ಸಿದ್ಧಿಯು ಗುರಿಯೂ ಒಂದೇ. ಸಮಾಜ ಸ್ವಯಂಪೂರ್ಣವೂ, ಸಂಪದ್ಭರಿತವೂ ಆಗಬೇಕಾದರೆ, ಸರ್ವರೂ ದುಡಿಯಬೇಕು. ಕಾಯವನ್ನು ಬಳಸಿ ಕಾಯಕ ಮಾಡಬೇಕು. 'ಕಾಯಕದಿಂದ ಬಂದುದು ಕಾರೆಯ ಕಾಡು ಸೊಪ್ಪಾದರೂ ಅದು ಲಿಂಗಾರ್ಪಿತ' ಎಂಬ ನುಲಿಯ ಚಂದಯ್ಯನ ಧೀರನುಡಿ ಮತ್ತು ಗಂಭೀರ ನಡೆ, ಶರಣ ಸಮಾಜದ ಮುನ್ನಡೆಗೆ ಕಹಳೆಯೂದಿತು. ಸಮಾಜ ಕ್ಷೇಮಕ್ಕೆ ಕಾರಣವಾದ ನೂರಾರು ಶರಣರು, ನೂರಾರು ಕಾಯಕಗಳನ್ನು ಮಾಡಿ ಲಿಂಗದಾಸೋಹಿಗಳಾದರು, ಜಂಗಮ ದಾಸೋಹಿಗಳಾದರು. ಅಂದಂದಿಗೇ ದುಡಿಮೆ, ಅವಶ್ಯವಾದಷ್ಟೇ ಫಲಾರ್ಜನೆ ಮುಂತಾದ 'ಕಾಯಕ ದೃಷ್ಟಿ' ಶಿವಶರಣರು ರೂಪಿಸಿದ ಹೊಸ ಸಮಾಜದ 'ಶಕ್ತಿ'ಯೇ ಆಯಿತು. ಇದು ಗೀತೆಯ 'ನಿಷ್ಕಾಮ ಕರ್ಮ', ಕ್ರಿಶ್ಚಿಯನ್ ಧರ್ಮದ 'ಸತ್ಕರ್ಮ', ಸಮತಾವಾದದ 'ಬ್ರೆಡ್‌ಲೇಬರ್', ಗಾಂಧೀಜಿಯ 'ಟ್ರಸ್ಟೀಶಿಪ್'ಗಳ ವಿಚಾರಗಳ ಸಮನ್ವಯವಾದುದೂ, ಅತ್ಯಂತ ವ್ಯಾವಹಾರಿಕವಾದುದೂ ಆಗಿದೆ. ಅಷ್ಟೇ ಅಲ್ಲದೆ ಶರಣರ ಅನುಭವ ಸತ್ಯದ ಮುದ್ರೆಯನ್ನು ಪಡೆದಿದೆ.

ಹೀಗೆ, ವೀರಶೈವಧರ್ಮ ಪ್ರತಿಪಾದಿಸುವ ಜೀವನದೃಷ್ಟಿ, ಶಿವಶರಣರು ರೂಪಿಸಿದ ಸಾಮಾಜಿಕ ಸಿದ್ಧಾಂತಗಳು, ಅವರ ಬದುಕಿನ ಮೌಲ್ಯಗಳನ್ನು ಕಂಡುಕೊಳ್ಳುವ ಸಾಹಸಕ್ಕೆ ಹಿನ್ನೆಲೆಯಾಗಿವೆ. ದಾರಿ ತೋರಿವೆ.

ಜೀವನ ಮೌಲ್ಯಗಳು :

ಸಾಮಾನ್ಯ ಪ್ರಾಣಿಗಳಲ್ಲಿರುವ, ಪ್ರಾಣಿತನವೇ ಪ್ರಾಣವಾಗಿರುವ, ಮಾನವ ಇಂದು ಮಾನವನಾಗಿರುವುದು ಏಕೆ ? ಮಾನವನಲ್ಲಿರುವ 'ಪ್ರಾಣಿ'ತನವನ್ನು ದಾಟಿ, ದೇವಸದೃಶಗುಣಗಳನ್ನು ಸಾಧಿಸಬೇಕೆಂಬ 'ಮನಸ್ಸ'ನ್ನು ಪುಟಗೊಳಿಸಿಕೊಂಡಿರುವುದೇ ಅದಕ್ಕೆ ಕಾರಣ. ಅದೇ ಅವನು ಕಂಡುಕೊಂಡ 'ಜೀವನಮೌಲ್ಯ'– 'ಮೌಲ್ಯ' ಎಂದ ಕೂಡಲೇ ಒಂದು ನಾಣ್ಯದ ನೆನಪಾಗುತ್ತದೆ. ಒಂದು ನಾಣ್ಯಕ್ಕೆ ಅದರ

ಆಂತರಿಕ ವಸ್ತು ಮೌಲ್ಯ (Intrinsic Value), ಅದಕ್ಕೆ ನೀಡಿದ ಶಕ್ತಿಮೌಲ್ಯ (Capability)ಗಳಿರುತ್ತವೆ. ಒಂದು ರೂಪಾಯಿ ನಾಣ್ಯದ ನಿಜವಾದ ಒಳಬೆಲೆ. ಅಲ್ಲಿರುವ ಬೆಳ್ಳಿಯು ಅಥವಾ ಲೋಹಕ್ಕಿರುವ ಬೆಲೆ. ಅದು ೧೦–೨೦ ಪೈಸೆ ಮಾತ್ರ ಇರಬಹುದು. ಆದರೆ, ಅದಕ್ಕೆ ನೀಡಿರುವ ಮೌಲ್ಯ ಒಂದು ರೂಪಾಯಿಗೆ ಬರು ವಷ್ಟು ಸಾಮಾನುಗಳಿಗೆ ಸಮಾನವಾಗಬಲ್ಲ ಶಕ್ತಿ. ಹೀಗೆ, ಜೀವನದ ಮೌಲ್ಯ ಗಳಲ್ಲಿಯೂ, ಜೀವನದ ನಡೆ–ನುಡಿ–ಆಚರಣೆಗಳಿರುವ ಮೂಲ ಅರ್ಥದೊಡನೆ ಆ ಬಗೆಗೆ ಆಯಾ ಸಮಾಜ ನೀಡಿರುವ ವಿಶೇಷ ಅರ್ಥ ಬೇರೆ ಬೇರೆಯಾಗುತ್ತದೆ. ಅಂದರೆ ಯಾವ ಆದರ್ಶವಾದ ನಡತೆ, ವ್ಯಕ್ತಿಯ ಆಂತರಂಗಿಕ ಶೀಲ ಹಾಗೂ ಸಾಮಾ ಜಿಕ ಆಚರಣೆಯ ಶೀಲದಿಂದ ಪ್ರೇರಿತವಾಗುತ್ತದೋ ಅದೇ ಆಯಾ ವ್ಯಕ್ತಿ–ಸಮಾಜದ ನಿಜದ ನಡೆ ಅಥವಾ 'ಮೌಲ್ಯ'ವಾಗಿ ಗಣನೆಗೊಳ್ಳುತ್ತದೆ. ಶತಮಾನಗಳಿಂದ ಈ 'ಮೌಲ್ಯ' ಪರೀಕ್ಷೆಗೊಂಡು, ಪರಿಷ್ಕರಣಗೊಂಡು ಒಂದು ಗಟ್ಟಿನೆಲೆಯಾಗಿ ನಿಲ್ಲುತ್ತದೆ; ಅನೇಕ ಬಾರಿ ಈ 'ಮೌಲ್ಯ'ಗಳು ಕಾಲಕ್ರಮೇಣ ಬದಲಾಗುವುದೂ ಉಂಟು: ಹೀಗೆ, ಜೀವನ 'ಮೌಲ್ಯ'ಗಳು ಸಾಮಾಜಿಕ ಮೌಲ್ಯಗಳು, ಆರ್ಥಿಕ ಮೌಲ್ಯಗಳು, ಧಾರ್ಮಿಕ ಮೌಲ್ಯಗಳು, ಆಧ್ಯಾತ್ಮಿಕ ಮೌಲ್ಯಗಳು ಎಂದು ವ್ಯವಹಾರ ಸೌಕರ್ಯ ಕ್ಕಾಗಿ ವಿಂಗಡಣೆ ಹೊಂದಿದರೂ, ಆ ಮೌಲ್ಯ'ಗಳೆಲ್ಲ ಸಂಕೀರ್ಣ ಸ್ವರೂಪದವು, ಪರಸ್ಪರ ಮೌಲ್ಯ ಪ್ರೇರಕವಾದವುಗಳು. ಅವುಗಳನ್ನು ಒಟ್ಟಾಗಿ 'ಜೀವನ ಮೌಲ್ಯ' ಗಳು ಎಂದೇ ಕರೆಯಬಹುದು. ಶಿವಶರಣರು ವ್ಯಕ್ತಿ ವೇದಾಂತಿಗಳಾಗಿರುವುದರೊಡನೆ, ಸಮಾಜಜೀವಿಗಳಾಗಿದ್ದರು. ಕಾರಣ ಅವರು ಪ್ರತಿಪಾದಿಸುವ 'ಮೌಲ್ಯ'ಗಳು ಸಾಮಾಜಿಕವೂ ಆಗಿದ್ದು, ವ್ಯಕ್ತಿಗೂ, ಸಮಾಜಕ್ಕೂ ಅವಿನಾಭಾವ ಸಂಬಂಧ ಪಡೆದವು ಗಳಾಗಿವೆ. ಸಮುದಾಯದೊಡನೆ ಕೂಡಿ ಬಾಳುವುದು, ಕೊಡು–ಪಡೆಯುವುದು, ನೀಡು–ಬೇಡುವುದು, ಈ ಸಾಮಾಜಿಕ ನಡೆವಳಿಯ ಅನಿವಾರ್ಯ ಕಾರ್ಯಗಳು. ಅವುಗಳಿಗೆ 'ನೀತಿ'ಯು ಆಧಾರವಿದೆ. ಸತ್ಯದ ಬೆಂಬಲವಿದೆ, ಸಾರ್ಥಕತೆಯ ಉದ್ದೇಶವಿದೆ. ಶಿವಶರಣರು ಬೋಧಿಸಿದ ಸಾಮಾಜಿಕ ಮೌಲ್ಯಗಳು ಇಂತಿವೆ. ಅವು ವ್ಯಕ್ತಿ ಹಾಗೂ ಸಮಾಜದ ಪರಸ್ಪರಾವಲಂಬನೆ, ಪರಸ್ಪರ ಕ್ಷೇಮ ಪ್ರೇರಕ ವಾಗಿರುತ್ತವೆ.

ಜೀವನ ಶೀಲ–ಸಮಾಜ ಸಂಹಿತೆ :

ವ್ಯಕ್ತಿ, ಸಮಾಜದಲ್ಲಿ ಹೇಗಿರಬೇಕು, ಎಂತು ನಡೆಯಬೇಕು, ಎಂಬ ನೀತಿ ಸಂಹಿತೆ ಬಸವಣ್ಣನವರ ಈ ಪ್ರಸಿದ್ಧ ವಚನರೂಪದಲ್ಲಿ ಮೂಡಿದೆ. ವ್ಯಕ್ತಿಯ ಸತ್ಯವಾದ ವ್ಯವಹಾರದಂತೆ; ಸಾಮಾಜಿಕ ಜವಾಬ್ದಾರಿಯನ್ನೂ, ಈ ಮಾತುಗಳು ಸೂಚಿಸುತ್ತವೆ. ಅವು ಶರಣರೇ ಕಂಡ ಮೌಲ್ಯಗಳಲ್ಲ, ಮಾನವ ಸಮಾಜದೊಡನೆ ಕೊಂಡುಬಂದ ಪರಂಪರೆಯ 'ಶೀಲ'ಗಳು.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವನ ಒಲಿಸುವ 'ಪರಿ'. ॥

ಎಂಬ ಬಸವಣ್ಣನವರ 'ನೀತಿಸಂಹಿತೆ'ಯಲ್ಲಿ, ವ್ಯಕ್ತಿ ಸತ್ಯವಂತನಾಗಿರಬೇಕು. ಇತರರಿಗೆ ನೋವಾಗುವ ಸುಳ್ಳಾಡಬಾರದು, ಪರರ ವಸ್ತುಗಳನ್ನು, ಕದ್ದುಕೊಳ್ಳಬೇಡ, ಅವರಿಗೆ ನೋವುಂಟು ಮಾಡಿ, ನೀ ಕಳ್ಳನಾಗಬೇಡ. ಹಾಗೆಯೇ ಇತರರನ್ನೂ, ಇತರ ಪ್ರಾಣಿಗಳನ್ನೂ ಕೊಲಬೇಡ, ದಯೆತೋರು. ನೀನು ದಾನವನಾಗದೆ, ಮಾನವೀಯ ಅನುಕಂಪದೊಡನೆ 'ಮಾನವ'ನಾಗು ಎಂಬ ಸಾಮಾಜಿಕ ಜವಾಬ್ದಾರಿಯೂ ಇದರಲ್ಲಿದೆ. ತನಗೊಂದು ಪರಿ, ಅನ್ಯರಿಗೊಂದು ಪರಿ, ಇದು ಶುದ್ಧಜೀವನ ಮೌಲ್ಯವಲ್ಲ. ನಾನು - ಇತರರು ಸಮಾನರು. ಪರರನ್ನು ಹಳಿವುದು, ತನ್ನನ್ನು ಹೊಗಳಿಕೊಳ್ಳುವುದು ಎರಡೂ ದೋಷಗಳೇ: ಹಾಗಾಗಬಾರದು. ನಿಜವಾದ 'ಮೌಲ್ಯ' - ಇತರರನ್ನು ದುಃಖಿಗಾರರಾಗಿಸದೆ ಇತರರ ವಸ್ತುಗಳನ್ನು ಕದಿಯದ ನಡತೆ. ಅಷ್ಟೇ ಅಲ್ಲ, ಅದೊಂದು ಜೀವನನಿಷ್ಠೆಯಾಗಬೇಕು. ರಸ್ತೆ ಚೌಕದಲ್ಲಿರುವ ಪೋಲೀಸರಿಗೆ ಹೆದರಿ ನಡೆವ ವಿಧಾನವಾಗಬಾರದು. ಹೃದಯಾರೆ ವರ್ತಿಸುವ, ನಿಷ್ಠೆ ತೋರುವ ನಡೆವಳಿಯಾಗಬೇಕು. ಇದರಿಂದ ಸಾಧಿತವಾಗುತ್ತದೆ ಅಂತರಂಗ ಶುದ್ಧಿ...... ಅಂಥ ನಡೆ-ನುಡಿ-ಶೀಲ ಸಂಪನ್ನತೆಗೆ ಕೂಡಲಸಂಗಮ ಒಲಿಯುವನು, ಪ್ರಸನ್ನನಾಗುವನು.

ಅಂತೆಯೇ, ಈ ಮೌಲ್ಯಗಳಿಗೆ ಪೂರಕವಾದ 'ಛಲ ಬೇಕು ಶರಣಂಗೆ ಪರಧನವ ನೊಲ್ಲೆನೆಂಬ, ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ'......ವಚನ, ಶರಣನಾದವನು ಗಮನಿಸಲೇಬೇಕಾದ ಜೀವನ ಸಿದ್ಧಾಂತಗಳನ್ನು ನಿರೂಪಿಸುತ್ತದೆ. ಬದುಕಿನಲ್ಲಿ ಆ ನೀತಿ, ನಿಷ್ಠೆಯಾಗಬೇಕು. ಶರಣನಾದ ಮೇಲೂ, ಭಕ್ತನಾದ ಮೇಲೂ ಈ 'ಛಲ' ಕರಿಗೊಂಡು ನಿಲ್ಲಬೇಕು; ಅರಿವು ಆಚಾರವಾಗಬೇಕು. ಅದೇ ನಿಜವಾದ ವ್ಯಕ್ತಿಮೌಲ್ಯ. ಅದರೊಡನೆ 'ಸಾಮಾಜಿಕ ಮೌಲ್ಯ'ವೂ ಸಾಧಿತವಾಗುತ್ತದೆ: ಆಧ್ಯಾತ್ಮಿಕ ಸಾಧನೆಯೂ ತಂತಾನೇ ಆಗುತ್ತದೆ. ಅದಕ್ಕಾಗಿ ಅಡವಿ ಹೊಕ್ಕು ಮೂಗು ಹಿಡಿದು ಕೂಡಬೇಕಾಗಿಲ್ಲ. 'When all are honest, we need no bolts and no locks' ಎಂಬುದು ಕನಸಿನ ರಾಜ್ಯದ ಮಾತಾದರೂ, Bolt, nut, lock ಗಳು ವ್ಯಕ್ತಿಯ ನಿಷ್ಠೆ, ನಂಬಿಕೆಯಾಗಬೇಕು. ಆಗ ಮೂಡುತ್ತದೆ 'ಶಿವಸಮಾಜ' ಶೋಷಣೆ ರಹಿತ: ಸಮಾನತೆಯ ಸಮಾಜ. ಕಳಬಾರದೆಂಬುದು ನೀತಿಯ ಮೌಲ್ಯ ಮಾತ್ರವಲ್ಲ, ತನ್ನ ವಸ್ತುಗಳನ್ನು ಯಾರೂ ಕದಿಯಬಾರದೆಂಬ 'ಜವಾಬ್ದಾರಿ'ಯೂ

ಆಗಿದೆ. ಹೀಗೆ ಶಿವಶರಣರ ಸಾಮಾಜಿಕ ಮೌಲ್ಯಗಳು ವ್ಯಕ್ತಿಹಿತ ಸಮಾಜಹಿತವನ್ನು ಸಾಧಿಸಬಲ್ಲಂಥ ಮೌಲ್ಯಗಳನ್ನು ಪಡೆದಿವೆ. ಈ ರೀತಿ ನಾಣ್ಯಗಳಿಗೆ, ಶರಣರ ಅನುಭವದ (ಛಾಪ) ಹೊಂದಿದ್ದರಿಂದ. ಇವು ಚಲಾವಣೆಗೆ ಯೋಗ್ಯವಾದ ನಾಣ್ಯಗಳು. ಇವುಗಳು ಎಂದಿಗೂ 'ಅಪಮೌಲ್ಯ' ಗೊಳ್ಳದಂಥ ನಾಣ್ಯಗಳು.

ತೃಪ್ತ ವ್ಯಕ್ತಿತ್ವ – ಸುಖೀ ಸಮಾಜ :

ಶಿವಶರಣರ ಸಮಾಜದ ಕೇಂದ್ರಬಿಂದು, ಒಬ್ಬ ವ್ಯಕ್ತಿ. ಆತನನ್ನೇ ಭಕ್ತ-ಶರಣ ಎನ್ನುವರು. ಆತ ತನ್ನ ನಿಷ್ಠೆ-ನಂಬಿಕೆಗೆ ಶರಣಾದವನು, ಸಮಾಜಹಿತಕ್ಕೆ ಶರಣಾದವನು. ತನ್ಮೂಲಕ 'ಭಕ್ತ'ನಾಗಿ, ನಡೆ-ನುಡಿ-ಶೀಲ ಸಂಪನ್ನವಾದವನು. ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯಎಂಬ ಷಟ್‌ಸ್ಥಲಗಳು ಈ ವ್ಯಕ್ತಿ ಮೌಲ್ಯಗಳ ಹಂತಗಳಾಗಿವೆ. ಸಮಾಜಜೀವಿಯಾದ ಆತ ಮಡದಿ-ಮಕ್ಕಳು-ಬಂಧು-ಬಳಗದ ವರ್ತುಲದಲ್ಲಿ ಬಾಳಬೇಕು. ಅಂಥ ಪರಿಸ್ಥಿತಿಯಲ್ಲಿ ಅವನು ಅನುಸರಿಸುವ ಜೀವನಮೌಲ್ಯಗಳನ್ನು ಶರಣರು ಅರಿತು-ಆಚರಿಸಿ-ಬೋಧಿಸಿರುವರು. ಅವು ಇಂದಿಗೂ-ಎಂದಿಗೂ ಸುಖೀ ಸಮಾಜದ ಮೌಲ್ಯಗಳಾಗಿವೆ.

ಜೋದರ ಮಾದಣ್ಣನ ಈ ಒಂದು ವಚನ ಗಮನಿಸಿರಿ :

> ಮುನ್ನ ಸರಸತಿ ಪಾರ್ವತಿ ಎಂದು ನಡೆಸಿತ್ತು ಗುರುವಚನ,
> ಬಳಿಕ ಎನ್ನ 'ಶರಣಸತಿ' ಎಂದು ನಡೆಸಿತ್ತು, ನುಡಿಸಿತ್ತು ಗುರುವಚನ,
> ಇನ್ನು 'ಸತಿ'ಯರೆಲ್ಲ 'ಗುರುಸತಿ'ಯರೆಂದು ನಡೆಸಿತ್ತು, ನುಡಿಸಿತ್ತು
> ಗುರುವಚನ......"

ಸ್ವವಧುವನ್ನು 'ಲಿಂಗಸತಿ' ಎಂಬುದು, ಪರಸತಿಯನ್ನು 'ಗುರುಸತಿ'– ಪಾರ್ವತಿ ಎಂಬುದು, ಸಂಸಾರ ಜೀವನದ ಮೌಲ್ಯ ! ಹಾಗೆಯೇ ಸ್ತ್ರೀಯರು ಪರಪುರುಷರನ್ನು 'ಶಿವ-ಜಂಗಮ' ಎಂದು, ಸ್ವ ಪುರುಷ 'ಲಿಂಗಪತಿ' ಎಂದೂ ಭಾವಿಸಬೇಕು. ಅಲ್ಲದೆ, ಸತಿ ಪತಿ ಸಂಬಂಧ, ಲೌಕಿಕವಾಗಿ, 'ಕಾಯಕ' ಮಾಡಿ, ಕೂಡಿ 'ದಾಸೋಹ' ಮಾಡಿ ಬಾಳುವುದು ಜೀವನಮೌಲ್ಯ ಇಲ್ಲಿ ಸಾಧಿತವಾಗಿದೆ. ಸಮಾನತೆ-ಸಾಮಾನ್ಯತೆ, ಮೇಲು-ಕೀಳೆನ್ನದ ಸಹಭಾಗಿತ್ವದ ಸಮಾನತೆ, ಆರ್ಥಿಕ ಅವಲಂಬನದ್ದಲ್ಲ, ಆಸ್ತಿ ಹಂಚಿಕೊಳ್ಳುವುದಲ್ಲ, ಅಧಿಕಾರ ಹಂಚಿಕೊಳ್ಳುವುದಲ್ಲ, ಪರಸ್ಪರ ಜವಾಬ್ದಾರಿ ಅರಿತು, ಹಂಚಿಕೊಂಡು ಆಚರಿಸುವುದು. ಆಗ ಒದಗುತ್ತದೆ ಸಂಸಾರಕ್ಕೆ ಅರ್ಥ. 'ಪ್ರಾಪಂಚಿಕನಾಗಿ, ಪರಮಾರ್ಥವ ಪಡೆಯಬೇಕೆಂಬಾಸೆಯುಳ್ಳಡೆ......ಪರಧನ, ಪರಸ್ತ್ರೀಯ ವಿಸರ್ಜಿಸಿ, ಪೂಜಿಸು ಪರಶಿವನ,' ಎಂಬ ಸಿದ್ಧರಾಮೇಶ್ವರರ ನುಡಿ ಈ 'ಮೌಲ್ಯ' ವನ್ನು ನಿದರ್ಶಿಸುತ್ತದೆ. ಹಾಗೆಯೇ, ಬಸವಣ್ಣ ಇನ್ನಾವುದಕ್ಕಂಜದಿದ್ದರೂ, 'ಒಂದಕ್ಕಂಜುವೆ, ಒಂದಕ್ಕಳುಕುವೆ... ಪರಧನ, ಪರಸ್ತ್ರೀಯೆಂಬೀ ಜೂಬಿಂಗಜುವೆ' ಎಂದಿದ್ದಾರೆ. ಅಲ್ಲದೆ,

ತೊರೆಯುಹೊವ ಅಣ್ಣಗಳಿರಾ, ತೊರೆಯುಹೊವ ಸ್ವಾಮಿಗಳಿರಾ
ತೊರೆಯಿಂಬೊ, ತೂರೆಯಿಂಬೊ
ಪರನಾರಿಯು ಸಂಗವನು ತೊರೆಯಿಂಬೊ
ಪರಧನದಾಮಿಷವ ತೊರೆಯಿಂಬೊ
ಇವ ತೊರೆಯದೆ ಹೋಗಿ, ತೊರೆಯು ಮಿಂದಡೆ
ಬರುಂದೊರೆ ಹೋಹುದು ಕೂಡಲಸಂಗಮದೇವಾ

ಮುಂತಾದ ಅಚ್ಚಗನ್ನಡ ನುಡಿಗಳಿಂದ ಎಚ್ಚರಿಸಿರುವರು ಬಸವಣ್ಣ.

ಕಾಯಕ : ವ್ಯಕ್ತಿ-ಸಮಾಜ ಸೇತುವೆ :

ಶಿವಶರಣರ ಸಾಮಾಜಿಕ ಮೌಲ್ಯಗಳಲ್ಲಿ ಕಾಯಕ, ಅತಿ ಮುಖ್ಯವಾದುದು. ಅದಕ್ಕೆ, ಆರ್ಥಿಕ, ಆಧ್ಯಾತ್ಮಿಕ ಮಗ್ಗುಲುಗಳಿರುವಂತೆ, ಮುಖ್ಯವಾಗಿರುವ ಮುಖ-ಅದರ 'ವ್ಯಕ್ತಿ-ಸಮಾಜ' ಸಂಬಂಧಗಳ ಸೇತುವೆಯಾಗಿರುವುದು. 'ಅಸಿಯಾಗಲಿ, ಮಸಿಯಾಗಲಿ, ಕೃಷಿಯಾಗಲಿ, ವಾಣಿಜ್ಯ ಮುಂತಾದ ಕೃಷಿಯು ಮಾಡುವಲ್ಲಿ ಪಶು ಪತಿಗೆಂದೇ ಪ್ರಮಾಣಿಸಿ,' ಎಂಬ ಕಾಯಕದ ಶರಣ ಮೋಳಿಗೆ ಮಾರಯ್ಯನ ನುಡಿ ಇದಕ್ಕೆ ಪ್ರಮಾಣ.

ಕಾಯಕ್ಲೇಶದಿಂದ ತನುಮನ ಬಳಲಿಸಿ, ಧನವ ಗಳಿಸಿ
ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ,
ದಾಸೋಹವ ಮಾಡುವ ಸದ್ಭಕ್ತನ ಪಾದವ ತೋರಯ್ಯಾ
ಅಂತಪ್ಪ ಭಕ್ತನ ಕಾಯಕವೇ ಕೈಲಾಸ

—ಚೆನ್ನಬಸವಣ್ಣ

ಶಿವಶರಣರು ವೃತ್ತಿಗೆ ಕೊಟ್ಟ ವಿಶೇಷ 'ಮೌಲ್ಯ' ಹಾಗೂ ನೀಡಿದ ಅರ್ಥವಂತಿಕೆ; ಇದು ಇಂದಿಗೂ ಶೋಷಣೆಯಿಂದ ಬಡಕಲಾಗಿರುವ, ನಮ್ಮ ಈ ಸಮಾಜಕ್ಕೆ ದಾರಿದೀಪ.

ಸಮಾನತೆಯ-ಸಾಮಾಜಿಕ ಹಾಗೂ ಆಧ್ಯಾತ್ಮಿಕ-ಸಮಾನತೆಯ ಮೇಲೆ ಕಟ್ಟಿದ ಶಿವಶರಣ ಸಮಾಜದಲ್ಲಿರುವವರು ಗುರು-ಲಿಂಗ-ಜಂಗಮ-ಭಕ್ತರು. ಇವರಿಗೆಲ್ಲ ಸಮಾನತೆಯ ಅಂಶ ಕಾಯಕ. 'ಶಿವಯೋಗಿಯ ಜೀವಂ ವೃಥಾ ಸಮೆಯಲಾಗದು, ಅನುಗೊಂಬನಿತು ಕಾಯಕಂ ನಡೆಯುತಿರಬೇಕು-' ಎಂಬ ರಾಘವಾಂಕ ಕವಿಯ ನುಡಿ, ಇದಕ್ಕೆ ನಿದರ್ಶನ. ನುಲಿಯ ಚಂದಯ್ಯ, ಲಿಂಗಕ್ಕೂ ಕಾಯಕ ಮಾಡುವಂತೆ ಒತ್ತಾಯಿಸಿದ ಪ್ರಸಂಗ ಇಲ್ಲಿ ಗಮನಾರ್ಹ, ಜಂಗಮವೆಂದರೆ, ಬೇಡಿ ಉಂಬುವವರಲ್ಲ. ದುಡಿದು, ಕಾಯಕ ಮಾಡಿ ಉಣ್ಣುವವರು. ಬಸವಣ್ಣ ಮಾಡಿಸುತ್ತಿದ್ದ ಜಂಗಮ

ದಾಸೋಹ, ಸೋಮಾರಿ ಜಂಗಮರನ್ನು ನಿರ್ಮಿಸಿತು ಎಂಬ ವಾದ ಕುಹಕ ರೀತಿಯದು. ಕಲ್ಯಾಣಕ್ಕೆ ಬಂದು ಹೋಗುತ್ತಿದ್ದವರೆಲ್ಲ ಒಂದಲ್ಲ ಒಂದು ಕಾಯಕ ಮಾಡುತ್ತಿದ್ದ ಶರಣರು. ಅವರೆಲ್ಲ ಜಂಗಮವೃತ್ತಿಯನ್ನು ಅನುಸರಿಸಿ, ನಾಡಿನ ತುಂಬ ಸಂಚರಿಸಿ, ಶರಣಧರ್ಮದ ಮೌಲ್ಯಗಳನ್ನು ಬಿತ್ತರಿಸುವವರು. ಕಾಯಕ ಮಾಡುವ ಭಕ್ತರು, ಕಾಯಕ ಮಾಡುವ ಜಂಗಮಕ್ಕೆ ಮಾಡಿ ನೀಡುವುದೇ ದಾಸೋಹ.

ಉಣ್ಣುವ ಕೈಗಳೆಲ್ಲ ದುಡಿವ ಕೈಗಳಾಗಿ, ದುಡಿವ ಕೈಗಳೆಲ್ಲ ದಾಸೋಹ ನೀಡಿ–ಮಾಡುವ ಕೈಗಳಾಗಿ, ನಿತ್ಯ ಕ್ರಿಯಾಶೀಲವಾಗಿದ್ದಿರಬಹುದಾದ ಶರಣರ ಸಮಾಜದ 'ಮೌಲ್ಯ'ಗಳನ್ನು ಗುರುತಿಸಬಹುದು, ಊಹಿಸುವುದು ಕಷ್ಟ. ಇಂದಿನ ದಿನಮಾನಗಳಲ್ಲಿ ವೀರಶೈವಧರ್ಮದ ಮಠ-ಮಾನ್ಯಗಳ ವ್ಯಾಪಕತೆ ಹಾಗೂ ವ್ಯವಸ್ಥೆ ಇಂದಿಗೂ ಆಶ್ಚರ್ಯಕರವಾದುದು. ಹಾಗೆಯೇ ಎಲ್ಲ ಬಗೆಯ 'ಕಾಯಕ' ಗಳಲ್ಲಿ ನಿರತರಾದ ಜಂಗಮ-ಭಕ್ತರಿಂದ ನಡೆದ ದಾಸೋಹ ಹಾಗೂ ಕಾಣಿಕೆ ಸಂಗ್ರಹದ ಸಾಮಾಜಿಕ ಸಿದ್ಧಾಂತ ಅನ್ವೇಷಣೀಯವಾದುದು.

ಶರಣರ ಉತ್ತರಾಧಿಕಾರಿಗಳಾರು ?

ಟೀಕೆ ಮಾಡುವುದು ಸುಲಭ, ಇಂದಿನ ಸಮಾಜದ ನ್ಯೂನತೆಗಳನ್ನು ಅಂದಿಗೆ ಆರೋಪಿಸುವುದು ಮಹಾಪರಾಧ.

ನಮ್ಮ ಹಳ್ಳಿಗಳಲ್ಲಿ ಈಗಲೂ, ಹಿರೇಮಠದ ಜಂಗಮ, ಕಂತೆಭಿಕ್ಷ, ಕೋರು ಧಾನ್ಯದ ಭಿಕ್ಷಮಾಡಿ, ಬಂದ ಕಾಯಕದ ಜಂಗಮರಿಗೆ, ಪರವೂರಿನ ಭಕ್ತರಿಗೆ, 'ದಾಸೋಹ' ಮಾಡುವದನ್ನು ಗಮನಿಸಿದರೆ, ಈ ವ್ಯವಸ್ಥೆ ಪಳೆಯುಳಿಕೆಯಾಗಿಯಾದರೂ ಉಳಿದಿರುವುದು ತೋರುತ್ತದೆ. ಕಾಲಜ್ಞಾನ ಕಾಯಕದವರು, ಕಂತೆ ಕಾಯಕದವರು ವರ್ಷಕ್ಕೊಮ್ಮೆ ಕೊಡೆಕಲ್ಲುಮಠಕ್ಕೆ ಕಲ್ಯಾಣದಮಠಕ್ಕೆ ಈಗಲೂ ಅರ್ಪಿಸುವ 'ದಕ್ಷಿಣೆ'ಯ ವಿಚಾರವೂ ಇಂಥದೆ 'ಪಳೆಯುಳಿಕೆ'. ಮುಳ್ಳಾವಿಗೆ ಕಾಯಕ, ಕಂಬದ ತೆಕ್ಕೆ ಕಾಯಕ-ಮುಂತಾದುವು, ಸಾಮಾಜಿಕ ಲೋಪ–ದೋಷಗಳನ್ನು ಅಹಿಂಸಾತ್ಮಕವಾದ ಸತ್ಯಾಗ್ರಹದ ಮೂಲಕ ಸರಿಪಡಿಸುವ ವಿಧಾನಗಳಾಗಿ ತೋರುತ್ತವೆ. ಹೀಗೆ ಶಿವಶರಣರ ಸಾಮಾಜಿಕ ನಡವಳಿಕೆಯಲ್ಲಿ, ಗುರು–ಲಿಂಗ_ಜಂಗಮ_ಕಾಯಕ–ದಾಸೋಹಗಳು ಅದೆಂಥ ಅರ್ಥಪೂರ್ಣವಾದ ಸಾಮಾಜಿಕ ಮೌಲ್ಯಗಳು ಎಂದು ಗಮನಿಸಿದರೆ ಆಧುನಿಕ ಸಮಾಜಶಾಸ್ತ್ರಜ್ಞ ಆಶ್ಚರ್ಯಪಡುವನು.

ಹೀಗೆ. ಶಿವಶರಣರ ಸಾಮಾಜಿಕ ಮೌಲ್ಯಗಳು ಇಂದಿಗೂ ಆದರ್ಶವಾದುವುಗಳಾಗಿವೆ. ಆದರೆ, ಅವುಗಳನ್ನು ಅನುಸರಿಸುವವರು ಯಾರು ? ಸ್ವಾಮಿಗಳೋ, ಭಕ್ತರೋ, ಸಮಾಜವೆ ? ಅದೇ ದೊಡ್ಡಪ್ರಶ್ನೆ ! ಬೌದ್ಧಿಕತೆ, ಕ್ರೂರವರ್ತನೆ,

ಸ್ವಾರ್ಥದ ಇಂದಿನ ಮೌಲ್ಯಗಳಿಗೆ ಶರಣರ ಸಾಮಾಜಿಕ ಮೌಲ್ಯಗಳನ್ನು ಅಳವಡಿಸುವವರಾರು ? ಶಿವಶರಣರ ಉತ್ತರಾಧಿಕಾರಿಗಳು ಯಾರು? ನಾವೆ ? ನೀವೆ ? ಯಾರು? ಸರ್ವಸಮಾನತೆ – ಕಾಯಕಮಾನ್ಯತೆಯ ಸಮಾಜ ನಿರ್ಮಿಸಿದ ರಷ್ಯಾದೇಶದವರೆ ? ಅಥವಾ ವ್ಯಕ್ತಿತ್ವ ಮಹೋನ್ನತಿ ಸಾಧಕ ಪ್ರಜಾಪ್ರಭುತ್ವ ವಾದಿಗಳಾದ ಅಮೆರಿಕನ್ನರೆ ?...

ಫಲ ಒಳಗೆ ಪಕ್ವವಾಗಿಯಲ್ಲದೆ
ಹೊರಗಣ ಸಿಪ್ಪೆ ಒಪ್ಪಗೆಡದು.

ಮಹಾದೇವಿಯಕ್ಕನ ವಚನ

ಬುದ್ಧಿಯಿಂ ಹಿರಿದಿಲ್ಲ. ವಿದ್ಯೆಯಿಂದಧಿಕ ಧನವಿಲ್ಲ.

ಸರ್ವಜ್ಞನ ವಚನ

ಮಾತಿನ ಹಂಗೇಕೆ, ಮನವೇಕಾಂತದಲ್ಲಿ ನಿಂದ ಬಳಿಕ.

ನೀಲಮ್ಮನ ವಚನ

5)

ಶರಣರ ನುಡಿಮುತ್ತುಗಳು



● ಡಾ. ವೀರಣ್ಣ ರಾಜೂರ

ಮಾತು ಮಾನವನಿಗೆ ಮಹಾದೇವನಿತ್ತ ಅಮೂಲ್ಯ ವರ. ಲೋಕದಲ್ಲಿ ಅದಕ್ಕಿರುವ ಮಹತ್ವ ಮತ್ತೊಂದಕ್ಕಿಲ್ಲ. ಮಾನವನ ಸಮಗ್ರ ವ್ಯಕ್ತಿತ್ವ ದರ್ಶನ ಮಾಡಿಸುವ ಕನ್ನಡಿ ಅದು. ಈ ಮಾತಿನ ಮಹತಿಯನ್ನು ಕವಿಗಳು, ಅನುಭಾವಿಗಳು ಮನತುಂಬಿ ಹೊಗಳಿದ್ದಾರೆ; ಹೃದಯ ತುಂಬಿ ಹಾಡಿದ್ದಾರೆ. 'ಮಾತು ಆಡಿದರಾಯಿತು, ಮುತ್ತು ಒಡೆದರಾಯಿತು', 'ಮಾತು ಬಲ್ಲವ ಮಾಣಿಕ ತಂದ, ಮಾತು ಅರಿಯದವ ಜಗಳತಂದ' ಎಂಬ ನಾಣ್ಣುಡಿಗಳು, 'ಲೋಕಕ್ಕೆ ಮಾತೇ ಮಾಣಿಕ್ಯ' ಎಂಬ ಸರ್ವಜ್ಞನ ನುಡಿ, 'ಮಾತೆಂಬುದು ಜ್ಯೋತಿರ್ಲಿಂಗ', 'ಬಲ್ಲವನ ನುಡಿ ಸರ್ವವೆಲ್ಲಕ್ಕೂ ನನ್ನಿ' ಎಂಬ ಶರಣರ ಉಕ್ತಿಗಳು ಅದರ ಶಕ್ತಿಯನ್ನು ಸಾರುತ್ತವೆ.

ಜಗತ್ತಿನಲ್ಲಿ ಎಲ್ಲರ, ಎಲ್ಲ ಮಾತುಗಳಿಗೂ ಬೆಲೆಯಿಲ್ಲ. ಬೆಲೆ ಇರುವುದು ಕೇವಲ ಕೆಲವರ ಮಾತುಗಳಿಗೆ ಮಾತ್ರ. ಆಡಿದ ನುಡಿಗೆ ಬೆಲೆ ಬರಬೇಕಾದರೆ, ಆ ವ್ಯಕ್ತಿ ಪರಿಪೂರ್ಣನಾಗಿರಬೇಕು. ಅವನ ಆತ್ಮಕುಸುಮ ಅರಳಿ, ಮನ ಮಕರಂದ ಸೂಸುತ್ತಿರಬೇಕು. ಹೃದಯಫಲ ಮಾಗಿ. ಅನುಭವ ಪಕ್ವಗೊಂಡು ಇನಿರಸವ ನುಣಿಸುವಂತಿರಬೇಕು. ನಡೆನುಡಿ ಸಾಮರಸ್ಯ ಹೊಂದಿ, ಕಾಲ ದೇಶ ಮತಾತೀತವಾದ ಉನ್ನತ ವಿಚಾರ, ಉತ್ಕೃಷ್ಟ ತತ್ವ, ಸರ್ವಸಮನ್ವಯ ಶ್ರೇಷ್ಠ ಸಂದೇಶವನ್ನು ಸಾರುವಂತಿರಬೇಕು. ಮಾನವನ ಬಾಳಿಗೆ ಮಾರ್ಗದರ್ಶನ ಸೂತ್ರವಾಗಿ, ದಾರಿದೀಪವಾಗಿ ಜೀವನ ಪಾವನತೆಗೆ ಕಾರಣವಾಗಬೇಕು. ಲೋಕಕಲ್ಯಾಣಕ್ಕೆ ದಿಕ್ಸೂಚಿಯಾಗಿ ಸಮಾಜ ಸಂಸ್ಕೃತಿ ಧರ್ಮಗಳ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಹೋಗುವ, ಅವುಗಳ ಆರೋಗ್ಯವನ್ನು ವೃದ್ಧಿಗೊಳಿಸುವ ಸಂಜೀವಿನಿಯಾಗಿ ನಿಲ್ಲಬೇಕು. ಇಂಥ ವ್ಯಕ್ತಿತ್ವ ಶ್ರೀಯನ್ನು ಪಡೆದವರು ಅನುಭಾವಿ, ಸಂತ, ಮಹಾಪುರುಷ, ಶರಣ ಎಂದೆನಿಸಿಕೊಳ್ಳುತ್ತಾರೆ. ಅವರು ನುಡಿದ ನುಡಿಗಳು ಸೂಳ್ನುಡಿಗಳೆನಿಸುತ್ತವೆ. ಅವು ಪರುಷ ಸಮಾನ.

ಅವುಗಳಿಗೆ ಸರಿದೊರೆಯಾದ ವಸ್ತು ಲೋಕದಲ್ಲಿ ಮತ್ತೊಂದಿಲ್ಲ. ಅತಿ ಬೆಲೆ ಬಾಳುವ ಮುತ್ತು ರತ್ನ ಮಾಣಿಕ್ಯ ಚಿನ್ನ ಅಮೃತ ಜ್ಯೋತಿ ಮೊದಲಾದವುಗಳ ಜೊತೆಗೆ ಅವುಗಳನ್ನು ಹೋಲಿಸಿ ಹೇಳುವುದುಂಟು. ಆದರೆ ಈ ಪದಗಳಿಗೂ ಅವುಗಳನ್ನು ಸಂಪೂರ್ಣವಾಗಿ ಪ್ರತಿನಿಧಿಸುವ ಸಾಮರ್ಥ್ಯವಿಲ್ಲ. ಶಬ್ದಕ್ಕೆ ಸಿಲುಕದ, ಹೋಲಿಕೆಗೆ ನಿಲುಕದ, ಬೆಲೆಗೆ ಬಲಿಯಾಗದ ಎತ್ತರ ಅವುಗಳದು. ಅಪಾರ ಲೋಕಾನುಭವ, ಆತ್ಮಾನುಭವ, ಆಧ್ಯಾತ್ಮಾನುಭಾವಗಳಿಂದ ತುಂಬಿ ತೊಟ್ಟು ಬಿಟ್ಟು ಕಳಚಿದ ಪಕ್ವ ಫಲಗಳಾದ ಅವುಗಳಿಗೆ ಅವೇ ಹೋಲಿಕೆ. ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆ ಶ್ರೇಷ್ಠತೆ ಸಾರಸರ್ವಸ್ವವನ್ನೂ ಒಳಗೊಂಡ ಅವು ಸಾರುವ ಸಂದೇಶ, ಬೀರುವ ನೀತಿ ಸಾರ್ವತ್ರಿಕ, ಅನನ್ವಯ, ಅನನ್ಯ.

ಶರಣರು ಕನ್ನಡದ ಮೂಲಕ ವಿಶ್ವಸಾಹಿತ್ಯಕ್ಕೆ, ಆಧ್ಯಾತ್ಮ ಪ್ರಪಂಚಕ್ಕೆ ಕೊಟ್ಟ ಕೊಡುಗೆ ಚಿರಸ್ಮರಣೀಯ. ಅವರು ಗೈದ ಕಾರ್ಯ, ನಡೆಸಿದ ಸಾಧನೆ, ಪಡೆದ ಸಿದ್ಧಿ ಕ್ರಾಂತಿಕಾರಕ ಹಾಗೂ ಸರ್ವಚೇತನ ಪ್ರೇರಕ. ಅವರು ನೆಲದಲ್ಲಿ ನಿಂತು, ಮುಗಿಲೆತ್ತರಕ್ಕೆ ಬೆಳೆದವರು. ಲೌಕಿಕವನ್ನುಂಡು ಪಾರಮಾರ್ಥವನ್ನು ಕಂಡವರು. ಸಾಮಾನ್ಯರಾಗಿದ್ದು ತಮ್ಮ ಪರಿಶುದ್ಧ ಆಚಾರ, ಉನ್ನತ ವಿಚಾರ, ಅಗಾಧವಾದ ಆಧ್ಯಾತ್ಮ ಚಿಂತನ, ಅನುಭಾವದ ಔನ್ನತ್ಯಗಳಿಂದ ಅಸಾಮಾನ್ಯರಾಗಿ ಮೆರೆದವರು. ಅವರು ನಿಂತ ನೆಲ ಪಾವನ, ಅಂದುದೆಲ್ಲ ಪರಬ್ರಹ್ಮ, ನುಡಿದುದೆಲ್ಲ ಶಿವತತ್ವ. ಅವರು ನುಡಿನಿಷ್ಠರು, ನಡೆಶ್ರೇಷ್ಠರು, ನಡೆನುಡಿಗಳಲ್ಲಿ ಸಾಮರಸ್ಯವನ್ನು ಸಾಧಿಸಿದ ವಿಶಿಷ್ಟರು. ಅವರ ವಾಣಿ ಶಿವವಾಣಿ, ಲಿಂಗಮೆಚ್ಚಿ ಅಹುದಹುದೆನ್ನುವ ಅಮೃತ ವಾಣಿ: ಅಮರವಾಣಿ. ಅದಕ್ಕೆ ಚಿನ್ನಕ್ಕಿಂತಲೂ ಹಿರಿದಾದ ಬೆಲೆ, ಮುತ್ತಿಗಿಂತಲೂ ಮಿಗಿಲಾದ ಮಹತ್ವ, ಮಾಣಿಕ್ಯಕ್ಕಿಂತಲೂ ಮೇಲಾದ ಮರ್ಯಾದೆ. ಅವರಲ್ಲಿ ವಿಶ್ವದರ್ಶನ ತುಂಬಿದೆ. ವಿಶ್ವತತ್ವ ಅಡಗಿದೆ. ವಿಶ್ವನೀತಿ ನೆಲೆ ನಿಂತಿದೆ. ಅದ್ಭುತ ವಿಶ್ವಾನುಭವ, ವಿದ್ಯುತ್ಪ್ರಭೆಯುಳ್ಳ ಸ್ವಾನುಭವ ತುಂಬಿ ತುಳುಕಿದೆ. ವಿಶ್ವೋನ್ನತ ವಿಚಾರದ ತೊರೆ ಹರಿದಿದೆ. ಅದು ಸಾಮಾನ್ಯ ತೊರೆಯಲ್ಲ, ಅಮೃತದ ತೊರೆ. ಅದರಲ್ಲಿ ಮಿಂದವನ ಬಾಳು ಸಾರ್ಥಕ. ಆ ಅಮೃತವನ್ನು ಸೇವಿಸಿದವನ ಬದುಕು ಬಂಗಾರ,

ಚಿಕ್ಕ ಮಾತು, ಚೊಕ್ಕ ವಿಚಾರ, ಅಪಾರ ಅನುಭವ ಶರಣರ ನುಡಿಗಳ ವೈಶಿಷ್ಟ್ಯ. ಅವು ಅಧಾರಕ್ಕೆ ಕಹಿ ಎನಿಸಿದರೂ ಉದರಕ್ಕೆ ಸಿಹಿ. ಒಂದೊಂದು ಮಾತೂ ಅನುಭವ ಭರಿತ, ಅರ್ಥಪೂರ್ಣ. ಅದಕ್ಕಾಗಿ ಅವುಗಳಿಗ ಜಗತ್ತಿನ ಜನರ ಹೃದಯವನ್ನು ಆಕರ್ಷಿಸುವ ಶಕ್ತಿ, ಮನವನ್ನು ಸೆಳೆಯುವ ಮೋಡಿ ಇದೆ. ಇಡೀ ಮಾನವ ಜನಾಂಗದ ಹಿಂದು-ಇಂದು-ಮುಂದಿನ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ನೀಡಿ ತೃಪ್ತಿಗೊಳಿಸುವ ಸಾಮರ್ಥ್ಯವಿದೆ. ಮಾನವ ಜೀವನ ಹಾಗೂ ಭಾವನೆಗಳನ್ನು

ಸಂಸ್ಕರಿಸಿ ಶುದ್ಧಗೊಳಿಸುವ ಸತ್ವವಿದೆ. ಇವುಗಳಲ್ಲಿ ಪ್ರಕಟವಾದ ಶರಣರ ಪ್ರತಿಭೆ, ವಿದ್ವತ್ತು, ವಿಚಾರವಂತಿಕೆ, ಕಲಾವಂತಿಕೆ, ಜಾಣ್ಮೆ, ಲೋಕಾನುಭವ, ಅಭಿವ್ಯಕ್ತಿ ವಿಶಿಷ್ಟತೆ ಶ್ಲಾಘನೀಯ. ಇಲ್ಲಿಯ ವಿಷಯ ವೈವಿಧ್ಯವಂತೂ ಅಪಾರ, ಆಶ್ಚರ್ಯಕರ, ಇದು ಕಾಮಧೇನು, ಕಲ್ಪವೃಕ್ಷಗಳಂತೆ ಬೇಡಿದವರಿಗೆ ಬೇಡಿದುದನೀವ ಸರ್ವವಸ್ತುಗಳ ಶ್ರೀಮಂತ ಭಂಡಾರ. ಸರ್ವ ವಿಷಯ ಗರ್ಭಿತ, ಮುತ್ತುರತ್ನಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡು ನಿಂತ ವಿಶಾಲ ಕಡಲು.

ಮಾನವನ ಮನಸ್ಸನ್ನು ಮುದಗೊಳಿಸುವ, ಅವನನ್ನು ಗಂಭೀರವಾದ ಆಲೋಚನೆಗೆ ಹಚ್ಚಿ ಚಿಂತನೆಗೆ ತೊಡಗಿಸುವ, ಬುದ್ಧಿಗೆ ಬಲವನ್ನು ನೀಡಿ ವೃದ್ಧಿಗೊಳಿಸುವ, ಅವನ ನೈತಿಕ ನೆಲೆಗಟ್ಟನ್ನು ಗಟ್ಟಿಗೊಳಿಸಿ ಧಾರ್ಮಿಕತೆಯನ್ನು ಬೆಳೆಸುವ ಈ ನುಡಿ ಮುತ್ತಿನರಾಶಿಯನ್ನು ಅವುಗಳಲ್ಲಿ ಅಳವಟ್ಟ ವಿಷಯಕ್ಕನುಗುಣವಾಗಿ ನಡೆ-ನುಡಿ, ಆಚಾರ_ವಿಚಾರ, ಅರಿವು-ಜ್ಞಾನ, ಅನುಭಾವ, ನೀತಿ, ನೇಮ, ಶೀಲ, ಸತ್ಯ, ಸತ್ಯ, ನಿಷ್ಠೆ, ಕುಲ, ಆಶೆ, ಭಕ್ತಿ, ಸಮತೆ, ಸಂಸಾರ, ಧರ್ಮ, ಕಾಯಕ, ದೇವರು ಗಳಿಗೆ ಸಂಬಂಧಿಸಿದ ಉಕ್ತಿಗಳು, ಲೋಕೋಕ್ತಿಗಳು, ಗಾದೆಗಳು ಎಂದು ಸ್ಥೂಲವಾಗಿ ವಿಭಜಿಸಿ ಉದಾಹರಿಸಬಹುದು.

ನಡೆ – ನುಡಿ : ಶರಣರು ನಡೆನುಡಿಗಳಿಗೆ ಕೊಟ್ಟ ಮಹತ್ವ ಹಿರಿದಾದುದು. ಆಡುವುದೊಂದು, ಮಾಡುವುದೊಂದು ನಿಜವಾದ ಮನುಷ್ಯತ್ವದ ಲಕ್ಷಣವಲ್ಲ. ಆತ್ಮನ ಅಂತರ್ವಾಣಿಯನ್ನು ಅನುಸರಿಸಿ ನುಡಿದು ಅದರಂತೆ ನಡೆಯುವವನೇ ಮಹಾತ್ಮ. ಅಂದರೆ ನಡೆ ನುಡಿಗಳೆರಡೂ ಪರಿಶುದ್ಧವಾಗಿರಬೇಕು. ಅವೆರಡರ ಸುಂದರ ಸಾಮರಸ್ಯದಿಂದ ಮಾತ್ರ ಸಾರ್ಥಕ ಬಾಳು ಸಾಧ್ಯ ಎಂಬ ನಿಲವನ್ನು ತಳೆದ ಅವರು ನುಡಿದಂತೆ ನಡೆದು ನಡೆದಂತೆ ನುಡಿದು ತೋರಿದರು. ಲೋಕಕ್ಕೆ ಮಾನ್ಯ ರೆನಿಸಿ, ಮಹಾತ್ಮರೆನಿಸಿ ಮೆರೆದರು. ನಡೆನುಡಿ ಕುರಿತ ಅವರ ನುಡಿಗಡಣ ಹೀಗಿದೆ :

'ನುಡಿದರೆ ಮುತ್ತಿನ ಹಾರದಂತಿರಬೇಕು; ನುಡಿದರೆ ಮಾಣಿಕ್ಯದ
ದೀಪ್ತಿಯಂತಿರಬೇಕು; ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.'
(ಬಸವಣ್ಣ)

'ನುಡಿದಂತೆ ನಡೆಯದಿದ್ದರೆ ಕೂಡಲಸಂಗಯ್ಯ ಮೆಚ್ಚ' (ಬ)
'ನುಡಿದ ನುಡಿ ಜಾರಿದರೆ ಮನಕ್ಕೆ ಮನ ನಾಚಬೇಕು' (ಬ)
'ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ
ಘಟಸರ್ಪ' (ಬ)

'ತಿಳಿದು ನುಡಿ ಕೊಡಬೇಕಲ್ಲದೆ ತಿಳಿಯದ ನುಡಿಯದು ಅಪಭ್ರಂಶ'
(ಸಿದ್ಧರಾಮ)

'ನಡೆನುಡಿ ಸತ್ಯ ಸದಾಚಾರಿಗಳು ಎಡೆಯೆಡೆಗೆ ಒಬ್ಬರು' (ಜೇಡರದಾಸಿಮಯ್ಯ)

'ನುಡಿದಂತೆ ನಡೆಯುದವರ, ನಡೆದಂತೆ ನುಡಿಯುದವರ ಎಂತು ಶರಣರೆಂಬೆ ?'
(ಉರಿಲಿಂಗಪೆದ್ದಿ)

'ಆವ ಮಾತನಾದರೂ ತನ್ನ ಕಾಯ್ದು ಆಡಬೇಕು' (ಸ್ವತಂತ್ರ ಸಿದ್ಧಲಿಂಗೇಶ್ವರ)
'ಹಗೆಯೂ ಕಳೆಯೂ ತನ್ನ ವಚನವೆ' (ಸ್ವ. ಸಿ.)

'ನಡೆನುಡಿ ಸಿದ್ಧಾಂತವಾದರೆ ಆತ ಪರಂಜ್ಯೋತಿ ಗುರುವಹ'
(ಕೋಲಶಾಂತಯ್ಯ)

'ನುಡಿದು ನಡೆಯಬಲ್ಲವನೆ ವೇದವೇದ್ಯ' (ವೇದಮೂರ್ತಿ ಸಂಗಣ್ಣ)
'ನಡೆಯೊಳಗೆ ನುಡಿತುಂಬಿ ನಡೆನುಡಿ ಎರಡನು ಪರಿಪೂರ್ಣತುಂಬಿ,
ಲಿಂಗವ ಕೂಡಬಲ್ಲಾತನೆ' ಶರಣ (ಷಣ್ಮುಖ ಶಿವಯೋಗಿ)
'ಮಾತಿನಲ್ಲಿ ಮೃದು, ಮನದಲ್ಲಿ ಪ್ರೀತಿಯುಳ್ಳವನೆ ಉತ್ತಮನೆಂಬರು (ಷ).

ಅರಿವು : ಅರಿವು ಮಾನವನಿಗೆ ಬಹು ದೊಡ್ಡ ಆಸ್ತಿ. ಅದು ಇಲ್ಲದವನ ಬಾಳು ವ್ಯರ್ಥ. ಅದು ಅವನ ಜೀವನದ ದಾರಿದೀಪವಿದ್ದಂತೆ. ಅರಿತು ಆಡಬೇಕು; ಅರಿತು ಮಾಡಬೇಕು. ಅರಿವನ್ನು ತನ್ನ ಗುರುವನ್ನಾಗಿ ಮಾಡಿಕೊಂಡ ವ್ಯಕ್ತಿಗೆ ಯಾವ ಭಯವಿಲ್ಲ. ಹುಟ್ಟು-ಸಾವು, ಆಯುಷ್ಯ-ಭವಿಷ್ಯ, ಕಷ್ಟ-ಸುಖ, ಪಾಪ-ಪುಣ್ಯ, ಸಿರಿತನ-ಬಡತನಗಳ ಕೋಟಲೆಯಿಲ್ಲ. ಅವನು ಚಿರಸುಖಿ, ಅದಕ್ಕಾಗಿ ಶರಣರು ಇದಕ್ಕೆ ಎಲ್ಲಿಲ್ಲದ ಮಹತ್ವವನ್ನು ಕೊಟ್ಟಿದ್ದಾರೆ.

'ಅರಿದೊಡೆ ಶರಣ. ಮರೆದೊಡೆ ಮಾನವ' (ಬಸವಣ್ಣ)
'ಅರಿವಿನಿಂದ ಅನುಭವ, ಅನುಭವದಿಂದ ಅರಿವು,
ಅರಿವು ಅನುಭವ ಸಮರಸವಾದುದೇ ಆನಂದ' (ಚ. ಬ.)
'ಅರಿದ ಬಳಿಕ ಬ್ರಹ್ಮವೆಂಬುದು ಮೃಗಜಲ' (ಸಿ)
'ಅರಿದು ಧರಿಸದೆ, ಧರಿಸಿ ಅರಿಯದೆ
ಇದ್ದವನ ಭಾವ ಬಯಲಲ್ಲಿಹ ದೀಪದಂತೆ' (ಸಿ)
'ಅರಿವನಾಹಾರಗೊಂಬುದೇ ಪರಮಸುಖ' (ಸ. ಮಾ.)
'ತನ್ನರಿದವಂಗೆ ಇದಿರೆಂಬುದಿಲ್ಲ' (ಚ. ಬ,)
'ಅರಿಯುವರೊಡನೆ ಸಂಗವ ಮಾಡಿದರೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಡಂತೆ' (ಅಕ್ಕ)
'ನೆರೆಯರಿದುದು ಮರೆಯದು' (ಮ)
'ಅರಿದಡೆ ಕಾಣಬಹುದು ಮರೆದಡೆ ಕಾಣಬಾರದು' (ಗವು)

ನೀತಿ : ನೀತಿ ಜೀವನಕ್ಕೆ ಜ್ಯೋತಿಯಿದ್ದಂತೆ. ನೀತಿ ತಪ್ಪಿದ ಮನುಷ್ಯನ ಬಾಳು ಕತ್ತಲೆ. ಮನುಷ್ಯ ಮನುಷ್ಯನೆನಿಸಿಕೊಳ್ಳಬೇಕಾದರೆ, ತನ್ನ ವ್ಯಕ್ತಿತ್ವದ ಘನತೆ ಗೌರವಗಳನ್ನು ಕಾಯ್ದುಕೊಳ್ಳಬೇಕಾದರೆ, ಕೀರ್ತಿಯನ್ನು ಹೆಚ್ಚಿಸಿ ಕೊಳ್ಳಬೇಕಾದರೆ ನೀತಿವಿದನಾಗಬೇಕು. ನೈತಿಕ ಅಧಃಪತನ ಹೊಂದಿದವನು ಇದ್ದೂ ಸತ್ತಂತೆ. ಮಾನವನ ಉದ್ಧಾರ, ಲೋಕದ ಉದ್ಧಾರ ಈ ನೀತಿಯ ನೆಲೆಗಟ್ಟಿನ ಮೇಲೆಯೇ ನಿಂತಿರುವುದು. ಸರ್ವರ ಹೃದಯದಲ್ಲಿ ನೀತಿಯ ಜ್ಯೋತಿ ಬೆಳಗಿದರೆ ಲೋಕದಲ್ಲಿ ಅಶಾಂತಿ, ಅಶಿಸ್ತು, ಅನಾಗರಿಕತೆ, ಅವಿವೇಕಗಳಿಗೆ ಸ್ಥಾನವೇ ಇರಲಾರದು. ಎಲ್ಲ ಅನುಭಾವಿಗಳು ನೀತಿ-ನುಡಿಗಳನ್ನು ಹೇಳುತ್ತಲೇ ಬಂದಿದ್ದಾರೆ. ಅದರಲ್ಲಿ ಶರಣರ ನೀತಿ ಮುಕ್ತಕಗಳು ವಿಶಿಷ್ಟವಾಗಿವೆ :

'ಅಯ್ಯಾ ಎಂದಡೆ ಸ್ವರ್ಗ ಎಲವೊ ಎಂದಡೆ ನರಕ' (ಬ)
'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ'
ಅನ್ಯರಿಗೆ ಅಸಹ್ಯಪಡಬೇಡ ಇದಿರು ಹಳಿಯಲು ಬೇಡ (ಬ)
'ದಯವಿರಬೇಕು ಸಕಲ ಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ' (ಬ)
'ಕೊಲಬೇಡ ಪ್ರಾಣಿಯ, ಗೆಲಬೇಡ ನಂಬಿದವರ
ಛಲವ ಸಾಧಿಸಬೇಡ ಗೋತ್ರದಲ್ಲಿ' (ಅಂ. ಚೌ.)
'ಕೊಲ್ಲದಿರ್ಪುದೇ ಧರ್ಮ (ಉಪೆ)
'ಪರಮ ಪತಿವ್ರತೆಗೆ ಗಂಡನೊಬ್ಬ' (ಬ)
'ಮನದ ಕೋಪ ತನ್ನ ಅರಿವಿನ ಕೇಡು' (ಬ)
'ಪತಿವ್ರತೆ ತಾನಾದ ಬಳಿಕ ವಲ್ಲಭನ ಸರ್ವೋಪಚಾರದಲ್ಲಿ
ಲೀಲೆಯಾಗಿರಬೇಕು' (ಚಬ)
'ಗಂಡನುಳ್ಳ ಮ್ಮನ ಗೌರಿಯೆಂದು ಕಾಣಬೇಕು' (ಬ)
'ಪಿತನಾಚಾರವನುದ್ಧರಿಸುವಾತ ಪುತ್ರನಲ್ಲದ ಗತಿಗೆಡಿಸುವಾತ
ಪುತ್ರನೆ ?' (ಚಬ)
'ಓದುವುದು ಸದ್ಗುಣಕ್ಕಲ್ಲದೆ ಕಿವಿಯನೂದುವದಕ್ಕೇನೊ ?' (ಸಿ)
'ನ್ಯಾಯಿ ತಾನಾದ ಬಳಿಕ ಅನ್ಯಾಯ ಮಾಡಬಾರದು' (ಸಿ)
'ಇತ್ತ ಬಾರೆನ್ನದವನ ಹತ್ತೆ ಹೊದ್ದಲಿ ಬೇಡ' (ಬ)

ಶೀಲ : ಶೀಲ ಮನುಷ್ಯನಿಗೆ ಪ್ರಾಣವಿದ್ದಂತೆ. ಅದು ಬರಿ ಪ್ರಾಣವಲ್ಲ ಪಂಚಪ್ರಾಣ. ಶೀಲವಂತನ ಬಾಳು ಎಲ್ಲಕ್ಕಿಂತಲೂ ಮೇಲು. ಅದು ಕಣ್ಣಿಗೆ ಕಾಣದ ಗುಪ್ತ ನಿಧಿ: ಆತ್ಮದ ಬೆರಳುಗಳು ಸದಾ ನೇಯುತ್ತಿರುವ ಅಮೂಲ್ಯ ಉಡುಗೆ. ಅದನ್ನು ಧರಿಸಿದ ವ್ಯಕ್ತಿಯ ಮರ್ಯಾದೆಗೆ ಕುಂದಿಲ್ಲ, ಕೀರ್ತಿಗೆ ಕಲಂಕವಿಲ್ಲ. ಅದು ಅಲುಗದ

ಆಧಾರ. ಅದನ್ನು ಹಿಡಿದು ನಿಂತವನನ್ನು ಜಗತ್ತಿನ ಯಾವ ಶಕ್ತಿಯೂ ಅಲುಗಿಸದು. ಅದು ಮನುಷ್ಯನ ಅಚ್ಚಳಿಯದ ಸ್ಮಾರಕ. ಅವನ ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜಮಾರ್ಗ. ಅದನ್ನು ಗಳಿಸಿದವನಿಗೆ ಎಲ್ಲೆಡೆ ಸ್ವಾಗತ, ಸತ್ಕಾರ. ಇವು ಶೀಲವನ್ನು ಕುರಿತ ಶರಣರ ಪುರಸ್ಕರದ ನುಡಿಗಳು.

'ಶೀಲವ ಸಾಧಿಸಿದಾತನೆ ಹಿರಿಯ' (ಉಪ)

'ಸತ್ಯ ಸಹಜವೇ ಸತ್ ಶೀಲ (ಅ)

'ಇದ್ದುದಕ್ಕೆ ವಂಚನೆಯ ಮಾಡದಿಪ್ಪುದೇ ಶೀಲ,
ಇಲ್ಲದುದಕ್ಕೆ ಕಡನ ಬೇಡದಿಪ್ಪುದೇ ಶೀಲ' (ಚೆಬ).

'ಚಿತ್ತದ ಕಳವಳವಳಿದು ಮನವು ಮಹಾಘನದಲ್ಲಿ
ನೆಲೆಗೊಂಡುದೇ ಶೀಲ' (ಚೆಬ).

'ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗ
ಅಷ್ಟಮದಗಳ ಕೊಂದಾತನೇ ಶೀಲವಂತ' (ಚೆಬ).

'ತನುವ ಗುರುವಿಂಗೆ ಸವೆಸುವುದು ಶೀಲ' (ತೋಂಸಿ)

'ಸತ್ಯದಲ್ಲಿ ನಡೆವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ,
ಸಜ್ಜನ ಸದಾಚಾರದಲ್ಲಿ ವರ್ತಿಸಿ ನಿತ್ಯವನರಿವುದು ಶೀಲ' (ತೋಂಸಿ).

ಆಶೆ : ಆಶೆ ಮಾನವನಿಗೆ ಪಾಶವಿದ್ದಂತೆ. ಅದು ಅಶಾಂತಿಗೆ ಮೂಲ, ಅತೃಪ್ತಿಗೆ ಕಾರಣ. ಅದನ್ನು ತೊರೆದವನು ನಿಶ್ಚಿಂತ. ಅವನೇ ನಿಜ ಶರಣ. ಆಶಾಪಾಶಕ್ಕೆ ಸಿಲುಕಿದವನ ಹೃದಯ ಅಶುದ್ಧಿಯ ಮಡು. ಮಾತು ಮನ ಆಚಾರ ವಿಚಾರಗಳು ತಾಳಮೇಳ ತಪ್ಪಿದ ತಂತಿಯ ಮೇಲಿನ ಡೊಂಬರಬಾಳಿಯಂತೆ. ಈ ಆಶೆಯನ್ನು ತೊರೆದು ಸಹಜ ಬಾಳು ದೂಡಲು ಎಲ್ಲರೂ ಬೋಧಿಸಿದ್ದಾರೆ. ಶರಣರು ಆಶೆಯ ರೀತಿ ನೀತಿಗಳನ್ನು ಹೀಗೆ ಬಣ್ಣಿಸಿದ್ದಾರೆ.

'ಆಶೆಯುಳ್ಳನ್ನಕ್ಕ ರೋಷ ಬಿಡದು' (ಲಿಂ)

'ಆಶೆಯೆಂಬುದು ಭವದ ಬೀಜ
ನಿರಾಶೆಯೆಂಬುದು ನಿತ್ಯ ಯುಕ್ತಿ' (ಕ)

'ಆಶೆಯಿಂದ ಬಿಟ್ಟು ಕಿರಿಯರಿಲ್ಲ,
ನಿರಾಶೆಯಿಂದ ಬಿಟ್ಟು ಹಿರಿಯರಿಲ್ಲ' (ಸವಾ)

'ಆಶೆಯುಳ್ಳಾತ ಒಬ್ಬರ ಆಧೀನವಪ್ಪ
ಆಶೆಯ ಮನದ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪ' (ಲಿಂಜ)

'ಆಶೆಯೆಂಬ ವೇಶಿ ಆರನಾದಡೂ ತನ್ನತ್ತ ಕರೆವಳು' (ಸ್ವಲಿಂ)
'ಈಶನಿಂದತ್ತ ಹಿರಿಯರಿಲ್ಲ, ಆಶೆಯಿಂದತ್ತ ಕಿರಿಯರಿಲ್ಲ (ಸವಾ)
'ಆಶೆಯೇ ದಾಸತ್ವ, ನಿರಾಶೆಯೇ ಈಶತ್ವ' (ಉಪ)
'ಆಶೆ ಇಲ್ಲದುದೇ ವೈರಾಗ್ಯ' (ಉಪ)

ಕಾಯಕ : ಕಾಯಕಕ್ಕೆ ಶರಣರು ಕೊಟ್ಟ ಬೆಲೆ ಅಪಾರ. ಸರ್ವರೂ ಸತ್ಯ ಶುದ್ಧ ಕಾಯಕವಮಾಡಿ ನಿತ್ಯದ ಅನ್ನವನ್ನು ನಿತ್ಯ ಸಂಪಾದಿಸಿ ಉಂಡು ತೃಪ್ತಿ ಹೊಂದಬೇಕೆಂಬುದು ಅವರ ಧ್ಯೇಹ. ಆದರಲ್ಲಿ ಮೇಲು–ಕೀಳೆಂಬುದಿಲ್ಲ. ಸರ್ವ ಭೂತ ಹಿತವೇ ಅದರ ಪರಮ ಗುರಿ. ಸ್ವಾರ್ಥದ ಸೋಂಕಿಲ್ಲದೆ ಸರ್ವ ಜೀವರನ್ನು ತನ್ನಂತೆ ನೋಡುವ ದೃಷ್ಟಿ ಅವರಲ್ಲಿದೆ, ಪವಿತ್ರ ಮನದಿಂದ ಫಲಾಪೇಕ್ಷೆಯಿಲ್ಲದೆ ಮಾಡಿಯುವುದೆ ನಿಜವಾದ ಕಾಯಕ. ಅಂಥ ಕಾಯಕವಮಾಡಿ ಶರಣರು ಅದರಲ್ಲಿಯೇ ಕೈಲಾಸವನ್ನು ಕಂಡರು, ಸುಖ ಶಾಂತಿಯನ್ನು ಉಂಡರು.

'ಕಾಯಕವೇ ಕೈಲಾಸ' (ಬ)
'ಕಾಯಕದಲ್ಲಿ ನಿರತನಾಡಡೆ ಗುರುದರ್ಶನವಾದರೂ ಮರೆಯಬೇಕು' (ಆಮಾ)
'ಕಾರೆಯಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತ' (ನುಚಂ)
'ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ' (ನುಚಂ)
'ಕಾಯಕ್ಕೆ ಕರ್ಮಗುರುವಾಗಬೇಕು, ಜೀವಕ್ಕೆ ಮೋಕ್ಷವಾಗಬೇಕು (ಆಮಾ)

ಇವು ಕೆಲವು ಶರಣರು ಕಾಯಕದ ಬಗೆಗೆ ಕೊಟ್ಟ ವ್ಯಾಖ್ಯೆಗಳು.

ಇದರಂತೆ 'ಆಚಾರವೇಸ್ವರ್ಗ ಅನಾಚಾರವೆ ನರಕ', 'ಆಚಾರಸಹಿತ ಭಕ್ತ ಅನಾಚಾರಸಹಿತ ನರಕಿ', 'ಆಚಾರವಿಲ್ಲದ ಗುರು ಭೂತಪ್ರಾಣಿ', ಅಂಗಕ್ಕೆ ಆಚಾರವೇ ಚೆಲುವು', 'ಆಡಿದರೆ ಸದಾಚಾರಿಗಳೊಡನೆ ಆಡಬೇಕು', 'ಆಚಾರವೇ ಕುಲ, ಅನಾಚಾರವೆ ಹೊಲೆ.'— ಎಂದು ಆಚರಣೆಯನ್ನು ಕುರಿತು ಹೇಳಿದರೆ, ಅನುಭಾವವೆಂಬುದು ನೆಲದ ಮರೆಯ ನಿಧಾನ', 'ಅನುಭವವೇ ತನುವಿಂಗಾಧಾರ' 'ಅನುಭಾವವಿಲ್ಲದೆ ಏನೂವನೂ ತಾನರಿಯಬಾರದು' 'ಅನುಭಾವವೆಂಬುದು ಆತ್ಮವಿದ್ಯೆ' 'ಅನುಭಾವವೆಂಬುದು ತಾನಾರೆಂಬುದ ತೋರುವದು' ಎಂದು ಅನ್ಯರು ಕದಿಯದ, ಖರ್ಚಾಗದ ಅನುಭಾವವನ್ನು ಕುರಿತು ಹೊಗಳಿದ್ದಾರೆ.

'ಸಕಲ ಜೀವಾತ್ಮರಿಗೆ ಲೇಸನೆ ಬಯಸುವವರೆ ಕುಲಜರು' 'ಕೊಲುವವನೆ ಮಾದಿಗ, ಹೊಲಸು ತಿಂಬುವವನೆ ಹೊಲೆಯ', 'ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ', 'ಹೊಲೆಯ ಹೊಲಬಿಗನಾದರೆ ಅವನ ಹೂರೆಯಲ್ಲಿಪ್ಪುದು ಲೇಸು', 'ಆವ ಕುಲವಾದರೇನು ದೇವನೊಲಿದಾತನೆ ಕುಲಜನು'. 'ಅರಿವೇ ಸತ್ಕುಲ, ಮರವೇ

ದುಃಕುಲ'. 'ಆವ ಕುಲವಾದರೂ ಅರಿವಲ್ಲಿಯೇ ಪರತತ್ವಭಾವಿ', 'ಕುಲವೆರಡಲ್ಲದೆ ಹಲವಿಲ್ಲ', 'ಕುಲ ಹಲವಾದರೇನು ಉತ್ಪತ್ಯ ಸ್ಥಿತಿ ಅದು ಒಂದೇ ಭೇದ– ಇವು ಕುಲದ ಬಗೆಗೆ ಶರಣರು ವ್ಯಕ್ತಪಡಿಸಿದ ಅಭಿಪ್ರಾಯಗಳು. ಹೀಗೆಯೇ ಸತ್ಯ, ನಿಷ್ಠೆ, ಸಮತೆ, ಭಕ್ತಿ, ಧರ್ಮ, ದೇವರು ಇತ್ಯಾದಿ ವಿಷಯಗಳನ್ನು ಕುರಿತು ಹೇಳಿದ ಮಾತುಗಳು ಹೇರಳವಾಗಿವೆ; ಮನನೀಯವಾಗಿವೆ.

ಶರಣರು ತಮ್ಮ ಕಾಲಕ್ಕೆ ಪ್ರಚಾರದಲ್ಲಿದ್ದ, ಸರ್ವಕಾಲಕ್ಕೂ ನಿತ್ಯ ಸತ್ಯಗಳಾಗಿ ನಿಂತ ನಾಣ್ಣುಡಿಗಳನ್ನು ತಮ್ಮ ವಚನಗಳಲ್ಲಿ ಹೆಣೆದುಕೊಂಡಿದ್ದಾರೆ. ಅಲ್ಲದೆ ಅವರು ನುಡಿದ ಅನೇಕ ನುಡಿಗಳೂ ಮುಂದೆ ನಾಣ್ಣುಡಿಗಳಾಗಿ ಪರಿಣಮಿಸಿವೆ. ಅವುಗಳಲ್ಲಿ ಲೋಕಾನುಭವ, ಆಡುನುಡಿಯ ಬೆಡಗು, ದೇಶೀಭಾಷೆಯ ಸೊಗಸು ಎದ್ದು ಕಾಣುತ್ತವೆ. ಜನಸಾಮಾನ್ಯರ ಹೃದಯಕ್ಕೆ ಹತ್ತಿರವಾದ ಅವು ಅವರ ನಡೆನುಡಿಗಳಲ್ಲಿಯ ಓರೆಕೋರೆಗಳನ್ನು, ತಿದ್ದಲು ಸುಲಭ ಸಾಧನವಾಗಿವೆ. ದೂರದಲ್ಲಿ ಹೋದವ ಊರ ಸುದ್ದಿಯನರಿಯ'. 'ಕಾಣೆಗೆಹೋಗಿ ಕಡವರವ ನೀಗಲೇತಕ್ಕೆ'?, 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವೆ ?' 'ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು ?', 'ಬೆಂದ ಹುಣ್ಣಿಂಗೆ ಬೇಗೆಯನಿಕ್ಕುವರೆ ?', 'ಬಲದಾಯಿ ಮದ್ದ ಬಲ್ಲಳೆ ?', 'ಬಂಜೆ ಬೇನೆಯನರಿವಳೆ ?', 'ನೊಂದವರ ನೋವ ನೋಯದವರೆತ್ತ ಬಲ್ಲರು', 'ತುಂಬಿದುದು ತುಳುಕದು', 'ಕಂದನಲ್ಲಿ ಕುಂದನರಸುವರೆ ?', 'ಆವ ವಿದ್ಯೆ ಕಲಿತರೂ ಸಾವ ವಿದ್ಯೆ ಬೆನ್ನ ಬಿಡದು', 'ಹೇರನೊಪ್ಪಿಸಿದವಗೆ ಸುಂಕವ ಬೇಡಿ ಗಾರು ಮಾಡಲೋಕಕ್ಕೆ ?', 'ಸಾವಾಗ ದೇವನೆಂದರೆ ಸಾವು ಬಿಡುವುದೆ ?', 'ವಿಷಕ್ಕೆ ಅಂಜುವರಲ್ಲದೆ ಸರ್ಪಕ್ಕೆ ಅಂಜಿದವರುಂಟೆ ?'. 'ಪೋತನಿಕ್ಕಿ ಮುಯ್ಯನೊರಸಿದಡೆ ಪಶುಗಳು ಮೆಚ್ಚುವವು', 'ಅನ್ನವನಿಕ್ಕಿ ಹಿರಣ್ಯವ ಕೊಟ್ಟಡೆ ಜಗವೆಲ್ಲ ಹೊಗಳುವದು', 'ತಾ ಒಳ್ಳೆಯವನಾದರೆ ಸರ್ವರೂ ತನಗೆ ಒಳ್ಳೆಯವರಾಗಿರ್ಪರು', 'ಜಾತಸ್ಯ ಮರಣ ಆವಂಗೂ ತಪ್ಪದು', 'ಊರ ಸುತ್ತಿವಡೂ ಬಾಗಿಲಲ್ಲೇ ಬರಬೇಕು', 'ಕೈಯ ತುತ್ತು ಬಾಯಿಗೆ ಬಾರದಂತಾಯಿತ್ತು'. 'ಮರವಿನ ಬದುಕು ಸ್ಥಿರವಲ್ಲ', 'ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೆ ?', 'ನಡೆಯುವ ನಂದಿ ಕುಂಟುವದುಂಟು', 'ಹೋಗುವ ಮನುಜ ಎಡಹುವದುಂಟು'. 'ಆಳುವಲ್ಲಿ ಅಧಿಕಾರಿಯಲ್ಲದೆ ಅಳಿವಲ್ಲಿ ಅಧಿಕಾರಿಯೆ', 'ಧನವುಳ್ಳವನ ನೆನೆವಡೆ ದರಿದ್ರುಹೋಹುದೆ ?'. 'ಉಳ್ಳವರು ಹಗೆಯವ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿತ್ತು'. 'ಬಣಜಿಗನ ಭಕ್ತಿಬಳ್ಳದ ಮೊನೆಯಲ್ಲಿ ಹೋಯಿತ್ತು'. 'ಗೌಡರಮನೆಯ ತೊತ್ತಿಂಗೇಕೆ ಬಲಹನಾಣೆ', 'ಮುನ್ನ ಮಾಡಿದ ಪಾಪ ಬೆನ್ನ ಬಿಡದು', 'ಮರಣವೇ ಮಹಾನವಮಿ', 'ದೇವನೊಬ್ಬ ನಾಮ ಹಲವು', 'ಅರ್ಥರೇಖೆಯಿದ್ದು ಫಲವೇನು ಆಯುಷ್ಯ ರೇಖೆಯಿಲ್ಲದನ್ನಕ್ಕ', 'ಅರಸು ಮುನಿದರೆ ನಾಡೊಳಗಿರಬಾರದು'. 'ಆನೆಯಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ ?',

‘ಕಲ್ಲ ಗುಗ್ಗರಿಯು ಮೆಲಿದಡೆ ಹಲ್ಲು ಹೋಹುದ ಮಾಣ್ಬುದೆ ?’, ‘ತಂಗುಳಬುತ್ತಿಯು ಕಟ್ಟಿ ಹೊಟ್ಟೆಯು ಮೇಲಿಕ್ಕಿಕೊಂಡಿರ್ದಡೆ ಹಸಿವು ಹೋಗಿ ಆಪ್ಯಾಯನವಹುದೆ ?’, ‘ಗರ್ಭವಿದ್ದಂಗನೆಗೆ ಒಮ್ಮೆ ಸಂಭ್ರಮವಲ್ಲದೆ ಗರ್ಭಕ್ಕೊಮ್ಮೆಮ್ಮೆ ಸಂಭ್ರಮವಿಲ್ಲ ನೋಡಾ’. ‘ಮಗನಿಗಾದ ನೋವು ತಂದೆ ತಾಯಿಗಳಿಗಾಗದೆ ಅನ್ಯರಿಗೆಲ್ಲಿಹುದೊ ?’ ‘ಗಂಡಂಗೆ ನಾಚಿದ ಹೆಂಡತಿ ಮಕ್ಕಳ ಹೇಗೆ ಹಡೆವಳಯ್ಯ, ಲಿಂಗಕ್ಕೆ ನಾಚಿದಾತ ಶರಣ ನೆಂತಪ್ಪನಯ್ಯಾ’. ‘ಗಂಡಗಿಂದ ಹೆಂಡತಿ ಮೊದಲೆ ಹುಟ್ಟಿದರೂ ಆ ಗಂಡಗಿಂದ ಕಿರಿಯಳಲ್ಲದೆ ಹಿರಿಯಳಲ್ಲವಯ್ಯ’— ಎಂಬಂತೆ ಗಾದೆ, ಲೋಕೋಕ್ತಿ, ಅನುಭವೋಕ್ತಿಗಳನ್ನು ಹೀಗೆ ಎಷ್ಟಾದರೂ ಉದಾಹರಿಸುತ್ತ ಹೋಗಬಹುದು. ಒಂದಕ್ಕಿಂತ ಒಂದರಲ್ಲಿ ಹಿರಿದಾದ ಭಾವ, ಅರ್ಥ ಶ್ರೀಮಂತಿಕೆ.

ಒಟ್ಟಿನಲ್ಲಿ ಶರಣರ ನುಡಿಮುತ್ತುಗಳು ಮಾನವನ ನೈತಿಕ ಸಂಪತ್ತನ್ನು ಹೆಚ್ಚಿಸಿ ಜೀವನಕ್ಕೆ ಸರಿಯಾದ ಮಾರ್ಗ ತೋರಿ ಅವನ ಸರ್ವತೋಮುಖ ಸುಂದರ ಬಾಳಿಗೆ ಬೆಳಕನ್ನು ನೀಡುತ್ತವೆ. ಅವುಗಳು ಬೀರುವ ತತ್ವ, ಅನುಭವಗಳನ್ನು ಸರ್ವರೂ ತಮ್ಮ ನಡೆನುಡಿಗಳಲ್ಲಿ ಅಳವಡಿಸಿಕೊಂಡು ತಮ್ಮ ಜೀವನಸೂತ್ರವನ್ನಾಗಿ ಮಾಡಿಕೊಂಡು ಸಾಗಿದರೆ ಬಾಳಿನಲ್ಲಿ ನಿತ್ಯ ನೆಮ್ಮದಿ ಸುಖ–ಶಾಂತಿ ಲಭಿಸುವುದರಲ್ಲಿ ಸಂದೇಹವಿಲ್ಲ.

●


ರವಿ ನಡೆದತ್ತಲೆಲ್ಲ ಬೆಳಗಲ್ಲದೆ ಕತ್ತಲೆಯುಂಟೆ

ಅಪರಾಜಿತೇಶ್ವರ ಶತಕ

ಎನ್ನಿಂದಾಯಿತ್ತು, ಎನ್ನಿಂದಾಯಿತ್ತು ಎನ್ನದಿರು ಮನವೆ
ನಾನು ಮಾಡಿದೆನೆನ್ನದಿರು ಮನವೆ.

ಬಸವಣ್ಣನವರ ವಚನ

ಶ್ರೇಷ್ಠ ಶಿವಶರಣೆ ಅನುಪಮ ಅನುಭಾವಿ ಲಿಂಗಮ್ಮ



● ಎಸ್. ಎಸ್. ಭೂಸರಡ್ಡಿ

ಹನ್ನೆರಡನೆಯ ಶತಮಾನದಲ್ಲಿ ನೀತಿಯು ತಳಹದಿ, ಸೃಷ್ಟಿತತ್ತ್ವದ ಆಧಾರದ ಮೇಲೆ ವಿನೂತನವಾದ ಸುಂದರ ಸಮಾಜವನ್ನು ರೂಪಿಸಿದವರು ಬಸವಾದಿ ಪ್ರಮಥರು. ಅವರ ಸಮಕಾಲೀನರಾಗಿ ಬೆಳಗಿದ ಶ್ರೇಷ್ಠ ಜ್ಯೇಷ್ಠ ಶಿವಶರಣೆಯರಲ್ಲಿ ಲಿಂಗಮ್ಮನೂ ಒಬ್ಬಳು. ಲಿಂಗಮ್ಮ ಹಡಪದ ಅಪ್ಪಣ್ಣನವರ ಧರ್ಮಾಂಗನೆ: ಪುಣ್ಯಾಂಗನೆ. ಅಪ್ಪಣ್ಣ ಮಹಾನುಭಾವಿ ಅಣ್ಣ ಬಸವಣ್ಣನವರ ಆಪ್ತ ಸೇವಕ: ನಿಕಟವರ್ತಿ. ಬಸವಣ್ಣನವರ ಮಹಾಮನೆಗೆ ಬರುವ ಅತಿಥಿ ಅಭ್ಯಾಗತರನ್ನು ಆದರದಿಂದ ಬರಮಾಡಿಕೊಂಡು ಯೋಗ್ಯ ಮಾನಸನ್ಮಾನ ಮಾಡುವ ಹಿರಿದಾದ ಹೊಣೆ ಅವನದಾಗಿತ್ತು. ಪ್ರಭುದೇವರನ್ನೂ ಸಹ ಒಂದು ಪ್ರಸಂಗದಲ್ಲಿ ಸಮಾಧಾನ ಮಾಡಿದ ಸುಯಿಧಾನಿ ಅಪ್ಪಣ್ಣ. ಆತನ ೨೨೩ ವಚನಗಳು ಉಪಲಬ್ಧವಾಗಿವೆ. ಆತನ ವಚನಗಳ ಅಂಕಿತ ಬಸವಪ್ರಿಯ ಕೂಡಲ ಚನ್ನಬಸವಣ್ಣ. ಈ ಆಧಾರದ ಮೇಲೆ ಅಪ್ಪಣ್ಣನು ಬಸವಣ್ಣ ಮತ್ತು ಚೆನ್ನಬಸವಣ್ಣನವರನ್ನು ಗುರುಸ್ಥಾನದಲ್ಲಿಟ್ಟುಕೊಂಡು ತನ್ನ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿರಲು ಸಾಕು. ಈ ವಚನಗಳಲ್ಲಿ ವೀರಶೈವರ ಆತ್ಮವಾಗಿರುವ ಷಟ್‌ಸ್ಥಲಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವುಗಳ ಬಗೆಗೆ ಸಮರ್ಪಕವಾದ ತರ್ಕಬದ್ಧವಾದ ವಿವೇಚನೆ ಇದೆ. ಉದಾಹರಣೆಗೆ ಒಂದು ವಚನವನ್ನು ಅವಲೋಕಿಸಬಹುದು.

"ಹಸನ ಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳನಂತೆ. ವಿಷಯ ಸುಖಂಗಳಿಗೆ ಹುಸಿಯನೇ ನುಡಿದು ಗಸಣಿಗೊಳಗಾಗುವ ಮನುಜರೆತ್ತ ಬಲ್ಲರೊ ಆ ಮಹಾ ಗುರುವಿನ ನೆಲೆಯ ? ಮರಣ ಬಾಧೆಗೊಳಗಾದವರು ನಿಮ್ಮನೆತ್ತ ಬಲ್ಲರು ಬಸವಪ್ರಿಯ ಕೂಡಲಚೆನ್ನಬಸವಣ್ಣ." ಶರಣಲೀಲಾಮೃತ, ಅಮಲಬಸವಪುರಾಣ (ಸಿಂಗಿರಾಜ ಪುರಾಣ), ಗುರುರಾಜಚರಿತ್ರ, ಶೂನ್ಯಸಂಪಾದನೆ ಮೊದಲಾದ

ವೀರಶೈವ ಕಾವ್ಯಪುರಾಣಗಳಲ್ಲಿ ಅಪ್ಪಣ್ಣನವರ ವಿಷಯವಾಗಿ ಅನೇಕ ಮಹತ್ವದ ಉಲ್ಲೇಖಗಳಿವೆ. ಈ ಮಹಾನುಭಾವರ ಧರ್ಮಾಂಗನೆ ಲಿಂಗಮ್ಮನೂ ೧೧೩ ಬೋಧಪ್ರದ, ತಾತ್ವಿಕ, ಮನೋಜ್ಞ ವಚನಗಳನ್ನು ಬರೆದಿದ್ದಾಳೆ. ಇಂದಿನ ಸಂದಿಗ್ಧ ಸಂದರ್ಭದಲ್ಲಿ ಅವುಗಳ ಅವಲೋಕನ 'ಮಾಡುವುದು ಅತ್ಯಾವಶ್ಯವಾಗಿದೆ. ಈ ವಚನಗಳು ಕನ್ನಡಸಾಹಿತ್ಯದಲ್ಲಿ ಉನ್ನತಸ್ಥಾನ ಪಡೆದಿವೆ. ತಮ್ಮ ಅನುಭಾವದ ನವನೀತವನ್ನು ಈ ವಚನಗಳ ಮೂಲಕ ಕನ್ನಡಿಗರಿಗೆ ಉಣಬಡಿಸಿದ್ದಾಳೆ. ಈ ವಚನಗಳಲ್ಲಿ ಕಂಪಿದೆ; ತಂಪಿದೆ; ತತ್ತ್ವಗಳ ಸೌಗಂಧವಿದೆ. ಉಪಮೆ ರೂಪಕಗಳಿಂದ ಸಹಜವಾದ ದೇಸೀಯ ಆಡುನುಡಿಯ ಬಳಿಕೆಯಿಂದ ಈ ವಚನಗಳಿಗೆ ವಿಶಿಷ್ಟ ಶಕ್ತಿ ಬಂದಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಸುಂದರ ಬಂಧುರ ಸಮುಚಿತ ಉಕ್ತಿಗಳಿಂದ ಎಲ್ಲರ ಮನಮುಟ್ಟುವಂತೆ ಮನೋಹರವಾಗಿ ಬಿತ್ತರಿಸುವ ಈ ವಚನಗಳು ವೈಶಿಷ್ಟ್ಯಪೂರ್ಣವಾಗಿವೆ: ವೈವಿಧ್ಯಮಯವಾಗಿವೆ. ಈಕೆಯ ವಚನಗಳಿಗೆ ಬೋಧೆಯ ವಚನಗಳೆಂದು ಕರೆಯಲಾಗಿದೆ, ಹಾಗೆಯೇ ಮಂತ್ರಗೋಪ್ಯ, ಸ್ವರವಚನಗಳನ್ನು ರೂಪಿಸಿದ ಹಿರಿಮೆ ಲಿಂಗಮ್ಮನದಾಗಿದೆ. ಆದರೆ ತಾನು ಬಲ್ಲವಳೆಂಬ ಅಹಂಕಾರ ಎಳ್ಳಷ್ಟೂ ಇಲ್ಲ. ಅಲ್ಲಲ್ಲಿ ಕೋಲ್ಮಿಂಚಿನಂತೆ ಸಾತ್ವಿಕಸಂತಾಪ ವ್ಯಕ್ತಪಡಿಸಿದ್ದಾಳೆ. ಈಕೆಯ ವಚನಗಳ ಅಂಕಿತ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವಂತೆ ಹಡಪದ ಅಪ್ಪಣ್ಣ ಲಿಂಗಮ್ಮನವರದು ಅನನ್ಯ ಸದೃಶವಾದ ಅನುಪಮ ದಾಂಪತ್ಯ ಜೋಡಿ. ಉಭಯಂತರು ತಮ್ಮ ಅಪಾರ ಅನುಭವ ಅಮೃತವನ್ನು ವಚನಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಅನುಭವಮಂಟಪ ಕೀರ್ತಿಪತಾಕೆಯನ್ನು ಜಗದಗಲ ಮಿಗೆಯಗಲವಾಗಿ ಹಾರಾಡಿಸಿದ್ದಾರೆ. ಲಿಂಗಮ್ಮನ ಗುರು ಚೆನ್ನಮಲ್ಲೇಶ. ಈ ಮಾತಿಗೆ ಆಕೆಯ ವಚನವೇ ನಿದರ್ಶನ. ಇಲ್ಲಿ ಅವಳ ಸಂಸ್ಕೃತಿಯ ಸೌರಭ ಸೂಸಿದೆ.

ಬಸವೇಶ್ವರ ಚೆನ್ನಬಸವೇಶ್ವರ ಮಡಿವಾಳಯ್ಯ ಅಲ್ಲಮಪ್ರಭು
ಚೆನ್ನಮಲ್ಲೇಶ್ವರ ಹಡಪದಪ್ಪಣ್ಣ
ತಮ್ಮೆಲ್ಲರ ತೊತ್ತಿನ ತೊತ್ತಿನ ಪಡಿದೊತ್ತಿನ ಮಗಳೆಂದು ಹೊತ್ತು
ಹೊತ್ತಿಗೆ ಎಚ್ಚರವ ಪಾಲಿಸಿ ರಕ್ಷಣೆ ಮಾಡಿದ ಕಾರಣದಿಂದ
ತಮ್ಮೆಲ್ಲರ ಶ್ರೀಪಾದದಲ್ಲಿಯೇ ನಿಜಮುಕ್ತಳಾದೆನಯ್ಯ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ ॥

ಚೆನ್ನಬಸವನ ಕರುಣೆಯ ಶಿಶುವಾಗಿ ಸುಳಿದೆಗೆದು ಬೆಳೆದ ಲಿಂಗಮ್ಮ ಅನುಪಮ ಅನುಭಾವಿ. ಚೆನ್ನಬಸವಣ್ಣನೆಂದರೆ ಲಿಂಗಮ್ಮ ಅಪ್ಪಣ್ಣ ಉಭಯಂತರಿಗೂ ಜೀವಜೀವಾಳ. ಆದುದರಿಂದ ಲಿಂಗಮ್ಮ ಚೆನ್ನಬಸವಣ್ಣನವರ ಹೆಸರನ್ನು ಅಂಕಿತ ಮಾಡಿಕೊಂಡರೆ ಅಪ್ಪಣ್ಣ ಚೆನ್ನಬಸವಣ್ಣನ ಅಂಕಿತವನ್ನೇ ತನ್ನ ವಚನಗಳ ಅಂಕಿತವನ್ನಾಗಿ

ಮಾಡಿಕೊಂಡಿದ್ದಾನೆ. ಪುಷ್ಪವನ್ನಪ್ಪಿದ ಪರಿಮಳದಂತೆ ಗಂಡನ ಹೆಸರನ್ನು ಅಂಕಿತದಲ್ಲಿ ಮೇಳೈಸಿಕೊಂಡಿದ್ದಾಳೆ. ಅದೇ "ಅಪ್ಪಣ್ಣಪ್ರಿಯ ಚೆನ್ನಬಸವಣ್ಣ". ಷಟ್‌ಸ್ಥಳ ಚಕ್ರವರ್ತಿ, ಮಹಾಜ್ಞಾನಿ ಚೆನ್ನಬಸವಣ್ಣನವರ ಪ್ರಭಾವ ದಂಪತಿಗಳ ಮೇಲೆ ದಟ್ಟವಾಗಿ ಆವರಿಸಿದೆ. ತನ್ನ ಜೀವನವಿಕಾಸ ಅಂತರಂಗದ ಬೆಳವಣಿಗೆಯನ್ನು ವಿಸ್ತಾರವಾಗಿ ವಿವರಿಸಿದ ಈ ವಚನ ಮಹತ್ವದ್ದಾಗಿದೆ.

ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ, ಸತ್ಯ ಶರಣರ ಪಾದಪಿಡಿದೆ.
ಆ ಶರಣರ ಪಾದಪಿಡಿದು ಗುರುವ ಕಂಡೆ. ಪ್ರಸಾದವ ಕಂಡೆ
ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತು.
ಕಂಗಳ ಮುಂದಣ ಕತ್ತಲೆ ಹರಿಯಲೊಡನೆ
ಮಂಗಳದ ಮಹಾ ಬೆಳಗಿನೊಳಗೋಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ ॥

ಇನ್ನೊಂದು ವಚನವನ್ನು ಇಲ್ಲಿ ಉಲ್ಲೇಖಿಸಬಹುದು :

ಏನೇನು ಇಲ್ಲದಾಗ ನೀವಿಲ್ಲದಿದ್ದಡೆ ನಾನಾಗಬಲ್ಲನೆ ಅಯ್ಯಾ ?
ಆದಿ ಅನಾದಿ ಇಲ್ಲದಂದು ನೀವಿಲ್ಲದಿದ್ದಡೆ ನಾನಾಗಬಲ್ಲೆನೆ ಅಯ್ಯಾ ?
ಮುಳುಗಿ ಹೋದವಳ ತೆಗೆದುಕೊಂಡು
ನಿಮ್ಮ ತೊತ್ತಿನ ತೊತ್ತಿನ ಪಡಿದೊತ್ತಿನ ಮಗಳೆಂದು ರಕ್ಷಣೆಯ ಮಾಡಿದ
ಶಿಶುವಾದ ಕಾರಣ ಹಡಪದಪ್ಪಣನೆ ಎನ್ನ ಕರಸ್ಥಳಕ್ಕೆ ಲಿಂಗವಾಗಿ ಬಂದು
ನೆಲೆಗೊಂಡನು ಚೆನ್ನಮಲ್ಲೇಶ್ವರ ಎನ್ನ ಮನಸ್ಥಳಕ್ಕೆ ಲಿಂಗವಾಗಿ ಬಂದು
ಮೂರ್ತಗೊಂಡನು.
ಈ ಕರಸ್ಥಳದ ಲಿಂಗವನರ್ಚಿಸಿ ಪೂಜಿಸಿ ವರವ ಬೇಡಿದರೆ ತನುವ ತೋರಿದನು.
ಆ ತನುವಿಡಿದು ಮಹಾಘನವ ಕಂಡೆ.
ಆ ಘನವಿಡಿದು ಮನವ ನಿಲಿಸಿದೆ.
... ... ॥

ಹೀಗೆ ವಿಸ್ತಾರವಾಗಿ ತನ್ನ ಬಾಳಿನ ಉತ್ತಮಿಕೆಯನ್ನು ತೋರಿಸಿದ್ದಾಳೆ.

ಆಕೆಯ ಧೈರ್ಯವೂ ಅಭೂತಪೂರ್ವ ನಿಜವಾದ ವೀರಶೈವ. ಇಂದಿಗೂ ಅನುಕರಣೀಯ ವಿಚಾರಗಳಿಗೆ ಪ್ರಚೋದನೆ ನೀಡುತ್ತದೆ ಈ ವಚನ :

ನರರ ಬೇಡೆನು ಸುರರ ಹಾಡೆನು
ಕರಣಂಗಳ ಹರಿಯ ಬಿಡೆನು
ಕಾಮನ ಬಲೆಗೆ ಸಿಲ್ಕೆನು
ಮರೆವೆಗೊಳಗಾಗೆನು

ಪ್ರಣವ ಪಂಚಾಕ್ಷರಿ ಜಪಿಸಿಹೆನೆಂದು
ತನುವ ಮರೆದು ನಿಜಮುಕ್ತಳಾದೆನಯ್ಯಾ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ
ಸಾಕಯ್ಯ ಲೋಕದ ಹಂಗು ಹರಿದಿತ್ತು ॥

ಬಸವಾದಿ ಪ್ರಮಥರ ಸಮಕಾಲೀನಳಾಗಿ ಬೆಳಗಿದ ಲಿಂಗಮ್ಮ ಅನುಪಮ ಅನುಭಾವಿ. ಲೋಕಾನುಭವವನ್ನೇ ಶಿವಾನುಭವವನ್ನಾಗಿ ಮಾರ್ಪಡಿಸಿದ ಅವರ ವಚನಗಳು ನಿತ್ಯಸತ್ಯ ತತ್ತ್ವಗಳನ್ನು ಎತ್ತಿ ಹಿಡಿದಿವೆ, ಇಂದಿಗೂ ಮಾನವನ ಬಾಳಿಗೆ ಬೆಳಕು ನೀಡುವ ಶಕ್ತಿಯನ್ನು ಪಡೆದಿವೆ. ಈ ವಚನಗಳನ್ನು ಅವಲೋಕಿಸಿದರೆ ಒಂದು ಮಾತು ಸೂರ್ಯ ಪ್ರಕಾಶದಷ್ಟು ಸ್ಪಷ್ಟ. ಅದೆಂದರೆ, ಎಂತಹ ಕನಿಷ್ಟ ಹೀನಕುಲದಲ್ಲಿ ಜನ್ಮವೆತ್ತಿದರೂ ಮನಸ್ಸು ಮಾಡಿದರೆ, ದೃಢನಿರ್ಧಾರ ಕೈಕೊಂಡರೆ ಎಂತಹ ಉನ್ನತಸ್ಥಿತಿಗೆ ಮುಟ್ಟ ಬಹುದೆಂಬುದಕ್ಕೆ ಲಿಂಗಮ್ಮನೇ ನಮಗೆ ಜ್ವಲಂತ ನಿದರ್ಶನವೆಂದು ಹೇಳಬಹುದು, ಬಸವಾದಿ ಪ್ರಮಥ ಪುಂಗವರು ಸ್ಥಾಪಿಸಿದ ಅನುಭವಮಂಟಪದ ಚಿಂತನಮಂಥನದಲ್ಲಿ ಕ್ರಿಯಾಶೀಲ ಪಾತ್ರವಹಿಸಿದ್ದಾಳೆ ಲಿಂಗಮ್ಮ. ಮಹಾಯೋಗಿ ಅಲ್ಲಮಪ್ರಭುದೇವರ ದಿವ್ಯಸನ್ನಿಧಿಯಲ್ಲಿ ನಡೆದ ಶಿವಾನುಭವಗೋಷ್ಠಿಯ ಅಪಾರ ಅನುಭವದ ಅಮೃತ ಪರಿಪಕ್ವವನ್ನು ಮನವಾರೆ ಸವಿದಿದ್ದಾಳೆ. ತನ್ನ ಬಾಳಿನ ಗುರಿನಿರಿಗಳನ್ನು ನಿರ್ಧರಿಸಿದ್ದಾಳೆ. ತನಗ ಬಂದ ಅನುಭವಗಳನ್ನು ವಚನಗಳಲ್ಲಿ ನಿರ್ಭೀತಿಯಿಂದ ನಿವೇದಿಸಿದ್ದಾಳೆ. ಅನೇಕ ಸಂದೇಹ ಸಂದೋಹಗಳನ್ನು ಪರಿಹರಿಸಿದ್ದಾಳೆ, "ಮಹಾ ಜ್ಯೋತಿಯ ಬೆಳಗಿನಲ್ಲಿ ಓಲಾಡುವ ಶರಣರು ಪವಿತ್ರ ಚರಿತ್ರೆಯನ್ನು ಆಸೆ ರೋಷ ಪಾಶಕ್ಕೊಳಗಾದ ಈ ಜಗದ ಹೇಡಿಗಳೆತ್ತ ಬಲ್ಲರು ? ಎಂದು ಅಂದೇ ಪ್ರಶ್ನಿಸಿದ್ದಾಳೆ. ದಾರುಣ ದುರಂತವೆಂದರೆ ಇಂದು ಲಿಂಗಮ್ಮನ ಪ್ರಶ್ನೆಯನ್ನೇ ಕೆದಕಿ ಬದುಕುವ ಸಾಹಸಕ್ಕೆ ಇಳಿದಿದ್ದಾರೆ. ಶರಣರ ಉದಾತ್ತ ಬದುಕನ್ನು ಪ್ರಶ್ನಿಸಿದ್ದಾರೆ. 'ಘನವ ಕಾಂಬುದಕ್ಕೆ ಮನವೆಂತಾಗಬೇಕೆಂದರೆ ಅಕ್ಕಿಯ ಥಳಿಸಿದಂತೆ, ಹಲ್ಲ ಸುಲಿದಂತೆ, ಕನ್ನಡಿಯ ನೋಡಿದಂತೆ ಮನ ನಿರ್ಮಲವಾದುದಲ್ಲದೆ ಘನವ ಕಾಣಬಾರದು' ಎಂದಿದ್ದಾಳೆ ಲಿಂಗಮ್ಮ. ತಮ್ಮಲ್ಲಿಯೇ ಆಶೆರೋಷಗಳನ್ನು ಇಟ್ಟುಕೊಂಡು ಮಾಡಬಾರದ ಕಾರ್ಯವನ್ನು ಮಾಡುತ್ತ ಬಸವಣ್ಣನವರ ವಚನದಂತೆ ಮನದಲ್ಲಿ ರಜ ತುಂಬಿ ಮನೆಯಲ್ಲಿ ಹೊಲಸ ತುಂಬಿದ ಈ ಜನ ಶರಣೆಯರ ಚರಿತ್ರವನ್ನು ಕುರಿತು ವಿಶ್ಲೇಷಣೆ ಮಾಡುವ ಹಕ್ಕೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಶರಣೆಯರ ವಚನಗಳಲ್ಲಿಯ ಆಧ್ಯಾತ್ಮಿಕ ಕೆಚ್ಚು, ತಾತ್ವಿಕ ಜಿಜ್ಞಾಸೆ, ಯೋಗದ ಔನ್ನತ್ಯಗಳನ್ನು ಅರ್ಥೈಸುವ ಮಹಾಮಣಿಹ ನಮ್ಮ ಮುಂದಿದೆ. ಈ ಬಗೆಗೆ ಮಾಡಬೇಕಾದ ಕಾರ್ಯ ಬೆಟ್ಟದಷ್ಟು ಒಟ್ಟಿನಿಂತಿದೆ. ಅನೇಕ ಶಿವಶರಣೆಯರ ಬಗೆಗೆ ನಮ್ಮವರಿಗೆ ಹೆಚ್ಚಿನ ತಿಳಿವಳಿಕೆಯೇ ಇಲ್ಲ. ಈ ಬಗೆಗೆ ನಾವೇನು ಮಾಡಿದ್ದೇವೆ ಎಂಬುದನ್ನು ಪ್ರಶ್ನಿಸಬೇಕಾಗಿದೆ; ಆದುದರಿಂದ ಲಿಂಗಮ್ಮನ ವಚನವೇ ನಮಗೆ ಗತಿ–ಮತಿ. ಈ ವಚನ ನೋಡಿ :

ಆಸೆಯುಳ್ಳಕ್ಕ ರೋಷ ಬಿಡದು,
ಕಾಮವುಳ್ಳನ್ನಕ್ಕ ಕಳವಳ ಬಿಡದು,
ಕಾಯವುಳ್ಳನ್ನಕ್ಕ ಜೀವನ ಬುದ್ಧಿ ಬಿಡದು,
ಭಾವವುಳ್ಳನ್ನಕ್ಕ ಬಯಕೆ ಸವೆಯದು.
ನಡೆಯುಳ್ಳನ್ನಕ್ಕ ನುಡಿಗೆಡದು ॥

ಆಸೆ, ಕಾಮ, ಕಾಯಗುಣ, ಭಾವ, ನಡೆ ಇವೆಲ್ಲವೂ ಅಳಿಯದೆ ಶಿವಾನುಭವ ಅಳವಡದು, ಆತ್ಮಸಾಕ್ಷಾತ್ಕಾರ ದೂರದ ಮಾತು ಎಂದು ಸ್ಪಷ್ಟವಾಗಿ ತಿಳಿಸಿದ್ದಾಳೆ. ಒಡಕು ಮಡಕೆಯಂತೆ ಒಡೆದು ಹೋಗುವ ಹಡಿಕೆ ಕಾಯವನ್ನು ಮೆಚ್ಚದೆ ಶಿವಶರಣರನ್ನು ನಂಬಿ ನೆಚ್ಚಬೇಕು. ಸಂದೇಹವಳಿದು ಅವರ ಮೊರೆಹೊಕ್ಕರೆ ಸಂದು ಸಂಶಯವಳಿದು ಲಿಂಗವಾಗಬಹುದೆಂದು ಲಿಂಗಮ್ಮನವರು ಬೋಧಿಸಿದ್ದಾರೆ. ಆದ್ದರಿಂದಲೇ ಲಿಂಗಮ್ಮನವರ ವಚನಗಳನ್ನು ಬೋಧೆಯ ವಚನಗಳೆಂದು ಅತ್ಯಂತ ಆದರಾಭಿಮಾನದಿಂದ ಕರೆಯಲಾಗುತ್ತಿದೆ. ಕನ್ನಡ ವಚನಸಾಹಿತ್ಯದ ಇತಿಹಾಸದಲ್ಲಿ ಲಿಂಗಮ್ಮನವರ ವಚನಗಳು ತನ್ನದೇ ಆದ ಸ್ಥಾನವನ್ನು ಪಡೆದಿದೆ. ಭಾಷೆಯಂತೂ ಬಹುಸರಳ. ಆಡುಭಾಷೆಯ ಮಾತುಗಳನ್ನು ವಿಪುಲವಾಗಿ ಬಳಸಿದ್ದಾರೆ. ಅಕ್ಕ ಮಹಾದೇವಿ, ಮುಕ್ತಾಯಕ್ಕ, ರಾಯಮ್ಮ ಮೊದಲಾದವರ ವಚನಗಳು ಒಂದು ಬಗೆಯಾದರೆ, ಲಿಂಗಮ್ಮ, ಸತ್ಯಕ್ಕ, ಕಾಳವ್ವೆಯವರ ವಚನಗಳು ಇನ್ನೊಂದು ರೀತಿಯಲ್ಲಿ ಮೂಡಿಬಂದಿವೆ. ಜನಸಾಮಾನ್ಯರ ಪ್ರತಿನಿಧಿಯಾಗಿ ಲಿಂಗಮ್ಮ ನಮ್ಮ ಮುಂದೆ ನಿಂತಿದ್ದಾಳೆ. ತಮ್ಮ ಅನುಭವವನ್ನು ಉಪಮೆ, ರೂಪಕಗಳಿಂದ ಸುಂದರವಾದ ಉಕ್ತಿಗಳಿಂದ ಮನಮುಟ್ಟುವಂತ ಪ್ರಜ್ಞಾವಂತರು ಒಪ್ಪುವಂತೆ ಬಿಚ್ಚಿಟ್ಟಿದ್ದಾಳೆ. ಮಾದರಿಗಾಗಿ ಇಲ್ಲೊಂದು ಬೆಡಗಿನ ವಚನವನ್ನು ಉಲ್ಲೇಖಿಸಲಾಗಿದೆ.

ನಾನೊಂದು ಹಾಳೂರಿಗೆ ಹೋಗುತ್ತಿರಲು
ಆ ಹಾಳೂರ ಹೊಕ್ಕಡೆ
ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು.
ಹುಲಿ ಕರಡಿ ಅಡ್ಡಲಾದವು.
ಇವ ಕಂಡು ನಾ ಹೆದರಿಕೊಂಡು
ನನ್ನ ಕೈಗೊಂದು ಕಲ್ಲು ತಕ್ಕೊಂಡು
ನೋಡುತ್ತ ಬರುತ್ತಿರಲು
ಆ ನಾಯಿಗಳು ಓಡಿಹೋದವು.
ಹುಲಿ ಕರಡಿಗಳು ಅಲ್ಲಿಯೇ ಬಯಲಾದವು.
ಆ ಊರು ನಿರ್ಮಲವಾಯಿತ್ತು.
ಆ ನಿರ್ಮಲವಾದ ಊರು ಹೊಕ್ಕು ನೋಡಲು

ಆ ನೋಡುವ ನೋಟವು, ಆ ಊರನಾಳುವ ಅರಸು
ಆ ಊರ ಕೂಡಿ ಒಂದಾದವು.
ಆ ಒಂದಾದುದನೆ ನೋಡಿ ದ್ವಂದ್ವವನೆ ಹರಿದು
ನಿಮ್ಮ ಸಂಗಸುಖದೊಳಗೋಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ ॥

ಇಲ್ಲಿ ಮನದ ನಿರ್ಮಲತೆಯನ್ನು ಮಾರ್ಮಿಕವಾಗಿ ನಿರೂಪಿಸಲಾಗಿದೆ.

ಹಾಳೂರು ಎಂದರೆ ದೇಹ, ನಾಯಿ, ಹುಲಿ, ಕರಡಿ ಇವು ಅರಿವರ್ಗಗಳು, ಅಷ್ಟಮದಗಳು. ಇವುಗಳಿಂದ ದೂರವಿದ್ದರೆ ಮಾತ್ರ ಲಿಂಗದೇವನ ಅರಿವು ಮೂಡುತ್ತದೆ. ನರನು ಹರನಾಗುತ್ತಾನೆ, ಜೀವಭಾವ ಹೋಗಿ ಶಿವಭಾವ ಅರಳುತ್ತದೆ. ಮಾನವನು ದೇವಮಾನವನಾಗುತ್ತಾನೆ. ಈ ದಿಸೆಯಲ್ಲಿ ಈ ವಚನಗಳನ್ನು ಅವಶ್ಯವಾಗಿ ಅವಲೋಕಿಸಬೇಕಾಗಿದೆ. ಈ ಬಗೆಯ ಶ್ರೇಷ್ಠ ಭಾವನೆಗಳಿಂದ ತುಂಬಿದವಳಾದ ಲಿಂಗಮ್ಮನ ಅನುಭಾವ ಇಲ್ಲಿ ಹೆಪ್ಪುಗಟ್ಟಿದೆ, ಮಡುಗಟ್ಟಿದೆ. ನೋಡಿ ಈ ವಚನವನ್ನು :

ನೋಡುವೆನೆಂದಡೆ ನೋಟವಿಲ್ಲ,
ಕೇಳುವೆನೆಂದಡೆ ಕಿವಿಯಿಲ್ಲ,
ವಾ (ಮೂ) ಸಿಸುವೆನೆಂದಡೆ ನಾಸಿಕವಿಲ್ಲ,
ನುಡಿವೆನೆಂದಡೆ ಬಾಯಿಯಿಲ್ಲ,
ಹಿಡಿವೆನೆಂದರೆ ಹಸ್ತವಿಲ್ಲ,
ನಡೆವೆನೆಂದರೆ ಕಾಲಿಲ್ಲ,
ನೆನೆವೆನೆಂದಡೆ ಮನವಿಲ್ಲ,
ಇಂತು ನೆನಹು ನಿಷ್ಪತ್ತಿಯಾಗಿ
ಶರಣರ ಪಾದದಲ್ಲಿಯೇ ಬೆರೆದು ಸುಖಿದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ ॥

ಈ ಬಗೆಯ ಹೃದಯಂಗಮ ಸುಂದರ ಭಾವತುಂಬಿದ ವಚನಗಳನ್ನು ಅಭ್ಯಾಸ ಮಾಡುವ, ಮನನ ಮಾಡುವ ಪ್ರವೃತ್ತಿ ನಮ್ಮ ಜನರಲ್ಲಿ ಒಡಮೂಡಬೇಕಾಗಿದೆ. ಮಠಮಾನ್ಯಗಳ ಅಧಿಪತಿಗಳು ಈ ಕಡೆಗೆ ಗಮನಕೊಡಬೇಕಾದುದು ಅತ್ಯವಶ್ಯ. ಇಂದಿನ ಎಲ್ಲ ಸಮಸ್ಯೆಗಳಿಗೆ ತಾರಕಮಂತ್ರವೆಂದರೆ ವಚನಗಳ ಪರಿಪಾಲನೆಯೇ ಆಗಿದೆ. ಪ್ರತಿಯೊಂದು ಮಠದಲ್ಲಿ ವಚನ ಪಾಠಶಾಲೆ ಪ್ರಾರಂಭಿಸಬೇಕು. ದಿನನಿತ್ಯ ಶಿವಾನುಭವ ನಡೆಯಬೇಕು. ಇದೇ ನಮಗುಳಿದ ದಾರಿ, ಸರಿಯಾದ ದಾರಿ. ಈ ದಾರಿಯನ್ನು ಹಿಡಿಯುವದರಲ್ಲಿಯೇ ನಮ್ಮ ಧರ್ಮದ ರಕ್ಷಣೆ ಇದೆ, ಪೋಷಣೆ ಇದೆ.

ಶರಣೆಯರ ದೃಷ್ಟಿಯಲ್ಲಿ ಸಂಸಾರ



● ಶ್ರೀಮತಿ ಸುಲೋಚನಾ ಸಂ. ಮುಟ್ಟೆ

ಪ್ರಪಂಚದಿಂದ ಪಾರಮಾರ್ಥ ಸಾಧನೆ ಅಸಾಧ್ಯ. ಸಂಸಾರವನ್ನು ತ್ಯಾಜ್ಯ ಮಾಡಿ ಮುಕ್ತಿ ಪಡೆಯಬಹುದೆಂಬುದು ಕೆಲವರ ಅಭಿಮತವಾದರೆ, ಶಿವಶರಣರು ಮುಕ್ತಿಗಾಗಿ ಸಂಸಾರವನ್ನೇ ಸೋಪಾನವನ್ನಾಗಿ ಮಾಡಿಕೊಂಡರು.

"ಅರಿತು ನಡೆದರೆ ಸಂಸಾರ ಬಂಧನವಾಗದು". ಆಸೆ-ಆಮಿಷಗಳಿಗೆ ಬಲಿಯಾಗಿ ಮೋಹಮಾಯೆಗೆ ಹೆದರಿ ಓಡುವದಕ್ಕಿಂತ ಸಂಸಾರದಲ್ಲಿದ್ದೇ ಅವುಗಳನ್ನು ಗೆಲ್ಲುವುದು ಶರಣರ ಬಾಳ ಗುರಿಯಾಗಿತ್ತು". "ಹೆಣ್ಣು ಮಾಯೆಯಲ್ಲ, ಹೆಣ್ಣನ್ನು ನೋಡುವ ಕಣ್ಣಿನಲ್ಲಿ ಮಾಯೆ ಅಡಗಿದೆ"— ಎಂದು ಶರಣರು ಒತ್ತಿ ಒತ್ತಿ ಹೇಳಿದರು. ಜೀವನದಲ್ಲಿ ಗಂಡು ಒಂದು ಕಣ್ಣಾದರೆ. ಹೆಣ್ಣು ಇನ್ನೊಂದು ಕಣ್ಣು. 'ಹೆಣ್ಣು ಮುಕ್ತಿಯ ಹಾದಿಯಲ್ಲಿ ವಿಘ್ನವಲ್ಲ, ಕತ್ತಲೆಯಲ್ಲಿ ದಾರಿತೋರುವ ಬೆಳಕು' ಎಂದು ಬಸವಣ್ಣನವರು ಸ್ತ್ರೀಕುಲವನ್ನೇ ಎತ್ತಿಹಿಡಿದು, ಧಾರ್ಮಿಕ ಸ್ವಾತಂತ್ರ್ಯ. ವಾಕ್ ಸ್ವಾತಂತ್ರ್ಯ ಮೊದಲಾದ ರಂಗಗಳಲ್ಲಿ ಸರಿಸಮಾನತೆಯನ್ನು ತಂದುಕೊಟ್ಟ ಪರಿಣಾಮವಾಗಿಯೇ ಅಂದು ಸಾಕಷ್ಟು ಶರಣೆಯರು ಮುಂದಾಗಿ ಧಾರ್ಮಿಕರಂಗದಲ್ಲಿ ಪುರುಷನಷ್ಟೇ ಸ್ಥಾನ ಪಡೆದು, ವಚನ ರಚನೆ ಮಾಡಿದರಲ್ಲದೇ ಪತಿಯ ಇಚ್ಛೆಯನ್ನರಿವ ಆದರ್ಶ ಸತಿಯರಾಗಿ, ಮಮತೆಯ ಮಾತೆಯರಾಗಿ ಸಂಸಾರದಲ್ಲಿದ್ದು ಸದ್ಗತಿಯನ್ನು ಪಡೆದರು.

ಬಸವಣ್ಣನವರ ಧರ್ಮಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರು ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿ, ಅನುಭವಪೂರ್ಣವಾದ ಆಚಾರ-ವಿಚಾರಗಳನ್ನು ಅರಿತು ಪ್ರತಿಯೊಂದು ಕಾರ್ಯಕ್ಕೂ ಪ್ರೇರಕಶಕ್ತಿಯರಾಗಿ. ಬಸವಣ್ಣನವರ ಮನೆ, ಮಹಾಮನೆಯಾಗಲು ತಮ್ಮ ಜೀವನವನ್ನು ಗಂಧದ ಕೊರಡಿನಂತೆ ಸವೆಯಿಸಿ, ಬಾಳಿಗೆ ಬೆಳಕನ್ನು ಕಂಡುಕೊಂಡರು.

ಬಸವನ ಅನುಭವದಿಂದ ವಿವರವ ಕಂಡು
ವಿಚಾರ ಪತ್ನಿಯಾದೆನಯ್ಯಾ ಸಂಗಯ್ಯಾ ॥

ಎಂದು ವೈಚಾರಿಕ ಪ್ರಜ್ಞೆಯನ್ನು ಅರಳಿಸಿಕೊಂಡ ಪರಮಜ್ಞಾನಿ ನೀಲಮ್ಮನವರು ಹೇಳುವ ಒಂದು ವಚನವನ್ನು ಇಲ್ಲಿ ನೋಡಬಹುದು :

ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯ ಕುಳವ ಪರಿದು ಬಸವಂಗೆ ಶಿಶುವಾನಾದೆನು;
ಬಸವನೆನ್ನ ಶಿಶುವಾದನು
ಪ್ರಮಥರು. ಪುರಾತನರು ಸಾಕ್ಷಿಯಾಗಿ ಸಂಗಯ್ಯನಿಕ್ಕಿದ
ದಿವ್ಯವ ಮೀರದೆ ಬಸವನೊಳಗಾನಡಗಿದೆ ॥

ಸತಿ–ಪತಿ ಭಾವವನ್ನು ದಾಟಿ ನಿಂತು ಆತ್ಮೋನ್ನತಿಯನ್ನು ಸಂಸಾರದಲ್ಲಿದ್ದೇ ಪಡೆದ ಪುಣ್ಯಜೀವಿ.

ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ
ದಂಪತಿ ಏಕಭಾವವಾಗಿ ನಿಂದಲ್ಲಿ
ಗುಹೇಶ್ವರಲಿಂಗಕ್ಕೆ ಅರ್ಪಿತವಾಗಿತ್ತು ॥

ಅಲ್ಲಮಪ್ರಭುದೇವರು ಬಸವಣ್ಣನವರ ದಾಂಪತ್ಯಜೀವನವನ್ನು ಕಂಡೇ ಹಾಡಿ ಕೊಂಡಿರಬೇಕೆಂದೆನಿಸುತ್ತದೆ.

ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ,
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥಾ ॥

ದೇವರದಾಸಿಮಯ್ಯನವರ ವಚನವನ್ನು ಓದಿದಾಗ ಬಸವದಂಪತಿಗಳ ಅನ್ಯೋನ್ಯ ದಾಂಪತ್ಯ ಜೀವನದ ನೆನಪಾಗದೇ ಇರದು.

"ಸಂಸಾರದಲ್ಲಿ ಪ್ರೇಮಕ್ಕೆ ಸುವಿಚಾರ ಜೋಡು ಅವಶ್ಯ". ಸುವಿಚಾರವಿಲ್ಲದ ಪ್ರೇಮದಿಂದಾಗಲಿ, ಪ್ರೇಮವಿಲ್ಲದ ಸುವಿಚಾರದಿಂದಾಗಲಿ, ಸುಖ ದೊರೆಯದು. ಪ್ರೇಮದಿಂದ ಮನಸ್ಸಿನಲ್ಲಿ ಸದಿಚ್ಛೆಗಳು ಅಂಕುರಿಸುತ್ತವೆ. ಆದುದರಿಂದಲೇ "ಸಂಸಾರದಿಂದಲೇ ಸದ್ಗತಿಯುಂಟು—ಕೇಳ್ಮಗನೆ" ಎಂದು ಬಾಲಲೀಲಾ ಮಹಾಂತ ಶಿವಯೋಗಿಗಳು ಸುವಿಚಾರಿಗಳಾದ ಬಸವದಂಪತಿಗಳ ದಾಂಪತ್ಯಜೀವನ ಹಾಗೂ ಧಾರ್ಮಿಕಜೀವನ ಅರಿತೇ ಈ ಮಾತನ್ನು ಎತ್ತಿ ಹಿಡಿದು ಕೈವಲ್ಯದರ್ಪಣದಲ್ಲಿ ಬಿಂಬಿಸಿದರೆಂದು ಹೇಳಬಹುದು.

ಬಸವಣ್ಣನವರ ಅಕ್ಕ ಮಹಾಮಾತೆ ಅಕ್ಕನಾಗಮ್ಮ. ಶಿವದೇವನ ಸತಿಯಾಗಿ, ಚೆನ್ನಬಸವಣ್ಣನ ಮಾತೆಯಾಗಿ, ಪ್ರಪಂಚದಲ್ಲಿದ್ದೂ ಪಾರಮಾರ್ಥ ಸಾಧಿಸಿ, ಅನುಭವ ಮಂಟಪ ಮಹಾಮನೆಗಳ ಸಮಗ್ರ ಚಟುವಟಿಕೆಗಳಲ್ಲಿ ಚೈತನ್ಯಶಕ್ತಿಯೂ ಸತ್ಯಸಮತೆಯ ನೆಲಗಟ್ಟಿನ ಮೇಲೆ ಸದಾಚಾರ–ಗಣಾಚಾರ ಮಹಾಮನೆಯನ್ನು ಕಟ್ಟಿ, ಸದ್ಗತಿ ಹೊಂದಿದವಳು.

"ಮನದೊಡೆಯ ಮಹಾದೇವ ಮನವ ನೋಡಿಹೆನೆಂದು
ಮನುಜರ ಕೈಯಿಂದ ಒಂದೊಂದ ನುಡಿಸುವನು.
ಇದಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ,
ನಿಜವ ಮರೆಯರಿದು ಕಂಡಾ, ನಿಶ್ಚಿಂತನಾಗಿರು ಮನವೆ,
ಬಸವಣ್ಣಪ್ರಿಯ ಚನ್ನಸಂಗಯ್ಯನು
ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡೆವನು ॥

ಎಂಥ ಪ್ರಸಂಗಗಳು ಬಂದರೂ ಸತ್ಯದ ಹಾದಿಯನ್ನು ಬಿಡದೇ ಧೀರರಾಗಿ ಎದುರಿಸಿ ಸನ್ಮಾರ್ಗವನ್ನು ಕಾಣಬೇಕೆಂಬ ಅಕ್ಕನವರ ಅಮರ ಸಂದೇಶ ನಿತ್ಯನೂತನವಾಗಿದೆ.

ಹಡಪದಪ್ಪಣ್ಣನ ಧರ್ಮಪತ್ನಿಯಾದ ಲಿಂಗಮ್ಮ ತಮ್ಮ ದಾಂಪತ್ಯಜೀವನದ ಮಧುರಸ್ನೇಹವನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ.

ಅಂಗಲಿಂಗವೆಂಬ ಉಭಯವಳಿದು,
ಮಂಗಳ ಮಹಾಬೆಳಗಿನಲ್ಲಿಯೆ ಓಲಾಡಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚನ್ನಬಸವಣ್ಣಾ ॥

ತನ್ನ ತಾನರಿಯದೆ ಅನ್ಯರಿಗೆ ಬೋಧೆಯ ಹೇಳುವ
ಅಣ್ಣಗಳಿರಾ, ನೀವು ಕೇಳಿರೋ:
ಅವರ ಬಾಳು ಎಂತೆಂದಡೆ:
ಕುರುಡ ಕನ್ನಡಿಯ ಹಿಡಿದಂತೆ ॥

ಸಾಂಪ್ರದಾಯಿಕ ಪ್ರವಚನಕಾರರನ್ನು, ವೃತ್ತಿಪುರಾಣಿಕರನ್ನು ಬಲವಾಗಿ ಖಂಡಿಸಿದ್ದಾಳೆ.

ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು ಸಂತೆಯ ಸೂಳೆಯರಂತೆ.
ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣರಿಗೆ,
ಅಂತರಂಗವೆಲ್ಲ ಅರುಹಾಯಿತ್ತು, ಬಹಿರಂಗವೆಲ್ಲ ಲಿಂಗವಾಯಿತ್ತು,
ಆ ಲಿಂಗದಲ್ಲೆ ನುಡಿದು, ಲಿಂಗದಲ್ಲೆ ನಡೆದು
....

ಸರ್ವಾಂಗವು ಲಿಂಗವಾಗಿ ಆ ಲಿಂಗವ ನೋಡುವ ಕಂಗಳಲ್ಲಿ ಐಕ್ಯ.
ಕಂಡೆಯಾ ಅಪ್ಪಣ್ಣಪ್ರಿಯ ಚನ್ನಬಸವಣ್ಣಾ ॥

ತನ್ನ ತಾನರಿದು ನಡೆಯದ ಅಂತರಂಗ–ಬಹಿರಂಗ ಶುದ್ಧಿಯಿಲ್ಲದ ಕಾಕಮನುಜರ ಕಂಡು ಮೂದಲಿಸಿದ್ದಾಳೆ. "ಮೋಡವಿಲ್ಲದ ಚಂದ್ರಮನಂತೆ" ಮನಸ್ಸು ಪರಿಶುದ್ಧವಾಗಿ, ಪ್ರಶಾಂತವಾಗಿದ್ದರೆ, 'ಲಿಂಗವ ನೋಡುವ ಕಂಗಳಲ್ಲೀ ಐಕ್ಯ ಸಾಧ್ಯ' ಎಂದು ತಿಳಿಹೇಳುವ ಲಿಂಗಮ್ಮ ಶಿವಯೋಗ ಸಾಧನೆಯನ್ನು ಸಿದ್ಧಿಸಿಕೊಂಡು ಸಂಸಾರದಲ್ಲಿದ್ದೇ ಸದ್ಗತಿ ಪಡೆದು ನಾರಿಕುಲದ ರತ್ನಪ್ರಭೆ ಎನಿಸಿದ್ದಾಳೆ.

"ಕಾಯಕವೇ ಕೈಲಾಸ" ಕಾಯಕದಲ್ಲಿ ನಿರತನಾದಡೆ ಗುರು, ಲಿಂಗ, ಜಂಗಮ ಪೂಜೆಯನ್ನಾದರೂ ಮರೆಯಬೇಕು, ಎನ್ನುವ ನಿಷ್ಕಾಮವಂತ ಶರಣ ಮಾರಯ್ಯನ ತಕ್ಕ ಸತಿಯಾಗಿ ಮರೆವಿಗೆ ಅರುಹಿನ ಬೀಜ ಬಿತ್ತಿ, ಗುರುವಾಗಿ ಮಾರ್ಗ ತೋರಿದ ಮಹಾಶರಣೆ ಲಕ್ಕಮ್ಮನ ಮಾತಿದು.

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ, ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ ಅಯ್ಯಾ ? ಮಾರಯ್ಯಪ್ರಿಯ
ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ ॥

ಎಂದು ಕಾಯಕದ ಅರಿವನ್ನು ಮೂಡಿಸಿದ್ದಾಳೆ. ಕಾಯಕವೇ ಅವರ ಜೀವನದ ಉಸಿರಾಗಿ, ಕಾಯಕದಲ್ಲಿ ನಿಷ್ಕಾಮವಂತ ಶರಣದಂಪತಿಗಳಾಗಿ ಸನ್ಮಾರ್ಗವನ್ನು ಕಂಡುಕೊಂಡ ಈ ಆದರ್ಶದಂಪತಿಗಳ ಜೀವನ ಇಂದಿಗೂ, ಎಂದೆಂದಿಗೂ ಆದರ್ಶವಾಗಿದೆ.

ಭಕ್ತರ ಮನೆಯಲ್ಲಿ ಊಳಿಗದ ಕಾಯಕ ಮಾಡುತ್ತ, ಸತ್ಯಶರಣೆಯಾಗಿ ಸತ್ಯಶುದ್ಧ ಕಾಯಕದೇವರನ್ನಲ್ಲದೇ ಅನ್ಯದೇವರನ್ನು ಹೀಗಳೆಯುವ ಎದೆಗಾರಿಕೆಯುಳ್ಳ ದಿಟ್ಟ ಶರಣೆಯಾಗಿ ಬಾಳಿದ ಸತ್ಯಕ್ಕನ ಬದುಕು ನಮ್ಮೆಲ್ಲರಿಗೂ ಮಾದರಿಯಾಗಿದೆ.

ಅರ್ಚನೆ ಪೂಜನೆ ನೇಮವಲ್ಲ; ಮಂತ್ರತಂತ್ರ ನೇಮವಲ್ಲ;
ಧೂಪ ದೀಪಾರತಿಯು ನೇಮವಲ್ಲ;
ಪರಧನ, ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ.
ಶಂಭು ಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ ॥

ಪರಧನ, ಪರಸ್ತ್ರೀ, ಪರದೈವಂಗಳಿಂದ ದೂರವಾದರೆ ಮಾತ್ರ ಪರಮಾತ್ಮನ ಒಲುಮೆಗೆ ಪಾತ್ರರಾಗುತ್ತೇವೆ ಎಂಬ ಚಿರಂತನ ಸತ್ಯವನ್ನು ಎತ್ತಿ ಹಿಡಿದ ಅನುಭವಪೂರ್ಣ ವಚನವಾಗಿದೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಅಂತ್ಯಜರಾದರೂ, ಸುವಿಚಾರ ಸಂಪನ್ನರಾಗಿ ಬಾಳಿದ ಶರಣ ದಂಪತಿಗಳು :

ಆಸೆಯೆಂಬುದು ಭವದ ಬೀಜ
ನಿರಾಶೆಯೆಂಬುದು ನಿತ್ಯ ಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವ ॥

ಆಸೆ ಅಡಗಿದಡೆ ಅದೇ ಈಶ ಪದ", ಎನ್ನುವ ತತ್ತ್ವ ಇಲ್ಲಿ ಅಡಕವಾಗಿದೆ.

ವ್ರತವೆಂಬುದು ನಾಯಕರತ್ನ; ವ್ರತವೆಂಬುದು ಸುಪ್ಪಾಣಿಯ ಮುತ್ತು;
ವ್ರತವೆಂಬುದು ಜೀವನಕಳೆ; ವ್ರತವೆಂಬುದು ಸುಯಿಧಾನ.
ವ್ರತ ತಪ್ಪಲು ಉರಿಲಿಂಗಪೆದ್ದಿಗಳರಸನೊಲ್ಲನವ್ವ ॥

ಕಾಯಕದಲ್ಲಿ ನಿಷ್ಠಾವಂತರಾಗಿರಬೇಕೆಂಬುದೆ ಕಾಳವ್ವನ ನಂಬಿಕೆಯಾಗಿತ್ತು.

ಎತ್ತು ಸಂತ್ತಿ ಬಂದರೂ
ಊರಿಗೆ ಬಪ್ಪುದು ತಪ್ಪದು.
ಹಲವು ಮಾತನಾಡಿದರೇನು ?
ಮೂರು ಮಲ ಮರೆದಿರಬೇಕು.
ಹೊಲಬುದಪ್ಪಿದ ಮೃಗ
ಬಲೆಯೊಳಗೆ ಬಿದ್ದಂತಾಗಬೇಡ,
ಇದನರಿತು ಬದುಕೆಂದ
ನಮ್ಮ ಅಂಬಿಗರ ಚೌಡಯ್ಯ ॥

"ಅರಿವೇ ಗುರು" ಅಣವಮಲ, ಮಾಯಾಮಲ, ಕಾರ್ಮಿಕಮಲ, ಈ ಮೂರು ಮಲಗಳನ್ನು ಮರೆತು ಬದುಕಿದ್ದಾದರೆ ತಾನಿದ್ದ ಸ್ಥಳವೇ ಪುಣ್ಯಕ್ಷೇತ್ರ, ಕೈಲಾಸ, ಸದ್ಗತಿಗೆ ಹಾದಿ. "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂಬ ತತ್ತ್ವ ಇಲ್ಲಿ ಅಡಕವಾಗಿದೆ.

ಕೆಡಕು ಕೂಡುವುದೆಂದು ಅಡಪಗೋಡಲಿಬೇಡ
ಕಡುಭಯದಿ ಭಂಗಗೊಳಬೇಡ । ವಿಧಿಯುರಿಯು
ದಡವಿಯೊಂದುಂಟೆ ಸರ್ವಜ್ಞ ॥

ಜೀವನದಲ್ಲಿ ಬರುವ ಕೋಟಲೆಗಳನ್ನು ಜಂಟಿತನದಿಂದ ಎದುರಿಸಿ, ಕೈಕೊಂಡ ಕಾರ್ಯದಲ್ಲಿ ಪ್ರಯತ್ನಶೀಲರಾಗಿ ಸನ್ಮಾರ್ಗದಿಂದ ಬಾಳಬೇಕೆಂಬ ಸರ್ವಜ್ಞನ ಸಂದೇಶ ಚಿರಂತನ ಸತ್ಯವಾಗಿದೆ.

ಸನ್ಯಾಸಿಯಾಗಿ, ದೇಹದಂಡನೆ ಮಾಡಿ, ದೃಢಚಿತ್ತವಿಲ್ಲದೇ ಗುಡಿಯ ಸುತ್ತಿ ಸುತ್ತಿ ಪೂಜಿಸಲು ಮೋಕ್ಷ ದೊರೆಯದು. ಇದು 'ಮಾಯಾ ಪ್ರಪಂಚ', 'ಸಂಸಾರ ಸಂಕೋಲೆ' ಎನ್ನದೇ 'ಕೆಸರಿನೊಳಗಿನ ಕಮಲದಂತೆ' ಪರಿಶುದ್ಧವಾಗಿ ನಡೆನುಡಿ ಒಂದಾಗಿ, ಏಕಚಿತ್ತದಿಂದ ಸಂಸಾರದಲ್ಲಿದ್ದುಕೊಂಡೇ ಸದ್ಗತಿ ಪಡೆದರೆಂಬುದಕ್ಕೆ ಶಿವ ಶರಣರು ನಿತಾಂತ ಸತ್ಯ.

ಜ್ಞಾನವಂತನಾಗು, ಜ್ಞಾನಿಗಳಿಗೆ ಬಾಗು
ಜ್ಞಾನ ಬೆಳಕಿನಿಂದಜ್ಞಾನ ತಮವ ನೀಗು

ಶ್ರೀ ಗೋಪಾಲದಾಸರು

ಜ್ಞಾನವೆಂಬುದು ಬೀದಿಯ ಪಸರವೇ ?

ಅಮುಗೆ ರಾಯಮ್ಮನ ವಚನ

ಭಾರತೀಯ ದಾರ್ಶನಿಕ ಸಿದ್ಧಾಂತಗಳಲ್ಲಿ ಷಟ್‌ಸ್ಥಲ ಸಿದ್ಧಾಂತದ ಸ್ಥಾನ



● ಪಂ. ನಾಗಭೂಷಣ ಶಾಸ್ತ್ರಿಗಳು

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರ ವಿತ್ ಯಸ್ಯ ಶಾಂತಂ ಮನಃ ಸದಾ ॥

ಭಾರತೀಯ ತತ್ತ್ವವೇತ್ತರು ಶಾಸ್ತ್ರರಚನೆ ಮಾಡಿದ್ದು ತತ್ತ್ವಾನ್ವೇಷಿ ಸಾಧಕರ ಮನಶ್ಶಾಂತಿಗಾಗಿಯೇ ಎಂಬುದು ನಿತರಾಂ ಸತ್ಯ. ಯಾರ ಮನಸ್ಸು ಪರಿಪೂರ್ಣ ಶಾಂತವಾಗಿರುವದೋ ಅವರೇ ಸಕಲ-ಶಾಸ್ತ್ರಗಳನ್ನು ಬಲ್ಲವರಾಗಿರುವರು. ಈ ಮಾತನ್ನು ಕೇಳಿದಾಗ ಶಾಸ್ತ್ರಗಳ ರಚನೆಯ ಪರಮೋದ್ದೇಶ ಸ್ಫುಟವಾಗಿ ನಿರೂಪಿತವಾಗಿರುವದು.

ಭಾರತದಲ್ಲಿ ಆಸ್ತಿಕದರ್ಶನ ನಾಸ್ತಿಕದರ್ಶನ ಹೀಗೆ ಎರಡು ಪ್ರಕಾರದ ದರ್ಶನಗಳುಂಟು. ಪ್ರತ್ಯಕ್ಷ ಪ್ರಮಾಣವೊಂದನ್ನೇ ಒಪ್ಪಿಕೊಳ್ಳುವ ದರ್ಶನ ನಾಸ್ತಿಕದರ್ಶನ. ಆದಕ್ಕಾಗಿಯೇ ನಾಸ್ತಿಕ ದರ್ಶನಕಾರರು ಶರೀರಾತಿರಿಕ್ತ ಆತ್ಮತತ್ತ್ವವನ್ನಾಗಲಿ, ಪರಲೋಕಗಳನ್ನಾಗಲಿ ಒಪ್ಪಿಕೊಳ್ಳುವದಿಲ್ಲ. ಆಸ್ತಿಕದರ್ಶನಕಾರರಲ್ಲಿಯೂ ಕೆಲವರು ಎರಡು, ಮೂರು, ನಾಲ್ಕು, ಆರು ಪ್ರಮಾಣಗಳನ್ನು ತಮ್ಮ ತಮ್ಮ ಸಿದ್ಧಾಂತ ಸ್ಥಾಪನೆಗಾಗಿ ಯತ್ನಿಸಿರುವರು.

ಭಾರತದಲ್ಲಿ ಸುಪ್ರಸಿದ್ಧಗಳಾದ ದರ್ಶನಗಳು ಆರು. ಅವೇ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ. ಪೂರ್ವಮೀಮಾಂಸೆ, ಉತ್ತರಮೀಮಾಂಸೆ ಎಂಬ ಹೆಸರುಗಳಿಂದ ಪ್ರಸಿದ್ಧಿ ಪಡೆದಿವೆ.

ವೇದಾಂತದರ್ಶನವೇ ಎಲ್ಲ ದರ್ಶನಗಳಲ್ಲಿ ವರಿಷ್ಠವೆಂದು ಹೇಳಲಾಗುವದು. ವೇದಾಂತದರ್ಶನವೆಂದರೆ ಕೇವಲ ಬ್ರಹ್ಮಾದ್ವೈತ ಸಿದ್ಧಾಂತವೆಂದೇ ಬಹುಜನ ತಿಳಿದುಕೊಂಡಿರುವರು. ಹಾಗಲ್ಲ, ದ್ವೈತ, ವಿಶಿಷ್ಟಾದ್ವೈತ, ದ್ವೈತಾದ್ವೈತ, ಶುದ್ಧಾದ್ವೈತ, ಶಿವಾದ್ವೈತ ಮುಂತಾದ ದರ್ಶನಗಳು ಕೂಡ ವೇದಾಂತದರ್ಶನಗಳೇ ಆಗಿವೆ.

ಷಟ್‌ಸ್ಥಲ ಸಿದ್ಧಾಂತವು ಜನಜೀವನದಲ್ಲಿ ದಿವ್ಯತ್ವವನ್ನುಂಟು ಮಾಡುವಲ್ಲಿ ಪರಮೋಪಾಯವಾಗಿದೆ. ಈ ಸಿದ್ಧಾಂತವು ಶಿವಾದ್ವೈತ, ದ್ವೈತಾದ್ವೈತ, ವಿಶೇಷಾದ್ವೈತ ಮತ್ತುಶಕ್ತಿ ವಿಶಿಷ್ಟಾದ್ವೈತ ಪರ್ಯಾಯನಾಮದಿಂದ ಕರೆಯಲ್ಪಡುವದು.

ಮಲಿನವಾಗಿದ್ದ ಜೀವನವನ್ನು ಹಸಗೊಳಿಸಿ, ಅಜ್ಞಾನ ಕತ್ತಲೆಯಿಂದ ಜ್ಞಾನದ ಬೆಳಕಿನತ್ತ ಸಾಗಿಸುವದೇ ಸಿದ್ಧಾಂತದ ಹಿರಿಮೆ. ಮಲಿನಜೀವನ ದುಃಖದಾಗರವಾಗಿದ್ದರೆ ನಿರ್ಮಲಜೀವನ ಸುಖದ ಸಾಗರವಾಗಿರುವದು. ಜನನ ಮರಣಾತ್ಮಕ ಸಂಸಾರ ದುಃಖದಿಂದ ಪಾರಾಗಿ ಅಮೃತ ಜೀವನ ಪಡೆಯಲು ಷಟ್‌ಸ್ಥಲ ಸಿದ್ಧಾಂತಾನುಸರಣಕ್ಕಿಂತ ಭಿನ್ನೋಪಾಯ ಮತ್ತೊಂದಿಲ್ಲವೆಂದು ಅನುಭವಿಗಳು ಸಾರಿ ಸಾರಿ ಹೇಳುತ್ತ ಬಂದಿದ್ದಾರೆ. ನರಭಾವದಿಂದ ಹರಭಾವದತ್ತ ಬಾಳನ್ನು ತಿರುಗಿಸಿ ಬಾಳಿನ ಸಾರ್ಥಕತೆಯನ್ನು ಸಾಧಿಸಿ ಕೊಡುವದೇ ಷಟ್‌ಸ್ಥಲಸಿದ್ಧಾಂತದ ಮುಖ್ಯಗುರಿ.

ಷಟ್‌ಸ್ಥಲ ಸಿದ್ಧಾಂತದ ಮಾರ್ಗದಲ್ಲಿ ಸಾಗಿದ ವ್ಯಕ್ತಿಗಳ ಮನದಲ್ಲಿ ತುಂಬಿದ ಅಶಿವವಾಸನೆಗಳೆಲ್ಲ ಶಿವವಾಸನೆಯ ರೂಪದಲ್ಲಿ ಪರಿವರ್ತನವಾಗುತ್ತಲೇ ತಮ್ಮಲ್ಲಿ ಶಿವಭಾವದ ಎಚ್ಚರವುಂಟಾಗುವದು. ಅದು ಅಪ್ರಾಪ್ತಪ್ರಾಪ್ಯವಲ್ಲ. ಪ್ರಾಪ್ತ ಪ್ರಾಪ್ತರೂಪವಾದುದು. ಅಂದರೆ ಮೊದಲು ತನ್ನಲ್ಲಿ ಇದ್ದುದೇ ಅಜ್ಞಾನದಿಂದ ಮರೆತು ಹೋಗಿದ್ದು ಜ್ಞಾನಸೂರ್ಯನ ಉದಯವಾಗುತ್ತಲೇ ಅದು ವ್ಯಕ್ತವಾಗಿ ಬಿಡುವದು. ಆಗ ದೊರೆತದ್ದು ಇಲ್ಲದ್ದಲ್ಲ. ಇದ್ದದ್ದೇ.

ಷಟ್‌ಸ್ಥಲವು ಶಿವನೊಡನೆ ಸಾಮರಸ್ಯವನ್ನು ಪಡೆಯಲು ಜ್ಞಾನ ಕ್ರಿಯೆಗಳ ಸುಂದರ ಸಮನ್ವಯವನ್ನು ಅಪೇಕ್ಷಿಸುವದು. ಶಿವ ಸಾಮರಸ್ಯಾನುಭವವು ಒಂದು ಮಹಾಸಂಪತ್ತೇ ಆಗಿದೆ. ಇದಕ್ಕಿಂತ ಹೆಚ್ಚಿನ ಸಂಪತ್ತು ಮತ್ತಾವುದೂ ಇಲ್ಲ. ಜೀವನು ಕ್ರಿಯಾಶುದ್ಧನೂ, ಜ್ಞಾನಪ್ರಬುದ್ಧನೂ, ಅನುಭವ ಸಂಸಿದ್ಧನೂ ಆಗುತ್ತಲೇ ಅವನು ತನ್ನ ನೈಜಸ್ವರೂಪದ ಅರಿವುಳ್ಳವನಾಗಿ ಬಿಡುವನು. ಇದೇನೂ ಸಾಧಾರಣ ಭಾಗ್ಯವಲ್ಲ. ಇಂತಹ ಸರ್ವೋಚ್ಚ ಸ್ಥಿತಿಗೇರಿ ಬಿಡುವುದೇ ಷಟ್‌ಸ್ಥಲಾಚರಣೆಯ ಪ್ರಯೋಜನ. ಷಟ್‌ಸ್ಥಲಾಚರಣೆಯಲ್ಲಿಲ್ಲದವನು ಇಂತಹ ಗಂಭೀರ ಜೀವನದ ಅನುಭವ ಮಾಡಿಕೊಳ್ಳಲು ಎಂದೂ ಸಮರ್ಥನಾಗನು. ಜೀವ–ಶಿವರ ಸಾಮರಸ್ಯದ ಸಿದ್ಧಿಯಾಗುವದು ಷಟ್‌ಸ್ಥಲಮಾರ್ಗದಲ್ಲಿ ನಡೆಯುವವರಿಗೆ ಮಾತ್ರ ಸುಲಭ ಸಾಧ್ಯವೆಂದು ಅನುಭಾವಿಗಳು ಸ್ವತಃ ಅನುಭವಿಸಿ ಹೇಳುತ್ತಲಿದ್ದಾರೆ. ಇಲ್ಲಿ ಕೇವಲ ತರ್ಕವಾಗಲಿ, ಶಾಸ್ತ್ರಜ್ಞಾನವಾಗಲಿ ಪ್ರಮಾಣವೆನಿಸದೆ ಸ್ವಾನುಭವವೇ ಮುಖ್ಯ ಪ್ರಮಾಣವಾಗುವದು. ಅದೇ ಜೀವನದ ನಿಜವಾದ ಸೌಂದರ್ಯ ಹಾಗೂ ನಿಜ ಸಂಪತ್ತಾಗುವದು.

ಈ ದರ್ಶನಾನುಯಾಯಿಗಳು ದೃಷ್ಟಿವೈಶಾಲ್ಯವನ್ನು ಪಡೆದಂತೆ ಮತ್ತಾವ ದರ್ಶನಜ್ಞಾನ ಸಿದ್ಧಿಯಿಂದಲೂ ಪಡೆಯಲಾಗದು, ಎಂಬುದು ಅನುಭವಿಗಳ ಮತ. ಈ ಷಟ್‌ಸ್ಥಲ ಮಾರ್ಗದಲ್ಲಿ ನಡೆಯಲು ಯಾವ ಜಾತಿ ಮತ ಪಂಥಗಳ ಭೇದವನ್ನು ಎಣಿಸಲಾಗುವದಿಲ್ಲ. ಮಾನವ ಮಾತ್ರಕ್ಕೇನೆ ದೇವರು ಕೊಟ್ಟ ಅಧಿಕಾರವುಂಟು. ಅದರ ಉಪಯೋಗವನ್ನು ಮಾಡುವ ಬುದ್ಧಿಕೌಶಲ್ಯ ಮಾತ್ರ ಅತ್ಯವಶ್ಯವಾಗಿದೆ. ಇಂಥ ದರ್ಶನದ ಅರಿವಿನ ಅನುಭವ ಮಾಡಿಕೊಳ್ಳುವ ಭಾಗ್ಯ ಎಷ್ಟೋ ಜನ್ಮ ಜನ್ಮಾಂತರದ ಪುಣ್ಯವಿಶೇಷತೆಯಿಂದ ಲಭಿಸಬಲ್ಲದು. ಅಂಗನು ಲಿಂಗದತ್ತ ಸಾಗಿ ಅವಿರಳವಾಗಿ ಮಹಾದೇವನಲ್ಲಿ ಕೂಡಿಕೊಳ್ಳಲು ನಡೆವ ಮಾರ್ಗವೇ ಷಟ್‌ಸ್ಥಲ. ಅದೇ ಶಾಶ್ವತಾನಂದದತ್ತ ಎಳೆದೊಯ್ಯುವ ಅನುಭವ.

ದುಃಖದ ಕಾರಣ ಅಮಂಗಲಾನುಭವ. ಅದು ಮಂಗಲಾನುಭವದಿಂದಲೇ ದೂರಾಗುವದು.

ಸಮ್ಯಗ್‌ದೃಷ್ಟಿಯಿಂದ ವಿಚಾರಿಸಿ ನೋಡಿದಾಗ ವೀರಶೈವಧರ್ಮದ ಅಂಗವಾಗಿರುವ ಷಟ್‌ಸ್ಥಲವು ನಿಗಮಾಗಮ ಕಲ್ಪತರುವಿನ ಸುಮಧುರ ಅಮೃತಫಲವಾಗಿರುವದೆಂದು ತಿಳಿದುಬರುವದು. ವೀರಶೈವರು ನಿಗಮಾಗಮಗಳೆರಡೂ ಸ್ವತಃ ಪ್ರಮಾಣವಾಗಿರುವವೆಂದು ನಂಬಿದ್ದರೂ, ಅವುಗಳಲ್ಲಿ ಪರಮಾತ್ಮನ ನಿಶ್ವಾಸ ರೂಪವಾದ ವೇದಗಳಿಗಿಂತ ಅವನ ವೈಖರಿವಾಣಿ ರೂಪವಾದ ಆಗಮಗಳಿಗೇನೆ ಹೆಚ್ಚಿನ ಮಹತ್ವವಿರುವದೆಂದು ಹೇಳಿದ್ದಾರೆ. ಈ ಬಗ್ಗೆ ನೀಲಕಂಠ ಶಿವಾಚಾರ್ಯರು ತಮ್ಮ "ಕ್ರಿಯಾಸಾರ" ಗ್ರಂಥದಲ್ಲಿ—

ಅಥವಾ ಶಿವನಿಶ್ವಾಸ ಶೃತಿಭ್ಯಸ್ತೇ ಶಿವಾಗಮಾಃ ।
ಅಧಿಕಾಃ ಶಿವವಕ್ತ್ರೇಭ್ಯಃ ಸಾಕ್ಷಾದೇವ ವಿನಿರ್ಗತಾಃ ॥

ಎಂದು ಮೇಲಿನ ಅಭಿಪ್ರಾಯವನ್ನೇ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಶಿವಯೋಗಿ-ಶಿವಾಚಾರ್ಯರು—

ವೇದ ಸಿದ್ಧಾಂತಯೋರೈಕ್ಯಂ ಏಕಾರ್ಥ ಪ್ರತಿಪಾದನಾತ್ ।
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಃ ಸದಾ ॥

'ವೇದಾಗಮಗಳು ಒಂದೇ ಅರ್ಥ ಪ್ರತಿಪಾದಿಸುವ ನಿಮಿತ್ತವಾಗಿ ಅವೆರಡರಲ್ಲಿ ಸಮಾನ ಪ್ರಾಮಾಣ್ಯವಿರುವದು' ಎಂದು ಹೇಳಿದ್ದಾರೆ.

ವೀರಶೈವಧರ್ಮವು ಶಿವಧರ್ಮ ಅರ್ಥಾತ್ ಶಿವೋಕ್ತವಾದ ಧರ್ಮ. ಇದು ಕಾಮಿಕಾದಿ ವಾತುಲಾಂತ ಇಪ್ಪತ್ತೆಂಟು (೨೮) ಶಿವಾಗಮಗಳ ಉತ್ತರಾರ್ಧದಲ್ಲಿ ಪ್ರತಿಪಾದಿತವಾಗಿರುವದು. ಈ ಬಗ್ಗೆ—

"ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೆ ಶಿವೋದಿತೇ ।
ನಿರ್ದಿಷ್ಟ ಮುತ್ತರೆ ಭಾಗೇ ವೀರಶೈವ ಮತಂ ಪರಂ ॥"

ಎಂಬ ಭಾಷ್ಯಕಾರರಾದ ಶ್ರೀಪತಿಪಂಡಿತರ ಉಕ್ತಿಯು ಪರಮ ಪ್ರಮಾಣವಾಗಿದೆ.

ಸ್ಥಲತತ್ವ ವಿಚಾರ: ಚೇತನಾಚೇತನಾತ್ಮಕವಾದ ಪ್ರಪಂಚದ ಸೃಷ್ಟಿಸ್ಥಿತಿ ಪ್ರಳಯಗಳಿಗೆ ಯಾವುದು ಕಾರಣವೋ ಅದೇ ಸ್ಥಲವೆನಿಸುತ್ತದೆ. ಸ್ಥಲವೇ ಶಿವ ವೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. "ಶೇರತೆ ಅಸ್ಮಿನ್ ಭುವನಾನಿ ಇತಿ ಶಿವಃ" ಎಂಬ ವ್ಯುತ್ಪತ್ತಿಯಿಂದ ಶಿವಶಬ್ದವಾದರೂ. ಸಕಲಲೋಕಂಗಳಿಗೆ ಆಧಾರವಾದ ಅರ್ಥವನ್ನೇ ಬೋಧಿಸುತ್ತದೆ. "ಇತೋವಾ ಇಮಾನಿ ಭೂತಾನಿ" ಜಾಯಂತೇ ಏನ ಜಾತಾನಿ ಜೀವಂತಿ, ಯತ್ಪ್ರಯಂತ್ಯ ಭಿ ಸಂ ವಿಂಶಂತಿ, ತದ್ವಿದಿಜ್ಞಾಸಸ್ವ ತದ್ಬ್ರಮೇತಿ" ಎಂಬ ತೈತ್ತರೀಯ ಶೃತಿಯೂ "ಜನ್ಮಾದ್ಯಸ್ಯ ಯತಃ" ಎಂಬ ಬ್ರಹ್ಮ ಸೂತ್ರವೂ ಇದಕ್ಕೆ ಪ್ರಮಾಣಗಳಾಗಿವೆ. ಹೀಗೆ ಸ್ಥಲಶಬ್ದವಾಚ್ಯನಾದ ಶಿವನು ಸಚ್ಚಿದಾನಂದ ಸ್ವರೂಪನಾಗಿರುವನು. ಶಿವನು ಸಮಸ್ತ ಪ್ರಪಂಚಕ್ಕೆ ಕಾರಣನಾಗಿ ತನಗೆ ಅನ್ಯಕಾರಣವಿಲ್ಲದುದರಿಂದ ಸದ್ರೂಪನಾಗಿರುವನು. ತಾನು ಸರ್ವತೋರಿಕೆಗೆ ಹೇತುವಾಗಿ ತನ್ನ ತೋರಿಕೆಗೆ ಮತ್ತಾವ ಪ್ರಮಾಣ ಸಾಧನವನ್ನೂ ಬಯಸದಿರು ವದರಿಂದ ಚಿದ್ರೂಪನಾಗಿರುವನು. ಪ್ರಪಂಚವು ಅನುಭವಿಸುವ ಆನಂದಕ್ಕೆಲ್ಲ ಮೂಲಕಾರಣನಾಗಿರುವದರಿಂದ ಆನಂದ ಸ್ವರೂಪನಾಗಿರುವನು. "ಸತ್ಯಂ ಜ್ಞಾನ ಮನಂತಂ ಬ್ರಹ್ಮ" ಎಂಬುದಾದಿಯಾದ ಶೃತಿವಾಕ್ಯಗಳು ಶಿವನ ಸಚ್ಚಿದಾನಂದ ಸ್ವರೂಪಕ್ಕೆ ಪರಮ-ಪ್ರಮಾಣಗಳಾಗಿವೆ. ಈ ಸಚ್ಚಿದಾನಂದ ಸ್ವರೂಪದ ಶಿವನಿಗೆ ಸ್ವತಃ ಸಿದ್ಧವಾಗಿದೆ. ಆ ಎಚ್ಚರವೇ ವೀರಶೈವಶಾಸ್ತ್ರದಲ್ಲಿ ವಿಮರ್ಶೆಯೆಂದು ಹೇಳಲ್ಪಡು ವದು. ಅದೇ ಶಕ್ತಿಯು. ಈ ವಿಮರ್ಶಾತ್ಮಕ ಶಕ್ತಿಯಿಂದಲೇ "ಅಸ್ಮಿ, ಪ್ರಕಾಶೆ, ನಂದಾಮಿ" ಎಂದರೆ 'ಇರುವೆನು, ಪ್ರಕಾಶಿಸುವೆನು, ಆನಂದಿಸುವೆನು' ಎಂಬ ಸತ್-ಚಿತ್-ಆನಂದ ಇವುಗಳ ಅನುಭವವು ಶಿವನಿಗುಂಟಾಗುವದು. ಈ ಶಕ್ತಿಯು ಇಲ್ಲ ದಿದ್ದರೆ ಶಿವನು ಜಡವಾಗಬೇಕಾಗಿತ್ತು. ಲೋಕದಲ್ಲಿ ಸ್ಪಟಿಕಾದಿಗಳು ಸ್ವಚ್ಛವಾಗಿ ಪ್ರಕಾಶಿಸುವವು. ಅವುಗಳಿಗೆ ತಮ್ಮ ಪ್ರಕಾಶದ ಅರಿವೇ ಇರುವದಿಲ್ಲ. ಆದುದರಿಂದ ಅವು ಜಡವೆನಿಸುವವು. ಅರಿವಿಲ್ಲದೇ ಹೊಳೆಯುವ ಪದಾರ್ಥವು ಚೇತನವೆನಿಸ ಲಾರದು. ಹೀಗೆ ಚೇತನಸ್ವರೂಪನಾದ ಪರಶಿವನು ತನ್ನ ವಿಮರ್ಶಶಕ್ತಿಯ ವಿಲಾಸ ದಿಂದ ಸೃಷ್ಟಿಯನ್ನುಂಟುಮಾಡುವನು. ಈ ವಿಷಯದಲ್ಲಿ "ಶಿವಾದ್ವೈತ ಮಂಜರಿ" ಯಲ್ಲಿ ಉಕ್ತವಾದ "ಸತ್‌ಹೃದಯ ಪ್ರಕಾಶೋಭವನಸ್ಯ ಕ್ರಿಯಾಯಾ ಭವತಿ ಕರ್ತಾ ಕ್ರಿಯಾವಿಮರ್ಶಃ ಸಸ್ಮಾಕ್ಷಾಭಿತಾ ಚ ವಿಶ್ವವಿಸ್ತಾರಾ" ಎಂಬ ಸಾರಸ್ವತ ಸೂತ್ರವು ಪ್ರಮಾಣವಾಗಿದೆ.

ಕಾರಣವು ಅನೇಕ ಪ್ರಕಾರವಾಗಿರುವದು. ಕೊಡಕ್ಕೆ ಕುಂಬಾರನು ನಿಮಿತ್ತ ಕಾರಣನು. ಮಣ್ಣು, ಉಪಾದಾನ ಕಾರಣವು. ಚಕ್ರ-ದಂಡಾದಿಗಳು ಸಹಕಾರಿ ಕಾರಣಗಳಾಗುವವು. ಇದನ್ನು ಕೇಳಿದಾಗ, ಕೊಡಕ್ಕೆ ಮಣ್ಣಿನಂತೆ, ಜಗತ್ತಿಗೆ ಉಪಾದಾನ ಕಾರಣವಾದ ಮತ್ತೊಂದು ವಸ್ತು ಬೇಕಾಗುವದು. ವಸ್ತ್ವಂತರವನ್ನು ಅಂಗೀಕರಿಸಿದರೆ ಸರ್ವವೂ ಶಿವನೇ. ಶಿವಾತಿರಿಕ್ತವಾದ ಸದ್ವಸ್ತುವಿಲ್ಲವೆಂದು ಹೇಳುವ "ಸರ್ವಂ ಖಲ್ವಿದಂ ಬ್ರಹ್ಮ ಸರ್ವೋ ವೈ ರುದ್ರಃ" ಎಂಬುದಾದಿಯಾದ ಶ್ರುತಿಗೆ ಬಾಧೆಯುಂಟಾಗುವದು.

ಉಪಾದಾನ ಕಾರಣವೆಂದರೆ ಮಣ್ಣು ಮೊದಲಾದವುಗಳಿಗೆ ಹೇಗೋ ಹಾಗೆ ವಿಕಾರಾದಿ ದೋಷಗಳುಂಟಾಗುವವು. ಉಪಾದಾನಕ್ಕೆ ನಿಮಿತ್ತವಾದ ಕಾರಣಾಂತರವನ್ನು ಸ್ವೀಕರಿಸಬೇಕಾಗುವದರಿಂದ ಜಗತ್ತಿಗೆ ಬೇರೊಬ್ಬ ಅಧಿಷ್ಠಾತೃವನ್ನು ನಿಷೇಧಿಸುವ "ಏಕ ಏವ ರುದ್ರೋನ ದ್ವಿತೀಯಾಯತಸ್ಥೇ" ಇವೇ ಮೊದಲಾದ ಶ್ರುತಿ ವಾಕ್ಯಗಳಿಗೆ ಭಂಗ ಬರುವದು. ಶಿವನು ಜಗತ್ತಿಗೆ ಅಭಿನ್ನ ನಿಮಿತ್ತೋಪಾದಾನ ಕಾರಣನಾಗಿರುವನು ಎಂದೇ ಹೇಳಬೇಕು. ಶಿವನು ತನ್ನ ವಿಮರ್ಶಶಕ್ತಿಯಿಂದ ಪರಿಣಮಿಸಬಲ್ಲನು. ಪೂರ್ವರೂಪವನ್ನು ಬಿಟ್ಟು ರೂಪಾಂತರವನ್ನು ಹೊಂದುವುದೇ 'ಪರಿಣಾಮ' ಎಂಬುದು ನಮ್ಮ ಮತವಲ್ಲ. ಸ್ವರ್ಣಕುಂಡಲಸ್ಥಲದಲ್ಲಿ ಉಪಾದಾನ ಕಾರಣವಾದ ಸ್ವರ್ಣಕ್ಕೆ ನಾಶವಿಲ್ಲದೆ, ಅದಕ್ಕೆ ಭಿನ್ನವಾಗಿ ಕುಂಡಲವೆಂದು ವ್ಯವಹರಿಸಲ್ಯೋಗ್ಯವಾದ ಪ್ರವೃತ್ತಿಯು ಕಂಡುಬರುತ್ತದೆ. ಅದರಂತೆ ಶಿವನಲ್ಲಿ ಶಿವಸ್ವರೂಪ ನಾಶವಾಗದೇ ಜಗದುತ್ಪತ್ತಿಯಾಗುವದು. ಉಪಾದಾನ ಕಾರಣದ ಚ್ಯುತಿಯಿಲ್ಲದೆ ವ್ಯವಹಾರ ಯೋಗ್ಯವಾದ ಕಾರ್ಯೋತ್ಪತ್ತಿಯೇ ಪರಿಣಾಮವೆನಿಸುವದು. ಇದಕ್ಕೆ 'ಅವಿಕೃತ ಪರಿಣಾಮ'ವೆಂದು ಹೆಸರು. ಈ ರೀತಿಯಾದ ಪರಿಣಾಮ ಲಕ್ಷಣದಿಂದ ಶಿವನು ತನ್ನ ವಿಚಿತ್ರಶಕ್ತಿಯಿಂದ ಜಗದ್ರೂಪನಾಗುವನು. "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ, ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾ ಚ" ಎಂಬ ಶ್ರುತಿಯಿಂದ ಶಿವನಿಗೆ ವಿಚಿತ್ರಶಕ್ತಿಯಿರುವದಲ್ಲದೆ ಅವಿದ್ಯೆಯಿರುವದೆಂಬುವಲ್ಲಿ ಪ್ರಮಾಣವಿಲ್ಲ. ವೇದಾಂತಿಗಳು ಹೇಳುವ ವಿವರ್ತವಾದವನ್ನು ವೀರಶೈವರು ಒಪ್ಪುವದಿಲ್ಲ. "ಶಕ್ತ್ಯಾ ಪ್ರಪಂಚ ಸೃಷ್ಟಿಸ್ಸ್ಯಾತ್" ಎಂದು ಶಿವಾನುಭವ ಸೂತ್ರಕಾರರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

ವೀರಶೈವ ಸಿದ್ಧಾಂತದಲ್ಲಿ ೩೬ ತತ್ತ್ವಗಳನ್ನು ಅಂಗೀಕರಿಸಲಾಗಿದೆ. ಅವುಗಳಲ್ಲಿ ೧೧ ತತ್ತ್ವಗಳು ಲಿಂಗತತ್ತ್ವಗಳು. ೨೫ ಅಂಗತತ್ತ್ವಗಳು, ಎಂದು ವಿಭಾಗಿಸಲ್ಪಟ್ಟಿರುವವು.

ಲಿಂಗತತ್ತ್ವಗಳು : ೧) ಶಿವತತ್ತ್ವ ೨) ಕರ್ಮಸಾದಾಖ್ಯ ೩) ಕರ್ತೃಸಾದಾಖ್ಯ ೪) ಮೂರ್ತಿ ಸಾದಾಖ್ಯ ೫) ಅಮೂರ್ತಿ ಸಾದಾಖ್ಯ ೬) ಶಿವ

ಸಾದಾಖ್ಯ ೭) ನಿವೃತ್ತಿಕಲೆ ೮) ಪ್ರತಿಷ್ಠಾಕಲೆ ೯) ವಿದ್ಯಾಕಲೆ ೧೦) ಶಾಂತಿ ಕಲೆ ೧೧) ಶಾಂತ್ಯತೀತ ಕಲೆ.

ಅಂಗತತ್ವಗಳು : ಆತ್ಮತತ್ವ, ಪೃಥಿವ್ಯಾದಿ ಪಂಚಭೂತಗಳು, ಗಂಧಾದಿ ಐದು ವಿಷಯಗಳು, ವಾಗಾದಿ ಕರ್ಮೇಂದ್ರಿಯಗಳೈದು, ಘ್ರಾಣಾದಿ ಜ್ಞಾನೇಂದ್ರಿಯಗಳು, ಚಿತ್ತಾದಿ ನಾಲ್ಕು ಅಂತಃಕರಣಗಳು.

ವೀರಶೈವಸಿದ್ಧಾಂತವು ಶಿವನನ್ನು ಶಕ್ತಿವಿಶಿಷ್ಟನೆಂದು ಹೇಳುವದು. ಸ್ಥಲಪದ ವಾಚ್ಯನಾದ ಶಿವನು ಭಕ್ತೋದ್ಧಾರಕ್ಕಾಗಿ ಸ್ವಶಕ್ತಿ ಮಹಿಮೆಯಿಂದ ಲಿಂಗ ಹಾಗೂ ಅಂಗ ಎಂಬ ದ್ವಿವಿಧ ಸ್ಥಲವಾಗಿ ಪರಿಣಮಿಸುವನು. ಮೇಲೆ ಹೇಳಿದ ೧೧ ಲಿಂಗ ತತ್ವಗಳಲ್ಲಿ ಕರ್ಮಸಾದಾಖ್ಯಾದಿ ತತ್ವಗಳು ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಿಲಿಂಗಗಳಾಗಿ ಪರಿಣಮಿಸುವವು. ನಿವೃತ್ಯಾದಿ ಪಂಚಕಲೆಗಳು ಕ್ರಮವಾಗಿ ಆಚಾರಾದಿ ಪಂಚಲಿಂಗಗಳ ಶಕ್ತಿಗಳಾಗುವವು. ಶಿವತತ್ತ್ವ ಆರನೆಯದಾದ ಮಹಾಲಿಂಗವೆನಿಸುವದು, ಆ ಲಿಂಗದಲ್ಲಿ ಚಿಚ್ಛಕ್ತಿಯು ಇರುವದು. ಹೀಗೆ ೧೧ ಲಿಂಗತತ್ವಗಳು ಷಟ್‌ಸ್ಥಲಗಳ ೬ ಲಿಂಗಗಳ ಸ್ವರೂಪವನ್ನು ಹೊಂದುವವು.

ಶಕ್ತಿವಿಶಿಷ್ಟನಾದ ಶಿವನಿಗೆ ಪೂಜ್ಯ-ಪೂಜಕ ಭಾವಲೀಲೆ ಉಂಟಾಗಲಾಗಿ, ನಿಸ್ತರಂಗಸಮುದ್ರದಲ್ಲಿ ತರಂಗೋತ್ಪತ್ತಿಯು ಮೊದಲು ಪ್ರವಾಹವು ಉಂಟಾಗು ವಂತೆ ಶಕ್ತನಾದ ಶಿವನಲ್ಲಿ ಕಿಂಚಿತ್ ಚಲನವು ಉಂಟಾಗುವದು. ಆ ಚಲನದಿಂದ ಶಿವನು ಭಕ್ತೋದ್ಧಾರಕ್ಕಾಗಿ ಲಿಂಗಾಂಗ ಸ್ಥಲಭೇದವನ್ನು ಹೊಂದುವನು. ಈ ಭೇದವು ನ್ಯೂನಾಧಿಕ ಭಾವದಿಂದ ಕೂಡಿರುವದು. ಶಿವನ ಅಧಿಕ ಭಾಗವು ಲಿಂಗ ಸ್ಥಲದಲ್ಲಿಯೂ, ನ್ಯೂನ ಭಾಗವು ಅಂಗಸ್ಥಲದಲ್ಲಿಯೂ ಕೂಡಿರುವದು. ಲಿಂಗ ತತ್ತ್ವವೇ ಉಪಾಸ್ಯವು. ಅಂಗತತ್ತ್ವವೇ ಉಪಾಸಕವು. ಈ ಎರಡಕ್ಕೂ ಭೇದವಿರು ವದಿಲ್ಲ. ಈಎರಡರಲ್ಲಿಯೂ ಶಿವಸ್ವರೂಪವಿರುವದು, ಉಪಾಸಕನು ಶಿವಸ್ವರೂಪ ನಲ್ಲದೆ ಅನ್ಯನಲ್ಲ. ಶಿವನಲ್ಲದವನಿಗೆ ಶಿವೋಪಾಸನೆಯು ಘಟಿಸದು. "ಶಿವೋ ಭೂತ್ವಾ ಶಿವಂ ಯಜೇತ್" "ನಾ ರುದ್ರೋ ರುದ್ರಮರ್ಚಯೇತ್" ಇತ್ಯಾದಿ ಪ್ರಮಾಣಗಳು ಶಿವನಲ್ಲದವನಿಗೆ ಶಿವೋಪಾಸನೆಯು ಘಟಿಸದೆಂಬುದನ್ನು ಪ್ರತಿಪಾದಿಸುತ್ತಿರುವವು.

ಲಿಂಗಾಂಗ ಸ್ಥಲಗತಶಕ್ತಿ : ಸ್ಥಲಪದವಾಚ್ಯನಾದ ಶಿವನು ಲಿಂಗಾಂಗಗಳೆಂದು ಎರಡಾದಂತೆ ಸ್ಥಲಗತವಾದ ಶಕ್ತಿಯು ಎರಡಾಗುವದು. ಆ ಶಕ್ತಿಯು ಲಿಂಗಸ್ಥಲ ವನ್ನಾಶ್ರಯಿಸಿ ಕಲೆಯೆಂಬ ನಾಮದಿಂದ, ಅಂಗಸ್ಥಲವನ್ನಾಶ್ರಯಿಸಿ "ಭಕ್ತಿ" ಎಂಬ ನಾಮದಿಂದಲೂ ಕರೆಯಿಸಿಕೊಳ್ಳುವದು.

ಲಿಂಗಗತ ಶಕ್ತಿಯು ಪ್ರಪಂಚದ ಸೃಷ್ಟಿಯನ್ನುಂಟು ಮಾಡುವದರಿಂದ ಪ್ರವೃತ್ತ್ಯಾಪರವೆನಿಸಿಕೊಳ್ಳುವದು. ಅಂಗಗತ ಶಕ್ತಿಯು ಪ್ರಪಂಚದ ಲಯವನ್ನಪೇಕ್ಷಿ

ಸುವದರಿಂದ ನಿವೃತ್ತಿಪರವೆನಿಸುವದು. ಭಕ್ತಿ ವೈಚಿತ್ರ್ಯದಿಂದ ರೂಪವು ರೂಪರಹಿತ ವಾಗುವದು. ಪ್ರಪಂಚದ ಕ್ಷಯವನ್ನು ಕೋರುವದೇ ಭಕ್ತಿಯ ಸ್ವಭಾವ. ಆದ್ದರಿಂದ ಅದು ಊರ್ಧ್ವಮುಖಿಯೂ, ನಿವರ್ಾಯೆಯೂ ಎಂದು ಕರೆಯಿಸಿಕೊಳ್ಳುವದು.

ಈ ಶಕ್ತಿ-ಭಕ್ತಿಗಳಿಗೆ ಅಭೇದವನ್ನು ಹೇಳಿದ್ದರೂ, ಭಕ್ತಿಯು ಶಕ್ತಿಗಿಂತ ಅಧಿಕ ಗುಣವುಳ್ಳದ್ದೆಂದು ಹೇಳಲಾಗುವದು. ಏಕೆಂದರೆ ಶಿವಶಕ್ತಿಗೆ ಸಂಕಲ್ಪಶಕ್ತಿ ಅಥವಾ ಇಚ್ಛಾಶಕ್ತಿಯೆಂಬ ಪರ್ಯಾಯನಾಮವಿರುವದೆಂದು ಉಕ್ತವಾಗಿದೆ. ಶಿವಸಂಕಲ್ಪವು ಚೇತನಾಚೇತನಾತ್ಮಕವಾದ ಜಗತ್ತನ್ನು ಉದ್ಧರಿಸುವಲ್ಲಿರುವದೇನೋ ನಿಜ. ಆದರೆ ಶಿವನು ಜಗನ್ನಾಟಕ ಸೂತ್ರಧಾರಿಯಾಗಿ ಲಿಂಗಾಂಗದ್ವಯ ಭೇದವನ್ನು ಹೊಂದಿದಂತೆ ಜಗದಾಕಾರನಾಗಿಯೂ ಪರಿಣಮಿಸುವದರಲ್ಲಿ ತೊಡಗುವನು. ಅದು ಕಾರಣ ಲಿಂಗಗತಶಕ್ತಿಯು ಪ್ರವೃತ್ತಿಪರವೆಂದು ಹೇಳಲಾಗುತ್ತದೆ.

ಅಂಗನೆಂದರೆ ಗುರುವಿನಿಂದ ದೀಕ್ಷೆಯನ್ನು ಪಡೆದು ಆಣವಾದಿ ಮಲತ್ರಯ ರಹಿತನಾದ ಶುದ್ಧ ಜೀವನು. ಇಲ್ಲಿ ಅಂಗಗತ ಶಕ್ತಿಯು ಶುದ್ಧಜೀವನ ಸ್ವಭಾವ ವಾಗಿರುವದು. ಈ ಸ್ವಭಾವವು ನಿವೃತ್ತಿಪರವಾದುದು ಏಂದರೆ ಶಿವನೊಡನೆ ಸಮ ರಸವಾಗುವದರಲ್ಲಿಯೇ ಅಪೇಕ್ಷೆವುಳ್ಳದ್ದಾಗಿರುವದು. ಶಿವನ ಸ್ವಭಾವದಂತೆ ಲೀಲಾರ್ಥ ವಾಗಿಯಾದರೂ ಸೃಷ್ಟಿಯಲ್ಲಿ ಉನ್ಮುಖವಾಗದು. ಆದುದರಿಂದ ಪ್ರವೃತ್ತಿಪರ ವಾದ ಶಿವನ ಸ್ವಭಾವಕ್ಕಿಂತಲೂ ನಿವೃತ್ತಿಪರನಾದ ಅಂಗನ ಸ್ವಭಾವ ಅಧಿಕವೆಂದು ಶಿವಾನುಭವಿಗಳು ಹೇಳುತ್ತಲಿರುವರು.

ಅಂಗನು ಲಿಂಗದಲ್ಲಿ ಸಮರಸವನ್ನು ಹೊಂದಲು ತ್ರಿವಿಧರೂಪವನ್ನು ಪಡೆಯು ವನು. ಅವೇ ತ್ಯಾಗಾಂಗ, ಭೋಗಾಂಗ, ಯೋಗಾಂಗವೆನಿಸುವವು. ಪುನಃ ತ್ಯಾಗಾಂಗದಲ್ಲಿ ಭಕ್ತ, ಮಹೇಶ, ಭೋಗಾಂಗದಲ್ಲಿ ಪ್ರಸಾದಿ, ಪ್ರಾಣಲಿಂಗಿ, ಯೋಗಾಂಗದಲ್ಲಿ ಶರಣ, ಐಕ್ಯ ಬರುವವು. ಇದರಂತೆಯೇ ಲಿಂಗಸ್ಥಲವು ಇಷ್ಟ, ಪ್ರಾಣ, ಭಾವ ಎಂಬ ಮೂರು ಭಾಗವನ್ನು ಹೊಂದಿ, ಪುನಃ ಒಂದೊಂದರಲ್ಲಿ ಕ್ರಮ ವಾಗಿ ಆಚಾರಲಿಂಗ – ಗುರುಲಿಂಗ, ಶಿವಲಿಂಗ – ಜಂಗಮಲಿಂಗ, ಪ್ರಸಾದಲಿಂಗ – ಮಹಾಲಿಂಗ ಹೀಗೆ ಷಡ್ಲಿಂಗಗಳ ಸ್ವರೂಪವು ಉಕ್ತವಾಗಿದೆ.

ಷಡಂಗಸ್ಥಲ ಸ್ವರೂಪ ನಿರೂಪಣೆ :

ಭಕ್ತಸ್ಥಲ : ಶರೀರ ಪ್ರಾಣಾದಿ ವಸ್ತುಜಾಲದಲ್ಲಿ ಸಿಲುಕಿದ ಚಿತ್ತವನ್ನು ಅಲ್ಲಿಂದ ನಿವೃತ್ತಿಗೊಳಿಸಿ ಅದನ್ನು ಶ್ರದ್ಧಾಭಕ್ತಿ ಕ್ರಿಯಾಚರಣದಲ್ಲಿ ಅಳವಡಿಸುವದೇ ಭವವಿಕಾರ ದೂರವಾದ ಭಕ್ತಸ್ಥಲವೆನಿಸುವದು.

ಮಹೇಶಸ್ಥಲ : ಆಸ್ತಿಕ್ಯ ಬುದ್ಧಿಯಿಂದ ಲಿಂಗಪೂಜಾದಿ ನಿತ್ಯವ್ರತದಿಂದ, ಸತ್ಯ, ಧರ್ಮಶೌಚಾದಿ ಆಚರಣದಿಂದ, ಸಚ್ಚರಿತ್ರನಾಗಿ, ಲಿಂಗೇಕ ನಿಷ್ಠನಾಗಿ, ವೀರ ವ್ರತ ತತ್ಪರನಾಗಿರುವನೇ ಮಹೇಶ್ವರನೆನಿಸುವನು.

ಪ್ರಸಾದಿಸ್ಥಲ : ಪ್ರತಿಯೊಂದು ಇಂದ್ರಿಯಮುಖದಿಂದ ತಾನು ಅನುಭವಿಸುವ ಪದಾರ್ಥಗಳನ್ನು ಲಿಂಗಕ್ಕರ್ಪಿಸಿ ಅನಂತರ ಅವನ್ನು ಅವಧಾನಭಕ್ತಿಪೂರ್ವಕವಾಗಿ ಲಿಂಗಮುಖದಿಂದ ಬಂದ ಪ್ರಸಾದವನ್ನು ಪರಿಗ್ರಹಿಸುವದೇ ಪ್ರಸಾದಿಸ್ಥಲ.

ಪ್ರಾಣಲಿಂಗಿಸ್ಥಲ : ಪ್ರಾಣೇಂದ್ರಿಯಾದಿಗಳಲ್ಲಿ ನಾನು, ನನ್ನದೆಂಬ ಭ್ರಾಂತಿ ಜನ್ಯವಾದ ಮೋಹವನ್ನು ತ್ಯಜಿಸಿ, ಇದೆಲ್ಲವೂ ಲಿಂಗಮಯವಾದುದೆಂದು ತಿಳಿದು ತದೇಕಾನುಭವ ಭಕ್ತ ಚಿತ್ತನಾಗಿರುವದೇ ಪ್ರಾಣಲಿಂಗಿಯ ಲಕ್ಷಣ.

ಶರಣಸ್ಥಲ : ಜ್ಞಾನಪ್ರಕಾಶ ಬಲದಿಂದ ನಾನು, ನನ್ನ ದೇಹೇಂದ್ರಿಯಗಳು ಸ್ವತಃ ಲಿಂಗಮಯವಾಗಿರುವವೆಂದು ತಿಳಿದು ಸಕಲ ವಿಷಯಗಳಿಂದ ಕೂಡಿದ್ದರೂ ವಿಶುದ್ಧನಾಗಿ ಆನಂದ ಭಕ್ತಿಯುತನಾಗಿ ಸತಿಭಾವದಿಂದ ವರ್ತಿಸುವದೇ ಶರಣ ಲಕ್ಷಣ.

ಐಕ್ಯ : ದೇಹ ಪ್ರಾಣ ಇಂದ್ರಿಯಾದಿ ಭೇದ ವ್ಯವಹಾರವು ಭ್ರಾಂತಿಜನ್ಯವು ಎಂದು ತಿಳಿದು, ಆ ಭೇದವು ನನ್ನಲಿಲ್ಲವೆಂಬ ಶಿವಾದ್ವೈತ ಭಾವದಿಂದ ಸಮರಸ ಭಕ್ತಿಯ ಸುಲಭ ಸ್ವರೂಪವನ್ನು ಪಡೆದಿರುವದೇ ಐಕ್ಯನ ಲಕ್ಷಣ.

ವೀರಶೈವರ ಉಪಾಸನೆಯು ಷಟ್‌ಸ್ಥಲಗಳ ಮೂಲಕವಾಗಿಯೇ ನಡೆಯುವದು. ಷಟ್‌ಸ್ಥಲಾತ್ಮಕವಾದ ಉಪಾಸನಾಕ್ರಮವೇ ವೀರಶೈವರ ವೈಶಿಷ್ಟ್ಯವು. ಷಟ್‌ಸ್ಥಲ ತತ್ವದ ದೃಷ್ಟಿಯಿಂದ ಉಪಾಸನವೆಂದರೆ ಲಿಂಗಾಂಗಳ ಸಂಯೋಗವೆಂದೇ ಅರ್ಥ. ಆ ಸಂಯೋಗವೇ ಶಿವ–ಜೀವರ ದ್ವೈತಭಾವದ ಲಯವೆನಿಸುವದು. ಆ ದ್ವೈತ ವಿಲಯವೇ ಶಿವತತ್ವ ಪ್ರಾಪ್ತಿಯಿಂದ ಉಂಟಾದ ಜೀವತ್ವದ ನಿವೃತ್ತಿಯೆನಿಸುವದು. ಅಂತಹ ವೃತ್ತಿಯೇ ವಿಶ್ರಾಂತಿಯು. 'ಈ ವಿಶ್ರಾಂತಿಯೇ ವೀರಶೈವರ ಪರಮ ಪದವೆನಿಸುವದು', ಎಂದು ಮೊಗ್ಗೆಯ ಮಾಯಿದೇವಪ್ರಭುಗಳು ಹೇಳಿದ್ದುಂಟು.

ಇಲ್ಲಿ ಉಪಾಸನೆಯೆಂದರೆ ಉಪಾಸಕನು ತನಗನ್ಯವಾದ ಉಪಾಸ್ಯಮೂರ್ತಿಯನ್ನು ಇದುರಿಗಿಟ್ಟುಕೊಂಡು ಪೂಜಿಸುವದೆಂಬರ್ಥವಲ್ಲ. ಅಂಗಪದವಾಚ್ಯನಾದ ಆತ್ಮನು ತಾನು ಲಿಂಗಸ್ವರೂಪನಾಗಿರುವನೆಂದು ಯಾವಾಗಲೂ ಸ್ವಸ್ವರೂಪಾನುಸಂಧಾನದಲ್ಲಿರುವದೇ ಆಗಿದೆ.

ಷಟ್‌ಸ್ಥಲ ಸಿದ್ಧಾಂತದ ಮಾರ್ಗವು ಭಾರತೀಯ ಎಲ್ಲ ಸಿದ್ಧಾಂತಗಳ ಮಾರ್ಗಕ್ಕಿಂತ ವಿಶಿಷ್ಟತರಹವೂ, ಶ್ರೇಷ್ಠವೂ ಆಗಿರುವದೆಂಬುದು ತಿಳಿದುಬರುತ್ತದೆ. ಪ್ರಪಂಚ

ವನ್ನು ಅಸತ್ಯವೆಂದೂ ಹೇಯವೆಂದೂ ಹೇಳುವ ಶಾಸ್ತ್ರಸಿದ್ಧಾಂತವು ವ್ಯಾವಹಾರಿಕ ವೆನಿಸುವದಿಲ್ಲ. ವ್ಯವಹಾರಕ್ಕೆ ಉಪಯೋಗವಿಲ್ಲದ ಸಿದ್ಧಾಂತವನ್ನು ಹೇಳುವದರಿಂದ ಪ್ರಯೋಜನವಾಗದು. ಪ್ರಕೃಷ್ಟವಾದ ಪಂಚವೇ ಪ್ರಪಂಚವೆನಿಸುವದು. ಇದು ಶಬ್ದಾದಿ ವಿಷಯುಗಳ ವಿಸ್ತಾರವೇ ಆಗಿದೆ. ಪರಮಾತ್ಮನಿಗೂ ಪ್ರಪಂಚಕ್ಕೂ ಭಿನ್ನತ್ವವೇ ಇರುವದಿಲ್ಲ. "ಶಿವೋ ವಿಶ್ವಾತ್ಮನಾಸ್ಥಿತಃ" ಎಂಬ ಶಿವಯೋಗಿ ಶಿವಾಚಾರ್ಯರ ಉಕ್ತಿಯು ಪರಮಾತ್ಮನೆ ವಿಶ್ವಪ್ರಪಂಚರೂಪದಲ್ಲಿ ವ್ಯಕ್ತವಾಗಿರುವನೆಂದು ಸ್ಪಷ್ಟವಾಗುತ್ತದೆ. ಇದೇ "ಅವಿಕೃತ ಪರಿಣಾಮ"ವೆಂದು ಹಿಂದೆ ಹೇಳಲಾಗಿದೆಯಷ್ಟೇ: ಬಂಗಾರದಿಂದ ಉದಯಿಸಿದ ಕಟಕ – ಕುಂಡಲಾದಿಗಳೆಲ್ಲ ನಾಮ ರೂಪದಿಂದ ಭಿನ್ನವಾಗಿರುವವಲ್ಲದೇ ಸ್ವರ್ಣದಿಂದ ಭಿನ್ನವಾಗಿಲ್ಲ. ಅದರಂತೆಯೇ ಪರಮಾತ್ಮನು ತನ್ನ ಲೀಲೆಯಿಂದ ನಾನಾತ್ಮಕವಾದ ಪ್ರಪಂಚರೂಪದಲ್ಲಿ ಬಂದಾಗ್ಯೂ ಆತನು ಯಾವ ರೀತಿಯಿಂದಲೂ ಭಿನ್ನವಾಗಿರುವದಿಲ್ಲ.

ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾತ್ ಚರಾಚರಂ ।
ತಸ್ಮಾದೇತತ್ ಏತನ್ನ ನಭಿದ್ಯೇತ ಯಥಾ ಕುಂಭಾದಿಕಂ ಮೃದಃ ॥
ಶಿವಾತತ್ವಾತ್ ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೆ ।
ಫೇನೋರ್ಮಿ ಬುದ್ಬುದಾಕಾರೋ ಯಥಾ ಸಿಂಧೋರ್ನಭಿದ್ಯತೆ ॥
ಯಥಾಪುಷ್ಪ ಫಲಾಶಾದಿ ವೃಕ್ಷರೂಪಾನ್ ನ ಭಿದ್ಯತೆ ।
ತಥಾ ಶಿವಾತ್ ಪರಾಕಾಶಾತ್ ಜಗತೊ ನಾಸ್ತಿ ಭಿನ್ನತಾ ॥

(ಸಿದ್ಧಾಂತ ಶಿಖಾಮಣಿ)

ಇವೆಲ್ಲ ಪ್ರಮಾಣಗಳಿಂದ ಪರಮಾತ್ಮನಿಗೂ ಪ್ರಪಂಚಕ್ಕೂ ಭೇದವೇ ಇಲ್ಲವೆಂದು ಸಿದ್ಧವಾಗುವದಿಲ್ಲವೇ ? ಪ್ರಪಂಚರೂಪ ತಿರುಳಿನಲ್ಲಿ ಪರಮಾರ್ಥರೂಪ ರಸವಿರುವದು. ಸಕ್ಕರೆಯಲ್ಲಿ ಪರಮಾರ್ಥವೆಂಬ ಸವಿಯಿದೆ. ಹೀಗಿರುವಾಗ ಬಿಡುವ ಪ್ರಪಂಚವಾವುದು ? ಹಿಡಿವ ಪರಮಾರ್ಥವಾವುದು ? ಪ್ರಪಂಚವೆಂದರೆ ಹೊನ್ನು, ಹೆಣ್ಣು, ಮಣ್ಣು ಎಂದು ಹೇಳಿ ಅವನ್ನು ಬಿಡಬೇಕೆಂಬುದು ಜ್ಞಾನಕ್ಕೆ ವಿರುದ್ಧವಾದುದು. ಇವನ್ನು ಬಿಟ್ಟು ಇರಲಿಕ್ಕೇ ಬರುವದಿಲ್ಲ. ಯಾವುದನ್ನು ಬಿಟ್ಟು ಬಾಳುವದಕ್ಕೆ ಅರ್ಹತೆಯಿರುವದಿಲ್ಲವೋ ಅದನ್ನು ಬಿಡಹೇಳುವದು ಜ್ಞಾನವಾದೀತೆ? ಅಂತೆಯೇ ಅನುಭಾವಿಗಳಾದ ಶರಣರು ಇವಾವನ್ನೂ ಬಿಡಲಿಕ್ಕೆ ಹೋಗಲಿಲ್ಲ. ಪ್ರಭುದೇವರಂತೂ

ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯಲ್ಲ, ಮನದ ಮುಂದಣ
ಆಶೆಯೇ ಮಾಯೆ ಕಾಣಾ ಗುಹೇಶ್ವರ ॥

ಎಂದು ಸ್ಪಷ್ಟವಾಗಿಯೇ ಮಾಯಾಸ್ವರೂಪವನ್ನು ಹೇಳಿ ಅಂಥ ಮಾಯೆಯಿಂದಲೇ ದೂರಾಗಬೇಕೆಂದು ತಿಳಿಸಿರುವರು. ಬಸವಣ್ಣನವರು ಗೃಹಸ್ಥರಾಗಿದ್ದರು. ಅವರಿಗೆ ಇಬ್ಬರು ಹೆಂಡಂದಿರು. ಇದರ ಮೇಲೆ ಬಿಜ್ಜಳಮಹಾರಾಜನ ಪ್ರಧಾನಮಂತ್ರಿಯಾಗಿದ್ದರು. ಹೀಗಿದ್ದರೂ ಅವರು ಮಹಾನುಭಾವರಾಗಿ ಜಗತ್ತಿಗೇ ತಮ್ಮ ಆದರ್ಶವನ್ನು ಬಿಟ್ಟು ಹೋಗಿರುವರಷ್ಟೇ. ಮಹಾನುಭಾವಿಗಳಾದ ಮೊಗ್ಗೆಯ ಮಾಯಿದೇವರು :—

> ಕ್ಷಯಿಸದೆ ಸರ್ವಕಾಮಿತ ಸಮೃದ್ಧಿ ಸಮನ್ವಿತ ತತ್ವ ಐಹಿಕಾ-
> ಶ್ರಯ ಘನಸೌಖ್ಯಮಂ ಬಿಡದೆ ಭೋಗಿಸಿ ತತ್ವನಿಜಸ್ವರೂಪ ನಿ-
> ಶ್ಚಯ ಪದಮಂ ಶರೀರದವಸಾನದೊಳಂದಿ ಮಹಾಮಹೇಶ್ವರರ್-
> ಬಯಸದೆ ಭೋಗ ಮೋಕ್ಷಪರರಪ್ಪುದು ಚಿತ್ರವಲಾ ಶಿವಾಧವಾ ॥

ಎಂದು ಪ್ರಪಂಚವೇ ಪರಮಾರ್ಥವೆಂಬುದನ್ನು ಲೋಕದ ಮುಂದಿಟ್ಟಿದ್ದಾರೆ. ಇದರಿಂದ ಸಂಸಾರ-ಪರಮಾರ್ಥಗಳಲ್ಲಿ ಯಾವ ಭೇದವೂ ಇರುವದಿಲ್ಲ. ಸಂಸಾರವನ್ನು ಪರಮಾರ್ಥರೂಪವಾಗಿಯೂ, ಪರಮಾರ್ಥವನ್ನು ಸಂಸಾರರೂಪವಾಗಿಯೂ ತಿಳಿದು ವರ್ತಿಸುವಲ್ಲಿಯೇ ನಿಜವಾದ ಜಾಣತನವಿದೆ. ಇದೇ ಮಾತನ್ನು ನಿಜಗುಣ ಶಿವಯೋಗಿಗಳು :—

"ಜಾಣನು ಲೌಕಿಕ-ಪರಮಾರ್ಥವೆರಡನು ಮಾಣದೆ ಕೂಡಿ ನಡೆಸುತಿಹನು"

ಎಂದು ಹೇಳಿದ್ದುಂಟು.

ಪರಮಾತ್ಮನ ಚಿತ್ಪ್ರಕಾಶರೂಪವಾದ ಶಕ್ತಿಯು ಕ್ರಿಯಾಂಶದಲ್ಲಿ ಪ್ರವೇಶಿಸಿ ಮಾಯೆಯೆನಿಸುತ್ತದೆ. ಆದ್ದರಿಂದಲೇ ಜಗತ್ತಿನಲ್ಲಿ ಭೋಕ್ತೃ, ಭೋಜ್ಯ, ಭೋಜಕವೆಂಬ ತ್ರಿವಿಧ ಭೇದವನ್ನು ಕಾಣಬಹುದಾಗಿದೆ. ಅದೇ ಜೀವ, ಜಗತ್ತು, ಈಶ್ವರ ಎಂಬ ನಾಮವನ್ನು ಶಿವಾದ್ವೈತ ಸಿದ್ಧಾಂತಕಾರರು ಹೇಳುವರು.

ಭೋಜ್ಯವಿಲ್ಲದೆ ಭೋಕ್ತೃವಾಗಲಾರ. ಭೋಕ್ತೃವಿಲ್ಲದೆ ಭೋಜ್ಯವಾಗದು. ಪ್ರೇರಕವಿಲ್ಲದೆ ಭೋಕ್ತೃ-ಭೋಜ್ಯಗಳಿಗೆ ಸ್ಥಾನವಿಲ್ಲ. ಪರಮಾರ್ಥದೊಳಗಿನ ಮೂರು ತತ್ವಗಳಿವು. ಹಾಲಿನಲ್ಲಿ ದ್ರವತ್ವ, ಶುಭ್ರತ್ವ, ಮಧುರತ್ವಗಳಿರುವಂತೆ ಪರಶಿವರೂಪ ಪರಮಾರ್ಥದಲ್ಲಿ ಭೋಕ್ತೃ-ಭೋಜ್ಯ-ಭೋಜಕ ಈ ಮೂರು ತತ್ವಗಳಿರುತ್ತವೆ. ಇವು ಮೂರೂ ಪರಮಾತ್ಮನ ಲೀಲೆಗಾಗಿ ವ್ಯಕ್ತವಾಗಿ ಭಿನ್ನವಾಗಿ ತೋರಿದರೂ ಪಾರಮಾರ್ಥವಾಗಿ ಏಕರೂಪವಾಗಿವೆ. ಶಿವಾದ್ವೈತದಲ್ಲಿ ಪ್ರಪಂಚವನ್ನು ಪರಮಾರ್ಥ ರೂಪದಲ್ಲಿ ಕಂಡು, ಅದರೊಡನೆ ವ್ಯವಹರಿಸುವದು ಶಿವಾದ್ವೈತಿಯ ಮುಖ್ಯ ಕರ್ತವ್ಯ. ಪ್ರಪಂಚ-ಪರಮಾರ್ಥಗಳೆರಡನ್ನೂ ಕೂಡಿ ನಡೆಯಿಸುವ ಜಾಣತನವನ್ನು ಕಳೆದುಕೊಂಡವನು ಎಂದೂ ಪಾರಮಾರ್ಥಿಕ ಸುಖವನ್ನು ಅನುಭವಿಸಲಾರ. ಇಂಥ

ಉಚ್ಚತತ್ತ್ವದ ಪ್ರತಿಪಾದನೆ ಮಾಡಿ ಜೀವನದಲ್ಲಿ ದಿವ್ಯತ್ವವನ್ನುಂಟು ಮಾಡುವ ಸಿದ್ಧಾಂತವೇ ಷಟ್‌ಸ್ಥಲಸಿದ್ಧಾಂತ. ಇದನ್ನೇ "ಲಿಂಗಾಂಗ ಸಾಮರಸ್ಯ" ಅಥವಾ "ಶಿವಯೋಗ" ಎಂದು ಹೇಳಲಾಗುವದು. ಶಿವಯೋಗವು ಐದು ಪ್ರಕಾರವಾಗಿರುವ ದೆಂದು ಹೇಳಿದವರು ಜಗದ್ಗುರು ರೇಣುಕರೇ.

> ಜ್ಞಾನಂ ಶಿವಮಯಂ ಭಕ್ತಿಶ್ಚೈವಿ ಧ್ಯಾನಂ ಶಿವಾತ್ಮಕಂ
> ಶಿವಯೋಗೋ ಹಿ ಪಂಚಧಾ ॥

ಎಂಬುದೇ ಅವರ ಮತ. ಶಿವಯೋಗದಲ್ಲಿ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವ ವ್ರತ, ಶಿವಾರ್ಚನ ಎಂದು ಪಂಚ ಪ್ರಕಾರಗಳಿವೆ. ಶಿವಜ್ಞಾನದಿಂದ ಮೊದಲಾಗಿ ಶಿವಾರ್ಚನಾಂತವಾದ ಶಿವಯೋಗ ಭವಯೋಗವ ಛೇದಿಸುವಲ್ಲಿ ಪರಮ-ಚರಮ ಸಾಧನವಾಗಿರುವದು. ಮಾಯಿದೇವರು


> ಲಿಂಗದೊಳಿರ್ದು, ಲಿಂಗವನೇ ತಾಳ್ದು, ನಿರಂತರ ಲಿಂಗಪೂಜೆಯಿಂ
> ಲಿಂಗಮನೊಲ್ದು ವಿಸ್ತರಿಸಿ ಲಿಂಗಕೆ ಲಿಂಗವನರ್ಪಿಸುತ್ತ ಮಾ
> ಲಿಂಗಪದಾರ್ಥಮಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ
> ಲಿಂಗ ನಿಜೈಕ್ಯನಯ್ಯ ಪರಮಪ್ರಭು ಮಹದೈಶ್ವರೀಶ್ವರ ॥

ಎಂದಿರುವರು. ಇದು ಲಿಂಗಾಂಗ ಸಾಮರಸ್ಯಕ್ಕಾಗಿ ಪ್ರಯತ್ನಿಸುವ ಸಾಧಕನಿಗೆ ಅತ್ಯುಪಯುಕ್ತವಾದ ಉಪಾಯ.

ಉಪಸಂಹಾರ

ಗುರುವಿನ ಹಸ್ತದಲ್ಲಿ ಹುಟ್ಟಿದವನು ತನ್ನ ಪೂರ್ವಾಶ್ರಯವನ್ನು ಕಳೆದು ಕೊಂಡು ಗುರು-ಲಿಂಗ-ಜಂಗಮ ಭಕ್ತನಾಗಿ ಅರ್ಚನ, ಅರ್ಪಣ, ಅನುಭಾವ ಮೂಲಕ ಆತ್ಮತುಷ್ಟಿ, ಆತ್ಮಪುಷ್ಟಿಯನ್ನು ಪಡೆದು ಸಮರಸರೂಪ ಮುಕ್ತಿಸಿದ್ಧಿಯನ್ನು ಪಡೆಯುವುದೇ ಷಟ್‌ಸ್ಥಲ ಸಿದ್ಧಾಂತಾಚರಣೆಯ ಮುಖ್ಯಗುರಿ. ಮಾನವಜೀವನ ದಲ್ಲಿ ಸಂಸಾರವ್ಯಾಮೋಹರೂಪ ಕತ್ತಲೆ ಹರಿದು ದಿವ್ಯಾನುಭಾವದ ಬೆಳಕಿನಲ್ಲಿ ಬಾಳುವ ನೈಜಸ್ಥಿತಿಯೇ ಜೀವನದ ಸಾರ್ಥಕತೆಯನ್ನು ಹೇಳಿಕೊಡುವದು.

ಷಟ್‌ಸ್ಥಲಗಳಲ್ಲಿ ತನುಕರಣಶುದ್ಧಿ. ಭಕ್ತಸ್ಥಲದಲ್ಲಿ ಮನಕರಣಶುದ್ಧಿ. ಮಹೇಶ ಪ್ರಸಾದಿಸ್ಥಲಗಳಲ್ಲಿ, ಭಾವ-ಆತ್ಮಶುದ್ಧಿ, ಶರಣ ಐಕ್ಯಸ್ಥಲದಲ್ಲಿ. ಭಕ್ತ, ಮಹೇಶಸ್ಥಲ ದಲ್ಲಿ ದಾಸೋಹಂ, ಪ್ರಸಾದಿ-ಪ್ರಾಣಲಿಂಗಿ ಸ್ಥಲದಲ್ಲಿ ಶಿವೋಹಂ, ಶರಣ-ಐಕ್ಯ ಸ್ಥಲ ದಲ್ಲಿ ಶಿವೋಂ ಹೀಗೆ ಶರಣರ ಅನುಭಾವ ಶುದ್ಧಿಯಿರುವದು.



ಶೂನ್ಯಸಂಪಾದನೆ : ಇನ್ನಷ್ಟು ವಿಚಾರಗಳು

● ಡಾ. ಎಂ. ಎಂ. ಕಲಬುರ್ಗಿ

"ವಚನಗಳ ಸಂಗ್ರಹ ಸಂಕಲನ ಸಂಪಾದನೆ" ಮತ್ತು "ಶೂನ್ಯ ಸಂಪಾದನೆಯ ರಾಚನಿಕ ವಿವೇಚನೆ" ಎಂಬ ನನ್ನ ಎರಡು ಲೇಖನಗಳ ಮುಂದುವರಿಕೆಯಾದ ಈ ಲೇಖನದ ಉದ್ದೇಶ ಶೂನ್ಯಸಂಪಾದನೆಯನ್ನು ಕುರಿತು ಇನ್ನಷ್ಟು ವಿಷಯಂಗಳನ್ನು ಹೇಳುವುದಾಗಿದೆ.

೧. ಶೂನ್ಯಸಂಪಾದನ ಸಮಯ :

ವಚನಸಾಹಿತ್ಯವನ್ನು ಬಳಸಿಕೊಂಡು ಹುಟ್ಟಿದ ಸಂಗ್ರಹ, ಸಂಕಲನಗಳ ಮಗ್ಗುಲಲ್ಲಿ ಮೂಡಿದ ಒಂದು ಸಾಹಿತ್ಯ ಪ್ರಕಾರ 'ಸಂಪಾದನ ಸಾಹಿತ್ಯ'. ಈ ಪ್ರಕಾರದ ಲಕ್ಷಣಗಳನ್ನು ಹೀಗೆ ಹೇಳಬಹುದು : ೧) ಇದು ಅನ್ಯರ ವಚನಗಳಿಂದ ರೂಪಗೊಂಡಿರುತ್ತದೆ. ೨) ಇದು ಸಂವಾದ ಶೈಲಿಯಲ್ಲಿರುತ್ತದೆ. ೩) ಪ್ರಭುದೇವ ಈ ಸಾಹಿತ್ಯದ ಕೇಂದ್ರಪಾತ್ರವಾಗಿರುತ್ತಾನೆ.

ಈ ಲಕ್ಷಣಗಳ ಒರೆಗೆ ಹಚ್ಚಿದರೆ ಶೀಲಸಂಪಾದನೆ, ಪ್ರಸಾದ ಸಂಪಾದನೆ, ಷಟ್ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು, ಅನುಭವಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರದ ವಚನಗಳು– ಈ ಕೃತಿಗಳ ಶೀರ್ಷಿಕೆಯಲ್ಲಿ 'ಸಂಪಾದನೆ' ಎಂಬ ಶಬ್ದ ಕಂಡುಬರುತ್ತಿದ್ದರೂ ಇವು ಅನ್ಯರ ವಚನಗಳ ಸಂಗ್ರಹಗಳಾಗಿದ್ದರೂ ಸಂವಾದಶೈಲಿ, ಪ್ರಭುದೇವರ ನಾಯಕತ್ವವಿಲ್ಲದ ಕಾರಣ 'ಸಂಪಾದನ ಸಾಹಿತ್ಯ'ದಿಂದ ಹೊರಗುಳಿಯುತ್ತವೆ. ಇದೇರೀತಿ ಸಕಲಪುರಾತನರ ವಚನಕಟ್ಟಿನಲ್ಲಿರುವ 'ಶೀಲಸಂಪಾದನೆಯ ವಚನಗಳು' ಹೆಸರಿನ ಭಾಗವೂ ಅಲ್ಲಿಯೇ ಶಿವಲೆಂಕ ಮಂಚಣ್ಣನ ವಚನ ಸಂದರ್ಭದಲ್ಲಿ ಬರುವ 'ಶೀಲ ಸಂಪಾದನ ಸಮರ್ಪಣ' ಎಂಬ ಭಾಗವೂ ಸಂಪಾದನಸಾಹಿತ್ಯದಿಂದ ಹೊರತಾಗುತ್ತವೆ.

ಇವುಗಳನ್ನು ಬಿಟ್ಟರೆ ಮೇಲೆ ಹೇಳಿದ ಮೂರೂ ಲಕ್ಷಣಗಳಿಗೆ ಬದ್ಧವಾಗುವ ಕೃತಿಗಳೆಂದರೆ (೧) ಈಗ ಲಭ್ಯವಾಗಿರುವ ನಾಲ್ಕು ಪ್ರಸಿದ್ಧ ಶೂನ್ಯಸಂಪಾದನೆಗಳು (೨) ಸುಖಸಂಪಾದನೆಯ ವಚನಗಳು, 'ಸಂಪಾದನೆಯ ಸಾರಾಮೃತ' ಮತ್ತು ಸಕಲ ಪುರಾತನರ ವಚನ ಕಟ್ಟಿನಲ್ಲಿರುವ 'ಸಂಪಾದನೆಯ ವಚನಗಳು' ಎಂಬ ಭಾಗ. (೩) ಲಿಂಗಲೀಲಾವಿಲಾಸಚಾರಿತ್ರದ "ಸಿದ್ಧರಾಮಯ್ಯದೇವರ ಗುರುಕರುಣಸ್ಥಲ"ದ ಭಾಗ. ಮುಕ್ತಿಕಂಠಾಭರಣ, ಅಲ್ಲಮಪ್ರಭು-ಸಿದ್ಧರಾಮನ ವಾದದ ವಚನಗಳು. ಈ ಮೂರು ಗುಂಪುಗಳನ್ನು ಶೂನ್ಯಸಂಪಾದನೆಗಳು, ಸಂಕ್ಷಿಪ್ತ ಶೂನ್ಯಸಂಪಾದನೆಗಳು ಮತ್ತು ಶೂನ್ಯಸಂಪಾದನ ಮಾದರಿಯ ಗ್ರಂಥಗಳು–ಎಂದು ಕರೆಯಬಹುದು. ಇವೆಲ್ಲ ಶಿವಗಣ ಪ್ರಸಾದಿ ಮಹಾದೇವಯ್ಯಗಳ ತರುವಾಯದ ಕೃತಿಗಳಾಗಿವೆ. ಹೀಗಾಗಿ ವೀರಶೈವ ದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ 'ಸಂಪಾದನೆ' ಎಂಬ ಹೆಸರು ಶೂನ್ಯಸಂಪಾದನೆ ಸೃಷ್ಟಿಯಾದ ತರುವಾಯವೇ ಚಲಾವಣೆಗೆ ಬಂದಿತೆಂದೂ, ಮೊದಮೊದಲು 'ಸಂಪಾದನ ಸಾಹಿತ್ಯ'ದ ಚಟುವಟಿಕೆ 'ಶೂನ್ಯಸಂಪಾದನೆ'ಗಳ ಪರಿಷ್ಕರಣ, ಪ್ರತಿಕರಣ, ಪ್ರಸಾರ, ವ್ಯಾಖ್ಯಾನಗಳ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದ್ದಿತೆಂದೂ ಹೇಳ ಬಹುದು.

ಆಮೇಲೆ ಶೂನ್ಯಸಂಪಾದನೆಯ ಮಾದರಿಯಲ್ಲಿ ಹುಟ್ಟಿಕೊಂಡ ಯಾವುದೇ ಸಂವಾದರೂಪದ ವಚನ ಸಂಪುಟಗಳಿಗೆ, ಬಳಿಕ ಸಂವಾದಶೈಲಿಯದಲ್ಲದ ವಚನ ಸಂಪುಟಗಳಿಗೆ 'ಸಂಪಾದನ ಸಾಹಿತ್ಯ' ಎಂಬ ಹೆಸರು ಬಳಕೆಯಾಗುತ್ತ ಬಂದಿರ ಬಹುದು. ಚೆನ್ನಂಜೇದೇವ ಮೊದಲಾದವರು ಯಾವುದೇ ರೀತಿಯ ವಚನ ಸಂಪುಟ ರಚಿಸಿದ್ದರೂ ಅವರು ತಮ್ಮನ್ನು ಸಂಪಾದನೆಯ ಚೆನ್ನಂಜೇದೇವ ಎಂದು ಮುಂತಾಗಿ ಕರೆದುಕೊಂಡುದನ್ನು ಇಲ್ಲಿ ನೆನೆಯಬೇಕು.

ಹೀಗೆ ಬರಬರುತ್ತ ಇಷ್ಟು ವ್ಯಾಪಕ ಅರ್ಥಪಡೆದ ಎಲ್ಲ ಬಗೆಯ ವಚನ ಸಂಪುಟಗಳನ್ನು ಸಿದ್ಧಪಡಿಸುವ ವೀರಶೈವ ವಿರಕ್ತ ಸ್ವಾಮಿಗಳ ಒಂದು ಸಂಪ್ರದಾಯವೇ ಬೆಳೆದುಬಂದು ಮುರುಘಾ, ಚೀಲಾಳ, ಕುಮಾರ, ಕೆಂಚನ ಸಮಯಗಳ ಜೊತೆಯಲ್ಲಿ 'ಸಂಪಾದನ ಸಮಯ' ಎಂಬ ಹೆಸರು ಪಡೆದುಕೊಂಡಿತು. ಹೀಗೆ ಈ 'ಸಂಪಾದನ ಸಮಯ'ದವರು ಎಲ್ಲ ಬಗೆಯ ವಚನಸಂಪುಟಗಳನ್ನು ಸಿದ್ಧಪಡಿಸುತ್ತ ಬಂದಿದ್ದರೂ ಮೂಲತಃ ಶೂನ್ಯಸಂಪಾದನೆಗಳನ್ನು ಮಾತ್ರ ಪ್ರತಿಮಾಡುವುದು, ಪರಿಷ್ಕರಿಸುವುದು, ಸಂಗ್ರಹಿಸುವುದು, ವ್ಯಾಖ್ಯಾನಿಸುವುದು, ಪ್ರಸಾರ ಮಾಡುವುದೇ ಅವರ ಕೆಲಸವಾಗಿರಬೇಕು. ಹೀಗಾಗಿ ಮೂಲತಃ ಸಂಪಾದನ ಸಾಹಿತ್ಯವೆಂದರೆ "ಶೂನ್ಯಸಂಪಾದನ ಸಾಹಿತ್ಯ"ವೆಂದೂ ಸಂಪಾದನ ಸಮಯವೆಂದರೆ ಮೂಲತಃ "ಶೂನ್ಯಸಂಪಾದನ ಸಮಯ"ವೆಂದೂ ಅರ್ಥವಿರಬಹುದು.

ಈ 'ಸಂಪಾದನ ಸಮಯ'ಕ್ಕೆ ಸಂಬಂಧಿಸಿದ ಮಠಗಳನ್ನು 'ಸಂಪಾದನೆಯ ಮಠ'ಗಳೆಂದು ಕರೆಯುತ್ತಾರೆ. ಆದರೆ 'ಶೂನ್ಯಸಂಪಾದನೆಯ ಮಠ' ಎಂಬುದೇ ಇವುಗಳ ನಿಜವಾದ ಹೆಸರಿರುವಂತೆ ಕಾಣುತ್ತದೆ. ಗೋಕಾಕದಲ್ಲಿರುವ 'ಸಂಪಾದನೆಯ ಮಠ'ದ ಮಹಾದ್ವಾರದ ಮೇಲೆ 'ಶೂನ್ಯಸಂಪಾದನೆಯ ಮಠ' ಎಂದೇ ಬರೆಯಲಾಗಿದೆ. ಅಲ್ಲಿಯ ಸ್ವಾಮಿಗಳೂ "ಶೂನ್ಯಸಂಪಾದನೆಯ ಮಠ" ಎಂಬುದೇ ತಮ್ಮ ಮಠದ ಸರಿಯಾದ ಹೆಸರೆಂದು ಹೇಳುತ್ತಾರೆ. ಅಲ್ಲಿಯ ದಾಖಲೆಗಳೂ ಇದನ್ನು ಸಮರ್ಥಿಸುತ್ತಿವೆ ಎಂಬುದು ಅವರ ಹೇಳಿಕೆಯಾಗಿದೆ.

ಇದೆಲ್ಲವನ್ನು ಗಮನಿಸಿದರೆ ಒಂದು ಕೃತಿ ನಾಲ್ಕು ವಿಸ್ತೃತ ಆವೃತ್ತಿಗಳಾಗಿ ಬೆಳೆದುದು, ಮೂರು ಸಂಕ್ಷಿಪ್ತ ಆವೃತ್ತಿಗಳಾಗಿ ರೂಪಗೊಂಡುದು, ಇತರ ಸಂಪಾದನ ಕೃತಿಗಳ ಸೃಷ್ಟಿಗೆ ಪ್ರೇರಣೆ ನೀಡಿದುದು, ಇದರ ಹೆಸರಿನಲ್ಲಿ ಕೆಲವು ಮಠಗಳು ತಲೆ ಎತ್ತಿದುದು, ಇಂಥ ಮಠಗಳದೇ ಆದ ಒಂದು 'ಸಮಯ' ಬೆಳೆದುದು ಈ ಕೃತಿಯ ಮಹತ್ವ, ಪ್ರಭಾವಗಳನ್ನು ಸ್ಪಷ್ಟಪಡಿಸುತ್ತದೆ.

೨. ಸಂಕ್ಷಿಪ್ತ ಶೂನ್ಯಸಂಪಾದನೆಗಳು :

ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಿಂದ ಒಂದು ಕಡೆ ಮೂರು ವಿಸ್ತೃತ ಶೂನ್ಯಸಂಪಾದನೆಗಳು ಬೆಳೆಯುತ್ತ ಬಂದಂತೆ, ಇನ್ನೊಂದು ಕಡೆ ಮೂರು ಸಂಕ್ಷಿಪ್ತ ಶೂನ್ಯಸಂಪಾದನೆಗಳು ಹುಟ್ಟಿಕೊಳ್ಳುತ್ತ ಬಂದುದು ಒಂದು ವಿಶೇಷ. ಅವು : ೧. ಸುಖ ಸಂಪಾದನೆಯ ವಚನಗಳು. ೨. ಸಕಲಪುರಾತನರ ವಚನ ಕಟ್ಟಿನಲ್ಲಿರುವ 'ಸಂಪಾದನೆಯ ವಚನಗಳು' ೩. ಸಂಪಾದನೆಯ ಸಾರಾಮೃತ.

ಇವುಗಳಲ್ಲಿ 'ಸುಖಸಂಪಾದನೆಯ ವಚನಗಳು' ಎಂಬುದು ೩೩೯ ವಚನಗಳನ್ನೊಳಗೊಂಡಿದೆ. ಇದರಲ್ಲಿ ಸಂಪಾದನಕಾರನ ಗದ್ಯತುಂಡುಗಳಿಲ್ಲ. ಪ್ರಭುದೇವರ ಬಸವಣ್ಣನ ಸುಖಸಂಪಾದನೆಯ ವಚನ. ಇನ್ನು ಪ್ರಭುದೇವ ಚೆನ್ನಬಸವರಾಜದೇವರ ಸಂಪಾದನೆ, ಇನ್ನು ಮುಂದೆ ಪ್ರಭುದೇವರ ಕೂಡೆ ಮಡಿವಾಳಯ್ಯ ಮೋಳಿಗಯ್ಯ ಸಿದ್ಧರಾಮಯ್ಯಗಳ ಸಂಪಾದನೆ, ಇನ್ನು ಮುಂದೆ ಪ್ರಭುದೇವ ಮರುಳಶಂಕರದೇವ ಬಸವಣ್ಣನವರ ಸಂಪಾದನೆ, ಇನ್ನು ಮುಂದೆ ಪ್ರಭುದೇವರು ಮಹಾದೇವಿಯಕ್ಕಗಳ ಸಂಪಾದನೆ, ಆ ಪ್ರಸ್ತಾವದೊಳು ಘಟ್ಟಿವಾಳಯ್ಯಗಳ ಸಮಯ ಸಮೂಹದ ಸಂಪಾದನೆ, ಆ ಪ್ರಸ್ತಾವದೊಳು ನುಲಿಯ ಚೆಂದಯ್ಯಗಳ ಸಂಪಾದನೆಯ ವಚನ, ಆ ಪ್ರಸ್ತಾವದೊಳು ಅಯ್ದಕ್ಕಿ ಮಾರಯ್ಯಗಳ ವಚನ, ಆ ಪ್ರಸ್ತಾವದೊಳು ಅಯ್ದಕ್ಕಿ ಮಾರಯ್ಯಗಳೊಡನೆ ಪ್ರಭುದೇವ ಬಸವಣ್ಣನವರ ಪ್ರತ್ಯುತ್ತರ, ಅದಕ್ಕೆ ಲಕ್ಕಮ್ಮಗಳ ಪ್ರತ್ಯುತ್ತರ, ಆ ಪ್ರಸ್ತಾವದೊಳು ಅಂಬಿಗರ ಚೌಡಯ್ಯಗಳ ಸಂಪಾದನೆ– ಎಂಬ ಶೀರ್ಷಿಕೆಗಳ ಅಡಿಯಲ್ಲಿ ವಚನಗಳನ್ನು ಅಡಕಗೊಳಿಸಲಾಗಿದೆ. ಕೊನೆಯ

ಅಂಬಿಗರ ಚೌಡಯ್ಯನ ವಚನಗಳು ಕೇವಲ ಸಂಗ್ರಹವಾಗಿವೆಯೇ ಹೊರತು ಅಲ್ಲಿ ಸಂವಾದ ತಂತ್ರ ಕಂಡುಬರುವದಿಲ್ಲ. ಈ ಕೃತಿಯು ಅಂತ್ಯದಲ್ಲಿ "ಈ ವಚನಗಳು ಶೂನ್ಯ ಸಂಪಾದನೆಗೆ ಸೇರಲಿಲ್ಲದ ವಚನವೆಂದು ನಾವು ಕವಳೀಕರಿಸಿ ಸೇರಿಸಿದೆವು" ಎಂಬ ಮಾತು ಬರುತ್ತದೆ. ಸಾಮಾನ್ಯವಾಗಿ ಇದರಲ್ಲಿಯು ವಚನಗಳು ಗೂಳೂರು ಸಂಪಾದನೆಯಲ್ಲಿ ಹೆಚ್ಚು, ಗುಮ್ಮಳಾಪುರ ಸಂಪಾದನೆಯಲ್ಲಿ ಕಡಿಮೆ, ಹಲಗೆದೇವರ ಸಂಪಾದನೆಯಲ್ಲಿ ಇನ್ನೂ ಕಡಿಮೆ ಇವೆ; ಮಹಾದೇವಯ್ಯ ಸಂಪಾದನೆಯಲ್ಲಿ ಒಂದೂ ಇಲ್ಲ. ಕಾರಣ ಇದು ಮಹಾದೇವಯ್ಯನ ತರುವಾಯ ಹುಟ್ಟಿದ ಕೃತಿಯಾಗಿದೆ. ಮತ್ತು "ಈ ವಚನಂಗಳು ಶೂನ್ಯಸಂಪಾದನೆಗೆ ಸೇರಲಿಲ್ಲದ ವಚನ" ವೆಂಬ ಮಾತು ಮಹಾದೇವಯ್ಯನ ಕೃತಿಯನ್ನೇ ಕುರಿತು ಹೇಳಿದುದಾಗಿದೆ.

ಈ ದಾರಿಯಲ್ಲಿ ಹುಟ್ಟಿದ ಎರಡನೆಯ ಕೃತಿ, ಸಕಲ ಪುರಾತನರ ವಚನಕಟ್ಟಿನಲ್ಲಿರುವ "ಸಂಪಾದನೆಯ ವಚನಗಳು" ಎಂಬ ಭಾಗ. ಪ್ರಭುದೇವರ ಬಸವಣ್ಣನವರ ಸಂಪಾದನೆ, ಪ್ರಭುದೇವರ ಚೆನ್ನಬಸವಣ್ಣದೇವರ ಸಂಪಾದನೆ, ಪ್ರಭುದೇವ ಸಿದ್ಧರಾಮಯ್ಯದೇವರ ಸಂಪಾದನೆ, ಪ್ರಭುದೇವರ ಮಹಾದೇವಿಯಕ್ಕಗಳ ಸಂಪಾದನೆ, ಘಟ್ಟಿವಾಳಯ್ಯಗಳ ಸಮಯ ಸಮೂಹದ ಸಂಪಾದನೆ, ನುಲಿಯ ಚಂದಯ್ಯಗಳ ಸಂಪಾದನೆ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆ ಎಂಬ ಶೀರ್ಷಿಕೆಗಳ ಅಡಿಯಲ್ಲಿ ೨೩೬ ವಚನಗಳನ್ನು ಸಂಯೋಜಿಸಲಾಗಿದೆ. ಇದರಲ್ಲಿ ಸಂಪಾದನಕಾರನ ಗದ್ಯ ತುಂಡುಗಳಿಲ್ಲ. ಇದನ್ನೇ ಆಧರಿಸಿ ಮಹಾದೇವಯ್ಯನ ಸಂಪಾದನೆ ಹುಟ್ಟಿರಬಹುದೆಂದು ಈ ವರೆಗೆ ವಿದ್ವಾಂಸರು ಭಾವಿಸಿದ್ದರು. ಆದರೆ ಇದರಲ್ಲಿಯ ಒಂದೂ ವಚನ ಮಹಾದೇವಯ್ಯನಲ್ಲಿಲ್ಲದ ಕಾರಣ ಇದು ಮಹಾದೇವಯ್ಯನ ತರುವಾಯದ ಕೃತಿಯೆಂದು ಹೇಳಬೇಕಾಗುತ್ತದೆ. 'ಸುಖಸಂಪಾದನೆಯ ವಚನಗಳು' ಕೃತಿಯ ಕೊನೆಯಲ್ಲಿರುವ ಅಂಬಿಗರ ಚೌಡಯ್ಯನ ವಚನಗಳನ್ನು ಬಿಟ್ಟರೆ ಉಳಿಯುವ ಭಾಗ ಮತ್ತು ಈ 'ಸಂಪಾದನೆಯ ವಚನಗಳು' ಭಾಗ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗಿವೆ.

ಈ ಮಾದರಿಯಲ್ಲಿ ಹುಟ್ಟಿದ ಮೂರನೆಯ ಸಂಕ್ಷಿಪ್ತ ಶೂನ್ಯಸಂಪಾದನೆಯೆಂದರೆ 'ಸಂಪಾದನೆಯ ಸಾರಾಮೃತ'. ಇದರಲ್ಲಿ ೨೨೬ ವಚನಗಳಿವೆ. ಪಿಂಡಸ್ಥಲ, ಪಿಂಡಜ್ಞಾನ ಸ್ಥಲ, ಸಂಸಾರಹೇಯ ಸ್ಥಲ, ಮಾಯಾವಿಡಂಬನ ಸ್ಥಲ, ಗುರುಕರುಣಸ್ಥಲ, ಭಕ್ತಸ್ಥಲ, ಮಹೇಶ್ವರ ಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲ, ಪ್ರಭುದೇವರ ಸ್ವಲೀಲಾನಂದ ಭಕ್ತಿಸ್ಥಲ, ಸಿದ್ಧರಾಮಯ್ಯನ ಸಂಪಾದನೆ, ಪ್ರಭುದೇವರು ಕಲ್ಯಾಣಕ್ಕೆ ಬಂದ ಸಂಪಾದನೆ, ಮರುಳಶಂಕರದೇವರ ಸಂಪಾದನೆ, ಸಿದ್ಧರಾಮಯ್ಯನ ಸಂಪಾದನೆ, ಪ್ರಭುದೇವರ ಪೂಜಾಸ್ತುತಿ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, ಮೋಳಿಗಯ್ಯಗಳ ಸಂಪಾದನೆ, ನುಲಿಯ ಚಂದಯ್ಯಗಳ ಸಂಪಾದನೆ, ಘಟ್ಟಿವಾಳಯ್ಯಗಳ ಸಂಪಾದನೆ, ಪ್ರಭುದೇವರು ದೇಶಾಂತರ ಹೋಗಿ ಬಂದ ಸಂಪಾ

ವನೆ. ಪ್ರಭುದೇವರು ಶೂನ್ಯಸಿಂಹಾಸನವೇರಿದ ಸಂಪಾದನೆ. ಪ್ರಭುದೇವರ ಆರೋಗಣೆ, ಶರಣರ ಅವಸಾನ ಪರಾಂಬರಿಕೆ. ಗೋರಕ್ಷನ ಸಂಪಾದನೆ. ಎಲ್ಲಾ ಗಣಂಗಳ ಐಕ್ಯ– ಈ ಶೀರ್ಷಿಕೆಗಳ ಕೆಳಗೆ ವಚನಗಳನ್ನು ಸಂಗ್ರಹಿಸಲಾಗಿದೆ. ಇದು ನೇರವಾಗಿ ಗೂಳೂರ ಸಂಪಾದನೆಯ ಸಂಗ್ರಹ. ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿಯ ಎಲ್ಲ ವಚನಗಳಿಗೆ ಟೀಕು ಇರುವುದು. ಈ ಟೀಕೆಯನ್ನು ಈತನು ತನ್ನ ಹಿಂದಿನ ಟೀಕಾಯುಕ್ತ ಕೃತಿಗಳಿಂದ ಸ್ವೀಕರಿಸಿದ್ದಾನೆ. ಈ ಕಾರಣದಿಂದಾಗಿ ಇದನ್ನು ಕೊನೆಯಲ್ಲಿ 'ವ್ಯಾಖ್ಯಾನ' ಎಂದು ಕರೆಯಲಾಗಿದೆ.

ಈ ಮೂರೂ ಸಂಕ್ಷಿಪ್ತ ಶೂನ್ಯಸಂಪಾದನೆಗಳು ಶಿವಗಣ ಪ್ರಸಾದಿಯ ತರುವಾಯ ಹುಟ್ಟಿವೆ. ಸಂಪಾದನೆಯ ಸಾರಾಮೃತ ಮಾತ್ರ ಇನ್ನೂ ಮುಂದಿನ ಅವಧಿಯಲ್ಲಿ ಅಂದರೆ ಗೂಳೂರು ಸಂಪಾದನೆಯ ತರುವಾಯ ಹುಟ್ಟಿದುದು ಸತ್ಯ. ನುಲಿಯ ಚಂದಯ್ಯನ ಪ್ರಕರಣ ಮೊದಲಸಲ ಹಲಗೆದೇವನಲ್ಲಿ, ಆಯ್ದಕ್ಕಿ ಮಾರಯ್ಯನ ಪ್ರಕರಣ ಮೊದಲಸಲ ಗುಮ್ಮಳಾಪುರ ಸಿದ್ಧಲಿಂಗನಲ್ಲಿ, ಘಟ್ಟಿವಾಳಯ್ಯನ ಪ್ರಕರಣ ಮೊದಲಸಲ ಗೂಳೂರ ಸಿದ್ಧವೀರಣ್ಣನಲ್ಲಿ ಕಂಡುಬರುತ್ತವೆ. ಈ ಮೂರೂ ಪ್ರಕರಣಗಳು ಸುಖಸಂಪಾದನೆಯ ವಚನಗಳು ಮತ್ತು ಸಂಪಾದನೆಯ ವಚನಗಳು ಕೃತಿಗಳಲ್ಲಿರುವುದರಿಂದ ಇವು ಸಹ ಗೂಳೂರು ತರುವಾಯ ಹುಟ್ಟಿರಬಹುದೇ ? ಎನಿಸುತ್ತದೆ. ಆದರೆ ಹಿಂದೆ ಹೇಳಿದಂತೆ "ಸುಖಸಂಪಾದನೆಯ ವಚನಗಳು" ಕೃತಿಯ ಅಂತ್ಯದಲ್ಲಿ ಬರುವ ಉಲ್ಲೇಖ ಅದು ಮಹಾದೇವಯ್ಯನ ತರುವಾಯ ಹುಟ್ಟಿ, ಮೇಲೆ ಹೇಳಿದ ಮೂರು ಪ್ರಕರಣಗಳನ್ನು ಸೃಷ್ಟಿಸಿಕೊಂಡು ಹಲಗೆದೇವ, ಗುಮ್ಮಳಾಪುರ, ಗೂಳೂರ ಸಂಪಾದನೆಗಳಿಗೆ ಪ್ರೇರಣೆ ನೀಡಿರಬಹುದೆಂಬ ನಿರ್ಣಯಕ್ಕೆ ಬರಲು ಒತ್ತಾಯಿಸುತ್ತದೆ. ಒಟ್ಟಿನಲ್ಲಿ ಇವೆರಡರ ಕಾಲವನ್ನು ಇನ್ನೂ ನಿರ್ದಿಷ್ಟಪಡಿಸಬೇಕಾಗಿದೆ. ಒಂದು ವೇಳೆ 'ಸಂಪಾದನೆಯ ವಚನಗಳು', ಗೂಳೂರು ತರುವಾಯದ ಕೃತಿಯಾಗಿದ್ದರೆ ಇದನ್ನು ಒಳಗೊಂಡ ಸಕಲ ಪುರಾತನರ ವಚನ ಕಟ್ಟು ಗೂಳೂರ ಸಿದ್ಧವೀರಣ್ಣ (ಕ್ರಿ. ಶ. ೧೬೦೦) ನಿಗೆ ತರುವಾಯದಲ್ಲಿ ಸಿದ್ಧವಾಗಿರಬೇಕೆಂದು ಹೇಳುವುದು ಅನಿವಾರ್ಯವಾಗುತ್ತದೆ.

೩. ಸಿದ್ಧರಾಮನ ದೀಕ್ಷಾಪ್ರಸಂಗ :

ಮಹಾದೇವಯ್ಯ, ಸಿದ್ಧಲಿಂಗ, ಸಿದ್ಧವೀರಣ್ಣರು ಶೂನ್ಯಸಂಪಾದನೆಗಳನ್ನು ರಚಿಸಿರುವುದು ತಿಳಿದ ವಿಷಯವೇ ಆಗಿದೆ. ಇವುಗಳನ್ನು ಬಿಟ್ಟರೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಬೇರೊಂದು ಶೂನ್ಯಸಂಪಾದನ ಕೃತಿ ಲಭಿಸುತ್ತದೆ. ಇದು ಕೆಂಚವೀರಣ್ಣನದೆಂದು ಕೆಲವರು, ಹಲಗೆದೇವನದೆಂದು ಕೆಲವರು ಹೇಳುತ್ತಾರೆ. ಈ ಸಂದರ್ಭಗಳಲ್ಲಿ ಸಿದ್ಧರಾಮನ ದೀಕ್ಷೆಯ ಬಗ್ಗೆ ಒಂದು ವಿಷಯವನ್ನು ಮಂಡಿಸಬಹುದು.

ಮಹಾದೇವಯ್ಯನಲ್ಲಿಲ್ಲದ ಸಿದ್ಧರಾಮಯ್ಯನ ದೀಕ್ಷಾಭಾಗವನ್ನು ತಾನು ಹೊಸದಾಗಿ ಸೇರಿಸುತ್ತಿರುವುದಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರತಿ ಹೇಳುತ್ತದೆ. ಆದರೆ ಈ ಕೆಲಸ ಮಾಡಿದವನು ಕೆಂಚವೀರಣ್ಣನೆಂದು ಗುಮ್ಮಳಾಪುರ ಸಿದ್ಧಲಿಂಗ, ಗುಮ್ಮಳಾಪುರ ಸಿದ್ಧಲಿಂಗ ಮಾಡಿದನೆಂದು ಗೂಳೂರು ಸಿದ್ಧವೀರಣ್ಣ ಹೇಳುತ್ತಾರೆ. ಇಲ್ಲಿ ಮೈಸೂರು ಕೃತಿಕಾರ ಮತ್ತು ಕೆಂಚವೀರಣ್ಣರು ಭಿನ್ನವಾಗಿದ್ದರೆ ದೀಕ್ಷಾಸಂದರ್ಭ ರಚನೆಯಲ್ಲಿ ಮೂವರ ಕೈವಾಡ (ಮೈಸೂರು ಕೃತಿಕಾರ. ಕೆಂಚವೀರಣ್ಣ, ಗುಮ್ಮಳಾಪುರ ಸಿದ್ಧಲಿಂಗ) ವಿದೆಯೆಂದೂ ಮೈಸೂರು ಕೃತಿಕಾರ ಮತ್ತು ಕೆಂಚವೀರಣ್ಣ ಒಬ್ಬನೇ ಇದ್ದರೆ ಇಬ್ಬರ ಕೈವಾಡ (ಕೆಂಚವೀರಣ್ಣ, ಗುಮ್ಮಳಾಪುರದ ಸಿದ್ಧಲಿಂಗ) ವಿದೆಯೆಂದೂ ಭಾವಿಸಬೇಕಾಗುತ್ತದೆ.[೨] ಈ ದೀಕ್ಷಾಪ್ರಸಂಗ ಮೈಸೂರು ಪ್ರತಿ ಮತ್ತು ಸಿದ್ಧಲಿಂಗರ ಕೃತಿಗಳಲ್ಲಿ ಹೇಗೆ ನಿರೂಪಣಗೊಂಡಿವೆಯೆಂಬುದರ ತೌಲನಿಕ ಅಧ್ಯಯನ ನಡೆಯುವುದು ಅವಶ್ಯವಿದೆ.

೪. ಪ್ರಸಾದಿ ಮಹಾದೇವಯ್ಯನ ಕಾಲ :

ಈತನ ಕಾಲ ಇನ್ನೂ ಅನಿರ್ಣೀತ. (ಅ) ಇವನ ಶೂನ್ಯಸಂಪಾದನೆಯ ಅಂತ್ಯದಲ್ಲಿ ಬರುವ "ಇದು ಪರಮಗುರು, ಪರಮ ವೀರಶೈವ ಸಿದ್ಧಾಂತ ತತ್ವಜ್ಞಾನ, ಇದು ವೀರಶೈವಾಚಾರ ಪ್ರತಿಷ್ಠಾಪನಾಚಾರ್ಯ......" ಮುಂತಾದ ಪ್ರಶಸ್ತಿ ವಾಕ್ಯ ಸೂಕ್ತ ಬದಲಾವಣೆಯೊಂದಿಗೆ ಗಣಭಾಷಿತರತ್ನಮಾಲೆಯಲ್ಲಿ ಕಂಡುಬರುತ್ತದೆ. ಬಹುಶಃ ಇದನ್ನು ಮಹಾದೇವಯ್ಯನ ಕೃತಿಯಿಂದ ಮಲ್ಲಣಾರ್ಯ ಸ್ವೀಕರಿಸಿರಬಹುದು. ಇದು ನಿಜವಿದ್ದರೆ ಮಲ್ಲಣಾರ್ಯನ ಕಾಲವಾದ ೧೪೭೫ ಕ್ಕೆ ಮಹದೇವಯ್ಯ ಹಿಂದಿನವನಾಗುತ್ತಾನೆ.

(ಆ) ಪ್ರಭುದೇವನ ಜೀವನ ಚರಿತ್ರೆಯಲ್ಲಿ ಎರಡು ಘಟ್ಟಗಳು ಕಾಣುತ್ತವೆ. ಅವು : ಆತನು ಕಾಮಲತೆಯನ್ನು ಮದುವೆಯಾಗಿದ್ದನೆಂಬ ಮೊದಲ ಘಟ್ಟ. ಬ್ರಹ್ಮಚಾರಿಯಾಗಿದ್ದು ಮಾಯೆಯನ್ನು ಸೋಲಿಸಿದನೆಂಬ ಎರಡನೆಯ ಘಟ್ಟ. ಎರಡನೆಯ ಘಟ್ಟ ೧೫ನೆಯ ಶತಮಾನದ ತರುವಾಯ ಕಾಣಿಸಿಕೊಳ್ಳುತ್ತದೆ. ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ಮೊದಲಘಟ್ಟದ ಅಭಿಪ್ರಾಯವೇ ಇರುವುದರಿಂದ ಈತನು ೧೫ನೆಯ ಶತಮಾನಕ್ಕೆ ಹಿಂದಿನವನೇ ಆಗಿದ್ದಾನೆ.

೫. ಗುಮ್ಮಳಾಪುರದ ಸಿದ್ಧಲಿಂಗನ ಕಾಲ :

(ಅ) ಗುಮ್ಮಳಾಪುರ ಸಿದ್ಧಲಿಂಗ ತಾನು ತೋಂಟದ ಸಿದ್ಧಲಿಂಗನ ಶಿಷ್ಯನೆಂದು ವ್ಯಕ್ತವಾಗಿಯೇ ಹೇಳಿಕೊಂಡಿದ್ದಾನೆ. ಇತ್ತೀಚಿನ ಶೋಧದ ಪ್ರಕಾರ ತೋಂಟದ ಸಿದ್ಧಲಿಂಗನ ಕಾಲ ಕ್ರಿ. ಶ. ಸು. ೧೫೭೦ ಎಂದು ತಿಳಿದುಬಂದಿರುವುದರಿಂದ ಶಿಷ್ಯ ಸಿದ್ಧಲಿಂಗ ಈ ತೇದಿಗೆ ಸ್ವಲ್ಪ ಮುಂದಿನವನಾಗಿರಬಹುದು. (ಆ) ತನ್ನ ಶೂನ್ಯ

ಸಂಪಾದನೆಯಲ್ಲಿ ಪ್ರಭುದೇವರ ಜನನದ ಬಗೆಗೆ ವಿವರಣೆ ನೀಡುತ್ತ "ಆ ನಿಃಕಲ ಪರಶಿವಲಿಂಗದ ಸ್ಥೂಲವೆ ಗುರು, ಸೂಕ್ಷ್ಮವೆ ಲಿಂಗ, ಕಾರಣವೆ ಜಂಗಮವೆಂಬುದಕ್ಕೆ ಕಲ್ಲುಮಠದ ಪ್ರಭುದೇವರು ಪ್ರಭುದೇವರ ಮಂತ್ರಗೋಪ್ಯಕ್ಕೆ ಸೇರಿಸಿದ ಕಥಾ ಕೋವೆಯೆ ಸಾಕ್ಷಿ" ಎನ್ನುತ್ತ ಆ ಕಥಾಕೋವೆಯನ್ನು ಉದ್ಧರಿಸುತ್ತಾನೆ. ಇದರಿಂದ ಗುಮ್ಮಳಾಪುರ ಸಿದ್ಧಲಿಂಗನು ಕಲ್ಲುಮಠದ ಪ್ರಭುದೇವರಿಗೆ ಋಣಿಯುವನಾಗುತ್ತಾನೆ. (೩) ಚಿತ್ರದುರ್ಗದ ಬೃಹನ್ಮಠಕ್ಕೆ ಸಂಬಂಧಿಸಿದ ಗುಮ್ಮಳಾಪುರ ಸಿದ್ಧಲಿಂಗನ ಶೂನ್ಯ ಸಂಪಾದನೆಯ ಹಸ್ತಪ್ರತಿಯ ಅಂತ್ಯಪ್ರಶಸ್ತಿ ಹೀಗಿದೆ : "ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೫೦೨ ನೆಯ ವಿಕ್ರಮ ಸಂವತ್ಸರದ ಕಾರ್ತಿಕ ಬಹುಳ ೩ ಮಂಗಳವಾರದಲ್ಲು... ಸರ್ವಾಚಾರ ಸಂಪನ್ನ ಏಕಲಿಂಗನಿಷ್ಠಾಪರ ವೀರಶೈವಸಂಪನ್ನ ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ವಿರಕ್ತಸಿದ್ಧಲಿಂಗದೇವರಿಗೆ ಹದಿನಾಡ ಯುಳವಂದೂರ ಅರಸು ಚೆಂನೊಡೆಯರು ಈ ಶೂನ್ಯಸಂಪಾದನೆಯ ವಚನಸಂಗ್ರಹ ವನ್ನು ಬರೆಸಿ ಶಿವಾರ್ಪಿತವಾಗಿ ನಮಸ್ಕರಿಸಿದರು...". ಇಲ್ಲಿ ಗುಮ್ಮಳಾಪುರದ ಸಿದ್ಧ ಲಿಂಗನ ಕೃತಿಯನ್ನು ಬರೆಯಿಸಿ ಅವರಿಗೇ ಅದನ್ನು ಅರ್ಪಿಸಿದ ಸೂಚನೆಯಿದೆ. ಈ ಪ್ರತಿಯ ಕಾಲ ಶಾಲಿವಾಹನ ಶಕೆ ೧೫೦೨ ಅಂದರೆ ಕ್ರಿ. ಶ. ೧೫೮೦. ಹೀಗಾಗಿ ಈ ಹೊತ್ತಿಗಾಗಲೇ ಗುಮ್ಮಳಾಪುರ ಸಿದ್ಧಲಿಂಗನ ಶೂನ್ಯಸಂಪಾದನೆ ರಚಿತವಾಗಿದ್ದಿತೆಂದೂ ಇದು ಆತನ ಕಾಲವಾಗಿದೆಯೆಂದೂ ಸ್ಪಷ್ಟವಾಗುತ್ತದೆ.

೬. ಏಕೋತ್ತರ ಶತಸ್ಥಲ–ಶೂನ್ಯಸಂಪಾದನೆ ಕುಟುಂಬಗಳು :

ಶೂನ್ಯಸಂಪಾದನೆ ಶಿವಗಣಪ್ರಸಾದಿ ಮಹಾದೇವಯ್ಯ ಮೊದಲಾದವರಿಂದ ನಾಲ್ಕು ಆವೃತ್ತಿಗಳಾಗಿ ಬೆಳೆದುದಲ್ಲದೆ ಸುಖಸಂಪಾದನೆ, ಸಂಪಾದನೆಯ ವಚನಗಳು, ಸಂಪಾದನೆಯ ಸಾರಾಮೃತ ಎಂಬ ಸಂಗ್ರಹಗಳಿಗೂ ದಾರಿ ಮಾಡಿಕೊಟ್ಟಿದೆ. ಇದನ್ನು ವಚನಗಳನ್ನಾಧರಿಸಿ ಹುಟ್ಟಿದ ಶೂನ್ಯಸಂಪಾದನಾ ಕುಟುಂಬವೆಂದು ಕರೆಯಬಹುದು. ಇದೇರೀತಿ ವಚನಗಳನ್ನಾಧರಿಸಿ ಹುಟ್ಟಿದುದು ಏಕೋತ್ತರ ಶತಸ್ಥಲ ಕುಟುಂಬ. ಆ ಕುಟುಂಬಕ್ಕೆ ಪ್ರಸಾದಿ ಮಹಾದೇವಯ್ಯ ಆದಿಯಾದರೆ. ಈ ಕುಟುಂಬಕ್ಕೆ ಆದಿ ಯಾದವನು ಹುಲಿಗೆರೆಯ ಮಹಾಲಿಂಗದೇವಯ್ಯ. ಇವನ ತರುವಾಯ ಶಿಷ್ಯ ಜಕ್ಕಣಾರ್ಯ, ಸಿದ್ಧಲಿಂಗ, ಕಟ್ಟಿಗೆಹಳ್ಳಿ ಸಿದ್ಧಲಿಂಗ ಮೊದಲಾದವರು ಏಕೋತ್ತರ ಶತಸ್ಥಲದ ಬೇರೆ ಬೇರೆ ಆವೃತ್ತಿಗಳನ್ನು ಸಿದ್ಧಪಡಿಸುತ್ತ ಬಂದಿದ್ದಾರೆ. ದಕ್ಷಿಣ ಕರ್ನಾಟಕದ ಪ್ರಸಾದಿ ಮಹಾದೇವಯ್ಯ ಮತ್ತು ತೋಂಟದಾರ್ಯ ಸಂಪ್ರದಾಯ ದವರು ಶೂನ್ಯಸಂಪಾದನಾ ಪರಂಪರೆಯನ್ನು ಬೆಳೆಸಿದರೆ, ಉತ್ತರಕರ್ನಾಟಕದ ಹುಲಿಗೆರೆಯ ಮಹಾಲಿಂಗದೇವಯ್ಯ ಮತ್ತು ಆತನ ಪರಿಸರದ ವ್ಯಕ್ತಿಗಳು ಏಕೋ ತ್ತರ ಶತಸ್ಥಲ ಪರಂಪರೆಯನ್ನು ಬೆಳೆಸಿದ್ದಾರೆ. ಅಂಗಸ್ಥಲ, ಲಿಂಗಸ್ಥಲಗಳ ಸಂಪುಟ ವಾದ ಏಕೋತ್ತರ ಶತಸ್ಥಲ ವೀರಶೈವ ಸ್ಥಲಪರಿಕಲ್ಪನೆಯನ್ನೂ ವೀರಶೈವದ

ಮಹತ್ವಪೂರ್ಣ ಪರಿಭಾಷೆಗಳನ್ನೂ ತಿಳಿಸಿಕೊಡುವ ಪ್ರೌಢ ಗ್ರಂಥವಾಗಿದೆ. ಆದರೆ ಶೂನ್ಯಸಂಪಾದನೆಯಂತೆ ಇದರ ಅಭ್ಯಾಸ ವ್ಯಾಪಕವಾಗಿ ಜರುಗದಿರುವುದು ವಿಷಾದದ ಸಂಗತಿಯಾಗಿದೆ.

ಒಂದರ್ಥದಲ್ಲಿ ಇವೆರಡೂ ವೀರಶೈವದ ಮಹತ್ವಪೂರ್ಣ ಕುಟುಂಬಗಳಾಗಿವೆ. ಒಂದು ತಾತ್ವಿಕ ನೆಲೆಯಲ್ಲಿ, ಇನ್ನೊಂದು ಅನುಭಾವಿಕ ನೆಲೆಯಲ್ಲಿ ಬೆಳೆದಿವೆ. 'ಶೂನ್ಯ ಸಂಪಾದನೆ'ಯ ಕಲ್ಪನೆಗಿಂತ 'ಏಕೋತ್ತರ ಶತಸ್ಥಲ'ದ ಕಲ್ಪನೆ ಪ್ರಾಚೀನವಾಗಿರುವುದರಿಂದ ವೀರಶೈವದ ಇತಿಹಾಸದಲ್ಲಿ ಮೊದಲು ತಾತ್ವಿಕ, ಬಳಿಕ ಅನುಭಾವಿಕ ಅಭ್ಯಾಸಗಳು ಜರುಗಿವೆಯೆನಿಸುತ್ತದೆ. ಸಂವಾದ ತಂತ್ರ ಕಾರಣವಾಗಿ ಶೂನ್ಯಸಂಪಾದನೆಯ ವಚನಗಳ ಪಾಠಶುದ್ಧಿಗೆ ಚ್ಯುತಿ ಬಂದಿದೆ. ಕೃತಕವಚನಗಳೂ ಪ್ರವೇಶ ಪಡೆದಿವೆ ಏಕೋತ್ತರ ಶತಸ್ಥಲಕ್ಕೆ ಈ ಮಾತು ಅನ್ವಯವಾಗುವುದಿಲ್ಲ. ಹೀಗೆ ಶೂನ್ಯಸಂಪಾದನೆ ಕುರಿತು ಟಿಪ್ಪಣಿ ರೂಪದ ಕೆಲವು ಅಂಶಗಳನ್ನು ಮಂಡಿಸಬಹುದಾಗಿದೆ.

ಅಡಿ ಟಿಪ್ಪಣಿಗಳು :

೧-೧ ಇಷ್ಟುಭಾಗ ಆಯ್ದಕ್ಕಿ ಮಾರಯ್ಯಗಳ ಸಂಪಾದನೆಯೇ ಆಗಿದೆ.

೨ ಮೈಸೂರು ಪ್ರತಿಯನ್ನು ಹಲಗೆದೇವರು ರೂಪಿಸಿದ್ದು, ಇದರಲ್ಲಿಯ ಸಿದ್ಧರಾಮನ ದೀಕ್ಷಾಪ್ರಸಂಗ ಮಾತ್ರ ಕೆಂಚವೀರಣ್ಣನ ಪ್ರಯತ್ನವಾಗಿರಬಹುದೇ ?



ಮುಪ್ಪಿನ ಷಡಕ್ಷರಿಗಳು

● ಡಾ. ಬಿ. ವ್ಹಿ. ಯಕ್ಕುಂಡಿಮಠ

ಅವರವರ ದರುಶನಕೆ । ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ।
ಅವರವರ ಭಾವಕ್ಕೆ । ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ ॥

ಎಂಬ ಉದಾತ್ತ ಆಧ್ಯಾತ್ಮಿಕ ತತ್ವವನ್ನು ಜನಸಾಮಾನ್ಯರ ಹೃದಯವನ್ನು ತಟ್ಟುವಂತೆ ಜನಭಾಷೆಯಲ್ಲಿ ಅರುಹಿದ ಋಷಿಕವಿ ಮುಪ್ಪಿನ ಷಡಕ್ಷರಿಯವರು, ಕೈವಲ್ಯ ವಾಗ್ಗೇಯಕಾರ ನಿಜಗುಣರ ಪರಂಪರೆಯನ್ನು ಮುಂದುವರಿಸಿಕೊಂಡು ಹೋದವರಲ್ಲಿ ಪ್ರಮುಖರು. ನಿಜಗುಣ ಶಿವಯೋಗಿಗಳಂತೆ ವಿವಿಧ ರಾಗಗಳನ್ನು ಬಳಸಿಕೊಂಡು ತಮ್ಮ ಅಂತರಂಗದ ಅನುಭಾವದ ಬುಗ್ಗೆಯನ್ನು ಸರಳ ಭಾಷೆಯಲ್ಲಿ ಹೊರಹೊಮ್ಮಿಸಿರುವರು. ಮುಪ್ಪಿನ ಷಡಕ್ಷರಿಶಿವಯೋಗಿಗಳ ಕಾಲ ಮತ್ತು ಅವರ ಜೀವನದ ಇನ್ನಿತರ ವಿಷಯಗಳು ಸ್ಪಷ್ಟವಾಗಿ ಲಭ್ಯವಿರದಿದ್ದರೂ, ಇವರೂ ನಿಜಗುಣರ ಸಮಕಾಲೀನರು ಮತ್ತು ಶಂಭುಲಿಂಗನಬೆಟ್ಟದ ಗವಿಯಲ್ಲಿ ಆಧ್ಯಾತ್ಮ ಸಾಧನೆ ಮಾಡಿರಬಹುದೆಂದು ತಿಳಿದುಬರುತ್ತದೆ. ಮುಪ್ಪಿನ ಷಡಕ್ಷರಿಗಳ 'ಸುಬೋಧಸಾರ' ದ ಮೊದಲನೆಯ ಪದ್ಯದಿಂದ, ಅವರು ಮೈಸೂರು ಸೀಮೆಯವರಾಗಿದ್ದು, ಎರಗಂಬಳಿ ಮಠದ ಸಿದ್ಧಲಿಂಗರಿಂದ ದೀಕ್ಷೆಯನ್ನು ಪಡೆದುದಲ್ಲದೆ ಮುಪ್ಪಿನ ಷಡಕ್ಷರಿ ಎಂಬ ಅಭಿದಾನ ನಂತರ ಬಂದುದು ಎಂದು ತಿಳಿಸಿದ್ದಾರೆ. ಹೀಗೆ—

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ । ನೀನೆನಗೆ ದೀಕ್ಷೆಯ ಮಾಡಿದೆ
ವರ ಷಡಕ್ಷರಿ ದೇ

ವರ ನಾಮಂದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ॥

ಈ ರೀತಿಯಠಾಗಿ ಮುಪ್ಪಿನ ಷಡಕ್ಷರಿಗಳ ವ್ಯಕ್ತಿತ್ವ, ಲೌಕಿಕಜೀವನ ಕುರಿತ ವಿವರಗಳು ಲಭ್ಯವಿಲ್ಲದಿದ್ದರೂ ಇವರ ಭಾವಪೂರಿತ ಪದ್ಯಗಳು, ಇವರ ವ್ಯಕ್ತಿ-ವೈಶಾಲ್ಯ, ಮನೋವೈಶಾಲ್ಯ ವಿಶ್ವಕಲ್ಯಾಣದ ಬಗೆಗಿರುವ ಒಲುಮೆ-ಕಳಕಳಿಯನ್ನು ಕುರಿತು ಎತ್ತಿ ಹೇಳುತ್ತವೆ. ಭಕ್ತಿಯನ್ನೇ ತಮ್ಮ ಜೀವನದುಸಿರಾಗಿಸಿಕೊಂಡು, ಭಕ್ತಿಜೀವನದಲ್ಲಿ ಮಿಂದು, ಭಕ್ತಿಯ ಎಲ್ಲ ಮುಖಗಳನ್ನು ತಮ್ಮ ಸಾಧನೆಯ ಮಾರ್ಗದಲ್ಲಿ ಅಳವಡಿಸಿಕೊಂಡಿದ್ದಾರೆ ಋಷಿಸದೃಶ ಕವಿ ಮುಪ್ಪಿನ ಷಡಕ್ಷರಿಗಳು. ಭಕ್ತಿಮಾರ್ಗದಲ್ಲಿ ನಡೆದು ಜೀವನದ ಪರಮ ರಹಸ್ಯವನ್ನು ಅರಿತುಕೊಳ್ಳಬೇಕೆಂಬ ವಿಷಯವನ್ನು 'ತನುವಿಡಿದು ದುಷ್ಕೃತವ । ನೆನೆತೆನಲು ಪೇಳುವೆನು । ಮನವೊಲಿದು ಕೇಳು ನೀನೆಲೆಯಾತ್ಮನೆ' ಎಂದು ಹೇಳಿರುವರಲ್ಲದೆ ಮಾನವ ತನ್ನ ಜೀವನದುದ್ಧಕ್ಕೂ ತನ್ನ ಅಸ್ತಿತ್ವದ ಬಗೆಗೆ ಚಿಂತಿಸುವ ಬಗೆಯನ್ನು ಇಂತು ಹೇಳಿರುವರು :

ಅನ್ನ ಉದಕದ ಚಿಂತೆ । ಎಣ್ಣೆ ನೀರಿನ ಚಿಂತೆ । ಬಣ್ಣ ಬಳಿದಾಭರಣ
ತೊಡುವ ಚಿಂತೆ । ಮಣ್ಣು ಮನೆಗಳ ಚಿಂತೆ । ಹೊನ್ನು ಹೆಣ್ಣಿನ ಚಿಂತೆ ।
ಇನ್ನು ಪುತ್ರರ ಬೇಡಿ ಬಳಲ್ವ ಚಿಂತೆ ॥

ಆದರೆ ಇದು ಮಾನವನ ಉನ್ನತಿಗೆ ಅಡ್ಡ ಗೋಡೆಯಂತಿಪ್ಪ ಸದಾ ದೇವನನ್ನು ಜಪಿಸುವುದೇ ಸೂಕ್ತ ಎಂದು ಈ ಕೆಳಗಿನಂತೆ ಹೇಳಿರುವದು :

ನಿಮ್ಮ ನೆನೆವುದೆ ಹರುಷ । ನಿಮ್ಮ ನೆನೆವುದೆ ಪರುಷ
ನಿಮ್ಮ ನೆನೆವುದೆ ಕಾಮಧೇನುವೆನಗೆ । ನಿಮ್ಮ ನೆನೆವುದೆ ಗತಿಯು ।
ನಿಮ್ಮ ನೆನೆವುದೆ ಮತಿಯು । ನಿಮ್ಮ ನೆನೆವುದೆ ಇಹದ ಪರರ ಸುಖವು ॥

ನಿಮ್ಮ ನೆನೆವುದೆ ತಪವು । ನಿಮ್ಮ ನೆನೆವುದೆ ಜಪವು
ನಿಮ್ಮ ನೆನೆವುದೆ ಸಕಲ ಪರಮ ತತ್ತ್ವ । ನಿಮ್ಮ ನೆನೆವುದೆ ನಿತ್ಯ
ನಿಮ್ಮ ನೆನೆವುದೆ ಸತ್ಯ । ನಿಮ್ಮ ನೆನೆವುದೆ ವ್ಯಕ್ತ ಕೈಲಾಸವು ॥

ಹೀಗೆ ಧರ್ಮಮಾರ್ಗದಲ್ಲಿ, ಭಕ್ತಿಜೀವನವನ್ನು ಸಾಗಿಸಬೇಕು, ಜೀವನೋಪಾಯಕ್ಕೆ ಬೇಕಾದಷ್ಟು ಮಾತ್ರ ಇಟ್ಟುಕೊಳ್ಳಬೇಕು ಎಂಬ ವಿಷಯ ಪ್ರಸ್ತಾಪಿಸಿರುವರು. 'ಧರೆಯ ಸುಖದ ಭೋಗವನೆನಗೆ ಹರಿದು ಹೋಗಲಿ । ಜಡೆದ ಗಡಿಗೆ ಪರಕು ಜೋಳಿಗೆ, ಎಡದ ಕೈಯೊಳ ಮುರಿದ ಕೋಲು ಇಷ್ಟೇ ಸಾಕು. ಊರನ್ನೆಲ್ಲ ತಿರಿದು ತಂದರೂ ಯಾರೂ ಇಲ್ಲವೆನ್ನಲಿ: ಇಷ್ಟಾಗದ ಹೊರತು 'ಮಾರಹರನ ನೆನೆಯಲಾಗದು.' ಎಂಬ ವಚನದ ವಿವರಣೆಯಿಂದ ಮುಪ್ಪಿನ ಷಡಕ್ಷರಿಗಳ ಉಜ್ವಲವಾದ ವ್ಯಕ್ತಿತ್ವ ಇಲ್ಲಿ ಪ್ರತಿಪಾದಿತ.

ಶರಣ ಸದೃಶ ಜೀವನವನ್ನು ಸಾಗಿಸಿದ ಮುಪ್ಪಿನ ಷಡಕ್ಷರಿಗಳ ಮೇಲೆ ಶರಣರ ವಚನಗಳ ಪ್ರಭಾವ, ಬಸವಣ್ಣ ಮೊದಲಾದವರ ಉದಾತ್ತ ವ್ಯಕ್ತಿತ್ವದ ಪ್ರಭಾವ ಆದದ್ದು ಇವರ ಹಾಡುಗಳಲ್ಲಿ ವ್ಯಕ್ತವಾಗುತ್ತವೆ. ಶರಣರ ಸಾಧನೆಗೆ ತಮ್ಮ ಜೀವನವನ್ನೇ ಅರ್ಪಿಸಿಕೊಂಡಿದ್ದಾರೆ. ಶಿವಶರಣರಲ್ಲಿ ಅವರ ನಂಬುಗೆ ಅನನ್ಯ ವಾದುದು. ಸದಾ ಶರಣರ ತೊತ್ತಾಗಿರಬೇಕೆಂಬ ಹೆಬ್ಬಯಕೆ ಅವರದು. ಶಿವನ ವಾಸಸ್ಥಾನ ಶರಣರ ಹೃದಯ, ಅವರ ಮನೆಯ ಅಂಗಳವೇ ಕೈಲಾಸ ಎಂಬ ಭಾವನೆ ಅವರದು. "ಶಿವ ನಿಮ್ಮ ಘನದಿಂದ ಅವರ ಘನವತ್ಯಧಿಕ. ಅವರಂಗಳ ದ್ವಿತೀಯ ಕೈಲಾಸವು, ಅವರನಾ ಭವಭವದಿ ತಪೆ ಬಿಡದೆ ಇರ್ಪುದನು ಶಿವಷಡಕ್ಷರಿ ವರನೆ ಪಾಲಿಸೆನಗೆ" ಎಂದು ಆಶಿಸಿದ್ದಾರೆ. ಸಂಸಾರನಿರಸನ, ಸರ್ವಾರ್ಪಣೆ, ನಿರಂತರ ಜಾಗೃತಿ, ಶರಣಸತಿ–ಲಿಂಗಪತಿ ಭಾವ ಇವರ ಹಾಡುಗಳಲ್ಲಿ ವ್ಯಕ್ತವಾಗಿವೆ. ಈ ಸಂಸಾರಕೂಪದಲ್ಲಿ ಸಿಲುಕಿ ಒದ್ದಾಡುತ್ತಿರುವ ಮಾನವನನ್ನು ಕುರಿತು ಹೀಗೆ ಹೇಳಿರುವರು :

ಧರೆಯೆತ್ತಲೆನ್ನನು । ಬರಿಸದಿರು ಸದ್ಗುರುವೆ ।
ಧರೆಯು ಪಾಪದೊಳು ನಾ ಜನಿಸಲಾರೆ ॥

ಈ ಹೇಳಿಕೆ ಸಂಸಾರಹೇಯಸ್ಥಲವನ್ನು ಪ್ರತಿನಿಧಿಸುತ್ತದೆ. ದೇವರನ್ನು ಹಲವರು ಹಲವು ತೆರನಾಗಿ ಕಂಡುಕೊಂಡಿರುವರು. ದೇವನನ್ನು ತಂದೆಯೆಂದು, ಮಗನೆಂದು, ಪತಿಯೆಂದು ಪೂಜ್ಯ ಭಾವವನ್ನಿಟ್ಟುಕೊಂಡವರು ಇದ್ದಾರೆ. ಆದರೆ ಮುಪ್ಪಿನ ಷಡಕ್ಷರಿಗಳು 'ತಮ್ಮಿಷ್ಟವಾದ ಷಡಕ್ಷರಿ ಲಿಂಗವನ್ನು ವಿವಿಧ ಬಗೆಯಲ್ಲಿ ಕಂಡಿರುವರು. ಲಿಂಗವೇ ಅವರ ಸಂಪತ್ತು, ಎಂದು ಈ ರೀತಿಯಾಗಿ ಹೇಳಿರುವರು :

"ಎನ್ನ ಮಾಯೆಯೂ ನೀನೆ ಎನ್ನ ತಾತನು ನೀನೆ, ಎನ್ನ ಬಂಧುವು ಬಳಗ ಸುಖನು ನೀನೆ ।
ಎನ್ನ ಪತಿಯೂ ನೀನೆ, ಎನ್ನ ಹಿತನೂ ನೀನೆ, ಎನ್ನ ಕರದೊಳಗಿರ್ದ ಏಕೆ ನುಡಿಯೆ ॥?

ಇದಕ್ಕೂ ಮುಂದೆ ಹೋಗಿ "ಎನ್ನ ಸರ್ವಾಂಗವನು ನಿನ್ನ ಪರಿಣಾಮಕ್ಕೆ ಚೆನ್ನಾಗಿ ಸಲಿಸುವೆನು ಎಲೆ ಲಿಂಗವೇ" ಎಂದು ತಮ್ಮ ದೇಹವನ್ನು ಲಿಂಗಕ್ಕೆ ಸಮರ್ಪಿಸಿದ್ದಾರೆ. 'ಎನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಉದಾತ್ತ ಭಾವವನ್ನು ಹೊಂದಿವ ಮುಪ್ಪಿನಾರ್ಯರು, ಬಸವಣ್ಣನವರು ತಮ್ಮ ದೇಹವನ್ನೇ ದೇವಾಲಯಕ್ಕೆ ಹೋಲಿಸಿಕೊಂಡಿದ್ದಾರೆ. ಅದೇ ರೀತಿ ದೇವನಿಂದ ಪಡೆದ ಈ ಕಾಯವನ್ನು ದೇವನಿಗೆ ಅರ್ಪಿಸಬೇಕೆಂದು ಹೇಳಿರುವರು.

ಎನ್ನ ಕಾಯವು ನಿನಗೆ
ಉನ್ನತಾಲಯವಾಯಿ

ತಿನ್ನನಗೆ ಭಯವುಂಟೆ ಎಲೆ ಲಿಂಗವೆ
ಎನ್ನ ಕಾಲುಗಳೆರಡು
ಉನ್ನತದ ಕಂಭವೈ
ಎನ್ನ ಒಡಲೇ ನಿಮಗೆ ದೇವಾಲಯ
ಎನ್ನ ತೋಳುಗಳೆರಡು
ಉನ್ನತದ ಮದನಕ್ಕೆ
ಎನ್ನ ಶಿರಸೌವರ್ಣ ಕಲಶವಯ್ಯ ॥

ಈ ವಚನ ಬಸವಣ್ಣನವರ 'ಉಳ್ಳವರು ಶಿವಾಲಯ ಮಾಡುವರು' ಎಂಬ ವಚನದ ಪಡಿನೆಳಲಿನಂತಿದೆ.

ನುಡಿದಂತೆ ನಡೆದ, ಲಿಂಗರೂಪಿಗಳಾಗಿ ಸರ್ವಾಂಗವೂ ಲಿಂಗಮಯವಾಗಿ ಅವತರಿಸಿದ ಇವರು ಜಗದ ಜಂಜಡ, ಲೋಕವ್ಯಾಪಾರ, ಹುಸಿ, ಕಳವು, ಢಂಬಾಚಾರ, ನಿರ್ದಯ ನಿಷ್ಠುರತೆಗಳನ್ನು ಕಂಡು ನಿರಾಶೆಯಿಂದ ಈ ರೀತಿಯಾಗಿ ಹೇಳಿರುವರು. 'ಪತಿವ್ರತೆಯರಿಲ್ಲ, ಪರಸತಿಮುಖಿಯರಿರುತಿಹರು: ಜಿತಕಾಮರಿಲ್ಲ ಅತಿಕಾಮರಿಹರು: ವ್ರತನೇಮಗಳು ಇಲ್ಲ: ಕೃತಿಗಳು ಘನವಯ್ಯ: ಕ್ಷಿತಿಯು ಅವಗುಣಗಳಿಗೆ ತವರುಮನೆಯು". ಇಷ್ಟಾದರೂ ಅವರು ಧೃತಿಗೆಡದೆ ಇಂಥ ವಿಷಮಸಂಸಾರದಲ್ಲಿದ್ದುಕೊಂಡೇ ಭಕ್ತಿ-ಸಾಧನೆಯಿಂದ ಶಿವನೊಡನೆ ಒಡೆವೆರೆದು ಒಂದಾಗಬೇಕೆಂದು ಒತ್ತಿ ಹೇಳಿರುವರು. ಸೃಷ್ಟಿಯಲ್ಲಿ ಕೆಡಕು ಇದ್ದಂತೆ ಒಳಿತೂ ಇದೆ ಎಂಬುದರ ಅರಿವನ್ನು "ಇಲ್ಲವೆನಬಾರದೆಲೆ, ಇಲ್ಲುಂಟು ಧರ್ಮಗಳು, ಕಲ್ಲೊಳಗೆ ಅಡಗಿರ್ಪ ಪರುಷದಂತೆ" ಎಂದು ಒಳ್ಳೆಯ ಉದಾಹರಣೆಯೊಂದಿಗೆ ತಿಳಿಸಿಕೊಟ್ಟಿದ್ದಾರೆ. ಕತ್ತಲಿನಲ್ಲಿ ಬೆಳಕು ಇದೆ. ಆದರೆ ಅದನ್ನು ಕಾಣಲು ಒಳ್ಳೆಯ ಮನಸ್ಸು, ಕಣ್ಣು ಬೇಕು. ಮನಸ್ಸೇ ಮನುಷ್ಯ' ಎಂಬ ಮಾತಿನಂತೆ ಮಾನವನ ಹುಚ್ಚು ಮನಸ್ಸಿನ ಹತ್ತು ಮುಖಗಳನ್ನು ಹೇಳಿ, ಮನಸ್ಸಿನ ಮೇಲೆ ಆವರಿಸಿದ ಮಾಯೆಯ ಪೊರೆಯನ್ನು ಕಳಚಿಕೊಳ್ಳಬೇಕು, ಅದಕ್ಕೆ ನಿರಂತರ ಸಾಧನೆ ಅತ್ಯವಶ್ಯ ಎಂದು ಹೇಳಿ ಮಾಯೆಯ ಬಗೆಗೆ ಇಂತು ಹೇಳಿದ್ದಾರೆ.

"ಮಾಯೆ ನೀನತಿ ಚೆಲುವೆ, ಕಾಯ ಮುನ್ನವೆ ಚೆಲುವು ಹೇಯವಾಯಿತು ಒಳಗನರಿತ ಬಳಿಕ". ಇಂಥ ಸ್ಥಿತಿಯಲ್ಲಿಯೂ ಸಮಚಿತ್ತರಾಗಿ ತಮ್ಮ ಕಾಯವನ್ನೇ ಶಿವನ ಉನ್ನತಾಲಯ ಮಾಡಿ, ತನ್ನ ಸರ್ವಾಂಗಗಳನ್ನೂ ಮನಪ್ರಾಣಗಳನ್ನೂ ಚನ್ನಷಡಕ್ಷರಿಗೆ ಸಮರ್ಪಿಸಿ, ಭಾವಲಿಂಗ ಪೂಜಾನಿರತರಾದ ಮುಪ್ಪಿನಾರ್ಯರ ಪೂಜೆಯ ಪರಿಯನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ :

ಎನ್ನ ಸಮತೆಯ ಜಲವು । ಎನ್ನ ಸದ್ಗುಣ ಗಂಧ
ಎನ್ನ ನಿತ್ಯತ್ವವೇ ಅಕ್ಷತೆಗಳು.

ಎನ್ನ ಜ್ಞಾನವೆ ಪುಷ್ಪ, ಎನ್ನ ಭಕ್ತಿಯೆ ಬೋನ
ಎನ್ನ ಮನವೇ ನಿಮಗೆ ಪೂಜಾರಿಯು ॥

ಇಂಥ ಮಹಾನುಭಾವಿ ಶಿವಯೋಗಿಗಳು ಸದಾಶಿವನ ಪಾದೋಪಪದ್ಮಜೀವಿಗಳಾಗಿ ಭಕ್ತಿಭಿಕ್ಷೆಯನ್ನು ಬೇಡಿ, ಭಕ್ತಿ ಜೀವನವನ್ನು ಸಾಗಿಸಿದ ಇವರು "ಧರೆಯ ಸುಖದ ಭೋಗವೆನಗೆ ಹರಿದು ಹೋಗಲಯ್ಯ, ನಿಮ್ಮ ಚರಣಕಮಲದಲ್ಲಿ ಮನವು ಮಗ್ನ ವಾಗಲಿ" ಎಂದು ಸರ್ವಾರ್ಪಣ ಭಾವವನ್ನು ವ್ಯಕ್ತಪಡಿಸಿದ್ದಾರೆ. "ಎನಗೆ ಭೋಗ ಭಾಗ್ಯ ಬೇಡ, ಎನಗೆ ಜಪವು ತಪವು ಬೇಡ, ಎನ್ನ ತೊತ್ತು ಸೇವೆ ನಿತ್ಯವಾಗಲೈ" ಎಂದು ಅನನ್ಯವಾಗಿ ಹೇಳಿಕೊಂಡಿರುವರು.

ಧ್ಯಾನಯೋಗವು ಸಾಧಕನನ್ನು ದೈವತ್ವಕ್ಕೇರಿಸುತ್ತದೆ. ಈ ಸಾಧನೆಯ ಮಾರ್ಗದಲ್ಲಿ ಬರುವ ಅಲ್ಪಸಿದ್ಧಿಗಳಿಂದ ತೃಪ್ತನಾಗದೆ; ಇವನ್ನು ಮೀರಿ ಮೇಲಕ್ಕೆ ಹೋಗಬೇಕೆಂಬ ಮಾತನ್ನು ಹೀಗೆ ನಿರೂಪಿಸಿದ್ದಾರೆ ತಮ್ಮ ಹಾಡಿನೊಂದರಲ್ಲಿ—

ದೇವತ್ವವೆಂಬುದಾವುದೆಂದರಿಯರು, ಕೇಳು ಮನವೆ
ಭಾವದೊಳು ಲಿಂಗ ನೆಲಸಿರೆ ದೇವತ್ವವಪ್ಪುದು, ಕೇಳು ಮನವೇ ॥ ಪ ॥
ಉರಿವ ಕಿಚ್ಚನೆ ಹೊಕ್ಕು ಬೇಯದೆ ಹೊರಟರೆ, ಕೇಳು ಮನವೇ
ನರರುಗಳದನು ದೇವತ್ವವೆಂಬರು, ಕೇಳು ಮನವೇ ॥
ಭರದಿಂದ ಬಂದು ಹೊಳೆಯ ಮೇಲೆ ನಡೆದರೆ, ಕೇಳುಮನವೆ
ಅರರೆ ಅವರಾಚರಿಸಿದುದೆ ದೇವತ್ವವೆಂಬರು, ಕೇಳು ಮನವೆ ॥

ಕ್ಷುದ್ರಶಕ್ತಿಗಳ ಪ್ರದರ್ಶನ, ಭಕ್ತಿ ಸಾಧನೆಗೆ ಅಡ್ಡ ಸಲ್ಲದು ಎಂಬ ಮಾತನ್ನು ಹೇಳಿರುವರು.

ಭೋಗ ವೈಭವಾದಿಗಳು ನಿಜವಲ್ಲ; ಕನಸಿನಂತೆ ಭ್ರಮೆಯಿಂದ ಕೂಡಿದಂತಹವೆಂಬ ಮಾತನ್ನು "ಧರೆಯ ಭೋಗವನ್ನು ಮೆಚ್ಚಿ ಹರನ, ಮರೆದು ಕಡಲು ಬೇಡ, ಧರೆಯ ಭೋಗ ಕನಸಿನಂತೆ ಕೇಳು ಮಾನವ" ಹೇಳಿ ತಿರುಕ ಕನಸಿನಲ್ಲಿ ಅರಸನಾದ ಬಗೆಯನ್ನು ವಿವರಿಸಿದ್ದಾರೆ. ಹೀಗೆ ನಾವು ಭಕ್ತಿ ಭಿಕ್ಷೆಯನ್ನು ಬೇಡುವ ತಿರುಕರಾಗಬೇಕೇ ಹೊರತು ಶ್ರೀಮಂತಿಕೆ, ಅರಸೊತ್ತಿಗೆಯನ್ನು ಬೇಡುವ ತಿರುಕರಾಗಬಾರದೆಂಬ ಎಚ್ಚರಿಕೆಯ ಮಾತನ್ನು ಹೇಳಿರುವರು.

ಮಾನವ ಕಲ್ಯಾಣ ಚಿಂತನೆಯಲ್ಲೇ ಮಗ್ನರಾದ ಮುಪ್ಪಿನ ಷಡಕ್ಷರಿಗಳ ಮನೋವೈಶಾಲ್ಯ, ಅನುಪಮ ಕಳಕಳಿ ಅವರ ಹಾಡಿನಲ್ಲಿ ಹೀಗೆ ವ್ಯಕ್ತವಾಗಿದೆ : "ಎನ್ನ ಕಂದಿಸುತ್ತ ಬಹಳ, ಎನ್ನ ಬಾಧಿಸುತ್ತ ಬಿಡದೆ' ಎನ್ನನೊಂದು ನೆವಗಳಿಂದ ಕಾಡಿದವರಿಗೆ ಎನ್ನ ಕೊಂದೊಡವರಿಗೆಲ್ಲ ಎನ್ನ ಪೂಜೆ ಫಲಗಳೆಲ್ಲ ಉನ್ನತದೊಳವರಿಗಾಗಿ ಸುಖದಿ

ಬಾಳಲಿ" ಮನುಕುಲಕ್ಕೆಲ್ಲ ಮಂಗಲವನ್ನೇ ಬಯಸಿ "ಮುನ್ನ ತಾನು ಯಾರು ಎಂದು ತನ್ನ ನಿಜವನರಿತು, ಚೆನ್ನಷಡಕ್ಷರಿಯ ಲಿಂಗ ತಾನೆಯಾಗಿ, ಸರ್ವಜಗವದೆಲ್ಲ ತನ್ನ ನಿಲುವೆಯಾಗಿ, ಎನ್ನ ಮನ ಪ್ರಾಣಗಳು ಹೊನ್ನು ಹಾವುಗೆಯಾಗಿ ನಿನ್ನ ಚರಣಕೆ ಯೋಗ್ಯ ಮೆಟ್ಟಾಗಲಿ" ಎಂದು ಹಂಬಲಿಸಿ "ಶಿವನ ನಿಜವನರಿತು ಭವದ ಕಡೆಯ ಕಂಡು" ಎಂಬಂತೆ ಮುಪ್ಪಿನ ಷಡಕ್ಷರಿಗಳು ಕಾಲಕಾಮರನ್ನು ಗೆದ್ದ ಮಹಾಪುಂಗವರು ಎನಿಸಿದ್ದಾರೆ.

●

ಆಸೆಯೆಂಬುದು ಅರಸಿಗಲ್ಲದೆ ಶಿವಭಕ್ತರಿಗುಂಟೆ.

ಆಯ್ದಕ್ಕಿ ಲಕ್ಕಮ್ಮನ ವಚನ.

ಮಾತ ತಪ್ಪಿ ನುಡಿಯಲು ಬಾಯಿಗೆ ಮೂಲ

ಕಾಳವ್ವೆಯ ವಚನ

ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ

ಬಸವಣ್ಣನವರ ವಚನ.

ಬಾಲಲೀಲಾ ಮಹಾಂತ ಶಿವಯೋಗಿಗಳು



● ಡಾ. ಎಂ. ಎಸ್. ಸುಂಕಾಪುರ

ಭಾರತವು ಕಾಲಕಾಲಕ್ಕೆ ಅನೇಕ ಮಹಾಪುರುಷರನ್ನು ಪಡೆದು, ನಾಡಿನ ಜನತೆಯ ಮನದ ಕೊಳೆಯನ್ನು ಹಸನಾಗಿಸಿ, ಧರ್ಮವನ್ನು ರಕ್ಷಿಸಿ ಉಳಿಸಿದೆ. ೧೮ ಮತ್ತು ೧೯ನೆಯ ಶತಮಾನದಲ್ಲಿ ಕನ್ನಡನಾಡಿಗೂ ವೀರಶೈವಧರ್ಮಕ್ಕೂ ಕಗ್ಗತ್ತಲೆಯು ಆವರಿಸಿದಾಗ "ಹಳ್ಳಿಗೇಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ" ಯಂತೆ ನಿಂತು ಸ್ವಾನುಭಾವದನುಭವಾಮೃತವನ್ನು ಜನತೆಗೆ ನೀಡಿ ಜನಮನವನ್ನು ತಿದ್ದಿ ತೀಡಿದ ಕೀರ್ತಿ ೧೯ನೆಯ ಶತಮಾನದಲ್ಲಾಗಿ ಹೋದ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳಿಗೆ ಸಲ್ಲುತ್ತದೆ.

ಲೀಲಾಮಾತ್ರವಾಗಿ ಜನಿಸಿ
ಲೀಲಾಮಾತ್ರವಾಗಿ ಬೆಳೆದು
ಲೀಲಾಮಾತ್ರನಾಗಿ ಮಹಾಂತಯೋಗಿ ಮೆರೆವನು ॥

ಎಂಬುದು ಮಹಾಂತಶಿವಯೋಗಿಗಳ ದಿಟಪುಟದ ನುಡಿ: ಅದು ಅವರ ಬದುಕಿನ ಲೀಲಾ ವಿಲಾಸ. ಅವರೇ ತಮ್ಮ ಗದ್ಯದಲ್ಲಿ ಹೇಳಿಕೊಂಡಂತೆ

"ನನ್ನ ಲೀಲೆಯೆ ಆತನ ಲೀಲೆ, ಆತನ ಲೀಲೆಯೇ ನನ್ನ ಲೀಲೆ, ನನ್ನ ರೂಪೇ ಆವನ ರೂಪು, ಆವನ ರೂಪೇ ನನ್ನ ರೂಪು. ಎಳ್ಳಷ್ಟು ಭೇದವಿಲ್ಲ"—ಜನೋದ್ಧಾರಕ್ಕಾಗಿ ಪರಶಿವನೇ ಶಿಶು ಮಹಾಂತ ನಾಮವ ತಾಳಿ ಭುವಿಗೆ ಅವತರಿಸಿ ಜಗತ್ಪುತ್ರರಾಗಿ, ಬಾಲಬ್ರಹ್ಮ ಶಿಶುವಾಗಿ, ಶಿವಸಮಯ ದೀಪಕರಾಗಿ, ಲೋಕವನ್ನುದ್ಧರಿಸಲವತರಿಸಿದ ಕಾರಣಿಕ ಪುರುಷರಾಗಿದ್ದವರು–ಬಾಲಲೀಲಾ ಮಹಾಂತ ಶಿವಯೋಗಿಗಳು. ಶಿವಯೋಗಿಗಳು ಸಿಜಾನಂದದಲ್ಲಿರ್ದು ಬಾಲಕನಂತೆ, ಮರುಳನಂತೆ, ಜ್ಞಾನಿಯಂತೆ, ಲೀಲೆ ಬಂದ ಹಾಗೆ ಆಡಿ, ಶಿವಮತೋದ್ಧಾರಕ್ಕಾಗಿ ದೇಹವನ್ನು ಗಂಧದ ಕೊರಡಿನಂತೆ ತೆಯ್ದು ಸೌಗಂಧ ಸೂಸಿದವರು.

ಶಿವಯೋಗಿಗಳ ಬದುಕೇ ಲೋಕದ ಕಣ್ಣಿಗೆ ವಿಚಿತ್ರತರವಾದುದು. ಲೋಕಕ್ಕೆ ಮರುಳಾಗಿ ಕಂಡ ಶಿವಯೋಗಿಗಳು ಅವರ ಚರಿತ್ರೆ ನಮಗೆ ಖಚಿತವಾಗಿ ದೊರಕದಿರುವುದು ನಮ್ಮಲ್ಲಿಯ ಐತಿಹಾಸಿಕ ಪ್ರಜ್ಞೆಯ ಕೊರತೆಯೆಂದೇ ಹೇಳಬೇಕು. ಈ ಮಾತಿಗೆ ಬಾಲಲೀಲಾ ಮಹಾಂತ ಶಿವಯೋಗಿಗಳ ಚರಿತ್ರೆ ಹೊರತಲ್ಲ. ಆದರೂ ಅವರಿಂದಲೇ ರಚನೆಗೊಂಡ ಪದ್ಯಗಳು (ಕೈವಲ್ಯ ದರ್ಪಣ) ಮೊದಲ ಆಕರ ಸಾಮಗ್ರಿಗಳಾಗಿ. ಅವರ ಮೇಲೆ ರಚನೆಗೊಂಡ 'ಬಾಲಲೀಲಾ ಮಹಾಂತೇಶ್ವರ ಪುರಾಣ', ಐತಿಹ್ಯಗಳು, ಒಬ್ಬರಿಂದೊಬ್ಬರಿಗೆ ಬೋ ಕೊಡುತ್ತ ಬಂದ 'ಜನಪದದ ನಾಲಗೆಯಲ್ಲಿ ಉಳಿದುಕೊಂಡು ಬಂದ ಮೌಖಿಕ ನುಡಿಗಳು-ನಮಗಿರುವ ಆಧಾರಗಳು. ಇವುಗಳಾಧಾರದಿಂದ ಶಿವಯೋಗಿಗಳ ಚರಿತ್ರೆಯನ್ನು ಅರಿಯಬಹುದು.

ಬಾಲಲೀಲಾ ಮಹಾಂತಶಿವಯೋಗಿಗಳು ಕಗ್ಗತ್ತಲಿನ ಯುಗದಲ್ಲಿ ಸೂರ್ಯೋದಯವಾದಂತೆ. ವಿಜಾಪುರಜಿಲ್ಲೆಯ ಯರನಾಳಗ್ರಾಮದಲ್ಲಿ ಕ್ರಿ. ಶ. ೧೮೨೩ ರಲ್ಲಿ ಜನಿಸಿ ತಂದೆ-ತಾಯಿಗಳ ವಿಯೋಗದಿಂದ ಅಲಮಟ್ಟಿ ಗ್ರಾಮದ ಹಿರೇಮಠ ದಂಪತಿಗಳಿಗೆ ಮುಳಗುಂದದ ಕಲ್ಮಠದ ಮಹಾಂತದೇಶಿಕರಿಂದ ಉಡಿಯಲ್ಲಿ ಪಡೆದ ಕೂಸಾಗಿ ಬೆಳೆದವರು. ವರ್ಷಗಳುರುಳಿದಂತೆ ೮ ವರ್ಷಗಳ ವರೆಗೆ ಬೆಳೆದು ವಿರತಿಭಾವದಿಂದ ಗುರುವನ್ನರಸುತ್ತ ಕಾಲ್ಕಿತ್ತರು. ಬಳ್ಳಾರಿಜಿಲ್ಲೆಯ ಲಿಂಗನಾಯಕನಹಳ್ಳಿಯ ಶಿವಾನುಭವ ಕೇಂದ್ರದ ವಾರ್ತೆ ಕೇಳಿ ಚನ್ನವೀರಶಿವಯೋಗಿಗಳ ವ್ಯಕ್ತಿತ್ವಕ್ಕೆ ಮಾರುಹೋದರು. ಅವರ ಕೃಪಾಕಟಾಕ್ಷಕ್ಕೆ ಒಳಗಾದರು. ಅವರ ಅಪ್ಪಣೆ ಪ್ರಕಾರ ಗುರು-ಶಾಂತವೀರರಿಂದ ಅನುಗ್ರಹ ಪಡೆದು, ಶಿವಾನುಭವದ ಗಂಥವನ್ನುಂಡು, ಮೈಸೂರು ಶಿವಬಸವಸ್ವಾಮಿಗಳ, ಮೈಲಾರ ಬಸವಲಿಂಗ ಶರಣರ. ಬನ್ನಿಮಟ್ಟಿ ಚೆನ್ನಪ್ಪನವರ, ಹೊಳಲು ಲಿಂಗಪ್ಪ ಶರಣರ ಸಂಗದಲ್ಲಿ ಬೆಳೆದು ಶಿವಾನುಭವ ಸದ್ಗೋಷ್ಠಿ ನಡೆಸಿ. ಹೊರಬಿದ್ದ ಅನೇಕ ಶಿಷ್ಯರಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳೊಬ್ಬರಾಗಿದ್ದರು. ಮೈಲಾರ ಬಸವಲಿಂಗ ಶರಣರಿಗೆ 'ಗುರು ಕರುಣ ತ್ರಿವಿಧಿ' ರಚಿಸುವಲ್ಲಿ ಇವರು ಪ್ರೇರಕರಾಗಿದ್ದರೆಂಬುದನ್ನು ಮರೆಯುವಂತಿಲ್ಲ.

ಲಿಂಗನಾಯಕನಹಳ್ಳಿಯ ಶಿವಾನುಭವ ಕೇಂದ್ರದ ಗರಡಿಯಲ್ಲಿ ತಯಾರಾದ ಶಿವಯೋಗಿಗಳು ವಿರಕ್ತರಾಗಿ ಲೋಕ ಸಂಚರಿಸುತ್ತ ಮೆಟ್ಟಿದ ಧರೆಯನ್ನು ಸುಕ್ಷೇತ್ರವೆನಿಸಿ ಮುಳಗುಂದದ ಕಲ್ಮಠದ ಮಹಾಂತಶಿವಯೋಗಿಗಳ ದರ್ಶನಾಪೇಕ್ಷಿಗಳಾಗಿ ಆಗಮಿಸಿದರು. ಗುರುಕಾಯ ಬಯಲಿನಲ್ಲಿ ಬಯಲಾದುದನ್ನು, ಗುರುವಿನಪೇಕ್ಷೆಯಂತೆ ಬಾಲಲೀಲಾ ಮಹಾಂತಶಿವಯೋಗಿಗಳೇ ಮುಳಗುಂದದ ಕಲ್ಮಠದ ಉತ್ತರಾಧಿಕಾರಿಯಾಗಿ ಮುನ್ನಡೆಯಬೇಕೆಂಬ ನಿಶ್ಚಯವನ್ನು ಜನರಿಂದ ಅರಿತು ಜನರ ಅಪೇಕ್ಷೆಯಂತೆ ಆ ಮಠದ ಉತ್ತರಾಧಿಕಾರಿಗಳಾದರು.

ಧರ್ಮ-ತತ್ತ್ವಬೋಧನೆಯು ಪ್ರಚಾರಕಾರ್ಯದೊಂದಿಗೆ ಮುಳಗುಂದದ ಮರಿದೇವರು ಮತ್ತು ಶರಣ ಹಸಬಿ ಗಣಂಗಳಪ್ಪನವರಿಂದ ಸೇವೆ ಕೈಗೊಂಡು ಪತಿ-ಮಕ್ಕಳ ವಿಯೋಗದಿಂದ ಬಳಲುವ ಫಿರಂಗಿ ಮನೆತನದ ಶರಣೆ ಬಸವಾಂಬೆಗೆ ಮಗುವಾಗಿ ಬಾಲಲೀಲೆಯ ಪವಾಡ ಮೆರೆದು ಪವಾಡಪುರುಷರಾಗುತ್ತಾರೆ. ಚಿತ್ರದುರ್ಗದ ಜಗದ್ಗುರುಗಳಿಗೆ ರಾಚೋಟಿಸ್ವಾಮಿಗಳ ಮೂಲಕ ಭಿಕ್ಷಾಟನದಿಂದ ಕಲಹ ಸಲ್ಲವೆಂದು ತಿಳಿಹೇಳಿ, ಜಗದ್ಗುರು ನೀವಾದರೆ ಜಗತ್ಪುತ್ರ ನಾನೆಂದು ಸಮಾನತೆ ತತ್ತ್ವವನ್ನು ಎತ್ತಿ ಹಿಡಿಯುತ್ತಾರೆ. ಮೈಸೂರಿನ ಮುಮ್ಮಡಿ ಕೃಷ್ಣರಾಜರಿಗೆ ಆಶೀರ್ವದಿಸಿ ತಮ್ಮ ಪ್ರಭಾವ ಬೀರುತ್ತಾರೆ. ಶಿವಸಮಯದ ಶಿವಭಕ್ತರ ಏಳ್ಗೆಗಾಗಿ ಭಕ್ತಿ-ಜ್ಞಾನ ವಿರತಿಗಳ ಮೂರ್ತಿಯಾಗಿ ನೀತಿ-ಧರ್ಮಬೋಧೆ ಮಾಡುತ್ತಾರೆ. ಕೈವಲ್ಯ ಪಥದ ನಿಲುವನ್ನು ಜನತೆಗಾಗಿ ಆಶುಕವಿತ್ವದಿಂದ ಗದ್ಯ ಪದ್ಯ ರಚಿಸಿ ಮಠದ ಬೋದು ತೊಲೆಗಳಲ್ಲಿ ಬರೆಯುತ್ತಾರೆ. ಜನತೆ ಅವುಗಳನ್ನು ಬರೆದಿಟ್ಟುಕೊಂಡರು. ಕ್ರಿ. ಶ. ೧೮೫೮ ರಲ್ಲಿಯೇ ಮುಳಗುಂದದಲ್ಲಿ ಲಿಂಗೈಕ್ಯರಾದುದನ್ನು ಸ್ಮರಿಸುತ್ತಾರೆ. ಈಗ ಅವರ ಸ್ಮರಣೆಯ ದ್ಯೋತಕವಾಗಿ ಧಾರವಾಡದ ಮುರುಘಾಮಠದ ಶ್ರೀ ಮ. ನಿ. ಪ್ರ. ಮೃತ್ಯುಂಜಯ ಅಪ್ಪಗಳು "ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆ" ಯಡಿಯಲ್ಲಿ 'ಕೈವಲ್ಯದರ್ಪಣ'ವೆಂಬಭಿದಾನದಿಂದ ಪ್ರಕಟಿಸಿದರು. ದ್ಯಾಂಪುರ ಚೆನ್ನಕವಿಗಳಿಂದ ರಚನೆಗೊಂಡ "ಬಾಲಲೀಲಾ ಮಹಾಂತೇಶ್ವರ ಪುರಾಣ" ಇದೇ ಗ್ರಂಥಮಾಲೆಯಲ್ಲಿ ಪ್ರಕಟಿಸಿದುದು ಶಿವಯೋಗಿಗಳ ವ್ಯಕ್ತಿತ್ವವನ್ನರಿವವರಿಗೆ ಸಾಧನಗಳಾಗಿವೆ.

ಕೈವಲ್ಯದರ್ಪಣ :

ಕನ್ನಡಸಾಹಿತ್ಯದಲ್ಲಿ ಓದುಗಬ್ಬ-ಹಾಡುಗಬ್ಬಗಳ ರಚನೆಯಲ್ಲಿ ಹಾಡುಗಬ್ಬಗಳಿಗೆ ತನ್ನದೇ ಆದ ವಿಶಿಷ್ಟತೆಯಿದೆ. ೧೨ನೇ ಶತಮಾನದ ಶಿವಶರಣರಲ್ಲಿ ಆರಂಭಗೊಂಡ (ಹಾಡುಗಬ್ಬ) ಸ್ವರವಚನ(ಪದ)ಗಳು, ನೂರೊಂದು ವಿರಕ್ತರಲ್ಲಿ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಘನಮಠದಾರ್ಯರು, ಮೈಲಾರ ಬಸವಲಿಂಗ ಶರಣರು ಮೊದಲಾದವರಲ್ಲಿ ಬೆಳೆದು ಬಂದಿದೆ. ಇವರ ಹಾಡುಗಬ್ಬಗಳ ರಚನೆಯನ್ನು ಸ್ವರವಚನ, ಸ್ವರಪದ (ಗೀತ) ಹಾಡುಗಳೆಂದು ಕರೆದುದುಂಟು. ಗೇಯತೆಯನ್ನೇ ಜೀವನಾಡಿಯನ್ನಾಗಿಸಿಕೊಂಡು ಈ ಪದ್ಯಗಳು ರಾಗ–ತಾಳ ನಿರ್ದೇಶನದಿಂದ ಪಲ್ಲವಿ–ಅನುಪಲ್ಲವಿಗಳಿಂದ ಆರಂಭಗೊಂಡು ಅನೇಕ ನುಡಿಗಳಲ್ಲಿ ಮೈಚಾಚಿಕೊಂಡು ಕೊನೆಗೊಂಡುದು, ಮುದ್ರಿಕೆಗಳನ್ನು ಹೊತ್ತು ನಿಂತುದು ಪ್ರಾಸ,-ಅನುಪ್ರಾಸಗಳಿಂದ ಷಟ್ಪದಿ, ತ್ರಿಪದಿ, ಚೌಪದಿ, ಮತ್ತು ಜಾನಪದದ ಅನೇಕ ಪ್ರಕಾರಗಳನ್ನು ಬಳಸಿಕೊಂಡುದು ಇವುಗಳ ಲಕ್ಷಣಗಳಾಗಿವೆ. ವೀರಶೈವತತ್ತ್ವ ಪ್ರತಿಪಾದನೆ– ಆತ್ಮ ನಿವೇದನೆ, ಲೋಕನೀತಿಗಳನ್ನು ಬಿತ್ತರಿಸುವ ಇವು ಹಾಡುಗಾರಿಕೆಯಿಂದಾಗಿ ಸರ್ವ ಜನಮನವನ್ನು ಹಿಡಿದು ನಿಲ್ಲಿಸುವ ಶಕ್ತಿಪಡೆದು ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ನಿಂತಿವೆ.

ಪ್ರಸ್ತುತ ಬಾಲಲೀಲಾ ಮಹಾಂತಶಿವಯೋಗಿಗಳ 'ಕೈವಲ್ಯ ದರ್ಪಣ' ವು ಮೇಲೆ ಸೂಚಿಸಿದ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡು ೧೪೨ ಪದ್ಯಗಳಿಂದ ಪ್ರಕಟಗೊಂಡ ಜನಪ್ರಿಯ ಸಾಹಿತ್ಯ ಕೃತಿ. ಶರಣ ಮಾತೆ-ಪರಮಾತ್ಮ ಶಿಶುವಾಗಿ ಭಾವಿಸಿ, ಬ್ರಹ್ಮಶಿಸುವಿನ ಲೀಲೆಯನ್ನು ಹಾಡಿದುದು ಈ ಕೃತಿಯ ವಿಶೇಷವಾಗಿದೆ. ವಿಶಾಲ ಮನೋಧರ್ಮದವರಾದ ಶಿವಯೋಗಿಗಳು ಪರಮಾತ್ಮನು ಅವರವರ ಭಾವದಂತಿರುವನೆಂದು ಹೇಳಿ ಹರಿ-ಹರ, ಮೇಲು-ಕೀಳು ಭಾವನೆಯಿಂದ ಕೂಡಿದ ಅಜ್ಞಾನ ಕವಿದ ಜಗಕೆಲ್ಲ-

ಹೇಳುವವರಾರಿಲ್ಲವು । ಆಚಾರ
ಕೇಳುವರು ಮುನ್ನಿಲ್ಲವು ಜಗದೊಳಗೆ
ಹೇಳುಕೇಳುವರೆಲ್ಲರು । ಒಣಡಬ್ಬು ॥

ಎಂದು ಕಟುವಾಗಿ ಟೀಕಿಸಿ, ನಡೆ-ನುಡಿಯಲ್ಲಿರುವ ಅಸಮಾನತೆಯ ಜನತೆಯನ್ನು ಕಂಡರಿಸಿದ್ದಾರೆ. ಸಮಾಜದಲ್ಲಿ ಅನೇಕ ಸಮಯಗಳನ್ನು ಹುಟ್ಟಿಸಿ ಕಲಹಕ್ಕೆಡೆ ಮಾಡುವವರಿಗೆ-

ಕಂಚು ಹಿತ್ತಾಳೆಯು ತಾಂಬ್ರ ಸಮಯಾಗ್ರದಲ್ಲಿ
ಸಂಚರಿಪ ದೀಪೊಂದು ಬೇರುಂಟೆಯಾಪರಿಯು
ಮಂಚನೆಯು ಭೇದ ತ್ರೈಸಮಯದೊಳು ಜ್ಯೋತಿರೂಪ್ಪೋರ್ವ ಶಿವನು॥

ಎಂದು ಎಚ್ಚರಿಕೆ ನೀಡಿ ಎಚ್ಚರಿಸಿದ್ದಾರೆ.

ಗುರು-ವಿರಕ್ತರಲ್ಲಿಯ ಆ ಸಮಯ ಈ ಸಮಯದವರೆಂದು ಬಡಿದಾಡುವ ಸಮಯದವರನ್ನು ಖಂಡಿಸಿ, ಸರ್ವರೂ ಶಿವಸಮಯದವರೆಂಬ ಉದಾತ್ತ ಭಾವದವರಾಗಲು ಇಂದ್ರಿಯಗಳ ವಿಕೃತಿಗಳಿಗೊಳಗಾಗದೆ ರಾಗ ದ್ವೇಷಗಳಿಗೆ, ಅಹಂಕಾರ-ಮಮಕಾರಗಳಿಗೆ ಒಳ ಜಗಳಗಳಿಗೆ ಬದ್ಧಿತರಾಗದೆ ನರರಿಚ್ಛೆ ಬಿಡುವುದನ್ನು ಹೇಳುತ್ತಾರೆ.

ಕರಣ ಜಯಿಸುವ ಸಮಯ, ಮರಣ ಗೆಲ್ಲುವ ಸಮಯ
ಮರವೆ ಮಾಯೆಗಳನ್ನು ಕಳಿವ ಸಮಯ
ವಿರತಿ ಹಿಡಿಯುವ ಸಮಯ ಹರನು ಕೂಡುವ ಸಮಯ
ನರರಿಚ್ಛೆಯನು ಬಿಡುವುದದೆ ಸಮಯವು
ತಾನೆ ತಾನಾದ ಮಂಗಳ ಚಿದಾನಂದದೊಳಗಾವ ಸಮಯ"

ಎಂದು ಪ್ರಶ್ನಿಸಿ, ನವಚಕ್ರದೊಳಗಿರುವ ನವಲಿಂಗಮೂರ್ತಿಗಳರಿತು ಭವಪೀರ ಕಿತ್ತು ಮಹಾಂತೇಶನಲ್ಲಿ ಸಮರಸವಾಗುವುದೇ ಶಿವಸಮಯದ ನಿಲುವು. ಇದನರಿತ ಲಿಂಗಧಾರಿಗಳೆಲ್ಲ ಒಂದೇ ಎಂಬ ಸರ್ವಸಮಾನತೆಯ ಮೌಲ್ಯವನ್ನು ಎತ್ತಿಹಿಡಿಯುತ್ತಾರೆ.

ಅಧಿಕಾರದ ಆಸೆಆಮಿಷಗಳಿಗೆ ಬದ್ಧನಾಗಿ ಒದ್ದಾಡುವ ಇಂದಿನ ಮಾನವನಿಗೆ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಇದ್ದುದರಲ್ಲಿ ವಿರತಿಯಿಂದ ಬದುಕ ಬೇಕೆಂಬುದಕ್ಕೆ ಶ್ರೀಗಳವರ ಬದುಕೇ ನಮಗೆ ದಾರಿದೀಪ. ಶ್ರೀಗಳವರನ್ನು ಮೈಸೂರಿನ ಮುಮ್ಮಡಿ ಕೃಷ್ಣರಾಜರು ರಥ, ಮೇಣೆ, ಛತ್ರ, ಚಾಮರ– ಮೊದಲಾದ ಸರಂಜಾಮು ಗಳ ವೈಭವದಿಂದ ಇದಿರುಗೊಂಡು ಧನ ಕನಕಾದಿಗಳನ್ನರ್ಪಿಸಿದರೆ, ಅವುಗಳನ್ನೆಲ್ಲ ಸ್ವೀಕರಿಸದೇ ನಾನೊಬ್ಬ "ತಿರುಕಯೋಗಿ" ಎಂದು ಹೇಳಿ ಕುಂಬಳ ಸೊರಟೆಯೊಂದನ್ನು ಸ್ವೀಕರಿಸಿ ವಿರತಿಭಾವ ತೋರಿಸಿದ ವೀರವಿರಕ್ತರು. "ವಸುಧಿಪನೆ ನಿನ್ನ ಮೈಸೂರೆಂಬ ಬೆಲ್ಲದ ಮುಸುರಿ ಗಡಿಗೆಗೆ ಲಕ್ಷಗಟ್ಲೆ ಭಿಕ್ಷುಕರೆಂಬ ಮಕ್ಷಿಕ ದಂಡು ಮುಸುಕಿದೆ" ನಾನು ಅವರಂತಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟು ಇಂದಿನ ಜನತೆ ಹಣಕ್ಕಾಗಿ, ಆಮಿಷದ ಗೌರವಕ್ಕಾಗಿ ಬಾಯ್ದೆರೆಯದೆ ಬದುಕಬೇಕೆಂಬ ವಿವೇಕ ನೀಡಿದಾರೆ.

ಹಬ್ಬ ಹರಿದಿನಗಳಲ್ಲಿ ಅಶ್ಲೀಲವಾಗಿ ಕುಣಿದಾಡಿ, ಹಾಡುವ ಹೋಳಿಪದಗಳನ್ನು 'ಜ್ಞಾನ ಹೋಳಿಪದ'ವಾಗಿಸಿ, ಅರಸು–ಅಧಿಕಾರಿಗಳ ಭಕ್ತಿ, ದುಷ್ಟ ಜನರ ಸೆರಳಿನ ಸೋಂಕು ಸಲ್ಲದೆಂದು ಪುರಾತನರಾದ ಮಾದಾರ ಚನ್ನಯ್ಯ, ಬೇಡರ ಕಣ್ಣಪ್ಪರಲ್ಲಿಯ ನಿಷ್ಕಾಮಭಕ್ತಿಯ ಅನುಸರಣೆ ಬೇಕೆನ್ನುವರು, ಮಾಯೆ-ಮರವೆಗಳ ಅಜ್ಞಾನದ ಸಂಸಾರದಲ್ಲಿ ಸಿಕ್ಕು ತೊಳಲಾಡುವ ಜನಕೆ ಹೀಗೆ ಬುದ್ಧಿ ಹೇಳುತ್ತಾರೆ.

> ಸಂಸಾರದೊಳಗೆ ಸದ್ಗತಿಯುಂಟು ಕೇಳ್ ಮಗನೆ ।
> ಬಸವಾದಿ ಪ್ರಮಥರಿಗೇನಿದ್ದಿಲ್ಲವೆ ।
> ಸಂಸಾರ ಹಿಡಿದು ಸನ್ಮಾರ್ಗದಲ್ಲಿ ನಡೆವರಿಗೆ ।
> ಕುಶಲ ಶಂಕರ ತಾನೆ ಮೋಕ್ಷವನು ಕೊಡುವ ॥

ಸನ್ಮಾರ್ಗದಲ್ಲಿ ನಡೆದರೆ ಮಾತ್ರ ಮೋಕ್ಷ ಇಲ್ಲವಾದರೆ ಇಲ್ಲ. ಸನ್ಮಾರ್ಗದಲ್ಲಿ ನಡೆಯಲು ಭಕ್ತಿ–ಜ್ಞಾನ–ವಿರತಿಗಳೇ ಸಾಧನ. ಭಕ್ತ ಶರಣ ಸಂಗ–ಸದ್ಗೋಷ್ಠಿಗಳಲ್ಲಿ ಧೀರ– ಶೂರನಾಗಬೇಕೆಂದು "ಎಂಥ ಶೂರ ನಮ್ಮ ಈತ, ಎಂಥ ಧೀರ ನಮ್ಮ ಸಖಿಯೆ" ಎಂಬ ಜ್ಞಾನ ಹೋಳಿಪದದಲ್ಲಿ ವಿವರ ನೀಡುತ್ತಾರೆ. ಬಸವ–ಚೆನ್ನಬಸವ–ಅಲ್ಲಮ ರನ್ನು ಗುರು–ಲಿಂಗ–ಜಂಗಮ ಸ್ವರೂಪರೆಂದರಿದು ಅವರ ಷಟ್‌ಸ್ಥಲಮಾರ್ಗ ವನ್ನನುಸರಿಸಿ ನೆಲದ ಮರೆಯ ನಿಕ್ಷೇಪದಂತಿರುವ ಶಿವನಲ್ಲಿ ಒಂದಾಗಬೇಕೆಂದು ಅನೇಕ ಜ್ಞಾನ ಹೋಳಿಪದಗಳಲ್ಲಿ ಶಿವಾನುಭವದ ಶಿವಜ್ಞಾನ ಬಿತ್ತುತ್ತಾರೆ.

ಜೋಗುಳ ಪದಗಳು (ಲಾಲಿಗಳು) ಮಾತೆಯ ಸೃಷ್ಟಿಗಳು. ಮಗುವನ್ನು ತೊಟ್ಟಿ ಲಲ್ಲಿ ಹಾಕಿ, ತೂಗಿ, ಹಾಡಿ ಹರಸುವ ಸುಮ್ಮನಾಗಿಸುವ ಮಾಧ್ಯಮಗಳು. ಇವುಗಳನ್ನೇ ಶಿವಯೋಗಿಗಳು ನಿಶ್ಶಬ್ದ ಬ್ರಹ್ಮ ಸ್ವರೂಪವಾದ ಲಿಂಗವನ್ನು ನಿತ್ಯನಿರಾಲಂಬವಾದ, ರಂಜನೆಯಳಿದ, ನಿರಂಜನ ಕೂಸಿಗೆ ಜೋಗುಳ– (ಲಾಲಿ) ಪಾಡಿ "ತೂಗುವ ಬನ್ನಿರೆ

ಬನ್ನಿರಿ ಸಖಿಯರು ನಿತ್ಯ ನಿರಾಲಂಬ ಶಿಶುವ", "ತೂಗುವ ಬನ್ನಿರೆ, ಮಹಾ ಗುರು ಶಾಂತೇಶ್ವರನ ರಾಗದ ಪುತ್ರನ ಮಹಾಂತನ" ಎಂದು ಸಕಲರನ್ನಾಹ್ವಾನಿಸುತ್ತಾರೆ: ಮತ್ತೆ,

ಜೋ ಜೋ ಮಹಾಂತಲಿಂಗ ಶ್ರೀಕಂದ ಜೋ ಜೋ
ಜೋ ಜೋ ಲಿಂಗ ಸಚ್ಚಿದಾನಂದ
ಜೋ ಜೋ ಲಿಂಗ ನಿತ್ಯ ಪರಿಪೂರ್ಣ... ॥

ಸತ್-ಚಿತ್-ಆನಂದ ನಿತ್ಯಪರಿಪೂರ್ಣ ಕಂದ ಮಹಾಂತನ ತೂಗಿ ಹಾಡಿ ಸಂತೃಪ್ತಿಗೊಳ್ಳುವ ಭಕ್ತ ಮಾತೃಹೃದಯದ ವಾತ್ಸಲ್ಯ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಇನ್ನೊಂದೆಡೆ–

ಕರಿ ಕರಿಯ ಮಾಡುವುದು ಪರಮ **ಶಿವಯೋಗಿ ಶಿಶು**
ಪರಿ ಪರಿಯ ಭಕ್ತಿ ತಾಯಿ ತಂದೆಗಳಿಗೆ
ಶರಣ ಭಕ್ತರ ಪಾದ **ಸ್ಮರಣೆಯೆಂಬ ಹಾಲ**
ಭರದಿ ಕುಡಿದೇನೆಂದು ತವಕಿಸುವದು.
ಹರಜ್ಞಾನ ರಸ ತುಂಬಿ ಪರಿಪಕ್ವವಾದಸಮ
ಪರಮ **ಮುಕ್ತಿಯ ಹಣ್ಣ** ಬೇಡುತಿಹುದು
ಗುರುಕರುಣ ತೊಟ್ಟಿಲೊಳು ಕಿರಿದಾಗಿ ಭಕ್ತರಿಗೆ
ಹರುಷದಿಂದಾಡಬೇಕೆನ್ನುತಿಹುದು,
ಗುರುಕರುಣ ಮುತ್ತಿನ ಪರಮ ಟೊಪ್ಪಿಗೆ ಕಂಥೆ
ಸ್ಥಿರವಾಗಿ ಧರಿಸಬೇಕೆನ್ನುತಿಹುದು ॥

ಅಷ್ಟದಳ ಕಮಲ ತೊಟ್ಟಿಲೊಳಗೆ ಮಲಗಿ ಸಬ್ಬುಣ ಹಸ್ತ ಪದಗಳನಾಡುತ್ತ ಮಲಗಿದ ಇಲ್ಲಿಯ ಕಾರಣಿಕ ಶಿವಯೋಗಿ ಶಿಶು, ಶಿವಭಕ್ತರ ಸ್ಮರಣೆಯ ಹಾಲ ಕುಡಿದು, ಮುಕ್ತಿಯ ಹಣ್ಣಬೇಡಿ, ಗುರುಕರುಣ ತೊಟ್ಟಿಲಲ್ಲಿ ಹರುಷದಿಂದಾಡಿ, ಸ್ಥಿರವಾದ ಪರಮ ಟೊಪ್ಪಿಗೆ, ಕಂಥೆ ಧರಿಸುವ-ಶಿವಪದದ ಐಕ್ಯವನ್ನು ಬಯಸುತ್ತದೆ. ನಿತ್ಯ ಮುಕ್ತತ್ವ ಪಡೆಯಲು ಸತ್ಯಭಕ್ತರು ಬಂದು ಚಿತ್‌ಶುದ್ಧದಿಂದ ಮುಟ್ಟಿ ಮುಟ್ಟಿ ತೂಗಬೇಕೆಂದು ಕರಿಕರಿಮಾಡುತ್ತದೆಂದು ಶಿವಾನುಭಾವದ ಸ್ವಾನುಭಾವವನ್ನು ಜನತೆಗೆ ಬಿತ್ತರಿಸುವದನ್ನು ಕಾಣುತ್ತೇವೆ.

"ಹಣವಿದ್ದಾಗಲೆ ಭಕ್ತಿ । ನೆಣವಿದ್ದಾಗಲೆ ಸೇವೆ
ಗುಣವಿದ್ದಾಗಲೆ ಮಾಡಿ ಮುಕ್ತಿ ಪಡೆ ಆತ್ಮಾ" ಎಂದು

ಬೋಧಿಸಿದ ಶಿವಯೋಗಿಗಳು ಜೀವ-ಪರಮರ ಕೂಟವಾದ ಶಿವಯೋಗವು ಲಿಂಗವ ಪೂಜಿಸಿ ಲಿಂಗವಾಗುವ ಪರಿಯನ್ನು ಗುರುವಿನಿಂದರಿತು ನಡೆಯಬೇಕೆಂಬ- ಗುರು ಬೋಧೆಯನ್ನು

ಪರವಸ್ತು ನೀನೆಂದುವೊರೆದೆ । ಎನ
ಗೊರೆದ ಕಾರಣದಿಂದೆ ನಾ ನಿನ್ನರಿದೆ
ಅರಿಯಲೆನ್ನೊಳಗೆ ನೀ ಬೆರೆದೆ । ದೇವ
ಬೆರೆದಾಕ್ಷಣವೆ ಎನ್ನ ಭವಬೀಜ ಹುರಿದೆ ॥

ಎಂದು ಅರಿತು. ಏಕೇನ ಜನ್ಮದಲ್ಲಿ ಮುಕ್ತಿ ಪಡೆಯಬೇಕಾದರೆ ಭವಬೀಜ ಹುರಿಬೇಕೆಂದು ತಿಳಿಸಿ, ಗುರುವಿಗೆ ಮಂಗಲದ ಜಯಕಾರ ಮಾಡುತ್ತಾರೆ.

ಸೆಡವು, ಬಿಗುವಿನ ಭಕ್ತಿಯ ಪಥದಿಂದ ನಡೆವವರಿಗೆ ಶಿವ ಮೆಚ್ಚನು; ಮರವೆಯ ಸೆಡವಿನ ಮನೆಯಲ್ಲಿ ಜ್ಞಾನಜ್ಯೋತಿಯ ತುಂಬಿ, ಲಿಂಗಕಾಯವನರಿಸಿ ಲಿಂಗ ಸಹಿತಾಚರಿಸಿ ಲಿಂಗೈಕ್ಯರಾಗಿ, ಭಕ್ತರಾಗಿ, ಶಿವಯೋಗಿಗಳಾಗಿ ನಿಂತವರು–

ಕಾಗಿ ಹಿಂಡಿನೊಳಗೆ ಕೋಗಿಲೆ
ಮೃಗದ ಹಿಂಡಿನೊಳಗೆ ಸಿಂಹ
ಬಗೆಯ ಬಕದ ಹಿಂಡಿನೊಳಗೆ ಹಂಸ ಮೆರೆವಂತೆ
ಜಗದ ಜನರ ಹಿಂಡಿನೊಳಗೆ
ಸೊಗಸಿನಿಂದ ಯೋಗಿವರನು
ಸುಗಮ ಶಿವಕಾಯವನು ಧರಿಸಿ ಮೆರೆವ ಬಗೆ ಬೇರೆ ॥

ಎಂದು ಶಿವಯೋಗಿಯ ಶರಣರ, ಭಕ್ತರ ನಿಲವನ್ನು ಎತ್ತಿ ತೋರಿಸುತ್ತಾರೆ.

ಜಗದ ಜನರ ಹಿಂಡಿನಿಂದ ಸಿಡಿದು ನಿಂತು ಕಾರಣಿಕ ಪುರುಷರಾದ ಶಿವಯೋಗಿಗಳು ಇಂದು ಕೃತಿಯ ಮೂಲಕ ಅಜರಾಮರವಾಗಿ ನಿಂತುದನ್ನು, ಅವರ ಕೃತಿಯೊಳಗಿನ ಪದಗಳನ್ನು ಭಜನೆಪದಗಳಾಗಿ, ಮಠಗಳಲ್ಲಿ ಸ್ತೋತ್ರಪದಗಳಾಗಿ, ಮಂಗಳಾರತಿ ಪದಗಳಾಗಿ ಜನತೆ ನಾಲಗೆಯಲ್ಲಿ ಸ್ಮರಿಸಿ ನೆನೆಸುತ್ತದೆ. ಹೀಗೆ ಸ್ಮರಿಸುವ ಇವರ ಪಥ ನಮಗೆ ನಂದಾದೀವಿಗೆಯಾಗಲಿ.

ಮೈಲಾರ ಬಸವಲಿಂಗ ಶರಣರು



● ಡಾ. ಎಸ್. ವ್ಹಿ. ಅಯ್ಯನಗೌಡರ

ಧರಣಿಯ ಮೇಲೊಂದು ಓರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹದೇವಸೆಟ್ಟಿ
ಒಮ್ಮನವಾದಡೆ ಒಡನೆ ನುಡಿವನು
ಇಮ್ಮನವಾದಡೆ ನುಡಿಯನು
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ
ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ ॥

೧೨ನೆಯ ಶತಮಾನದಲ್ಲಾಗಿ ಹೋದ ಮಹಾನ್ ಶರಣ ಬಸವಣ್ಣನವರ ದಿವ್ಯ ನುಡಿಯಿದು. ಈ ನುಡಿಯನು ದಿಟವಾಗಿಸುವಂತೆ ವ್ಯಾಖ್ಯಾನವಾಗಿ ಬದುಕಿದವರು— ಮೈಲಾರ ಬಸವಲಿಂಗ ಶರಣರು. ಅವರು ಶರಣರಿಗೆ ಶರಣಾದವರು. ಕನ್ನಡ ನಾಡಿಗೆ ಮುಬ್ಬುಗವಿದು ಕತ್ತಲಾವರಿಸಿದ ೧೮,೧೯ ನೆಯ ಶತಮಾನಗಳ ಅಂತ್ಯ ಹಾಗು ಆದಿ ಭಾಗಗಳಲ್ಲಿ ಉದಯಿಸಿ ದಿವ್ಯಕಿರಣದಿಂದ ಪ್ರಕಾಶಿಸಿದ ಮಹಾತ್ಮರಲ್ಲಿ ಒಬ್ಬರು. ವೀರಶೈವದ ಆಚಾರಧರ್ಮವಾದ ಗುರುಭಕ್ತಿ-ಲಿಂಗಪೂಜೆ-ಜಂಗಮದಾಸೋಹ-ಚರತೀರ್ಥಸೇವನೆ-ಪ್ರಸಾದಭೋಗ ಸಿದ್ಧಿಯ ತೃಪ್ತಿಯ ನಿಲುವನ್ನು ಮೈಗೂಡಿಸಿಕೊಂಡು ಪ್ರಸಾದ ಸಿದ್ಧಿಯೊಂದಿಗೆ ಪ್ರಸಿದ್ಧಿ ಪಡೆದ ವ್ಯಕ್ತಿತ್ವ-ಮೈಲಾರ ಬಸವಲಿಂಗ ಶರಣರದು. ಅರ್ಧ ಕಾಣಿಯಸೋಲದೆ, ಅರ್ಧ ಕಾಣಿಯಗೆಲ್ಲದೆ ಕ್ರಿಯಾ-ಜ್ಞಾನ ಸಮಾಯುಕ್ತ ಸಮತೋಲನದ ವೀರಶೈವವೇ ಅವರ ಬದುಕು-ಬರಹಗಳು. ಇಂಥ ಮಹಾನ್ ಶರಣರ ಜೀವನಚರಿತೆ ತಿಳಿಯಲು ನಮಗಿರುವ ಸಾಮಗ್ರಿಗಳು 'ಗುರು ಚೆನ್ನವೀರ' ಎಂಬ ಅಂಕಿತದಲ್ಲಿ ವಿವಿಧ ಛಂದೋವೈವಿಧ್ಯಗಳಿಂದ ರಚನೆಗೊಂಡ ಬಸವಲಿಂಗಶರಣರ "ಗುರುಕರುಣ ತ್ರಿವಿಧಿ (ತ್ರಿಪದಿ), ಷಟ್‌ಸ್ಥಲ ನಿರಾಭಾವ ವೀರಶೈವ ಸಿದ್ಧಾಂತ (ಷಟ್ಪದಿ), ಷಟ್‌ಸ್ಥಲ ಜ್ಞಾನಾನುಭಾವ (ಕಂದ), ಲಿಂಗಪೂಜಾ

ವಿಧಾನ (ಕಂದ), ಶಿವಾನುಭವ ದರ್ಪಣ (ಸ್ವರಪದಗಳು) ಭಕ್ತಿಬಿನ್ನಹ ದಂಡಕ (ದಂಡಕ), ಕೃತಿಗಳು ಹಾಗು ಇತರ ಬಾಹ್ಯಸಾಮಗ್ರಿಗಳು.

ಮೈಲಾರ ಬಸವಲಿಂಗ ಶರಣರು ಐತಿಹಾಸಿಕ ಪ್ರಸಿದ್ಧಿಪಡೆದ ಬಳ್ಳಾರಿಜಿಲ್ಲೆಯ ಹಡಗಲಿ ತಾಲೂಕಿನ ಮೈಲಾರ ಗ್ರಾಮದ ಶೆಟ್ಟರ ಮನೆತನದಲ್ಲಿ ಜನಿಸಿದವರು. ಬಸವಪ್ಪ ಎಂಬುದು ಅವರ ಹೆಸರು. ಮನೆತನದ ವೃತ್ತಿಯಾದ ವ್ಯಾಪಾರವನ್ನೇ ಕಾಯಕವನ್ನಾಗಿ ಮಾಡಿಕೊಂಡು ಜೀವನ ಪರ್ಯಂತವೂ ಕಾಯಕಯೋಗಿಗಳಾಗಿ ಬದುಕಿದವರು. ಅವರ ಮನೆ ಚಿಕ್ಕದಾದರೂ ಘನಮನದಿಂದ ಬೆಳೆವ ಪ್ರವೃತ್ತಿ ಯುವರೆಂಬುದು ಅವರ ಬದುಕಿನಿಂದ ವಿದಿತವಾಗುವುದು. ಅವರು ತಮ್ಮ ಬಾಲ್ಯದ ಬಗೆಗಾಗಲಿ, ತಂದೆ–ತಾಯಿಗಳ ಬಗೆಗಾಗಲಿ ಹೇಳಿಕೊಳ್ಳದಿರುವುದು, ಗುರು ವನ್ನು ಗುರುಪರಂಪರೆಯನ್ನು ಹೇಳಿಕೊಂಡುದು ವೀರಶೈವತತ್ತ್ವಕ್ಕನುಗುಣ ವಾಗಿಯೇ ಇರುವುದು. ಹೀಗಾಗಿ ಗುರುದರ್ಶನದ ನಂತರದ ಬದುಕಿನ ಜೀವನ ಚಿತ್ರಣ ಅವರ ಕೃತಿಗಳ ಮೂಲಕ ಗುರುತಿಸಿದಂತೆ, ಬಾಲ್ಯದ ಬದುಕಿನ ಚಿತ್ರಣ ಮಸುಕು ಮಸುಕು. ಆದರೂ ಜನತೆಯಲ್ಲಿ ಮೌಖಿಕವಾಗಿ ಒಬ್ಬರಿಂದೊಬ್ಬರಿಗೆ ಹರಿದು ಉಳಿದು ಕೊಂಡು ಬಂದಂತೆ, ಅವರು ಬಾಲ್ಯವನ್ನು ಮೈಲಾರದಲ್ಲಿಯೇ ಕಳೆದು ಅಯ್ಯನವರ ಪಾಠಶಾಲೆಯಲ್ಲಿ ಓದಿದರಂತೆ. ಈ ಓದು ಅವರ ಜ್ಞಾನದಾಹ ತೀರಿಸದಾದಾಗ ನೆರೆಹೊರೆಯ ಊರುಗಳಲ್ಲಿ ನಡೆದ ಪ್ರವಚನ-ಕೀರ್ತನಗಳಲ್ಲಿ ಭಾಗಿಗಳಾಗಿ ಕೇಳುವುದು, ಅವುಗಳಿಂದ ಪ್ರಚೋದಿತರಾಗಿ ಶರಣರ ತತ್ತ್ವಗಳ ಬಗೆಗೆ ಅವರ ಕೃತಿಗಳತ್ತ ಗಮನ ಹರಿಸಿ ಸ್ವಾಧ್ಯಾಯಸಿದ್ಧರಾಗಿ ಓದಿಕೊಳ್ಳುವುದು, ವ್ಯಾಪಾರದ ಕಾಯಕದಲ್ಲಿ ತೊಡಗು ವುದು ಅವರ ದಿನನಿತದ ಬದುಕಾಗಿದ್ದಿತು.

ಹಲವು ವಸಂತಗಳನ್ನು ದಾಟಿದ ಶರಣ ಬಸವಪ್ಪನವರು ವಿವೇಕದಿಂದೆಚ್ಚತ್ತು ಸಂಸಾರ ಹೇಯಭಾವ ಹೊಂದಿ ಶಿವಪಥವನ್ನರಿಯಬೇಕೆಂದು ಗುರುವನ್ನರಸುವ ಕಾತರದ ಕಳವಳದಲ್ಲಿ ಮಗ್ನರಾದರು. ವ್ಯಾಪಾರದ ಸಿದ್ಧಿಯಿಂದ ಪ್ರಸಿದ್ಧಿಪಡೆದ ಶರಣರ ಬದುಕನ್ನು ನೋಡಿ ಸಹಿಸದ ಕೆಲ ಕುಹಕಿಗಳು ಕರುಬಿದರು, ಬಸವಪ್ಪ ನವರನ್ನು ಪರೀಕ್ಷೆಗೊಳಪಡಿಸಿ ಊರು ಬಿಡಿಸಬೇಕೆಂಬ ಹೊಂಚಿನಿಂದ ತಪ್ಪನ್ನು ಹುಡುಕಲಾರದೆ ಕೊನೆಗೆ ವಿಷ್ಣುನಿಂದಕರೆಂಬ ಆರೋಪ ಹೊರಿಸಿ ಮೇಲಾಧಿಕಾರಿ ಗಳಿಗೆ ತಿಳಿಸಿದರು. ಅವರಿಂದ ಕರೆ ಬಂದಿತು ಬಸವಪ್ಪನವರಿಗೆ. ಕರೆಗೆ ಮನ್ನಿಸಿ ಬಂದ ಬಸವಪ್ಪನವರನ್ನು ವಿಚಾರಿಸಲಾಗಿ ವಿಷ್ಣುನಿಂದಕ ನಾನಲ್ಲ ಎಂಬುದನ್ನು—

ಹರಿಯೆ ಬ್ರಹ್ಮಾಂಡ ಪಿಂಡಾಂಡ ದಶದಿಗ್‌ಭರಿತ
ಹರಿಯೆ ತ್ರೈಭುವನಮುಟ್ಟುಂಬ ಸಕಲ ಜೀವಕ್ಕಾದಿ
ಹರಿಯು ಬಿಟ್ಟರೆಗಳಿಗೆ ಜೀವಿಸುವರಾರಿಲ್ಲ ಲೋಕದೊಳಗದು ಸದಾ

ಹರಿಭಕ್ತನಹುದು ಹರಭಕ್ತನಲ್ಲ ನಾಂ
ನರಸಿಂಹ ಮಧುಸೂಧನ ಸಿರಿಯುರಸ ಮಾ
ಸರ ವೆಂಕಟಚಲಾದಿ ಪ್ರಣವಸ್ಮರಣೆಯೊಳಗಿರ್ಪೆಂ ಸದಾ ॥

ಎಂದು 'ಹರಿ' ಶಬ್ದ ಶ್ಲೇಷೆಯಿಂದ ಪದ್ಯ ರಚಿಸಿ ತಮ್ಮ ಆಚರಣೆಗೆ ಭಂಗಬಾರದಂತೆ ಅಧಿಕಾರಿಗಳ ಮನವನ್ನು ಗೆದ್ದರು. ಹೀಗೆಯೇ ಇನ್ನೊಂದು ಸಂದರ್ಭದಲ್ಲಿ "ಗೋವಿಂದನಾದಿ ಗೋವಿಂದ । ನಮ್ಮ ಗೋವಿಂದಲಾದ ಪಾವನ ಪಾಂಡುರಂಗ" ಎಂಬ ಪದ್ಯ ರಚಿಸಿ 'ಗೋವಿಂದ' 'ಪಾಂಡುರಂಗ' ಶಬ್ದಗಳಲ್ಲಿ ಶ್ಲೇಷೆಯಿಂದ ವಿಭೂತಿ ಮಹತ್ವ ಎತ್ತಿ ಹೇಳಿ ಅಗ್ನಿದಿವ್ಯಗಳನ್ನು ಗೆದ್ದರು.

ಗುರುದರ್ಶನದ ಕಳವಳದಲ್ಲಿದ್ದ ಬಸವಪ್ಪನವರಿಗೆ ಲಿಂಗನಾಯಕನಹಳ್ಳಿಯ ಹಾಲಿವರ್ತಿ ಗುರು ಚನ್ನವೀರರ ತಪಃಪ್ರಭಾವದ ಸುದ್ದಿ ಪವನವೇಗದಿಂದ ಹರಡಿ ತಿಳಿದು, ಅರಸುವ ಬಳ್ಳಿ ಕಾಲ್ತೊಡಕಿದಂತಾಯಿತು. ಸರ್ವಜನ ಮನವನ್ನಾಕರ್ಷಿಸಿದ ಶಿವಾನುಭವ ಕೇಂದ್ರದ ರೂವಾರಿಗಳಾಗಿದ್ದ ಶ್ರೀಗಳವರ ತಪಃಪ್ರಭಾವದ ಶಕ್ತಿ ಬಸವಲಿಂಗ ತರಣರನ್ನಾಕರ್ಷಿಸಿ, ಗುರು ಚನ್ನವೀರರನ್ನು ದರ್ಶಿಸುವಂತಾಯಿತು. ಗುರು ಚನ್ನವೀರರನ್ನು ಕಂಡ ಬಸವಪ್ಪನವರು—

ಪರಮ ಪಾವನ ಪರಬ್ರಹ್ಮಸ್ವರೂಪನೆ । ಚೆನ್ನವೀರ
ನಿರುಪಮ ನಿರಘು ನಿರ್ದ್ವಂದ್ವ ನಿರ್ಲೇಪನೆ । ಚನ್ನವೀರ
ಶರಣ ಹೃದಯ ಮಂದಿರದಧಿಕಾರನೆ । ಚನ್ನವೀರ
ಕರುಣಸಾಗರ ವೇದಾಗಮ ಶ್ರುತಿಸಾರನೆ । ಚನ್ನವೀರ
....
....
ಜಿನಮಿಂತ ಜನರ ಭವದ ಬೇರೆ ಕೀಳ್ವನೆ । ಚನ್ನವೀರ
ಅನುಭವಸಾರದರ್ಥವನುರೆ ಪೇಳ್ವನೆ । ಚನ್ನವೀರ ॥

ಎಂದು ಭಾವತುಂಬಿ, ಹೃದಯ ತುಂಬಿ ಹಾಡಿ ತಮ್ಮ ವಿನಯ ಮೆರೆದರು. ಇಂದ್ರಿಯ ಭೋಗವ ಮೆಚ್ಚಿ ಸಂಸಾರ ಬಂಧನಕೊಳಗಾದ ಬಸವಪ್ಪನವರು ಗುರುತಂದೆಯಲ್ಲಿ—

ಸಂಸಾರವೆಂಬ ಸರ್ಪನ
ದುಸ್ತರವೆಂಬ ನಂಜು ತಲೆಗಡರಿಹುದೈ
ಆಸತ್ತೆನಿದಕೆ ಗಾರುಡ
ಲೇಸಿತ್ತು ಸಲಹು ದೇವಾ ॥

ಎಂದು ರಕ್ಷೆ ಕೇಳಿ, ಈ ಕಾಯಕರ್ಮಗಳೆಂಬ ಮಾಯಾ ಸಂಸಾರದಿಂದ ಹೇಯುವ ಮಾಡಿ ಪ್ರಿಯದಿಂದ ಪಾಲಿಸು ತಂದೆ ಎಂದು ಬಿನ್ನವಿಸಿದರು.

ಶಿಲೆಯ ತೆಪ್ಪವನೇರಿ ಜಲವ ದಾಂಟುವೆನೆಂಬ ಮೂಢತನ ತೊಲಗಿಸಿ ರಕ್ಷಿಸಿ ಕೃಪೆಯಾಗೆಂದು ಹಂಬಲಿಸಿದರು; ಮೊರೆ ಹೊಕ್ಕರು. ಗುರುಕಾರುಣ್ಯ ದೃಷ್ಟಿಯಿಂದ ಕರ್ಮ ಹರಿದುದನ್ನು

ಗುರುವೆ ನಿಮ್ಮನುಗ್ರಹದಿಂದೆನ್ನ । ಕರ್ಮ
ಹರಿದು ನಿರ್ಮಳ ನಿಜದಿರವಾದೆ ॥ಪ॥
ಶರೀರವೆ ನಾನೆಂಬ ಅಹಂಕಾರ । ದಿಂದ
ನರರೊಳು ನರನಾಗಿ ಚರಿಸುವಗೆ
ಕರೆದು ಮಂಡೆಯ ಮೇಲೆ ಕರವಿಟ್ಟು । ನೀ
ನರನಲ್ಲ ಪರವಸ್ತುವೆನಲಾಗಿ
ನಾನು ನನ್ನದು ಎಂಬ ಹಮ್ಮಮಂತೆ । ಯಿಂದ
ಜ್ಞಾನಬಾಹ್ಯರೊಡನಾಡುವಗೆ
ನೀನೆ ಶರಣಸತಿ ಲಿಂಗವೆ ಪತಿ । ವಸ್ತು
ತಾನೆ ಒಂದೆರಡಾದುದೆನಲಾಗಿ ॥

ಎಂದು ಹಾಡಿಕೊಂಡ ಶರಣರು ಅಹಂಮಮತೆ– ಅಹಂಕಾರ ತ್ಯಜಿಸಿ ಪರವಸ್ತುವಾಗಿ, ಶರಣಸತಿ ಲಿಂಗಪತಿಯಾಗಿ, ನರಸುತರಾಗದೆ– ಗುರುಸುತರಾಗಿ, ಭವಿಯಾಗದೆ–ಭಕ್ತರಾಗಿ ನಿಂತರು. "ಯಾರಧಿಕಾರವಿನ್ನೇನಯ್ಯಾ ಸುವಿಚಾರ ಸದ್ಗುರುವಿನಧಿಕಾರದ ಮುಂದೆ" ಎಂದು ಗುರುವಿಗೆ ಕೃತಜ್ಞತೆ ಸೂಚಿಸಿದರು.

ಹರಣ ಹೋಗದ ಮುನ್ನ ಶರಣನಾಗಬೇಕೆಂದು, ಭವಿತನವ ತೊರೆದು, ಭಕ್ತನಾಗಬೇಕೆಂದು, ಭಕ್ತಿಯಿಲ್ಲದ ಭವಿಯ ವರ್ತನೆ, ಭಕ್ತಿಯುಕ್ತ ಭಕ್ತನ ವರ್ತನೆಯನ್ನು ಷಟ್‌ಸ್ಥಲಯುಕ್ತ ಭಕ್ತಿಯ ಹಿನ್ನೆಲೆಯಲ್ಲಿ ಹೀಗೆ ಹೇಳಿದರು.

ಭವಿಯ ಭಕ್ತರ ಭೇದ ವಿವಿಧ ವರ್ತನೆಯಿಂದ
ಭವಿ ಭವಜೀವಿ ಭಕ್ತ ನಿತ್ಯಮುಕ್ತ ॥ಪ॥
ಅಂಗ ವಿಷಯ ವ್ಯಸನಂಗಳಿಚ್ಛೆಯ । ಪರ
ಹೆಂಗಳೆಯರ ಕಾಮಿಸುವುದೆ ಭವಿ
ಅಂಗತ್ರಯವ ಗುರುಲಿಂಗ ಜಂಗಮಕಿತ್ತು
ಸಂಗ ಸಂಯೋಗ ಕಾಮಿ ಶ್ರದ್ಧಾಭಕ್ತ.
....
ಒಡಲಾಸೆಯಿಂದ ದ್ರವ್ಯಕೊಡನ ಗಳಿಸಿ । ಧರ್ಮ
ಕೊಡನೊಂದ ಕಾಸನೆಂಬ ಲೋಭಿಯೇ ಭವಿ
ಒಡೆಯ ಜಂಗಮಲಿಂಗವಡಿಯಾಂಬು । ಶೇಷವ
ಬಿಡೆನೆಂಬ ಲೋಭಿ ಸಾವಧಾನಭಕ್ತ.

ಹೀಗೆ ಮುನ್ನಡೆವ ಈ ಪದ್ಯವು, ಭವಿಯು ಇಚ್ಛಿಸುವ ಪರಹೆಂಗಳೆಯರ ಕಾಮಕ್ಕಿಂತ ಲಿಂಗದಲ್ಲಿ ಏಕನಿಷ್ಠೆಯು ಕಾಮ ಬೇಕೆಂದೂ, ದ್ರವ್ಯಕೊಡನ ಹೂಳಿಡುವ ಲೋಭಿಗಿಂತ ಜಂಗಮಪ್ರಸಾದ ಬಿಡೆನೆಂಬ ಲೋಭಿಯಾಗಬೇಕೆಂದು ಹೇಳುವುದು ಭವಿ-ಭಕ್ತರ ಗುಣಾವಗುಣಗಳ ತೂಕಮಾಡಿ ಭಕ್ತನ ಹಿರಿಮೆ-ಗರಿಮೆಯನ್ನು ಎತ್ತಿ ಸಾರಿದರು.

ಮನದ ಮರ್ಕಟತನವನ್ನು ಕುರಿತು ಶರಣರು—

ರೊಕ್ಕದಿಂದಲಿ ಸೊಕ್ಕು ಸೊಕ್ಕಿನಿಂದಲಿ ದುಃಖ
ದುಃಖವೆಂಬುದು ಯಮಲೋಕವೆಂಬೆ
ರೊಕ್ಕದೊಳಗೆ ಲೆಕ್ಕ ಮುಕ್ಕಾಗೆ ಹೋದರೆ
ಕಕ್ಕುಲತೆಯ ಬಿಡು ಚುಕ್ಕಮನವೆ
ಹೊರಗೆ ಕಂಡರೆ ಎನ್ನ ಹರಣದೊಡೆಯ । ಶಿವ
ಶರಣು ಮನೆಗೆ ಬನ್ನಿಸ್ವಾಮಿ ಎಂಬೆ
ಕರೆದ ಸದ್ಭಕ್ತನೆಂದು ಮರುದಿನ । ಮನೆಗೆ
ಬರೆ ಗೃಹ ಹೊಡೆದಂತೆ ಸುಮ್ಮನಿರುವೆ ಮರುಳು ಮನವೆ ॥

ಎಂದು ಮನಕ್ಕೆ ಬುದ್ಧಿಹೇಳಿ ನಡೆಯಂತೆ ನುಡಿ, ನುಡಿಯಂತೆ ನಡೆ, ತಕ್ಕಡಿ ತ್ರಾಸಿನಂತೆ ಹೆಚ್ಚುಕಡಿಮೆಯಿಲ್ಲದ ಸಮತೋಲನದ ಬದುಕನ್ನು, ಕಲಿಯಬೇಕೆಂದು ಬುದ್ಧಿವಾದ ಹೇಳಿದರು.

ಗುರು ಚನ್ನವೀರರ ಕೃಪಾಕಟಾಕ್ಷದಲ್ಲಿದ್ದ ಬಸವಲಿಂಗ ಶರಣರು ಲಿಂಗನಾಯಕನಹಳ್ಳಿ ಮಠದ ಉತ್ತರಾಧಿಕಾರಿಯನ್ನು ನಿಯಮಿಸುವ ಸಂದರ್ಭದಲ್ಲಿ ಅಂಗಹೀನರನ್ನು ಉತ್ತರಾಧಿಕಾರಿಯನ್ನಾಗಿ ಮಾಡಬಾರದೆಂಬ ಈ ಶರಣರ ಆಕ್ಷೇಪಣೆಯಿಂದಾಗಿ ಗುರುವಿನ ವ್ಯಾಘ್ರದೃಷ್ಟಿಗೆ ತುತ್ತಾದರು. "ನೀನು ಬಸವಪ್ಪ ಅಲ್ಲ ಮುಸವಪ್ಪ" ಎಂದು ಗುಡುಗಿದರು. "ಹರ ಮುನಿದರೆ ಗುರು ಕಾಯ್ವ, ಗುರು ಮುನಿದರೆ ಹರ ಕಾಯ್ವ"ನೆಂಬುದಕ್ಕೆ ಸಾಕ್ಷಿಯಾಯಿತು ಈ ಘಟನೆ. ಈ ಘಟನೆಯಿಂದ ನೊಂದು ಬೆಂದ ಬಸವಪ್ಪನವರು ಶಿವಾನುಭವಕೇಂದ್ರವಾದ ಲಿಂಗನಾಯಕನಹಳ್ಳಿಯ ಸಹಪಾಟಿಗಳಲ್ಲೊಬ್ಬರಾದ ಬಾಲಲೀಲಾ ಮಹಾಂತ ಶಿವಯೋಗಿಗಳ ಸಲಹೆಯಂತೆ ಗುರುಸ್ತುತಿಸಿ "ಗುರುಕರುಣ ತ್ರಿವಿಧಿ" ರಚಿಸಿದರು.

ಸ್ವಾನುಭಾವದ ನೆಲೆಯ ನಾನೇನು ಬಲ್ಲೆನೈ
ನೀನೆ ಒಳಪೊಕ್ಕು ಏನ ನುಡಿಸಿದೊಡದನೆ
ನಾ ನುಡಿವೆ ಗುರುವೆ ಕೃಪೆಯಶಾಗು ॥ ಎಂದು,
ಎಲ್ಲ ದೈವಕೆ ನಿಮ್ಮ ಮೆಲ್ಲಡಿಯೆ ಘನವೆಂದು
ಸೊಲ್ಲಿಗೊಮ್ಮೊಮ್ಮೆ ನುತಿಸೆನಾಂ ಗುರುರಾಯ
ಸಲ್ಲೀಲೆಯಿಂದೆ ಕೃಪೆಯಶಾಗು ॥

ಎಂದು ಮೊರೆ ಹೊಕ್ಕ ಶಿಷ್ಯ ಬಸವಪ್ಪನವರು ಗುರು ಕೃಪಾಕಟಾಕ್ಷದಿಂದ ಬಸವಲಿಂಗ ರಾದರು; ಬಸವಲಿಂಗ ಶರಣರಾದರು. ಮುಸವನಂತಾದ ಮುಖ ಮೊದಲಿನಂತಾ ಯಿತು. ಅದನ್ನೇ ಶರಣರು—

ಬಸವ ಬಾರೆಂದನಗೆ ಅಸಮಲಿಂಗವೆ ನೀನೆಂ
ದುಸುರಿದಾ ಬಳಿಕ **ಬಸವಲಿಂಗನೆ** ಎಂದು
ಪೆಸರಿಟ್ಟ ಗುರುವೆ ಕೃಪೆಯಾಗು ॥ ಎಂದು ಹಾಡಿಕೊಂಡಿದ್ದಾರೆ.

ಗುರುವಿನಪ್ಪಣೆಯಂತೆ ಲಿಂಗನಾಯಕನಹಳ್ಳಿಯ ಶಿವಾನುಭವಕೇಂದ್ರದಲ್ಲಿ ಪರೀಕ್ಷಕರಾಗಿ-ಬೋಧಕರಾಗಿ ಶರಣರಾಗುವವರಿಗೆ-ಶರಣರಾಗಿ ಹುಸಿಲಾಂಛನಧಾರಿ ಗಳನ್ನು ಖಂಡಿಸಿದರು. 'ಛೀ ಹೆಡ್ಡ ನೀ, ಎಂಥ ಶಿವಭಕ್ತರು' ಎಂದು ಅವರ ಕಪಟ ವೇಷಗಳನ್ನು ತೆಗೆಸಿ ವೀರಶೈವ ತತ್ವಾಚರಣೆಗಳನ್ನು ಬೋಧಿಸಿದರು. ವೀರಶೈವ ನಾರು ? ವೀರಶೈವವಾವುದು ? ಅದರ ಮಾರ್ಗವಾವುದು ಎಂಬುದನ್ನು ಕೇಳಿ ತಾವೇ ಉತ್ತರಿಸಿದನು.

ಗುರು ಲಿಂಗ ಚರಪ್ರಸಾದಂ
ನಿರುಪಮ ಸಾರಾಯ ಪದವಿ ನಾಲ್ಕವರೊಳಗಂ
ಪರಿಪೂರ್ಣನಾದ ಭಕ್ತನಂ ವರವೀರಶೈವನೆನಿಪಂ ॥

ಎಂದು, ಶೈವದ ಪರಿಪಕ್ವ ಫಲವೇ ವೀರಶೈವ– ಅದರ ಮಾರ್ಗ ಷಟ್‌ಸ್ಥಲ ಮಾರ್ಗ ಎಂದು ಬೋಧಿಸಿದರು.

ಶಿವನೆಲ್ಲಿರುವನೆಂಬುದಕ್ಕೆ
ಪ್ರೇಮದಿ ಭಜಿಸುವ ಭಕ್ತರ
ಭ್ರೂಮಧ್ಯಾಲಯದೊಳಿರ್ಪ ॥

ಎಂದು ಮುಕ್ತನಾರು ? ಎಂಬುದಕ್ಕೆ ಭಕ್ತನೆ ನಿಜಮುಕ್ತನು. "ಹರಣವಿರುವಾಗ ಸಮುಗುರು ಹರಣದನುಭಾವಿ ಮುಕ್ತನು"

ಕರಪೀಠದಿಷ್ಟಲಿಂಗವು
ಸಿರದ ಪರತತ್ತ್ವಮೂರ್ತಿ ಎನಿ
ಪಜಂಗಮವು
ಎರಡೇಕವಾದ ಕೂಟವ ಅರಿದವನೆ ಮುಕ್ತ ನೋಡಾ ॥ ಎಂದು

ಅನೇಕ ಪ್ರಶ್ನೆಗಳ ನೋಡಿ ಉತ್ತರಿಸಿ "ತೂಗಿರೇ ಶರಣರು ಶಿವಯೋಗ ಸಂಪದದೊಳು" ಎಂದು ಬೋಧಿಸಿದರು. ಪುನಃ ಹುಸಿಲಾಂಛನಧಾರಿಗಳನ್ನು ಪರೀಕ್ಷಿಸಿ ಸಮರ್ಪಕ ಉತ್ತರ ಪಡೆದು ಈಗ ನೀವು ಮಠಾಧಿಕಾರಿಗಳಾಗಲು, ಬೋಧಕರಾಗಲು ಸಿದ್ಧರಾದಿರಿ. ಹೋಗಿ ಬನ್ನಿರಿ । ಎಂದು ನಮಸ್ಕರಿಸಿ ಕಳಿಸಿಕೊಡುವರು. ಹೀಗೆ ಶರಣರು ತಮ್ಮ

ಬದುಕನ್ನು ಒಂದು ಕಡೆಗೆ ಸಾಧಕರನ್ನು ಸಿದ್ಧಗೊಳಿಸುವುದು. ಇನ್ನೊಂದಡೆ ದಿನನಿತ್ಯದ ಕಾಯಕದೊಂದಿಗೆ ಬಂದ ಗಿರಾಕಿಗಳಿಗೆ ವಸ್ತು ತೂಗಿ ಕೊಡುವವರ ಜೊತೆಗೆ ತತ್ತ್ವ-ನೀತಿ ಬೋಧಿಸಿದರು. ಕೃತಿಗಳಲ್ಲಿ ತತ್ತ್ವಾಚರಣೆಯ ಸೌಗಂಧವನ್ನು ಸೂಸಿ ಸಾಹಿತ್ಯಕ್ಕೆ ತಮ್ಮ ಭಕ್ತಿ ಮಣಿಹವನ್ನು ಸಲ್ಲಿಸಿದವರಾದರು.

ಒಟ್ಟಿನಲ್ಲಿ ಸಂಸಾರಿಗಳಾಗಿ – ಸಂಸಾರದ ಬಿಡುಗಡೆ ಹೊಂದಿ ಭಕ್ತರಾಗಿ- ಗುಪ್ತ ಕಾಯಕ ಯೋಗಿಗಳಾಗಿ- ಶಿವಾನುಭಾವ ಬೋಧಕರಾಗಿ- ಮಾಹೇಶ ನಿಷ್ಠೆಯುಳ್ಳವರಾಗಿ- ಅನುಭಾವಿಗಳಾಗಿ ಕಾರ್ಯಕ್ಕೆಗೊಂಡ ವ್ಯಕ್ತಿತ್ವದ ಇವರ ಕಾಯ ಗುರು ಚೆನ್ನವೀರರ ವಿಯೋಗದ ನಂತರ ಮೈಲಾರದ ಬಯಲಿನಲ್ಲಿ ಬಯಲಾಯಿತೆಂದು ತಿಳಿದುಬರುವುದು. ಬಸವಾದಿ ಪ್ರಮಥರ ಪ್ರಭಾವಕ್ಕೊಳಗಾದ ಶರಣರು ತಮ್ಮ ಕೃತಿಗಳ ಮೂಲಕ ಮುಂದಿನವರ ಮೇಲೆ ತಮ್ಮ ಪ್ರಭಾವ ಬೀರಿದರು. ಅಷ್ಟಾವರಣ ಪಂಚಾಚಾರ- ಷಟ್ಸ್ಥಲಗಳ ಮುಪ್ಪುರಿಗೊಂಡು ಹೊರಹೊಮ್ಮಿದ ಅವರ ಪದ್ಯಗಳು ಶಿವಾನುಭಾವ ಬೋಧಕ ಪದ್ಯಗಳಂತೆ, ಕೀರ್ತನಕಾರರಿಗೆ ಮಂಗಲಪದ್ಯಗಳಂತೆ, ಪ್ರಾರ್ಥನಾಗೀತೆಗಳಂತೆ ಜನಮನದಲ್ಲಿ ನಿಂತಿರುವುದು. ಪಾರಾಯಣ ಮಾಡುವವರಿಗೆ ಕೈಪಿಡಿಗಳಾಗಿರುವುದು_ಕೃತಿಗಳಿಗಿರುವ ಆಧಿಕ್ಯವನ್ನು, ಶರಣರ ಪ್ರಚುರತೆಯನ್ನು ಎತ್ತಿ ತೋರಿಸುತ್ತವೆ.


●

ನಪುಂಸಕತೆ ಹೀನಬಲಗೊಂದು ಸಾತ್ವಿಕತೆ
ತಪಂ ಹೆಂಬೇಡಿತನಕೊಂದುಂ ಬರಿ ನೆಪಂ

ಕುವೆಂಪು

ತಾಯಿಯಿಂದಧಿಕ ಗುರುವಿಲ್ಲ

ಕುಮಾರವ್ಯಾಸ



ಕಾರ್ಯನಿರತ ಶ್ರೀ ಜಿ. ಜಿ. ದೊಡವಾಡರು



ರೈತರೊಂದಿಗೆ ಶ್ರೀ ಜಿ. ಜಿ. ದೊಡವಾಡರು



11487

ಜಿ. ಜಿ. ದೊಡವಾಡ ಉದ್ಯಮ ಕೇಂದ್ರ
ಧಾರವಾಡ



ದೊಡವಾಡ ರೋಡಲೈನ್ಸದ ಕೆಲವು ಟ್ಯಾಂಕರುಗಳು

ವಾಣಿಜ್ಯದೀಪ್ತಿ

ಈ ವಿಭಾಗದಲ್ಲಿ ....

ಪ್ರಾಚೀನ ಕರ್ನಾಟಕದ ವರ್ತಕ ಸಂಘ : 'ಅಯ್ಯಾವೊಳೆ ಐನೂರ್ವರು'



● ಡಾ. ಬಿ. ಆರ್. ಹಿರೇಮಠ

ಅಯ್ಯಾವೊಳೆ ಐನೂರ್ವರು (ವಿನಿಮಯ ವರ್ತಕರ ಸಂಘ), ತಂಬುಲಿಗ ಸಾಸಿರ್ವರು (ವಿಳ್ಯದೆಲೆ ವರ್ತಕರ ಸಂಘ), ತೆಲ್ಲಿಗರೈವತ್ತೊಕ್ಕಲು (ಎಣ್ಣೆ ವರ್ತಕರ ಸಂಘ). ಮಾಲೆಗಾರ ನಾಲ್ವತ್ತೊಕ್ಕಲು (ಮಾಲೆ ಹಾಗೂ ಹೂವು ಮಾರಾಟಗಾರರ ಸಂಘ), ತೋಟಿಗರೈನೂರ್ವರು (ಕಾಯಿಪಲ್ಯೆ ವರ್ತಕರ ಸಂಘ), ಸಾಲೆ ಸಾಸಿರ್ವರು ಅಥವಾ ಸಮಯ ಸಾಸಿರ್ವರು (ಬಟ್ಟೆ ವರ್ತಕರ ಸಂಘ), ಹಂಜಮಾನ (ಪರ್ಶಿಯನ್ ವರ್ತಕರ ಸಂಘ)— ಇವು ಪ್ರಾಚೀನ ಕರ್ನಾಟಕದ ಶಾಸನೋಕ್ತ ಪ್ರಮುಖ ವರ್ತಕ ಸಂಘಗಳು. ಈ ವರ್ತಕಸಂಘಗಳಲ್ಲಿ ಅತ್ಯಂತ ಪ್ರಸಿದ್ಧವಾದುದು, ಪ್ರಾಚೀನ ವಾದುದು "ಅಯ್ಯಾವೊಳೆ ಐನೂರ್ವರು" ವರ್ತಕಸಂಘ. ಇದು ಕರ್ನಾಟಕ ಹಾಗೂ ನೆರೆಹೊರೆಯ (ದಕ್ಷಿಣಭಾರತದ) ಪ್ರಾಂತಗಳಲ್ಲಿ ನಡೆಸಿದ ವ್ಯಾಪಾರ ಚಟುವಟಿಕೆಗಳು ಶಾಸನಗಳಲ್ಲಿ ದಾಖಲೆಗೊಂಡಿವೆ. ಶಾಸನಗಳಲ್ಲಿ ದೊರೆಯುವ ಸಂಗತಿಗಳ ಮೂಲಕ "ಅಯ್ಯಾವೊಳೆ ಐನೂರ್ವರು" ವರ್ತಕ ಸಂಘದ ಪರಿಚಯವನ್ನು ಹೀಗೆ ಮಾಡಿ ಕೊಳ್ಳಬಹುದು :

ಕರ್ನಾಟಕದಲ್ಲಿ ಐಹೊಳೆ, ಐತಿಹಾಸಿಕ ಮಹತ್ವಪಡೆದ ಗ್ರಾಮ. ಇತಿಹಾಸ ದುದ್ದಕ್ಕೂ ಈ ಗ್ರಾಮ ವರ್ತಕ ಮಹಾಸಂಘದ ಕೇಂದ್ರಸ್ಥಳವಾಗಿದ್ದಿತು. ಹೀಗೆ ಐಹೊಳೆ ಗ್ರಾಮ ಆರಂಭದಲ್ಲಿ (ಎಂಟನೆಯ ಶತಮಾನದ ಪೂರ್ವದಿಂದಲೂ) ವಾಣಿಜ್ಯ ಕೇಂದ್ರವಾಗಿದ್ದು. ಆ ನಂತರ ಅಗ್ರಹಾರವಾದುದನ್ನು ಶಾಸನಗಳು ನಮಗೆ ತಿಳಿಸಿ ಕೊಡುತ್ತವೆ.

"ಅಯ್ಯಾವೊಳೆ ಐನೂರ್ವರು" ಎಂಬುದು ಐದುನೂರು (ವರ್ತಕ) ಸದಸ್ಯ ರನ್ನು ಹೊಂದಿದ ಪ್ರಾಚೀನ ಕರ್ನಾಟಕದ ವರ್ತಕ ಮಹಾಸಂಘದ ಹೆಸರು. ಈ ಐದುನೂರು (ವರ್ತಕ)ಸದಸ್ಯರೇ ಈ ವರ್ತಕ ಮಹಾಸಂಘದ ಮೂಲಸದಸ್ಯರು

(Founder Members). ಆಮೇಲಿನ ವರ್ತಕ ಸಂಘದವರು ತಮ್ಮ ಸಂಘದಲ್ಲಿ ಸದಸ್ಯರೆಷ್ಟಿದ್ದರೂ ತಮ್ಮನ್ನು "ಅಯ್ಯಾವೊಳೆ ಐನೂರ್ವರೆ"ಂದೇ ಕರೆದುಕೊಂಡಿದ್ದಾರೆ. ಐಹೊಳೆ (ಅಯ್ಯಾವೊಳೆ), ಈ ಮಹಾಸಂಘದ ಕೇಂದ್ರಸ್ಥಳ.

ಕ್ರಿ. ಶ. ೯೯೧ ರ ಬಾಗಳಿ ಶಾಸನ, ಈ ಸಂಘದ ಪ್ರಾಚೀನತೆಯನ್ನು ಹೇಳುವ ಪ್ರಥಮ ದಾಖಲೆಯಾಗಿದೆ. ಮುಂದೆ ವಿಜಯನಗರ ಸಾಮ್ರಾಜ್ಯದವರೆಗೂ ಈ ವರ್ತಕಸಂಘದ ಉಲ್ಲೇಖಗಳು ಸಿಗುತ್ತವೆ. ಆದರೆ ಶಾಸನಗಳಲ್ಲಿ ಉಲ್ಲೇಖ ಸಿಗುವ ಕಾಲಾವಧಿಯಲ್ಲಿ ಇದು ಅಸ್ತಿತ್ವದಲ್ಲಿರಲಿಲ್ಲ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಅಸ್ತಿತ್ವದಲ್ಲಿದ್ದುದಕ್ಕೆ ಶಾಸನಾಧಾರಗಳು ಸಿಗುತ್ತವೆ. "ಅಯ್ಯಾವೊಳೆ ಐನೂರ್ವರು" ವರ್ತಕಸಂಘದ ಸದಸ್ಯರನ್ನು ಶಾಸನಗಳು "ಅಹಿಚ್ಛತ್ರಪುರವರಾಧೀಶ್ವರ" ರೆಂದು ಕರೆದಿವೆ. ಉತ್ತರಭಾರತದ 'ಅಹಿಚ್ಛತ್ರ' ಮೊದಲು ಬಹಳ ಪ್ರಸಿದ್ಧ ವಾಣಿಜ್ಯಕೇಂದ್ರವೆನಿಸಿದ್ದಿತು. ಅದು ಅಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡ ಬಳಿಕ ಅಲ್ಲಿಯ ವರ್ತಕ ಸಂಘದ ಕೆಲವುಜನ (ವರ್ತಕ) ಸದಸ್ಯರು ಐಹೊಳೆಗೆ ಬಂದು "ಅಯ್ಯಾವೊಳೆ ಐನೂರ್ವರು" ವರ್ತಕ ಮಹಾಸಂಘವನ್ನು ಸ್ಥಾಪಿಸಿರಬೇಕೆನಿಸುತ್ತದೆ. ಇಲ್ಲವೆ ಐಹೊಳೆಯ (ವರ್ತಕ) ಮೂಲಪುರುಷರೇ ಈ ಪ್ರಾದೇಶಿಕ ವರ್ತಕ ಮಹಾಸಂಘವನ್ನು ಸ್ಥಾಪಿಸಿರುವ ಸಾಧ್ಯತೆಯಿದೆ. ತಮ್ಮ ವೃತ್ತಿಯ ಮೂಲಸಂಘ ಹಾಗೂ ಮೂಲ (ವರ್ತಕ)ಪುರುಷರ ಘನತೆಯನ್ನು ಎತ್ತಿಹಿಡಿಯುವುದಕ್ಕಾಗಿ ಈ ವರ್ತಕ ಸಂಘದವರು ತಮ್ಮನ್ನು "ಅಹಿಚ್ಛತ್ರ ಪುರವರಾಧೀಶ್ವರ"ರೆಂದು ಕರೆದುಕೊಂಡಿದ್ದಾರೆ. ಇದರಿಂದ ಪ್ರಾಚೀನ ಭಾರತದಲ್ಲಿ "ಅಹಿಚ್ಛತ್ರ" (ಉತ್ತರಭಾರತದಲ್ಲಿಯ) ಹಾಗೂ "ಐಹೊಳೆ" (ಕರ್ನಾಟಕ)ಗಳಲ್ಲಿ ಎರಡು ಪ್ರತ್ಯೇಕ ವರ್ತಕ ಸಂಘಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ.

ಈ ವರ್ತಕ ಮಹಾಸಂಘದ ಸದಸ್ಯರು ತಾವು ಬಲದೇವ, ವಾಸುದೇವ ಖಂಡಳೀ ಮೂಲಭದ್ರ ವಂಶದವರೆಂದು ಹೇಳಿಕೊಂಡಿದ್ದಾರೆ. ಇಲ್ಲಿ ಬಲದೇವ ಜೈನವರ್ತಕರ, ವಾಸುದೇವ ವೈಷ್ಣವ ವರ್ತಕರ, ಖಂಡಳೀಮೂಲಭದ್ರ ಶೈವ ವರ್ತಕರ ಮೂಲ ಪುರುಷರಾಗಿರಬೇಕೆನಿಸುತ್ತದೆ. ಇದರಿಂದ "ಅಯ್ಯಾವೊಳೆ ಐನೂರ್ವರು" ವರ್ತಕ ಸಂಘದಲ್ಲಿ ಜೈನ, ವೈಷ್ಣವ ಹಾಗೂ ಶೈವ ಮತದ ವರ್ತಕರು ಸದಸ್ಯರಾಗಿದ್ದರೆಂಬುದು ಗೊತ್ತಾಗುತ್ತದೆ. ಹೀಗೆ ಈ ವರ್ತಕ ಮಹಾಸಂಘದಲ್ಲಿ ವಿವಿಧ ಮತಗಳ ವರ್ತಕರು ಸದಸ್ಯರಾಗಿದ್ದು, ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದ್ದುದು ಶಾಸನಗಳಿಂದ ತಿಳಿಯುತ್ತದೆ.

ಎಣ್ಣೆ ವರ್ತಕರ ಸಂಘವಾದ 'ಐವತ್ತೊಕ್ಕಲು', 'ತೆಲ್ಲಿಗರೈವತ್ತೊಕ್ಕಲು' ಆದಂತೆ ಈ ವರ್ತಕ ಮಹಾಸಂಘದ ಮೂಲಹೆಸರು ಆರಂಭದಲ್ಲಿ ಕೇವಲ "ಐನೂರ್ವರು" ಎಂದಿದ್ದು, ಆಮೇಲೆ "ಅಯ್ಯಾವೊಳೆ ಐನೂರ್ವರು" ಎಂದಾಗಿದೆ.

"ಅಯ್ಯಾವೊಳೆ ಐನೂರ್ವರು" ವರ್ತಕ ಸಂಘದ ಅಂತ್ಯಪದ "ಐನೂರ್ವರು' (ಸಂಖ್ಯೆ) 'ಸಂಘ' ಸೂಚಿಯೂ (ವರ್ತಕ)ಸದಸ್ಯ ಸೂಚಿಯೂ ಆದುದಾಗಿರುತ್ತದೆ. ಸಂಘಸೂಚಿ ಸಂಖ್ಯೆಯ ಹಿಂದಿನ ಪದ ಸಾಮಾನ್ಯವಾಗಿ ಸಂಘದ ಸದಸ್ಯರ ವೃತ್ತಿಯನ್ನು ತಿಳಿಸುತ್ತದೆ (ಉದಾ : ತಂಬುಲಿಗ ಸಾಸಿರ್ವರು). ಆದರೆ 'ಐನೂರ್ವರು' ಪದದ ಹಿಂದಿರುವ 'ಅಯ್ಯಾವೊಳೆ' ವೃತ್ತಿಸೂಚಿಯಾಗಿ ಇರದೆ ಗ್ರಾಮವಾಚಿ ಆಗಿರುತ್ತದೆ. ಹೀಗೆ "ಅಯ್ಯಾವೊಳೆ ಐನೂರ್ವರು" ವರ್ತಕ ಮಹಾಸಂಘದ ಐಹೊಳೆ ಎಂಬುದು ಸ್ಪಷ್ಟವಾಗುತ್ತದೆ. ಈ ವರ್ತಕ ಮಹಾಸಂಘದವರನ್ನು ಶಾಸನಗಳು "ಭಟರಿಯ ಮಕ್ಕಳು", "ಅಯ್ಯವಳೆಯ ಪುರಪರಮೇಶ್ವರಿಯ ಮಕ್ಕಳು", "ಕಾಳಿಕಾ ದೇವಿ ಲಬ್ಧವರಪ್ರಸಾದರು", "ಗಂಗವತಿದೇವಿ ಲಬ್ಧವರ ಪ್ರಸಾದಕರು" ಎಂದು ಮುಂತಾಗಿ ಕರೆದಿರುತ್ತವೆ. ಇದರಿಂದ ಇವರು ಶಕ್ತಿಯ ಆರಾಧಕರಾಗಿದ್ದರೆಂದು ಹೇಳಬಹುದು.

ಅಯ್ಯಾವೊಳೆ ಐನೂರ್ವರು ಹಿಂದೂ ಮೂಲದಲ್ಲಿ ನಡೆದುಬಂದವರಾಗಿದ್ದಾರೆ. ಆಮೇಲೆ ಇವರಲ್ಲಿ ವೈಷ್ಣವ, ಜೈನ, ಬೌದ್ಧ, ಶೈವವೆಂಬ ಪ್ರಭೇದಗಳು ಕಾಣಿಸಿಕೊಂಡವು. ಹೀಗೆ ಇವರು ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ಸರ್ವಧರ್ಮಗಳನ್ನು ಸಮಾನದೃಷ್ಟಿಯಿಂದ ಕಂಡಿದ್ದಾರೆ, ಗೌರವಿಸಿದ್ದಾರೆ. ನಾಡಿನ ತುಂಬ ಇವರು ಕಟ್ಟಿಸಿದ ದೇವಾಲಯಗಳು, ನೀಡಿದ ದಾನಗಳು ಇವರ ಧರ್ಮಸಮನ್ವಯ ಬುದ್ಧಿ ಹಾಗೂ ಧರ್ಮಸಾಮರಸ್ಯ ಭಾವನೆಗಳನ್ನು ಸಾರಿ ಹೇಳುತ್ತವೆ.

ಅಯ್ಯಾವೊಳೆ ಐನೂರ್ವರು ವರ್ತಕರಿಗೆ ಒಂದು "ವರ್ತಕ ಸಂಹಿತೆ" (Code of Merchants) ಇದ್ದಿತು. ಈ "ವರ್ತಕ ಸಂಹಿತೆ" ಯನ್ನೇ ಶಾಸನಗಳು "ಗುಡ್ಡಶಾಸ್ತ್ರ" ವೆಂದು ಕರೆದಿವೆ. ಈ ಸಂಹಿತೆಯ ನಿಯಮದಂತೆಯೇ ಅಂದಿನ ವರ್ತಕರು ನಡೆಯುತ್ತಿದ್ದರು. ಇವರಿಗೆ ಸಂಬಂಧಿಸಿದ "ಪಂಚಶತ ವೀರಶಾಸನರುಂ" ಎನ್ನುವ ವಾಕ್ಯ ಇದರಲ್ಲಿಯ ಐದುನೂರು ನಿಯಮಗಳಾಗಿರುವ ಸಾಧ್ಯತೆಯನ್ನು ಹೇಳುತ್ತದೆ. ಅಂದಿನ ವರ್ತಕರು ಈ ಸಂಹಿತೆಗೆ ವಿರುದ್ಧವಾಗಿ ವರ್ತಿಸುತ್ತಿರಲಿಲ್ಲ. ಒಂದುವೇಳೆ ಹಾಗೆ ವರ್ತಿಸಿದರೆ, ಅಂಥ ವರ್ತನೆಯುಳ್ಳವರು ವ್ಯಾಪಾರಧರ್ಮದಿಂದ ದೂರ ಉಳಿಯಬೇಕಾಗುತ್ತಿತ್ತು. ಹೀಗೆ ಪ್ರಾಚೀನ ಕರ್ನಾಟಕದ ವರ್ತಕಸಂಘದಂತೆ ಸ್ವತಂತ್ರವಾದ "ವರ್ತಕ ಸಂಹಿತೆ" ಹೊಂದಿದ ಯಾವ ಉಲ್ಲೇಖಗಳೂ ಬೇರೆ ಕಡೆ ಸಿಗುವುದಿಲ್ಲ. ಇಂಥ "ವರ್ತಕ ಸಂಹಿತೆ"ಗಳ ಮೂಲಕ ವ್ಯಾಪಾರದಲ್ಲಿ ಶಿಸ್ತು, ಸುವ್ಯವಸ್ಥೆ, ಸಮಾಜದಲ್ಲಿ ಆರೋಗ್ಯಕರ ವಾತಾವರಣ ನಿರ್ಮಾಣವಾಗಿರುವಂತೆ ಕಾಣುತ್ತದೆ. ವರ್ತಕ ಸಂಘಗಳ ಬೆಳವಣಿಗೆಗೆ, ವ್ಯಾಪಾರ ಚಟುವಟಿಕೆಗಳ ಸಮತೋಲನಕ್ಕೆ, ಪ್ರಜಾ ಜೀವನದ ಮುನ್ನಡೆಗೆ ಇದು ಕಾರಣವಾದಂತೆ ಕಾಣುತ್ತದೆ. ಈ ವರ್ತಕ ಸಂಹಿತೆಯ ಸಂಪೂರ್ಣ ವಿವರಗಳು ಲಭ್ಯವಾಗಿದ್ದರೆ, ಇಂದಿನ ವಾಣಿಜ್ಯೋದ್ದಿಮೆ ಸಂಸ್ಥೆ(Chamber of Commerce) ಗಳಿಗೆ ದಾರಿದೀಪವಾಗುತ್ತಿತ್ತು.

ಈ ವರ್ತಕ ಮಹಾಸಂಘಕ್ಕೆ ಸ್ವತಂತ್ರವಾದ ರಾಜಚಿಹ್ನೆ ಇದ್ದಿತು. ಚಕ್ರವರ್ತಿ, ದಂಡನಾಯಕ, ಮಂಡಲೇಶ್ವರ ಮೊದಲಾದವರು ಮಾತ್ರ ಹೊಂದಿರಬೇಕಾಗಿದ್ದ ರಾಜಚಿಹ್ನೆ ವರ್ತಕಸಂಘಕ್ಕೂ ಇದ್ದಿತೆಂಬುದು ಗಮನಾರ್ಹ ಸಂಗತಿಯಾಗಿದೆ. ಇದರಿಂದ ಪ್ರಾಚೀನ ಕರ್ನಾಟಕದ ವರ್ತಕಸಂಘಗಳು ರಾಜಕೀಯ ಕ್ಷೇತ್ರದಲ್ಲಿ ವಹಿಸುತ್ತಿದ್ದ ಪಾತ್ರವೇನೆಂಬುದು ತಿಳಿಯುತ್ತದೆ. ಚಕ್ರವರ್ತಿಯ ರಾಜಭಂಡಾರ ಅಕ್ಷಯವಾಗಿ ಉಳಿಯುವಲ್ಲಿ ಈ ಮತ್ತು ಇಂಥ ವರ್ತಕ ಸಂಘಗಳು ಗಣನೀಯವಾಗಿ ಕಾರ್ಯ ಮಾಡಿವೆ. ಇದ್ದರಿಂದಲೇ ಈ ವರ್ತಕ ಸಂಘಕ್ಕೆ ರಾಜರಿಗೆ ಸಮಾನವಾದ ರಾಜಚಿಹ್ನೆ ಸಂಪ್ರಾಪ್ತವಾಗಿದೆ. 'ಡಮರುಗಪಜೆ' (=ವಾದ್ಯ)—"ಅಯ್ಯಾವೊಳೆ ಐನೂರ್ವರ" ವಿಶಿಷ್ಟವಾದ್ಯವಾಗಿದ್ದಿತು. ಇದಲ್ಲದೆ ಈ ಮಹಾಸಂಘಕ್ಕೆ ಕೆಲವು ಸ್ವತಂತ್ರ ಧ್ವಜಗಳಿದ್ದವು. ಗುಡ್ಡಧ್ವಜ, ಗರುಡಧ್ವಜ, ಚಕ್ರಧ್ವಜಗಳು—ಈ ವರ್ತಕರ ವಿಶಿಷ್ಟ ಧ್ವಜಗಳಾಗಿರುತ್ತವೆ. ಇಲ್ಲಿ ಗುಡ್ಡಧ್ವಜದವರು ಶೈವ ವರ್ತಕರೆಂದೂ ಗರುಡಧ್ವಜದವರು ವೈಷ್ಣವ ವರ್ತಕರೆಂದೂ ಚಕ್ರಧ್ವಜದವರು ಜೈನವರ್ತಕರೆಂದೂ ಗುರುತಿಸಬಹುದಾಗಿದೆ. ಇದರಂತೆ 'ಡಮರುಗಪಜೆ' ಶೈವವರ್ತಕರ ವಾದ್ಯವೆಂದು ಹೇಳಬಹುದು. ಆದರೆ ವೈಷ್ಣವ ಹಾಗೂ ಜೈನವರ್ತಕರ ವಾದ್ಯಗಳ ಬಗ್ಗೆ ಶಾಸನಗಳು ಮಾಹಿತಿ ನೀಡುವುದಿಲ್ಲ. ಹೀಗೆ ಪ್ರಾಚೀನ ಕರ್ನಾಟಕದ ವರ್ತಕ ಸಂಘ (ಅಯ್ಯಾವೊಳೆ ಐನೂರ್ವರು) ಕ್ಕೆ ಹಾಗೂ ಅದರ ಸದಸ್ಯರಿಗೆ ಚಕ್ರವರ್ತಿಗೆ ಸಮಾನವಾದ ರಾಜಚಿಹ್ನೆ, ಸ್ವತಂತ್ರ ಧ್ವಜಗಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.

ಪ್ರಾಚೀನ ಕರ್ನಾಟಕದ ವರ್ತಕರು ತಾವು ವ್ಯಾಪಾರಕ್ಕಾಗಿ ಪರಸ್ಥಳಗಳಿಗೆ ಹೋಗುವಾಗ ಕೈಯಲ್ಲಿ ಕೋಲ(=ದಂಡ)ನ್ನು ಹಿಡಿದಿರುತ್ತಿದ್ದರು. ಆದ್ದರಿಂದ ಶಾಸನಗಳು ಇಂಥ ವರ್ತಕರನ್ನು "ಭಲ್ಲುಂಕಿ ದಂಡಹಸ್ತ" ರೆಂದು ಕರೆದಿರುತ್ತವೆ. ಹೀಗೆ ವ್ಯಾಪಾರಕ್ಕೆ ಹೋಗುವಾಗ ಕೈಯಲ್ಲಿ ಕೋಲನ್ನು ಹಿಡಿದುಕೊಳ್ಳುವುದು ವರ್ತಕರಿಗೆ ಗೌರವದ ಹಾಗೂ ಪ್ರತಿಷ್ಠೆಯ ಸಂಕೇತವಾಗಿದ್ದಿತು.

'ಅಯ್ಯಾವೊಳೆ ಐನೂರ್ವರು' ವರ್ತಕ ಮಹಾಸಂಘ ಹಾಗೂ ಇದರ ಸದಸ್ಯರು ಸ್ವತಂತ್ರವಾದ ಪ್ರಶಸ್ತಿ ಪಡೆದಿದ್ದರು. ರಾಜವರ್ಗದವರಿಗೆ ಸಮಾನವಾದ ಪ್ರಶಸ್ತಿಯನ್ನು ಹೊಂದುವ ಅಧಿಕಾರ ಪ್ರಾಚೀನ ಕರ್ನಾಟಕದಲ್ಲಿ ಈ ವರ್ತಕ ಸಂಘಕ್ಕೂ ಇದರ ಸದಸ್ಯರಿಗೂ ಇದ್ದಿತೆಂಬುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಶಾಸನಗಳಲ್ಲಿ ಈ ವರ್ತಕ ಸಂಘ ಹಾಗೂ ಇದರ ಸದಸ್ಯರನ್ನು ಕುರಿತು ಐವತ್ತಕ್ಕೂ ಮಿಕ್ಕಿ ಪ್ರಶಸ್ತಿಗಳು ಲಭಿಸುತ್ತವೆ. ಇವುಗಳಲ್ಲಿ ಒಂದನ್ನು ಮಾತ್ರ ಮಾದರಿಗಾಗಿ ಇಲ್ಲಿ ಅವಲೋಕಿಸಬಹುದು :

"ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತ ವೀರಶಾಸನ ಲಬ್ಧಾನೇಕ ಗುಣಗಣಾಲಂಕೃತ ಸತ್ಯಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಣಂಜು

ಧರ್ಮ ಪ್ರತಿಪಾಳವಿಶುದ್ಧ ಗುಡ್ಡಧ್ವಜ ಮಾನಾನೂನ ಸಾಹಸ ಲಕ್ಷಾಲಿಂಗಿತ ವಕ್ಷಸ್ಥಳ ಭುವನ ಪರಾಕ್ರಮೋಂನತರುಂ ವಾಸುದೇವ ಖಂಡಳೀಮೂಳಭದ್ರ ವಂಶೋದ್ಭವರುಂ ದ್ವಾತ್ರಿಂಶವೇಳಾಂಮರವಷ್ಟಾದಶ ಪಟ್ಟಣಂಗಳು ಚೌಷಷ್ಟಿಯೋಗಪೀಠಮುಂ ಚತುರ್ದಿಶೆಯಾಶ್ರಮ ನಾನಾದೇಶ ಭ್ರಮಾಸ್ತ್ರಕರವರ್ಗೆ ಪುಟ್ಟಿಯುಂ ಕ್ರಿತಯುಗ ತ್ರೇತೆ ದ್ವಾಪರ ಕಲಿಯುಗಂ ಮೊದಲಾಗೆ ಬ್ರಂಹ್ಮವಿಷ್ಣ ಮಹೇಶ್ವರರವರ ಮತಂ ಪ್ರಿಥ್ವಿಯೆ ಹಸುಂಬೆಯಾಗೆ ಅಷ್ಟಲೋಕಪಾಳಕರೇ ಗೊಂಟಾಗೆ ವಾಸುಗಿಯೇ ಬಳಸಾಗೆ ಫಣಿಕುಳಂಗಳೇ ದಾರವಾಗಿ ಬೊಕ್ಕಣವೊಳವಸುಂಬೆಯಾಗಿ ಚಕ್ರಮೇ ಬೆಳವಾಗಿ ಕೂರಸಿಯೇ ಮುರಸುರಿಗೆಯಾಗೆ ಹಸುಂಬೆಯೊಳಮೂಲ್ಯವಸ್ತುಗಳೇ ವಸ್ತುಗಳಾಗಿ ಚೇರ ಚೋಳ ಪಾಂಡ್ಯ ಮಲೆಯಂ ಮಗಧ ಕೌಶಳ ಸೌರಾಷ್ಟ್ರ ಧನುಷ್ಟ್ರ ಕುರುಂಭ ಕಾಂಭೋಜ ಗೌಳಲಾಳ ಬರ್ಬ್ಬರ ಪಾರಸ ನೇಪಾಳ ಏಕಪಾದ ಲಂಬಕರ್ಣ್ಣ ಸ್ತ್ರೀರಾಜ್ಯ ಪ್ರೋಳಾಮುಖವೆಂಬ ನಾನಾ ದೇಶಂಗಳೊಳಂ ಗ್ರಾಮ ನಗರ ಖೇಡ ಖರ್ವ್ವಡ ಮಡಂಬ ಪಟ್ಟಣ ದ್ರೋಣಾಮುಖ ಸಂಹನಮೆಂಬ ದಿಗುದಂತಿ ಪಟ್ಟಣಂಗಳ ಪಾದಮಾರ್ಗ್ಗ ಜಲಮಾರ್ಗ್ಗ ಷಡ್ಖಂಡ ಮಂಡಳಂಗಳಂ ಪೊಕ್ಕು ಭದ್ರಹಸ್ತಿ ಜಾತ್ಯಶ್ವ ಇಂದ್ರನೀಲ ಚಂದ್ರಕಾಂತ ಮುತ್ತು ಮಾಣಿಕ್ಯ ವಜ್ರವೈಢೂರ್ಯ್ಯ ಗೋಮೇಧಿಕ ಪುಷ್ಯರಾಗ, ಪದ್ಮರಾಗ ಪವಳ ಮರಕತ ಕರ್ಕ್ಕೇತನ ನಾನಾ ವಸ್ತುಗಳ ಮನೇಲಾ ಲವಂಗಗರು ಚಂದನ ಕರ್ಪ್ಪೂರ ಕಸ್ತೂರಿ ಕುಂಕುಮ ಮಲೆಗಜಾದಿ ಸಂಗಂಧ ದ್ರವ್ಯಂಗಳುಮಂ ಪೇಱಿಯುಂ ಮಾಱಿಯುಂ ಪೆಗಲೊಳಾಂತು ಸುಂಕಚ್ಛಾಯುವಮಂ ಕಿಡಿಸಿ ಚಕ್ರವರ್ತ್ತಿಯ ಸುವರ್ಣ್ಣ ಭಂಡಾರಮುಮಂ ಪಟ್ಟಿಸ ಭಂಡಾರಮುಮಂ ತೆಕ್ಕನೆ ತೀವಿ ಮಿಕ್ಕುದಱೊಳು ಚತುಸ್ಸಮಯ ಷಡುದರ್ಶನ ವಿಶಿಷ್ಟ ವಿದಗ್ಧಪಂಡಿತ ಮುನಿಜನಂಗಳ್ಗೆ ನಿತ್ಯಂ ಬೆಸಕೆಯ್ಯುತ್ತುಂ ಅವರ ಪರಿಸಿದ ಪರಮಾಶೀರ್ವಾದ ಶತ ಸಹಸ್ರ ವಚನಂಗಳಂ ತಲೆಯೊಳಾಂತು ಕಯ್ಕೊಳುತ್ತುಂ ಮಹಾದೇವರುಮನಿಷ್ಟಾದೇವರುಮಾಗಿ ಬಗೆದು ಧರ್ಮಾರ್ಥಕಾಮಭೋಗಂಗಳಂ ಮಹಾಸುಖದಿನನುಭವಿಸುತ್ತ ಗಾರ್ದ್ಧಪ ಮಹಿಷವಾಹಕ ಚೇಳಾಭರಣ ಭೂಷಿತರಪ್ಪ ಎಂಟುನಾಡ ಪದಿನಱುವರುಂ ಗವರೆಗಳುಂ ಗಾತ್ರಿಗರುಂ ಸೆಟ್ಟಿಯರುಂ ಸೆಟ್ಟಿಗುತ್ತರುಂ ಅಂಕಕಾರರುಂ ಬೀರರುಂ ಬೀರವಣಿಗರುಂ ಗಂದಿಗರುಂ ಗಾವುಂಡರುಂ ಗಾವುಂಡಸ್ವಾಮಿಗಳುಂ ಇನ್ತು ಭಲ್ಲುಂಕೆ ದಂಡಹಸ್ತರುಂ ಆನೆಯೇ ಭೇರಿಯಾಗಿ ಭೇರಿಯೇ ಮದ್ದಳೆಯಾಗಿ ಬೆಳಂಗೊಡೆಗಳೇ ನೆಳಲಾಗಿ ಮಹಾಸಮುದ್ರಮೇ ನೀರ್ಗ್ಗರಿಗೆಯಾಗಿ ಇಂದ್ರನೇ ಕರಗವಳನಾಗಿ ವರುಣನೇ ಗಳವಿಡಿವನಾಗಿ ಧನದನೇ ಭಂಡಾರಿಗನಾಗಿ ನವಗ್ರಹಂಗಳೇ ಕಂಕಣವಾಗಿ ರಾಹುವೇ ತೊಂಗಲಾಗಿ ಕೇತುವೇ ಸುರಿಗೆಯಾಗಿ ಕುಳಿಕನೇ ಮೊನೆಯಾಗಿ ಚಂದ್ರಾದಿತ್ಯರ್ಕಳೇ ಬೆಂಬಲವಾಗಿ ಮೂವತ್ತುಮೂದೇವರ್ಕ್ಕಳೇ ನೋಟಕ್ಕರಾಗಿ ಕ್ಷಮೆಯೆಂಬ ಬಾಳಂ ಕಿತ್ತು ಕ್ರೋಧ ಶತ್ರುವೆಂಬ ಹಗೆಯಂನಿಱಿದು ಕಾದಿ ಗೆಲ್ದ ಭಟರಿಯ ಮಕ್ಕಳುಂ ಡಮರುಗ ಪಱೆ ನಿರ್ಘೋಷಣರುಮಪ್ಪ ಶ್ರೀಮದೈಯ್ಯಾವಳೆಯ್ಯ

ನೂರ್ವಸ್ವಾಮಿಗಳುಂ ತಮ್ಮೊಳೊಳ್ಳಿದರುಂ ನಿರ್ಮ್ಮಳ ತೇಜರುಂ ತೇಜ ತೇಜೋತ್ತುಂಗರುಂ ಸತ್ಯದಲುಂ ಗಾಂಗೇಯರಂನರುಂ ಚಲದಲುಂ ದುರ್ಯ್ಯೋಧನನಂನರುಂ ದೋರ್ವ್ವಲದಲುಂ ಭೀಮಸೇನನಂನರುಂ ಆನೆಯುನ್ನೆಯಟ್ಟಿ ಕೊಲುವರುಂ ಹಸುವಿನಂತೆ ನಿಂದು ಕೊಲುವರುಂ ಹಾವಿನಂತೆ ಪಿಸದೆ ಕೊಲುವರುಂ ಸಿಂಹದಂತೆ ಸೀದರ್ವ್ವ ಕೊಲುವರುಂ ಬೃಹಸ್ಪತಿಯಂತೆ ಬುದ್ಧಿವಂತರುಂ ನಾರಾಯಣನಂತುಪಾಯ ಕರ್ತ್ತರರುಂ ನಾರದರಿಷಿಯಂತೆ ಕಲಹ ಸಂಪೂರ್ಣ್ನರುಂ ಜಿನ್ದೇಜು ಮಿತ್ರ್ರಗರವರು ಹೋಹ ಮಾರಿಯು ಚಕ್ಲಿವಾಡುವವರುಂ ಬಹ ಮಾರಿಯುನಿದಿಗೊರ್ಳುವರುಂ ಹಟ್ಟಿದರ್ದ್ದ ಹುಲಿಯುಂ ಕೆಣಕುವರುಂ ಹರಿವ ಜೇರ್ನ್ನಿಯು ಕಾಲಂ ಕಾವರುಂ ಕೆಸರಂ ಕಿಚ್ಚಿಡುವರುಂ ಮಣಲ ಸರಪಿಯುಂ ಪೊಸೆವರುಂ ಸಿಡಿಲಂ ಪಿಡಿದು ತೋರ್ಪ್ಪರುಂ ಚಂದ್ರಾದಿತ್ಯರ್ಕಳಂ ನೆಳಕಿಳಿಹುವರು ಈಶ್ವರ ಭಟ್ಟಾರಕನ ನೊಸಲಕಣ್ಣು ಚತುರ್ಭುಜಮುಮಂ ಬ್ರಂಹ್ಮರಟ್ಟಹಾಸಮುಮಂ ಭಗವತಿಗುನ್ಮಧಮುಮಪ್ಪ ತ್ರೈಲೋಕ್ಯ ವಾಕ್ಯವಪನಂಗಳಂ ಸಾಧಿಸುವ ಸಾಧಕನಂತೆ ತ್ರೈಳೋಕ್ಯಮಂ ಸಾಧಿಸುವ ಗುಡ್ಡಶಾಸ್ತ್ರದವಯದ ಲಕ್ಷಣಂಗಳನಱಿದು ನುಡಿವಂ ಗಡ ಪಂದಿಗ್ಗಳಂ ದೆಸೆವಂಸಗಿ ಬಪ್ಪ ವಸುಂಬೆಗಂ ಕಱಿಪರಂದ ಕರ್ತ್ರಗರ ಮುರಿದು ಬಿದರ್ದ್ದ ಪೆಣಕ್ಕಂ ಸೂಱಿವೋದ ಚಂಡಕ್ಕಂ ಎತ್ತಿದ ನೆತ್ತರ ಕೂಱಿಂಗಪಟ್ಟ ಪಾಳಕ್ಕಂ ಪಾಯ್ದ ಬಲಿಗಂ ಮೊಱೆಯೆಂಬ ಶಬ್ದಕ್ಕಂ ಸಮಯ ಧರ್ಮ್ಮಕ್ಕಂ ಕೂಡಿದ ಸಘಾತಕಂ ಮಾಡಿದ ವ್ಯವಸ್ಥೆಗಂ ತಪ್ಪುವರಲ್ಲರು ತೊಂಗಲಿನಂತೆ ಪೊಗೆವನ ತಲೆಯುಂ ಕೊಂಡು ಪಟ್ಟಿಗೆಯುನ್ನೆ ಪಗೆವನ ಹಸ್ತಮಂ ಕಟ್ಟಿ ಮೆಱೆವರುಂ ಪಣವನೊಲ್ಲರು ಪೆಣಕ್ಕೆ ನಲ್ಲರುಂ ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮದಯ್ಯಾವೊಳೆಯುಯಯ್ನೂರ್ವ್ವಸ್ವಾಮಿಗಳುಂ" (ಎಪಿಗ್ರಾಫಿಯಾ ಕರ್ನಾಟಿಕಾ VII ಶಿಕಾರಿಪುರ ೧೧೮ ಬಳ್ಳಿಗಾವೆ, ಕ್ರಿ. ಶ. ೧೦೫೪). ಈ ಮತ್ತು ಇಂಥ ಇತರ ಪ್ರಶಸ್ತಿಗಳಿಂದ ಅಯ್ಯಾವೊಳೆ ಐನೂರ್ವರ ಮೂಲಸ್ಥಳ, ಪ್ರಾಚೀನತೆ. ಶೌರ್ಯ, ವ್ಯಾಪಾರವಿಶೇಷ, ಧಾರ್ಮಿಕಕಾರ್ಯ ಮೊದಲಾದ ಸಂಗತಿಗಳ ಪರಿಚಯವಾಗುತ್ತದೆ.

ಅಯ್ಯಾವೊಳೆ ಐನೂರ್ವರು ವೀರಬಣಂಜುಧರ್ಮದವರೂ ಬಣಂಜುಧರ್ಮ ಚಕ್ರವರ್ತಿಗಳೂ ಆಗಿದ್ದರು. ಆದ್ದರಿಂದಲೇ ಶಾಸನಗಳು ಇವರನ್ನು "ಪಂಚಶತ ವೀರಶಾಸನರು", "ಸಮಯ ಚಕ್ರವರ್ತಿಗಳು" ಎಂದು ಕರೆದಿರುತ್ತವೆ. ಹೀಗೆ ವೀರ ಬಣಂಜುಧರ್ಮದ ಪ್ರತಿಪಾಳಕರಾದ ಅಯ್ಯಾವೊಳೆ ಐನೂರ್ವರು ನಾಡಿನ ವ್ಯಾಪಾರೋದ್ಯಮವನ್ನು ಶ್ರೀಮಂತಗೊಳಿಸಿದರು.

ಈ ವರ್ತಕ ಸಂಘದವರು ಪಾದಮಾರ್ಗ, ಜಲಮಾರ್ಗಗಳ ಮೂಲಕ ಗ್ರಾಮ, ಪಟ್ಟಣಗಳಿಗೆ ಒಬ್ಬೊಬ್ಬರಾಗಿಯೂ ಗುಂಪಾಗಿಯೂ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಸರಕುಗಳನ್ನು ಹಸುಬೆಯಲ್ಲಿ ತುಂಬಿಕೊಂಡು ಎತ್ತು, ಕತ್ತೆ, ಕೋಣ,

ಕುದುರೆ, ಹಾಗೂ ಬಂಡಿಗಳ ಮೂಲಕ ಸಾಗಿಸುತ್ತಿದ್ದರು. ಇನ್ನು ಕೆಲವುಸಲ ಸರಕು ತುಂಬಿದ ಹಸುಬೆಯನ್ನು ಹೆಗಲಮೇಲೆ ಹೊತ್ತುಕೊಂಡೂ ಹೋಗುತ್ತಿದ್ದರು. ಮುತ್ತು-ರತ್ನಗಳಿಂದ ಹಿಡಿದು ಸಂಬಾರ ವಸ್ತುಗಳವರೆಗೆ ಎಲ್ಲ ಬಗೆಯ ಸರಕುಗಳನ್ನು ಸಗಟಾಗಿ ಇಲ್ಲವೆ ಬಿಡಿಯಾಗಿ ಮಾರಾಟಮಾಡುತ್ತಿದ್ದರು,

ಪಾದಮಾರ್ಗದ ಮೂಲಕ ವ್ಯಾಪಾರಕ್ಕೆ ಹೋಗುವಾಗ ಮಾರ್ಗ ಮಧ್ಯದಲ್ಲಿ ದಾರಿಗಳ್ಳರು ದಾಳಿಮಾಡಿ ವರ್ತಕರ ಸರಕು, ಹಣಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದರು. ಇಂಥ ಪ್ರಸಂಗಗಳಲ್ಲಿ ಇವರು ಸ್ವತಃ ವೀರರಾಗಿ ಹೋರಾಡಿದ್ದಾರೆ; ಇನ್ನು ಕೆಲವುಸಲ ಯೋಧಪಡೆಯ ಸಹಾಯ ಪಡೆದಿದ್ದಾರೆ. ವರ್ತಕರ ಈ ಯೋಧರನ್ನು ಶಾಸನಗಳು "ಬಿಲ್ಲಮೂನೂರ್ವರು" ಎಂದು ಹೆಸರಿಸಿವೆ.

ಹೀಗೆ ಅಯ್ಯಾವೊಳೆ ಐನೂರ್ವರು ವರ್ತಕರು ಸ್ವಸ್ಥಳ—ಪರಸ್ಥಳದಲ್ಲಿಯೂ ನಾಡಿನ ಒಳಗೂ ನಾಡಿನ ಹೊರಗೂ ಪಾದಮಾರ್ಗ, ಜಲಮಾರ್ಗಗಳ ಮೂಲಕ ವ್ಯಾಪಾರ ಮಾಡುತ್ತಿದ್ದರು.

ಸಂತೆ, ಪೇಟೆಗಳಲ್ಲಿ ವ್ಯಾಪಾರಮಾಡಿ, ಅಧಿಕಲಾಭ ಪಡೆದರು. ವ್ಯಾಪಾರದಿಂದ ಸಂಗ್ರಹಿಸಿದ ಲಾಭದ ಎಲ್ಲ ಹಣವನ್ನು ಈ ವರ್ತಕರು ಒಂದೆಡೆ ಸಂಚಯಿಸಿ ತಮಗಾಗಿ ಇಟ್ಟುಕೊಳ್ಳಲಿಲ್ಲ. ಬಂದ ಲಾಭದಲ್ಲಿ ಅವಶ್ಯವಿದ್ದಷ್ಟನ್ನು ಮಾತ್ರ ಉಳಿಸಿಕೊಂಡು ಮಿಕ್ಕ ಹಣವನ್ನು ಧಾರ್ಮಿಕ ಕಾರ್ಯಗಳಿಗಾಗಿ ವಿನಿಯೋಗಿಸಿದರು. ಹೀಗೆ ಪ್ರಾಚೀನ ಕರ್ನಾಟಕದ ವರ್ತಕರು ಕೇವಲ ಲೌಕಿಕ ಬದುಕನ್ನು ಮಾತ್ರ ಪ್ರೀತಿಸದೆ ಧಾರ್ಮಿಕ ಬದುಕನ್ನೂ ಬಾಳಿದರು.

'ಅಯ್ಯಾವೊಳೆ ಐನೂರ್ವರು' ವರ್ತಕಸಂಘದ ಸದಸ್ಯರು ವಿವಿಧ ಕಲೆಗಳಲ್ಲಿ ನಿಪುಣರೂ ಕವಿ, ಗಮಕಿ, ವಾದಿ, ವಾಗ್ಮಿಗಳೂ ಆಗಿದ್ದರು. ನುಡಿದಂತೆ ನಡೆಯುವವರಾದ ಇವರು ಲೋಭಗುಣವರ್ಜಿತರಾಗಿದ್ದಂತೆ, ಪರನಾರಿ ಸಹೋದರರೂ ಎನಿಸಿದ್ದರು. ಚಾರಿತ್ರ್ಯ ಪರಂಪರೆಯನ್ನು ಕಾಪಾಡಿಕೊಂಡು ಬಂದ ಈ ವರ್ತಕರಲ್ಲಿ ಸತ್ಯ, ದಾನ, ಛಲ, ಧರ್ಮ, ಧೈರ್ಯ, ಕ್ಷಮಾ ಹಾಗೂ ಗಾಂಭೀರ್ಯಗುಣಗಳು ನೆಲೆಸಿದ್ದವು. ಇದಲ್ಲದೆ ಇವರು ಆಶ್ರಿತಜನಕಲ್ಪವೃಕ್ಷರೂ ಪರೋಪಕಾರ ಚಿಂತಾಮಣಿಗಳೂ ಆಗಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಹೀಗೆ ಗುಣ ಶ್ರೀಮಂತಿಕೆ ಮತ್ತು ವ್ಯಾಪಾರ ಶ್ರೀಮಂತಿಕೆಗಳನ್ನು ಪಡೆದ 'ಅಯ್ಯಾವೊಳೆ ಐನೂರ್ವರು' ವರ್ತಕ ಸಂಘದವರು ಪ್ರಾಚೀನ ಕರ್ನಾಟಕದಲ್ಲಿ ಸಮಾಜವಂದಿತರೂ ರಾಜಪೂಜಿತರೂ ಆಗಿದ್ದರು. ದುಷ್ಟರಿಗೆ ದುಷ್ಟರೂ ಶಿಷ್ಟರಿಗೆ ಶಿಷ್ಟರೂ ಆಗಿದ್ದ ಈ ವರ್ತಕರು ಬಹುಮುಖ ವ್ಯಕ್ತಿತ್ವವುಳ್ಳವರಾಗಿದ್ದರು.

ಸೆಟ್ಟಿ – ಬಣಜಿಂಗ, ಸೆಟ್ಟಿಗುತ್ತ, ನಕರ, ಮುಮ್ಮುರಿದಂಡ, ವಡ್ಡವ್ಯವಹಾರಿ, ಗವರೆ, ಗಾತ್ರಿಗ, ಸೆಟ್ಟಿಕಾರ, ಹಲರು, ಎಳಮೆ, ಸಾಲಿಕೆ ಬಲ್ಲಾಳು, ತೆಲ್ಲಿಗ, ತಂಬುಲಿಗ ಮೊದಲಾದವರು ಪ್ರಾಚೀನಕರ್ನಾಟಕದ ವರ್ತಕ ಪ್ರಕಾರದವರಾಗಿದ್ದಾರೆ. ಈ ವರ್ತಕ ಪ್ರಕಾರದವರು "ಅಯ್ಯಾವೊಳೆ ಐನೂರ್ವರು" ವರ್ತಕ ಸಂಘದ ಸದಸ್ಯರಾಗಿದ್ದುದಕ್ಕೆ ಶಾಸನಾಧಾರಗಳು ಸಿಗುವುದಿಲ್ಲ. ಆದ್ದರಿಂದ "ಅಯ್ಯಾವೊಳೆ ಐನೂರ್ವರು" ವರ್ತಕ ಸಂಘದವರೇ ಬೇರೆ, ಈ ವರ್ತಕ ಪ್ರಕಾರದವರೇ ಬೇರೆ ಎಂದು ನಿರ್ಧರಿಸಿ ಹೇಳಬಹುದಾಗಿದೆ. ಹೀಗೆ ಶಾಸನಗಳ ಮೂಲಕ ಪ್ರಾಚೀನ ಕರ್ನಾಟಕದ "ಅಯ್ಯಾವೊಳೆ ಐನೂರ್ವರು" ವರ್ತಕ ಮಹಾಸಂಘದ ಗತವೈಭವದ ಪರಿಚಯು ನಮಗಾಗುತ್ತದೆ.

ಒಟ್ಟಿನಲ್ಲಿ ಪ್ರಾಚೀನ ದಕ್ಷಿಣಭಾರತದ ವ್ಯಾಪಾರ ಚಟುವಟಿಕೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಕರ್ನಾಟಕದ ಐಹೊಳೆ ಗ್ರಾಮ ಹಾಗೂ "ಅಯ್ಯಾವೊಳೆ ಐನೂರ್ವರು" ವರ್ತಕ ಸಂಘಗಳು ಗಂಗೋತ್ರಿಯೆನಿಸಿದ್ದವು. ನಾಡಿನ ಸಂಸ್ಕೃತಿಯ ಸಂವರ್ಧನ ಕಾರ್ಯದಲ್ಲಿ ಈ ವರ್ತಕಸಂಘ ಹಾಗೂ ಇದರ ಸದಸ್ಯರು ಬಹುವಾಗಿ ಶ್ರಮಿಸಿದ್ದಾರೆ. ಇಂಥ ಶ್ರಮಗಳ ಸಂಗಮದಿಂದ ಕರ್ನಾಟಕ ರೂಪಿತವಾಗಿದೆ. ಈ ಭವ್ಯ ಪರಂಪರೆಯ ಉತ್ತರಾಧಿಕಾರಿಗಳಾದ ನಾವು ನಮ್ಮ ಪ್ರಾಚೀನರು ಹೊತ್ತಿಸಿದ ಈ 'ವ್ಯಾಪಾರ ಜ್ಯೋತಿ' ನಾಡಿನ ತುಂಬ ಇನ್ನೂ ಪ್ರಖರವಾಗಿ ಪ್ರಜ್ವಲಿಸುವಂತೆ ಮಾಡಬೇಕಾಗಿದೆ.

ದಾನ ಭಕ್ತಿಗಳಲ್ಲಿ ನಾನು ಮರೆದಿರಬೇಕು

ಸರ್ವಜ್ಞನ ವಚನಗಳು

ನಾವು ದೇವನ ದೇಟಿನ ಕಾಯಿಗಳು
ಎಲ್ಲ ಒಂದೇ ದೇಟಿನ ಮಾವುಗಳು

ಮಧುರಚೆನ್ನ

ಕರ್ನಾಟಕದಲ್ಲಿ ಉದ್ದಿಮೆ



● ಡಾ. ಎಂ. ಸಿ. ಕೊಡ್ಲಿ

ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಲಾಗಿ ನಮ್ಮ ದೇಶ ಔದ್ಯಮಿಕವಾಗಿ ಕಳೆದ ಎರಡುನೂರು ವರುಷಗಳಿಂದ ತೀರಾ ಹಿಂದುಳಿದಿದೆ. ಆದ್ದರಿಂದ ಜನಸಾಮಾನ್ಯನಿಗೆ ನಮ್ಮ ದೇಶ ಯಾವಾಗಲೂ ಹಿಂದುಳಿದ ದೇಶವಿದ್ದಿರಬಹುದೆಂಬ ಶಂಕೆ ಬರುತ್ತದೆ. ಆದರೆ ನಮ್ಮದೇಶ ಔದ್ಯಮಿಕವಾಗಿ ಮೊದಲು ಬಹಳ ಮುಂದುವರಿದ ದೇಶವಾಗಿತ್ತು. ಬ್ರಿಟಿಶರು ಭಾರತಕ್ಕೆ ಬರುವ ಪೂರ್ವದಲ್ಲಿ ನಮ್ಮ ದೇಶದಲ್ಲಿ ಬಂಗಾರದ ಹೊಗೆ ಹಾಯುತ್ತಿತ್ತೆಂದು ಇತಿಹಾಸಕಾರರು ಹೇಳುತ್ತಾರೆ. ನಮ್ಮ ದೇಶದ ಕೈಗಾರಿಕಾ ರಂಗದಲ್ಲಿ ಉತ್ಪಾದಿಸಿದ ವಸ್ತುಗಳು ವಿದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೊಂದಿದ್ದವು. ಡಾಕ್ಕಾದಲ್ಲಿ ತಯಾರಾದ ಮಸ್ಲಿನಬಟ್ಟೆ ಪಾಶ್ಚಿಮಾತ್ಯರಾಷ್ಟ್ರಗಳಲ್ಲಿಯೂ ಬೇಡಿಕೆಯನ್ನು ಪಡೆದಿತ್ತು. ಬಟ್ಟೆಯಲ್ಲದೆ ಅನೇಕ ಐಷಾರಾಮಿ ವಸ್ತುಗಳ ಉತ್ಪಾದನೆಯನ್ನು ನಮ್ಮ ದೇಶದ ಉದ್ದಿಮೆಗಳು ಉತ್ಪಾದಿಸುತ್ತಿದ್ದವು. ಇಂತಹ ಉದ್ದಿಮೆಗಳು ಹೆಚ್ಚಾಗಿ ಪಟ್ಟಣಗಳಲ್ಲಿ ಇರುತ್ತಿದ್ದವು.

ಬ್ರಿಟಿಶರು ಭಾರತಕ್ಕೆ ಬರುವ ಪೂರ್ವದಲ್ಲಿ ನಮ್ಮ ದೇಶದ ಬಹುತೇಕ ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದರು. ಈ ಗ್ರಾಮಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದವು. ಗ್ರಾಮೀಣ ಪ್ರದೇಶದ ಜನರು ತಮಗೆ ಬೇಕಾದ ವಸ್ತುಗಳನ್ನು ಗ್ರಾಮೀಣ ಪ್ರದೇಶದಲ್ಲಿಯೇ ಉತ್ಪಾದಿಸುತ್ತಿದ್ದರು. ಆಹಾರ ಧಾನ್ಯವನ್ನು ರೈತರು ಬೆಳೆದರೆ ಗ್ರಾಮೀಣಪ್ರದೇಶದ ನೇಕಾರರು ಬಟ್ಟೆನೇಯುತ್ತಿದ್ದರು. ಹಳ್ಳಿಯ ಕುಂಬಾರರು ಗಡಿಗೆಮಡಿಕೆಗಳನ್ನು ತಯಾರಿಸುತ್ತಿದ್ದರು. ಹಳ್ಳಿಯ ಇನ್ನುಳಿದ ಆಯಗಾರರು ಜನರಿಗೆ ಬೇಕಾದ ವಸ್ತುಗಳನ್ನು ತಯಾರಿಸಿ, ರೈತರಿಂದ ಕಾಳುಕಡಿಗಳನ್ನು ಪಡೆಯುತ್ತಿದ್ದರು. ಹೀಗಾಗಿ ಆಗಿನ ಕಾಲದಲ್ಲಿ ಗ್ರಾಮೀಣಪ್ರದೇಶಗಳಲ್ಲಿ ಜನರು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು. ಈಗಿನಂತೆ ಆಗಿನ ಕಾಲದಲ್ಲಿ ರೇಲ್ವೆಗಳಾಗಲಿ, ರೋಡುಗಳಾಗಲಿ ಇಲ್ಲದ್ದರಿಂದ ಗ್ರಾಮೀಣ ಪ್ರದೇಶದ ಜನರು

ಮಳೆಗಾಲದಲ್ಲಿ ಹೊರಗಿನಿಂದ ಯಾವ ವಸ್ತುವನ್ನು ತರಲಿಕ್ಕಾಗಲಿ ಅಥವಾ ಹಳ್ಳಿಯಿಂದ ಬೇರೆ ಕಡೆಗೆ ತಮ್ಮ ವಸ್ತುಗಳನ್ನು ಒಯ್ಯುವದಕ್ಕಾಗಲಿ ಸಾಧ್ಯವಾಗುತ್ತಿದ್ದಿಲ್ಲ. ನೂರಕ್ಕೆ ೯೦ ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದರು. ಕೇವಲ ಶೇಕಡಾ ೧೦ ರಷ್ಟು ಜನರು ಮಾತ್ರ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಆಗಿನ ಪಟ್ಟಣಗಳೆಂದರೆ ಯಾತ್ರಾಕೇಂದ್ರಗಳು ಅಥವಾ ರಾಜಮಹಾರಾಜರ ರಾಜಧಾನಿಗಳಾಗಿದ್ದವು.

ನಮ್ಮ ದೇಶದಲ್ಲಿ ೧೮೫೦ ರ ದಶಕದಲ್ಲಿ ರೇಲ್ವೆಗಳು ಪ್ರಾರಂಭವಾದವು. ೧೮೫೭ ರ ಸಿಪಾಯಿ ಬಂಡಾಯದ ನಂತರ ಬ್ರಿಟಿಷರು ನಮ್ಮ ದೇಶದಲ್ಲಿ ರೇಲ್ವೆಗಳ ವಿಸ್ತರಣಾ ಕಾರ್ಯಕ್ರಮವನ್ನು ಕೈಕೊಂಡರು. ಯಾಕೆಂದರೆ. ರೇಲ್ವೆಗಳ ಮುಖಾಂತರ ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸೈನ್ಯವನ್ನು ಕಳಿಸಲು ಅನುಕೂಲವಾಗುತ್ತಿತ್ತು. ರೇಲ್ವೆಗಳ ನಿರ್ಮಾಣದಿಂದ ಗ್ರಾಮೀಣ ಪ್ರದೇಶದ ಜನರು ಹೊರಜಗತ್ತಿನೊಡನೆ ಸಂಪರ್ಕ ಪಡೆದರು. ಇಂಗ್ಲಂಡದೇಶದಿಂದ ಆಮದು ಮಾಡಿಕೊಂಡ ಬಟ್ಟೆಗಳನ್ನು ಗ್ರಾಮೀಣ ಪ್ರದೇಶದ ಜನರು ಕೊಂಡುಕೊಳ್ಳಹತ್ತಿದರು. ಮೆಂಚೆಸ್ಟರದಲ್ಲಿ ತಯಾರಾದ ಧೋತರಗಳು ಹಳ್ಳಿಯ ನೇಕಾರರು ನೇಯ್ದ ಧೋತರಗಳಿಗಿಂತ ಉತ್ತಮವಾಗಿದ್ದವಲ್ಲದೆ ಬೆಲೆಗಳಲ್ಲಿ ಸೋವಿಯಾಗಿದ್ದವು ಇದರಿಂದಾಗಿ ಹಳ್ಳಿಯ ನೇಕಾರರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳಬೇಕಾಯಿತು.

ಪಟ್ಟಣಗಳಲ್ಲಿ ಉದ್ದಿಮೆಗಳ ಪರಿಸ್ಥಿತಿಯೂ ಹದಗೆಡುತ್ತ ನಡೆಯಿತು. ಬ್ರಿಟಿಶರ ಆಡಳಿತ ನಮ್ಮ ದೇಶದಲ್ಲಿ ಬೇರೂರಿದ ನಂತರ ನಮ್ಮ ರಾಜಮಹಾರಾಜರು ಬ್ರಿಟಿಶರ ಮಾದರಿಯಲ್ಲಿಯೇ ಇರತೊಡಗಿದ್ದರಿಂದ, ನಮ್ಮ ದೇಶದ ಉದ್ದಿಮೆಗಳು ಉತ್ಪಾದಿಸುತ್ತಿದ್ದ ವಸ್ತುಗಳನ್ನು ಬಿಟ್ಟು ಇಂಗ್ಲಂಡದೇಶದಿಂದ ಬರುವ ವಸ್ತುಗಳಿಗೆ ಮಾರುಹೋಗಿದ್ದರಿಂದ ನಮ್ಮ ಉದ್ದಿಮೆಗಳು ಕ್ರಮೇಣ ನಶಿಸಿ ಹೋದವು. ಬ್ರಿಟಿಷರ ಉದ್ದೇಶವೂ ಸಹಿತ ನಮ್ಮಲ್ಲಿಯ ಉದ್ದಿಮೆಗಳನ್ನು ನಾಶಮಾಡಿ ಇಂಗ್ಲಂಡದೇಶದ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಡುವದಾಗಿತ್ತು.

೧೮೫೦ ರ ನಂತರ ನಮ್ಮ ದೇಶದಲ್ಲಿ ಆಧುನಿಕ ಉದ್ದಿಮೆಗಳು ಕಾಣಿಸಿಕೊಳ್ಳತೊಡಗಿದವು. ಬಟ್ಟೆಯ ಗಿರಣಿ. ಜ್ಯೂಟಿನ ಗಿರಣಿ ಮತ್ತು ಕಲ್ಲಿದ್ದಲಿಯ ಗಣಿಗಳು ನಮ್ಮ ದೇಶದಲ್ಲಿ ಪ್ರಾರಂಭವಾದವು. ಅದ್ದರಿಂದ ೧೮೫೦ ರ ದಶಕ ನಮ್ಮ ದೇಶದಲ್ಲಿ ಆಧುನಿಕ ಉದ್ದಿಮೆಗಳ ಯುಗವೆಂದು ನಾವು ಹೇಳಬಹುದು. ಉದ್ದಿಮೆಗಳು ದೇಶದ ಎಲ್ಲ ಭಾಗಗಳಲ್ಲಿ ಸಮನಾಗಿ ಹಂಚಿ ಹೋಗದೆ ಕೆಲವೊಂದು ಭಾಗದಲ್ಲಿ ಮಾತ್ರ ಗುಂಪುಗೊಳ್ಳುತ್ತವೆ.

ಕರ್ನಾಟಕ ರಾಜ್ಯವು ೧೯೫೬ ರ ನವಂಬರದಲ್ಲಿ ಅಸ್ತಿತ್ವಕ್ಕೆ ಬಂದಿತು. ಹಳೆಯ ಮೈಸೂರಿನಜಿಲ್ಲೆಗಳು ಔದ್ಯೋಗಿಕವಾಗಿ ಮುಂದುವರಿದ ಪ್ರದೇಶಗಳಾಗಿದ್ದವು.

ಹೈದರಾಬಾದ ಕರ್ನಾಟಕದ ಜಿಲ್ಲೆಗಳಾದ ಬೀದರ, ಗುಲ್ಬರ್ಗಾ ಮತ್ತು ರಾಯಚೂರ ತೀರ ಹಿಂದುಳಿದ ಪ್ರದೇಶಗಳಾಗಿದ್ದವು. ಮುಂಬೈ ಕರ್ನಾಟಕದ ಜಿಲ್ಲೆಗಳಾದ ಧಾರವಾಡ, ಬೆಳಗಾಂವಿ, ಕಾರವಾರ ಮತ್ತು ಬಿಜಾಪೂರ ಮಧ್ಯಮ ವರ್ಗಕ್ಕೆ ಸೇರಿದ ಜಿಲ್ಲೆಗಳಾಗಿದ್ದವೆಂದು ನಾವು ಹೇಳಬಹುದು. ಆದ್ದರಿಂದ ಕರ್ನಾಟಕರಾಜ್ಯವು ಅಸ್ತಿತ್ವಕ್ಕೆ ಬಂದಾಗಿನಿಂದ ಪ್ರಾಂತೀಯ ಅಸಮಾನತೆಗಳು ಮುಂದುವರಿಯುತ್ತ ಬಂದಿವೆ. ಹಳೆಯ ಮೈಸೂರಿನ ೧೦ ಜಿಲ್ಲೆಗಳಲ್ಲಿ ಮತ್ತು ಹೊಸ ಮೈಸೂರಿನ ೯ ಜಿಲ್ಲೆಗಳಲ್ಲಿ ಔದ್ಯಮಿಕ ಅಂತರ ಹೆಚ್ಚುತ್ತ ಬಂದಿದೆ. ಹಳೆಯ ಮೈಸೂರಿನ ಎಲ್ಲ ಜಿಲ್ಲೆಗಳೂ ಔದ್ಯಮಿಕವಾಗಿ ಒಂದೇ ಮಟ್ಟಕ್ಕೆ ಇರಲಿಲ್ಲ. ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳು ಹಳೆಯಮೈಸೂರಿನ ಭಾಗದ ಶೇಕಡಾ ೭೭ ರಷ್ಟು ಉದ್ದಿಮೆ ಗಳನ್ನು ೧೯೫೬ ರಲ್ಲಿ ಹೊಂದಿದ್ದವು. ಹಳೆಯ ಮೈಸೂರಿನ ಉಳಿದ ಎಂಟು ಜಿಲ್ಲೆ ಗಳು ಕೇವಲ ಶೇಕಡಾ ೨೩ ರಷ್ಟು ಉದ್ದಿಮೆಗಳನ್ನು ಹೊಂದಿದ್ದವು. ಹೊಸ ಮೈಸೂರಿನ ಭಾಗದಲ್ಲಿಯೂ ಈ ರೀತಿಯ ವ್ಯತ್ಯಾಸ ೧೯೫೬ ರಲ್ಲಿ ಇತ್ತು. ದಕ್ಷಿಣ ಕನ್ನಡ ಮತ್ತು ಬೆಳಗಾಂವಜಿಲ್ಲೆಗಳು ಹೊಸ ಮೈಸೂರಿನ ಭಾಗದ ಶೇಕಡಾ ೬೬ ರಷ್ಟು ಉದ್ದಿಮೆಗಳನ್ನು ಹೊಂದಿದ್ದವು. ಉಳಿದ ಏಳು ಜಿಲ್ಲೆಗಳು ಶೇಕಡಾ ೩೪ ರಷ್ಟು ಉದ್ದಿಮೆಗಳನ್ನು ಹೊಂದಿದ್ದವು. ೧೯೫೬ ರಲ್ಲಿ ಹಳೆಯ ಮತ್ತು ಹೊಸ ಮೈಸೂರಿನ ಭಾಗಗಳಲ್ಲಿ ಒಟ್ಟು ೧೬೪೦ ಫ್ಯಾಕ್ಟರಿಗಳಿದ್ದವು. ಅವುಗಳಲ್ಲಿ ಕೆಲಸ ಮಾಡುವ ಒಟ್ಟು ಕೂಲಿಕಾರರ ಸಂಖ್ಯೆ ೧೭೨೦೦೦ ಇತ್ತು. ಹಳೆಯ ಮೈಸೂರಿನ ಭಾಗದಲ್ಲಿ ೯೪೫ ಫ್ಯಾಕ್ಟರಿಗಳು ಹಾಗೂ ೧೧೮೮೬೦ ಕೆಲಸಗಾರರು ಇದ್ದರೆ, ಹೊಸ ಮೈಸೂರಿನಲ್ಲಿ ೬೯೦ ಫ್ಯಾಕ್ಟರಿಗಳು ಮತ್ತು ೫೩೨೩೮ ಕೆಲಸಗಾರರು ಇದ್ದರು. ಆದ್ದರಿಂದ ೧೯೫೬ ರಲ್ಲಿ ಹಳೆಯ ಮತ್ತು ಹೊಸ ಮೈಸೂರಿನ ಭಾಗಗಳು ಔದ್ಯಮಿಕವಾಗಿ ಬಹಳ ಅಂತರ ದಲ್ಲಿದ್ದವೆಂಬುದು ನಮಗೆ ಇದರಿಂದ ತಿಳಿಯುತ್ತದೆ.

ಕರ್ನಾಟಕದ ೧೯ ಜಿಲ್ಲೆಗಳು ಈಗ ಔದ್ಯಮಿಕವಾಗಿ ಕೆಳಗಿನಂತೆ ಸ್ಥಾನಗಳನ್ನು ಪಡೆದಿವೆ:—

ಜಿಲ್ಲೆಯ ಹೆಸರು	ಸ್ಥಾನ
ಬೆಂಗಳೂರು	೧
ಬೆಳಗಾಂವ	೨
ದಕ್ಷಿಣ ಕನ್ನಡ	೩
ಧಾರವಾಡ	೪
ಮೈಸೂರು	೫
ಬಿಜಾಪೂರ	೬
ರಾಯಚೂರ	೭

ಜಿಲ್ಲೆಯ ಹೆಸರು	ಸ್ಥಾನ
ಶಿವಮೊಗ್ಗಾ	೮
ಬಳ್ಳಾರಿ	೯
ಚಿತ್ರದುರ್ಗ	೧೦
ಗುಲಬುರ್ಗಾ	೧೧
ಉತ್ತರ ಕನ್ನಡ	೧೨
ಹಾಸನ	೧೩
ಕೋಲಾರ	೧೪
ಮಂಡ್ಯ	೧೫
ಚಿಕ್ಕಮಗಳೂರು	೧೬
ತುಮಕೂರು	೧೭
ಕೊಡಗು	೧೮
ಬೀದರ	೧೯

ಕರ್ನಾಟಕರಾಜ್ಯದಲ್ಲಿಯ ಚಿಕ್ಕ ಉದ್ದಿಮೆಗಳನ್ನು ತೆಗೆದುಕೊಂಡರೆ, ಆ ಉದ್ದಿಮೆಗಳೂ ಸಹಿತ ಎಲ್ಲ ಜಿಲ್ಲೆಗಳಲ್ಲಿ ಸರಿಯಾಗಿ ಹಂಚಿಹೋಗಿಲ್ಲ. ಕರ್ನಾಟಕ ಸರಕಾರವು ಎಲ್ಲ ಜಿಲ್ಲೆಗಳಲ್ಲಿಯೂ ಚಿಕ್ಕ ಉದ್ದಿಮೆಗಳು ಪ್ರಾರಂಭವಾಗಲೆಂಬ ಉದ್ದೇಶದಿಂದ ಅನೇಕ ಅನುಕೂಲತೆಗಳನ್ನು ಮಾಡಿಕೊಟ್ಟರೂ ಈ ಉದ್ದಿಮೆಗಳು ಕೇವಲ ಕೆಲವೊಂದು ಜಿಲ್ಲೆಗಳಲ್ಲಿ ಮಾತ್ರ ಗುಂಪುಗಟ್ಟಿವೆ. ನಮ್ಮ ರಾಜ್ಯದಲ್ಲಿಯ ಚಿಕ್ಕ ಉದ್ದಿಮೆಗಳ ಶೇಕಡಾ ೩೫ ರಷ್ಟು ಫ್ಯಾಕ್ಟರಿಗಳು ಬೆಂಗಳೂರಿನಲ್ಲಿಯೇ ಇವೆ. ಬೀದರ ಜಿಲ್ಲೆ ಶೇಕಡಾ ೧.೫ ಕ್ಕಿಂತಲೂ ಕಡಿಮೆ ಫ್ಯಾಕ್ಟರಿಗಳನ್ನು ಹೊಂದಿದೆ. ಧಾರವಾಡ ಜಿಲ್ಲೆ ಶೇಕಡಾ ೭.೫ ರಷ್ಟು ಫ್ಯಾಕ್ಟರಿಗಳನ್ನು ಹೊಂದಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳು ಹಳೆಯ ಮೈಸೂರಿನ ಜಿಲ್ಲೆಗಳಿಗೆ ಹೋಲಿಸಲಾಗಿ ಔದ್ಯಮಿಕವಾಗಿ ಹಿಂದುಳಿದಿವೆ. ಯಾವದೇ ಪ್ರದೇಶದ ಜನರು ಆರ್ಥಿಕವಾಗಿ ಮುಂದುವರೆಯಬೇಕಾದರೆ ಆ ಪ್ರದೇಶದ ಔದ್ಯಮೀಕರಣ ಅವಶ್ಯ. ಹೆಚ್ಚು ಹೆಚ್ಚು ಜನರು ಪ್ರಾಥಮಿಕ ರಂಗವಾದ ಬೇಸಾಯವನ್ನು ಬಿಟ್ಟು ಉದ್ದಿಮೆ ಮತ್ತು ವ್ಯಾಪಾರಿ ರಂಗಗಳಿಗೆ ಹೋದಾಗ ಮಾತ್ರ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಅವರು ಮುಂದುವರಿಯುತ್ತಾರೆ.

ಉತ್ತರ ಕರ್ನಾಟಕದಲ್ಲಿ, ಅದರಲ್ಲಿಯೂ ಧಾರವಾಡ, ಬೆಳಗಾಂವ ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ ಲಿಂಗಾಯತ ಸಮಾಜ ಪ್ರಾಮುಖ್ಯವಾಗಿದೆ. ಈ ಸಮಾಜದ ಜನರು ಹೆಚ್ಚಾಗಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರು. ಇತ್ತಿತ್ತಲಾಗಿ

ಕಳೆದ ೪೦ ವರುಷಗಳಿಂದ ಈ ಸಮಾಜದ ಜನರು ವಿದ್ಯಾರಂಗದಲ್ಲಿ ಪ್ರವೇಶಿಸಿ ಪ್ರಗತಿಯನ್ನು ಸಾಧಿಸಿದ್ದಾರೆ. ಲಿಂಗಾಯತ ಸಮಾಜದ ಕೆಲವೊಂದು ಪಂಗಡದ ಜನರು ವ್ಯಾಪಾರದಲ್ಲಿ ತಲೆ ತಲಾಂತರದಿಂದ ಮುಂದುವರಿಯುತ್ತಾ ಬಂದಿದ್ದಾರೆ. ವ್ಯಾಪಾರದಲ್ಲಿ ತೊಡಗಿದ ಜನರು ಸಹಜವಾಗಿ ಶ್ರೀಮಂತರಾಗುತ್ತಾರೆ. ಹೀಗೆ ಲಿಂಗಾಯತ ಸಮಾಜದಲ್ಲಿ ಸಾಕಷ್ಟು ಶ್ರೀಮಂತ ಜನರಿದ್ದು ಅವರು ಹೆಚ್ಚಾಗಿ ವ್ಯಾಪಾರಿ ಮನೋವೃತ್ತಿಯನ್ನು ಹೊಂದಿದವರಾಗಿದ್ದಾರೆ. ವಸ್ತುಗಳನ್ನು ಒಂದು ಭಾಗದಿಂದ ಕೊಂಡು ಮತ್ತೊಂದು ಭಾಗದಲ್ಲಿ ಮಾರಿ ಅದರಿಂದ ಬರುವ ಲಾಭದಿಂದ ಅವರು ತೃಪ್ತರಾಗಿದ್ದಾರೆ. ಇಂಥಹ ದೊಡ್ಡ ವ್ಯಾಪಾರಿ ಜನರಲ್ಲಿ ಬಂಡವಾಳವಿದ್ದು ಈ ಬಂಡವಾಳವನ್ನು ಉಪಯೋಗಿಸಿ ಉದ್ದಿಮೆಗಳನ್ನು ಪ್ರಾರಂಭಿಸಲು ಅವರು ಮುಂದೆ ಬರಬೇಕಾದರೆ ಜನರಿಗೆ ಸಾಹಸಿ ಮನೋವೃತ್ತಿ ಬೇಕು. ಯಾವ ಬೆಲೆಗೆ ಮಾರಬೇಕು, ಎಲ್ಲಿ ಮಾರಬೇಕೆಂಬ ನಿರ್ಧಾರ ಕೈಕೊಳ್ಳಲು ಅವರಿಗೆ ಮನೋಧೈರ್ಯ ಬೇಕು,

ಸುಶಿಕ್ಷಿತ ಯುವಕರಲ್ಲಿ ಸಾಹಸಿ ಪ್ರವೃತ್ತಿಯನ್ನು ಮೂಡಿಸಿ ಅವರು ಉದ್ದಿಮೆಗಳನ್ನು ಪ್ರಾರಂಭಿಸಲು ಅನುಕೂಲವಾಗುವಂತಹ ಶಿಕ್ಷಣ ನೀಡುವ ಸಂಘ ಸಂಸ್ಥೆಗಳು ಈಗ ಎಲ್ಲ ಭಾಗಗಳಲ್ಲಿಯೂ ಕಾಣಿಸಿಕೊಳ್ಳತೊಡಗಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯ ಕೌಸಾಳಿ ವ್ಯಾಪಾರಿ ನಿರ್ವಹಣಾ ಸಂಸ್ಥೆ ಇಂತಹ ಶಿಕ್ಷಣವನ್ನು ನೀಡುವ ಸಂಸ್ಥೆಗಳಲ್ಲಿ, ಈ ಭಾಗದಲ್ಲಿ ಪ್ರಮುಖವಾದದ್ದು. ಸುಶಿಕ್ಷಿತ ಯುವಕರು ಮುಂದೆಬಂದು ಹೆಚ್ಚು ಹೆಚ್ಚು ಉದ್ದಿಮೆಗಳನ್ನು ಪ್ರಾರಂಭಿಸಿದಾಗ ಮಾತ್ರ ಆ ಭಾಗದ ಆರ್ಥಿಕ ಅಭಿವೃದ್ಧಿ ಸಾಧ್ಯ.

ಅಲ್ಲ ಎನಿಸಿಕೊಂಬುದಕ್ಕಿಂದ
ಆ ಕ್ಷಣವೆ ಸಾವುದು ಲೇಸು

ಮಹಾದೇವಿಯಕ್ಕನ ವಚನ

ಹಾಕುವುದು ಸಾಧುವೇಷ, ಸಾಕುವುದು ಹಲವು ದೋಷ

ಪುರಂದರದಾಸರು

ಕರ್ನಾಟಕದಲ್ಲಿ ಔದ್ಯೋಗಿಕ ಬೆಳವಣಿಗೆ



● ಪ್ರೊ. ಎಂ. ಸಿ. ಹಿಪ್ಪರಗಿ

ಭಾರತದ ಅರ್ಥವ್ಯವಸ್ಥೆಯಲ್ಲಿ ಒಕ್ಕಲುತನವು ಹೆಚ್ಚಿನ ಸ್ಥಾನವನ್ನು ಪಡೆದಿರುತ್ತದೆ. ಕೈಗಾರಿಕೆಗಳು ತಮ್ಮ ಅಭಿವೃದ್ಧಿಗಾಗಿ ಹತ್ತಿ, ಸಣಬು, ಕಬ್ಬು, ಶೇಂಗಾ, ಕುಸುಬಿ ಮೊದಲಾದ ಕಚ್ಚಾ ಸರಕುಗಳಿಗಾಗಿ ಒಕ್ಕಲುತನವನ್ನೇ ಅವಲಂಬಿಸಬೇಕಾಗುತ್ತದೆ. ಒಕ್ಕಲುತನವು ಅಭಿವೃದ್ಧಿಗೊಂಡು ಹೆಚ್ಚು ಹೆಚ್ಚು ಕಚ್ಚಾ ಸರಕುಗಳನ್ನು ಒದಗಿಸಿದರೆ ಕೈಗಾರಿಕೆಯೂ ಬೆಳೆಯಲು ಸಾಧ್ಯವಾಗುತ್ತದೆ.

ಕೈಗಾರಿಕೆಗಳೂ ಸಹ ತಾವು ಉತ್ಪಾದಿಸಿದ ಸರಕುಗಳ ಮಾರಾಟಕ್ಕಾಗಿ ಒಕ್ಕಲುತನವನ್ನೇ ಅವಲಂಬಿಸಬೇಕಾಗಿದೆ. ರಾಸಾಯನಿಕ ಗೊಬ್ಬರ, ಪಂಪಸೆಟ್‌ಗಳು, ಟ್ರ್ಯಾಕ್ಟರುಗಳು, ಕ್ರಿಮಿನಾಶಕ ಔಷಧಿಗಳು ಇವೆಲ್ಲವುಗಳೂ ಕೈಗಾರಿಕಾ ಉತ್ಪನ್ನಗಳೇ ಆಗಿರುತ್ತವೆ. ಈ ಪ್ರಕಾರ ಒಕ್ಕಲುತನ ಮತ್ತು ಕೈಗಾರಿಕೆಗಳು ಪರಸ್ಪರ ಸಂಬಂಧವನ್ನು ಪಡೆದಿರುತ್ತವೆ.

ಕೃಷಿಗಿಂತ ವಾಣಿಜ್ಯ ಮತ್ತು ಉದ್ದಿಮೆಗಳು ಹೆಚ್ಚು ಲಾಭದಾಯಕವಾಗಿ ಕಂಡುಬಂದಿವೆ. ಕೃಷಿ ಪ್ರಧಾನವಾದ ದೇಶವು ಹೆಚ್ಚು ಮುಂದುವರೆಯಲಾರದು. ಇದನ್ನು "ಕಾಲಿನ್ ಕ್ಲಾರ್ಕ"ನು ಸೈದ್ಧಾಂತಿಕವಾಗಿ ಸ್ಪಷ್ಟಪಡಿಸಿದ್ದಾನೆ. ಪಾಶ್ಚಿಮಾತ್ಯ ರಾಷ್ಟ್ರಗಳ ಆರ್ಥಿಕ ಪ್ರಗತಿಯೂ ಉದ್ದಿಮೆಗಳಿಂದಲೇ ಎಂಬುದು ಕಂಡುಬಂದಿರುವದು. ಅನಭಿವೃದ್ಧಿ ದೇಶಗಳ ಆರ್ಥಿಕ ಪ್ರಗತಿಯು ಆಗದೇ ಇರಲು ಕಾರಣವೆಂದರೆ ಅಂತಹ ದೇಶಗಳು ಕೃಷಿ ಪ್ರಧಾನವಾಗಿರುತ್ತವೆ.

ಕೃಷಿಯಲ್ಲಿ ಲಾಭಾಂಶವು ಕಡಿಮೆಯಾಗಿರುತ್ತದೆ ಮತ್ತು ಬರುವ ಉತ್ಪನ್ನವು ಅನಿಶ್ಚಿತವಾಗಿರುತ್ತದೆ. ಮಳೆ ಮತ್ತು ಹವಾಮಾನದ ಮೇಲೆಯೇ ಒಕ್ಕಲುತನವು ಅವಲಂಬಿಸಿರುವದು. ಕೃಷಿ ಸರಕುಗಳ ಧಾರಣೆಗಳು ಮೇಲಿಂದ ಮೇಲೆ ಏರಿಳಿತಗಳನ್ನು ಹೊಂದಿವೆ. ಕೃಷಿಯಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಸಾಧ್ಯ

ಏರುವದಿಲ್ಲ. ಇದರಿಂದ ಕೃಷಿ ಪ್ರಧಾನ ಸಮಾಜದಲ್ಲಿ ನಿರುದ್ಯೋಗವು ಹೆಚ್ಚಿ ತಲಾ ಆದಾಯವು ಕಡಿಮೆಯಾಗುತ್ತದೆ.

ಉದ್ದಿಮೆಯಲ್ಲಿ ಆದಾಯವು ಹೆಚ್ಚು. ಆದಾಯದ ಅನಿಶ್ಚಿತತೆಯೂ ಇಲ್ಲಿ ಕಡಿಮೆ. ಅಂದರೆ ನಿಶ್ಚಿತ ಆದಾಯ ಬರುತ್ತದೆ. ಉದ್ದಿಮೆಯ ಬೆಳವಣಿಗೆಯಿಂದ ಕೃಷಿಯ ಮೇಲಿನ ಜನಸಂಖ್ಯೆಯ ಒತ್ತಡವು ಕಡಿಮೆಯಾಗುವದು ಮತ್ತು ನಿರುದ್ಯೋಗ ಸಮಸ್ಯೆಯೂ ಕಡಿಮೆಯಾಗುವದು,

ಆದುದರಿಂದ ಸಾಂಪ್ರದಾಯಿಕ ಒಕ್ಕಲುತನವನ್ನು ಅವಲಂಬಿಸದೇ ಉದ್ದಿಮೆ ಕ್ಷೇತ್ರದಲ್ಲಿ ನಾವು ಪ್ರವೇಶಿಸಬೇಕು. ಅದರಿಂದ ರಾಷ್ಟ್ರದ ಸಮತೋಲವಾದ ಅಭಿವೃದ್ಧಿಯಾಗಲು ಸಹಾಯಕವಾಗುತ್ತದೆ.

ಕರ್ನಾಟಕದಲ್ಲಿ ಉದ್ದಿಮೆಗಳು :

ಮಹಾತ್ಮಾ ಗಾಂಧೀಜಿಯವರ ವಿಚಾರಧಾರೆಯ ಮೇರೆಗೆ ಭಾಷಾವಾರು ಪ್ರಾಂತರಚನೆಯ ಅಡಿಯಲ್ಲಿ ಮೈಸೂರುರಾಜ್ಯವು ೧೯೫೬ ನವ್ಹಂಬರ ೧ ರಂದು ಜನ್ಮತಾಳಿತು. ಮುಂದೆ ೧೯೭೩ ನವ್ಹಂಬರ ೧ ರಂದು ಮೈಸೂರುರಾಜ್ಯವು "ಕರ್ನಾಟಕ ರಾಜ್ಯ"ವೆಂದು ನಾಮಕರಣ ಪಡೆಯಿತು. ಈ ರಾಜ್ಯವು ೧೯ ಜಿಲ್ಲೆಗಳನ್ನು ಪಡೆದಿರುತ್ತದೆ. ಕರ್ನಾಟಕರಾಜ್ಯದ ಉತ್ತರಕ್ಕೆ ಮಹಾರಾಷ್ಟ್ರ, ದಕ್ಷಿಣಕ್ಕೆ ತಮಿಳು ನಾಡು ಹಾಗೂ ಕೇರಳರಾಜ್ಯಗಳು, ಪೂರ್ವಕ್ಕೆ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳು ಇರುವುದಲ್ಲದೇ ಪಶ್ಚಿಮದಲ್ಲಿ ಅರಬ್ಬೀ ಸಮುದ್ರವಿರುವದುಂಟು.

ಕರ್ನಾಟಕ ರಾಜ್ಯವು ೧,೯೧,೭೭೩ ಚದುರು ಕಿಲೋಮೀಟರ್ ಪ್ರದೇಶವನ್ನು ವ್ಯಾಪಿಸಿಕೊಂಡಿರುತ್ತದೆ. ೧೯೮೧ ರ ಜನಗಣತಿಯ ಮೇರೆಗೆ ಕರ್ನಾಟಕದಲ್ಲಿ ೮,೭೦,೪೩,೪೫೧ ಜನಸಂಖ್ಯೆಯು ಇದ್ದು ಅದರಲ್ಲಿ ಧಾರವಾಡ ಜಿಲ್ಲೆಯಲ್ಲಿ ೨೯, ೩೯, ೯೮೮ ಜನಸಂಖ್ಯೆಯು ಇದ್ದಿತು. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ೪ ಕೋಟಿ ಜನಸಂಖ್ಯೆಯು ಇರಬಹುದೆಂದೂ ಮತ್ತು ಧಾರವಾಡಜಿಲ್ಲೆಯಲ್ಲಿ ಸುಮಾರು ೩೨ ಲಕ್ಷ ಜನಸಂಖ್ಯೆ ಇರಬಹುದೆಂದೂ ಅಂದಾಜು ಮಾಡಲಾಗಿದೆ.

ಕರ್ನಾಟಕದಲ್ಲಿ ನಿಸರ್ಗಸಂಪತ್ತು ಹೇರಳವಾಗಿವೆ. ಅರಣ್ಯ, ರೇಷ್ಮೆಉದ್ದಿಮೆ, ತೋಟಗಾರಿಕೆ, ಅದಿರು ಮತ್ತು ಖಣಿಗಳು, ವಿದ್ಯುತ್ ಉತ್ಪಾದನೆಗಾಗಿ ಜಲಾಶಯ ಮತ್ತು ಜಲಪಾತಗಳು ಹೇರಳವಾಗಿ ಇರುತ್ತವೆ.

ಕಬ್ಬಿಣ ಮತ್ತು ಉಕ್ಕು ಕಾರಖಾನೆಗಳು, ಸಿಮೆಂಟ್ ಕಾರಖಾನೆಗಳು, ಸಕ್ಕರೆಯ ಕಾರಖಾನೆಗಳು, ಕಾಗದದ ಕಾರಖಾನೆಗಳು ಮುಂತಾದವುಗಳು ಸಮರ್ಪಕವಾಗಿ ಕೆಲಸ ವನ್ನು ಮಾಡುತ್ತಿವೆ. ಕಾಗದದ ಕಾರಖಾನೆಗಳು ಭದ್ರಾವತಿ ಮತ್ತು ದಾಂಡೇಲಿ ಗಳಲ್ಲಿ ಸ್ಥಾಪನೆಗೊಂಡು ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಂಡಿವೆ.

ಬಂಗಾರದ ಗಣಿಗಳು ರಾಯಚೂರು ಜಿಲ್ಲೆಯ ಹಟ್ಟಿ ಮತ್ತು ಕೋಲಾರದಲ್ಲಿ ಇದ್ದು ಉತ್ಪಾದನೆಯಲ್ಲಿ ನಿರತವಾಗಿವೆ.

ಗುಲಬುರ್ಗಾದ ನೆರೆಯಲ್ಲಿರುವ ವಾಡಿ, ಶಹಾಬಾದಗಳಲ್ಲಿ ಮತ್ತು ಬಿಜಾಪುರ ಜಿಲ್ಲೆಯಲ್ಲಿಯ ಬಾಗಲಕೋಟಿ ಮುಂತಾದೆಡೆಗಳಲ್ಲಿ ಸಿಮೆಂಟ್ ಫ್ಯಾಕ್ಟರಿಗಳು ತಲೆಯೆತ್ತಿ ನಿಂತಿವೆ. ಗುಲಬರ್ಗಾ, ಬೆಳಗಾಂವ, ಬಿಜಾಪುರ, ಚಿತ್ರದುರ್ಗ ಮುಂತಾದ ಭಾಗಗಳಲ್ಲಿ ಸಿಮೆಂಟ್ ಕಾರಖಾನೆಯನ್ನು ಸ್ಥಾಪಿಸಲು ಕಚ್ಚಾವಸ್ತು ಸಾಕಷ್ಟು ಲಭ್ಯವಿರುತ್ತದೆ.

ಬೆಳಗಾಂವ ಜಿಲ್ಲೆಯ ಅನೇಕ ಭಾಗಗಳಲ್ಲಿ ಅಂದರೆ ಮುಗುಟಖಾನ ಹುಬ್ಬಳ್ಳಿ, ಸಂಕೇಶ್ವರ, ಗೋಕಾಕ, ರಾಯಬಾಗ, ನಿಪ್ಪಾಣಿ, ಚಿಕ್ಕೋಡಿ ಮುಂತಾದೆಡೆಯಲ್ಲಿ ಸಕ್ಕರೆಯ ಕಾರಖಾನೆಗಳು ಸಹಕಾರಿ ತತ್ವದ ಮೇಲೆ ಕಾರ್ಯವನ್ನು ನಿರ್ವಹಿಸುತ್ತಿವೆ. ಆದರೆ ಉಗಾರದಲ್ಲಿರುವ ಸಕ್ಕರೆ ಕಾರಖಾನೆಯು ಮಾತ್ರ ಖಾಸಗಿ ನಿಯಂತ್ರಣವನ್ನು ಹೊಂದಿದೆ. 'ಮಾರ್ಕಂಡೇಯ ಸಹಕಾರಿ ಸಕ್ಕರೆಯ ಕಾರಖಾನೆ' ಯು ಬೆಳಗಾಂವಿಯಲ್ಲಿ ಇಷ್ಟರಲ್ಲಿಯೇ ಅಸ್ತಿತ್ವಕ್ಕೆ ಬರಲಿದೆ. ಸುಮಾರು ರೂ. ೨೫ ಕೋಟಿ ವೆಚ್ಚದಲ್ಲಿ ಈ ಕಾರಖಾನೆಯು ನಿರ್ಮಾಣಗೊಳ್ಳಲಿದೆ. ಪ್ರತಿದಿನ ೨೫೦೦ ಟನ್ ಕಬ್ಬನ್ನು ಅರಿಯುವ ಸಾಮರ್ಥ್ಯವನ್ನು ಈ ಕಾರಖಾನೆಯು ಹೊಂದಿದೆ. ಇಷ್ಟರಲ್ಲಿಯೇ ಅಥಣಿ, ಖಾನಾಪುರಗಳಲ್ಲಿ ಸಹಕಾರಿ ರಂಗದ ಆಡಳಿತದಲ್ಲಿ ಸಕ್ಕರೆ ಕಾರಖಾನೆಗಳು ಪ್ರಾರಂಭವಾಗಲಿವೆ. ಇವುಗಳಲ್ಲದೆ ರಾಜ್ಯದ ಮಂಡ್ಯ ಮುಂತಾದವುಗಳಲ್ಲಿ ಸಕ್ಕರೆಯ ಕಾರಖಾನೆಗಳು ಕಾರ್ಯವನ್ನು ನಿರ್ವಹಿಸುತ್ತಲಿವೆ.

ಚಿಕ್ಕ ಉದ್ದಿಮೆಗಳಲ್ಲಿ ಕೈಮಗ್ಗ, ತೆಂಗಿನನಾರಿನ ಉದ್ದಿಮೆ, ಕುಂಬಾರಿಕೆ, ಕಮ್ಮಾರಿಕೆ, ಅಕ್ಕಸಾಲಿಕೆ, ಬಡಿಗತನ ಮುಂತಾದವುಗಳು ಅನೇಕ ಶತಮಾನಗಳಿಂದ ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತ ನಡೆಯುತ್ತಿವೆ.

ದೊಡ್ಡ ಉದ್ದಿಮೆಗಳಾದ "ಹಿಂದುಸ್ತಾನ ಏರ್‌ಕ್ರಾಫ್ಟ ಲಿಮಿಟೆಡ್", "ಹಿಂದುಸ್ತಾನ ಮಶಿನ್ ಟೂಲ್ಸ ಲಿಮಿಟೆಡ್", "ಮೈಕೋ ಲಿಮಿಟೆಡ್", "ಭಾರತ ಇಲೆಕ್ಟ್ರಾನಿಕ್ ಲಿಮಿಟೆಡ್", "ಬಿ. ಇ. ಎಲ್", "ಬಿ. ಇ. ಎಂ. ಎಲ್" ಮುಂತಾದವುಗಳು ೧೯೫೦ ರ ಸುಮಾರಿಗೆ ಸಾರ್ವಜನಿಕ ವಲಯದಲ್ಲಿ ಸ್ಥಾಪಿಸಲ್ಪಟ್ಟವು.

ಕೇಂದ್ರ ಸರ್ಕಾರದ ಅಧ್ಯಯನದ ಮೇರೆಗೆ ರಾಯಚೂರುಜಿಲ್ಲೆಯ ಕಲ್ಲೂರಿನಲ್ಲಿ ತಾಮ್ರದ ಅದಿರು ಹೇರಳವಾಗಿ ಇರುವದು ಕಂಡುಬಂದಿರುತ್ತದೆ. ಗುಲಬರ್ಗಾ ಜಿಲ್ಲೆಯ ತಿಂಥಿಣಿಯಲ್ಲಿ ತಾಮ್ರದ ನಿಕ್ಷೇಪವಿದ್ದು ಅಲ್ಲಿ ತಾಮ್ರಉತ್ಪಾದನೆಯ ಉದ್ದಿಮೆ ಸ್ಥಾಪಿಸಲು ಸನ್ನಾಹ ನಡೆದಿವೆ.

ಕರ್ನಾಟಕ ಸರಕಾರದಿಂದ ಪ್ರೋತ್ಸಾಹ :

ಕರ್ನಾಟಕ ರಾಜ್ಯಸರ್ಕಾರವು ಬೇರೆ ಬೇರೆ ತೆರನಾದ ಉದ್ದಿಮೆಗಳಿಗೆ ಪ್ರೋತ್ಸಾಹವನ್ನು ಕೊಡುತ್ತಿದೆ ಮತ್ತು ಖಾಸಗಿ ಉದ್ಯಮ ವಲಯಕ್ಕೆ ಪ್ರೋತ್ಸಾಹವನ್ನು ಮುಂದುವರೆಸುತ್ತಿದೆ. "ಕರ್ನಾಟಕ ಸ್ಟೇಟ್ ಫಾಯನಾನ್ಸ ಕಾರ್ಪೋರೇಶನ್", ಹಣಕಾಸಿನ ಸೌಲಭ್ಯವನ್ನು ದೊಡ್ಡ ಮತ್ತು ಮಧ್ಯಮವರ್ತಿ ಉದ್ದಿಮೆಗಳಿಗೆ ಒದಗಿಸುತ್ತಿದೆ.

ಗ್ರಾಮೀಣ ಮತ್ತು ಚಿಕ್ಕ ಉದ್ದಿಮೆಗಳಿಗೆ ಇತ್ತೀಚಿನ ಪಂಚವಾರ್ಷಿಕ ಯೋಜನೆಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ರಾಜ್ಯದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತಿದೆ. ಔದ್ಯೋಗಿಕಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ ಉದ್ದಿಮೆಯನ್ನು ಸ್ಥಾಪಿಸುವದಕ್ಕೆ ವಸಾಹತುಗಳನ್ನು ಕಡಿಮೆ ಬೆಲೆಗೆ ಸರಕಾರವು ಉದ್ದಿಮೆದಾರರಿಗೆ ಕೊಡುತ್ತಿದೆ. ಅದರ ಜೊತೆಗೆ ನೀರಿನ ಸರಬರಾಜು, ವಿದ್ಯುತ್ ಪೂರೈಕೆ, ಉಗ್ರಾಣ ಮುಂತಾದವುಗಳ ವ್ಯವಸ್ಥೆಯನ್ನು ಒದಗಿಸುತ್ತಿದೆ.

ಇತ್ತೀಚಿನ ಔದ್ಯೋಗೀಕರಣದಲ್ಲಿ ಒಕ್ಕಲುತನ ಆಧಾರಿತ ಉದ್ದಿಮೆಗಳಿಗೆ ಸರಕಾರವು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿರುವದು.

ಔದ್ಯಮಿಕ ವಲಯದಲ್ಲಿ ಪರಿಣಿತ ಕಾರ್ಮಿಕರ ಅವಶ್ಯಕತೆ ಇರುವುದರಿಂದ "ಜಾಬ್ ಓರಿಯೆಂಟೆಡ್ ಕೋರ್ಸ", "ಇಂಡಸ್ಟ್ರಿಯಲ್ ಟ್ರೇನಿಂಗ್ ಇನ್ಸ್ಟಿಟ್ಯೂಟ್", "ಪಾಲಿಟೆಕ್ನಿಕ ಕೋರ್ಸ", ಮುಂತಾದವುಗಳನ್ನು ಸರಕಾರವು ಪ್ರಾರಂಭಿಸಿರುವದು.

ನಿರುದ್ಯೋಗಿ ಯುವಕರಿಗೆ ಉದ್ದಿಮೆಗಳನ್ನು ಪ್ರಾರಂಭಿಸಲು ಸರಕಾರವು ಪ್ರೋತ್ಸಾಹವನ್ನು ಕೊಡುತ್ತಿದೆ. ಉದ್ದಿಮೆಗೆ ಬೇಕಾಗುವ ಕಚ್ಚಾ ಮಾಲನ್ನು ಯೋಗ್ಯ ಬೆಲೆಗೆ ಪೂರೈಸುವದು, ಕಡಿಮೆ ಬಡ್ಡಿಯ ದರದಲ್ಲಿ ಸಾಲ ಮುಂತಾದ ಅನುಕೂಲತೆಗಳನ್ನು ಸರಕಾರವು ಒದಗಿಸಿರುತ್ತದೆ. ನಿರುದ್ಯೋಗಿಗಳು ನೌಕರಿಗಾಗಿ ಹಾತೊರೆಯದೆ ಸ್ವತಂತ್ರ ಉದ್ಯೋಗಿಗಳಾಗಲು ಇದರಿಂದ ಸಾಧ್ಯವುಂಟು.

ಕಾರ್ಮಿಕರ ಕ್ಷೇಮಾಭಿವೃದ್ಧಿ : ಕರ್ನಾಟಕ ಸರ್ಕಾರವು ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು.

i) ಕಾರ್ಖಾನೆಯ ಕಾಯ್ದೆ ೧೯೪೮
ii) ಕಾರ್ಮಿಕರ ನಷ್ಟ ಪರಿಹಾರ ಕಾಯ್ದೆ ೧೯೨೩
iii) ಕೂಲಿಯ ಪಾವತಿಯ ಕಾಯ್ದೆ ೧೯೩೬
iv) ಕನಿಷ್ಟ ಕೂಲಿಯ ಪಾವತಿಯ ಕಾಯ್ದೆ ೧೯೪೮
v) ಉದ್ಯೋಗಿಗಳ ರಾಜ್ಯ ವಿಮೆ ಕಾಯ್ದೆ ೧೯೪೮

vi) ಉದ್ಯೋಗಿಗಳ ಭವಿಷ್ಯನಿಧಿ ಕಾಯ್ದೆ ೧೯೫೨
vii) ಕೈಗಾರಿಕಾ ವಿವಾದಗಳ ಕಾಯ್ದೆ ೧೯೪೭
viii) ಪ್ರಸೂತಿ ಲಾಭದ ಕಾಯ್ದೆ ೧೯೬೧

ಈ ಕಾಯ್ದೆಗಳ ಮೇರೆಗೆ ಕರ್ನಾಟಕ ರಾಜ್ಯನಲ್ಲಿಯ ಕಾರ್ಮಿಕರು ಸಾಮಾಜಿಕ ಭದ್ರತೆಯನ್ನು ಪಡೆದಿರುತ್ತಾರೆ. ಇದರಿಂದ ಕರ್ನಾಟಕ ಉದ್ದಿಮೆ ವಲಯದಲ್ಲಿ "ಔದ್ಯೋಗಿಕ ಶಾಂತಿ"ಯೂ ನೆಲೆಸಿರುತ್ತಿದೆ. ಉದ್ಯೋಗಪತಿ ಮತ್ತು ಕಾರ್ಮಿಕರಲ್ಲಿ ಸೌಹಾರ್ದಯುತವಾದ ವಾತಾವರಣ ಉಂಟು. ಹೀಗಾಗಿ ಉದ್ದಿಮೆಯಲ್ಲಿ ಕಾರ್ಮಿಕರ ಹಾಜರಾತಿಯೂ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ.

ಧಾರವಾಡದಲ್ಲಿಯ ಕೆಲವು ಪ್ರಮುಖ ಉದ್ದಿಮೆಗಳು :

i) ಹಾಲಿನಪುಡಿ ಕಾರಖಾನೆ : ಈ ಕಾರಖಾನೆಯು ೧೯೮೪ ರಲ್ಲಿ ಪ್ರಾರಂಭವಾಗಿದ್ದು ರಾಜ್ಯಸರ್ಕಾರದ ನಿಯಂತ್ರಣದಲ್ಲಿ ಇರುತ್ತದೆ. ಆದರೆ ಸಹಕಾರಿ ಮಾದರಿಯಲ್ಲಿ ಈ ಉದ್ದಿಮೆಯನ್ನು ನಡೆಸಲಾಗುತ್ತದೆ. ಇದಕ್ಕೆ ರೂ. ೮ ಕೋಟಿ ಖರ್ಚು ಬಂದಿರುತ್ತದೆ.

ಪ್ರತಿನಿತ್ಯ ೧,೩೦,೦೦೦ ಲೀಟರ್ ಹಾಲನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಈ ಕಾರಖಾನೆಯು ಹೊಂದಿದೆಯಲ್ಲದೆ ಜೊತೆಗೆ ಹಾಲಿನ ಪುಡಿ, ಶಿಶು ಆಹಾರ, ಬೆಣ್ಣೆ ಮತ್ತು ತುಪ್ಪವನ್ನು ತಯಾರಿಸುತ್ತಿದೆ.

ii) ಮೈಸೂರ ಕಿರ್ಲೋಸ್ಕರ ಲಿಮಿಟೆಡ್, ಸತ್ತೂರ : ಸತ್ತೂರ ಘಟಕವು ೧೯೬೮ ರಲ್ಲಿ ಪ್ರಾರಂಭವಾಯಿತು. ಇದು ೨೦,೦೦೦ ಮೆಗಾಟನ್ ಸಾಮರ್ಥ್ಯದ ಕುಲುಮೆಯು ಉತ್ಪಾದನೆಗಾಗಿ ಪ್ರಾರಂಭವಾಗಿದೆ.

ಇಲ್ಲಿ ಯಂತ್ರೋಪಕರಣಗಳು, ಡಿಜಾಯಿಲ್ ಇಂಜಿನುಗಳು, ಕಾಂಪ್ರೆಸರುಗಳು, ಹಾಯ್ ಪಾವರ್ ವಾಲ್ವಗಳಿಗಾಗಿ ಕಾಸ್ಟಿಂಗಗಳನ್ನು ಉತ್ಪಾದಿಸುತ್ತಿದೆ.

ಯಂತ್ರೋಪಕರಣಗಳನ್ನು ಉತ್ಪಾದಿಸಿ ರಫ್ತುಮಾಡುವದಕ್ಕಾಗಿ ಮತ್ತೊಂದು ಘಟಕವನ್ನು ೧೯೮೦ ರಲ್ಲಿ ಸ್ಥಾಪಿಸಲಾಯಿತು. ಈ ಕಂಪನಿಯ ಉತ್ಪಾದನೆಯು ಅಂತರಾಷ್ಟ್ರೀಯ ಮಾರುಕಟ್ಟೆಯನ್ನು ಪಡೆದಿರುತ್ತಿದೆ. ಸುಮಾರು ೧,೫೦೦ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ.

iii) ಪ್ರಿಸಿಜನ ಟೂಲಿಂಗ ಸಿಸ್ಟಮ್ಸ ಲಿಮಿಟೆಡ್ : ಮೈಸೂರು ಕಿರ್ಲೋಸ್ಕರ ಲಿಮಿಟೆಡ್ ಹರಿಹರದವರ ನೆರವಿನಿಂದ ಈ ಕಂಪನಿಯು ಸ್ಥಾಪಿಸಲ್ಪಟ್ಟಿದೆ. ಇಲ್ಲಿ ಮಾಯತ್ರೂ ಬೋರ್ಸ, ಲಿಬೋರಿಂಗ ಬೋರ್ಸ ಯಂತ್ರೋಪಕರಣಗಳು ಉತ್ಪಾದಿಸಲ್ಪಡುತ್ತಿದೆ.

ಇಲ್ಲಿ ತಯಾರಾದ ಯಂತ್ರೋಪಕರಣಗಳು ಅಮೇರಿಕಾದೇಶಕ್ಕೆ ರಫ್ತು ಮಾಡಲ್ಪಡುತ್ತವೆ. ೧೫೦ ಕಾರ್ಮಿಕರು ಇಲ್ಲಿ ಕೆಲಸ ಮಾಡುತ್ತಿದ್ದಾರೆ, ಇದು ಭಾರತಕ್ಕೆ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತದೆ.

iv) ದಿ ಗುರ್ಡಿತ್ ಇಂಡಿಸ್ಟ್ರೀಜ ಪ್ರಾಯವೇಟ ಲಿಮಿಟೆಡ್ : ಈ ಉದ್ದಿಮೆಯೂ ೧೯೭೦ ರಲ್ಲಿ ಪ್ರಾರಂಭವಾಯಿತು. ಮುಂದೆ ೧೯೭೮ ರಲ್ಲಿ ಅದು ತನ್ನ ಕೆಲಸವನ್ನು ಪ್ರಾರಂಭಿಸಿತು. ಕಟ್ಟಿಗೆಯ ಉತ್ಪಾದನೆಗಳನ್ನು ಮಾಡುವದಲ್ಲದೇ ಈ ಉತ್ಪಾದನೆಗೆ ಅವಶ್ಯವಿರುವ ಯಂತ್ರಗಳ ತಯಾರಿಕೆಯೂ ಇಲ್ಲಿ ಆಗುತ್ತದೆ. ಸುಮಾರು ೧೦೦ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ.

v) ದಿ ಇಂಡಿಯನ್ ಪ್ಲಾಯವುಡ್ ಮ್ಯಾನುಫ್ಯಾಕ್ಚರಿಂಗ ಲಿಮಿಟೆಡ್ : ಈ ಉದ್ದಿಮೆಯು ೧೯೪೩ ರಲ್ಲಿ ಪ್ರಾರಂಭವಾಗಿದೆ. ಪ್ಲಾಯವುಡ್, ಬ್ಲಾಕ ಬೋರ್ಡ್ ಮೊದಲಾದವುಗಳ ಉತ್ಪಾದನೆಯನ್ನು ಮಾಡುತ್ತಿದ್ದಾರೆ. ಇಲ್ಲಿಯ ಉತ್ಪಾದನೆಯು ಪರರಾಷ್ಟ್ರಗಳಿಗೆ ರಫ್ತು ಆಗುತ್ತಿದೆ. ೮೦೦ ಕೆಲಸಗಾರರು ಇಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ.

vi) ಭೋರೂಕಾ ಟೆಕ್ಸಟಾಯಿಲ್ಸ : ೧೯೮೧ ರಲ್ಲಿ ಇದು ಪ್ರಾರಂಭವಾಯಿತು. ಸುಮಾರು ೧೭,೦೦೦ ಕದರುಗಳು ಕೆಲಸ ಮಾಡುತ್ತಿವೆ. ಈ ಉದ್ದಿಮೆಯು ೨೫,೦೦೦ ಕದರುಗಳ ಸಾಮರ್ಥ್ಯವನ್ನು ಪಡೆದಿರುತ್ತದೆ. ಇಲ್ಲಿ ಬ್ಲೆಂಡೆಡ್ ಸಿಂಥೆಟಿಕ್ ಯಾರ್ನ, ಆ್ಯಕ್ರಿಯಾಲಿಕ ಯಾರ್ನ ಮತ್ತು ಕೃತ್ರಿಮ ನೂಲಿನ ಉತ್ಪಾದನೆಯು ಆಗುತ್ತಿದೆ. ೮ ಕೋಟಿ ರೂಪಾಯಿ ಬಂಡವಲವನ್ನು ತೊಡಗಿಸಲಾಗಿದೆ. ಇಲ್ಲಿಯ ಉತ್ಪಾದನೆಯು ಪರದೇಶಗಳಿಗೆ ರಫ್ತು ಆಗುತ್ತಿದೆ. ೧೦೦೦ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ.

vii) ಟಾಯಮಾಕ ಇಂಡಸ್ಟ್ರೀಜ ಲಿಮಿಟೆಡ್ : ಸುಮಾರು ೨೫ ವರ್ಷಗಳ ಹಿಂದೆ ಧಾರವಾಡದ ಉತ್ಸಾಹಿ ಯುವಕರಿಂದ ಈ ಉದ್ದಿಮೆಯು ಪ್ರಾರಂಭವಾಯಿತು. ಅಲಾರಾಮ ಗಡಿಯಾರಗಳನ್ನು ಇಲ್ಲಿ ಉತ್ಪಾದಿಸಲಾಗುತ್ತಿದೆ. "ಸ್ವೀಟೊ" ಎಂಬ ಹೆಸರಿನಿಂದ ಉತ್ಪಾದಿಸಲ್ಪಟ್ಟ ಗಡಿಯಾರಗಳಿಗೆ ಸಾಕಷ್ಟು ಬೇಡಿಕೆ ಇರಲಿಲ್ಲ. ಇದರಿಂದ ಆರ್ಥಿಕವಾಗಿ ಹಾನಿಯಾಗಲಿಕ್ಕೆ ಹತ್ತಿತು.

ಈ ಕಂಪನಿಯನ್ನು ೧೯೮೧ ರಲ್ಲಿ ವಾಲಚಂದ ನಗರ ಉದ್ಯೋಗ ಸಮೂಹದಲ್ಲಿ ವಿಲೀನಗೊಳಿಸಲಾಯಿತು. ಒಟ್ಟು ೪೦೦ ಕಾರ್ಮಿಕರು ದುಡಿಯುತ್ತಿದ್ದು ಅದರಲ್ಲಿ ೧೦೦ ಮಹಿಳೆಯರು ಸಮಾವೇಶಗೊಂಡಿದ್ದಾರೆ.

viii) ಎಲ್ಮೇಕಾ ವರ್ಕ್ಸ ಕಂಪನಿಯೂ ಯಂತ್ರೋಪಕರಣಗಳ ಉತ್ಪಾದನೆಯನ್ನು ಮಾಡುತ್ತಿದ್ದು, ಈ ಯಂತ್ರೋಪಕರಣಗಳಿಗೆ ದೇಶ ವಿದೇಶಗಳ ಮಾರುಕಟ್ಟೆಯು ಲಭ್ಯವಿರುತ್ತದೆ.

ix) ರಾಮತುಂಗಾ ಉದ್ದಿಮೆಯೂ ೧೯೭೮ರಲ್ಲಿ ಪ್ರಾರಂಭವಾಯಿತು. ಇಲ್ಲಿ ಹತ್ತಿಕಾಳಿನಿಂದ ರಿಫೈನ್ಡ್ ಎಣ್ಣೆಯನ್ನು ಉತ್ಪಾದಿಸಲಾಗುತ್ತಿದೆ. ಈ ಉದ್ದಿಮೆಗೆ ತೊಡಗಿಸಿರುವ ಬಂಡವಲು ರೂ. ೨೦,೦೦,೦೦೦. ಇಲ್ಲಿ ೧೦೦ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

x) ಎಲ್ವಿನಾ ಲೆಬರಾಟರಿ ಕಂಪನಿ ಲಿಮಿಟೆಡ್ ಔಷದದ ಗುಳಿಗೆಯ ಉತ್ಪಾದನೆಯನ್ನು ಮಾಡುತ್ತಿದೆ. ಹೀಗೆ ಹತ್ತಾರು ಉದ್ದಿಮೆಗಳು, ಧಾರವಾಡದ ಸುತ್ತಮುತ್ತಲಿನ ವಲಯದಲ್ಲಿ ತಲೆಯೆತ್ತಿ ನಿಂತಿರುತ್ತವೆ.

ಭಾರತದ ಮಹಾರಾಷ್ಟ್ರರಾಜ್ಯದ ರಾಜಧಾನಿ ಮುಂಬಯಿಯಲ್ಲಿ ಹಾಗೂ ಪಶ್ಚಿಮ ಬಂಗಾಲರಾಜ್ಯದ ರಾಜಧಾನಿ ಕಲಕತ್ತಾದಲ್ಲಿ, ದೇಶದ ೨/೩ ರಷ್ಟು ಉದ್ದಿಮೆಗಳು ಸ್ಥಾಪನೆಗೊಂಡಿವೆ. ಹಾಗೆಯೇ ಕರ್ನಾಟಕರಾಜ್ಯದಲ್ಲಿ ಬೆಂಗಳೂರು ನಗದರಲ್ಲಿಯೇ ಶೇಕಡಾ ೪೫% ರಷ್ಟು ಉದ್ದಿಮೆಗಳು ಕೇಂದ್ರೀಕೃತವಾಗಿರುತ್ತವೆ. ಉದ್ದಿಮೆಗಳಲ್ಲಿ ತೊಡಗಿಸಿರುವ ಬಂಡವಲದಲ್ಲಿ ೫೦% ಬೆಂಗಳೂರ ನಗರದಲ್ಲಿಯೆ ತೊಡಗಿಸಲಾಗಿದೆ. ರಾಜ್ಯದ ಉತ್ಪಾದನೆಯ ೬೦% ಬೆಂಗಳೂರನಗರದ ಉದ್ಯಮ ದಿಂದಲೇ ಬರುತ್ತಿದೆ. ಇದು ಕರ್ನಾಟಕರಾಜ್ಯದ ಸರ್ವತೋಮುಖವಾದ ಅಭಿವೃದ್ಧಿಯೆನಿಸುವದಿಲ್ಲ. ಆದುದರಿಂದ ರಾಜ್ಯದಲ್ಲಿ ಔದ್ಯಮಿಕಕ್ಷೇತ್ರದಲ್ಲಿ ಕೇಂದ್ರೀಕರಣದಿಂದ ವಿಕೇಂದ್ರೀಕರಣದೆಡೆಗೆ ಒತ್ತುಕೊಟ್ಟು ರಾಜ್ಯದ ಅಭಿವೃದ್ಧಿಯನ್ನು ಕೈಕೊಳ್ಳಬೇಕಾಗಿರುವದು.


ಗ್ರಂಥಋಣ

೧) Economy of Karnataka : An Analysis of Development and Planning —Dr. T. K. Meti.

೨) ವಾಣಿಜ್ಯ ಮತ್ತು ಔದ್ಯೋಗಿಕ ರಂಗದಲ್ಲಿ ವೀರಶೈವರು— ಡಾ. ಬಿ. ಎಂ. ವಾಲಿ, ಲಿಂಗಾಯತ ವಿದ್ಯಾಅಭಿವೃದ್ಧಿ ಸಂಸ್ಥೆ ಧಾರವಾಡ. ಶತಮಾನೋತ್ಸವ ಸಂಸ್ಮರಣ ಸಂಚಿಕೆ ೧೯೮೭.

೩) ಧಾರವಾಡ ಮಾರ್ಗದರ್ಶಿ, ಸಂಪಾದಕರು– ಶಂ. ಮಾ. ಜತಾರ ಮನೋಜ ಪಾಟೀಲ

೪) ಆಧುನಿಕ ಭಾರತದ ಆರ್ಥಿಕಾಭಿವೃದ್ಧಿ: ಕೆ. ಡಿ. ಬಸವಾ



ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಗಳಾದ
ಪೂಜ್ಯ ಶ್ರೀ ವೀರೇಂದ್ರ ಹೆಗಡೆ ಅವರೊಂದಿಗೆ
ಶ್ರೀ ಜಿ. ಜಿ. ದೊಡವಾಡ ಅಣ್ಣನವರು ಮತ್ತು ಮಿತ್ರರು




ಲಿಂ. ಸುಬ್ಬಾಪೂರಮಠ, ಲಿಂ. ಮಲ್ಲಗೌಡರು ಹಾಗೂ
ಲಿಂ. ಆಗಡಿ ನೀಲಕಂಠಪ್ಪನವರೊಂದಿಗೆ
ಶ್ರೀ ಜಿ. ಜಿ. ದೊಡವಾಡ ಅಣ್ಣನವರು



ಆಗ್ರಾದ ತಾಜಮಹಲ ಎದುರು ಶ್ರೀ ಈರಣ್ಣಾ ವಾಣೆ ಅವರೊಂದಿಗೆ
ಶ್ರೀ ಜಿ. ಜಿ. ದೊಡವಾಡರು



ದಲಾಲಿ ಅಂಗಡಿಯಲ್ಲಿ ಸುಪುತ್ರ ಶ್ರೀ ದಯಾನಂದ ಮತ್ತು
ಸಿಬ್ಬಂದಿಯೊಂದಿಗೆ ಶ್ರೀ ಜಿ. ಜಿ. ದೊಡವಾಡರು



ಆತ್ಮೀಯರೊಂದಿಗೆ ಶ್ರೀ ಜಿ. ಜಿ. ದೊಡವಾಡ ಅವರು



ಮಕರ ಸಂಕ್ರಾಂತಿಯಂದು ಕೂಡಲ ಸಂಗಮದಲ್ಲಿ ಮಿತ್ರರೊಂದಿಗೆ
ಸ್ನಾನಮಾಡುತ್ತಿರುವ ಶ್ರೀ ಜಿ. ಜಿ. ದೊಡವಾಡರು



ದೇವಿ ಪುರಾಣ ಪಠಣ ನಿರತ
ಶ್ರೀ ಜಿ. ಜಿ. ದೊಡವಾಡರು ಬಳಗದೊಂದಿಗೆ



ಹಿರಿಯ ಮಗ ಶ್ರೀ ಸರಸಾನಂದ, ಸೌ. ಗಂಗಾದೇವಿ
ಇವರ ಪರಿವಾರ



ಶ್ರೀ ಸುದೈವ ಕಮಲಾದೇವಿ ಇವರ ಪರಿವಾರ



ಶ್ರೀ ಮನೋಹರ ಮತ್ತು ಶ್ರೀಮತಿ ಇಂದುಮತಿ
ಇವರ ಪರಿವಾರ



ಶ್ರೀ ದಯಾನಂದ ಸೌ. ಲಲಿತಾ ಇವರ ಪರಿವಾರ




ಶ್ರೀ ಕೈಲಾಸಪತಿ ಸೌ. ಪ್ರಭಾವತಿ ಇವರ ಪರಿವಾರ



ಸರಸಾನಂದ ಅವರೊಂದಿಗೆ ಹತ್ತೀಕಾಳ ಬಂಧುಗಳು
೧. ಗುರುಸಿದ್ಧಣ್ಣ ೨. ಸುಭಾಶ್ಚಂದ್ರ ೩. ವಿವೇಕ ೪. ಅಜೀತ




ಶ್ರೀ ಜಿ. ಜಿ. ದೊಡವಾಡರ ಮಾತೋಶ್ರೀ
ಶತಾಯುಷಿ ಪೂಜ್ಯ ಗಂಗಮ್ಮನವರು



ಶ್ರೀ ಜಿ.ಜಿ.ದೊಡವಾಡ ಅವರ ವಂಶವೃಕ್ಷ



ಶ್ರೀ ಜಿ. ಜಿ. ದೊಡವಾಡ ಅವರ ಅಣ್ಣ
ಅಡಿವೆಪ್ಪನವರು (ಬಸವಂತಪ್ಪನವರ ಸುಪುತ್ರ)



ಕರಿಕಟ್ಟಿಯಲ್ಲಿ ವಾಸಿಸುತ್ತಿರುವ ದೊಡವಾಡ
ಕುಟುಂಬದವರು

11487



ನೂರಾ ಐದು ವರ್ಷದ ಮಾತೋಶ್ರೀ ಗಂಗಮ್ಮನವರು ಮತ್ತು ನಾಲ್ಕು ವರ್ಷದ ಮರಿಮಗಳಾದ ಚಿ. ಸಂಧ್ಯಾ ಇವರನ್ನೊಳಗೊಂಡ ಶ್ರೀ ಜಿ. ಜಿ. ದೊಡವಾಡ ಇವರ ಪರಿವಾರ

ಸಮಾಜದೀಪ್ತಿ

ಈ ವಿಭಾಗದಲ್ಲಿ....

ಲೇಖನಗಳು	ಪುಟ
೧. ಬೌದ್ಧಧರ್ಮ : ಡಾ. ಆರ್. ಸಿ. ಹಿರೇಮಠ	೧
೨. ಮಹಿಳೆ ನಡೆದು ಬಂದ ದಾರಿ : ಡಾ. ಚನ್ನಕ್ಕ ಎಲಿಗಾರ	೫
೩. ಧಾರವಾಡ – ಒಂದು ಸಿಂಹಾವಲೋಕನ : ಡಾ. ಎಮ್. ಜಿ. ಶಾಸ್ತ್ರೀಮಠ	೧೧
೪. ಶ್ರೀ ಜಿ. ಜಿ. ದೊಡವಾಡರ ಸಾಮಾಜಿಕ ಚಿಂತನೆ : ಡಾ. ಎಸ್ ಜಿ. ಹಿರೇಮಠ	೨೫
೫. ಬದಲಾವಣೆ ಹೊಂದಬೇಕಾದ ನಮ್ಮ ಇಂದಿನ ಶೈಕ್ಷಣಿಕ ಮೌಲ್ಯಗಳು : ಶ್ರೀ ಸದಾಶಿವ ಒಡೆಯರ	೩೦

ಬೌದ್ಧಧರ್ಮ



● ಡಾ. ಆರ್. ಸಿ. ಹಿರೇಮಠ

ಬೌದ್ಧಧರ್ಮವು ಜಾಗತಿಕ ಮಹೋನ್ನತ ಧರ್ಮಗಳಲ್ಲಿ ಒಂದು. ಮೂಲತಃ ಭಾರತೀಯ ಧರ್ಮವಾದರೂ ಇಂದು ಭಾರತದ ಹೊರಗಡೆ ಜೀವಂತಧರ್ಮವಾಗಿ ಉಳಿದಿದೆ. ಟಿಬೇಟ, ಚೀನ, ಜಪಾನ, ಬ್ರಹ್ಮದೇಶ, ಥಾಯಿಲ್ಯಾಂಡ, ಶ್ರೀಲಂಕಾ, ಮಲಯಾ, ಜಾವಾ, ಸುಮಾತ್ರಾ ಮೊದಲಾದ ದೇಶಗಳಲ್ಲಿ ಬೌದ್ಧಧರ್ಮ ಪ್ರಮುಖ ಧರ್ಮವಾಗಿ ಬೆಳಗುತ್ತಲಿದೆ. ಸು. ೬೦ ಕೋಟಿ ಜನ ಬೌದ್ಧಧರ್ಮದ ಅನುಯಾಯಿಗಳಾಗಿರುವಂತೆ ತಿಳಿದುಬರುತ್ತದೆ. ಆದರೆ ತಾನು ಹುಟ್ಟಿದ ಭಾರತದೇಶದಲ್ಲಿ ಇಂದು ಕಾಣದಾಗಿದೆ. ಅದ್ವೈತ ಸಿದ್ಧಾಂತದ ಪ್ರತಿಷ್ಠಾಪನೆ, ಹಿಂದೂಧರ್ಮದ ಪುನರುತ್ಥಾನಗಳ ನಂತರ ಬೌದ್ಧಧರ್ಮ ಹಿಂದೂಧರ್ಮದಲ್ಲಿ ಲೀನವಾಗಿ ಹೊರಗೆ ಕಾಣದಂತಾಗಿದೆ. ಆದರೆ ಮೂಲ ವೈದಿಕಧರ್ಮದ ಸ್ವರೂಪ ಬೌದ್ಧಧರ್ಮ ತತ್ತ್ವಗಳ ವಿಲೀನೀಕರಣ ಪ್ರಭಾವದಿಂದ ಬಹಳ ಮಾರ್ಪಟ್ಟಿರುವುದು ನಿಜ. ಅಂತೆಯೇ ಬುದ್ಧನನ್ನು ಹನ್ನೊಂದನೆಯ ಅವತಾರವೆಂದು ಭಾರತದಲ್ಲಿ ಪರಿಗಣಿಸಲಾಗುತ್ತಿದೆ.

ಭಗವಾನ್ ಬುದ್ಧನು ೮೦ ವರ್ಷಗಳ ಪೂರ್ಣ ಜೀವನವನ್ನು ಜೀವಿಸಿ ಪರಿನಿರ್ವಾಣ ಪಡೆದನು. ಅಲ್ಲಿಂದ ೨೧೮ ನೆಯ ವರ್ಷ ಅಶೋಕನು ಚಕ್ರವರ್ತಿಯಾಗಿ ಸಿಂಹಾಸನಾರೋಹಣ ಮಾಡಿರುವದಾಗಿ ಬೌದ್ಧಗ್ರಂಥಗಳಿಂದ ತಿಳಿದುಬರುತ್ತದೆ. ಬುದ್ಧನು ಕ್ರಿ. ಶ. ಪೂ ೫೬೦ - ಕ್ರಿ. ಶ. ಪೂ ೪೮೦ ರ ಅವಧಿಯಲ್ಲಿ ಜೀವಿಸಿದ್ದನೆಂದು ಈಗ ಸ್ಪಷ್ಟವಾಗಿದೆ.

ಜಾಗತಿಕ ಧರ್ಮವೇತ್ತರಲ್ಲಿ ಬುದ್ಧನು ಸರ್ವತಂತ್ರ ಸ್ವತಂತ್ರ ವಿಚಾರಶೀಲನಾಗಿ ಹಿಂಡನಗಲಿದ ಗಜದಂತೆ ಒಡೆದುಕಾಣುವ ವಿಶಿಷ್ಟವ್ಯಕ್ತಿ. ಜಗತ್ತಿನ ವೈಚಾರಿಕ ಆಂದೋಲನದಲ್ಲಿ ಉಪನಿಷದ್‌ಯುಗಕ್ಕೆ ಉನ್ನತ ಸ್ಥಾನ ಸಲ್ಲುತ್ತದೆ. ಈ ಉಪನಿಷತ್

ಸಿದ್ಧಾಂತವು ಪರಬ್ರಹ್ಮತತ್ತ್ವದ ತಳಹದಿಯ ಮೇಲೆ ನಿಂತಿದೆ. 'ತೇನ ವಿನಾ ತೃಣ ಮಪಿ ನ ಚಲತಿ', 'ಈಶಾವಾಸ್ಯಮಿದಂ ಸರ್ವಂ,' 'ಯತ್ ಕಿಂಚ ಜಗತ್ಯಾಂ ಜಗತ್', 'ಸರ್ವಂ ಖಲ್ವಿದಂ ಬ್ರಹ್ಮ'. 'ಜೀವೋ ಬ್ರಹ್ಮೈವನಾಪರಃ, ಈಶ್ವರ ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ'— ಇವು ಉಪನಿಷತ್ ತತ್ತ್ವದ ಕೆಲವು ಮೂಲ ಸೂತ್ರಗಳು, ಜೀವಾತ್ಮ, ಪರಮಾತ್ಮ, ಜಗತ್ ಇವು ಮೂರನ್ನು ಒಪ್ಪಿಕೊಂಡು ಬೆಳೆದಿದೆ ಉಪನಿಷತ್‌ಸಿದ್ಧಾಂತ. ಆದರೆ ಬುದ್ಧನು ಇವು ಮೂರನ್ನೂ ಒಪ್ಪಲಿಲ್ಲ. ಅವುಗಳನ್ನು ಕುರಿತು ಚಿಂತಿಸುವ ಗೋಜಿಗೆ ಹೋಗಲಿಲ್ಲ. ಅವನಿಗೆ ಜಗತ್ತೆಲ್ಲ ದುಃಖಮಯವಾಗಿ ತೋರಿತು. ಈ ದುಃಖದ ಮಹಾಸಾಗರದಿಂದ ತನ್ನನ್ನೂ ಸಮಸ್ತ ಮಾನವತೆಯನ್ನೂ ಹೇಗೆ ಪಾರುಮಾಡಬೇಕೆಂಬುದೇ ಬುದ್ಧನ ಮುಂದಿದ್ದ ಮಹಾಸಮಸ್ಯೆಯಾಗಿದ್ದಿತು. ನಶ್ವರವಾದ ಈ ವಿಶ್ವದಲ್ಲಿ ಶಾಶ್ವತವೆಂಬುದು ಯಾವುದೂ ಇಲ್ಲ. ಎಲ್ಲವೂ ಬದಲಾಗುತ್ತ ನಡೆದಿರುವ ಪ್ರವಾಹವಲ್ಲದೆ ಬದಲಾಗದ ವಸ್ತುವೆಂಬುದಾವುದೂ ಇಲ್ಲ. ಇದ್ದ ಸ್ಥಿತಿಯಲ್ಲಿ ಈ ಸೃಷ್ಟಿಯಲ್ಲಿ ತೃಪ್ತಿ, ಶಾಂತಿ, ಸಮಾಧಾನಗಳೆಂಬುವಿಲ್ಲ. ಕಾರಣ ಜಗತ್ತಿನಲ್ಲಿ ದುಃಖ ತಾಂಡವವಾಡುತ್ತದೆ, ಎಂಬುದು ಬೌದ್ಧಧರ್ಮದ ವಾದ.

ಬುದ್ಧ ಅನಾತ್ಮತ್ವ, ಅನಿತ್ಯತ್ವ, ದುಃಖ ಈ ಮೂರು ತತ್ತ್ವಗಳನ್ನು ಕಂಡು ಕೊಂಡನು. ಪಿಕ್ಕುವೆಲ್ಲ ನಾಮರೂಪಗಳು. ಜೀವಾತ್ಮನೆಂಬುದಿಲ್ಲವೇ ಇಲ್ಲ. ಜೀವಂತವಸ್ತು ಪಂಚಸ್ಕಂದಗಳಿಂದ ನಿರ್ಮಾಣವಾಗಿದೆ. ರೂಪ, ವೇದನ, ಸಂಜ್ಞಾ, ಸಂಸ್ಕಾರ ಮತ್ತು ವಿಜ್ಞಾನ– ಇವು ಪಂಚಸ್ಕಂದಗಳು. ಇವನ್ನು ನಾಮರೂಪಗಳೆಂದು ಕರೆಯಲಾಗಿದೆ. ಮಹಾಭೀಷ್ಟ, ಚತುಷ್ಟಯ, ಷಡಿಂದ್ರಿಯ, ಇಂದ್ರಿಯವಿಷಯ ರಾಶಿಗಳೆಲ್ಲ ರೂಪದಲ್ಲಿ ಅಡಕವಾಗುತ್ತವೆ. ಸೂಕ್ಷ್ಮರೂಪವೇ ನಾಮವೆಂಬುದು. ಪೃಥ್ವಿ, ಅಪ್, ತೇಜ, ಯೋಗ ಇವು ಬಾಹ್ಯರೂಪದಿಂದ ಉತ್ಪತ್ತಿಯಾಗಿವೆ. ವೇದನ, ಸಂಜ್ಞಾ, ಸಂಸ್ಕಾರ ಮತ್ತು ವಿಜ್ಞಾನ ಈ ನಾಲ್ಕನ್ನು ನಾಮವೆಂದು ಕರೆಯ ಲಾಗುತ್ತದೆ. ಪಂಚಸ್ಕಂದಗಳು ಅಂದರೆ ನಾಮರೂಪಗಳು ಸಂಧಿಸಿದಾಗ ಜೀವದೇಹ ಗಳು ನಿಷ್ಪನ್ನವಾಗುತ್ತವೆ. ಇವುಗಳಲ್ಲಿ ಯಾವುದೂ ಶಾಶ್ವತವಲ್ಲ. ಜೀವಿತಾವಧಿಯಲ್ಲಿ ಗೆಯ್ದ ಕರ್ಮದ ಪರಿಣಾಮವೇ ಪುನರ್ಜನ್ಮ. ಆರ್ಯಸತ್ಯಗಳನ್ನು ಅರಿತುಕೊಳ್ಳುವುದ ರಿಂದ ಕರ್ಮ ನಾಶವಾಗುತ್ತದೆ. ಪುನರ್ಜನ್ಮ ನಿಲ್ಲುತ್ತದೆ. ನಿರ್ವಾಣ ಪ್ರಾಪ್ತವಾಗು ತ್ತದೆ. ಆರ್ಯ ಸತ್ಯಗಳೆಂದರೆ ದುಃಖ, ದುಃಖ ಸಮುದಾಯ, ದುಃಖನಿರೋಧ, ದುಃಖನಿರೋಧಪತಿಪದ ಎಂಬಿವು. ಈ ಆರ್ಯಸತ್ಯಗಳ ಸಾಧನೆಗಾಗಿ ಅಷ್ಟಾಂಗ ಮಾರ್ಗವನ್ನು ಕಲ್ಪಿಸಲಾಗಿದೆ. ಅಷ್ಟಾಂಗಮಾರ್ಗದ ಮೆಟ್ಟಿಲುಗಳು ಬೌದ್ಧಧರ್ಮದ ಮೂಲತತ್ತ್ವಗಳು. ಬೋಧಿವೃಕ್ಷದಡಿಯಲ್ಲಿ ಧ್ಯಾನದಲ್ಲಿ ಕುಳಿತಾಗ ಉಂಟಾದ ಜ್ಞಾನೋದಯದ ಬೆಳಗಿನಲ್ಲಿ ಬುದ್ಧನು ಕಂಡ ಜ್ಞಾನವೆಲ್ಲ ಈ ತತ್ತ್ವಗಳಲ್ಲಿ ಅಳವಟ್ಟಿದೆ.

ಬುದ್ಧನು ಹೊಸ ವೈಚಾರಿಕಮಾರ್ಗವನ್ನು ತೋರಿಸಿದನು. ನೂತನಧರ್ಮವನ್ನು ಪ್ರತಿಷ್ಠಾಪಿಸಿ ಜೀವನದ ನಿತ್ಯನೂತನವಾದ ಉನ್ನತ ಮೌಲ್ಯಗಳನ್ನು ಎತ್ತಿಹಿಡಿದನು. ಅವು ವೈದಿಕ ಇಲ್ಲವೆ ಬ್ರಾಹ್ಮಣಧರ್ಮದ ಮೌಲ್ಯಗಳಿಂದ ತೀರ ಭಿನ್ನವಾಗಿದ್ದವು. ದಯೆಯೆಂಬ ಜೀವನಮೌಲ್ಯವನ್ನು ಜಗತ್ತಿನ ಇತಿಹಾಸದಲ್ಲಿ ಮೊಟ್ಟಮೊದಲು ಪ್ರತಿಷ್ಠಾಪಿಸಿದವನು ಬುದ್ಧದೇವ. ವೇದ, ಉಪನಿಷತ್ತು, ಬ್ರಾಹ್ಮಣಗಳಲ್ಲಿ ಎಲ್ಲಿಯೂ ದಯೆಯೆಂಬುದು ಜೀವನದ ಅತ್ಯುನ್ನತ ಮೌಲ್ಯವೆಂದು ಪ್ರತಿಪಾದಿತವಾದಂತಿಲ್ಲ. ಬುದ್ಧನು ತನ್ನ ನೂತನಧರ್ಮವನ್ನು ದಯಾತತ್ವದ ಭದ್ರಬುನಾದಿಯ ಮೇಲೆ ನಿರ್ಮಿಸಿದನು. ಹಿಂದೂದೇವತೆಗಳಾದ ಶಿವ, ವಿಷ್ಣು ಮೊದಲಾದವರನ್ನು ಅನಂತರದ ಗ್ರಂಥಗಳಲ್ಲಿ ದಯಾಸಾಗರ, ಕರುಣಾಸಮುದ್ರ, ಕಾರುಣ್ಯಮಯೀ ಎಂದು ಬಣ್ಣಿಸಿರುವುದು ಬೌದ್ಧಧರ್ಮದ ಪ್ರಭಾವದಿಂದ ಎಂಬುದನ್ನು ನಾವು ಗಮನಿಸಬೇಕು. ಬೌದ್ಧಧರ್ಮಕ್ಕಿಂತ ಪೂರ್ವದಲ್ಲಿ ಹಿಂದೂಧರ್ಮದ ಪರತತ್ವವೆನಿಸಿದ ಪರವಸ್ತು, ಪರಬ್ರಹ್ಮ, ಪರತತ್ವ, ಪರಶಿವ, ವಿಷ್ಣು ಮುಂತಾದ ಯಾವುದೇ ತತ್ತ್ವವನ್ನು ಕರುಣಾಸಾಗರ, ಕಾರುಣ್ಯಮಯಿ ಎಂದು ಮುಂತಾಗಿ ಬಣ್ಣಿಸಿರುವದಿಲ್ಲ. ಬುದ್ಧನ ಜನನದ ಹೊತ್ತಿಗಾಗಲೇ ವೈದಿಕ ಇಲ್ಲವೆ ಬ್ರಾಹ್ಮಣಧರ್ಮ ತನ್ನ ಮೂಲಸತ್ವವನ್ನು ಕಳೆದುಕೊಂಡು ಕರ್ಮದ ಶುಷ್ಕತತ್ವದ ಮೇಲೆ ನಿಂತಿದ್ದಿತು. ದೇಶದ ತುಂಬ ಯಜ್ಞಯಾಗಾದಿಗಳಲ್ಲಿ ಪ್ರಾಣಿವಧೆ ಮಿತಿ ಮೀರಿದ್ದಿತು. ತನ್ನ ಉದ್ಧಾರಕ್ಕಾಗಿ ಅನ್ಯಪ್ರಾಣಿಗಳನ್ನು ನಿಷ್ಕಾರುಣವಾಗಿ ಬಲಿ ಕೊಡಲಾಗುತ್ತಿದ್ದಿತು. ದಯೆಗೆ ಈ ಧರ್ಮದಲ್ಲಿ ಸ್ಥಾನವಿರಲಿಲ್ಲವೆಂಬುದಕ್ಕೆ ಈ ಯಜ್ಞಯಾಗಾದಿಗಳೇ ಸಾಕ್ಷಿಯಾಗಿವೆ. ಯಜ್ಞಾಧಾರಿತ ಧರ್ಮರೂಪದ ಶೌರ್ಯದಿಂದ ಮಾನವತೆಯನ್ನು ಮುಕ್ತಗೊಳಿಸಲೆಂಬಂತೆ ಬುದ್ಧನ ಜನನವಾಯಿತು. ಈ ದೇಶದಲ್ಲಿ ಬೌದ್ಧಧರ್ಮವು ಮಾನವತೆಯ ಮೇಲೆ ಕಾರುಣ್ಯವೃಷ್ಟಿಗರೆದಿದೆ. ಬುದ್ಧನ ತರುವಾಯ ಜೀವಿಸಿದ ಕ್ರೈಸ್ತ, ಬಸವೇಶ್ವರ, ಗಾಂಧೀಜಿ, ಪ್ರೇಮ ದಯೆ ಅಹಿಂಸೆಯಂತಹ ಉದಾತ್ತ ಮೌಲ್ಯಗಳನ್ನು ಎತ್ತಿಹಿಡಿದರು. ಜೀವನದ ಅನೇಕ ಸಮಸ್ಯೆಗಳಿಗೆ ಶಾಸ್ತ್ರೀಯ ಪರಿಹಾರೋಪಾಯ ಹೇಳಿದರು. ಹೀಗಾಗಿ ಬೌದ್ಧಧರ್ಮ ಅತ್ಯಂತ ವೈಜ್ಞಾನಿಕ ದೃಷ್ಟಿಯ ಧರ್ಮವೆನಿಸಿದೆ. ಹಿಂದೂಧರ್ಮಕ್ಕೆ ಶ್ರುತಿ, ವೇದದ್ರಷ್ಟಾರರ ಅನ್ಯ ಅನುಭವ ಪ್ರಮಾಣವೆನಿಸಿದರೆ ಬುದ್ಧನು ತನ್ನ ಸ್ವಂತ ಅನುಭವಗಳನ್ನು ಆಧರಿಸಿದನು. ಈ ಜಗತ್ತಿನಲ್ಲಿ ಒಳ್ಳೆಯ ನಡೆ, ಒಳ್ಳೆಯ ವಿಚಾರ, ಒಳ್ಳೆಯ ಬದುಕು ಇವುಗಳಿಗೆ ಬುದ್ಧನು ಒತ್ತುಕೊಟ್ಟನು. ಮರಣೋತ್ತರ ಜಗತ್ತನ್ನು ಕುರಿತು ಬುದ್ಧನು ಮೌನತಾಳಿದ್ದನು. ಅದರ ವಿಷಯವಾಗಿ ಆತನು ತನ್ನ ತಲೆ ಕೆಡಿಸಿಕೊಳ್ಳಲಿಲ್ಲ. ಕಾರಣ ಆತನು ಧಾರ್ಮಿಕ ಜಗತ್ತನ್ನು, ಸ್ವರ್ಗ, ನರಕ, ದೇವ ಮುಂತಾದ ಪರಿಕಲ್ಪನೆಗಳನ್ನು ಪೂರ್ತಿಯಾಗಿ ಕೈಬಿಟ್ಟನು. ಶ್ರುತಿ ಶಾಸ್ತ್ರಗಳನ್ನು ಅವಲಂಬಿಸದೆ ಸ್ವತಂತ್ರವಾಗಿ ವಿಚಾರಿಸಲು ಮಾನವತೆಗೆ ಮೊತ್ತ ಮೊದಲ ಬಾರಿಗೆ ಕರೆಕೊಟ್ಟ ಮಹಾನುಭಾವನೆಂದರೆ ಬುದ್ಧ.

ಉಚ್ಚ ನೀಚ ತತ್ತ್ವವನ್ನು ಆಧರಿಸಿದ ವರ್ಣಾಶ್ರಮದಿಂದ ಶೂದ್ರರೋ ಅತಿ ವರ್ಣೀಯರೋ ಎಂದು ಕಡೆಗಣಿಸಲ್ಪಟ್ಟ ಲಕ್ಷೋಪಲಕ್ಷ ಸಾಮಾನ್ಯಜನರು, ಪತಿತರು ಬೌದ್ಧಧರ್ಮದ ಕಡೆಗೆ ಹೊರಳಿದುದು ತೀರ ಸ್ವಾಭಾವಿಕ. ಬುದ್ಧನ ಸಂದೇಶ ಇಂತಹ ಪತಿತರನ್ನು ಕುರಿತಂತಿತ್ತು. ಬುದ್ಧನು ಈ ಪತಿತರ ಸಮಸ್ಯೆ, ಭಾಷೆಗಳನ್ನು ತನ್ನ ವಿಚಾರಕ್ಕೆ ಎತ್ತಿಕೊಂಡನು. ಭಾರತೀಯ ಜೀವನಧರ್ಮ, ಸಾಹಿತ್ಯಗಳಲ್ಲಿ ಅತಿಮಹತ್ವದ ಪಾತ್ರವಾಡಿದ್ದ ಸಂಸ್ಕೃತ ಈಗ ಹಿಂದೆ ಸರಿಯಿತು. ಜನಸಾಮಾನ್ಯರ ಆಡುನುಡಿಯಾಗಿದ್ದ ಪಾಲಿ ಗದ್ದುಗೆಯೇರಿತು. ಬುದ್ಧನು ಈ ಭಾಷೆಯಲ್ಲಿಯೇ ತನ್ನ ಉಪದೇಶ ನೀಡಿದನು. ಬೌದ್ಧಧರ್ಮವು ಭಾರತದ ವಿವಿಧಭಾಗಗಳಲ್ಲಿ ಅಷ್ಟೇ ಏಕೆ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಕಾಲಿಟ್ಟಂತೆ ಅಲ್ಲಲ್ಲಿಯ ಜನಸಾಮಾನ್ಯರ ನುಡಿಯನ್ನೇ ಧರ್ಮೋಪದೇಶ ಮತ್ತ ಪ್ರಚಾರಕ್ಕಾಗಿ ಎತ್ತಿಕೊಳ್ಳಲಾಯಿತು. ತತ್ಪರಿಣಾಮವಾಗಿ ಅನೇಕ ಪ್ರಾಚೀನ ಸಾಹಿತ್ಯಗಳಲ್ಲಿ ಬೌದ್ಧ ಪ್ರಚಾರಪ್ರಣಾಲಿ ಕಂಡುಬರುತ್ತದೆ.

ಬೌದ್ಧಧರ್ಮವು ಅಶೋಕಚಕ್ರವರ್ತಿಯ ಕಾಲದಲ್ಲಿ ಕರ್ನಾಟಕದೊಳಗೆ ಅಡಿಯಿಟ್ಟಿತು. ಚಕ್ರವರ್ತಿ ತನ್ನ ಮಗ ಮಹೇಂದ್ರ ಹಾಗೂ ಮಗಳು ಸಂಘಮಿತ್ರೆ ಇವರನ್ನು ಬೌದ್ಧಧರ್ಮ ಪ್ರಚಾರಕ್ಕಾಗಿ ದಕ್ಷಿಣಭಾರತಕ್ಕೆ ಕಳಿಸಿದ್ದನು. ರಕ್ಷಿತ ಎಂಬ ತೇರನನ್ನು ಅಶೋಕಚಕ್ರವರ್ತಿ ಬನವಾಸಿಗೆ ಕಳಿಸಿದ್ದನು. ಇದು ಮಹಾವಂಶ ಗ್ರಂಥದ ಉಲ್ಲೇಖ. ಇದೇ ಗ್ರಂಥ ಮಹಾದೇವನೆಂಬವನನ್ನು ಮಹಿಷಮಂಡಲಕ್ಕೆ ಕಳಿಸಿದ ವಿಷಯವನ್ನು ಹೇಳುತ್ತದೆ. ಅಶೋಕನ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಅಶೋಕನ ಕಾಲದಿಂದ ಕ್ರಿ. ಶ. ೧೨ನೆಯ ಶತಮಾನದ ವರೆಗೆ ಕರ್ನಾಟಕದಲ್ಲಿ ಬೌದ್ಧಧರ್ಮದ ಅವಶೇಷಗಳು ಉಪಲಬ್ಧವಾಗುತ್ತವೆ. ಶಾಸನ, ಚೈತ್ಯ, ಸ್ತೂಪ, ಸಂಘಾರಾಮ ಇತ್ಯಾದಿಗಳು ಇದರ ಅವಶೇಷಗಳು, ಇಂತಹ ಅನೇಕ ಆಧಾರಗಳಿಂದ ಬೌದ್ಧಧರ್ಮ ಕ್ರಿ. ಶ. ಪೂರ್ವಕಾಲದಿಂದ ಕ್ರಿ. ಶ. ೧೨–೧೩ನೆಯ ಶತಮಾನದ ಅಂತ್ಯದ ವರೆಗೆ ಊರ್ಜಿತಸ್ಥಿತಿಯಲ್ಲಿತ್ತೆಂದು ಸ್ಪಷ್ಟವಾಗುತ್ತದೆ. ಇದು ಕರ್ನಾಟಕದ ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಗಿದೆ.

ಮಹಿಳೆ ನಡೆದುಬಂದ ದಾರಿ



● ಡಾ. ಚನ್ನಕ್ಕ ಎಲಿಗಾರ

ಪರೋಪಕಾರಾಯ ಫಲಂತಿ ವೃಕ್ಷಾಃ ।
ಪರೋಪಕಾರಾಯ ವಹಂತಿ ನದ್ಯಃ ॥
ಪರೋಪಕಾರಾಯ ದುಹಂತಿ ಗಾವಃ ।
ಪರೋಪಕಾರಾರ್ಥಮಿದಂ ಶರೀರಂ ॥

ಪರಂಪರಾಗತವಾಗಿ ಜನಬಳಕೆಯಲ್ಲಿ ಬಂದ ಸಂಸ್ಕೃತ ಶ್ಲೋಕವಿದು. ಸೃಷ್ಟಿಯ ನಿಯಮಾನುಸಾರವಾಗಿ ಪ್ರಪಂಚದಲ್ಲಿ 'ಜನ್ಮವೆತ್ತಿಬಂದ ಪ್ರತಿಯೊಂದು ಚರಾಚರ ವಸ್ತುಗಳು ಒಂದಿಲ್ಲೊಂದು ರೀತಿಯಲ್ಲಿ ಪರೋಪಕಾರಿಯೆನಿಸುತ್ತವೆ. ಹಾಗೆ ಸಚರಾಚರಗಳಲ್ಲಿ ಶ್ರೇಷ್ಠನೆನಿಸಿದ ಮಾನವ ಪರೋಪಕಾರಕ್ಕಾಗಿ ತನ್ನ ದೇಹವನ್ನು ಸವೆಸಬೇಕು ಎಂಬುದು ಈ ಶ್ಲೋಕದ ಅರ್ಥಸ್ವಾರಸ್ಯ.

ಪ್ರಾಚೀನಕಾಲದಿಂದ ದೇಶದ ಸಂಸ್ಕೃತಿ, ನಾಗರಿಕತೆಯ ಸಂವರ್ಧನೆಯ ವಿಷಯದಲ್ಲಿ ಪ್ರಮುಖ ಪಾತ್ರವನ್ನಾಡಿದವಳು ಭಾರತೀಯ ಮಹಿಳೆ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಪುರುಷನ ಹೆಗಲಿಗೆ ಹೆಗಲು ಹಚ್ಚಿ ದುಡಿದು ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಂಡವಳು. ಒಂದು ದೇಶದ ಮಹಿಳೆಯರ ಇತಿಹಾಸವೆಂದರೆ ಅದು ಒಂದು ದೇಶದ ಮೌಲ್ಯಯುಕ್ತ ಇತಿಹಾಸವೇ ಎನಿಸಿದೆ.

ವೇದ ಉಪನಿಷತ್ತುಗಳ ಕಾಲ ಮಹಿಳೆಯರಿಗೆ ಉದಾತ್ತ ಬೆಳವಣಿಗೆಯ ಕಾಲವೆನಿಸಿತ್ತು. ಉಪನಿಷತ್ತಿನ ತತ್ವಗಳಂತಹ ಆಧ್ಯಾತ್ಮಿಕ, ತಾತ್ವಿಕ ತತ್ವಗಳನ್ನು ಜಗತ್ತಿಗೆ ನೀಡಿದ ಮಹಿಮಾನ್ವಿತ ಮಹಿಳೆಯರು ಅಂದಿನ ಕಾಲದವರು. ಗಾರ್ಗಿ, ಮೈತ್ರೇಯಿಯರಂತಹ ಜ್ಞಾನ, ಪಾಂಡಿತ್ಯಪೂರ್ಣ ಅಧ್ಯಯನದ ಮಹಿಳೆಯರು ದೇಶದ ಇತಿಹಾಸಕ್ಕೆ ಹೊಸ ಅಧ್ಯಾಯವೆನಿಸಿದರು.

ಶತಶತಮಾನಗಳ ಕಾಲ ಸ್ತ್ರೀಯರನ್ನು ಶೂದ್ರರನ್ನಾಗಿ ಕಾಣುತ್ತಿದ್ದ ಪರಿಸರ ದಲ್ಲಿಯೂ ಕೆಲ ಮಹಿಳೆಯರು ತಮ್ಮ ಮನೋಬಲ, ಸ್ಥೈರ್ಯ ಮನೋಭಾವನೆ ಯಿಂದ ಮಹತ್ವದ ಸ್ಥಾನ ಸಂಪಾದಿಸಿಕೊಂಡಿರುವರು. ಮಹಾಕವಿ ರನ್ನನಿಗೆ ಉದಾರ ಆಶ್ರಯವನ್ನಿತ್ತು ಆತನಿಂದ 'ದಾನಚಿಂತಾಮಣಿ' ಎಂದು ಕೀರ್ತಿತಳಾದ ಅತ್ತಿಮಬ್ಬೆ ಜೈನಧರ್ಮ ಇತಿಹಾಸದಲ್ಲಿ ಅದ್ವಿತೀಯ ಮಹಿಳೆ, ಮಹಿಳಾಕುಲದ ಕಿರೀಟ. "ದಾನದೊಳನ್ನದಾನಮೆ ಸಾರಂ ದೀನಾನಾಥರ್ಗೆ ತುಪ್ಪುದಾನಮ್" ಎನ್ನುವ ಜಕ್ಕಿಯಬ್ಬೆ, ದಾನವಿನೋದೆ ಎಂದು ಹೆಸರಾಗಿದ್ದ ದಂಡನಾಯಕಿತಿ ರೆಬ್ಬಲದೇವಿ, ಸರ್ಪಪವಾಡ ಕೈಕೊಂಡು ತನ್ನ ಪಾತಿವ್ರತ್ಯವನ್ನು ಮಾನವಲೋಕಕ್ಕೆ ಸಾರಿದ ರಟ್ಟ ಲಕ್ಷ್ಮಿದೇವನ ಮಡದಿ ಚಂದ್ರಿಕಾದೇವಿ ಇವರೆಲ್ಲ ತಮ್ಮ ಧಾರ್ಮಿಕ ಕಾರ್ಯಕಲಾಪ ಗಳಿಂದ ನಾಡಿನ ಧರ್ಮ, ಸಂಸ್ಕೃತಿಯ ರಕ್ಷಣೆ ಮಾಡಿಕೊಂಡು ಬಂದಿರುವರು.

ಸಂಗೀತ, ನರ್ತನ ಮುಂತಾದ ಲಲಿತಕಲೆಗಳಿಗೆ ಕನ್ನಡ ಮಹಿಳೆಯರು ಬಹು ದೊಡ್ಡ ಕೊಡುಗೆ ನೀಡಿರುವದುಂಟು. ಧರ್ಮೇಶ್ವರದೇವ ಲಬ್ಧವರಪ್ರಸಾದೆ, 'ವಿವೇಕೈಕಬೃಹಸ್ಪತಿ', 'ಪ್ರತ್ಯುತ್ಪನ್ನ ವಾಚಸ್ಪತಿ' ಎನ್ನಿಸಿಕೊಂಡ ಹೊಯ್ಸಳ ವಿಷ್ಣು-ವರ್ಧನನ ಪಟ್ಟಮಹಾದೇವಿ ಶಾಂತಲದೇವಿ ಕನ್ನಡನಾಡಿನ ಶಿಲ್ಪಕಲಾ ಶ್ರೀಮಂತಿಕೆಗೆ ಕಾರಣಕರ್ತೆ. ಬೇಲೂರು ಹಳೇಬೀಡಿನ ಶಿಲ್ಪಕಲಾ ಭಂಜಿಕೆಗಳು ಅವಳ ವಿವಿಧ ಮುಖ ನೃತ್ಯವೈಖರಿಯ ಸಾಕ್ಷ್ಯಚಿತ್ರಗಳು. ಗಂಗರಾಜ ಪೆರ್ಮಾಡಿಯ ಮಡದಿ ಬಲಚಿದೇವಿ, ಕಳಚೂರ್ಯ ಸೋಮೇಶ್ವರನ ರಾಣಿ ಸೋವಲದೇವಿ ಇವರೆಲ್ಲ ನಾಟ್ಯ ಶಾಸ್ತ್ರ ಪಂಡಿತೆಯರು. ರಾಜಮನೆತನದ ಮಹಿಳೆಯರಿಗೆ ಈ ಸಂಗೀತ ನರ್ತನ ಅಭಿರುಚಿಯ ವಿಷಯವಾಗಿದ್ದವು. ಇವರೆಲ್ಲ ಕಲಾಪ್ರೇಮಿಗಳು, ಕಲಾಪೋಷಕರೂ ಕೂಡ ಆಗಿದ್ದುಂಟು. ಪರಧರ್ಮಗಳ ಬಗೆಗಿನ ಧರ್ಮಸಹಿಷ್ಣುತೆ, ದೇವಸ್ಥಾನ ನಿರ್ಮಾಣ, ಕೆರೆ ಭಾವಿ, ಬಸದಿ ಅರವಟ್ಟಿಗೆಗಳ ನಿರ್ಮಾಣ ಇವರ ಬಹುಮುಖ ಸೇವೆಯ ಸಾಮಾಜಿಕ ಕಾರ್ಯಗಳೆನಿಸಿದ್ದವು. ಇವರು ಕನ್ನಡನಾಡು ಧರ್ಮಸಮನ್ವಯ ಭೂಮಿಯೆಂಬುದನ್ನು ಸಿದ್ಧಪಡಿಸಿ ತೋರಿಸಿರುವರು.

ನಾಡಿಗಾಗಿ ಹೋರಾಡಿ ಮಡಿದು ವೀರಸ್ವರ್ಗ ಪಡೆದ ಹರಿಯಕ್ಕ, ಪತಿಗಾಗಿ ಆತ್ಮಬಲಿದಾನ ಮಾಡಿದ ಕುವರಲಕ್ಷ್ಮನ ಮಡದಿ ಸುಗ್ಗಲದೇವಿ, ಆತ್ಮಸಂತೋಷ ದಿಂದ, ಪಕೈಕ ನಿಷ್ಠೆಯಿಂದ ಮರಣಹೊಂದಿದ ಪತಿಯನ್ನು ಹಿಂಬಾಲಿಸಿದ ಮಹಾ ಸಾಧ್ವಿಯರ ಸ್ಮರಣಾರ್ಥವಾಗಿ ನಿಲ್ಲಿಸಿದ ವೀರಗಲ್ಲು, ಮಾಸ್ತಿಕಲ್ಲುಗಳು ಹೆಣ್ಣುಮಕ್ಕಳ ಹೋರಾಟಪರ ಜೀವನ ನಿರ್ವಹಣೆಯನ್ನು ಸೂಚಿಸುವಂತಿವೆ.

ಸಾಹಿತ್ಯಸೇವೆಯ ಅನುಪಮಶಕ್ತಿಗಳೂ ಇಲ್ಲಿವೆ. ಆಧ್ಯಾತ್ಮಿಕರಂಗದಲ್ಲಿ ಸ್ತ್ರೀಯರನ್ನು ಶೂದ್ರರೆಂದು ಪರಿಗಣಿಸಿಕೊಂಡು ಬಂದ ಕಾಲದಲ್ಲಿ ಅವರಿಗೆ ಉನ್ನತ ಸ್ಥಾನವನ್ನಿತ್ತವರು ೧೨ನೆಯ ಶತಮಾನದ ಶಿವಶರಣರು. ಪುರುಷನ ಸಾಧನೆಯ

ಮಾರ್ಗದಲ್ಲಿ ಸ್ತ್ರೀ ತೊಂದರೆದಾಯಿಣಿ ಎಂದು ಭಾವಿಸಿದವರ ಮನಸ್ಸನ್ನು ತೊಳೆದು ಪುರುಷನ ಸಾಧನೆಯ ಮಾರ್ಗದಲ್ಲಿ ಅವಳು ಸನ್ಮಾರ್ಗಕ್ಕೆ ಪ್ರೇರೇಪಿಣಿ ಎಂಬುದನ್ನು ಸಾಧಿಸಿ ತೋರಿಸಿದರು. "ಹೊನ್ನು ಮಾಯೆಯೆಂಬರು, ಹೆಣ್ಣು ಮಾಯೆಯೆಂಬರು. ಮಣ್ಣು ಮಾಯೆಯೆಂಬರು. ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆ ಮಾಯೆ" ಎಂಬ ಹೊಸ ಅಂಶ ವನ್ನು ಸೂಚಿಸಿದರು. ಮಾನಸಿಕ ಸ್ಥಿತ್ಯಂತರಗಳ ಮೇಲೆ ಬೆಳಕಿನ ಕ್ಷ ಕಿರಣ ಬೀರಿದರು. ಸ್ತ್ರೀಯನ್ನು ಕಂಡು ಅಳುಪುವ ಮನಕ್ಕೆ "ಪರವಧುವನು ಮಹಾದೇವಿ ಎಂಬೆ" ಎಂದ ಬಸವಣ್ಣ. ತಮ್ಮ ಪರಿಶುದ್ಧ ನಡೆನುಡಿಯಿಂದ 'ಹೆಣ್ಣು ಕಪಿಲಸಿದ್ಧಮಲ್ಲಿಕಾರ್ಜುನ' ಎಂಬುದನ್ನು ಶಿವಯೋಗಿ ಸಿದ್ಧರಾಮ ಬಿಂಬಿಸಿದ. ಜ್ಞಾನಕ್ಷೇತ್ರದಲ್ಲಿ ಲಿಂಗಭೇದಕ್ಕೆ ಎಡೆ ಇಲ್ಲ. "ಅರುಹಿಂಗೆ ಹಿರಿದು ಕಿರಿದೆಂಬ ಭೇದವಿಲ್ಲ." ಬಸವಾದಿ ಪ್ರಮಥರು ಮಹಿಳಾಕುಲಕ್ಕೆ ನೀಡಿದ ಈ ದಿವ್ಯ ಸಂದೇಶದಿಂದ ಇಲ್ಲಿಯವರೆಗೆ ತುಳಿಸಿಕೊಂಡು ಬಂದ ಸ್ತ್ರೀಸಮಾಜ ತಮ್ಮ ಅಜ್ಞಾನದ ಪರೆಯನ್ನು ಸರಿಸಿ ನಾಡಿನ ಸಾಮಾಜಿಕ ಸಾಂಸ್ಕೃತಿಕ ಕಾರ್ಯದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು.

ಅಕ್ಕಮಹಾದೇವಿ, ನೀಲಾಂಬಿಕೆ, ಅಕ್ಕ ನಾಗಮ್ಮ ಮುಂತಾದ ಶರಣೆಯರು ತಮ್ಮ ಸಾಧನೆ ಸಿದ್ಧಿಗಳಿಂದ ತಾವು ಹೆಣ್ಣುಮಕ್ಕಳು ಎಂಬುದನ್ನೇ ಮರೆತರು. ಹದಿ ಬದೆಯ ಧರ್ಮ ಬರೆದು ಖ್ಯಾತಳಾದ ಸಂಚಿಯ ಹೊನ್ನಮ್ಮ "ಪೆಣ್ಣಲ್ಲದೆ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು, ಪೆಣ್ಣುಪೆಣ್ಣೆಂದೇತಕೆ ಬೀಳುಗಳೆವರು ಕಣ್ಣುಕಾಣದ ಗಾವಿಲರು. ಕುವರನಾದೊಡೆ ಬಂದ ಗುಣವೇನದರಿಂದ ಕುವರಿ ಯಾದೊಡೆ ಕುಂದೇನು ?" ಎಂದು ನಿರ್ದಾಕ್ಷಿಣ್ಯವಾಗಿ ಸ್ತ್ರೀಕುಲಕ್ಕಿದ್ದ ಹೀನತೆಯನ್ನು ತೊಡೆದುಹಾಕಿದಳು.

ಹಿಂದೂರಾಜ್ಯ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜನ ಮಗ ರಾಜಾರಾಮ ನಿಗೆ ಆಶ್ರಯವನ್ನಿತ್ತು ವೈರಿಗಳ ಕೈಯಿಂದ ಅವನನ್ನು ರಕ್ಷಿಸಿ ಮೊಗಲರನ್ನು ಮಣಿಸಿ ಹಿಂದೂಕುವರನಿಗೆ ಪ್ರಾಣರಕ್ಷಣೆ ನೀಡಿ 'ನಂಬಿದವರ ತಲೆಕಾಯುವ ಬಂಟರು' ಎಂಬ ಹೆಸರನ್ನು ಶಾಶ್ವತವಾಗಿ ಉಳಿಸಿಕೊಂಡವಳು ಕೆಳದಿಯ ಚೆನ್ನಮ್ಮ. ಮೇಲೇರಿ ಬಂದ ಶಿವಾಜಿ ಮಹಾರಾಜನನ್ನು ಎದುರಿಸಿ ಬುದ್ಧಿಗಲಿಸಿದ ಬೆಳವಡಿ ಮಲ್ಲಮ್ಮ, ನಾಡಿಗಾಗಿ ತನುಮನಪೂರ್ವಕ ಸೇವೆ ಸಲ್ಲಿಸಿದವಳು.

ಕನ್ನಡನಾಡು, ಕನ್ನಡತಾಯ್ನುಡಿ, ತಾಯ್ನುಡಿಗೆ ದುಡಿದು ಇಹಪರದ ಏಳ್ಗೆ ಪಡೆದವರು ಕನ್ನಡತಿಯರು. ಅಖಂಡ ಕರ್ನಾಟಕದ ನಿರ್ಮಾಣಕ್ಕೆ ಹಗಲಿರುಳು ಶ್ರಮಿಸಿದವರು, ಕನ್ನಡನಾಡು ವಿಭಜಿತವಾಗಿದ್ದ ಕಾಲದಲ್ಲಿ ಅನೇಕ ಜನ ಹಿರಿಯ ಮುಂದಾಳುಗಳು, ಸಾಹಿತಿಗಳು, ಶಿಕ್ಷಣ ತಜ್ಞರು, ಸಂತರು, ಸಾಧುಗಳು 'ಕನ್ನಡ ನಾಡೊಂದೆ' ಎಂದು ಒಕ್ಕೊರಲಿನ ಘೋಷಣೆ ಮಾಡಿದವರು. ಈ ಹೋರಾಟದಲ್ಲಿ

ಕನ್ನಡ ಮಹಿಳೆಯರ ದಿಟ್ಟ ನಿಲವು ಕೆಚ್ಚದೆಯು ಮುಂದಾಳುತನ ಕನ್ನಡನಾಡಿನ ಭದ್ರತೆಗೆ, ಕರ್ನಾಟಕದ ಏಕೀಕರಣಕ್ಕೆ ಅನುಕೂಲವಾಗಿದೆ ಎಂದು ಹೇಳಬೇಕು.

ಕ್ರಿ. ಶ. ೧೯೫೬ರಲ್ಲಿ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ ಬೇಲೂರಲ್ಲಿ ನಡೆದ ಸಂದರ್ಭ. ಕನ್ನಡನಾಡು ನುಡಿಯ ದೀಕ್ಷೆ ತೊಟ್ಟಿದ್ದ ಜಯದೇವಿತಾಯಿ ಲಿಗಾಡೆಯವರು ಮೂರು ಕೋಟಿ ಕನ್ನಡಿಗರ ಮರ್ಯಾದೆ, ಜೀವನಮರಣದ ಪ್ರಶ್ನೆಯಾಗಿದ್ದ ಕರ್ನಾಟಕದ ಏಕೀಕರಣದ ಗೊತ್ತುವಳಿಯನ್ನು ಸಲ್ಲಿಸಿದರು. "ನಾನಾವ ಅಧಿಕಾರಕ್ಕೆ ಆತುರಗೊಂಡು ಕರ್ನಾಟಕ ಏಕೀಕರಣ ಬೇಡುತ್ತಿಲ್ಲ. ಅಗಲಿದ ಕನ್ನಡದ ನೆಲ ಜಲ ಒಂದಾಗಲೆಂಬುದೇ ನನ್ನ ಬಯಕೆ" ಎಂದು ಕಳಕಳಿಯಿಂದ ಕಣ್ಣೀರು ಸುರಿಸುತ್ತ ಈ ಕನ್ನಡತಿ ಹೇಳಿದ್ದು "ನಾನಂತೂ ಏಕೀಕರಣಕ್ಕಾಗಿ ಪ್ರಾಣ ಬಲಿ ಕೊಡಲು ಸಿದ್ಧಳಿರುವೆ" ಏಂದು ನುಡಿದ ಆ ತಾಯಿಯ ಆವೇಶಪೂರಿತ ಹೇಳಿಕೆ ಏಕೀಕರಣದ ಒತ್ತಡಕ್ಕೆ ಅನುಕೂಲವಾಯಿತು. ಅದರ ಪರಿಣಾಮವೇ ಇಂದು ಜನಜೀವನದ ಎಲ್ಲ ರಂಗಗಳಲ್ಲಿ ಕನ್ನಡ ತನ್ನ ಭದ್ರಸ್ಥಾನವನ್ನು ಗಳಿಸಿಕೊಂಡಿರುವುದು.

ಮಹಿಳೆ ಇಂದು ಪುರುಷನಿಗೆ ಸಮಾನಳಾಗಿ, ಸಮಾಜದ ಸಕಲರಂಗಗಳಲ್ಲಿ ನಿಂತು ಕಾರ್ಯಸಾಧನೆ ಮಾಡುತ್ತಿದ್ದಾಳೆ. ಮಮತೆಯ ತಾಯಿಯಾಗಿ, ಆದರ್ಶಸತಿಯಾಗಿ, ಶಿಕ್ಷಕಿಯಾಗಿ, ಉದ್ಯೋಗಿಯಾಗಿ ಸಾರ್ವಜನಿಕ, ಸಾಂಸ್ಕೃತಿಕರಂಗಗಳಲ್ಲಿ ಹೋರಾಡುತ್ತಿದ್ದಾಳೆ. ಮೊದಲು ಮನೆಯನ್ನು ಕಟ್ಟಬೇಕಿದೆ. ನಂತರ ನಾಡನ್ನು ಕಟ್ಟಬೇಕಿದೆ. ನಾಡರಕ್ಷಣೆಗೆ ಸಮರ್ಥ ಮಕ್ಕಳನ್ನು ಕೊಡಬೇಕಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆ ಕ್ಷೇಮಾಭಿವೃದ್ಧಿಯ ಕಾರ್ಯ ಕೈಕೊಳ್ಳಬೇಕಿದೆ. ಮಮ್ಮಿ, ಡ್ಯಾಡಿ ಪದಗಳ ಬಂಧನ ಬಿಡಿಸಿ ಪ್ರೀತಿ ಮಮತೆಯ ಅಪ್ಪ, ಅವ್ವ ಪದಗಳನ್ನು ರೂಢಿಸಿಕೊಡಬೇಕಿದೆ. ಮಗುವಿನ ಮನಸ್ಸನ್ನು ಇಂದು ಅಧಃಪತನಕ್ಕೆಳೆಯುತ್ತಿರುವ ಸಿನೇಮಾ, ಹೀನಸಾಹಿತ್ಯದಿಂದ ಮೇಲಕ್ಕೆತ್ತಬೇಕಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಸಾಲದಲ್ಲಿ ಸಿಕ್ಕು ನಶಿಸಿ ಹೋಗುವ, ಹೊಲಸು ಮಾದಕ ಪದಾರ್ಥಗಳಿಂದ ತುಂಬು ಬಾಳನ್ನು ಹಾಳು ಮಾಡಿಕೊಂಡು ಬದುಕನ್ನೇ ಸೂರೆಗೈಯುತ್ತಿರುವ ಮಕ್ಕಳನ್ನು ಸನ್ಮಾರ್ಗಕ್ಕೆ ಹಚ್ಚಿ ಆದರ್ಶ ಪ್ರಜೆಗಳನ್ನಾಗಿ ಮಾಡಬೇಕಾದ ಮಹತ್ತರ ಜವಾಬ್ದಾರಿ ಇಂದು ಮಹಿಳೆಯರ ಮೇಲಿದೆ. ರಾಮಾಯಣ, ಮಹಾಭಾರತ, ವಚನಸಾಹಿತ್ಯ ಆಧ್ಯಾತ್ಮಿಕ ಗ್ರಂಥಗಳ ಉತ್ತಮ ತತ್ವಗಳು ಬದುಕಿನಲ್ಲಿ ಒಂದಾಗಬೇಕಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜಾತಿ ಮತ ಕುಲಗೋತ್ರವೆಂಬ ಸೀಮಿತ ಬಂಧನ ಬಿಡಿಸಿ ಮಾನವೀಯತೆಯ ಸಾಕಾರಮೂರ್ತಿಯನ್ನಾಗಿ ಮನುಷ್ಯನನ್ನು ರೂಪಿಸಬೇಕಿದೆ.

"ಅನ್ನವನು ನೀಡುವುದು, ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆಯುವುದು." ಈ ಮೂರು ತತ್ವ ಮಾನವರಕ್ತದಲ್ಲಿ ಒಂದಾಗಬೇಕು. ಆತ್ಮವಿಶ್ವಾಸ ಆತ್ಮಾಭಿಮಾನ, ಸಹಾನುಭೂತಿ ದೃಢತತ್ವ ಚಿಕ್ಕಂದಿನಿಂದಲೇ ಮಕ್ಕಳ ಮನದಲ್ಲಿ

ಬೆಳೆದುಬರುವಲ್ಲಿ ತಾಯಂದಿರ ಪಾತ್ರ ಬಹುದೊಡ್ಡದು. ಹೊಲವನ್ನು ಚೆನ್ನಾಗಿ ಉತ್ತಿ ಬಿತ್ತಿ ಪೋಷಣೆಗೈದರೆ ಬೆಳೆ ಚೆನ್ನಾಗಿಯೆ ಬರುವಂತೆ, ಉತ್ತಮ ಸಂಸ್ಕಾರ ಜ್ಞಾನ, ಪರಿಸರ ಇದ್ದರೆ ಎಂಥ ಮಗುವಾದರೂ ಒಳ್ಳೆಯ ನಾಗರಿಕನಾಗಲೇಬೇಕು. ಅದಕ್ಕೆ ಹಿರಿಯರು ಹೇಳುವ ಮಾತಿದು. 'ಕೆಟ್ಟ ಮಗನೇನಾದರೂ ಜನಿಸಬಹುದು: ಆದರೆ ಕೆಟ್ಟ ತಾಯಿ ಮಾತ್ರ ಎಂದೂ ಹುಟ್ಟಲಾರಳು' ಎಂದು.

ಭಾಷಾಬಂಧುತ್ವ ನಾವು ಸಾಧಿಸಬೇಕಾದ ಬಹುದೊಡ್ಡ ಕಾರ್ಯ. ಎಲ್ಲಿಯೇ ಇದ್ದರೂ ಕನ್ನಡತನವನ್ನು ಬಿಟ್ಟಿರಬಾರದು. ಇದನ್ನೇ ರಾಷ್ಟ್ರಕವಿ ಕುವೆಂಪು ಬಯಸಿದ್ದು:" ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು" ಎಂದುದು. ಭಾವೈಕ್ಯವನ್ನು ಸಾಧಿಸುವಲ್ಲಿ ಹೆಣ್ಣುಮಕ್ಕಳು ಬಹು ಬೇಗ ಯಶಸ್ವಿಯಾಗ ಬಲ್ಲರು. ಜಯದೇವಿ ತಾಯಿಯವರು ಹೇಳುವಂತೆ "ಮಹಿಳೆಯರು ಮನೆ ಕಟ್ಟ ಬಲ್ಲರು. ಮನ ಕೂಡಿಸಬಲ್ಲರು, ರಚನಾತ್ಮಕ ಕಾರ್ಯಗಳಲ್ಲಿ ಬಹು ದೊಡ್ಡ ಶಕ್ತಿಯಾಗ ಬಲ್ಲರು."

ಕಲಿತ ವಿದ್ಯೆ ಆತ್ಮವಿಕಸನಕ್ಕೆ ದಾರಿ ಮಾಡಿಕೊಡಬೇಕು. ಪರೋಪಕಾರ ಸತ್ಕೀರ್ತಿಗೆ ಕಾರಣವಾಗಬೇಕು. ವಿನಯ, ವಿಧೇಯತೆ, ಔದಾರ್ಯ, ತ್ಯಾಗ, ಕ್ಷಮೆ ಮುಂತಾದ ಗುಣಗಳು ಬಾಲ್ಯತನದಿಂದಲೇ ಬೆಳೆದುಬರಬೇಕು. ಚಿಕ್ಕ ವಯಸ್ಸಿನಲ್ಲಿ ಬೆಳೆದುಬಂದ ಉದಾತ್ತ ಗುಣಧರ್ಮ ಮನುಷ್ಯನನ್ನು ಯಾವಾಗಲೂ ಸನ್ಮಾರ್ಗ ದಲ್ಲಿಯೇ ಮುನ್ನಡೆಸಿಕೊಂಡು ಹೋಗುವುದು.

ಮಹಿಳೆಯರಲ್ಲಿ ಇಂದು ಉನ್ನತಮಟ್ಟದ ಜಾಗ್ರುತಿ ಆಗಬೇಕಾಗಿದೆ. ಮಹಿಳೆ ಯರು ಜಾಗ್ರುತಗೊಂಡರೆ ದೇಶ ಜಾಗ್ರುತಗೊಳ್ಳುವದು. ಮಹಿಳೆಯರ ಸರ್ವ ತೋಮುಖ ಅಭಿವೃದ್ಧಿಗಾಗಿ ಅನೇಕಜನ ಮಹನೀಯರು, ಅನೇಕ ಸಂಘಸಂಸ್ಥೆ ಗಳು ಶ್ರಮ ವಹಿಸುತ್ತ ಬಂದಿವೆ. ರಾಜಾರಾಮ ಮೋಹನರಾಯ, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿಯವರಂಥ ಸಮಾಜಸುಧಾರಕರು, ಆರ್ಯ ಸಮಾಜ, ಬ್ರಹ್ಮಸಂಸ್ಥೆಗಳನ್ನು ಸ್ಥಾಪಿಸಿ ಮಹಿಳೆಯರ ಉದ್ಧಾರಕ್ಕೆ ಅನೇಕ ಹೊಸ ಯೋಜನೆಗಳನ್ನು ರೂಪಿಸಿಕೊಟ್ಟಿದ್ದುಂಟು.

ವಿಧವೆಯರ ಪುನರ್‌ವಿವಾಹ, ಸ್ತ್ರೀಶಿಕ್ಷಣಕ್ಕೆ ಅವಕಾಶವನ್ನಿತ್ತು, ಪತಿಯೊಂದಿಗೆ ಸಹಗಮನ ಕೈಕೊಳ್ಳುವ ಮಹಿಳೆಯರ ಕ್ರೂರಸಂಪ್ರದಾಯವನ್ನು ಬಿಡಿಸಿ ಜೀವ ನಕ್ಕೆ ಹೊಸಮಾರ್ಗ ತೋರಿಸಿದ್ದಾರೆ. ಸ್ವಾಮಿ ವಿವೇಕಾನಂದರಂತೂ ಹಿಂದೂ ಧರ್ಮದ ಮಹತ್ವವನ್ನು, ಮಹಿಳೆಯರ ಮಾತೃತ್ವದ ಗೌರವವನ್ನು ಪರದೇಶದಲ್ಲಿ ಹಾಡಿಹರಿಸಿ ಬಂದುದಲ್ಲದೆ, ವಿದೇಶೀಯರ ದೃಷ್ಟಿಯಲ್ಲಿ ಭಾರತೀಯ ಮಹಿಳೆಯರಿಗೆ ಒಂದು ಉಚ್ಚಮಟ್ಟದ ಸ್ಥಾನಮಾನ ಬಿಂಬಿಸಿ ಬಂದರು. ರವಿಂದ್ರನಾಥ ಠಾಕೂರ, ಮಹರ್ಷಿ ಕರ್ವೆಯವರು ಮಹಿಳೆಯರ ಕಲ್ಯಾಣಕ್ಕೆ ಶಕ್ತಿಮೀರಿ ಪ್ರಯತ್ನ ಸಲ್ಲಿಸಿರುವರು.

ಇತ್ತೀಚೆಗೆ ಕ್ರಿಶ್ಚಿಯನ್ ಮಿಶನರಿಗಳು, ರಾಮಕೃಷ್ಣ ಸೇವಾಸಂಘಗಳು ಮಹಿಳೆಯರ ಒಳಿತಿಗಾಗಿ ಶ್ರಮಿಸುತ್ತಿವೆ. ಗಾಂಧೀಜಿಯವರು ಸ್ತ್ರೀಯರ ಏಳಿಗೆಗೆ ಪ್ರಬಲ ಬೆಂಬಲವನ್ನು ಸೂಚಿಸಿದರು. ಖಾದಿ ಗ್ರಾಮೋದ್ಯೋಗ, ಕೈ ಕಸಬು, ಗುಡಿಕೈಗಾರಿಕೆ ಮಹಿಳೆಯರ ಪಾಲಿಗೆ ಹೊಸ ದಿಕ್ಸೂಚಿಗಳೆನಿಸಿದವು. ಸಾಕ್ಷರತೆ ಮಹಿಳೆಯರ ಮುನ್ನಡೆಗೆ ಹೊಸ ಸೋಪಾನವೆನಿಸಿದೆ.

ಈ ಎಲ್ಲ ಸಹಾಯ ಸಹಕಾರ, ಜ್ಞಾನದ ಫಲವಾಗಿ ಮಹಿಳೆ ಇಂದು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವ ಯೋಗ್ಯತೆ ಪಡೆದಿದ್ದಾಳೆ. ಅಷ್ಟೇ ಅಲ್ಲ, ಕೆಲ ವಿದ್ಯಾವಂತ ಮಹಿಳೆಯರು ಸಮಾಜಕಲ್ಯಾಣದ ಜವಾಬ್ದಾರಿಯನ್ನು ಹೊತ್ತು ಕಾರ್ಯ ಪ್ರವೃತ್ತರಾಗಿದ್ದಾರೆ. ಸಮಾಜಕ್ಕೆ ಅಂಟಿಕೊಂಡು ಬಂದ ಪಿಡುಗುಗಳೆನಿಸಿದ ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆಗೆ ಮಹಿಳೆಯರು ದುಡಿಯುತ್ತಿದ್ದಾರೆ.

ಮಹಿಳೆಯರು ಪಟ್ಟಣದಲ್ಲಿಯೇ ಇರಲಿ, ಹಳ್ಳಿಗಳಲ್ಲಿಯೇ ಇರಲಿ ಅವರು ಸ್ವಾವಲಂಬಿಗಳಾಗಿ ಬದುಕುವಂತೆ ಇಂದು ಅನೇಕ ಯೋಜನೆಗಳು ರೂಪಿತಗೊಂಡಿವೆ. ಗ್ರಾಮೀಣ ಮಹಿಳೆಯರ ಸಮಾಜಕಲ್ಯಾಣಕೇಂದ್ರ, ಉದ್ಯೋಗಿ ಮಹಿಳೆಯರ ಕಲ್ಯಾಣಕೇಂದ್ರಗಳು ತಲೆ ಎತ್ತಿದ್ದರೆ. ಸಮಾಜದ ಏಳಿಗೆಗಾಗಿ ಬಾಲಕಲ್ಯಾಣ ಯೋಜನೆ, ಕುರುಡು, ಕಿವುಡು, ಮೂಕ ಮಕ್ಕಳ ಕಲ್ಯಾಣ ಕೇಂದ್ರಗಳು, ಬಾಲಾಪರಾಧಿ ಕಲ್ಯಾಣ ಕೇಂದ್ರಗಳು, ಶಿಶುಪಾಲನಾ ಕೇಂದ್ರಗಳು ಸ್ಥಾಪಿತಗೊಂಡಿದ್ದು ಅದಕ್ಕೆ ಮಹಿಳೆಯರು ಮನಮುಟ್ಟಿ ಸಹಾಯ ಸಲ್ಲಿಸುತ್ತಿದ್ದಾರೆ.

ಹೀಗೆ ಶತಮಾನಗಳ ಇತಿಹಾಸದಲ್ಲಿ ಮಹಿಳೆಯರು ನಡೆದುಬಂದ ಹಾದಿಯನ್ನು ಸಿಂಹಾವಲೋಕನ ಮಾಡಿದರೆ ಮಹಿಳೆ ಇಂದು ಸಾಕಷ್ಟು ಉನ್ನತಮಟ್ಟದಲ್ಲಿ ಇದ್ದಾಳೆ ಎಂದು ಹೇಳಬೇಕಾಗುತ್ತದೆ. ಸಮಾಜದ ಕಲ್ಯಾಣಕ್ಕೆ ಅವರು ಅಷ್ಟೇ ಉನ್ನತ ಮಟ್ಟದ ಸೇವೆ ಸಲ್ಲಿಸುತ್ತಿದ್ದು ಅವರು ಹೆಣ್ಣುಮಕ್ಕಳಾಗಿ ಹುಟ್ಟಿದುದಕ್ಕೆ ಸಾರ್ಥಕವೆನಿಸಿದ್ದಾರೆ.

ಧಾರವಾಡ —
ಒಂದು ಸಿಂಹಾವಲೋಕನ



● **ಡಾ. ಎಮ್. ಜಿ. ಶಾಸ್ತ್ರೀಮಠ**

ಪ್ರಬುದ್ಧ ಸಾರ್ವಜನಿಕ ಜೀವನದ ಪ್ರಜ್ಞೆಯಿಂದಾಗಿ, ಧಾರವಾಡವು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ತುಂಬ ಪ್ರಭಾವ ಬೀರಬಲ್ಲ ನಗರವಾಗಿ ಬೆಳೆಯುತ್ತ ಬಂದಿದೆ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಗುರುತಿಸಲ್ಪಡುವ ಧಾರವಾಡವು, ಕರ್ನಾಟಕ ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನಾತ್ಮಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಂದಾಗಿ ಇಂದು ಅಂತರ್‌ರಾಷ್ಟ್ರೀಯ ಖ್ಯಾತಿಯನ್ನೂ ಪಡೆದಿದೆ. ಕನ್ನಡದ ಕೆಚ್ಚು ಬೇರೆ ಕಡೆಗೆ ಗೋಚರಿಸುವುದಕ್ಕಿಂತಲೂ ಹೆಚ್ಚಾಗಿ ಯಾವಾಗಲೂ ಧಾರವಾಡದಲ್ಲಿಯೇ ಪ್ರಕಟವಾಗುತ್ತ ಬಂದಿರುವುದು ಐತಿಹಾಸಿಕ ಸತ್ಯ ಸಂಗತಿ. ಧಾರವಾಡವೆಂದರೆ ಉತ್ತರ ಕರ್ನಾಟಕವೆಂದೇ ಅರ್ಥ. ಉತ್ತರ ಕರ್ನಾಟಕವೆಂದರೆ ಧಾರವಾಡ, ಬೆಳಗಾವಿ, ವಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮಾತ್ರವಲ್ಲ; ರಾಯಚೂರ, ಗುಲಬರ್ಗಾ, ಬೀದರ, ಬಳ್ಳಾರಿ ಜಿಲ್ಲೆಗಳೂ ಸೇರುತ್ತವೆ ಎಂಬುದನ್ನು ನಾವು ಮರೆಯಬಾರದು. ಈ ಎಂಟು ಜಿಲ್ಲೆಗಳ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ, ಹಾಗೂ ರಾಜಕೀಯ ಜೀವನದ ಸರ್ವಸೂತ್ರಗಳು ಧಾರವಾಡ ಮಹಾನಗರವನ್ನೇ ಕೇಂದ್ರಬಿಂದುವನ್ನಾಗಿ ಮಾಡಿಕೊಂಡು ಚಲಿಸುತ್ತ ಬಂದಿವೆ. ಈ ನಗರ ಹಾಗೂ ಇಲ್ಲಿಯ ಪ್ರಮುಖ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

ಕರ್ನಾಟಕ ಗೆಝೆಟಿಯರ್ ಭಾಗ–೨ ರಲ್ಲಿ ಧಾರವಾಡವು ಏಳನೆಯ ಶತಮಾನದಲ್ಲಿಯೇ ಪಟ್ಟಣವಾಗಿ ಕಾಣಿಸಿಕೊಳ್ಳತೊಡಗಿರಬಹುದೆಂಬ ಉಲ್ಲೇಖವಿದೆ. ಯಾವ ಊರೂ ಒಮ್ಮೆಲೇ ಅಸ್ತಿತ್ವದಲ್ಲಿ ಬರುವುದಿಲ್ಲ. ದೀರ್ಘಕಾಲ ಹಿಂದೆಯೇ ಅದು ಹಳ್ಳಿಯಾಗಿ ಬೆಳೆದಿರಲೇಬೇಕು. ಏಳನೆಯ ಶತಮಾನಕ್ಕಿಂತ ಪೂರ್ವದಲ್ಲಿ ಧಾರವಾಡವು 'ಪಲಸಿಗೆ ೧೨೦೦೦' ಪ್ರಾಂತದ 'ಬೆಳುವೊಲ-೩೦೦' ಮಂಡಲದ ಗ್ರಾಮವಾಗಿದ್ದುದ

ರಿಂದ ಇದರ ಅಸ್ತಿತ್ವವನ್ನು ಮೂರನೆಯ ಶತಮಾನ–ನಾಲ್ಕನೆಯ ಶತಮಾನದ ವರೆಗೂ ಹಿಂದೆ ಒಯ್ಯಬಹುದು. ಅದಕ್ಕಿಂತ ಪೂರ್ವದಲ್ಲಿಯೇ ಇದು ಇದ್ದಿರಬಾರ ದೇಕೆ ? ಆಧಾರಗಳ ಅಭಾವದಲ್ಲಿ ಆಧುನಿಕತೆಯನ್ನು ಆರೋಪಿಸುವುದು ಸಮಂಜಸ ವಲ್ಲ.

ಪಶ್ಚಿಮ ಘಟ್ಟಗಳ ಪೂರ್ವಭಾಗದ ಗುಡ್ಡಗಳ ಸಾಲುಗಳಲ್ಲಿ ಇಳುಕಲುಗಳ ಮೇಲೆ ಸಮುದ್ರಪಾತಳಿಯಿಂದ ೨೫೮೦ ಅಡಿ ಎತ್ತರದಲ್ಲಿ ಧಾರವಾಡವು ನೆಲೆ ಗೊಂಡಿದೆ. ಈ ಪಟ್ಟಣದ ಪೂರ್ವಕ್ಕೆ ಬಯಲು ಸೀಮೆಯೂ, ಪಶ್ಚಿಮಕ್ಕೆ ಮಲೆನಾಡು ಪ್ರದೇಶವೂ ವಿಸ್ತಾರಗೊಂಡಿವೆ. ಎರಡನ್ನೂ ಜೋಡಿಸುವ ಕೊಂಡಿಯಂತೆ ಧಾರವಾಡವು ಮಹತ್ವವನ್ನು ಪಡೆದಿದೆ. ಬಯಲುಸೀಮೆಯಿಂದ ಮಲೆನಾಡಿಗೆ ಹೋಗುವ 'ದ್ವಾರ' ದಂತಿದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸ ಲ್ಪಡುವ ಧಾನ್ಯ ಮೊದಲಾದ ವಸ್ತುಗಳ ಮೇಲೆ ಇಲ್ಲಿ ಸುಂಕವನ್ನು ತೆಗೆದುಕೊಳ್ಳ ಲಾಗುತ್ತಿತ್ತು. ಹೀಗೆ ಅಡ್ಡಾಡುವ ಜನರಿಗೆ ವಸತಿಸ್ಥಾನವಾಗಿತ್ತು. 'ವಾಟ' 'ವಾಟಿಕೆ' ಎಂಬುದಕ್ಕೆ ವನ, ಉಪವನ ಎಂಬರ್ಥವಿದೆ. ಆದುದರಿಂದ ಸಂಸ್ಕೃತ ಭಾಷೆಯ ಹಿನ್ನಲೆಯಲ್ಲಿ ಇದಕ್ಕೆ "ದ್ವಾರ-ವಾಟ" (ವನಪ್ರದೇಶದ ಮಹಾದ್ವಾರ) ಎಂಬ ಹೆಸರು ಬಂದಿತು. ಅದೇ ಮುಂದೆ 'ದಾರವಾಡ' ಎಂದೂ, 'ಧಾರವಾಡ' ಎಂದೂ ಪರಿವರ್ತಿತವಾಯಿತು. 'ವಾಟ' ಎಂಬ ಸಂಸ್ಕೃತಶಬ್ದದಿಂದ "ವಾಡ" ಎಂದಾಗಿರದೇ "ಬಾಡ" (ಹಳ್ಳಿ) ಎಂಬ ಕನ್ನಡ ಶಬ್ದದಿಂದಲೇ "ವಾಡ" ಎಂಬ ರೂಪ ಬಂದಿರಬಹುದೆಂದು ಕೆಲವರ ಅಭಿಪ್ರಾಯವಿದೆ. 'ದಾರ' ಎಂದರೆ 'ಎಳೆ' ಎಂದೂ ಇರಬಹುದು. ಹತ್ತಿಯನ್ನು ಹೆಚ್ಚು ಬೆಳೆಯುತ್ತಿದ್ದುದರಿಂದ 'ತಂತುಪುರ' ಎಂಬ ಹೆಸರು ಕೂಡ ಇದ್ದಿತು. 'ಧಾರರ' ಎಂಬುದು ಒಂದು ಜನಾಂಗವಾಚಿ ಪದ. 'ವಾಡ' ಎಂಬುದು ಜನರಿರುವ ಸ್ಥಳ ಎಂಬ ಅರ್ಥ ಸೂಚಿಸುತ್ತದೆ. ಆದುದರಿಂದ 'ಧಾರ' ಎಂಬ ಜನಾಂಗ ವಾಸಿಸುತ್ತಿದ್ದ ಸ್ಥಳವೇ ಧಾರವಾಡವಾಗಿರಬಹುದೆಂಬ ವಿದ್ವಾಂಸರ ಹೇಳಿಕೆಯೂ ಇದೆ. ದುರ್ಗಾದೇವಿಯ ಗುಡಿಯಲ್ಲಿರುವ ಕ್ರಿ. ಶ. ೧೧೧೭ ರ ಆರನೆಯ ವಿಕ್ರಮಾದಿತ್ಯ ತ್ರಿಭುವನಮಲ್ಲನ ಶಾಸನದಲ್ಲಿ, ನರೇಂದ್ರದಲ್ಲಿ ದೊರೆತ ಕ್ರಿ. ಶ. ೧೧೨೫ ಮತ್ತು ಕ್ರಿ. ಶ. ೧೧೨೬ ರ ಶಾಸನಗಳಲ್ಲಿ, ಸೋಮೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ, ಮನಗುಂಡಿ ಮತ್ತು ಹೊಂಬಳದಲ್ಲಿ ದೊರೆತ ೧೨ನೆಯ ಶತಮಾನದ ಶಾಸನಗಳಲ್ಲಿ 'ದಾರವಾಡ' ಎಂಬ ಹೆಸರು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಹುಬ್ಬಳ್ಳಿ ತಾಲೂಕಿನ ಕತ್ನೂರ ಶಾಸನದಲ್ಲಿ 'ಧಾರವಾಡ ಕಂಪಣ' ಎಂಬ ಪ್ರಾದೇಶಿಕ ಹೆಸರು ಕಂಡುಬರುತ್ತಿದೆ. ವಿಜಯನಗರ ಸರದಾರನಾದ ಧಾರಾರಾವ್ ಎಂಬವನ ಹೆಸರಿನಿಂದ ಇದಕ್ಕೆ 'ಧಾರವಾಡ' ಎಂಬ ಹೆಸರು ಬಂದಿದೆ ಎನ್ನುವ ಕೆಲವರ ಗ್ರಹಿಕೆ ಸಮಂಜಸವಾದುದಲ್ಲ. ಏಕೆಂದರೆ ಧಾರಾರಾವ್ ಇಲ್ಲಿಗೆ ಬಂದುದು ಕ್ರಿ. ಶ. ೧೪೦೩

ರಲ್ಲಿ ಇಲ್ಲವೇ ೧೫ನೆಯ ಶತಮಾನದ ಪ್ರಾರಂಭದಲ್ಲಿ. ಅದಕ್ಕಿಂತ ಮೂರು ನೂರು ವರ್ಷ ಮೊದಲೇ ಹನ್ನೆರಡನೆಯ ಶತಮಾನದ ಆದಿಯಲ್ಲಿ ಇದಕ್ಕೆ 'ದಾರವಾಡ' ಎಂಬ ಹೆಸರಿತ್ತೆಂಬುದಕ್ಕೆ ಶಾಸನಗಳ ಆಧಾರವಿದೆ. ಇದಕ್ಕೆ ಪ್ರತಿಯಾಗಿ, ಧಾರವಾಡದ ಕೋಟೆಯನ್ನು ಕಟ್ಟಿಸಿದ್ದರಿಂದಲೇ ಅವನಿಗೆ 'ಧಾರಾರಾವ್' ಎಂಬ ಹೆಸರು ಬಂದಿತೆಂಬ ಹೇಳಿಕೆಯೂ ಇದೆ ಹದಿನೇಳನೆಯ ಶತಮಾನದಲ್ಲಿ ಈ ಭಾಗವು ಬಂಕಾಪುರ ಸರಕಾರದ ಕೈಯಲ್ಲಿದ್ದಾಗ ಇದಕ್ಕೆ ನಸೀರಾಬಾದ (ಇಲ್ಲವೇ ನಸರತಾಬಾದ್) ಎಂಬ ಹೆಸರೂ ಪ್ರಾಪ್ತವಾಗಿದ್ದಿತು. ಮೊಗಲರ ಕೈಯಲ್ಲಿದ್ದಾಗ 'ಫತೆಹ ಆಬಾದ್' ಎಂದೂ ಟೀಪೂಸುಲ್ತಾನನ ಕೈಯಲ್ಲಿದ್ದಾಗ 'ಖರ್ಷೀದ್ ಸವ್ವಾದ್' ಎಂದೂ ಕರೆಯುಲ್ಪಟ್ಟಿತು.

ಆರನೆಯ ಶತಮಾನದವರೆಗೆ ಧಾರವಾಡವು ಬನವಾಸಿಯ ಶಾತಕರ್ಣಿಗಳ ಕೈಯಲ್ಲಿದ್ದಿತು. ಕ್ರಿ. ಶ. ೭೬೦ ರಲ್ಲಿ ಕದಂಬರ ಕೈಯಲ್ಲಿ ಬಂದಿತು. ಪಶ್ಚಿಮ ಚಾಲುಕ್ಯರು ಕ್ರಿ. ಶ. ೯೭೩ ರಿಂದ ೧೧೬೫ರ ವರೆಗೆ ಇಲ್ಲಿ ಆಳಿದರು. ಕಲಚೂರ್ಯರು ೧೧೬೫ ರಿಂದ ೧೧೮೪ ರ ವರೆಗೆ ಅಧಿಪತಿಗಳಾಗಿದ್ದರು. ಹೊಯ್ಸಳರು ೧೧೯೨ ರಿಂದ ೧೨೦೩ ರ ಅವಧಿಯಲ್ಲಿ ಆಳಿದರು. ೧೨೦೫ ರಿಂದ ೧೨೯೫ ರ ವರೆಗೆ ದೇವಗಿರಿ ಯಾದವರ ಒಡೆತನಕ್ಕೆ ಇದು ಸೇರಿದ್ದಿತು. ೧೩೧೦ ರಲ್ಲಿ ಅಲ್ಲಾಉದ್ದೀನ್‌ಖಿಲ್ಜಿಯ ಸೇನಾಧಿಪತಿ ಮಲಿಕ್‌ಕಾಫರನು ದಾಳಿಮಾಡಿದನು. ಆಮೇಲೆ ೧೫ನೆಯ ಶತಮಾನದ ಆದಿಯಲ್ಲಿ ವಿಜಯನಗರದ ಅರಸರು ಇದನ್ನು ವಶಪಡಿಸಿಕೊಂಡರು. ವಿಜಯನಗರದ ಸರದಾರ ಧಾರಾರಾವ್ ಈ ಸ್ಥಳದ ಮಹತ್ವವನ್ನರಿತು ಇಲ್ಲಿ ಕೋಟೆಯೊಂದನ್ನು ಕಟ್ಟಿಸಲು ಇಚ್ಛೆಪಟ್ಟನು. ಧಾರವಾಡದ ಸುತ್ತುಮುತ್ತಲಿನ ಪ್ರದೇಶವನ್ನೆಲ್ಲ ನಿರೀಕ್ಷಿಸಿ ನವಿಲೂರ ಹತ್ತಿರ ಕೋಟೆ ಕಟ್ಟಿಸಲು ಪ್ರಾರಂಭಿಸಿದನು. ಆದರೆ ಅಲ್ಲಿ ಸುತ್ತಲೂ ಇರುವ ಗುಡ್ಡಗಳು ತನಗಿಂತ ವೈರಿಗಳಿಗೇ ಹೆಚ್ಚು ಅನುಕೂಲವಾಗಬಹುದೆಂದು ಹೊಳೆದದ್ದರಿಂದ ನವಿಲೂರಿನ ಹತ್ತಿರ ಕಟ್ಟಿಸುತ್ತಿದ್ದ ಕೋಟೆಯನ್ನು ಅಷ್ಟಕ್ಕೇ ಬಿಟ್ಟು, ಧಾರವಾಡದ ಪಶ್ಚಿಮಭಾಗಕ್ಕೆ ಸೇನಾವ್ಯವಸ್ಥೆಗೆ ಬೇಕಾದ ಆಯಕಟ್ಟಿನ ಸ್ಥಳವೊಂದನ್ನು ಆಯ್ಕೆಮಾಡಿ ಬೇರೊಂದನ್ನೇ ಕಟ್ಟಿಸಿದನು. ವಿಜಯನಗರ ಸಾಮ್ರಾಜ್ಯ ಪತನ ಹೊಂದಿದಾಗ ಇಲ್ಲಿದ್ದ ಅವರ ಸರದಾರನು ಸ್ವಾತಂತ್ರ್ಯ ಸಾರಿ ತಾನೇ ಅಧಿಪತಿ ಎಂದು ಪ್ರಕಟಿಸಿದನು. ಆದರೆ ೧೫೭೩ ರಲ್ಲಿ ಬಿಜಾಪುರದ ಅಲಿಆದಿಲ್‌ಶಾಹ್ ಧಾರವಾಡ ಕೋಟೆಯ ಮೇಲೆ ದಂಡೆತ್ತಿ ಬಂದನು. ಇಲ್ಲಿಯ ಸರದಾರನು ಆರುತಿಂಗಳವರೆಗೆ ಆ ಮುತ್ತಿಗೆಯನ್ನು ಎದುರಿಸಿ ನಿಂತನು. ಕೋಟೆಯಲ್ಲಿ ಆಹಾರ ಧಾನ್ಯಗಳ ಕೊರತೆಯುಂಟಾದುದರಿಂದ ಸರದಾರನು ದೀರ್ಘ ಸಮಯ ತಡೆಯಲಿಕ್ಕೆ ಸಾಧ್ಯವಾಗಲಿಲ್ಲ. ಕೂಡಲೇ ಧಾರವಾಡವು ಬಿಜಾಪುರ ಸುಲ್ತಾನರ ಕೈವಶವಾಯಿತು. 'ಬಂಕಾಪುರ ಸರಕಾರ'ದ ಒಂದು ಉಪ-ವಿಭಾಗವಾಗಿ ಇದು ಬಿಜಾಪುರ ಗವರ್ನರ್ ಅಬ್ದುಲ್‌ಕರೀಮ್ ಖಾನನ ಕೈಯಲ್ಲಿದ್ದಿತು.

ಮುಂದೆ ಕ್ರಿ. ಶ. ೧೬೮೫ ರಲ್ಲಿ ಛತ್ರಪತಿ ಶಿವಾಜಿಯು ಬಿಜಾಪುರ ಆಧಿಪತ್ಯದ ದಕ್ಷಿಣಭಾಗದ ಮೇಲೆ ಮುತ್ತಿಗೆ ಹಾಕಿದನು. ಆಗ ಆತನ ಸೈನ್ಯಾಧಿಕಾರಿ ಅಣ್ಣಾಜಿ ದತ್ತೋ ಎಂಬವನು ಹುಬ್ಬಳ್ಳಿ ಮತ್ತು ಧಾರವಾಡಗಳ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಕೊಳ್ಳೆಹೊಡೆದನು. ಮರಾಠರ ದಾಳಿಗಳನ್ನು ನಿಯಂತ್ರಿಸಲು ಮೊಗಲ್ ಚಕ್ರವರ್ತಿ ಔರಂಗಜೇಬನ ಮಗನಾದ ಸುಲ್ತಾನ್ ಮುಆಜ್ಜಮ್ ಎಂಬವನು ಹುಬ್ಬಳ್ಳಿ ಮತ್ತು ಧಾರವಾಡಗಳ ಮೇಲೇರಿ ಬಂದು ವಿಜಯಿಯಾದನು. ಕ್ರಿ. ಶ. ೧೬೮೫ ರ ನಂತರ ೬೮ ವರ್ಷಗಳವರೆಗೆ ಧಾರವಾಡವು ಮೊಗಲರ ಕೈಯಲ್ಲಿ ಇದ್ದಿತು. ಮೊಗಲ್ ಸಾರ್ವಭೌಮರ ಪ್ರತಿನಿಧಿಗಳಾದ ಮಿರ್ಜಾ ಸೈಫುಲ್ಲಾ ವಲದ್ ಮೊಹಮ್ಮದ್ ಮುರಾದ್, ಆಲಫ್ ಖಾನ್ ಕಲುಂದು ಖಾನ್, ಮೊಹಮ್ಮದ್ ನಸರುಲ್ಲಾ ಖಾನ್ ಮತ್ತು ಪೃಥ್ವೀರಾಜ ಎಂಬ ನಾಲ್ವರು ಆಗ ಇದನ್ನು ಆಳಿದರು. ಕ್ರಿ. ಶ. ೧೭೫೩ರಲ್ಲಿ ನಾನಾಸಾಹೇಬ ಪೇಷ್ವೆ ಧಾರವಾಡವನ್ನು ಮುತ್ತಿ ಯಶಸ್ವಿಯಾದನು. ೧೭೫೬ ರಲ್ಲಿ ಪೇಷ್ವೆ ಮತ್ತು ಸವಣೂರ ನವಾಬರಲ್ಲಿ ತಿಕ್ಕಾಟವಾಗಿ ಬಂಕಾಪುರ ಸರಕಾರದ ಆಡಳಿತವು ಈಚಲಕರಂಜಿಯ ಘೋರ್ಪಡೆ, ಪರಶುರಾಮ ಪಟವರ್ಧನ ಮತ್ತು ವಿಠ್ಠಲ ವಿಶ್ರಾಮ ಎಂಬವರ ಕೈಗೆ ಬಂದಿತು. ಅವರು ಧಾರವಾಡದ ಕೋಟೆಯನ್ನು, ದಿವಂಗತ ಪೇಷ್ವೆ ಬಾಜೀರಾಯನ ಸಹೋದರಿಯೂ, ಆಗಿನ ಪೇಷ್ವೆಯ ಅತ್ತೆಯೂ, ಈಚಲಕರಂಜಿಯ ಅಧಿಪತಿಯ ಹೆಂಡತಿಯೂ ಆದ ಅಣುಬಾಯಿ ಎಂಬವಳಿಗೆ ಬಿಟ್ಟು ಕೊಟ್ಟರು. ಕೆಲವು ಕಾಲ ಆಕೆಯ ಹೆಸರಿನಿಂದಲೇ ಈ ಕೋಟೆಯ ಆಡಳಿತ ನಡೆಯಿತು.

ಕ್ರಿ. ಶ. ೧೭೬೪ ರಲ್ಲಿ ಮೈಸೂರಿನ ಹೈದರ್‌ಅಲಿಯು ಉತ್ತರದ ಕಡೆಗೆ ದಂಡೆತ್ತಿಬಂದನು. ಅವನ ಸೇನಾಧಿಪತಿ ಫಜಲುಲ್ಲಾಖಾನ್ ಎಂಬವನು ಧಾರವಾಡವನ್ನು ಗೆದ್ದನು. ಆದರೆ ಕೇವಲ ಮೂರು ತಿಂಗಳ ಅವಧಿಯಲ್ಲಿಯೇ ಪೇಷ್ವೆ ಮಾಧವರಾಯನು ದಂಡೆತ್ತಿಬಂದು ನವೆಂಬರ್ ೧೭೬೪ ರಲ್ಲಿ ಮತ್ತೆ ಇದನ್ನು ವಶಪಡಿಸಿಕೊಂಡನು.

ಹದಿನಾಲ್ಕು ವರ್ಷಗಳ ನಂತರ ಕ್ರಿ. ಶ. ೧೭೭೮ ರಲ್ಲಿ ಟೀಪುಸುಲ್ತಾನನು ಹತ್ತುಸಾವಿರ ಸವಾರರೊಡನೆ ಬಂದು ಧಾರವಾಡವನ್ನು ಮುತ್ತಿದನು. ಆದರೆ ಪ್ರಬಲರಾದ ಮರಾಠರು ಅವನನ್ನು ಹಿಂದಕ್ಕೆ ಓಡಿಸಿದರು. ನಿರಾಶನಾದ ಟೀಪು ಕೆಲವೇ ತಿಂಗಳಲ್ಲಿ ಮತ್ತೆ ಧಾರವಾಡದ ಮೇಲೇರಿ ಬಂದನು. ಈ ಸಲ ಅವನ ಕೈ ಮೇಲಾಗಿ ಮರಾಠರು ಸೋತರು. ಟೀಪುವಿನ ಸೈನಿಕರು ಧಾರವಾಡ ಪಟ್ಟಣವನ್ನು ಸುಲಿಗೆಮಾಡಿ ಕೊಳ್ಳೆಹೊಡೆದರು. ಟೀಪುವಿನ ಕಾಲದಲ್ಲಿ ಧಾರವಾಡ ಕೋಟೆಯಲ್ಲಿ ಹಿತ್ತಾಳೆ, ಬೆಳ್ಳಿ ಹಾಗೂ ಬಂಗಾರದ ನಾಣ್ಯಗಳನ್ನು ಸಿದ್ಧಪಡಿಸಿ ಉಪಯೋಗದಲ್ಲಿ ತರಲಾಯಿತು.

ಹನ್ನೆರಡು ವರ್ಷಗಳ ನಂತರ ಕ್ರಿ. ಶ. ೧೭೯೦ ರಲ್ಲಿ ಮರಾಠರೂ ಬ್ರಿಟಿಶರೂ ಒಂದಾಗಿ ಬಂದು ದಾಳಿ ಮಾಡಿದರು. ಧಾರವಾಡದ ಸುತ್ತಮುತ್ತಲಿನ ಕೋಟೆಗಳೆಲ್ಲ ಅವರ ವಶವಾದವು. ಹುಬ್ಬಳ್ಳಿಯ ಕೋಟೆಯೂ ಅವರ ಕೈವಶವಾಯಿತು. ಆದರೆ ಧಾರವಾಡ ಕೋಟೆಯನ್ನು ಗೆಲ್ಲಲಿಕ್ಕೆ ಸಾಧ್ಯವಾಗಲಿಲ್ಲ. ಆಗ ಇಲ್ಲಿ ಟೀಪುಸುಲ್ತಾನನ ಪ್ರತಿನಿಧಿ ಬದರುದ್ ಜಮಾನ್‌ಖಾನ್ ಸೇನಾಧಿಪತಿಯಾಗಿದ್ದನು. ಮರಾಠರು ಮತ್ತು ಇಂಗ್ಲೀಷರು ದಾಳಿಮಾಡಬಹುದೆಂದು ಮೊದಲೇ ಊಹಿಸಿ ಟೀಪುಸುಲ್ತಾನ್ ಹೆಚ್ಚಿನ ಸೈನ್ಯವನ್ನು ಧಾರವಾಡಕ್ಕೆ ಕಳಿಸಿದ್ದನು. ಮರಾಠರು ೧೮.೯.೧೭೯೦ ರಂದು ಮುತ್ತಿಗೆಹಾಕಿದರು. ೩೦.೧೦.೧೭೯೦ ರಂದು ಬ್ರಿಟಿಷ್ ಸೈನ್ಯವೂ ಅವರೊಡನೆ ಸೇರಿತು. ಆದರೆ ಬದರುದ್ ಜಮಾನ್‌ಖಾನನು ಆರು ತಿಂಗಳುಗಳವರೆಗೆ ಮಿಸುಕಲಿಲ್ಲ. ಆಮೇಲೆ ಮರಾಠರೂ ಬ್ರಿಟಿಶರೂ ಆತನ ಸಂಗಡ ಎಪ್ರಿಲ್ ೧೭೯೧ ರಲ್ಲಿ ಒಪ್ಪಂದ ಮಾಡಿಕೊಂಡು ಕುತಂತ್ರದಿಂದ ಅವನನ್ನು ಹಿಡಿದು ಕೋಟೆಯನ್ನು ಕೊಳ್ಳೆಹೊಡೆದರು. ಹಂಚಿಕೊಳ್ಳುವಾಗ ಧಾರವಾಡವು ಮರಾಠರ ಪಾಲಿಗೆ ಬಂದಿತು. ಬ್ರಿಟಿಶರಿಗೆ ಮತ್ತು ಅವರ ಬೆಂಬಲಿಗನಾದ ಹೈದರಾಬಾದಿನ ನಿಜಾಮನಿಗೆ ಕೊಪ್ಪಳ, ಬಹಾದ್ದರ್ ಬಂಡೆ ಮೊದಲಾದ ಕೋಟೆಗಳು ಹೋದವು. ಮುಂದೆ ಇಪ್ಪತ್ತಾರುವರ್ಷ ಮರಾಠರು ಧಾರವಾಡದಲ್ಲಿದ್ದರು. ಕ್ರಿ. ಶ ೧೮೧೭ರಲ್ಲಿ ಮರಾಠರು ಮತ್ತು ಇಂಗ್ಲೀಷರಲ್ಲಿ ಒಪ್ಪಂದವಾಗಿ ಪೇಶ್ವೆಯು ಧಾರವಾಡದ ಕೋಟೆಯನ್ನು ದಂಡಿನ ವೆಚ್ಚಕ್ಕೆಂದು ಇಂಗ್ಲೀಷರಿಗೆ ಬಿಟ್ಟುಕೊಟ್ಟನು. ಲೆಫ್ಟಿನೆಂಟ್‌ಕರ್ನಲ್ ನ್ಯೂವೆಲ್ ೧೩.೬.೧೯೧೭ ರಂದು ತನ್ನ ಸೈನ್ಯದೊಡನೆ ಧಾರವಾಡ ಕೋಟೆಯನ್ನು ಪ್ರವೇಶಿಸಿದನು. ಸರ್‌ಥಾಮಸ್ ಮುನ್ರೋ ಕೂಡ ಅವನ ಸಹಾಯಕ್ಕೆ ಬಂದನು. ಸತತವಾಗಿ ದಾಳಿ ಪ್ರತಿದಾಳಿಗಳಿಗೆ ಈಡಾಗುತ್ತ ಬಂದಿದ್ದ ಧಾರವಾಡವು ಕ್ರಿ. ಶ. ೧೮೧೭ ರಿಂದ ೧೯೪೭ (ಆಗಸ್ಟ ೧೫) ರ ವರೆಗೆ ೧೩೦ ವರ್ಷ ಬ್ರಿಟಿಶರ ಕೈಯಲ್ಲಿ ಇದ್ದಿತು.

ಈಗಿನ ಕಾಮನ ಕಟ್ಟೆ, ಶುಕ್ರವಾರ ಪೇಟೆ, ಮಂಗಳವಾರ ಪೇಟೆ, ಮತ್ತು ಕೆರೆಯ ಕೆಳಗಿನ ಓಣಿಗಳೇ ಮೂಲ ಧಾರವಾಡ ಪಟ್ಟಣ. ಇದಕ್ಕೆ ಕಸಬಾ ಧಾರವಾಡ ಎಂದೂ ಕರೆಯುತ್ತಿದ್ದರು. ಇದರ ಸುತ್ತಲೂ ಎತ್ತರವಾದ ಮಣ್ಣಿನ ಗೋಡೆ ಇದ್ದಿತು. ಮಣ್ಣಿನ ಕಿಲ್ಲೆ ಎಂದೇ ಹೆಸರು. 'ಮಣಕಿಲ್ಲೆ' ಎನ್ನುವ ರೂಢಿ ಈಗಲೂ ಇದೆ. ಇದಕ್ಕೆ ಐದು ಅಗಸೆಗಳಿದ್ದವು. ಇವು ಭದ್ರವಾದ ಮಹಾದ್ವಾರಗಳು. ನೈಋತ್ಯ ಭಾಗದ ಅಗಸೆಯೇ ದೊಡ್ಡ ಕಿಲ್ಲೆಗೆ ಅಭಿಮುಖವಾಗಿದ್ದಿತು. ವಾಯುವ್ಯಕ್ಕೆ ಹೆಬ್ಬಳ್ಳಿ ಅಗಸೆ. ಇದಕ್ಕೆ ಮುದಿ ಹನುಮಾನ್ ಮಹಾದ್ವಾರವೆಂದೂ ಕರೆಯುತ್ತಿದ್ದರು. ಈಶಾನ್ಯಕ್ಕೆ ನವಿಲೂರ ಅಗಸೆ. ಆಗ್ನೇಯಕ್ಕೆ ನುಚ್ಚಂಬಲಿ ಅಗಸೆ. ಹೆಬ್ಬಳ್ಳಿ ಅಗಸೆಯಿಂದ ಈಚೆಗೆ ತೇಗೂರು ಅಗಸೆ ಇದ್ದಿತು. ತೇಗೂರು ಅಗಸೆ ಮತ್ತು ನೈಋತ್ಯ

ಮಹಾದ್ವಾರಗಳ ಮಧ್ಯದಲ್ಲಿ 'ಕಳ್ಳಗಿಂಡಿ' (ಚಿಕ್ಕದ್ವಾರ) ಯೊಂದಿದ್ದು, ವೈರಿಗಳು ಆಕ್ರಮಣ ಮಾಡಿದಾಗ ಪಾರಾಗಲು ಅದನ್ನು ಉಪಯೋಗಿಸುತ್ತಿದ್ದರು.

ಈ ಮೊದಲು ಉಲ್ಲೇಖಿಸಿದಂತೆ ಕ್ರಿ. ಶ. ೧೪೦೩ ರಲ್ಲಿ ವಿಜಯನಗರ ಸರದಾರ ಧಾರಾರಾವ ಮೂಲ ಧಾರವಾಡದ ನೈಋತ್ಯಕ್ಕೆ ಕಿಲ್ಲೆಯೊಂದನ್ನು ಕಟ್ಟಿಸಿದನಷ್ಟೇ. ಇದು ಎಪ್ಪತ್ತಾರು ಎಕರೆ ಭೂಮಿಯ ಮೇಲೆ ಹರಡಿದ್ದಿತು. ವೃತ್ತಾಕಾರದ ಕೋಟೆಯ ಏಳು ಪದರಿನ ಗೋಡೆಗಳ ಮೇಲೆ ಉತ್ತರಕ್ಕೆ ಮೂರು, ದಕ್ಷಿಣಕ್ಕೆ ನಾಲ್ಕು, ಪೂರ್ವಕ್ಕೆ ಒಂದು—ಹೀಗೆ ಎಂಟು ಗೋಪುರಗಳಿದ್ದವು. ಕೋಟೆಯನ್ನು ಪ್ರವೇಶಿಸಬೇಕಾದರೆ ಬೇರೆ ಬೇರೆ ಕಡೆಗೆ ನೇರವಲ್ಲದ ನಾಲ್ಕು ಹೆಬ್ಬಾಗಿಲುಗಳನ್ನು ದಾಟಬೇಕಾಗುತ್ತಿತ್ತು. ವಿಜಾಪುರದ ಸುಲ್ತಾನರು ಮತ್ತು ನಂತರ ಮೊಗಲರು ಈ ಕೋಟೆಯನ್ನು ಹೆಚ್ಚು ಭದ್ರಪಡಿಸಿದರು. ದಕ್ಷಿಣ ದಿಕ್ಕಿನ ಗೋಪುರವೊಂದಕ್ಕೆ ಫತೇಹ ಬುರುಜು (ಗೆಲುವಿನ ಗೋಪುರ) ಎಂದು ಕರೆಯಲಾಗುತ್ತಿತ್ತು. ಪಶ್ಚಿಮ ಭಾಗಕ್ಕೆ ಜಲ ಸಂಗ್ರಹಾಲಯವಿದ್ದಿತು. ಕೋಟೆಯ ಗೋಡೆಯ ಒಳಗೆ ಪಶ್ಚಿಮಕ್ಕೆ ದುರ್ಗಾದೇವತೆಯ ಗುಡಿ ಇದ್ದಿತು. ಅದಕ್ಕಿಂತ ಮೊದಲು "ಸದರ್" ಎಂದು ಕರೆಯಲಾಗುತ್ತಿದ್ದ ಆಡಳಿತದ ಮುಖ್ಯ ಕಚೇರಿಯ ಭವ್ಯ ಭವನ ಕಂಗೊಳಿಸುತ್ತಿತ್ತು. ಸರ್ವಾಧಿಕಾರಿಯಾದ ಸೇನಾಧಿಪತಿಯು ಇಲ್ಲಿಂದ ಆಡಳಿತ ನಡೆಸುತ್ತಿದ್ದನು. ಫತೆಹ ಬುರುಜ್ ಮತ್ತು ಸದರ್‌ಗಳ ಮಧ್ಯದಲ್ಲಿ ಸೇನಾಧಿಪತಿಯ ವಿಹಾರ ವನವು ಹಬ್ಬಿದ್ದಿತು. ಇದರಲ್ಲಿ ಸುಂದರ ಹೂದೋಟಗಳಿದ್ದವು. ಕೋಟೆಯ ಒಳಗೇ ವಸತಿಗೃಹಗಳು, ಉಗ್ರಾಣಗಳು, ದೇವಾಲಯ ಮತ್ತು ಮಸೀದಿ ಇದ್ದವು. ದುಷ್ಟ ವ್ಯಕ್ತಿಗಳ ಸಂಹಾರಕ್ಕೆ ರಣ-ಸ್ತಂಭ (ಗಲ್ಲುಗಂಬ) ಇದ್ದಿತು. ಫತೆಹ ಬುರುಜಿನ ದಕ್ಷಿಣಕ್ಕೆ ಮದ್ದು ಹಾಗೂ ಶಸ್ತ್ರ ಸಂಗ್ರಹಾಲಯವಿತ್ತು. ಕೋಟೆಯ ಗೋಡೆ ಹಾಲಗೆರೆಯ ದಂಡೆಯವರೆಗೂ ಬಂದಿದ್ದಿತು. ಈ ಹಾಲಗೆರೆಗೆ ಆಗ 'ಮೋತಿ ತಾಲಾಬ್' ಎಂದು ಕರೆಯುತ್ತಿದ್ದರು. ಕೋಟೆಯ ಸುತ್ತಲೂ ಹೊರಭಾಗದಲ್ಲಿ ೨೦-೨೫ ಅಡಿ ಆಳದ, ೨೫-೩೦ ಅಡಿ ಅಗಲವಾದ 'ಅಗಳತ' (ತಗ್ಗು) ಮತ್ತು ಇಂಥದೇ ಇನ್ನೊಂದು ಅಗಳತ ಕೋಟೆಗೋಡೆಯ ಒಳಭಾಗದಲ್ಲಿಯೂ ಇದ್ದವು. ಹಾಲಗೆರೆಯ ನೀರಿನಿಂದಲೇ ಈ ಅಗಳತಗಳನ್ನು ತುಂಬಲಾಗುತ್ತಿತ್ತು.

ಸೊಲ್ಲಾಪುರದಿಂದ ಉತ್ತರ ಕರ್ನಾಟಕವನ್ನೊಳಗೊಂಡ ಭೂಪ್ರದೇಶಕ್ಕೆ ಆಗ ಸದರ್ನ ಮರಾಠಾ ವಿಭಾಗವೆಂದು ಕರೆಯುತ್ತಿದ್ದರು. ಇದಕ್ಕೆ ಪ್ರಿನ್ಸಿಪಾಲ್ ಪೊಲಿಟಿಕಲ್ ಏಜಂಟನೇ ಪ್ರಧಾನ ಆಡಳಿತಾಧಿಕಾರಿಯಾಗಿದ್ದನು. ಈತನೇ ಧಾರವಾಡದ ಕಲೆಕ್ಟರನೂ ಆಗಿದ್ದುದರಿಂದ ಧಾರವಾಡದ ಕೋಟೆಯಲ್ಲಿಯೇ ಆತನ ಕಚೇರಿ ಇದ್ದಿತು. ಈಗಿನ ಧಾರವಾಡ, ಬೆಳಗಾಂವ, ಬಿಜಾಪುರ, ಸೊಲ್ಲಾಪುರ ಜಿಲ್ಲೆಗಳ ಪ್ರದೇಶ ಈತನ ಆಡಳಿತಕ್ಕೆ ಒಳಪಟ್ಟಿದ್ದಿತು. ಅಂಚೆ ಕಚೇರಿ ಮತ್ತು ಪ್ರಥಮ

ಮ್ಯುನಿಸಿಪಾಲಿಟಿ ಕಚೇರಿಗಳು ಕೂಡ ಕೋಟೆಯಲ್ಲಿಯೇ ಇದ್ದವು. ಕ್ರಿ. ಶ. ೧೮೫೯ ರ ವರೆಗೂ ಕೋಟೆಯ ಹೆಬ್ಬಾಗಿಲುಗಳನ್ನು ಕಾವಲುಗಾರರು ಭದ್ರವಾಗಿ ಕಾಯುತ್ತಿದ್ದರು. ರಾತ್ರಿ ಎಂಟು ಗಂಟೆಗೆ ಕೋಟೆಯ ಬಾಗಿಲುಗಳನ್ನು ಮುಚ್ಚಲಾಗುತ್ತಿತ್ತು. ಮಧ್ಯಾಹ್ನ ಸರಿಯಾಗಿ ಹನ್ನೆರಡು ಗಂಟೆಗೆ ಎಲ್ಲರಿಗೂ ಗೊತ್ತಾಗಲೆಂದು ದಿನಾಲು ತೋಪು ಹಾರಿಸಲಾಗುತ್ತಿತ್ತು. ಕ್ರಿ. ಶ. ೧೮೩೦ ರಲ್ಲಿ ಇಂಗ್ಲೀಷರು ತಾವು ಮಾತ್ರ ಆಡ್ಡಾಡಲಿಕ್ಕೆಂದು ಕೋಟೆಗೆ ಒಂದು ಹೊಸ ದಾರಿಯನ್ನು ಮಾಡಿಸಿದರು. ಕ್ರಿ. ಶ. ೧೮೫೭ ರಲ್ಲಿ ಸಿಪಾಯಿ ದಂಗೆಯ ಕಾಲಕ್ಕೆ ನರಗುಂದ ಬಾಬಾಸಾಹೇಬ ಹಾಗೂ ಮುಂಡರಗಿಯ ಗೌಡರು ಧಾರವಾಡ ಕೋಟೆಯನ್ನು ಮುತ್ತಬಹುದೆಂಬ ಶಂಕೆ ಇದ್ದುದರಿಂದ ಇಲ್ಲಿಯ ಕಲೆಕ್ಟರನು ೧೮೫೯ ರಲ್ಲಿ ಧಾರವಾಡದ ಕೋಟೆಯ ಗೋಡೆಗಳನ್ನು. ದಾಳಿಕಾರರಿಗೆ ಅನುಕೂಲವಾಗಬಾರದೆಂಬ ಉದ್ದೇಶದಿಂದ, ಕೆಡವಿಸಿಬಿಟ್ಟನು. ೧೮೭೫ರ ವರೆಗೂ ಬ್ರಿಟಿಶರ ಸೈನ್ಯವು ಇದೇ ಕೋಟೆಯಲ್ಲಿ ಇಡಲ್ಪಟ್ಟಿತ್ತು. ಆನಂತರ ಅದನ್ನು ಸ್ಥಳಾಂತರಿಸಲಾಯಿತು. ೧-೪-೧೮೭೬ ರಂದು ಕೋಟೆಯ ಪ್ರದೇಶದ ಬಹಳಷ್ಟು ಭಾಗವನ್ನು ಧಾರವಾಡ ಮ್ಯುನಿಸಿಪಾಲಿಟಿಗೆ ಕೊಟ್ಟುಬಿಟ್ಟರು. ೧೯೬೭ ರ ನಂತರ ಇನ್ನಷ್ಟು ಭಾಗವನ್ನು ಲಿಂಗಾಯತ ಅಸೋಸಿಯೇಶನ್ನಿನವರಿಗೆ ಕೊಡಲಾಯಿತು. ಕೋಟೆಯ ದಕ್ಷಿಣ ಭಾಗದ ಹೆಬ್ಬಾಗಿಲನ್ನು ಕೆಡವಲಾಯಿತಲ್ಲದೇ. ಅಗಳತವನ್ನು ಕಲ್ಲುಮಣ್ಣುಗಳಿಂದ ತುಂಬಿ ಬಿಡಲಾಯಿತು. ಅದರ ಮೇಲೆಯೇ ಲಿಂಗಾಯತ ಟೌನ್ ಹಾಲ್ ಕಟ್ಟಿಸಲಾಗಿದೆ. ಕೋಟೆಯ ಇನ್ನೊಂದು ಭಾಗದಲ್ಲಿ ಸಿವ್ಹಿಲ್ ಹಾಸ್ಪಿಟಲ್ ನಿರ್ಮಾಣಗೊಂಡಿದೆ. ಉಳಿದ ಭಾಗವನ್ನು ಖಾಸಗಿ ಉಪಯೋಗಕ್ಕಾಗಿ ಕೊಡಲಾಗಿದೆ. ಮರಾಠಾ ಕಮಾಂಡರನ ಅರಮನೆಯನ್ನು ಕೆಡವಿ, ಆ ಸ್ಥಳದಲ್ಲಿ ನಿವಾಸಕ್ಕಾಗಿ 'ಚಾಳ್' ಕಟ್ಟಿಸಲಾಗಿದೆ.

ಕೋಟೆಯ ಪ್ರದೇಶ ಬಿಟ್ಟ ನಂತರ ಕಲೆಕ್ಟರರ ಕಚೇರಿ ಮತ್ತು ನಿವಾಸ ಸ್ಥಾನಗಳಿಗಾಗಿ ಈಗ ಇರುವ ಕಟ್ಟಡಗಳೇ ಆಗ ನಿರ್ಮಾಣಗೊಂಡವು. 'ಕಲೆಕ್ಟರ್ ಕಂಪೌಂಡ್' ಎಂದೇ ಕರೆಯಲಾಗುತ್ತಿತ್ತು. ಆದರಲ್ಲಿ ಒಟ್ಟು ಎಂಟು ಭವನಗಳಿದ್ದವು. ಸಿವ್ಹಿಲ್ ಸ್ಟೇಶನ್ ಏರಿಯಾ ಎನ್ನುವ ವಿಭಾಗಕ್ಕೆ ಇದು ಒಳಪಟ್ಟಿತು. ಇದರಲ್ಲಿ ಮಿಶನ್ ಕಂಪೌಂಡ್ ಅಭಿವೃದ್ಧಿಹೊಂದಿತು. ಕ್ರಿ. ಶ. ೧೮೬೭ ರಲ್ಲಿ ಬಾಸೆಲ್ ಮಿಶನ್ ಹೈಸ್ಕೂಲ್ ಪ್ರಾರಂಭಿಸಲ್ಪಟ್ಟಿತು. ಈ ವಿಭಾಗದಲ್ಲಿ ಎಂ. ಎಸ್. ಎಂ. ರೇಲ್ವೇ ಕಚೇರಿಗಳು ಸಿದ್ಧವಾದವು. ೧೮೭೬ ರಲ್ಲಿ ಮೆನ್ಸ್ ಟ್ರೇನಿಂಗ್ ಕಾಲೇಜನ್ನು ಕಟ್ಟಲಾಯಿತು. ಶಾಲೆಗಳು ಸ್ಥಾಪಿತಗೊಂಡವು. ಕೆಥೋಲಿಕ್ ಚರ್ಚ್ ಮತ್ತು ಸೇಂಟ್ ಜೋಸೆಫ್ಸ್ ಹೈಸ್ಕೂಲ್ ಕಟ್ಟಲ್ಪಟ್ಟವು. ಡಿಸ್ಟ್ರಿಕ್ಟ್ ಕೋರ್ಟ್, ಅಂಚೆ ಕಚೇರಿ (ಈಗ ಹಳೆಯ ಪೋಸ್ಟ್ ಆಫೀಸ್ ಎನ್ನಲಾಗುವ ಕಟ್ಟಡ) ಮತ್ತು ಇತರ ಕೆಲವು ಸರಕಾರಿ ಕಟ್ಟಡಗಳು ಮೇಲೆದ್ದವು. ಹೆಚ್ಚಾಗಿ ಇಂಗ್ಲೀಷ್ ಕುಟುಂಬಗಳೇ

ಇಲ್ಲಿ ಇದ್ದವು. ಕೆಲವು ಫಾರಸಿ ಕುಟುಂಬಗಳಿದ್ದವು. ಕಲೆಕ್ಟರ್ ಕಂಪೌಂಡಿನ ಒಂದು ಭಾಗಕ್ಕೆ ಕೆಲವು ಕಾಲ ಬೇಬರ್‌ಪುರ ಎಂಬ ಹೆಸರಿದ್ದಿತು. ಮಿ॥ ಬೇಬರ್ ಎಂಬ ಕಲೆಕ್ಟರನಿಂದ ಈ ಹೆಸರು ಬಂದಿತು.

ಧಾರವಾಡದಲ್ಲಿ ಬೆಳವಣಿಗೆ ಹೊಂದಿದ ಇನ್ನೊಂದು ಮಹತ್ವದ ಭಾಗ 'ಕ್ಯಾಂಟೋನ್‌ಮೆಂಟ್ ಏರಿಯಾ'. ಈಗ ಪೋಲೀಸ್ ಹೆಡ್‌ಕ್ವಾರ್ಟರ್ಸ್ ಇರುವ ಭಾಗದಲ್ಲಿ ೩೩೧ ಎಕರೆ ವಿಸ್ತಾರವಾದ ಭೂಮಿಯನ್ನು ಇದಕ್ಕೆ ಉಪಯೋಗಿಸ ಲಾಯಿತು. ಇಂಗ್ಲೀಷ್ ಸೈನ್ಯದ ಠಾಣೆಯೇ ಇದು. ೧೯ನೆಯ ಶತಮಾನದ ಅಂತ್ಯದ ವರೆಗೆ ಧಾರವಾಡದ ಈ ಭಾಗವು ಸೈನ್ಯದ ನಿವಾಸ ಸ್ಥಾನವೆಂದು ಬಹಳ ಮಹತ್ವ ವನ್ನು ಪಡೆದಿದ್ದಿತು. ಆಮೇಲೆ ಸೈನ್ಯದ ಠಾಣೆಗೆ ಬೆಳಗಾಂವಿಯಲ್ಲಿ ವ್ಯವಸ್ಥೆ ಯಾದುದರಿಂದ ಸೈನ್ಯವೆಲ್ಲ ಅಲ್ಲಿಗೆ ತೆರಳಿತು. ಇದರಿಂದ ಈ ಭಾಗದ ಮಹತ್ವ ಕಡಮೆಯಾಯಿತು. ಈ ಭಾಗದಲ್ಲಿ ಆಮೇಲೆ ಬೇರೆ ಬೇರೆ ಉದ್ದೇಶಕ್ಕಾಗಿ ಕಟ್ಟಡ ಗಳು ನಿರ್ಮಾಣಗೊಂಡವು.

೧೯ನೆಯ ಶತಮಾನದವರೆಗೆ ಧಾರವಾಡದ ಸುತ್ತ ಮುತ್ತ ಸಮೀಪದಲ್ಲಿ ಹಳ್ಳಿಗಳಿದ್ದವು. ಈಗ ಅವೆಲ್ಲವೂ ಧಾರವಾಡ ನಗರದ ಭಾಗವಾಗಿ ಬೆಳೆದಿವೆ. ಹೊಸ ಎಲ್ಲಾಪುರದ ವಸತಿಯು ಬೇರೊಂದು ಹಳ್ಳಿಯೇ ಆಗಿದ್ದಿತು. ಈಗ ಅದೊಂದು ಓಣಿ. ಮೈಲಾರಲಿಂಗನ ಗುಡ್ಡದ ಹತ್ತಿರ ಸಣ್ಣಕ್ಕಿ ಪಾಪ್ಪಾಪುರ ಎಂಬ ಹಳ್ಳಿ ಇತ್ತು. ಇಲ್ಲಿದ್ದ ಸೈನಿಕರು ಈ ಹಳ್ಳಿಯ ಜನರಿಗೆ ತೊಂದರೆ ಕೊಡುತ್ತಿದ್ದುದ ರಿಂದ ಅವರೆಲ್ಲ ತಮ್ಮ ಭದ್ರತೆಯ ದೃಷ್ಟಿಯಿಂದ ಊರನ್ನು ತ್ಯಜಿಸಿ ಧಾರವಾಡದ ಮಣ್ಣಿನ ಕೋಟೆಯ ಗೋಡೆಯ ಒಳಭಾಗಕ್ಕೆ ಬಂದು ನೆಲಸಿದರು. ಆ ಊರು ಹೇಳ ಹೆಸರಿಲ್ಲದಂತೆ ಮರೆಯಾಯಿತು. ನಾರಾಯಣಪುರ, ಕಮಲಾಪುರ, ಮಾಳಾ ಪುರ, ಹೊಸ ಮಾಳಾಪುರ, ಗುಲಗಂಜಿಕೊಪ್ಪ ಮತ್ತು ಸೈದಾಪುರಗಳು ಮೊದಲು ಬೇರೆ ಬೇರೆ ಗ್ರಾಮಗಳು. ಈಗ ಓಣಿಗಳು. ಕೆಂಪ್ರಗೆರೆ ಸುತ್ತ, ಮಿಶನ್ ಕಂಪೌಂಡಿಗೆ ಹೊಂದಿ ಪಾಲ್ಕಿ ಹೊರುವ ಭೋಯಿಗಳು ವಾಸಿಸುತ್ತಿದ್ದರು. ಕಲೆಕ್ಟರ್ ಕಚೇರಿಯ ಮುಸ್ಲಿಂ ಸೇವಕರು, ಸ್ಥಳೀಯ ಕ್ರಿಶ್ಚನ್ ಕುಟುಂಬಗಳು, ಹೊಲೆಯರು, ಮೇಸ್ತ್ರಿ ಯರು, ಬೇಡರು ಮತ್ತು ಇಂಥ ಇತರರಿಗೆ ಇದು ವಸತಿಸ್ಥಾನವಾಗಿತ್ತು. ಲೈನ್ ಬಾಜಾರ್‌ವರೆಗೆ ಈ ಓಣಿ ವಿಸ್ತರಿಸಿತ್ತೆಂದು ಹೇಳಬಹುದು. ಇಂಗ್ಲೀಷರು ಧಾರವಾಡಕ್ಕೆ ಬರುವವರೆಗೆ ಬೇರೆ ಬೇರೆ ಇದ್ದ ಹಳ್ಳಿಗಳು ಅವರು ಬಂದನಂತರ ಮ್ಯುನಿಸಿಪಾಲಿಟಿ ಸ್ಥಾಪಿತಗೊಂಡಾಗ ಧಾರವಾಡ ಪಟ್ಟಣಕ್ಕೆ ಸೇರಿದವು.

ಪೇಶ್ವೆಯವರ ಕಾಲದಲ್ಲಿ ಧಾರವಾಡದ ಕೋಟೆಯಲ್ಲಿ ಸೈನ್ಯವಿದ್ದಿತಷ್ಟೇ. ಸೈನ್ಯಾಧಿಕಾರಿಗಳು ಅಲ್ಲಿ ಇರುತ್ತಿದ್ದರು. ಆ ಕೋಟೆಯ ಹೊರಗೆ, ಮೂಲ

ಧಾರವಾಡ ಪಟ್ಟಣದಲ್ಲಿ ಮಾರುಕಟ್ಟೆ ಇತ್ತು. ಇದಕ್ಕೆ ಬೇರೆ ಅಧಿಕಾರಿಗಳಿದ್ದರು. ಕೋಟೆಯ ಅಧಿಕಾರಿಗಳಿಗೂ, ಮಾರುಕಟ್ಟೆಯ ಅಧಿಕಾರಿಗಳಿಗೂ ಹೊಂದಿಕೆ ಆಗದೇ ಜಗಳ ಪ್ರಾರಂಭವಾಯಿತು. ಮಾರುಕಟ್ಟೆಯವರು ಕೋಟೆಯವರಿಗೆ ಏನನ್ನೂ ಕೊಳ್ಳಲು ಆಸ್ಪದ ಮಾಡಿಕೊಡಲಿಲ್ಲ. ಇದರಿಂದ ಹಾಹಾಕಾರ ಉಂಟಾಯಿತು. ಇವರಿಬ್ಬರ ವ್ಯಾಜ್ಯ ಪುಣೆಯ ಪೇಶ್ವೆಯವರೆಗೂ ಹೋಯಿತು. ಪೇಶ್ವೆಯು ಸಾರಾಸಾರ ವಿಚಾರ ಮಾಡಿದ ನಂತರ ಧಾರವಾಡ ಕೋಟೆಯ ಜನರ ಉಪಯೋಗಕ್ಕಾಗಿಯೇ ಹೊಸ ಮಾರುಕಟ್ಟೆ ನಿರ್ಮಿಸಲು ಪಟ್ಟಣದ ಉತ್ತರ ಭಾಗಕ್ಕೆ ವಿಶಾಲವಾದ ಸ್ಥಳವೊಂದನ್ನು ಒದಗಿಸಿ ಎಲ್ಲ ಅನುಕೂಲತೆಗೂ ಅವಕಾಶ ಮಾಡಿಕೊಟ್ಟನು. ಇದಕ್ಕೆ ಆದಿತ್ಯವಾರ ಪೇಟೆ ಎಂದು ಹೆಸರಿಟ್ಟರು. ವ್ಯಾಪಾರದ ಮಳಿಗೆಗಳು, ಗುದಾಮುಗಳು, ವ್ಯಾಪಾರಸ್ಥರ ಮನೆಗಳು ಇಲ್ಲಿ ದಟ್ಟವಾಗಿ ಬೆಳೆದು ಬಂದವು. ಕಾಲಾಂತರದಲ್ಲಿ ಈ ಆದಿತ್ಯವಾರ ಪೇಟೆಗೆ 'ಹಾ ವೇ ರಿ ಪೇ ಟೆ' ಎಂಬ ಹೆಸರು ಬಂದಿತು. ಇಂದಿನ ಮೃತ್ಯುಂಜಯ ನಗರವೇ ಈ ಹಾವೇರಿಪೇಟೆ.

ಇಂಗ್ಲೀಷರ ಕಾಲದಲ್ಲಿ ಸುತ್ತಮುತ್ತಲಿನ ದೇಸಾಯಿ ದೇಶಪಾಂಡೆ ದೇಶಮುಖ ಮೊದಲಾದವರ ಚಿಕ್ಕ ಚಿಕ್ಕ ಸಂಸ್ಥಾನಗಳೆಲ್ಲ ಧಾರವಾಡದ ಅಧೀನದಲ್ಲಿದ್ದವು. ಸಂಸ್ಥಾನಿಕರು ತಮ್ಮ ದಿವಾನರನ್ನು, ಪ್ರತಿನಿಧಿಗಳನ್ನು, ಧಾರವಾಡದಲ್ಲಿ ಇಟ್ಟಿದ್ದರು. ಇವರಿಗೆ ಆಗ 'ವಕೀಲ'ರೆಂದು ಕರೆಯಲಾಗುತ್ತಿತ್ತು. ಇವರೆಲ್ಲರೂ ಸೌಕರ್ಯದ ದೃಷ್ಟಿಯಿಂದ ಹಾವೇರಿಪೇಟೆಯ ಸಮೀಪದಲ್ಲಿ ವಾಸಮಾಡಹತ್ತಿದರು. ಇವರು ಅಲ್ಲಿ ಹೊಸ ಮನೆಗಳನ್ನು ಕಟ್ಟಿಸಿದರು. ಕಲೆಕ್ಟರ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಕರಣಿಕರು, ಅಧಿಕಾರಿಗಳು ಇಲ್ಲಿನೆಲೆಯೂರಿದರು. ಬಳ್ಳಾರಿಯಲ್ಲಿ ಕಲೆಕ್ಟರನಾಗಿದ್ದ ನಿಸ್‌ಬತ್ ಎಂಬವನು "ಧಾರವಾಡದ ಕಲೆಕ್ಟರ್ ಹಾಗೂ ಸದರ್ನ್‌ಮರಾಠಾ ಕಂಟ್ರಿಯ ಪೊಲಿಟಿಕಲ್ ಏಜಂಟ್" ಎಂದು ವರ್ಗವಾಗಿ ಬಂದನು. ಆಗ ನೌಕರಿಯಲ್ಲಿದ್ದ ಬಹಳ ಜನರು, ಬ್ರಾಹ್ಮಣ ಕುಟುಂಬಗಳಿಗೆ ಸೇರಿದವರು, ವರ್ಗವಾಗಿ ಬಂದರು. ಅವರೆಲ್ಲರೂ 'ವಕೀಲ'ರಿದ್ದ ಹೊಸ ಓಣಿಯಲ್ಲಿ ವಾಸವಾದರು. ಇದು ಶ್ರೀಮಂತರ, ಅಧಿಕಾರಿಗಳ, ಓಣಿಯಾಗಿ ಬೆಳೆಯಿತು. ಕಲೆಕ್ಟರನ ಹೆಸರಿನಿಂದಲೇ ಈ ಓಣಿಗೆ ನಿಸ್‌ಬತ್‌ಪುರವೆಂದು ಕರೆದರು. ಕ್ರಿ. ಶ. ೧೮೩೫ ರಲ್ಲಿ ಬೆಳಗಾಂವಿಯ ಕಲೆಕ್ಟರ್ ಕಚೇರಿ ಸ್ಥಾಪಿತಗೊಂಡಾಗ ಸಂಸ್ಥಾನಿಕರ ಪ್ರತಿನಿಧಿಗಳೆಲ್ಲರೂ ಬೆಳಗಾಂವಿಗೆ ತೆರಳಿದರು. ಈ ನಿಸ್‌ಬತ್‌ಪುರವೇ ಕಾಲಾಂತರದಲ್ಲಿ 'ಮಂದಿಹಾಳ' ಎಂಬ ಹೆಸರನ್ನು ಪಡೆಯಿತು.

ಕ್ರಿ. ಶ. ೧೮೫೭ ರಲ್ಲಿಯೇ ಪ್ರಪ್ರಥಮವಾಗಿ ಧಾರವಾಡದ ಮ್ಯುನಿಸಿಪಾಲಿಟಿ ಸ್ಥಾಪನೆಗೊಂಡಿತು. ಆಗ ಇದಕ್ಕೆ ಗ್ರಾಮಪಂಚಾಯತಿಯ ಸ್ಥಾನಮಾನ ಮಾತ್ರ ಇದ್ದಿತು. ಇದೇ ೧೮೮೩ ರಲ್ಲಿ 'ಸಿಟಿ ಮ್ಯುನಿಸಿಪಾಲಿಟಿ' ಆಯಿತು. ೧೯೬೭ ರಲ್ಲಿ

ಮ್ಯುನಿಸಿಪಲ್ ಬರೋ ಆಗಿ ಮಾರ್ಪಟ್ಟಿತು. ಮಾರ್ಚ ೧೯೬೨ ರಲ್ಲಿ ಹುಬ್ಬಳ್ಳಿ ಧಾರವಾಡಗಳಿಗೆ ಸಂಯುಕ್ತ ನಗರಸಭೆ ಅಸ್ತಿತ್ವದಲ್ಲಿ ಬಂದಿತು. ಇತ್ತೀಚೆಗೆ ಧಾರವಾಡವು ಬಹಳ ಶೀಘ್ರಗತಿಯಿಂದ ಬೆಳೆಯುತ್ತಲಿದೆ. ಹೊಸ ಹೊಸ ಕಾರಖಾನೆ ಗಳು, ವೃದ್ಧಿಹೊಂದುತ್ತಿರುವ ಮಾರ್ಕೆಟ್ಟುಗಳು, ವಿಶ್ವವಿದ್ಯಾಲಯುಗಳು ಹಾಗೂ ಇತರ ಶಿಕ್ಷಣ ಸಂಸ್ಥೆಗಳು, ಸರಕಾರೀ ಕಚೇರಿಗಳು — ಇವೇ ಈ ಬೆಳೆವಣಿಗೆಗೆ ಕಾರಣ ವಾಗಿವೆ.

ಸಾಧನಕೇರಿ, ಕೆಲಗೇರಿಗಳು ಬಹಳ ದಿನಗಳಿಂದಲೇ ಈ ನಗರದ ಭಾಗವಾಗಿರು ವವು. ವಿದ್ಯಾಗಿರಿ, ಸಾರಸ್ವತಪುರ, ತೇಜಸ್ವಿನಗರ, ಸೋಮೇಶ್ವರನಗರ, ವಿವೇಕಾ ನಂದ ನಗರ, ಭಾರತಿನಗರ, ಬನಶಂಕರಿನಗರ, ನಗರಕರ್ ಕಾಲೊನಿ, ಶ್ರೀನಗರ, ಕಲ್ಯಾಣನಗರ, ಸರ್ವೋದಯನಗರ, ಸ್ಟೇಟ್‌ಬ್ಯಾಂಕ್ ಕಾಲೊನಿ, ಜಾಲಿಕ್ಯ ಸೆಟ್ಟರ ಕಾಲೊನಿ, ಗಾಂಧೀನಗರ ಮೊದಲಾದ ಓಣಿಗಳು ಬೆಳೆದುಬಂದಿವೆ. ಕೃಷಿ ವಿಶ್ವ ವಿದ್ಯಾಲಯವು ಈ ವರ್ಷ ಸ್ಥಾಪನೆಗೊಂಡಿರುವುದರಿಂದ ನರೇಂದ್ರದ ವರೆಗಿನ ಪ್ರದೇಶವು ಧಾರವಾಡ ನಗರಕ್ಕೇ ಸೇರುವ ದಿನಗಳು ದೂರವಿಲ್ಲ. ಅಮರಗೋಳ ಸ್ಟೇಶನ್ನಿನಿಂದ ನವಿಲೂರು ಮೇಲೆ ಹಾಯ್ದು, ವಿದ್ಯಾನಗರ ಮತ್ತು ಹಾವೇರಿ ಪೇಟೆ ವರೆಗಿನ ತೆರವಾದ ಸ್ಥಳವು ಬಹಳ ಬೇಗ ನಿವಾಸ-ಭವನ-ನಿರ್ಮಾಣದಿಂದ ಹಾಗೂ ಇತರ ಕಟ್ಟಡಗಳಿಂದ ನಿಬಿಡವಾಗಿ ಕಂಗೊಳಿಸುವುದರಲ್ಲಿ ಸಂದೇಹವಿಲ್ಲ. ಜೋಗಿ ಎಲ್ಲಾಪುರ, ತಡಸಿನಕೊಪ್ಪ, ಮನಸೂರು, ನುಗ್ಗೀಕೇರಿ, ಮನಗುಂಡಿ, ಸಲಕಿನಕೊಪ್ಪ, ಬಾಡ ಮೊದಲಾದ ಹಳ್ಳಿಗಳು ಧಾರವಾಡದ ಓಣಿಗಳಾಗುವ ದಿನಗಳು ದೂರವೇನಿಲ್ಲ. ಕೆಲಗೇರಿ ಕೆರೆ ಮತ್ತು ಉಣಕಲ್ ಕೆರೆಗಳಿಗೆ ನಮ್ಮ ಹಾಲಗೆರೆ-ಕೆಂಪುಗೆರೆ-ಕೊಪ್ಪದ ಕೆರೆ- ಎಮ್ಮೆ ಕೆರೆಗಳ ಸ್ಥಿತಿ ಒದಗಲಿಕ್ಕಿಲ್ಲವೆಂದು ಯಾರು ಹೇಳಬಹುದು ! ಧಾರವಾಡದ ಭೂಮಿ ಬಹಳ ಫಲವತ್ತಾದುದು. ಭತ್ತ, ಜೋಳ, ಅಕ್ಕಡಿಕಾಳು, ಸೇಂಗಾ, ಎಲ್ಲ ವಿಧದ ಕಾಯಿಪಲ್ಲೆ, ಹಣ್ಣುಹಂಪಲು ಎಲ್ಲ ಸಮೃದ್ಧವಾಗಿ ಬೆಳೆಯುತ್ತವೆ.

ಧಾರವಾಡದ ರಾಜಕೀಯ ಜೀವನದ ಸ್ಥಿತ್ಯಂತರಗಳು ಇಲ್ಲಿಯ ಜನಜೀವನದ ಮೇಲೆ ಪರಿಣಾಮ ಬೀರುವುದು ಸಹಜವೇ ಆಗಿದೆ. ಶತಶತಮಾನಗಳಿಂದ ಈ ಬದ ಲಾವಣೆಗಳನ್ನು ಅನುಭವಿಸಿ ಇಲ್ಲಿಯ ಜನಜೀವನವು ವಿಶಿಷ್ಟ ಸಮನ್ವಯ ಸಂಸ್ಕೃತಿ ಯನ್ನು ರೂಪಿಸಿಕೊಂಡು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ. ಇಷ್ಟೇ ಅಲ್ಲ, ಕನ್ನಡ ನಾಡಿನ ಜನತೆಯ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಇದಕ್ಕೆಲ್ಲ ಇಲ್ಲಿಯ ಜನರ ಭದ್ರವಾದ ಧಾರ್ಮಿಕ ನೈತಿಕ ಹಿನ್ನೆಲೆಯೇ ಕಾರಣವಾಗಿರುವುದು. ಧಾರವಾಡದಲ್ಲಿ ಪರಿಪುಷ್ಟವಾದ ಸಮನ್ವಯ ಸಂಸ್ಕೃತಿ ಪರಿಣಾಮಕಾರಿಯಾಗಿ ವ್ಯಾಪಿಸಿದ್ದು, ಇದು ಇಪ್ಪತ್ತೊಂದನೆಯ ಶತಮಾನ ದಲ್ಲಿ ಪಲ್ಲವಿಸಬಹುದಾದ ನವೀನ ವಿಶ್ವಸಂಸ್ಕೃತಿಯ ತಾಯಿಬೇರಿನಂತೆ ಇದೆ. ಇದಕ್ಕೆ

ಇಲ್ಲಿಯ ಸಂಸ್ಥೆಗಳು ಅನೇಕ ರೀತಿಯಲ್ಲಿ ಮೊದಲಿಂದಲೂ ಕಾರಣವಾಗಿವೆ. ಅವುಗಳಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಶ್ರೀ ಮುರುಘಾಮಠವು ಧಾರವಾಡದ ಪ್ರಮುಖ ಧಾರ್ಮಿಕ ಸ್ಥಳವಾಗಿದ್ದು, ದೇಶ-ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಇದು ಎಷ್ಟು ಹಳೆಯದೆಂಬ ಬಗೆಗೆ ಖಚಿತ ಉಲ್ಲೇಖ ದೊರೆಯದಿದ್ದರೂ, ೧೯೬೫ ರ ವರೆಗೆ ಇದ್ದ ಮೂರಂಕಣದ ಮಠದ ಕಟ್ಟಡ ಎರಡು ಮೂರು ಶತಮಾನದಷ್ಟು ಹಳೆಯದಾಗಿರಬಹುದು. ಅದಕ್ಕಿಂತ ಮೊದಲು ಯಾವ ರೂಪದಲ್ಲಿದ್ದಿತೆಂಬುದು ಸ್ಪಷ್ಟವಾಗಿ ತಿಳಿಯದು. ಪೂರ್ವದ ಧಾರವಾಡದಿಂದ ಸ್ವಲ್ಪ ದೂರವಾಗಿದ್ದ ಈ ಮಠ ಡಬ್ಬಗಳ್ಳಿ ಹಾಗೂ ಇತರ ಗಿಡಗಂಟಿಗಳಿಂದ ಸುತ್ತುವರಿದಿತ್ತು. ಊರಿನಿಂದ ಮಠಕ್ಕೆ ಒಂದೇ ಕಾಲುದಾರಿ. ರಾತ್ರಿ ಅಲ್ಲಿಗೆ ಹೋಗಿ ಬರಲು ಹೆದರಿಕೆಯಾಗುವಂಥ ಪರಿಸರವಿತ್ತು. ಚಿತ್ರದುರ್ಗದ ಜಗದ್ಗುರುಗಳ ಅಪ್ಪಣೆಯ ಮೇರೆಗೆ ಇಂಥ ಮಠದ ಅಧಿಕಾರವನ್ನು ಲಿಂಗೈಕ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ವಹಿಸಿಕೊಂಡರು. ಅಥಣಿಯ ಲಿಂ. ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳ ಸೇವೆಮಾಡಿದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಲಿಂಗನಿಷ್ಠರಾದುದರಿಂದ ಮೂರಂಕಣದ ಮುರುಘ ಮಠವೇ ಧಾರ್ಮಿಕ ಸಾಮಾಜಿಕ ಕಾರ್ಯಗಳ ಕೇಂದ್ರವಾಗಿ ಪರಿವರ್ತನೆ ಹೊಂದಿತು. ಸುತ್ತಮುತ್ತಲಿನ ಗ್ರಾಮಗಳಲ್ಲಿ ಭಿಕ್ಷೆಯಿಂದ ಧಾನ್ಯಸಂಗ್ರಹ ಮಾಡಿ ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯವನ್ನು ನಡೆಸಿಕೊಂಡು ಬಂದರು. ಇಲ್ಲಿದ್ದು ಓದಿದವರೆಲ್ಲರೂ ಧಾರ್ಮಿಕ ಸಾಮಾಜಿಕ ರಾಜಕೀಯ ರಂಗಗಳಲ್ಲಿ ಶ್ರೇಷ್ಠರೆನಿಸಿದ್ದಾರೆ. ಕಲೆ, ಸಾಹಿತ್ಯ, ಧರ್ಮ, ನೀತಿ ಎಲ್ಲವೂ ಅಭಿವೃದ್ಧಿ ಹೊಂದುವಂತೆ ಬಹಳ ಮುಂದಾಲೋಚನೆಯಿಂದ ಕಾರ್ಯ ನಿರ್ವಹಿಸಿದರು. ಯುಗಪುರುಷರೆನ್ನಿಸಿದರು. ಅವರ ನಂತರ ಶ್ರೀ ನಿ. ಪ್ರ. ಮಹಾಂತಮಹಾಸ್ವಾಮಿಗಳವರು ಮಠದ ಅಧಿಕಾರವನ್ನು ವಹಿಸಿಕೊಂಡು ಬಹಳ ಸಮರ್ಥವಾದ ರೀತಿಯಲ್ಲಿ ಎಲ್ಲ ಕಾರ್ಯಗಳನ್ನೂ ಮುಂದುವರಿಸಿಕೊಂಡು ಬಂದಿದ್ದಾರೆ. ಇದೆಲ್ಲವೂ ಅಥಣಿಯ ಶಿವಯೋಗಿಗಳ ಮತ್ತು ಮೃತ್ಯುಂಜಯ ಮಹಾಸ್ವಾಮಿಗಳ ಕೃಪೆಯೇ ಆಗಿದ್ದರೂ, ಶಿಷ್ಯಾದಿಚ್ಛೇತ್ ಪರಾಜಯಮ್ ಎಂಬಂತೆ ಶ್ರೀ ಮಹಾಂತಪ್ಪಗಳು ತಮ್ಮ ಗುರುಗಳೆಲ್ಲರನ್ನೂ ಮೀರಿಸಿಬಿಟ್ಟಿದ್ದಾರೆ. ಇಂದು ಮುರುಘಾಮಠವು ಅತ್ಯಂತ ಮಹತ್ವವನ್ನು ಪಡೆದ ಸಂಸ್ಥೆಯಾಗಿರುವುದಕ್ಕೆ ಅವರ ಲಿಂಗನಿಷ್ಠೆಯೇ ಕಾರಣ. ವಿದ್ಯಾರ್ಥಿ ಪ್ರಸಾದನಿಲಯ, ಶಿವಾನುಭವ ಪರೀಕ್ಷೆಗಳು, 'ಸಾವಧಾನ' ಪಾಕ್ಷಿಕ ಪತ್ರಿಕೆ, ಸಂಸ್ಕೃತಪಾಠಶಾಲೆ, ಮುದ್ರಣಾಲಯ, ಗ್ರಂಥಸಂಶೋಧನೆ ಹಾಗೂ ಪ್ರಕಟನೆ, ಇತ್ಯಾದಿ ಬಹುಮುಖ ಕಾರ್ಯ ಬಹಳ ಪರಿಣಾಮಕಾರಿಯಾಗಿ ಮುಂದುವರಿದಿದೆ. ಇದೆಲ್ಲವನ್ನೂ ನಿಯಂತ್ರಿಸುವ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ತುಂಬ ಘನತೆಯನ್ನು ಪಡೆದವರೂ ಅನುಭವಿಕರೂ ದೂರದೃಷ್ಟಿಯುಳ್ಳವರೂ ಆಗಿರುವುದು ಸಮಾಜದ ಪುಣ್ಯವೆಂದೇ ಹೇಳಬಹುದು.

ಇಂಥದೇ ಇನ್ನೊಂದು ಸಂಸ್ಥೆ ನವಕಲ್ಯಾಣಮಠದ ಶ್ರೀ ಕುಮಾರಸ್ವಾಮಿಗಳವರ ತಪೋವನ. ಈ ಶತಮಾನದ ಆರಂಭದ ದಶಕಗಳಲ್ಲಿ ಧೂಸಪೇಟೆಯಲ್ಲಿ ಪ್ರಾರಂಭವಾದ ನವಕಲ್ಯಾಣಮಠ, ಸಪ್ತಾಪುರದಲ್ಲಿಯ ಸಾಧನಾಮಂದಿರ ಮತ್ತು ಹಳ್ಯಾಳ ರಸ್ತೆಯಲ್ಲಿರುವ ತಪೋವನಗಳು ಶ್ರೀ ಶ್ರೀ ಶ್ರೀ ಕುಮಾರ ಸ್ವಾಮಿಗಳವರ ತಪೋನುಷ್ಠಾನದ ದಿವ್ಯ ಸ್ಥಾನಗಳು. ಸರ್ವಶಾಸ್ತ್ರ ವಿಶಾರದರೂ, ಪ್ರಗಲ್ಭವಾಗ್ಮಿಗಳೂ, ಪ್ರಭಾವೀ ಲೇಖಕರೂ ಆದ ಮಹಾಸ್ವಾಮಿಗಳು ಪಾಂಡಿಚೇರಿಯ ಶ್ರೀ ಅರವಿಂದರಂತೆ ಯೋಗೀಶ್ವರರೆಂದು ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಪಡೆದವರು. ಭಾರತದ ಪ್ರಾಚೀನ ಋಷಿ ಪರಂಪರೆಯನ್ನು ರಕ್ಷಿಸಿದವರು. ಅಪಾರವಾದ ಶಿಷ್ಯ ಸಂಪತ್ತನ್ನು ಪಡೆದು ಧಾರವಾಡಕ್ಕೆ ಹೆಚ್ಚಿನ ಕೀರ್ತಿಯನ್ನೂ ಹೆಚ್ಚಿನ ಶ್ರೇಯಸ್ಸನ್ನೂ ತಂದು ಕೊಟ್ಟಿದ್ದಾರೆ. ತಪೋವನದ ಕಾರ್ಯಕ್ರಮಗಳು ಬಹುಮುಖವಾಗಿ ಬೆಳೆಯುತ್ತಲಿವೆ.

ಶತಮಾನದಷ್ಟು ಪು ರಾ ತ ನ ವಾ ದ ಜಗದ್ಗುರು ಶ್ರೀ ಶಂಕರಾಚಾರ್ಯ ಪಾಠಶಾಲೆಯು 'ಶಂಕರಮಠ'ವೇ ಆಗಿದೆ. ಶೃಂಗೇರಿಯ ಹಿರಿಯ ಮತ್ತು ಕಿರಿಯ ಜಗದ್ಗುರುಗಳು, ಕಾಂಚೀ ಕಾಮಕೋಟಿ ಪೀಠದ ಹಿರಿಯ ಮತ್ತು ಕಿರಿಯ ಜಗದ್ಗುರುಗಳು ಆಗಾಗ ಇಲ್ಲಿಗೆ ಬಿಜಯಂಗೈದು ತಮ್ಮ ತಪೋನುಷ್ಠಾನಗಳಿಂದ, ಪೂಜಾದಿಗಳಿಂದ, ಉಪನ್ಯಾಸಾದಿಗಳಿಂದ ಇಲ್ಲಿಯ ಸಾರ್ವಜನಿಕರನ್ನು ಆಶೀರ್ವದಿಸುತ್ತಿರುತ್ತಾರೆ. ಪ್ರಕಾಂಡ ಪಂಡಿತರಾದ ಉತ್ತಿನಬೆಟಗೇರಿಯ ಶ್ರೀ ಬಾಲಚಂದ್ರ ಶಾಸ್ತ್ರಿಗಳು ಸಕಲ ಶಾಸ್ತ್ರ ಕೋವಿದರೆಂದು ರಾಷ್ಟ್ರೀಯ ಖ್ಯಾತಿಯನ್ನು ಪಡೆದವರು. ನಿರರ್ಗಳವಾದ, ಪ್ರಭಾವಿಯಾದ, ವಕ್ತೃತ್ವ ಅವರದು. ಇಂಥ ಪಂಡಿತೋತ್ತಮರು ಈ ಕಾಲದಲ್ಲಿ ಅಪರೂಪವೆಂದೇ ಹೇಳಬಹುದು. ಕನ್ನಡ ನಾಡು – ನುಡಿಗಳ ಸೇವೆಗಾಗಿ ೧೯ ನೆಯ ಶತಮಾನದ ಕೊನೆಯ ದಶಕದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪನೆಗೊಂಡಿತು. ಸಮಗ್ರ ಕನ್ನಡನಾಡಿಗೆ ಅದೊಂದೇ ಪ್ರಾತಿನಿಧಿಕ ಸಂಸ್ಥೆಯಾಗಿತ್ತು. ಆಗಿನ ಮೈಸೂರು ಸಂಸ್ಥಾನದಲ್ಲಿಯೂ ಇಂಥ ಸಂಸ್ಥೆಗಳಿರಲಿಲ್ಲ. ಬೆಂಗಳೂರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೊಳ್ಳುವುದಕ್ಕಿಂತ ದೀರ್ಘಕಾಲ ಮೊದಲೇ ವಿದ್ಯಾವರ್ಧಕ ಸಂಘ ಅಸ್ತಿತ್ವದಲ್ಲಿ ಬಂದುದು ಐತಿಹಾಸಿಕ ಘಟನೆ. ಈ ಸಂಘದ ಕಾರ್ಯಕ್ಕೆ ಮೈಸೂರು ಸಂಸ್ಥಾನದ ಮನ್ನಣೆ ಇದ್ದಿತಷ್ಟೇ ಅಲ್ಲ ಅಲ್ಲಿಯ ಪ್ರಮುಖರು ಇಲ್ಲಿಗೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರು.

ಧಾರವಾಡದಲ್ಲಿಯ ಅನೇಕ ದೇವಾಲಯಗಳು ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಇಲ್ಲಿಯ ಜನಜೀವನವನ್ನು ರಕ್ಷಿಸುತ್ತಲಿವೆ. ದತ್ತಾತ್ರೇಯಗುಡಿ, ಉಳವಿಬಸವೇಶ್ವರಗುಡಿ, ವೀರಭದ್ರದೇವರಗುಡಿ, ಲಕ್ಷ್ಮೀನಾರಾಯಣಗುಡಿ, ನಗರೇಶ್ವರಗುಡಿ, ಬೇರೆ ಬೇರೆ ಸ್ಥಳಗಳಲ್ಲಿರುವ ನಾಲ್ಕು ರಾಯರ ಮಠಗಳು, ವಿಠ್ಠಲಮಂದಿರಗಳು, ಶ್ರೀ ವೆಂಕಟೇಶ್ವರಗುಡಿ, ರಾಯರ

ಹನುಮಂತದೇವರಗುಡಿ, ಸೋಮೇಶ್ವರ ದೇವಾಲಯ, ಜುಮ್ಮಾ ಮಸೀದೆ, ಮಾಳಾಪುರ ಮಸೀದೆ, ಮದನಿ ಮಸೀದೆ, ಸೌದಾಗರ ಮಸೀದೆ, ರೌನಕ್‌ಪುರ ಮಸೀದೆ, ಆಲ್ ಸೇಂಟ್ಸ್ ಚರ್ಚ್, ಬಾಸೆಲ್ ಮಿಶನ್‌ಚರ್ಚ್, ರೋಮನ್ ಕೆಥೋಲಿಕ್ ಚರ್ಚ್, ಮಹಾವೀರ ಮಂದಿರಗಳು, ಅಕ್ಕಮಹಾದೇವಿ ಆಶ್ರಮ, ಬಸವತತ್ತ್ವ ಪ್ರಸಾರಸಂಸ್ಥೆ. ಲಿಂಗಾಯತ ಟೌನ್‌ಹಾಲ್. ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ, ಮರಾಠಿ ಮಂಡಳ, ತತ್ತ್ವಾನ್ವೇಷಣ ಮಂದಿರ, ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರ, ಹಿಂದೀ ಪ್ರಚಾರ ಸಭೆ. ಮೊದಲಾದವುಗಳು ನಿರಂತರವಾಗಿ ಬೌದ್ಧಿಕ ವೈಚಾರಿಕ ಪ್ರಚೋದನೆಗಳನ್ನು ಒದಗಿಸುತ್ತಲಿವೆ. ಮೃತ್ಯುಂಜಯ ಮಾರ್ಕೆಟು, ಅಕ್ಕಿಪೇಟೆ, ಸೂಪರ್ ಮಾರ್ಕೆಟ್ಟು ಇತ್ಯಾದಿ ಇಲ್ಲಿಯ ಸಮೃದ್ಧ ವ್ಯವಹಾರಕ್ಕೆ ನಿದರ್ಶನವಾಗಿವೆ.

ಕರ್ನಾಟಕ ವಿಶ್ವವಿದ್ಯಾಲಯ, ಅದರ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳು, ಕೃಷಿ ವಿಶ್ವವಿದ್ಯಾಲಯ, ಕೃಷಿ ಮಹಾವಿದ್ಯಾಲಯ, ಜೆ. ಎಸ್. ಎಸ್. ಶಿಕ್ಷಣ ಸಂಸ್ಥೆಯ ಮಹಾವಿದ್ಯಾಲಯಗಳು, ಆಕಾಶವಾಣಿ ಮೊದಲಾದವುಗಳ ಕಾರ್ಯ ಅತ್ಯಂತ ಮಹತ್ವದ್ದಾಗಿದೆ. ವಿವಿಧ ಗ್ರಂಥಾಲಯಗಳು, ಕ್ರೀಡಾ ಸಂಸ್ಥೆಗಳು, ನ್ಯಾಯಾಲಯ ಪರಿಸರ, ಪತ್ರಿಕೆಗಳು— ಎಲ್ಲವೂ ಇಲ್ಲಿಯ ಸಾರ್ವಜನಿಕ ಜೀವನದ ಔನ್ನತ್ಯಕ್ಕೆ ಮಹತ್ವದ ಕಾಣ್ಕೆಯನ್ನಿತ್ತಿವೆ.

ಕರ್ನಾಟಕ ಏಕೀಕರಣ ಮತ್ತು ಭಾರತ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ಧಾರವಾಡದ ಪಾತ್ರ ಬಹಳ ದೊಡ್ಡದು. ಕನ್ನಡ ಭಾಷೆ ಹಾಗೂ ಸಾಹಿತ್ಯದ ಪುರೋಭಿವೃದ್ಧಿಗೆ ಸಂಬಂಧಿಸಿದಂತೆ ಧಾರವಾಡವು ಮಾತೃಸ್ಥಾನದಲ್ಲಿದೆ. ಗೋಕಾಕ ಚಳವಳಿ ಇಲ್ಲಿಂದಲೇ ನಡೆಯಿತು. ಈ ನಗರವು ಸ್ವತಃ ಒಂದು ಕ್ಷೇತ್ರ ಸ್ಥಳವಾಗಿದೆಯಷ್ಟೇ ಅಲ್ಲ ಬಹಳ ಮಹತ್ವದ ಧಾರ್ಮಿಕ ಐತಿಹಾಸಿಕ ಸ್ಥಳಗಳಿಂದ ಸುತ್ತುವರಿಯಲ್ಪಟ್ಟಿದೆ. ಹುಬ್ಬಳ್ಳಿ ನಗರ, ಮೂರುಸಾವಿರಮಠ, ಸಿದ್ಧಾರೂಢಮಠ, ಸವದತ್ತಿಯ ಎಲ್ಲಮ್ಮನ ಗುಡ್ಡ, ನವಿಲುತೀರ್ಥ, ಮಲಪ್ರಭಾ ಆಣೆಕಟ್ಟು, ಸೊಗಲ ಸೋಮೇಶ್ವರ, ಮಹಾಂತ ಸ್ವಾಮಿಗಳ ಮತ್ತು ಚಿದಂಬರೇಶ್ವರರ ಮುರುಗೋಡ, ಗೋಕಾಕ ಫಾಲ್ಸ್, ಹಿಡಕಲ್ ಡ್ಯಾಮ್, ಜೈನ. ಪುಣ್ಯಸ್ಥಾನ ತವನಿಧಿ, ಎಡೂರ ವೀರಭದ್ರಕ್ಷೇತ್ರ, ಚೆನ್ನಮ್ಮನ ಕಿತ್ತೂರು, ಮಲ್ಲಮ್ಮನ ಬೆಳವಡಿ, ಅಮೃತೇಶ್ವರನ ಅಣ್ಣಿಗೇರಿ, ಕುಮಾರವ್ಯಾಸನ ಕೋಳಿವಾಡ, ಗದಗ ನಗರ ಮತ್ತು ಅಲ್ಲಿಯ ವೀರನಾರಾಯಣಸ್ವಾಮಿ–ತ್ರಿಕೂಟೇಶ್ವರ ಸೋಮೇಶ್ವರ, ಶಾಸನಗಳ ಲಕ್ಕುಂಡಿ, ಶಿಲಾಗುಹೆಗಳ ಬಾದಾಮಿ, ಬನಶಂಕರಿ ಕ್ಷೇತ್ರ, ಶಿವಯೋಗ ಮಂದಿರ, ಮಹಾಕೂಟ, ಐಹೊಳೆ-ಪಟ್ಟದಕಲ್ಲು, ಬಿಜಾಪುರದ ಗೋಲ ಗುಮ್ಮಟ, ಆಲಮಟ್ಟಿ ಆಣೆಕಟ್ಟು, ಕೂಡಲ ಸಂಗಮ, ವಿಜಯನಗರ ಸಾಮ್ರಾಜ್ಯದ ಅವಶೇಷಗಳು, ಪಂಪಾಪತಿ ವಿರೂಪಾಕ್ಷನ ಹಂಪೆ, ಚಕ್ರತೀರ್ಥದ ಕೋದಂಡರಾಮ

ದೇವಾಲಯ, ತುಂಗಭದ್ರಾ ಆಣೆಕಟ್ಟು, ಚೆನ್ನಬಸವೇಶ್ವರನ ಉಳುವೆ, ದಾಂಡೇಲಿ, ಸೂಪಾ–ಅಂಬಿಕಾನಗರ, ಮಾರಿಕಾಂಬೆಯ ಶಿರಸಿ, ಮಧುಕೇಶ್ವರನ ಬನವಾಸಿ, ಮಹಾಬಳೇಶ್ವರನ ಗೋಕರ್ಣ, ಕಾರವಾರ, ಗೋವೆ, ಜೋಗದ ಜಲಪಾತ, ಸವಣೂರು, ಬಂಕಾಪುರ, ಕಾಗಿನೆಲೆ ಇತ್ಯಾದಿ ಇತ್ಯಾದಿ ಧಾರವಾಡ ನಗರ ಪ್ರರುಷನ ಆಡುಂಬೊಲಕ್ಕೆ ಸೇರಿದ ಸ್ಥಾನಗಳಾಗಿವೆ.

ಕವಿಗಳಿಗೆ, ಪಂಡಿತರಿಗೆ, ಸಂಶೋಧಕರಿಗೆ, ಲೇಖಕರಿಗೆ, ಕಲಾವಿದರಿಗೆ, ವಣಿಕೋತ್ತಮರಿಗೆ, ವಿಜ್ಞಾನಿಗಳಿಗೆ, ಅಧಿಕಾರಿಗಳಿಗೆ, ಶ್ರೀಮಂತರಿಗೆ, ವಿದ್ಯಾರ್ಥಿಗಳಿಗೆ ನೆಲವೀಡಾಗಿರುವ ಧಾರವಾಡವು ಉತ್ತರೋತ್ತರ ಅಭಿವೃದ್ಧಿಹೊಂದುವಂತೆ ಭುವನೇಶ್ವರಿಯ ಕೃಪೆ ಇರಲಿ.

ಆಳ್ ಕನ್ನಡ ತಾಯ್ ! ಬಾಳ್ ಕನ್ನಡ ತಾಯ್ !
ಕನ್ನಡಿಗರೊಡತಿ ಓ, ರಾಜೇಶ್ವರಿ !!

ಪೂರ್ಣ ತ್ಯಾಗವೇ ಪರಮಾದರ್ಶ
ಅಲ್ಲಿ ನಾನೆಂಬುದಿಲ್ಲ, ಎಲ್ಲ ನೀನೇ.

ಸ್ವಾಮಿ ವಿವೇಕಾನಂದ

ಎರಡು ದಿನ ಬದುಕಿದರೆ ಸಾಲದೆ ಜನ್ಮದ ಸಫಲತೆಗೆ

ಬತ್ತಲೇಶನ ರಾಮಾಯಣ

ಶ್ರೀ ಜಿ.. ಜಿ. ದೊಡವಾಡರ ಸಾಮಾಜಿಕ ಚಿಂತನೆ



● ಎಸ್. ಜಿ. ಹಿರೇಮಠ

ಮಾನವ ಸಮಾಜವು ನಿಂತ ನೀರಲ್ಲ. ಅದು ಪರಿವರ್ತನಶೀಲವಾದದ್ದು. ಚಲನ ವಲನವುಳ್ಳದ್ದು: ಚೈತನ್ಯಸ್ವರೂಪವಾದದ್ದು. ಸಮಾಜವು ಒಂದು ಸಾಮಾಜಿಕ- ಸಂಬಂಧಗಳ ಬಲೆ. ಸಾಮಾಜಿಕ ಬದಲಾವಣೆ ಎಂದರೆ ಸಾಮಾಜಿಕ ಸಂಬಂಧಗಳಲ್ಲಾಗುವ ಬದಲಾವಣೆ. ಅದು ಅಂಗೀಕೃತ ಜೀವನಮಾರ್ಗದಿಂದಾದ ಬದಲಾವಣೆಯೂ ಹೌದು. ಅನೇಕ ಸಮಾಜಶಾಸ್ತ್ರಜ್ಞರು ಸಾಮಾಜಿಕ ಬದಲಾವಣೆಯನ್ನು ವಿಶಾಲ ದೃಷ್ಟಿಯಿಂದ ನೋಡುತ್ತಾರೆ. ಅಂದರೆ ನಾಗರಿಕ ಸಾಂಸ್ಕೃತಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಾದ ಬದಲಾವಣೆಯು ಸಾಮಾಜಿಕ ಬದಲಾವಣೆ. ಸಾಮಾಜಿಕ ರಚನೆಯ ಅತಿ ಮಹತ್ವದ ವ್ಯತ್ಯಾಸವೇ ಸಾಮಾಜಿಕ ಬದಲಾವಣೆ.

ಈ ಸಾಮಾಜಿಕ ಪರಿವರ್ತನೆ ಅಥವಾ ಬದಲಾವಣೆಗೆ ಕಾರಣಗಳು ಐದು : ೧) ಭೌಗೋಲಿಕ ೨) ಜೈವಿಕ ೩) ಮಾನಸಿಕ ೪) ಸಾಂಸ್ಕೃತಿಕ ೫) ತಾಂತ್ರಿಕ.

ಸಮಾಜಧುರೀಣ ಶ್ರೀ ಜಿ. ಜಿ. ದೊಡವಾಡ :

ಸಾಮಾಜಿಕ ಬದಲಾವಣೆಯಾಗುವದು ನಿಸರ್ಗ ನಿಯಮ. ಎಲ್ಲ ಸಮಾಜಗಳಲ್ಲೂ ಕಾಣಸಿಗುತ್ತದೆ. ಅದು ಬುಡಕಟ್ಟು ಹಾಗೂ ಗ್ರಾಮೀಣ ಸಮಾಜಗಳಲ್ಲಿ ಮಂದಗತಿಯಲ್ಲಿ ನಡೆದರೆ, ನಗರ ಸಮಾಜದಲ್ಲಿ ತೀವ್ರಗತಿಯಲ್ಲಿ ನಡೆದಿರುತ್ತದೆ. ಪೂರ್ವ ಯೋಜಿತವಲ್ಲದ ಕೆಲ ಯೋಜನೆಗಳಿಂದ ಸಾಮಾಜಿಕ ಬದಲಾವಣೆಯು ಸಾಮಾಜಿಕ ಅಸಂಘಟನೆಗೆ ಎಡೆ ಮಾಡುತ್ತದೆ. ಹಳೆಯ ಕೆಲ ಅನುಭವಗಳು ಬದಲಾಗುತ್ತಿರುವ ಸಮಾಜಕ್ಕೆ ಹೊಂದಿಕೊಳ್ಳುವದಿಲ್ಲ, ಒಗ್ಗುವದಿಲ್ಲ; ಒಪ್ಪವೂ ಅಲ್ಲ. ಕಾರಣ ಹೊಸ ಮೌಲ್ಯಗಳ ಚಿಂತನೆ, ವಿಚಾರ ಯೋಜನೆಗಳಾಗಿ ಅವುಗಳ ಸೃಷ್ಟಿ ಅವಶ್ಯ. ಇವುಗಳ ಬಗೆಗೆ ಸಮಾಜದ ಧುರೀಣರು ಯೋಚನೆ, ಯೋಜನೆಗಳನ್ನು ಪರಿಹಾರೋಪಾಯ

ಗಳನ್ನು ನೋಡುತ್ತಲೇ ಇರುತ್ತಾರೆ. ಅಂಥವರಲ್ಲಿ ಧಾರವಾಡದ ನಮ್ಮ ಶ್ರೀ ಜಿ. ಜಿ. ದೊಡವಾಡ ಅವರು ಒಬ್ಬರು.

ಸಾಮಾಜಿಕ ಬದಲಾವಣೆ ಹಾಗೂ ಶಿಕ್ಷಣ :

ಔದ್ಯೋಗೀಕರಣ, ಆಧುನೀಕರಣ, ಪಾಶ್ಚಾತ್ಯರ ಪ್ರಭಾವ, ನಗರೀಕರಣಗಳಿಂದಾಗಿ ನಮ್ಮ ಸಮಾಜದಲ್ಲಿ ಬದಲಾವಣೆ, ಅಸಂಘಟನೆ, ಅಸಮತೋಲಗಳು ಕಂಡುಬರುತ್ತಲಿವೆ. ಅದು ಸ್ವಾಭಾವಿಕ. ಸಾಮಾಜಿಕ ಪ್ರಗತಿಯಾಗಬೇಕಾದರೆ ಕೆಲ ಬದಲಾವಣೆಗಳು ಅನಿವಾರ್ಯ. ಬದಲಾವಣೆಯಾದರೂ ಅವುಗಳಿಗೆ ಹೊಂದಿ ಪ್ರಗತಿಯತ್ತ ಸಾಗುವ ಯೋಜನೆ ಪರಿಹಾರೋಪಾಯಗಳು ಅವಶ್ಯ. ಇವೆಲ್ಲಕ್ಕೂ ಶಿಕ್ಷಣವು ಮಹತ್ವದ ಪಾತ್ರ ವಹಿಸುವಂತಾಗಬೇಕು ಎನ್ನುತ್ತಾರೆ ಮಾನ್ಯ ಶ್ರೀ ಜಿ. ಜಿ. ದೊಡವಾಡರು.

ಪರಕೀಯರ ಆಳ್ವಿಕೆಯು ನಮ್ಮನ್ನು ಪ್ರಗತಿಯತ್ತ ಕರೆದೊಯ್ಯಲಿಲ್ಲ. ನಮ್ಮ ಸಮಸ್ಯೆಗಳೇನೆಂಬುದರ ಅರಿವು ಆಗದಷ್ಟು ಅಂಧಕಾರ, ಅನಕ್ಷರತೆಗಳು ನಮ್ಮ ಸಮಾಜವನ್ನು ಕತ್ತಲೆಯ ಕೋಣೆಯಲ್ಲಿ ಕಟ್ಟಿದ್ದುವು. ಕತ್ತಲೆಕೋಣೆಯಿಂದ ಹೊರಬರಲು, ಸಮಸ್ಯೆಗಳ ಅರಿವು ಮಾಡಿಕೊಂಡು ಮುನ್ನಡೆಯಲು ಶಿಕ್ಷಣ ಬೇಕು ಎಂದು ಒತ್ತಿಹೇಳುತ್ತಾರೆ ಜಿ. ಜಿ. ದೊಡವಾಡರು. ಇವರು ಇಪ್ಪತ್ತನೆಯ ಶತಮಾನದ ಎರಡನೆಯ ದಶಕದ ಪ್ರಾರಂಭದಲ್ಲಿಯೇ ಜನಿಸಿ ಸಾಮಾಜಿಕ ಪರಿಸರದ ಅರಿವು ಆಗುಹೋಗುಗಳನ್ನು ಕಂಡುಂಡವರು. ಅಷ್ಟೇ ಅಲ್ಲ, ಸುಸಂಸ್ಕೃತಿ, ಸದ್ಭಾವನೆ, ಸಚ್ಚಾರಿತ್ರ್ಯ, ಸಮಾಜಸೇವೆ ಸಮಾಜಚಿಂತನೆ, ಸಾಮಾಜಿಕ ಹೊಣೆ ಮುಂತಾದ ಸಾಮಾಜಿಕ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆದವರು. ಅಂಥವರು ಹೇಳುವ ಮಾತುಗಳಲ್ಲಿ ಅರ್ಥವಿದೆ.

ಶಿಕ್ಷಣಕ್ಕೆ ಒತ್ತು ಕೊಟ್ಟು ಇವರು ಈ ದಿಶೆಯಲ್ಲಿ ಪ್ರಯತ್ನಿಸಿದ್ದಾರೆ. ಅಷ್ಟೇ ಅಲ್ಲ, ಶಿಕ್ಷಣ ಎಲ್ಲರಿಗೂ ಅವಶ್ಯ. ಅದರಲ್ಲೂ ಮಹಿಳೆಗೆ ಶಿಕ್ಷಣ ಅತ್ಯವಶ್ಯ ಎನ್ನುತ್ತಾರೆ. ಇವರು ಪೂಜ್ಯ ಜಯದೇವಿತಾಯಿ ಲಿಗಾಡೆ ಮಾಧ್ಯಮಿಕ ಶಾಲೆಯ ಅಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸುತ್ತಿದ್ದಾರೆ. ಒಬ್ಬ ಮಹಿಳೆ ಕಲಿತರೆ ಇಡೀ ಕುಟುಂಬಕ್ಕೆ, ಒಬ್ಬ ಪುರುಷ ಕಲಿತರೆ ತನ್ನಷ್ಟಕ್ಕೆ ಎನ್ನುವ ಭಾವ ಇವರ ಮಾತುಗಳಲ್ಲಿ ಒಡೆದು ಕಾಣುತ್ತದೆ. ಅಂದರೆ ತನ್ನಷ್ಟಕ್ಕಾದರೂ ಕಲಿಯಬೇಕು, ಕುಟುಂಬಕ್ಕೂ ಕಲಿಯಬೇಕು, ಅಂದರೆ ಇಡೀ ಸಮಾಜದ ಪ್ರಗತಿ ಸಾಧ್ಯ.

ಶ್ರೀ ಜಿ. ಜಿ. ದೊಡವಾಡರ ವ್ಯಾಪಾರ ನೀತಿ :

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರ ಉದ್ದಿಮೆಗಳಿಗೆ ಭಾರತದ ಕಚ್ಚಾಸರಕುಗಳೇ ಆಹಾರಗಳಾಗಿದ್ದುವು. ಈ ಶತಮಾನದ ಪ್ರಾರಂಭದಲ್ಲಿಯೇ ಬ್ರಿಟಿಷರ ನಿಲುವು ಬದ

ಲಾದರೂ ನಮಗಾಗಿ ನಮ್ಮ ಪ್ರಗತಿಗಾಗಿ ನಿರೀಕ್ಷಿತ ಪ್ರಮಾಣದಲ್ಲಿ ನೆರವಾಗಲಿಲ್ಲ. ಹೀಗಿದ್ದಾಗ್ಯೂ ಅಲ್ಲಲ್ಲಿ ಸಮಾಜದ ಧುರೀಣರು ಕೆಲಸ ಮಾಡಿದ್ದಾರೆ. ಅದರಲ್ಲಿ ನಮ್ಮ ಶ್ರೀ ಜಿ. ಜಿ. ದೊಡವಾಡರಂಥ ಧುರೀಣರು ತಮ್ಮ ಹುಟ್ಟೂರಾದ ತಡಕೋಡದಲ್ಲಿ ೧೯೩೬ ರಲ್ಲಿಯೇ ವ್ಯಾಪಾರ ಪ್ರಾರಂಭಿಸಿ ಅಭಿವೃದ್ಧಿಗೊಳಿಸಿದರು. ಮುಂದೆ ೧೯೪೬ ರಲ್ಲಿಯೇ ಧಾರವಾಡದಲ್ಲಿ ವ್ಯಾಪಾರ ಪ್ರಾರಂಭಿಸಿ, ಈಗ ಅನೇಕ ಕಂಪನಿ ಕೇಂದ್ರಗಳನ್ನು ನಡೆಸುತ್ತಿದ್ದಾರೆ.

ಔದ್ಯೋಗೀಕರಣ ಹಾಗೂ ನಗರೀಕರಣಗಳು ಪೂರ್ವಯೋಜನೆ. ಹತೋಟಿ, ಶಿಕ್ಷಣ, ತಾಂತ್ರಿಕಶಿಕ್ಷಣಗಳ ಕೊರತೆಯಿಂದಾಗಿ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿದವು. ಗ್ರಾಮೀಣ ಪ್ರದೇಶಗಳಿಂದ ಜನರು ಉದ್ಯೋಗ ಹುಡುಕುತ್ತ ನಗರಕ್ಕೆ ವಲಸೆ ಬಂದರು. ಕೊಳೆಗೇರಿ, ಅಪರಾಧ, ತಿರುಪೆ, ವೇಶ್ಯಾವೃತ್ತಿ, ಮಾನಸಿಕ ಭೌತಿಕ ವೈಕಲ್ಯ ಮುಂತಾದ ಸಮಸ್ಯೆಗಳು ತಲೆ ಎತ್ತಿದವು.

ಇವುಗಳ ಹತೋಟಿ ಹಾಗೂ ಪರಿಹಾರೋಪಾಯಗಳಿಗೆ ಅನೇಕ ಸಂಘಸಂಸ್ಥೆಗಳು ಹುಟ್ಟಿಕೊಂಡವು. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಅನೇಕ ಯೋಜನೆ, ಕಾಯ್ದೆ ಕಾನೂನುಗಳೂ ರಚಿತವಾದವು. ಆದರೆ ಬರಿ ಕಾಯ್ದೆ ಕಾನೂನು ಹಾಗೂ ಸರಕಾರದಿಂದ ಈ ಎಲ್ಲವೂ ಸಾಧ್ಯವೆ ? ಅಂದರೆ ಸಮಾಜದ ಧುರೀಣರು ಸಮಾಜದ ಹೊಣೆಹೊತ್ತು ಸಮಸ್ಯೆಗಳಿಗೆ ಸಾಂತ್ವನಗಳನ್ನು ನೀಡುತ್ತ ಬಂದಿದ್ದಾರೆ. ಅಂಥ ಧುರೀಣರಲ್ಲಿ ಒಬ್ಬರಾದ ಶ್ರೀ ಜಿ. ಜಿ. ದೊಡವಾಡ ಅವರು ನಾವು ದುಡಿಯುವದು ಯಾತಕ್ಕೆ ? ಹಣ ಗಳಿಸುವದು ಯಾತಕ್ಕೆ ? ಎಂದು ಪ್ರಶ್ನೆಗಳನ್ನು ಹಾಕುತ್ತ, 'ನಾವು ದುಡಿಯುವದು, ಹಣ ಗಳಿಸುವದು ನಮ್ಮ ಹಿತಕ್ಕಷ್ಟೇ ಅಲ್ಲದೆ ಸಮಾಜದ ಹಿತಕ್ಕೂ ಆಗಿರಬೇಕು. ಅಂದರೆ ಸಮಾಜದ ಹಿತದಲ್ಲಿಯೇ ನಮ್ಮ ಹಿತವೂ ಅಡಗಿದೆ." ಎಂದು ಉತ್ತರ ಉಪಾಯಗಳನ್ನು ಕೊಡುತ್ತಾರೆ. ವಿನಯಶೀಲ ಈ ವ್ಯಕ್ತಿ "Live let Live, Live for the interest of others" ಎನ್ನುವ ಮೌಲ್ಯಗಳನ್ನು ಜೀವನ ದುದ್ದಕ್ಕೂ ಅಳವಡಿಸಿಕೊಂಡಿದ್ದಾರೆ. ಅವುಗಳನ್ನು ಬೆಳೆಸಬೇಕೆನ್ನುತ್ತಾರೆ ಕೂಡ.

ಇವರು ಅನೇಕ ವ್ಯಾಪಾರ-ಉದ್ದಿಮೆ ಕೇಂದ್ರಗಳನ್ನು ಧಾರವಾಡ–ಹುಬ್ಬಳ್ಳಿ ಮಹಾನಗರದಲ್ಲಿ ಪಡೆದವರಾಗಿದ್ದಾರೆ. ಇಲ್ಲಿ ಹಲವಾರು ನೌಕರರು, ಕೂಲಿಕಾರರು ನೆಮ್ಮದಿಯಿಂದ ಕೆಲಸಮಾಡುತ್ತಿದ್ದಾರೆ. ಇವರ ನಡೆ – ನುಡಿ ಸೇವಾಭಾವದಿಂದೊಡಗೂಡಿದ್ದು ದುಡಿದವರಿಗೆ ತಕ್ಕ ಫಲ, ಫಲಾನುಭವಿಗಳಿಗೆ ಸಮರ್ಪಕ ಸೇವೆಗಳನ್ನು ಪೂರೈಸುವಲ್ಲಿ ಸಮರ್ಥರಾಗಿದ್ದಾರೆ. ಈ ದಿಶೆಯಲ್ಲಿ ನೀತಿ – ನಿಯತ್ತುಗಳನ್ನು ಕಾಪಾಡಿಕೊಂಡು ಬಂದಿದ್ದಾರೆ ಶ್ರೀ ಜಿ. ಜಿ. ದೊಡವಾಡ ಅವರು.

ಇಂದಿನ ಈ ಇಪ್ಪತ್ತನೆಯ ಶತಮಾನವೇ ಇರಲಿ, ಮುಂದೆ ಇಪ್ಪತ್ತೊಂದನೆಯ ಶತಮಾನವೇ ಬರಲಿ: ಅದು ಏನೇ ಇರಲಿ, ಮೂಲಭೂತ ಆದರ್ಶ, ನೀತಿ ನಿಯತ್ತು, ಸಾಮಾಜಿಕ ಹೊಣೆ, ಸಾಮಾಜಿಕ ಮೌಲ್ಯಗಳು ಅತಿ ಅವಶ್ಯ. ಅವುಗಳನ್ನು ಕಾಪಾಡಿಕೊಂಡು ಮುನ್ನಡೆಯಬೇಕೆನ್ನುವಲ್ಲಿ ಶ್ರೀ ಜಿ. ಜಿ. ದೊಡವಾಡ ಅವರ ಸಾಮಾಜಿಕ ಕಳಕಳಿ ಎದ್ದು ಕಾಣುತ್ತಿದೆ. ಈ ಮೌಲ್ಯಗಳು ಯಾವುದೇ ಕಾರ್ಖಾನೆಯಲ್ಲಿ ಉತ್ಪಾದಿಸುವ ವಸ್ತುಗಳಲ್ಲ. ಶಿಕ್ಷಣವೇ ಇವಕ್ಕೆ ಮೂಲಸಾಧನ ಎನ್ನುತ್ತಾರೆ. ಆದರೆ ಒಂದು ಮಾತು, ಹಳತೆಲ್ಲವೂ ನಿರುಪಯುಕ್ತವಲ್ಲ: ಹೊಸತರಲ್ಲಿನ್ನೂ ಭರವಸೆಯಿಲ್ಲ. ಹಳತರಲ್ಲಿ ಒಳಿತನ್ನು ಆರಿಸಿಕೊಂಡು, ಬಲಿತಿದ್ದ ಹೊಸತನ್ನು ಸ್ವಾಗತಿಸಿ ಜೀವನವನ್ನು ಹದುಳಗೊಳಿಸಬೇಕು, ಹಸನುಗೊಳಿಸಬೇಕು. ಅಂದರೆ ತನ್ನರಿವು ತನಗೆ ಗುರುವಾಗಿ ಆತ್ಮಜ್ಞಾನ – ಆತ್ಮೋದ್ಧಾರಗಳ ಜೊತೆಗೆ ಸಾಮಾಜಿಕ ಜವಾಬ್ದಾರಿಯೂ ಅಷ್ಟೇ ಅವಶ್ಯ ಎನ್ನುತ್ತಾರೆ. ಶ್ರೀ ಜಿ. ಜಿ. ದೊಡವಾಡ ಅವರು ಅಂಥ ಜ್ಞಾನ ಅರಿವು ಮೌಲ್ಯಗಳನ್ನು ನೀಡುವುದು ನಮ್ಮ ಭಾರತ ಒಂದೇ ಎಂದು ಅತ್ಯಂತ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಇವುಗಳ ಗಾಳಿ–ಗಂಧವಿಲ್ಲದೆ ಮುನ್ನಡೆದ ರಾಷ್ಟ್ರಗಳು ಅನೇಕ ಸಮಸ್ಯೆಗಳಿಂದ ನರಳುತ್ತಿವೆ ಎಂದು ಹೇಳುತ್ತಾರೆ. ಶ್ರೀ ಜಿ. ಜಿ. ದೊಡವಾಡ ಅವರ ಕೂಡ ಮಾತಾಡುತ್ತ ಕೂತರೆ ಹೊತ್ತು ಹೋದದ್ದು ಗೊತ್ತಾಗುವದಿಲ್ಲ. ಅವರ ಜೊತೆಗೆ ಅನುಭವದ ಬುತ್ತಿ ದೊರೆತು ನೆತ್ತಿ ಹೃದಯಗಳೆರಡೂ ತುಂಬುತ್ತವೆ.

ಶ್ರೀ ಜಿ. ಜಿ. ದೊಡವಾಡ ಅವರ ಸಮಾಜಸೇವೆ :

ವಿಶ್ವಹಿಂದೂ ಪರಿಷತ್ತಿನ ಧಾರವಾಡಜಿಲ್ಲೆಯ ಅಧ್ಯಕ್ಷರಾಗಿ ಹದಿನೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಕಲಾಕೇಂದ್ರದ ಚೇರ್‌ಮನ್‌ರೂ ಹೌದು. ಅಷ್ಟೇ ಅಲ್ಲ, ಧಾರವಾಡ ಮುರುಘಾಮಠದ ಟ್ರಸ್ಟಿಗಳಾಗಿ ಇಪ್ಪತ್ತಾರು ವರ್ಷ ಸೇವೆ ಸಲ್ಲಿಸಿದ್ದಾರೆ. ಇನ್ನೂ ಅನೇಕ ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸೇವೆಯ ಸೆಲೆ ಇನ್ನೂ ಇವರಲ್ಲಿ ಉಕ್ಕೇಳುತ್ತಿದೆ. ಇವರು ಕಾಯಕನಿಷ್ಠರೂ ಕೂಡ. ಸುಸಂಸ್ಕೃತ ಮನೆತನದಲ್ಲಿ ಜನಿಸಿ, ಬೆಳೆದು, ಶಿಕ್ಷಣ ಪಡೆದು ಪ್ರಸಾದ ಸೇವಿಸಿದ ಮಠದ ಸೇವೆಗೂ ತಯಾರು. ಸಮಾಜದ ಋಣ, ಅನ್ನದ ಋಣ, ತೀರಿಸುವ ಜೀವಾತ್ಮರು. ಇವರ ಬದುಕನ್ನು ನೋಡಿದರೆ ಹನ್ನೆರಡನೆಯ ಶತಮಾನದ 'ಅಮರ ನೀತಿಗಳ' ನೆನಪು ಬರುತ್ತದೆ. 'ಅಮರ ನೀತಿಗಳು' ವ್ಯಾಪಾರವನ್ನೂ ಸತ್ಯಶುದ್ಧ ಕಾಯಕವೆಂದು ಬಗೆದು ನಿರ್ವಹಿಸುತ್ತಿದ್ದರಂತೆ: ದುಡಿದ ಹಣ ದಾಸೋಹಕ್ಕೂ ಸಲ್ಲುತ್ತಿದ್ದಿತಂತೆ. ಅವರು ನೀತಿ ನಿಯತ್ತು ಸೇವೆಗಳನ್ನು ಮೆರೆದ ಶರಣರೆಂದು ಹೇಳಲಾಗುತ್ತಿದೆ. ಈ ಶತಮಾನದಲ್ಲೂ ಅಂಥ ಶರಣರೊಬ್ಬರನ್ನು ನಮ್ಮೆದುರು ಜೀವಂತ ಕಾಣುತ್ತಿದ್ದೇವೆ ಎನ್ನುವಲ್ಲಿ ಉತ್ಪ್ರೇಕ್ಷೆ ಇಲ್ಲವೇ ಇಲ್ಲ. ಅವರೇ ಶ್ರೀ ಜಿ. ಜಿ. ದೊಡವಾಡ ಅವರು.

ತಾವು ದುಡಿದು ಗಳಿಸಿದ ಹಣದಲ್ಲಿ ಸ್ವಲ್ಪಾದರೂ ಸಮಾಜದ ಪ್ರಗತಿಗೆ ನೆರವಾಗ ಬೇಕು. ಅಂದರೇನೆ ಸಮಾಜದ ಋಣ ತೀರಿಸಿದಂತೆ. ಹಣ ಸತ್ಪಾತ್ರಕ್ಕೇ ಸಲ್ಲಬೇಕು ಎನ್ನುತ್ತಾರೆ. ಈ ಶತಮಾನದ ಶರಣ ಶ್ರೀ ಗುರುಪುತ್ರನವರು. ಇವರು 'ಉಣ ದೀರ್ಪಾ ಧನವಿದ್ದರೇನು' ಅನ್ನುವವರ ಜೊತೆಗೆ ಉಣಿಸದಿರ್ಪ ಧನವಿರ್ದೊಡೇನು ಎನ್ನುವ ನಿಲುವುಳ್ಳವರು.

ಹಣವಂತ ಬೊಮ್ಮಯ್ಯ ಗುಣವಂತ ಶರಣಯ್ಯ
ಹಣವಂತ ವೀರ ಶಿವ ಮಂತಕೆ । ನಾಡೊಳಗೆ
ತನುವಂತನಾದ ಪಶುಗಳಿಗೆ ॥

ಎನ್ನುವ ಜಾನಪದ ಗೀತೆಯಂತೆ ಶ್ರೀ ಗುರುಪುತ್ರಪ್ಪನವರು ಸಮಾಜಕ್ಕೇ ತನುವಂತ ರಾಗಿದ್ದಾರೆ. ಸಮಾಜ ಸೇವಾ ಶಿಕ್ಷಣ ಸಂಸ್ಥೆಗಳಿಗೆ ದಾನ ಮಾಡಿದ್ದಾರೆ. ಅಂಥ ಸಂಸ್ಥೆಗಳನ್ನು ಸ್ಥಾಪಿಸಲು ಹಿಂಜರಿಯುವವರಲ್ಲ. ಅಂದರೆ ಸಮಾಜ ಚಿಂತನೆ, ಶೋಧನೆಮಾಡಿ ಇಂದಿನ ಸಮಸ್ಯೆಗಳಿಗೆ ಸ್ಪಂದಿಸಿ, ಪರಿಹಾರೋಪಾಯಗಳನ್ನು ಕಂಡು ಹಿಡಿದು ವೈಜ್ಞಾನಿಕ ಅಧ್ಯಯನದಿಂದ ಸಮಾಜವನ್ನು ಪ್ರಗತಿಯತ್ತ ಒಯ್ಯಲು ತರಬೇತು, ಶಿಕ್ಷಣ ನೀಡುವ ಅಂಥ ಸಾಮಾಜಿಕ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ಯಾರಾದರೂ ಮುಂದಾದರೆ ಅದಕ್ಕೆ ನನ್ನದೇ ಮೊದಲ ಕಾಣಿಕೆ ಎನ್ನುತ್ತಾರೆ ಈ ಶರಣರು.

ಇವರು ಕಾಯಕಜೀವಿ. ನ್ಯಾಯ-ನೀತಿ ನಿಯಮಗಳ ನಾಯಕರು, ವಿನಯ ಶೀಲರು, ಸಮಾಜಸೇವಾ ಧುರಂಧರರು, ಸಾತ್ವಿಕ ಶಿರೋಮಣಿ. ಇಂಥವರಿರುವದ ರಿಂದಲೇ ಅನೇಕರು ಬದುಕಿಉಳಿದಿದ್ದಾರೆ. ಇಂಥವರು ಇನ್ನೂ ಬದುಕುವದು ಅವರಿ ಗಾಗಿ ಅಲ್ಲ, ಸಮಾಜಕ್ಕಾಗಿ. ಕಾರಣ ಅವರು ಶತಾಯುಷಿಗಳಾಗಿ ಬದುಕಲಿ ಎಂದು ಆ ಮಯಾಘನನಲ್ಲಿ ಪ್ರಾರ್ಥಿಸೋಣ. ಶರಣ ಗುರುಪುತ್ರನವರು ಶ್ರೀ ಗುರುಪಾದಪ್ಪ ಶ್ರೀಮತಿ ಗಂಗಮ್ಮ ಅವರ ಪುಣ್ಯ ಗರ್ಭದಲ್ಲಿ ಜನಿಸಿದ ಸತ್ಪುತ್ರರಾಗಿ, ಸತ್ಪುತ್ರ ರನ್ನೂ ಪಡೆದು ಅವರನ್ನೂ ಸೇವೆಯಲ್ಲಿ ತೊಡಗಿಸಿದ್ದಾರೆ. ಇಂಥ ಸುಪುತ್ರರನ್ನು ಪಡೆದ ತಂದೆ-ತಾಯಿಗಳೂ ಧನ್ಯರು, ಸಮಾಜವೂ ಕೂಡ ಧನ್ಯ, ಧನ್ಯ !!

ಬದಲಾವಣೆ ಹೊಂದಬೇಕಾದ ನಮ್ಮ ಇಂದಿನ ಶೈಕ್ಷಣಿಕ ಮೌಲ್ಯಗಳು



● ಸದಾಶಿವ ಒಡೆಯರ

ವಿಜ್ಞಾನದಿಂದ ಮಾನವ ಪ್ರಗತಿ ಸಾಧ್ಯವೆಂಬ ನಂಬಿಕೆಯಿಂದ, ನಮ್ಮ ಶಿಕ್ಷಣ ಕ್ರಮದಲ್ಲಿ ನಾವು ಮೌಲ್ಯಗಳ ಬಗ್ಗೆ ಒತ್ತಿ ಹೇಳುವದನ್ನು ಉಪೇಕ್ಷಿಸಿದ್ದೇವೆ. ವಿಜ್ಞಾನದಿಂದ ಮನುಷ್ಯನ ಸುಖಜೀವನಕ್ಕೆ ಬೇಕಾದ ಸಂಪನ್ಮೂಲಗಳು ಹೆಚ್ಚುವವೆಂಬುದರಲ್ಲಿ ಸಂದೇಹವಿಲ್ಲ. ಆದರೆ ವಿಜ್ಞಾನದಿಂದ ಮಾತ್ರ ಮನುಷ್ಯನಿಗೆ ಸುಖ ದೊರೆಯುವದೆಂಬುದು ಒಂದು ಬಿಸಿಲುಗುದುರೆಯನ್ನು ನಂಬಿದಂತೆ. ಇಂದು ಪ್ರಪಂಚದಾದ್ಯಂತ ಕಂಡುಬರುತ್ತಿರುವ ದ್ವೇಷ, ಭೀಕರ ಹೋರಾಟ, ಅಶಾಂತಿಗೆ, ಉದಾತ್ತ ಜೀವನ ಮೌಲ್ಯಗಳ ಬಗ್ಗೆ ಮಾನವ ಜನಾಂಗದ ಉಪೇಕ್ಷೆಯೇ ಕಾರಣ. ಪ್ರಪಂಚದಲ್ಲಿ ಶಾಂತಿ ನೆಲೆಗೊಂಡು, ದೇಶಗಳು, ಮಾನವರು ಸುಖಜೀವನ ನಡೆಸಲು ಒಳ್ಳೆ ಪರಿಸರ ನಿರ್ಮಾಣವಾಗಬೇಕಾದರೆ ಉದಾತ್ತ ಜೀವನ ಮೌಲ್ಯಗಳು ಮನುಷ್ಯರ ಮನಸ್ಸಿನಲ್ಲಿ ಮೂಡಿ, ಅವುಗಳ ಪೋಷಣೆಯಾಗಬೇಕು. ಅದಕ್ಕಾಗಿ ನಮ್ಮ ಶಿಕ್ಷಣ ನೀತಿಯಲ್ಲಿ ಮತ್ತೆ ಒಳ್ಳೆ ಮೌಲ್ಯಗಳ ಪ್ರತಿಷ್ಠಾಪನೆಯಾಗಬೇಕು. ಮೌಲ್ಯಗಳನ್ನು ಕಲಿಸುವದು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಕೆಲವರು ತಳೆದಿರುವದುಂಟು. ಆದರೆ ಮೌಲ್ಯಗಳ ಮಹತ್ವವನ್ನು ಬಿಂಬಿಸುವಂಥ ಪಠ್ಯಕ್ರಮಗಳನ್ನು ರೂಪಿಸಲು ಸಾಧ್ಯವೆಂಬುದು ಅನೇಕ ಶಿಕ್ಷಣ ತಜ್ಞರ ಅಭಿಪ್ರಾಯ. ಉದಾತ್ತವಾದ ಮೌಲ್ಯಗಳು ಅನೇಕ. ಒಂದೊಂದು ಕಾಲದಲ್ಲಿ ಒಂದೊಂದು ಮೌಲ್ಯ ಅತ್ಯಂತ ಮಹತ್ವ ಹಾಗೂ ಅತ್ಯಂತ ಅವಶ್ಯವಾಗುವದನ್ನು ನಾವು ಕಾಣುತ್ತೇವೆ. ಇಂದಿನ ದಿನಗಳಲ್ಲಿ ಅತ್ಯಂತ ಅವಶ್ಯವೂ, ಮಹತ್ವದವೂ ಆದ ಮೌಲ್ಯಗಳು ಯಾವವು. ಮತ್ತು ಅವುಗಳನ್ನು ಹೇಗೆ ನಮ್ಮ ಪಠ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಬಹುದು ಎಂಬುದನ್ನು ಸ್ಥೂಲವಾಗಿ ವಿವೇಚಿಸಿದಾಗ ಕೆಲವೊಂದು ವಿಚಾರಗಳು ನನಗೆ ಹೊಳೆಯುವದುಂಟು. ಅವುಗಳನ್ನು ಸ್ಥೂಲವಾಗಿ ವಿಶದ ಪಡಿಸಲು ಇಲ್ಲಿ ಯತ್ನಿಸಿದ್ದೇನೆ.

ವಿಜ್ಞಾನ ಮಾನವನಿಗೆ ಕೊಟ್ಟ ಅಮಿತ ಶಕ್ತಿ ಪ್ರಪಂಚವನ್ನು ಇಂದು ವಿನಾಶದ ಅಂಚಿಗೆ ತಳ್ಳಿದೆ. ಒಂದು ಬಟನ್ನ ಒತ್ತುವದರಿಂದ ಪ್ರಪಂಚದ ಯಾವದೇ ದೇಶ ಅಥವಾ ಕೋಟ್ಯಾಂತರ ಜನರನ್ನು ಸುಟ್ಟು ಬೂದಿ ಮಾಡುವಂಥ ಬಾಂಬುಗಳನ್ನು ಮಾನವ ತನ್ನ ಕರಗತಮಾಡಿಕೊಂಡಿದ್ದಾನೆ. ಪ್ರಪಂಚ ಇಂದು ಹಲವು ಬಲಶಾಲಿಗಳ ಗುಂಪುಗಳಲ್ಲಿ ಹಂಚಿಹೋಗಿದೆ. ಈ ಗುಂಪುಗಳಿಗೆ ಸೇರಿದ ದೇಶಗಳು ನಿರಂತರ ಹೆಚ್ಚು ಹೆಚ್ಚು ವಿನಾಶಕಾರಿ ಆಯುಧಗಳನ್ನು ತಯಾರಿಸುವದರಲ್ಲಿ, ಪ್ರಬಲ ರಾಷ್ಟ್ರಗಳಿಂದ ಕೊಂಡು ಶೇಖರಿಸುವದರಲ್ಲಿ ತೊಡಗಿವೆ. ಈಗ ಪ್ರಪಂಚದಲ್ಲಿ ಹಿರೋಶಿಮಾ ಬಾಂಬಿನ ವಿನಾಶ ಶಕ್ತಿಯು ದಶಲಕ್ಷ ಪಟ್ಟಿನ ಶಕ್ತಿಯನ್ನು ಪಡೆದ ಆಯುಧಗಳ ಸಂಗ್ರಹದ ಮೇಲೆ ಕುಳಿತಿದೆ. ಪ್ರಪಂಚದ ನೂರರಲ್ಲಿ ೨೦ ರಷ್ಟು ವಿಜ್ಞಾನಿಗಳೂ ಹಾಗೂ ಎಂಜಿನಿಯರರೂ ಹೆಚ್ಚು ಹೆಚ್ಚು ವಿನಾಶಕರವಾದ ಆಯುಧಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಪ್ರಪಂಚದ ರಾಷ್ಟ್ರಗಳು ಆಯುಧಗಳ ನಿರ್ಮಾಣಕ್ಕಾಗಿ ಮಾಡಿದ ಒಟ್ಟು ಖರ್ಚನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ಅವು ಒಂದು ನಿಮಿಷಕ್ಕೆ ೧೦ ಲಕ್ಷ ಡಾಲರುಗಳನ್ನು ಖರ್ಚು ಮಾಡುವೆಯೆಂದು ಕಂಡುಬರುತ್ತದೆ. ಅದೇ ಪ್ರಪಂಚ ದಲ್ಲಿ, ಇಂದಿಗೆ ಪ್ರತಿದಿನ ೪೦,೦೦೦ ಜನ ಆಹಾರದ ಕೊರತೆಯಿಂದ ಸಾಯುತ್ತಿದ್ದಾರೆ. ಇಷ್ಟೊಂದು ಜನ ಹಸಿವೆಯಿಂದ ಸಾಯುತ್ತಿರುವಾಗ ದೇಶಗಳು ಇಷ್ಟೊಂದು ಹಣ ಆಯುಧಗಳಿಗಾಗಿ ವ್ಯಯಿಸುತ್ತಿರುವದು ಮಾನವ ಕುಲಕ್ಕೆ ಕಳಂಕಪ್ರಾಯವಲ್ಲವೇ ?

ಈ ಆಯುಧಗಳ ಪೈಪೋಟಿ ನಿಲ್ಲಬೇಕಾದರೆ ಜಗತ್ತಿನಲ್ಲಿ ಶಾಂತಿ ನೆಲೆಸಬೇಕು. ಪ್ರಬಲ ರಾಷ್ಟ್ರಗಳು ಹೊಂದಿರುವ ವಿನಾಶದ ಆಯುಧ ಸಾಮುಗ್ರಿಗಳು ಪ್ರಪಂಚವನ್ನು ಪೂರ್ತಿ ನಾಶಪಡಿಸಲು ಶಕ್ತವಾಗಿರುವ ಪ್ರಪಂಚದಲ್ಲಿ ಜೀವರಾಶಿಯೇ ನಿರ್ನಾಮ ವಾಗುವ ಸಾಧ್ಯತೆ ಪ್ರಪಂಚದೆದುರು ದೈತ್ಯಾಕಾರವಾಗಿ ಎದ್ದುನಿಂತು ಹೆದರಿಸುತ್ತಿದೆ. ಅದಕ್ಕಾಗಿಯೇ ಪ್ರಪಂಚಕ್ಕೆ ಇಂದು ಅತ್ಯಂತ ಅವಶ್ಯವಾದದ್ದು ಶಾಂತಿ. ಪ್ರಪಂಚ ದಾದ್ಯಂತ ಶಾಂತಿ ಸ್ಥಾಪನೆಗಾಗಿ ನಾವು ಇಂದು ಸರ್ವಪ್ರಯತ್ನ ಮಾಡಬೇಕಾಗಿದೆ. ಅಮೇರಿಕಾ ದೇಶದ ಖ್ಯಾತ ಸೇನಾನಿ ಐಸೆನ್‌ಹಾರ ೧೯೬೭ ರಲ್ಲಿ ಒಂದು ಹೇಳಿಕೆಯಲ್ಲಿ "ಪ್ರಪಂಚಕ್ಕೆ ಇಂದು ಬೇಕಾಗಿರುವದು ಆಕಾಶದಲ್ಲಿ ದೂರದ ನಕ್ಷತ್ರಗಳಿಗೆ ಹಾರುವ ಶಕ್ತಿಯಲ್ಲ, ಆದರೆ ಶಾಂತಿಯ ಕ್ಷೇತ್ರದಲ್ಲಿ ಬಹು ದೂರ ಹಾರುವ ಶಕ್ತಿ" What the world needs more than a giagantic leap into space, is a giaganticl eap in peace". ಹೆಚ್ಚುಹೆಚ್ಚು ವಿನಾಶಕಾರಿ ಆಯುಧ ಸಾಮುಗ್ರಿಗಳನ್ನು ನಿರ್ಮಿಸುವದರಿಂದ ಪ್ರಪಂಚದಲ್ಲಿ ಶಾಂತಿಯ ಮಾರ್ಗ ಸಿಗಲಾರದು. ಹಿರೋಶಿಮ ನಾಗಾಸಾಕಿಯಲ್ಲಿ ಬಾಂಬಸ್ಫೋಟದಿಂದ ಆದ ಅಪರಿಮಿತ ಸಾವು ರೋಗ ರುಜಿನಗಳು, ಕಷ್ಟಕಾರ್ಪಣ್ಯಗಳನ್ನು ಮಾನವ ಜನಾಂಗ ಇಂದಿಗೂ ಅನುಭವಿಸುತ್ತಲಿದೆ. ಜಗತ್ತಿನ ರಾಷ್ಟ್ರಗಳ ಮಧ್ಯೆ ಅವ್ಯಾಹತವಾಗಿ ಯುದ್ಧಗಳು, ಹೋರಾಟಗಳು ನಡೆದೇ ಇವೆ.

ಚೀನಾ, ಜಪಾನಗಳ ನಡುವೆ, ಇರಾಣ, ಇರಾಕಗಳ ನಡುವೆ ಇಸ್ರಾಯೀಲ್ ಪೆಲಸ್ಟೈಯಿನ್, ಭಾರತ ಪಾಕಿಸ್ತಾನಗಳ ನಡುವೆ, ಇಂಗ್ಲಂಡ, ಅಮೇರಿಕಾ ರಶಿಯಾಗಳ ನಡುವೆ, ಇಂಥ ತಾಕಲಾಟಗಳು ನಡೆದೇ ಇವೆ. ಯುದ್ಧಗಳನ್ನು ಕೊನೆಗೊಳಿಸಲು ಪ್ರಪಂಚದಲ್ಲಿ ಯತ್ನಗಳೂ ನಡೆದೇ ಇವೆ. ಮೊದಲು ಲೀಗ್ ಆಫ್ ನೇಶನ್ಸ ನಂತರ ಯುನೈಟೆಡ್ ನೇಶನ್ಸ ಆರ್ಗನೈಜೇಶನ (UNO) ಸಂಸ್ಥೆಗಳು ಜನಿಸಿ, ಶ್ರಮಿಸಿದವು, ಶ್ರಮಿಸುತ್ತಲಿವೆ. ಆದರೆ ಜಗತ್ತಿನಲ್ಲಿ ಇಂದಿಗೂ ದೇಶದೇಶಗಳ ನಡುವಿನ ದ್ವೇಷ ಹಿಂಗಿಲ್ಲ. ಯುದ್ಧಗಳು ಕೊನೆಗೊಂಡಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯು ಭೌತಿಕ ಸಂಪತ್ತಿನ ಹೆಚ್ಚಿನ ವಿಚಾರಸರಣಿಯಿಂದಾಗಿ ಮಾನವನು ದೇಶಗಳಲ್ಲಿ ಅನ್ಯ ದೇಶಗಳನ್ನು ತಮ್ಮ ಸುಖಸಂಪತ್ತಿಗಾಗಿ ಹಿಂಸಿಸುತ್ತಿವೆ. ತುಳಿಯುತ್ತಿವೆ. ಯುದ್ಧಗಳಿಂದ ಮಾನವ ಜನಾಂಗಕ್ಕೆ ಎಂದಿಗೂ ಸುಖಶಾಂತಿಗಳು ದೊರೆಯಲಾರವೆಂಬುದನ್ನು ಪ್ರಪಂಚ ಅರಿತುಕೊಳ್ಳಬೇಕಾಗಿದೆ. ಇದನ್ನು ಭಾರತ ದೇಶದ ಪುರಾತನ ಋಷಿಗಳ ಕಾಲದಿಂದ ಇದುವರೆಗೆ ಅನೇಕ ಮಹಾಮುನಿಗಳು ಸಾರುತ್ತಲೇ ಬಂದಿದ್ದಾರೆ. ಅಂದಿನ ಬುದ್ಧ ಇಂದಿನ ಕಾಲದ ಗಾಂಧಿ ಹಿಂಸೆಯನ್ನು ಎದುರಿಸುತ್ತಲೇ ಬಂದಿದ್ದಾರೆ. ಯುದ್ಧದಲ್ಲಿ ಜಯಗಳಿಸಿದಾಗಲೂ ಅದರಿಂದ ಜನರಿಗೆ ಒದಗಿದ ಕಷ್ಟಕಾರ್ಪಣ್ಯಗಳನ್ನು ನೆನೆದು ಕೈಯಲ್ಲಿದ್ದ ಖಡ್ಗವನ್ನು ಬಿಸಾಡಿ ಅಹಿಂಸೆಯ ಮಹತಿಯನ್ನು ಜಗತ್ತಿಗೆ ಸಾರಲು ಹೊರಟ ಚಕ್ರವರ್ತಿ ಅಶೋಕನ ಉದಾಹರಣೆಯಿದೆ. ಆಧುನಿಕ ಕಾಲದ ಋಷಿಯೆನಿಸಿಕೊಂಡ ರವೀಂದ್ರನಾಥ ಟಾಗೋರರು ಒಂದು ಸಲ ಜಪಾನದ ಪ್ರವಾಸ ಕೈಕೊಂಡಾಗ. ಅಲ್ಲಿ ಏರ್ಪಾಟಾದ ಪ್ರದರ್ಶನವೊಂದರಲ್ಲಿ ಚೀನಾ ಜಪಾನ ಯುದ್ಧದಲ್ಲಿ ಚೀನಿಯರನ್ನು ಸೋಲಿಸಿ ಅವರಿಂದ ದೋಚಿಕೊಂಡ ವಸ್ತುಗಳ ಪ್ರದರ್ಶನ. ಚೀನೀಯರ ಅಸಂಖ್ಯಾತ ಜನರನ್ನು ಕೊಂದ ದೃಶ್ಯಗಳನ್ನು ಈ ಪ್ರದರ್ಶಿಸಲಾಗಿತ್ತು. ಅದನ್ನು ಕಂಡು ರವೀಂದ್ರರ ಮನಸ್ಸು ಖಿನ್ನವಾಯಿತು.

ಕ್ರಿ. ಶ. ೧೯೩೯ರಲ್ಲಿ ಜಪಾನ ದೇಶದಲ್ಲಿ ಅಲ್ಲಿಯ ಜನರನ್ನುದ್ದೇಶಿಸಿ ಮಾತನಾಡಿದ ಭಾಷಣದಲ್ಲಿಯೇ ಅವರು ಜಪಾನ ದೇಶದ ಜನರನ್ನು ಅತಿ ಹೀನಾಯಮಾನವಾಗಿ ಬೈದರು "ಅತಿಯಾದ ರಾಷ್ಟ್ರೀಯತೆ ಒಂದು ರಾಕ್ಷಸನಿದ್ದಂತೆ. ನೀವು ಇತರ ಜನಾಂಗದ ಮೇಲೆ ಗೈಯುತ್ತಿರುವ ಕ್ರೂರ ಆಘಾತಗಳು, ನಿಮ್ಮನ್ನು ಹಾಗೆಯೇ ಬಿಡುವದಿಲ್ಲ. ಅಂಥ ಆಘಾತಗಳು ನಿಮ್ಮ ಮೇಲೆ ಮರುಕಳಿಸುತ್ತವೆ. ನೀವು ನಿಮ್ಮ ಸುತ್ತಲೂ ಬಿತ್ತುತ್ತಿರುವ ವೈರತ್ವದ ಬೀಜಗಳು ನಿಮ್ಮ ಸುತ್ತ ಕೊನೆಯವರೆಗೆ ನಿಲ್ಲುವ ರಕ್ಷಣೆಯ ಗೋಡೆಗಳನ್ನು ಕಟ್ಟುತ್ತವೆಯೆಂದು ಭಾವಿಸಿರುವಿರಾ ? ಜನರ ಮನಸ್ಸಿನಲ್ಲಿ ನಿಮ್ಮ ಜನಾಂಗ ಶ್ರೇಷ್ಠತೆಯ ಕಲ್ಪನೆಗಳು ನೆಲೆಯೂರುವಂತೆ ಮಾಡುವದು. ನಿಮ್ಮ ವಾಮಮಾರ್ಗದಿಂದ ಗಳಿಸಿದ ಸಂಪತ್ತಿನ ಬಗ್ಗೆ ಗರ್ವದಿಂದ ಬೀಗುವಂತೆ ಮಾಡುವುದು, ನೀವು ಮಾಡಿದ ಅನ್ಯಾಯಗಳ ಬಗ್ಗೆ ಅಭಿಮಾನ ಪಡುವಂತೆ ಮಾಡು

ವದು, ಸೋತ ದೇಶಗಳನ್ನು ಅವಮಾನಗಳಿಂದ ಕರಬುವಂತೆ ಮಾಡುವದು. ನೀವು ವೈರಿಗಳಿಂದ ಗೆದ್ದ ಆಯುಧ ಇತ್ಯಾದಿಗಳನ್ನು ಶಾಲೆ ಕಾಲೆಜುಗಳಲ್ಲಿ ಪ್ರದರ್ಶಿಸಿ, ಆ ದೇಶಗಳ ಜನತೆಯು ಬಗ್ಗೆ ತಾತ್ಸಾರ. ಹೇಯ ಭಾವನೆಗಳನ್ನು ಪ್ರಚೋದಿಸುವುದು ಇವು ಪಾಶ್ಚಾತ್ಯ ಸಂಸ್ಕೃತಿಯು ಅತ್ಯಂತ ಹೀನ ಗುಣಗಳನ್ನು ಅನುಕರಿಸಿದಂತೆ. ಪಾಶ್ಚಾತ್ಯರ ಸಂಸ್ಕೃತಿಯು ದೇಹದ ಉಬ್ಬುಗಳು ದೇಹದ ಕೊಳೆತ ರೋಗದ ಉಬ್ಬುಗಳು. ಆ ಕೊಳಕು ಈಗಾಗಲೇ ದೇಹವನ್ನು ಹರಡಿ ತಿನ್ನುತ್ತಲಿದೆ. ("Never think for a moment that the hurts that you inflict upon other races, will not inflict yours; or that the enemities that you sow around your home will be a wall of protection to you for all the time to come. To imbue the minds of a whole people with an abnormal vanity of its own superiority, to teach it to take pride in its moral callousnes and its ill begotten wealth, to perpetuate the humiliation of the defeated nations, by exhibiting trophies won from war and using these in schools in order to breed in children's minad, contempt for others, is imitating the west, where she has a festering sore, whose swelling is a swelling of disease; eating into its vitality."

ಜಪಾನದಿಂದ ಮರಳಿದ ನಂತರ ಜಪಾನದ ಖ್ಯಾತ ಶಾಸ್ತ್ರಜ್ಞ ನಗೂಷಿಗೆ ಅವರು ಪತ್ರಬರೆದು ಹೀಗೆ ಎಚ್ಚರಿಸಿದರು. "ನಿಮ್ಮ ಜನತೆಯು ಬಗ್ಗೆ ಅತ್ಯಂತ ದುಃಖ ಪಟ್ಟು ನಾನು ಬರೆಯುತ್ತಿದ್ದೇನೆ. ಒಂದಿಲ್ಲೊಂದು ದಿನ ನಿಮ್ಮ ಜನತೆಯು ನಿರಾಶೆಯು ತುತ್ತತುದಿಯನ್ನು ತಲುಪುತ್ತದೆ. ನಿಮ್ಮ ದೇಶದ ಯುದ್ಧಪಿಪಾಸೀ ಮುಖಂಡರು ನಿಮ್ಮ ದೇಶಕ್ಕೆ ತರುವ ನಿಮ್ಮ ಸಂಸ್ಕೃತಿಯು ವಿನಾಶದ ಭಯಾನಕ ಗುಡ್ಡದಂಥ ಹೊಲ ಸನ್ನು ಶತಮಾನಗಳ ವರೆಗೆ ತೆಗೆದು ಸ್ವಚ್ಛಮಾಡಬೇಕಾಗುತ್ತದೆ. ನಾನು ಪ್ರೀತಿಸುವ ನಿಮ್ಮ ಜನತೆಗೆ ನಾನು ಕೋರುವದು ಯುಶಸ್ಸನ್ನಲ್ಲ ಆ ದ ರೆ ಪಶ್ಚಾತ್ತಾಪವನ್ನು." ("I speak with utter sorrow for your people. I know that one day the disillusionment of your people will be complete, and through laborious centuries, they will have to clear the debris of their civilization wrought to ruin by their war lords run amuck ..wishing your people whom I love, not suceess but remorse".) ಇವು ಎಂಥ ದೃಷ್ಟಾರನ ಮಾತುಗಳಾಗಿ ಪರಿಣಮಿಸಿದವೆಂಬುದು ೧೯೪೫ ರಲ್ಲಿ ಹಿರೋ ಷಿಮು ನಾಗಾಸಕಿಯು ಮೇಲೆ ಬಾಂಬು ಬಿದ್ದಾಗ ಜಪಾನ ದೇಶದವರಿಗೆ ಅರಿವಾಯಿತು.

ಹೀಗೆ ಜಗತ್ತಿನಲ್ಲಿ ದೇಶ ದೇಶಗಳ ನಡುವೆ, ಜನಾಂಗ ಜನಾಂಗಗಳ ನಡುವೆ ತುಂಬಿಕೊಂಡಿರುವ ವಿಷದ ಉಚ್ಚಾಟನೆಯಾಗಬೇಕು. ಅದಕ್ಕೆ ಸಂಯುಕ್ತ ರಾಷ್ಟ್ರಸಭೆ

(UNO) ಯನ್ನು ಬಲಪಡಿಸಲು ಸದಾ ಯತ್ನ ನಡೆಯಬೇಕು. ಅನ್ಯಾಯಗಳನ್ನು ಅಹಿಂಸೆಯ ಮಾರ್ಗದಿಂದ ಪ್ರತಿಭಟಿಸುವಂತೆ ಮಾನವ ಜನಾಂಗದ ಜಾಗೃತಿ ಆಗಬೇಕು. ಅಂದರೆ ಮಾತ್ರ ಜಗತ್ತಿಗೆ ಉಳಿವು. ಶಾಂತಿ ನಮ್ಮೆಲ್ಲರ ಮಂತ್ರವಾಗಬೇಕು. ಇಂದಿನ ಯುದ್ಧದ ಆಯುಧ ಸಾಮಗ್ರಿಗಳ ಭೀಕರ ಪರಿಣಾಮಗಳ ಬಗ್ಗೆ ನಮ್ಮ ಶಾಲೆ ಕಾಲೇಜುಗಳಲ್ಲಿ ತಿಳಿಯಪಡಿಸಬೇಕು. ತೈಮೂರಲಿಂಗನ ಯುದ್ಧಗಳ ಕ್ರೌರ್ಯದೃಶ್ಯಗಳನ್ನು ಹಾಡಿಹೊಗಳಿ ಅವುಗಳನ್ನು ಉದಾತ್ತೀಕರಿಸುವ ಪಾಠಗಳು ನಮಗೆ ಬೇಕು. ಯುದ್ಧಗಳು ಯಾವದೇ ದೇಶದ ಸ್ವಾತಂತ್ರ್ಯ ಅಥವಾ ಉದಾತ್ತ ಉದ್ದೇಶಗಳಿಂದ ನಡೆದಿದ್ದರೆ ಆ ಉದಾತ್ತ ಆದರ್ಶ ಅಥವಾ ಉದ್ದೇಶಗಳನ್ನು ಮಕ್ಕಳ ಮನಸ್ಸಿನ ಮೇಲೆ ಬಿಂಬಿಸುವ ಪಾಠಗಳು ನಮ್ಮ ವಿದ್ಯಾರ್ಥಿಗಳಿಗೆ ದೊರೆಯಬೇಕು. ಈಗಲೋ ಆಗಲೋ ಎಂಬಂತೆ ಸನ್ನಿಹಿತವಾಗಿರುವ ವಿನಾಶದಿಂದ ಪ್ರಪಂಚವನ್ನು ರಕ್ಷಿಸಿ, ಮಾನವ ಜನಾಂಗವನ್ನು ಶಾಂತಿಪಥದೆಡೆಗೆ ಒಯ್ಯುವದು ಎಲ್ಲ ಪ್ರಾಜ್ಞರ ಕರ್ತವ್ಯ. ಅದಕ್ಕಾಗಿ ವಿಶ್ವಶಾಂತಿ ನಮಗೆ ಬೇಕಾದ ಅತಿ ಮಹತ್ವವಾದ ಮೌಲ್ಯ. ಅದನ್ನು ಎಲ್ಲ ಮಟ್ಟದಲ್ಲಿ, ಎಲ್ಲ ರೀತಿಯಿಂದ ಶಿಕ್ಷಣಕ್ರಮದಲ್ಲಿ ಬಿಂಬಿಸುವದು ಅತ್ಯಂತ ಮಹತ್ವದ್ದಾಗಿದೆ. ೧೯ನೇ ಶತಮಾನದಲ್ಲಿ ಇಂಗ್ಲೀಷ ಕವಿಯೊಬ್ಬ ಮಾನವ ಜನಾಂಗದ ಲೋಕಸಭೆ, ವಿಶ್ವದ ಸಂಯುಕ್ತ ಸಂಘ (Parliament of man, federation of the world) ಎಂಬ ಕನಸು ಕಂಡ ನಾವು ಮನಸ್ಸು ಮಾಡಿದರೆ ಆ ದಿನಗಳು ದೂರಿಲ್ಲ. ಜನಾಂಗ ಜನಾಂಗಗಳಲ್ಲಿ, ದೇಶದೇಶಗಳಲ್ಲಿ ಇಂದು ತಲೆದೋರಿರುವ ಭೀಕರ ಯುದ್ಧಗಳನ್ನು ಇವುಗಳ ಮೂಲಕ ಬಗೆಹರಿಸಿಕೊಳ್ಳಬೇಕು. ಅವುಗಳಲ್ಲಿರುವ ದ್ವೇಷದ ವಾತಾವರಣ ಬದಲಾಗಬೇಕು, ಎಂಬ ಆದರ್ಶ ನಮ್ಮ ಮುಂದುವರೆದ ಜನಾಂಗಗಳಲ್ಲಿ ಮೂಡಿಬರುವದು ಇಂದು ಅವಶ್ಯವಾಗಿದೆ.

ವಿಜ್ಞಾನ ಕೊಡಮಾಡಿದ ಅನೇಕ ಮಹತ್ತರವಾದ ಅನುಕೂಲತೆಗಳಿಂದ ವಿಶ್ವ ಇಂದು ಅತಿ ಸಣ್ಣ ಹಳ್ಳಿ (Global village) ಆದಂತಾಗಿದೆ. ಕೆಲವೇ ಘಂಟೆಗಳಲ್ಲಿ ಜಗತ್ತಿನ ಮೂಲೆಗೆ ಪ್ರವಾಸಮಾಡಿ ಮುಟ್ಟಿ ಬರಬಹುದಾಗಿದೆ. ಕ್ಷಣಗಳಲ್ಲಿ ಜಗತ್ತಿನ ಯಾವ ಮೂಲೆಗೂ ದೂರವಾಣಿಯ ಮೂಲಕ ಸಂಪರ್ಕ ಮಾಡಬಹುದಾಗಿದೆ. ಆದ್ದರಿಂದ ಪ್ರಪಂಚದ ಯಾವದೇ ಮೂಲೆಯಲ್ಲಿ ನಡೆದ ಘಟನೆಯು ನಮಗೆ ತಿಳಿಯದೆ ಇರದು. ಒಂದು ಮೂಲೆಯ ಸಣ್ಣ ದೇಶದಲ್ಲಿ ಬರಗಾಲ ಕಂಡುಬಂದರೆ, ಸ್ವಲ್ಪೇ ಸಮಯದಲ್ಲಿ ಅಲ್ಲಿಗೆ ಆಹಾರಧಾನ್ಯ ತಲುಪಿಸಬಹುದು. ಪ್ರಪಂಚದ ಯಾವದೇ ಮೂಲೆಯಲ್ಲಿ ನಡೆದ ಭೀಕರ ರೋಗ ಉಲ್ಬಣಗೊಂಡರೆ, ಕ್ಷಣಾರ್ಧದಲ್ಲಿ ಅಲ್ಲಿಗೆ ಔಷಧಗಳನ್ನು ಒದಗಿಸಬಹುದು. ವಿಜ್ಞಾನ ಒದಗಿಸಿದ ಈ ಅನುಕೂಲತೆಗಳನ್ನು ಮಾನವ ಜನಾಂಗದ ಕಲ್ಯಾಣಕ್ಕೆ ವಿನಿಯೋಗಿಸುವ ಪ್ರವೃತ್ತಿ ನಮ್ಮಲ್ಲಿ ಬೆಳೆಯಬೇಕು. ಇದೇ ಮಾನವ ಜನಾಂಗವನ್ನೇ ಒಂದಾಗಿ ನೋಡುವ ದೃಷ್ಟಿ (world view)

ನಮ್ಮ ಮುಂದಿನ ಜನಾಂಗಗಳೇ ಬೆಳೆಯಬೇಕು. ಪ್ರಪಂಚದ ಯಾವದೇ ಮೂಲೆ ಯಲ್ಲಿಯು ಜನಾಂಗಕ್ಕೆ ಆಗುವ ಅನ್ಯಾಯದ ಬಗ್ಗೆ ಪ್ರತಿಭಟಿಸುವ ದೃಷ್ಟಿ ಬೇಕು. ಈ ಪ್ರಪಂಚದ ಎಲ್ಲ ಜೀವಾವಳಿಯ ಬಗ್ಗೆ ಅನುಕಂಪ ಉದಾತ್ತಭಾವನೆಯ (Reverance for life) ಬಗ್ಗೆ ಡಾ. ಶ್ವಾಯಿಟ್ಜರ ಹೇಳಿದ ಆದರ್ಶ ಪ್ರಪಂಚದ ಆದರ್ಶವಾಗಬೇಕು. ೧೨ನೇ ಶತಮಾನದಲ್ಲಿಯೇ ಮಹಾತ್ಮಾ ಬಸವಣ್ಣನವರು 'ಸಕಲ ಜೀವಾವಳಿಗೆ ಲೇಸನೇ ಬಯಸು' ಎಂದು ಹೇಳಿದ ಆದರ್ಶ ಎಷ್ಟು ಉದಾತ್ತ ವಾದದ್ದು! ಇಂಥ ವಿಶ್ವವಿಶಾಲ ದೃಷ್ಟಿ, ನಮ್ಮ ಮುಂದಿನ ಜನಾಂಗಕ್ಕೆ ಬೇಕಾಗಿರುವ ಇನ್ನೊಂದು ಮಹತ್ವದ ಮೌಲ್ಯ.

ಭೂಕಂಪ, ನೆರೆಹಾವಳಿಗಳಿಂದ ಸೃಷ್ಟಿಯ ಸ್ವಾಭಾವಿಕ ಆಘಾತಗಳ ಅಪಾಯ ಕ್ಕಿಂತ ಮನುಷ್ಯನೇ ಮಾಡುವ ಅವ್ಯವಹಾರಗಳಿಂದ ಹೆಚ್ಚಿನ ಆಘಾತಗಳು ಭೂಮಿಗೆ ಆಗುತ್ತಲಿವೆ.

ಮನುಷ್ಯಜೀವಿ ಈ ವಿಶ್ವದ ಮೇಲೆ ಎಷ್ಟೋ ಕೋಟಿ ವರ್ಷಗಳ ವರೆಗೆ ಬದುಕಿದ್ದಾನೆ. ಈ ಭೂಮಿಯು ಒದಗಿಸಿದ ಎಲ್ಲ ಸಂಪತ್ತನ್ನು ಆತ ತನ್ನ ಸುಖ ಕ್ಕಾಗಿ ಬಳಿಸಿಕೊಂಡಿದ್ದಾನೆ. ಆದರೆ ಸೃಷ್ಟಿಯ ಅಪಾರವಾದ ಕೊಡುಗೆಗಳನ್ನು ಆತ ಏನು ಮಾಡಿದ್ದಾನೆ ಎಂಬುದನ್ನು ನೆನೆದಾಗ ಮನಸ್ಸಿಗೆ ನೋವಾಗದೆ ಇರದು. ಮನುಷ್ಯ ಬದುಕಲಿಕ್ಕೆ ಅತ್ಯವಶ್ಯವಾದ ಹವೆ ನೀರುಗಳನ್ನು ಕೂಡ ಆತ ಪೂರ್ತಿಯಾಗಿ ಹೊಲಸು ಮಾಡಿ ಬಿಟ್ಟಿದ್ದಾನೆ. ತನ್ನ ಸುತ್ತಲಿರುವ ಗಿಡಗಂಟಿಗಳನ್ನು ಕಡಿದು ಹಾಕಿ ಭೂಮಿಗೆ ಮಳೆಬೀಳದಂತೆ ಮಾಡಿ, ಬಹುಭಾಗ ಭೂಮಿ ಬರಡಾಗುವಂತೆ ಮಾಡಿದ್ದಾನೆ. ಸ್ವಲ್ಪ ಕಾಲದ ಸುಖಕ್ಕಾಗಿ ಆತ ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಎಲ್ಲಿಬೇಕಲ್ಲಿ ಉದ್ದಿಮೆಗಳನ್ನು ಸ್ಥಾಪಿಸಿ ಅದರ ಹೊಲಸಿನಿಂದ ಹವೆಯನ್ನು ನೀರನ್ನು ಕೆಡಿಸಿದ್ದಾನೆ. ಅದರಿಂದ ಜನರಿಗೆ ಸ್ವಚ್ಛನೀರು ಹವೆ ಕೂಡ ಸಿಗದಂತಾಗಿದೆ. ಅನೇಕ ದೇಶಗಳಲ್ಲಿ ವೈಮನಸ್ಸನ್ನು ಹುಟ್ಟಿಸಿಕೊಂಡು ಯುದ್ಧಗಳಲ್ಲಿ ತೊಡಗಿ ಇಡೀ ವಿಶ್ವದ ಬಹುಭಾಗದ ಭೂಮಿಯನ್ನೆಲ್ಲ ಸುಟ್ಟು ಬೂದಿ ಮಾಡುವಂಥ ಭೀಕರ ಬಾಂಬುಗಳನ್ನು ಸೃಷ್ಟಿಸಿ, ಅವುಗಳನ್ನು ಕೆಲವೆಡೆಗೆ ಪ್ರಯೋಗಿಸಿ ಭೂಮಿಯನ್ನು ಮಸಣವನ್ನಾಗಿ ಮಾಡಿದ್ದಾನೆ. ತಾನು ಬದುಕಿರುವ ವಿಶ್ವದ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವದು, ಮನುಷ್ಯ ಜೀವನಕ್ಕೆ ಅತ್ಯವಶ್ಯವಾದ ಹವೆ ನೀರುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವದು, ಪ್ರಪಂಚದ ಉಳಿವಿಗೆ ಅವಶ್ಯವಾದ ವನ್ಯ ಹಾಗೂ ಪ್ರಾಣಿ ಜೀವಗಳನ್ನು ರಕ್ಷಿಸುವದು ಅವನ ಆದ್ಯಕರ್ತವ್ಯವಾಗಿದೆ. ಇದರ ಬಗ್ಗೆ ಆತನು ಇದುವರೆಗೆ ತಳೆದ ನಿರ್ಲಕ್ಷ ಭಾವನೆ ಮುಂದುವರಿದದ್ದಾದರೆ, ಈ ವಿಶ್ವ ಸ್ವಲ್ಪೇ ದಿನಗಳಲ್ಲಿ ಮನುಷ್ಯವಾಸಕ್ಕೆ ನಿರುಪ ಯೋಗಿಯಾಗುವದರಲ್ಲಿ ಸಂದೇಹವಿಲ್ಲ. ಇದು ಮುಂದುವರಿದದ್ದಾದರೆ ಅಸಂಖ್ಯಾತ ರೋಗ ರುಜಿನಗಳಿಗೆ ಮಾನವ ಜನಾಂಗ ತುತ್ತಾಗಿ ನಶಿಸಿ ಹೋಗುವ ಸಾಧ್ಯತೆಯಿದೆ.

ಅದಕ್ಕಾಗಿ ಇಂದಿನ ಹಾಗೂ ಮುಂದಿನ ಜನಾಂಗಗಳಿಗೆ ನಮ್ಮ ಪರಿಸರದ ಬಗ್ಗೆ ಜ್ಞಾನ, ಅದರ ರಕ್ಷಣೆಯ ಆವಶ್ಯಕತೆ ಹಾಗೂ ವಿಧಾನಗಳ ಬಗ್ಗೆ ಅರಿವನ್ನುಂಟು ಮಾಡುವದು ವಿಶ್ವದ ಉಳಿವಿಗಾಗಿ ಅವಶ್ಯವಾಗಿದೆ. ಪರಿಸರದ ಬಗ್ಗೆ ಪರಿಜ್ಞಾನ ಹಾಗೂ ಅದರ ರಕ್ಷಣೆ ಹಾಗೂ ಪೋಷಣೆಯ ವಿಧಾನಗಳನ್ನು ಮುಂದಿನ ಜನಾಂಗಕ್ಕೆ ಕಲಿಸಲು ನಮ್ಮ ಶಿಕ್ಷಣ ಕ್ರಮದಲ್ಲಿ ವ್ಯವಸ್ಥೆಯಾಗಬೇಕಾಗಿದೆ. ಪರಿಸರ ರಕ್ಷಣೆ ಹಾಗೂ ಪೋಷಣೆ ಇಂದಿನ ವಿಶ್ವಕ್ಕೆ ಒಂದು ಅತ್ಯವಶ್ಯವಾದ ಮೌಲ್ಯವಾಗಿದೆ.

ಪ್ರಪಂಚಕ್ಕೆ, ಅದರಲ್ಲಿಯೂ ನಮ್ಮ ದೇಶದ ಜನತೆಗೆ ಅತ್ಯವಶ್ಯವಾದ ಇನ್ನೊಂದು ಮೌಲ್ಯವೆಂದರೆ 'ಕಾಯಕ ಶ್ರದ್ಧೆ'. (work ethic). ದುಡಿಯುವ ಪ್ರವೃತ್ತಿ. ಈ ಪ್ರವೃತ್ತಿಯಿಲ್ಲದ ದೇಶ ಎಂದೂ ಉತ್ಕರ್ಷೆ, ಪ್ರಗತಿ ಹೊಂದ ಲಾರದು. ದುಡಿಯದ ಮನುಷ್ಯ ಸುಖಿಯಾಗಿರಲಾರನು. ಯಾವನು ದುಡಿಯುವ ದಿಲ್ಲವೋ ಅವನಿಗೆ ಉಣ್ಣುವ ಅಧಿಕಾರವೂ ಇಲ್ಲ ಎಂಬ ನೀತಿಯನ್ನು ಬೈಬಲಿನಲ್ಲಿ ಕೂಡ ಹೇಳಲಾಗಿದೆ. ದುಡಿತದ ಪ್ರವೃತ್ತಿಯಿದ್ದ ಜಪಾನದಂಥ ದೇಶಗಳು ತಮ್ಮ ಸಂಪತ್ತನ್ನು ಸಾಕಷ್ಟು ಅಭಿವೃದ್ಧಿಪಡಿಸಿಕೊಂಡು ಜನರ ಜೀವನ ಮಟ್ಟವನ್ನು ಸಾಕಷ್ಟು ಹೆಚ್ಚಿಸಿಕೊಂಡಿವೆ. ದುಡಿತದ ಪ್ರವೃತ್ತಿಯಿಲ್ಲದ ದೇಶಗಳು ಬಡತನದ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಲಿವೆಯೆಂಬುದನ್ನು ಕಾಣುತ್ತೇವೆ. ನಮ್ಮ ಜನತೆಯಲ್ಲಿ ದಿನೆ ದಿನೇ ಆಲಸ್ಯಪ್ರವೃತ್ತಿ, ಮತ್ತು ಕ್ಷಣಿಕ ವಿನೋದಗಳಲ್ಲಿ ವೇಳೆ ಕಳೆಯುವ ಪ್ರವೃತ್ತಿ ಹೆಚ್ಚುತ್ತಲಿದೆ. ಇಂದಿನ ಜನಾಂಗ ಹೇಗೆ ವೇಳೆಯನ್ನು ಕಳೆಯು ತ್ತಿದೆಯೆಂಬುದರ ಬಗ್ಗೆ ನೆನೆಸಿಕೊಂಡಾಗ, ಫಿಲ್ಮಗಳನ್ನು ಟೆಲಿವಿಜನ್ ನೋಡುವದು ಹೋಟೆಲುಗಳು, ಕ್ಲಬ್ಬುಗಳು, ಲಾಟರಿಗಳು, ಕುದುರೆ ಜೂಜುಗಳು, ಕ್ಯಾಸಿನೋ ಗಳು, ಮಟಕಾ, ಕ್ಯಾಬರೆ, ಇಸ್ಪೇಟು ಮುಂತಾದ ಜೂಜಾಟಗಳು, ಕುಡಿಯುವ ಗಡಂಗಗಳು, ಇವು ಹೆಚ್ಚುತ್ತಲಿವೆ. ಇಂದು ಬರುವ ಹೆಚ್ಚು ಸಿನೇಮಾ ಚಿತ್ರಗಳು ರಕ್ತಸುರಿಸುವ ಭೀಕರ ದೃಶ್ಯ ಹಾಗೂ ಕಾಮುಚೇಷ್ಟೆಗಳಿಂದ ತುಂಬಿದಂಥವು. ನಮ್ಮ ಯುವಜನಾಂಗದಲ್ಲಿ ಗಾಂಜಾ, ಚರೀಶ ಮುಂತಾದ 'ಡ್ರಗ್ಸುಗಳ' ಚಟ ದಿನೇ ದಿನೇ ಹೆಚ್ಚುತ್ತಿದೆ. ಇವೆಲ್ಲ ವಿನಾಶಕಾರಿ ಪ್ರವೃತ್ತಿಗಳು. ಇವೆಲ್ಲ ದುಶ್ಚಟಗಳು, ಮನುಷ್ಯನ ಮನಃಶಾಂತಿಯನ್ನು ಕದಡಿ ಅವನನ್ನು ಪಶುವನ್ನಾಗಿ ಮಾಡುವ ಪ್ರವೃತ್ತಿಗಳು. ಇವೆಲ್ಲ ಕ್ಷಣಿಕ ಮನರಂಜನೆಯ ಚಟಗಳಿಗೆ ಬಲಿಯಾಗಿ ಮನುಷ್ಯ ಮತ್ತೆ ದಾನವ ನಾಗುತ್ತಿದ್ದಾನೆ. ಈ ಚಟಗಳಿಗೆ ಬಲಿಯಾಗದೆ, ತನ್ನ ಹಾಗೂ ದೇಶದ ಉತ್ಕರ್ಷೆ ಗಾಗಿ ಕಾಯಕದಲ್ಲಿ ತಲ್ಲೀನನಾಗುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಸತ್ಯಶುದ್ಧ ಕಾಯಕ ಮಹತಿಯನ್ನು ಶರಣರು ಬಹಳ ಮನಮುಟ್ಟುವಂತೆ ಹೇಳಿದ್ದಾರೆ "ಕಾಯಕ ದಲ್ಲಿ ನಿರತನಾದರೆ ಲಿಂಗಪೂಜೆಯ ಕೂಡ ಮರೆಯಬೇ"ಕೆಂದು ಹೇಳುವ ವಚನಕಾರರ ನುಡಿಮುತ್ತುಗಳು ನಮಗೆ ದಾರಿದೀಪವಾಗಬೇಕು. ಅದರಿಂದ ವೈಯಕ್ತಿಕವಾಗಿ

ಪ್ರತಿಯೊಬ್ಬನಿಗೂ ಅವನ ಮನೆತನಕ್ಕೂ ಸುಖ ಸಂಪತ್ತುಗಳು ದೊರೆಯುವವಲ್ಲದೇ, ದೇಶವೂ ಕೂಡ ಅಭಿವೃದ್ಧಿ ಹೊಂದುವದು. ಕಾಯಕವನ್ನು ಉಪೇಕ್ಷಿಸಿ ಕೇವಲ ಕ್ಷಣಿಕವಾದ ಮನರಂಜನೆಯಲ್ಲಿ ನಾವು ಕಾಲ ಕಳೆದದ್ದಾದರೆ, ನಮ್ಮ ಮನೆತನವು ಅಧೋಗತಿಗಿಳಿದು, ಆರ್ಥಿಕ ತೊಂದರೆ ಹೆಚ್ಚಾಗಿ ವಿನಾಶವಾಗುವದಲ್ಲದೇ, ನಾವು ಬದುಕಿರುವ ಸಮಾಜವೂ ದೇಶವೂ ಅಧೋಗತಿಗಿಳಿಯುವವು. ಅದಕ್ಕಾಗಿ ವ್ಯಕ್ತಿ ಹಾಗೂ ಸಮಾಜ ಹಾಗು ದೇಶದ ಉತ್ಕರ್ಷೆ ಪ್ರಗತಿಗಾಗಿ ಸಮಾಜದಲ್ಲಿ ಶಾಂತಿಯ ವಾತಾವರಣಕ್ಕಾಗಿ ನಮಗೆ ಇಂದಿಗೆ ಅತ್ಯವಶ್ಯವಾದ ಇನ್ನೊಂದು ಮೌಲ್ಯ, "ಕಾಯಕಶ್ರದ್ಧೆ" (work ethic). ನಮ್ಮ ಪಠ್ಯಕ್ರಮಂಗಳಲ್ಲಿ ಈ ಕಾಯಕದ ಮಹತಿಯನ್ನು ಎತ್ತಿ ಹೇಳುವ ಪಾಠಗಳ ಸೇರ್ಪಡೆಯಾಗಬೇಕು.

ಇಂದಿನ ಪ್ರಚಾರ ಯುಗದಲ್ಲಿ, ಭೌತಿಕ ವಸ್ತುಗಳ ಆಕರ್ಷಣೆ ಹೆಚ್ಚುತ್ತಲೇ ಇದೆ. ನಮ್ಮ ಸುಖಸಂತೋಷಗಳಿಗೆ ಕಂಡ ವಸ್ತುಗಳೆಲ್ಲ ಬೇಕೆಂಬ ಪ್ರವೃತ್ತಿ ದಿನೇ ದಿನೇ ಹೆಚ್ಚುತ್ತ ಹೋಗುತ್ತಿದೆ. ಇಂಥ ಆಶೆಗೆ ಕೊನೆಯೆಂಬುದಿಲ್ಲ. ಒಂದಲ್ಲ ನಾಲ್ಕು ಕಾರು, ಒಂದಲ್ಲ ನಾಲ್ಕು ಮನೆಗಳು, ಹೊಸ ಹೊಸ ವಸ್ತ್ರ ಒಡವೆಗಳು– ಒಂದೇ ಎರಡೇ ? ಇದರಿಂದ ತೃಪ್ತಿ ದೊರೆಯಲಾರದು. ಆದರೆ ನಮ್ಮ ಅವಶ್ಯಕತೆಗಳನ್ನು ಹಿಡಿತದಲ್ಲಿಟ್ಟುಕೊಂಡು, ಇದ್ದ ವಸ್ತುಗಳ ಪೂರ್ಣ ಉಪಯೋಗ ಮಾಡಿ, ಅದರಲ್ಲಿ ತೃಪ್ತಿ ಪಡುವುದರಲ್ಲಿಯೇ ಸುಖದ ದಾರಿಯಿದೆ. ನಾವು ಬಳಸುವ ಸಾಮಾನುಗಳು ಕಡಿಮೆ ಇದ್ದಷ್ಟು ಅವುಗಳನ್ನು ಚೆನ್ನಾಗಿ ಇಟ್ಟುಕೊಂಡು ಅವುಗಳಿಂದ ನಾವು ಹೆಚ್ಚಿನ ಆನಂದ ಪಡೆಯಬಹುದು. ಗಾಂಧೀಜಿ ಎಂಥ ಸರಳ ಜೀವನ ಬದುಕಿದ್ದರೆಂಬುದನ್ನು ನಾವು ತಿಳಿದಿಲ್ಲವೇ ? ಸರಳ ಜೀವನದ ಸುಖ ಸಂತೃಪ್ತಿಯನ್ನು ಎತ್ತಿ ತೋರಿಸಿ ಆ ಆದರ್ಶ ನಮ್ಮ ಮುಂದಿನ ಜನಾಂಗಕ್ಕೆ ಒಂದು ಶ್ರೇಷ್ಠ ಆದರ್ಶವೆಂಬುದನ್ನು ಎತ್ತಿ ತೋರಿಸಿದರೆ ಅದು ಅವರ ಜೀವನಕ್ಕೆ ಶಾಂತಿ ಸಮಾಧಾನ ಹಾಗೂ ಸುಖ ನೀಡಬಲ್ಲ ಸಾಧನವಾಗಿದೆ.

ಇವಲ್ಲದೇ ನಿರಂತರವಾದ ಹಲವು ಉದಾತ್ತ ಮೌಲ್ಯಗಳ ಬಗ್ಗೆ ನಾವು ಉಪೇಕ್ಷೆ ಮಾಡುವಂತಿಲ್ಲ. ಸತ್ಯ, ಅಹಿಂಸೆ, ನ್ಯಾಯದೃಷ್ಟಿ, ದಯೆ, ಅನುಕಂಪ, ಇವುಗಳನ್ನು ಪೋಷಿಸುವ ಕಥೆ ಉದಾಹರಣೆಗಳು ನಮ್ಮ ಪಠ್ಯಕ್ರಮದಲ್ಲಿ ಅಳವಡಿಸಲ್ಪಡಬೇಕು. ರಾಜಾ ಹರಿಶ್ಚಂದ್ರನ ಕಥೆ, ರಾಮಾಯಣ, ಮಹಾಭಾರತದಂಥ ಮಹಾಕಾವ್ಯಗಳು ಕ್ರಿಸ್ತ, ಬುದ್ಧ. ಗಾಂಧೀಜಿಯವರು ಅಹಿಂಸೆಯ ಮಹತಿಯನ್ನು ತಿಳಿಯಪಡಿಸುವ ದಕ್ಕೆ ಸಹಿಸಿದ ಕಷ್ಟ ಕಾರ್ಪಣ್ಯಗಳು ಇಂಥವುಗಳನ್ನು ಉದಾಹರಣೆಗಳಿಂದ ಮುಂದಿನ ಜನಾಂಗಕ್ಕೆ ತಿಳಿಯಪಡಿಸಬೇಕು. ಇವು ಸದಾ ಚಿರನಿರಂತರವಾದ ಜೀವನ ಮೌಲ್ಯಗಳು. ಇವಲ್ಲದೇ ನಾವು ಒಪ್ಪಿ ನಮ್ಮ ದೇಶದಲ್ಲಿ ನೆಲೆಗೊಳಿಸಿರುವ ಪ್ರಜಾಪ್ರಭುತ್ವ, ಅದರ ಉಳಿವು ಹಾಗೂ ಪೋಷಣೆಗಾಗಿ ಬೇಕಾದ ಸ್ವಾತಂತ್ರಪ್ರಿಯತೆ, ಸಮಾಜವಾದ,

ಸಮಾನತೆ, ಸಕಲ ಧರ್ಮಗಳ ಬಗ್ಗೆ ಸಹಿಷ್ಣುತೆ, ಅನ್ಯರ ಅಭಿಪ್ರಾಯಗಳ ಬಗ್ಗೆ ಗೌರವ. ಇವೆಲ್ಲ ನಾವು ಪೋಷಿಸಬೇಕಾದ ಮೌಲ್ಯಗಳೇ. ಇವೆಲ್ಲವುಗಳ ವಿಚಾರಗಳನ್ನು ಪೋಷಿಸುವ ವಿದ್ಯಾಪದ್ಧತಿ ಹಾಗೂ ಪಠ್ಯಕ್ರಮಗಳನ್ನು ನಮ್ಮ ವಿದ್ಯಾಭ್ಯಾಸದಲ್ಲಿ, ಆಯಾ ಮಟ್ಟಕ್ಕೆ ಅನುಗುಣವಾದ ರೀತಿಯಲ್ಲಿ, ಕಥೆ, ಸೂಕ್ತ ಐತಿಹಾಸಿಕ ಘಟನೆ ಉದಾಹರಣೆಗಳಿಂದ ತಿಳಿಯಪಡಿಸುವಂತಾಗಬೇಕು. ಇದೇ ನಾವು ಇಂದು ಕೇಳು ತ್ತಿರುವ ಮೌಲ್ಯಾಧಾರಿತ ಶಿಕ್ಷಣದ ಮುಖ್ಯ ಉದ್ದೇಶವಾಗಿದೆ.

●

ಕಾವ್ಯದೀಪ್ತಿ

ಈ ವಿಭಾಗದಲ್ಲಿ ....

ಅಮೃತಪುರುಷ

ಅಮೃತವರುಷವು ನಿಮಗೆ, ಅತುಲ ಹರುಷವು ನಮಗೆ
ಗುರುಪುತ್ರ ದೊಡವಾಡ, ಸಿರಿಗನ್ನಡಂ ಗೆಲುಗೆ ॥

ಸೌಜನ್ಯ ಸದುವಿನಯ ನ್ಯಾಯನೀತಿಯು ಸುಗುಣ
ಗುಪ್ತದಾನಿಯೆ ನಿನ್ನ ತೃಪ್ತಜೀವನ ಗಹನ.
ನಮ್ಮ ಸಂಸ್ಕೃತಿಧರ್ಮ ನಿನ್ನ ನೆತ್ತರದರುಣ
ಕಾಂತಿಕೈವಲ್ಯ ವಿಮಲಾಂತರ್ಯ ಸಂಧಾನ ॥

ನ್ಯಾಯ ತಕ್ಕಡಿ ಹಿಡಿದ ವಾಣಿಜ್ಯ ಸಾಮ್ರಾಜ್ಯ
ಸಾಮ್ರಾಟ ಗುರುಪುತ್ರ ಗುರುಪಾದಪುತ್ರ
ಕೃಷಿಕ ಋಷಿ ಕೌಸಂಭನು ಬಡರೈತರಿಗೆ ಭ್ರಾತೃ
ಮಾನವಂತನೆ ಮಾನವತೆ ನಿನಗೆ ಪೂಜ್ಯ ॥

ಬಾಳುವೆಯೆ ಬಂಗಾರ, ಶೀಲವೇ ಶೃಂಗಾರ
ಕಾರುಣ್ಯವೇ ನಿನ್ನ ಕುಲ ಗೌರವಾಧಾರ
ಆಚಾರ ಸುವಿಚಾರ ಪ್ರೇಮವಪರಂಪಾರ
ಧಾರವಾಡದ ಬೀಡು ನಾಡಿಗೆ ಅಲಂಕಾರ ॥

ಪಂಚಪಾಂಡವರಂತೆ ಪಂಚಪುತ್ರರು ಬಲರು
ತೈಲರಾಜರು ನೀವು ಹೆಸರು ಹಸಿರು
ನಿಮ್ಮ ಸರಸಾನಂದರೇ ನಿಮಗೆ ಸಮರು
ದೊಡವಾಡ ಮಾಮನೆಯೆ ನಮಗೆ ತವರು ॥

—ಎನ್ಕೆ

ಶ್ರೀ ಜಿ. ಜಿ. ದೊಡವಾಡ

ನನ್ನ ಅಪ್ಪನ ಜೊತೆಗೆ ದುಡಿದವರು, ನುಡಿದವರು
ಈಗುಳಿದ ನಾಲ್ಕಾರು ಜನರಲ್ಲಿ
ಇವರೆನಗೆ ಆತ್ಮೀಯ ವಾತ್ಸಲ್ಯ ತೋರಿದರು.

ನನ್ನ ಚಿಕ್ಕಂದಿನಲೆ ಮಡಿದ ನನ್ನಪ್ಪ
ಇವರಿಗಾದರ್ಶ.
ವ್ಯವಹಾರ ಜ್ಞಾನ ಸಜ್ಜನಿಕೆ ನೀಡಿದರು:
ಎಂದು ಗೌರವದಿಂದ, ತುಂಬ ಆದರದಿಂದ
ನೆನೆಯುವರು ಗುರುಪುತ್ರಪ್ಪ
ಇಂಥ ಕಾಲದಲಿ ಈ ವಯಸ್ಸಿನಲಿ
ತಮ್ಮ ಸುಸ್ಥಿತಿಯಲಿ.

ದೊಡ್ಡಸ್ತಿಕೆಯ ಮೆಟ್ಟಿಲ ಮೇಲೆ
ಒಂದೊಂದೆ ಒಂದೊಂದು ಹೆಜ್ಜೆ ಹತ್ತಿದರಿವರು,
ಉಳಿದದ್ದು ಜೀವನದ ವೈವಿಧ್ಯ ಹತ್ತಾರು
ತಮಗೆ ತಾವೇ ಬೆನ್ನು ಹತ್ತುವವು.
ಕಾಲ ಬಳಿ ಸುತ್ತುವವು.
ಸುಮ್ಮನೇ ನೋಡಿದರು ಒಂದು ಸಲ ಮಕ್ಕಳನು
ಒಂದು ಸಲ ಇವುಗಳನು ತುಂಬ ಕಾತರದಿಂದ.

ನನ್ನ ಸೋದರಮಾವ ಗುರುಪಾದಪ್ಪ
ಅಪ್ಪನ ಸ್ಥಾನದಲ್ಲಿ ನಿಂತು ನನ್ನ ಬೆಳೆಸಿದ್ದಾಗ
ಕಂಡು ಹರ್ಷಿಸಿದವರು, ದಾರಿ ತೋರಿಸಿದವರು,
ನನ್ನ ಉಪ್ನಯನದಲಿ ನಯನ ತೋಯಿಸಿದವರು.
ಇವರ ಸ್ಮರಿಸುವುದು
ಬೆಳಗಿನಲಿ ಸ್ನಾನ ಅಭಿಮಾನ ಅಭ್ಯುತ್ಥಾನ
ನೆನಪ ಹೊಳೆ ಹರಿಸುವುದು.

— **ಸಿದ್ಧಲಿಂಗ ಪಟ್ಟಣಶೆಟ್ಟಿ**

ನೂರು ವರ್ಷ.... ನಿಮದಾಗಲಿ

ಮರೆತೆನೆಂದೆನಿಸಿದರೆ
ಮರೆಯುವ ಬದುಕೇ ನಿಮ್ಮದು.
ಮಿಂಚಿ ಮರೆಯಾಗುವದು ನಕ್ಷತ್ರ.
ಆಗಸದಿ ಸದಾ ಬದುಕುವುದು ಧ್ರುವ ಚಿತ್ರ

ಎಪ್ಪತ್ತೈದು ವಸಂತಗಳೇ ಸಿಹಿಬಾಳು,
ಬೇವು ಬೆಲ್ಲ, ಸಿಹಿ, ಕಹಿ, ಸುಖದುಃಖ ಸಾಲು
ಬಸವತತ್ವಕ್ಕೆ ಬದುಕು ಸಮಪಾಲು.
ಸಮದರ್ಶಿತ್ವ ಪ್ರೀತಿ ಮಮತೆಯು ನಿಲುವು

ಯತ್ರ ಜೀವ ತತ್ರ ಶಿವ—
ಮಹಾವಾಕ್ಯದ ಪಾಲುಗಾರ.
ಸಕಲ ಜೀವಕೆ ಲೇಸ ಬಯಸುವ
ನಿಮ್ಮ ಹೃದಯ ಕ್ಷೀರಸಾಗರ.

ಮತಿಗೆ ಮಂಗಲ ನಿಮ್ಮ ಸಂಗ–
ತವ ಸಾನಿಧ್ಯಸ್ಪಂದನ,
ಬಾಳ ಬದುಕು ಸಿಹಿಬಂಧನ–
ಸುಖದೈಸಿರಿ ಸಂಧಾನ.

ತಂದೆಯ ಗರಡಿ, ನುರಿತ ಬದುಕು.
ದಯ ಕ್ಷಮೆ ದಾನ ರಕ್ಷಕಳಕು
ಸತ್ಯವೇ ಬಾಳಿನುಸಿರು
ಧರ್ಮ ಬಾಳು ಸದಾ ಹಸಿರು

ಸಂತೋಷದ ಸಂಭ್ರಮದಲಿ
ಅಮೃತೋತ್ಸವ ಜರುಗಲಿ.
ಪೇಟೆಗೆಲ್ಲ ಅಣ್ಣನೆಂಬ
ಹೆಸರು ಚಿರವೆನಿಸಲಿ.

ಸುಖದ ಮಡಲಲಿ, ಶಾಂತಿಯ ಮನದಲಿ
ಆದರ್ಶದ ಹೊನಲಲಿ, ಜಯಿಸಲಿ ಶತಕಾಲ.
ಅಂದಿನ ಸಂಭ್ರಮಕೆ ಮನವಿಟ್ಟು ನನಗೆ
ದೊರಕಲಿ ಸದಾ ಶುಭಕಾಲ.

—ಚಿದಾನಂದ ಘಂಟೆಣ್ಣವರ

ಸಂಸಾರವೆಂಬ ರಾಹುವಿನ ಅಣಲೊಳಗೆ ಇದ್ದೇನಯ್ಯಾ
ಆವಾಗ ನುಂಗಿತ್ತೆಂದರಿಯೆನಯ್ಯಾ

ಸಿದ್ಧರಾಮನ ವಚನ

ಶಿವಶಿವಾ ಎನ್ನ ಕಂದ ನೀ ಬಾರೆಂದು ಕಂಬನಿಯ
ತೊಡೆದೆತ್ತಿ ಆನಂದದಿಂದ ಕಣ್ದೆರವೆಯ ಮಾಡು ಉಳಿಯುಮೇಶ್ವರಾ

ಉಳಿಯುಮೇಶ್ವರ ಚಿಕ್ಕಯ್ಯನ ವಚನ

ಅಮೃತೋತ್ಸವ

ಅಮೃತೋತ್ಸವದಾ ಅತಿಶುಭದಿನವಿದು ಶ್ರೀ ಗುರುಪುತ್ರರದು,
ಕೂಡಿರುವೆವು ಕೋರಲು ಶ್ರೀಯುತರಿಗೆ ಶತಆಯುವ ಇಂದು ॥

ವಾಣಿಜ್ಯೋದ್ಯಮ ಕ್ಷೇತ್ರದಿ ಖ್ಯಾತರು, ನ್ಯಾಯದಿ ದುಡಿದವರು.
ಶ್ರೀಮಂತಿ ಗಂಗಮ್ಮನ ಸತ್ಪುತ್ರರು ಕೊಡುಗೈದೊರೆ ಇವರು ॥

ಹುಟ್ಟಿದೂರು ಕರೀಕಟ್ಟಿ ದುಡಿಯುತಿಹ ಊರು ಧಾರವಾಡ
ಇವರಿಗೆ ಶ್ರೀ ಶಂಭುಲಿಂಗ ಕೃಪೆ ಮೈದಾಳಿದೆ ನೋಡ ॥

ಬಡವ ಬಲ್ಲಿದರ, ಭೇದವಿರದ, ಸಮದೃಷ್ಟಿಯ ಸಜ್ಜನರು
ಕೃಷಿಕ ಜನಕೆ ವರದಾನ ನಮ್ಮ ದೊಡವಾಡ ಅಣ್ಣನವರು ॥

ಕಷ್ಟದ ಕುಲುಮೆಯು ಚೊಕ್ಕ ಚಿನ್ನ, ಸಂಪನ್ನ ಸುಸಂಸ್ಕೃತರು
ಲಲಿತಕಲಾ, ಸಾಹಿತ್ಯ ಕ್ಷೇತ್ರ, ಬಹು ಪ್ರೋತ್ಸಾಹಕರು ॥

ಸಕಲ ಜೀವಿಗಳ ಲೇಸನೆ ಬಯಸುವ ಆಧ್ಯಾತ್ಮಿಕ ವ್ಯಕ್ತಿ
ಶ್ರೀ ಮೃತ್ಯುಂಜಯರಾಶೀರ್ವಾದವೆ ಇವರ ಮೂಲಶಕ್ತಿ ॥

ಸಿರಿಯಲಿ ಲಕ್ಷ್ಮೀಪುತ್ರರಾದರೂ, ಗರ್ವದಿಂದ ದೂರ
ಆದರ್ಶಮಯೀ ಸರಳ ಜೀವಿಗಳು, ಗುಪ್ತದಾನಶೂರ ॥

ಅಮೃತೋತ್ಸವದಾ ಅತಿ ಶುಭದಿನವಿದು ಶ್ರೀ ಗುರುಪುತ್ರರದು
ಕೂಡಿರುವೆವು ಕೋರಲು, ಶ್ರೀಯುತರಿಗೆ ಶತಆಯುವ ಇಂದು ॥

—ವ್ಹಿ. ಸಿ. ಐರಸಂಗ

ಶರಣಜೀವಿ - ಶ್ರೀ ಗುರುಪುತ್ರಪ್ಪನವರು

ಒಮ್ಮೆಯಾದರೂ ಬಾರೊ, ಗೆಳೆಯ
ದೊಡವಾಡರ ಮನೆಗೆ...... ॥ ಪ ॥

ಧಾರವಾಡ ಮಧ್ಯದಲಿ
ಸೈದಾಪುರದ ಚೌಕಿನಲಿ
ಸಗ್ಗದ ಸುಖ – ಸೂಸಿನಿಂತ
ಶಾಂತಿಯ ಸಿರಿ ಮನೆಗೆ...... ॥ ೧ ॥

ನಗುತ ಸ್ವಾಗತ ದೊರೆವುದು
ಸೌಜನ್ಯ ಸರಳತೆ ಮೆರೆವುದು
ಸಂಪ್ರೀತಿ ಉಕ್ಕಿ ಹರಿವುದು
ಕಾರ್ಯ ನೆಮ್ಮದಿ ದೊರೆವುದು...... ॥ ೨ ॥

ಆಧ್ಯಾತ್ಮತತ್ತ್ವನರಿತುಕೊಂಡು
ಸತ್ಯಜೀವನ ನಡೆಸುತಿಹರು.
ಶರಣ ಬಾಳನು ಬೆಳಗುತಿಹರು.
ಶ್ರೀ ಗುರುಪುತ್ರಪ್ಪನವರು...... ॥ ೩ ॥

ಒಮ್ಮೆಯಾದರೂ ಬಾರೊ, ಗೆಳೆಯ
ದೊಡವಾಡರ ಮನೆಗೆ–
ವಿನಯದ ಸಿರಿಮನೆಗೆ...... । ೪ ॥

—ಮಾರ್ಕಂಡೇಯ ದೊಡಮನಿ

ಶಂಭುಲಿಂಗನ ವಾಸ

ವಂಶದ ಎದೆದನಿ ಕೇಳಿತು.
ಓಗೊಟ್ಟಿತು ನಿಜಗುಣ ಬೆಟ್ಟ.
ಮನೆತನದೇಳಿಗೆಯರಿತು,
ಶಂಭುಲಿಂಗ ವರವ ಕೊಟ್ಟ... ॥ ೧ ॥

ಶ್ರೀಗುರು ಪಾದಸಂಜಾತ,
ಧನ್ಯರೈ ನೀವು ಗುರುಪುತ್ರರು.
ಶ್ರೀಮಾತೆ ಗಂಗಾಂಬೆ-ತನುಜಾತ
ನೀವು ಏಕಮೇವ ಸುಪುತ್ರ... ॥ ೨ ॥

ದೇವಿ ಶಾಂಭವಿಯು ಸಿರಿಹೆಜ್ಜೆಗೆ,
ಕಾಲಂದುಗೆಯು ಕಿರುಗೆಜ್ಜೆ,
ಜೊತೆಗೂಡಿದೆ ನಿಮ್ಮ ಹೆಜ್ಜೆಗೆ
ಹಗುರಾಗಿದೆ ಸಂಸಾರದ ಒಜ್ಜೆ... ॥ ೩ ॥

ಸುರಿಮಳೆ, ಜಡಿಮಳೆ, ಹೊನ್ನಮಳೆ,
ನಿಮಗಾಗಿದೆ ಭವ್ಯ ಸರಸಾನಂದ.
ಕಾಂಚನ ಗಂಗಾದೇವಿಯು ದಿವ್ಯಕಳೆ,
ಅಲ್ಲೂ ಸಲ್ಲಿದೆ ಪರಮಾನಂದ... ॥ ೪ ॥

ಎನಿತು ಕಣ್ಣೆ ಸುಮನೋಹರ !
ಇಂದು ಇಷ್ಟಲಿಂಗದ ಬೆಳದಿಂಗಳ !
ಒಲಿದು ಉಸುರಿದ ಭವಹರ
ನಿತ್ಯ ನಿಮಗೆ ಶುಭಮಂಗಳ !... ॥ ೫ ॥

ಆರ್ತಧ್ವನಿಗೆ ನಿಮ್ಮ ಸದ್ಗುಣಾವಳಿ
ಓಗೊಡಲು ಆದುವೆ ದಯಾನಂದ
ಲಲಿತ ಸಹಸ್ರನಾಮಾವಳಿ—
ಮಿಗಿಲುಂಟೆ ? ಮಹಾನಂದ... ॥ ೬ ॥

ಕಾಯಕದಿ ಕಂಡಿರಿ ಕೈಲಾಸ
ಪಡೆದಿರಿ ಪರಮಾರ್ಥ ಪ್ರಭಾಪರಿಧಿ !
ನಿಮ್ಮ ಹೃದಯದಿ ಶಂಭುಲಿಂಗನ ವಾಸ
ಅದುವೆ ಅಲ್ತೆ ಆತ್ಮಶ್ರೀ ನಿಧಿ ?... ॥ ೭ ॥

ನಿಮ್ಮ ಗುಣಸಿರಿ ಸಂಪದಕೆ ಶ್ರೀಕಾಂತ
ನಿತ್ಯ ಸುಮಂಗಲ ಸಚ್ಚಾರಿತ್ರ
ನಿತಿನ್ ಚಂದ್ರಸೆ ಆರೋಗ್ಯವಿಧಾತ
ರಾಜರಾಜೇಶ್ವರಿಯು ಹೃನ್ಮಿತ್ರಂ. ॥ ೮ ॥

ಶ್ರೀಗುರು ಮೃತ್ಯುಂಜಯಗೆ
ಶಿರಬಾಗಿದಿರಿ ಆ ಕರುಣಾಕರಗೆ.
ಶ್ರೀ ಮಹಾಂತ ಗುರುವರಗೆ
ಮತ್ತೆ ಮುರುಘೇಂದ್ರ ಶಿವಯೋಗಿಗೆ ॥ ೯ ॥

ಗೌರವವಿದೆ ನಿಮಗೆಂದೆಂದು,
ಶತಮಾನದಾಚೆಯು ಬಾಳಲು !
ನೂರ್ಕಾಲ ಹಿರಿಯರಾಗಿರಲೆಂದು
ಬೇಡುವೆ ಶಾಂತಲಯೋಗಿಶನಲು !... ॥ ೧೦ ॥

—ಶಾಂತಲಾ ಯಡ್ರಾವಿ

ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಕಾಣದೆ
ಕಣ್ಣಡಕದ ಕಣ್ಣನಂತೆ ಕಣ್ಣೆನಿಸಿ ಕೆಟ್ಟೆನಯ್ಯಾ ಶಿವಘೋಶಿವಘೋ
ಆದಯ್ಯ

ಗುರುಪುತ್ರ - ಅಮೃತಪುತ್ರ

ಗುರುಪುತ್ರ ನೀವಹುದು ಅಮೃತಪುತ್ರ !
ನಿಜದಂಕ, ಸಂಸಾರಕಾಸಾರದಂಬುಜಪತ್ರ !
ನಿರ್ಲೇಪ, ನಿವರ್ಾನಿ ವಿನಯುವನ ಚೈತ್ರ !
ನಂಬಿದರ ಬಾಳಗೋಳಿಗೆ ನೀವು ನಿಜ ಚೈತ್ರ !

ಜೀವನದ ಯಶಃಶ್ರೀಯು ಉತ್ಸಾಹ ಉತ್ಸವ !
ನಿಮುಗಿದೊ ಆತ್ಮೀಯರಿಂ ಅಮೃತಮುಹೋತ್ಸವ !
ನಂಬಿ ಬಾಳಿದ ನಿಮಗೆ ತಾಕಿಲ್ಲ ವಿಪ್ಲವ !
ನೀವಿಹಿರಿ ಬದುಕಿನಲಿ ಆದರ್ಶ ಮಾನವ !

ಶಂಭುಲಿಂಗನಲಿ ನಿಮುಗಿಹುದು ನಿಜಭಕ್ತಿ !
ಮೃತ್ಯುಂಜಯುಪ್ಪಗಳ ಕೃಪೆ ನಿಮಗೆ ಮಹಾಶಕ್ತಿ !
ವ್ಯಾಪಾರ ಉದ್ಯೋಗದಲಿ ನಿಮ್ಮ ಜಾಣ್ಮೆಯುಕ್ತಿ !
ಎಲ್ಲರನು ಗೆಲ್ಲುವ ನಗುಮೊಗದ ವಿನಯೋಕ್ತಿ !

ಬಡವರಿಗೆ ಭಾಗ್ಯನಿಧಿ. ಬಲ್ಲಿದರ ಸ್ನೇಹನಿಧಿ !
ಬದುಕಿನುದ್ದಕ್ಕೂ ನಿಮ್ಮ ಹೆಜ್ಜೆಯನಂತ ವಿಧಿ !
ನಿಮ್ಮ ಹೃದಯಕೆ ಇಲ್ಲಿ ಪರಿಮಿತದ ಪರಿಧಿ !

ನಿಮ್ಮ ಬಾಳಲಿ ಸೊಗಸು ಮೂಡಿದೆ !
ನಿಮ್ಮ ನಡೆಯಲಿ ಜೇನು ಕೂಡಿದೆ !
ನಿಮ್ಮ ನಗೆಯಲಿ ಹೂವು ಬದುಕಿದೆ !
ನಿಮ್ಮ ನಡೆಯಲಿ ವಿನಯ ತುಳುಕಿದೆ !

ನೀವು ಬಾಳಿರಿ ನೂರು ಮಿಕ್ಕಿದ ವರುಷ !
ನಿಮ್ಮ ಬಂಧುಗಳಾದ ನಮಗೆಲ್ಲ ಹರುಷ !
ಗುರುಪುತ್ರ ನೀವಿಹಿರಿ ಅಮೃತಪುತ್ರ !
ನಿರ್ಲಿಪ್ತ, ಸಂಸಾರಕಾಸಾರದಂಬುಜಪತ್ರ !

—ಗುರುದೇವ ಯಡ್ರಾವಿ

ಧಾರವಾಡದ ಹಿರಿಯ ಜೀವ

ಧಾರವಾಡದಲೊಂದು ಹಿರಿಜೀವ ಬೆಳಗುತಿದೆ
ಒಮ್ಮೆಯಾದರು ನೀನು ನೋಡಿರುವೆಯಾ ?
ಯಾರವನು ? ಎಲ್ಲಿಹನು ? ಎಂದರಸಿ ಹೋದರೆ
ಜನರೊಳಗೆ ಸಾಮಾನ್ಯ: ಎದ್ದು ಕಾಣದ ಮಾನ್ಯ.

ಧರೆಯ ಸಹನೆಯು ತಾ ಮೈದಳೆದಿರಂತೆ,
ಚಂದ್ರ ಶೀತಲಸರಸಿ ಹರಿದಿಲ್ಲಿ ಬಂತೊ
ಸರ್ವರ ಹಿತಕಾರಿ ಮಳೆ ಮೂರ್ತರೂಪವೊ,
ಸ್ಫೂರ್ತಿಯ ಜೊತೆ ಬೆರೆತ ಚೈತನ್ಯವೊ
ಈ ತೆರದಿ ಇರುವವನ ನೋಡಿರುವಿಯಾ ?
ಯಾರವನು ? ಎಲ್ಲಿಹನು ? ಎಂದರಸಿ ಹೋದರೆ
ಜನರೊಳಗೆ ಸಾಮಾನ್ಯ: ಎದ್ದು ಕಾಣದ ಮಾನ್ಯ.

ನಡೆ – ನುಡಿ ಹಿತವಿಂತ, ವೇಷ – ಭೂಷಣ ಸಹಿತ,
ಸರಸ ಸಜ್ಜನಿಕೆಗೆ ಹೇಳಿ ಮಾಡಿಸಿದಾತ,
ದಾನ ಧರ್ಮಗಳಲಿ ತನ್ನ ತೊಡಗಿಸಿದಾತ.
ಶ್ರಮದಲ್ಲಿ ದೇವರನು ಕಾಣುವಾತ,
ಈ ತೆರದಿ ಇರುವವನ ನೋಡಿರುವೆಯಾ ?
ಯಾರವನು ? ಎಲ್ಲಿಹನು ? ಎಂದರಸಿ ಹೋದರೆ
ಜನರೊಳಗೆ ಸಾಮಾನ್ಯ, ಎದ್ದು ಕಾಣದ ಮಾನ್ಯ.

ಯೋಜಿಸದೆ ಕಾರ್ಯ ತಾ ಮಾಡುವವನಲ್ಲ,
ಅತಿಯಾಶೆ ಪಟ್ಟು ತಾ ಮರುಗುವವನಲ್ಲ,
ವೇದಿಕೆಯ ಭಾಷಣವ ಅವನೆಂದು ಬಯಸಿಲ್ಲ,
ಆಲಸಿಗಳಿರುವಲ್ಲಿ ಅವನಿರುವದಿಲ್ಲ,
ಈ ತೆರದಿ ಇರುವವನ ನೋಡಿರುವೆಯಾ ?
ಯಾರವನು ? ಎಲ್ಲಿಹನು ? ಎಂದರಸಿ ಹೋದರೆ
ಜನರೊಳಗೆ ಸಾಮಾನ್ಯ, ಎದ್ದು ಕಾಣದ ಮಾನ್ಯ.

ಮುರುಘಾಮಠ ಭಕ್ತ ಕೈಂಕರ್ಯ ಭಾವ,
ಕಾಯಕವೆ ಕೈಲಾಸವೆಂದರಿತ ಜೀವ,
ಸರ್ವರಿಗು ಸುಖವಾಗಲೆನ್ನುತಿಹ ಭಾವ,
ಅನುಭವದಿ ಅರಿತಿರುವ ಬಡಜನರ ನೋವ
ಈ ತೆರದಿ ಇರುವವನ ನೋಡಿರುವೆಯಾ ?
ಹೇಳಬಾರದೆ ಅವನು ಯಾರೆಂದು ಬೇಗ,
ಹೇಗೆ ಗುರುತಿಸಬೇಕು ಅವನನ್ನು ಈಗ ?

ಕೆಲಸ ನಡೆದೆಡೆಯಲ್ಲಿ ನೀ ಹೋಗಿ ನೋಡು
ನಿಂತು ಮಾಡಿಸುವವನೆ ? ಅವನಲ್ಲ ಬಿಡು,
ಮಹಾಡಂಬರ ಮಧ್ಯದಲಿ ಅವನನ್ನು ಹುಡುಕು,
ದುಡಿತದಲಿ ಕಂಡಿಹನು ಸುಖ–ಶಾಂತಿ ಬದುಕು
ಯಾರವನು ? ಎಲ್ಲಿಹನು ? ಹೆಸರೇನು ಹೇಳು !

ಬಿಳಿ ಬಟ್ಟೆ ಕರಿ ಟೋಪಿ ಮುಖ ಮಗುವಿನಂತೆ,
ಸೇವೆಗೈಯ್ಯುವ ರೀತಿ ಎಲೆಮರೆಯ ಕಾಯಂತೆ,
ಎಪ್ಪತ್ತರ ಮೇಲೆ ಮತ್ತೇಳು ವರುಷ
ಕಷ್ಟಗಳಿಗೆದೆಗೊಟ್ಟು ಬಂದ ಪುರುಷ
ಹೆಸರು ಗುರುಪುತ್ರಪ್ಪ ತಂದೆ ಗುರುಪಾದಪ್ಪ
ದೊಡವಾಡ ಮನೆತನದಿ ಮೂಡಿ ಬಂದಿಹ ಪುತ್ರ.
ಓಹ್ ! ಹೌದಲ್ಲ !
ಹೆಸರನ್ನು ಕೇಳಿದ್ದೆ; ನೋಡಿಯೇ ಇರಲಿಲ್ಲ !
ಇಂಥವರು ಈಗಲೂ ಇರುವರಲ್ಲ ! !

—ರಾಮಚಂದ್ರ ಪಾಟೀಲ

ನಾ ಕಾಣದ ನೀಲಾಕಾಶ

ನಾ ಮರೆತ ಅರಿವಿನ ಅರೆಕ್ಷಣದ
ಭಾವ ತಿಮಿರ ನೀಲಾಕಾಶದಲ್ಲೊಂದು
ನಕ್ಷತ್ರ ಮೂಡಿ, ಮಿಂಚುತ್ತಿದಂತೆ
ಫಳಕ್ಕನೇ ಉದುರಿ
ಉಲ್ಕಾಪಾತವಾದಾಗ.

ಕಂಡ
ಕಾಣಬಯಸಿದ ಕಂಪು
ಕನಸುಗಳ
ಕೆಂಪು ರಕ್ತ ಸಿಂಚಿತ ಮೋಡ
ಕಪ್ಪಾಗಿ, ಕಲ್ಲಾಗಿ ಕರಗಿ
ಗಿಡಬಳ್ಳಿಗಳಿಗೆಲ್ಲ ಹಸಿರುಡಿಸಿ
ಹೂಮುಡಿಸಿ,
ಅರಿವಿನಾಚೆಯ ಅನಂತದಲಿ
ಆಕಾಶತುಂಬ ಧೂಪ
ದೀಪಸ್ತಂಭವಾದಾಗ.

ಹಕ್ಕಿ ಚಿಲಿಪಿಲಿ ಉಲಿವಿನಲ್ಲೊಂದು
ಮಗು
ಕಿಲಿಕಿಲಿಸಿ ನಕ್ಕ ನಗೆ
ನೀಲಾಕಾಶ ತುಂಬಿತ್ತು
ಅರಿವು ದೀಪ್ತಿ ಹೊಂಬಣ್ಣವಾಗಿ
ಮುಂಜಾವ ಮೊಳಗಿಸಿತ್ತು

—ಸೋಮಶೇಖರ ಇಮ್ರಾಪೂರ

ವಿನಯ ಗಂಗಾ

ಗಂಗಾ
ವಿನಯ ಗಂಗಾ
ಸ್ನೇಹ ತರಂಗಾ
ಕರ್ಮದ ಭೃಂಗಾ
ಸೇವಾಂತರಂಗಾ
ಸೌಮ್ಯ ಅಭಂಗಾ.
ಗಂಗಾ ವಿನಯ ಗಂಗಾ

ವಾಣಿಜ್ಯ ಬೀಜಗಳ
ನಾಡಲ್ಲಿ ಬಿತ್ತಿ
ನೆರೆರಾಜ್ಯ ಚಪ್ಪರಕೆ
ಉದ್ಯಮ ಸುತ್ತಿ
ಹೊತ್ತು ಗೊತ್ತಿಲ್ಲದ ಕರ್ಮದ ಭಕ್ತಿ
ಗಂಗಾ ವಿನಯ ಗಂಗಾ

ಕೊಡುಗೈಯ ದೊರೆಯಾಗಿ
ಸಂಪದವ ಮೆರೆದ
ರೈತಮಕ್ಕಳ ಮೊರೆಗೆ
ಪಿತನಾಗಿ ಹರಿದೆ
ಮಾನವತೆ ಸುರಿದೆ
ಗಂಗಾ ವಿನಯ ಗಂಗಾ

—ಮಾಲತಿ ಪಟ್ಟಣಶೆಟ್ಟಿ

ಸಮಾರಂಭದೀಪ್ತಿ

ಆಮಂತ್ರಣ ಪತ್ರಿಕೆ • ಕಾರ್ಯಕ್ರಮಂಗಳ ವಿವರ • ವಿವಿಧ ಸಮಿತಿಗಳು • ಅಮೃತ ಮಹೋತ್ಸವದ ವಿಶೇಷ ವರದಿ • ಸ್ವಾಗತ ಭಾಷಣ • ಸನ್ಮಾನ ಪತ್ರ • ಸನ್ಮಾನಿಸಿದ್ದಕ್ಕಾಗಿ ಕೃತಜ್ಞತೆ • ಮುಖ್ಯ ಅತಿಥಿಗಳ ಭಾಷಣ • ಪೂಜ್ಯರ ಆಶೀರ್ವಚನಗಳು • ಕೃತಜ್ಞತೆಗಳು.

॥ ಶ್ರೀ ಮಹದೇಶ್ವರ ಪ್ರಸನ್ನ ॥

ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ

ಅವರ

ಅಮೃತಮಹೋತ್ಸವ

೨೯-೧-೧೯೮೮ ಮುಂ. ೧೦ ಗಂ.

ಆತ್ಮೀಯರೇ,

ಪರಮಪೂಜ್ಯ ಜಗದ್ಗುರುಗಳಾದ
ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಚಿತ್ರದುರ್ಗ ಹಾಗೂ
ಪರಮಪೂಜ್ಯ **ಶ್ರೀ ಮಹಾಂತಪ್ಪಗಳು** ಮುರುಘಾಮಠ,
ಧಾರವಾಡ ಇವರ ದಿವ್ಯ ಸನ್ನಿಧಿಯಲ್ಲಿ, ಶುಕ್ರವಾರ
ದಿ. ೨೯-೧-೧೯೮೮ ರಂದು ಬೆಳಿಗ್ಗೆ ೧೦ ಗಂಟೆಗೆ

ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ
ಅವರ
ಅಮೃತ ಮಹೋತ್ಸವ ಜರುಗುವದು.

ಉದ್ಘಾಟಕರು :
ಪರಮಪೂಜ್ಯ ಜಗದ್ಗುರು
ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ತೋಂಟದಾರ್ಯಮಠ ಡಂಬಳ - ಗದಗ

ಶ್ರೀ ಚನ್ನಬಸವಣ್ಣನವರ ವಚನಗಳು – ಗ್ರಂಥ ಬಿಡುಗಡೆ :
ಪರಮಪೂಜ್ಯ **ಶ್ರೀ ನೀಲಕಂಠ ಮಹಾಸ್ವಾಮಿಗಳು**
ಮುರಡುಂಡೇಶ್ವರ ಮಠ, ಮುರಗೋಡ

ಅಧ್ಯಕ್ಷರು :

ಮಾನ್ಯಶ್ರೀ ಬಿ. ಡಿ. ಜತ್ತಿ ಮಾಜಿ ಉಪರಾಷ್ಟ್ರಪತಿಗಳು

ಮುಖ್ಯ ಅತಿಥಿಗಳು :

ಮಾನ್ಯ ಶ್ರೀ ಡಿ. ಎಂ. ಚಂದ್ರಶೇಖರ

ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಮಾಜಿ ಮುಖ್ಯ
ನ್ಯಾಯಾಧೀಶರು ಇವರಿಂದ
'ಧರ್ಮದೀಪ್ತಿ' ಅಭಿನಂದನ ಗ್ರಂಥ ಬಿಡುಗಡೆ.

ತಾವು ತಮ್ಮ ಆತ್ಮೀಯರೊಂದಿಗೆ ಆಗಮಿಸಿ,
ಸಮಾರಂಭದಲ್ಲಿ ಉಪಸ್ಥಿತರಿದ್ದು ಶೋಭೆಯನ್ನು
ತರಬೇಕಾಗಿ ಕೋರುತ್ತೇವೆ

ಸಮಾರಂಭ ನಡೆಯುವ ಸ್ಥಳ :
ಶ್ರೀ ದೊಡವಾಡ ಅವರ ನಿವಾಸ
'ಕಾಂಚನಗಂಗಾ', ವಿದ್ಯಾಗಿರಿ
ಧಾರವಾಡ - ೫೮೧ ೦೦೪.

ಶ್ರೀ ಜಿ. ಜಿ. ದೊಡವಾಡ
ಅಮೃತ ಮಹೋತ್ಸವ
ಸ್ವಾಗತ ಸಮಿತಿ, ಧಾರವಾಡ

॥ ಶ್ರೀಗುರು ಬಸವಲಿಂಗಾಯ ನಮಃ ॥

ಶ್ರೀ ಜಿ. ಜಿ. ದೊಡವಾಡ ಅಮೃತಮಹೋತ್ಸವ

ಕಾರ್ಯಕ್ರಮಗಳು

ಶುಕ್ರವಾರ ದಿ. ೨೯-೧-೧೯೮೮

೧. ಗೃಹಪ್ರವೇಶ ಮತ್ತು ತುಲಾಭಾರ

ಮುಂ. ೯-೦೦ ಗಂಟೆ : "ಸರಸಗಂಗಾ" ಗೃಹಪ್ರವೇಶ

೯-೧೫ : 'ಪೂರ್ಣಕುಂಭ' ವಾದ್ಯಮೇಳದೊಂದಿಗೆ ಸಭಾಮಂಟಪದ ವರೆಗೆ ಮೆರವಣಿಗೆ

೯-೪೦ : 'ಸ್ವರವಚನ'— ಕು. ನಂದಾ ಪಾಟೀಲ

೯-೫೦ : 'ತುಲಾಭಾರ'

ಶತಾಯುಷಿ ಶರಣೆ ಶ್ರೀಮತಿ ಗಂಗವ್ವನವರು ದೊಡವಾಡ

—ಪರಮಪೂಜ್ಯ ಶ್ರೀ ಮಹಾಂತಪ್ಪಗಳು ಮುರುಘಾಮಠ, ಧಾರವಾಡ ಅವರ ಅಮೃತ ಹಸ್ತದಿಂದ

೨. ಅಮೃತ ಮಹೋತ್ಸವ

ಮುಂ. ೧೦-೧೫ ರಿಂದ : ಪ್ರಾರ್ಥನೆ—ಕು. ನಂದಾ ಪಾಟೀಲ

ಸ್ವಾಗತ : ಪದ್ಮಶ್ರೀ ಡಾ. ಆರ್. ಬಿ. ಪಾಟೀಲ

ಪರಿಚಯ ಮತ್ತು ಮಾಲಾರ್ಪಣೆ

೧. ಪರಮಪೂಜ್ಯ ಜಗದ್ಗುರು
ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಚಿತ್ರದುರ್ಗ ಇವರಿಗೆ,
—ಶ್ರೀ ಸರಸಾನಂದ ಜಿ. ದೊಡವಾಡ ಇವರಿಂದ

೨. ಉದ್ಘಾಟಕರಾದ ಪರಮಪೂಜ್ಯ ಜಗದ್ಗುರು
ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯ ಮಠ, ಡಂಬಳ - ಗದಗ ಇವರಿಗೆ,
—ಶ್ರೀ ಎಸ್. ಎನ್. ಸೀಮಿಕೇರಿಮಠ, ಇವರಿಂದ

೩. ಪರಮಪೂಜ್ಯ ಶ್ರೀ ಮಹಾಂತಪ್ಪಗಳು, ಮುರುಘಾಮಠ, ಧಾರವಾಡ ಇವರಿಗೆ,

–ಶ್ರೀ ಅಣ್ಣಪ್ಪ ಕುಂದಗೋಳ ಇವರಿಂದ

೪. 'ಶ್ರೀ ಚನ್ನಬಸವಣ್ಣನವರ ವಚನಗಳು' ಗ್ರಂಥ ಬಿಡುಗಡೆ ಮಾಡುವ ಪರಮಪೂಜ್ಯ ಶ್ರೀ ನೀಲಕಂಠ ಮಹಾಸ್ವಾಮಿಗಳು ದುರದುಂಡೀಶ್ವರಮಠ ಮುರಗೋಡ ಇವರಿಗೆ–

–ಶ್ರೀ ಬಿ. ಜಿ. ದೊಡಮನಿ ಇವರಿಂದ

೫. ಮಾತೋಶ್ರೀ ಗಂಗಮ್ಮ ಇವರಿಗೆ

–ಶ್ರೀಮತಿ ಸುಮಂಗಲಾ ಪಾಟೀಲ ಇವರಿಂದ

೬. ಶ್ರೀ ಜಿ. ಜಿ. ದೊಡವಾಡ ಅವರಿಗೆ

- ಶ್ರೀ ಬಿ. ಎಸ್. ಲಕಮನಹಳ್ಳಿ ಇವರಿಂದ

೭. ಶ್ರೀಮತಿ ಶಾಂಭವಿ ದೊಡವಾಡ ಅವರಿಗೆ

–ಶ್ರೀಮತಿ ನೀಲಕ್ಕ ಬೆಲ್ಲದ ಇವರಿಂದ

೮. ಮುಖ್ಯ ಅತಿಥಿ. 'ಧರ್ಮದೀಪ್ತಿ' ಅಭಿನಂದನ ಗ್ರಂಥ ಬಿಡುಗಡೆ ಮಾಡುವ ಮಾನ್ಯ ಶ್ರೀ ಡಿ. ಎಂ. ಚಂದ್ರಶೇಖರ ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರು ಇವರಿಗೆ

-ಶ್ರೀ ಈರಣ್ಣ ವಾಣಿ ಇವರಿಂದ

೯. ಸ್ವಾಗತಾಧ್ಯಕ್ಷರಾದ ಪದ್ಮಶ್ರೀ ಡಾ. ಆರ್. ಬಿ. ಪಾಟೀಲ ಇವರಿಗೆ

– ಶ್ರೀ ವಿ. ಎಸ್. ಬೆಟಗೇರಿ ಇವರಿಂದ

೧೦. ಕಾರ್ಯಾಧ್ಯಕ್ಷರಾದ ಶ್ರೀ ಬಿ. ಎಸ್. ಲಕಮನಹಳ್ಳಿ ಇವರಿಗೆ

– ಶ್ರೀ ಎಂ. ಜಿ. ಅಗಡಿ ಇವರಿಂದ

೩. ಸಮಾರಂಭದ ಉದ್ಘಾಟನೆ : ಜ್ಯೋತಿ ಬೆಳಗುವದರೊಂದಿಗೆ
ಪರಮಪೂಜ್ಯ ಜಗದ್ಗುರು ಶ್ರೀ ಸಿದ್ಧಲಿಂಗ
ಮಹಾಸ್ವಾಮಿಗಳು, ತೋಂಟದಾರ್ಯ ಮಠ,
ಡಂಬಳ – ಗದಗ ಅವರಿಂದ

೪. ಸಂದೇಶ ವಾಚನ : ಡಾ. ಚೆನ್ನಕ್ಕ ಎಲಿಗಾರ

೫. ಮಾನ್ಯ ಶ್ರೀ ಜಿ. ಜಿ. ದೊಡವಾಡ : ಪರಮಪೂಜ್ಯ ಜಗದ್ಗುರು
ಇವರಿಗೆ ಸನ್ಮಾನ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು
ಬೃಹನ್ಮಠ, ಚಿತ್ರದುರ್ಗ ಇವರಿಂದ

೬.	ಶ್ರೀಮಂತಿ ಶಾಂಭವಿ ದೊಡವಾಡ : ಇವರಿಗೆ	ಶ್ರೀಮತಿ ವಿಶಾಲಾಕ್ಷಿ ಪತ್ತಿಕಾಳ ಇವರಿಂದ
೭.	ಮಾನಪತ್ರ ಓದುವದು	ಶ್ರೀ ಈರಣ್ಣ ವಾಣಿ
೮.	ಮಾಲಾರ್ಪಣೆ	ಸಂಘ ಸಂಸ್ಥೆಗಳಿಂದ
೯.	'ಧರ್ಮದೀಪ್ತಿ' ಅಭಿನಂದನ ಗ್ರಂಥ ಬಿಡುಗಡೆ (ಸಹಾಯ : ಶ್ರೀ ಎಂ. ಜಿ. ನಡಕಟ್ಟಿ)	ಮುಖ್ಯ ಅತಿಥಿಗಳಾದ ಮಾನ್ಯ ಶ್ರೀ ಡಿ. ಎಂ. ಚಂದ್ರಶೇಖರ ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಮಾಜಿ ನ್ಯಾಯಾಧೀಶರು.
೧೦.	ಸನ್ಮಾನಕ್ಕೆ ಉತ್ತರ	ಸನ್ಮಾನಿತರಾದ ಮಾನ್ಯ ಶ್ರೀ ಜಿ. ಜಿ. ದೊಡವಾಡ.
೧೧.	'ಶ್ರೀ ಚೆನ್ನಬಸವಣ್ಣನವರು' ಪುಸ್ತಕ ಬಿಡುಗಡೆ (ಸಹಾಯ : ಶ್ರೀ ಸುರೇಶ ಕುಲಕರ್ಣಿ)	ಪರಮಪೂಜ್ಯ ಶ್ರೀ ನೀಲಕಂಠ ಮಹಾಸ್ವಾಮಿಗಳು, ದುರದುಂಡೀಶ್ವರ ಮಠ, ಮುರಗೋಡ.
೧೨.	ಆಶೀರ್ವಚನ	ಪೂಜ್ಯ ಮಹಾಂತಪ್ಪಗಳು, ಮುರುಘಾಮಠ
೧೩.	ಆಶೀರ್ವಚನ	ಪರಮಪೂಜ್ಯ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ.
೧೪.	ಆಶೀರ್ವಚನ	ಪರಮಪೂಜ್ಯ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಬೃಹನ್ಮಠ, ಚಿತ್ರದುರ್ಗ
೧೫.	ಸಾರ್ವಜನಿಕ ಸನ್ಮಾನ	ಗಣ್ಯರಿಂದ ಮತ್ತು ಸಂಘ ಸಂಸ್ಥೆಗಳಿಂದ
	ಮಧ್ಯಾಹ್ನ ೨-೦೦	**ಭೋಜನ**
	ಸಂಜೆ ೬-೦೦ ಗಂಟೆ	ವಚನ ಸಂಗೀತೋತ್ಸವ ಜಾನಪದ ಸಂಗೀತರತ್ನ ಪದ್ಮಶ್ರೀ ಶ್ರೀ ಬಾಳಪ್ಪ ಹುಕ್ಕೇರಿ ಅವರ ನೇತೃತ್ವದಲ್ಲಿ. ಕುಮಾರಿ ನಂದಾ ಪಾಟೀಲ ಸಂಗಡಿಗರಿಂದ ಶ್ರೀಮಂತಿ ಲತಾ ನಾಡಿಗೇರ ಸಂಗಡಿಗರಿಂದ ವಾದ್ಯ ಸಂಗೀತ

ನಿವೇದಕರು : ಶ್ರೀ ವಿಶ್ವನಾಥ ಬುಳ್ಳಾ, ಡಾ. ಚೆನ್ನಕ್ಕ ಎಲಿಗಾರ

ಶ್ರೀ ಜಿ. ಜಿ. ದೊಡವಾಡ ಅಮೃತ ಮಹೋತ್ಸವ

ವಿವಿಧ ಸಮಿತಿಗಳು

ಸ್ವಾಗತ ಸಮಿತಿ

ಅಧ್ಯಕ್ಷರು :

ಡಾ. ಆರ್. ಬಿ. ಪಾಟೀಲ

ನರ್ಸಿಂಗ ಹೋಮ

ವಿದ್ಯಾನಗರ, ಹುಬ್ಬಳ್ಳಿ

ಸ್ವಾಗತ ಸಮಿತಿ

ಉಪಾಧ್ಯಕ್ಷರು :

ಶ್ರೀ ಎಸ್. ಎಸ್. ಶೆಟ್ಟರ

ನ್ಯಾಯವಾದಿಗಳು

ಶ್ರೀ ಆಯ್. ಜಿ. ಹಿರೇಗೌಡರ

ನ್ಯಾಯವಾದಿಗಳು

ಸದಸ್ಯರು

ಶ್ರೀ ಚಂದ್ರಕಾಂತ ಬೆಲ್ಲದ, ಶಾಸಕರು

ಶ್ರೀ ಎ. ಬಿ. ದೇಸಾಯಿ, ಶಾಸಕರು ಹಂಗರಕಿ

ಶ್ರೀ ಪಿ. ಬಿ. ಪಾಟೀಲ, ಮಾಜಿ ಶಾಸಕರು

ಶ್ರೀ ಎಂ. ಸಿ. ಮೆಟಗುಡ್ಡ, ವಕೀಲರು ಬೈಲಹೊಂಗಲ

ಶ್ರೀ ಎಸ್. ಆರ್. ಮೋರೆ, ಮಾಜಿ ಶಾಸಕರು

ಶ್ರೀ ಕೆ. ಎಂ. ಮಾಮನಿ, ಶಾಸಕರು ಸವದತ್ತಿ

ಶ್ರೀ ಎಸ್. ವಿ. ಬೆಂಬಳಗಿ

ಶ್ರೀ ಎಸ್. ವಿ. ಬಾಗಿ, ಬೆಳಗಾವಿ

ಶ್ರೀ ಜಿ. ಬಿ. ಹಂಪಣ್ಣವರ, ಸವದತ್ತಿ

ಶ್ರೀ ಬಿ. ಎ. ದೇಸಾಯಿ, ಹುಬ್ಬಳ್ಳಿ

ಡಾ. ವಿ. ವಿ. ಪಾವಟೆ

ಡಾ. ರಾಜನ್ ದೇಶಪಾಂಡೆ

ಡಾ. ಎ. ಎಮ್. ಜಮಾದಾರ

ಶ್ರೀ ಆರ್. ಬಿ. ಜಾಧವ

ಶ್ರೀ ಗದಿಗೆಪ್ಪನವರು ದೇಶನೂರ

ಶ್ರೀ ಡಿ. ಪಿ. ಕರಮರಕರ ಮಾಜಿ ಕೇಂದ್ರ ಮಂತ್ರಿಗಳು

ಶ್ರೀ ಶಂಕರಗೌಡರು ಪಾಟೀಲ ಮಾಜಿ ಶಾಸಕರು

ಶ್ರೀ ಟಿ. ಎಲ್. ಗಾಂವಕರ

ಶ್ರೀ ಎಂ. ಜಿ. ಹಂದ್ರಾಳ

ಶ್ರೀ ಪಾಟೀಲ ಪುಟ್ಟಪ್ಪ

ಶ್ರೀ ಮಲ್ಲಿಕಾರ್ಜುನ ಮನಸೂರ

ಶ್ರೀ ಪಂಚಪ್ಪನವರು ತಾಳೀಕೋಟಿ ಹಾಗೂ ಇನ್ನಿತರರು

ಶ್ರೀಮತಿ ಸುಮತಿದೇವಿ ಹಿರೇಮಠ

ಶ್ರೀಮತಿ ಆರ್. ಬಿ. ಪಾಟೀಲ

ಶ್ರೀಮತಿ ಲೀಲಾವತಿ ಚರಂತಿಮಠ

ಶ್ರೀಮತಿ ನೀಲಕ್ಕ ಬೆಲ್ಲದ

ಶ್ರೀಮತಿ ಪಾರ್ವತಿ ಮೆಟಗುಡ್ಡ ಹಾಗೂ ಇನ್ನಿತರರು

ಸಂರಕ್ಷಣಾ ಸಮಿತಿ

ಶ್ರೀ ಜನಾರ್ದನ ಅರಸಿದ್ದ

ಶ್ರೀ ಸಿದ್ದಪ್ಪ ತುರಮರಿ

ಶ್ರೀ ಬಸವರಾಜ ಬೆಣ್ಣಿ

ಶ್ರೀ ಎ. ಎಸ್. ವಸ್ತ್ರದ

ಶ್ರೀ ಎ. ಎಂ. ಮುಕ್ತಿ

ಶ್ರೀ ಆಯ್. ವ್ಹಿ. ದೊಡಮನಿ,

ನಂಟಿಪ ಅಲಂಕಾರ ವ್ಯವಸ್ಥಾ ಸಮಿತಿ

ಶ್ರೀ ಎಸ್. ಎನ್. ಸೀಮಿಕೇರಿಮಠ
ಶ್ರೀ ಸಂಭಾಸ ಹತ್ತಿಕಾಳ

ಅಡಿಗೆಮನೆ ವ್ಯವಸ್ಥಾ ಸಮಿತಿ

ಶ್ರೀ ಮಲ್ಲೇಶಪ್ಪ ಕುಸುಗಲ್ಲ
ಶ್ರೀ ಸತ್ಯೇಂದ್ರಪ್ಪ ಬಾವನ್ನವರ
ಸಾ॥ ಗೊಡಚಿ
ಶ್ರೀ ಬಿ. ಎಸ್. ದೊಡಗೌಡರ
ಶ್ರೀ ಪ್ರಭು ನಡಕಟ್ಟಿ
ಶ್ರೀ ವಿಶ್ವನಾಥ ಬೆಟಗೇರಿ
ಶ್ರೀ ಶಿವಲಿಂಗಪ್ಪ ಪಾಟೀಲ
ಶ್ರೀ ಎಸ್. ಎಸ್. ಬಸನಗೌಡರ
ಶ್ರೀ ಮರಿಕಲ್ಲಪ್ಪ ಬಡಿಗೇರ
ಶ್ರೀ ತಮ್ಮಣ್ಣಾ ಕವಡಿಕೊಪ್ಪ
ಶ್ರೀ ಉಳವಪ್ಪ ಅಂಗಡಿ
ಶ್ರೀ ಮಹಾದೇವಪ್ಪ ಚಚಡಿ
ಶ್ರೀ ಶಿವಾನಂದ ಕಬ್ಬೂರ
ಶ್ರೀ ಕೃಷ್ಣಾ ಘೋರ್ಪಡೆ
ಶ್ರೀ ಶಿವು ಕಟಗಿ
ಶ್ರೀ ಸುರೇಶ ಮೇಟಿ
ಶ್ರೀ ಗುರುಸಿದ್ದಪ್ಪ ಕಟಗಿ
ಶ್ರೀ ಜಗದೀಶ ಸುಬ್ಬಾಪೂರಮಠ
ಶ್ರೀ ಬಸನಗೌಡ ಭೂಮನಗೌಡರ

ಅಡಿಗೆ ಸರಂಜಾಮು ವ್ಯವಸ್ಥಾಪಕ ಸಮಿತಿ

ಶ್ರೀ ಶಿವಪ್ಪ ಕುಸುಗಲ್ಲ
ಶ್ರೀ ಚನಬಸಪ್ಪ ಬ್ಯಾಹಟ್ಟಿ
ಶ್ರೀ ಫತೇಚಂದ ಜೈನ
ಶ್ರೀ ರವಿ ವಸ್ತ್ರದ
ಶ್ರೀ ಎಸ್. ಟಿ. ರೋಣದ
ಶ್ರೀ ಮಡಿವಾಳಪ್ಪ ರೇಶ್ಮಿ
ಶ್ರೀ ಶ್ರೀಕಾಂತ ಅಗಡಿ
ಶ್ರೀ ವೆಂಕಟೇಶ ಭಟ್ಟ
ಶ್ರೀ ವೆಂಕಟೇಶ ಪಂಡಿತ
ಶ್ರೀ ಎಸ್. ವಿ. ಸಾಲಿಮಠ
ಶ್ರೀ ಚನ್ನಪ್ಪ ಗುಡ್ಡದ
ಶ್ರೀ ಟಿ. ಕೆ. ಪವಾರ

ಅಡಿಗೆ ಸಿದ್ಧತೆ ವ್ಯವಸ್ಥೆ

ಶ್ರೀ ಶಿವಲಿಂಗಪ್ಪ ಉಗಾರಶೆಟ್ಟಿ
ಶ್ರೀ ಮಲ್ಲೇಶಪ್ಪ ಕುಸುಗಲ್ಲ

ಭೋಜನ ವ್ಯವಸ್ಥಾಪಕ ಸಮಿತಿ ವಿಶೇಷ ಅತಿಥಿಗಳಿಗೆ :

ಶ್ರೀ ವೀರಣ್ಣ ವಾಣಿ
ಕು. ಗೌರಿ ಜಿಗಜಿನ್ನಿ
ಕು. ರೂಪಾ ದೇಸಾಯಿ
ಕು. ಭಾರತಿ ಸಾಲಂಕಿ
ಕು. ಭಾರತಿ ಮೂರಶಿಳ್ಳಿನ
ಕು. ಸವಿತಾ ಹಾಲಭಾವಿ
ಕು. ಪ್ರಭಾ ಹಿರೇಮಠ

ಬಫೆ ವ್ಯವಸ್ಥೆ :

ಶ್ರೀ ಸುರೇಶ ಮೇಟಿ
ಶ್ರೀ ಮಹಾಂತೇಶ ಮೆಂಟಗುಡ್ಡ
ಶ್ರೀ ಮನೋಹರ ಕಲಾಲ
ಶ್ರೀ ಅನಿಲ ಕಲಾಲ
ಶ್ರೀ ಆನಂದ ದೊಡಮನಿ
ಶ್ರೀ ಶಿವಾನಂದ ಕೌಲಗೇರಿ
ಶ್ರೀ ಜಗದೀಶ ಬೆಟಗೇರಿ
ಶ್ರೀ ಕಮಲೇಶ ಪಾಟೀಲ

ಮಹಿಳಾ ಆಮಂತ್ರಿತರಿಗೆ :

ಶ್ರೀಮತಿ ಕಸ್ತೂರಿ ಜಿಗಜಿನ್ನಿ
ಶ್ರೀಮತಿ ಪ್ರಭಾ ಮೂರಶಿಳ್ಳಿನ
ಶ್ರೀಮತಿ ಜಯಶ್ರೀ ದೇಸಾಯಿ
ಶ್ರೀಮತಿ ಶಾಂತಾ ಸಾಲಂಕಿ

ಆಮಂತ್ರಿತರಿಗೆ :
ಶ್ರೀ ಎಂ. ಜಿ. ನಡಕಟ್ಟಿ ವಕೀಲರು
ಶ್ರೀ ಹೆಗಡಾಳ ವಕೀಲರು
ಶ್ರೀ ಎಸ್. ಎಸ್. ಹರಿಹರ
ಶ್ರೀ ಈರಣ್ಣ ಬೆಟಗೇರಿ
ಶ್ರೀ ಪ್ರಭು ನಡಕಟ್ಟಿ
ಶ್ರೀ ಮುರಿಗೆಪ್ಪ ಕೋಟಾರ
ಶ್ರೀ ಶಂಕರಲಿಂಗ ಶಿವಳ್ಳಿ
ಶ್ರೀ ವಿರೂಪಾಕ್ಷ ಕಟಗಿ
ಶ್ರೀ ಟಿ. ಸಿ. ಧಾರವಾಡ
ಮುರುಘಾಮಠದ ಪ್ರಸಾದ ನಿಲಯದ ವಿದ್ಯಾರ್ಥಿಗಳ ಬಳಗ

ಅತಿಥಿಗಳ ವ್ಯವಸ್ಥಾ ಸಮಿತಿ
ಶ್ರೀ ಶಿವಾಜಿರಾವ ಪದಕಿ
ಶ್ರೀ ಕಿರಣರಾಜ
ಶ್ರೀ ಅಶೋಕ ದೊಡಮನಿ
ಶ್ರೀ ಜಗದೀಶ ಶಹಾ

ಫಲತಾಂಬೂಲ, ಹೂ, ಮಾನಪತ್ರ ವಿತರಣಾ ವ್ಯವಸ್ಥೆ
ಶ್ರೀ ಎಸ್. ವಾಯ್. ಸಂಕೋಜಿ
ಶ್ರೀ ಶ್ರೀಶೈಲ ಹಂಪಣ್ಣವರ
ಶ್ರೀ ಎಮ್. ಎ. ಬೆಂಡಿಗೇರಿ
ಶ್ರೀ ಮಹಾಂತೇಶ ಮೆಟಗುಡ್ಡ
ಶ್ರೀ ರಾಜು ಉಪ್ಪಿನ
ಶ್ರೀ ಎಸ್. ಎಸ್. ಹರಕುಣಿ
ಶ್ರೀ ಎಲ್ಲಪ್ಪ ಮುಂದಿನಮನಿ
ಶ್ರೀ ಬಾಬು ಕನೋಜನವರ
ಶ್ರೀ ಗುಡ್ಡದಮಠ
ಶ್ರೀ ಬಸವರಾಜ ಸೂರೇಬಾನ

ಕಾರ್ಯಕ್ರಮ ನಿರ್ವಹಣ ಸಮಿತಿ
ಶ್ರೀ ವಿಶ್ವನಾಥ ಬುಳ್ಳಾ, ಗದಗ
ಡಾ. ಚೆನ್ನಕ್ಕ ಎಲಿಗಾರ

ರೇಡಿಯೋ, ಫೋಟೋಗ್ರಾಫರ್, ವಿಡಿಯೋ ವ್ಯವಸ್ಥಾ ಸಮಿತಿ
ಶ್ರೀ ಕೈಲಾಸಪತಿ ದೊಡವಾಡ
ಶ್ರೀ ಶಂಭುಲಿಂಗ ದೊಡವಾಡ
ಶ್ರೀ ಮೃತ್ಯುಂಜಯ ದೊಡವಾಡ
ಡಾ. ನಿತಿನ್‌ಚಂದ್ರ ಹತ್ತೀಕಾಳ

ಧ್ವನಿವರ್ಧಕ, ದೀಪ, ಅಲಂಕಾರ ವ್ಯವಸ್ಥಾ ಸಮಿತಿ
ಶ್ರೀ ಎಸ್. ಎನ್. ಸೀಮಿಕೇರಿಮಠ
ಶ್ರೀ ಸುರೇಶ ಕುಲಕರ್ಣಿ

ಹಣಕಾಸು ಸಮಿತಿ
ಶ್ರೀ ಬಿ. ಜಿ. ದೊಡಮನಿ (ಅಧ್ಯಕ್ಷರು)
ಶ್ರೀ ಬಸಪ್ಪನವರು ಮೆಣಸಿನಕಾಯಿ
ಸಾ. ತಿರ್ಲಾಪುರ
ಶ್ರೀ ಮಲ್ಲಪ್ಪ ಮೂಗಣ್ಣವರ
ಸಾ. ಕ್ಯಾರಕೊಪ್ಪ
ಶ್ರೀ ಸತ್ಯೇಂದ್ರಪ್ಪ ಬಾವಣ್ಣವರ
ಸಾ. ಗೊಡಚಿ
ಶ್ರೀ ಎಸ್. ಎನ್. ಸೀಮಿಕೇರಿಮಠ
ಧಾರವಾಡ
ಶ್ರೀ ನಿಂಗಪ್ಪ ಮಾಯಣ್ಣವರ, ನವಲೂರು

ಮೇಲ್ವಿಚಾರಣಾ ಸಮಿತಿ
ಶ್ರೀ ಸಿದ್ದರಾಮಪ್ಪ ಲಕ್ಷ್ಮೇಶ್ವರ
ಶ್ರೀ ಬಸಣ್ಣ ಲಕಮನಹಳ್ಳಿ
ಶ್ರೀ ಸರಸಾನಂದ ದೊಡವಾಡ

ಕಾರ್ಯ ನಿರ್ವಾಹಕ ಸಮಿತಿ
ಶ್ರೀ ಈರಣ್ಣ ವಾಣಿ
ಶ್ರೀ ಎಸ್. ಎಸ್. ಸೀಮಿಕೇರಿಮಠ
ಶ್ರೀ ಸಿ. ಎಸ್. ಘಂಟೆಣ್ಣವರ
ಶ್ರೀ ಸುಭಾಸ ಹತ್ತೀಕಾಳ

ಕಾರ್ಯಾಲಯ ಸಮಿತಿ
ಶ್ರೀ ಮಲ್ಲಣ್ಣ ಹೊರಡಿ
ಶ್ರೀ ವಿ. ಎಸ್. ಪತ್ರಿಮಠ
ಶ್ರೀ ಪ್ರಕಾಶ ವೀರೇಶನವರ
ಶ್ರೀ ತುರಮರಿ

ಆಮಂತ್ರಣ ಪತ್ರಿಕೆ ವಿತರಣಾ ಸಮಿತಿ
ಶ್ರೀ ಮನೋಹರ ದೊಡವಾಡ
ಶ್ರೀ ಆರ್. ಎಸ್. ಹೆಗಡೆ
ಶ್ರೀ ಸಿ. ಎಸ್. ಘಂಟೆಣ್ಣವರ
ಶ್ರೀ ಪ್ರಭು ಕುಲಕರ್ಣಿ, ಸಾ. ತೇಗೂರು
ಶ್ರೀ ಕೆ. ಸಿ. ಸಾರಂಗಮಠ

ಪತ್ರಿಕಾ ಪ್ರತಿನಿಧಿ ವ್ಯವಸ್ಥಾ ಸಮಿತಿ
ಶ್ರೀ ಈರಣ್ಣ ವಾಣಿ
ಶ್ರೀ ಸಿ. ಎಸ್. ಪಾಟೀಲ
ಶ್ರೀ ಪಿ. ಎನ್. ಕುಸುಗಲ್ಲ
ಡಾ. ಚೆನ್ನಕ್ಕ ಎಲಿಗಾರ

ತುಲಾಭಾರ ವ್ಯವಸ್ಥಾ ಸಮಿತಿ
ಶ್ರೀ ದಯಾನಂದ ದೊಡವಾಡ
ಡಾ. ಸುಖಪೂರ್ಣ ಸಂಕನಗೌಡರ
ಶ್ರೀ ಗುರುಸಿದ್ದಪ್ಪ ಹತ್ತೀಕಾಳ
ಶ್ರೀ ಸತ್ಯೇಂದ್ರಪ್ಪ ಭಾವನ್ನವರ

ಪೂರ್ಣಕುಂಭ ವ್ಯವಸ್ಥಾ ಸಮಿತಿ
ಶ್ರೀಮತಿ ಕಸ್ತೂರಿ ಜಿಗಜಿನ್ನಿ
ಶ್ರೀಮತಿ ಶಾಂತಾ ಸಾಲಂಕಿ
ಶ್ರೀಮತಿ ಜಯಶ್ರೀ ದೇಸಾಯಿ
ಶ್ರೀಮತಿ ಪ್ರಭಾ ಮೂರಶಿಳ್ಳಿ

ವಾಹನ ವ್ಯವಸ್ಥಾ ಸಮಿತಿ
ಶ್ರೀ ಪ್ರಭು ತೊರಗಲ್ಲಮಠ
ಶ್ರೀ ಅಶೋಕ ಅಗಡಿ
ಶ್ರೀ ರವಿ ವಸ್ತ್ರದ
ಶ್ರೀ ಮಹದೇವಪ್ಪ ಕುಂದಗೋಳ ಸಾ. ಮಾರಡಗಿ
ಶ್ರೀ ಬಾಬುಲಾಲ ಮಹಾಜನಸೇಠ
ಶ್ರೀ ಶಿವಾಜಿರಾವ ಪದಕಿ

ನೀರಿನ ವ್ಯವಸ್ಥಾ ಸಮಿತಿ
ಶ್ರೀ ಎಮ್. ವಿ. ಅಮರಶೆಟ್ಟಿ
ಶ್ರೀ ಪರಪ್ಪ ಕುಸುಗಲ್ಲ
ಶ್ರೀ ಸಿ. ಎಸ್. ಪಾಟೀಲ
ಶ್ರೀ ಮುರಿಗೆಪ್ಪ ತುರಮರಿ

ಸ್ವಚ್ಛತಾ ವ್ಯವಸ್ಥಾ ಸಮಿತಿ
ಶ್ರೀ ಎಸ್. ಎ. ಹರಿಹರ
ಶ್ರೀ ಪಕ್ಕೀರಪ್ಪ ಕುಂಬಾರ
ಶ್ರೀ ಶಂಕರೆಪ್ಪ ಉಪ್ಪಿನ
ಶ್ರೀ ಸುರೇಶ ಹಿರೇಮಠ

ಉಪಹಾರ ವ್ಯವಸ್ಥಾ ಸಮಿತಿ
ಶ್ರೀ ರಾಮಮೂರ್ತಿ
ಶ್ರೀ ಬಸವರಾಜ ತಾಳೀಕೋಟಿ

ಅಮೃತಮಹೋತ್ಸವಕ್ಕೆ ಸಕ್ರಿಯ ಸಹಾಯ ಸಲ್ಲಿಸಿದ ಸಂಘ ಸಂಸ್ಥೆಗಳು

೧. ದಲಾಲಿ ವ್ಯಾಪಾರಸ್ಥರ ಸಂಘ.
೨. ಕಿರಾಣಿ ವ್ಯಾಪಾರಸ್ಥರ ಸಂಘ.
೩. ಮೃತ್ಯುಂಜಯ ಫಾಯನಾನ್ಸ ಕಾರ್ಪೋರೇಶನ್.

೪. ಸರಾಫ ಅಸೋಸಿಯೇಶನ್.
೫. ಭಾಂಡಿ ವ್ಯಾಪಾರಸ್ಥರ ಸಂಘ.
೬. ಜವಳಿ ವ್ಯಾಪಾರಸ್ಥರ ಸಂಘ.
೭. ಬೆಲ್ಲದ ವ್ಯಾಪಾರಸ್ಥರ ಸಂಘ.
೮. ಸ್ಟೇಶನರಿ ವ್ಯಾಪಾರಸ್ಥರ ಸಂಘ.
೯. ಹೊಟೇಲ ಮಾಲಿಕರ ಸಂಘ.
೧೦. ಇಂಡಿಯನ್ ಮೆಡಿಕಲ್ ಅಸೋಸಿಯೇಶನ್.
೧೧. ಲಾರಿ ಮಾಲಿಕರ ಸಂಘ.
೧೨. ಹುಬ್ಬಳ್ಳಿ ಕಿರಾಣಿ ವರ್ತಕರ ಸಂಘ.
೧೩. ಶ್ರೀ ಮಹಾಂತೇಶ ಫಾಯನಾನ್ಸ ಕಾರ್ಪೋರೇಶನ್.
೧೪. ಶ್ರೀ ಚನ್ನಬಸವೇಶ್ವರ ಫಾಯನಾನ್ಸ ಕಾರ್ಪೋರೇಶನ್.
೧೫. ಶ್ರೀ ಮುರುಘರಾಜೇಂದ್ರ ಪ್ರಸಾದ ನಿಲಯ.

ದಿನಾಂಕ ೭-೨-೮೮ ರಂದು ಮುರುಘಾಮಠಾಧ್ಯಕ್ಷ ಶ್ರೀ ಮ. ನಿ. ಪ್ರ. ಮಹಾಂತಪ್ಪಗಳವರ ಸನ್ನಿಧಾನದಲ್ಲಿ ಸಂತೋಷಕೂಟ ಏರ್ಪಡಿಸಿ ಅಮೃತಮಹೋತ್ಸವ ಕಾರ್ಯಕ್ರಮ, ಅಭಿನಂದನ ಗ್ರಂಥಕ್ಕೆ ಸಕ್ರಿಯ ಸಹಾಯ ಸಲ್ಲಿಸಿದ ಸರ್ವರಿಗೂ ಆಶೀರ್ವಾದ ಕಾಣಿಕೆಗಳೊಂದಿಗೆ ಕಾರ್ಯಕ್ರಮದ ಮಂಗಲವಾಯಿತು.

ಅಮೃತಮಹೋತ್ಸವದ ವಿಶೇಷ ವರದಿ

Hello; Hello ! ಬೇಕಿಲ್ಲರಿ ನಂಬರು ! ಕಾರಣ ನನಗಿಲ್ಲರಿ ನಂಬರು. ಯಾಕಂದರ ನೀವು ನಮ್ಮವರು. ಇದು ಅಲ್ಲರಿ ಆಕಾಶವಾಣಿಯಲ್ಲಿಯ ಅವಕಾಶ ಸಿಕ್ಕವರ ಧ್ವನಿ. ಅಲ್ಲ ಅಲ್ಲರೀ ಟಿ. ವಿ., ಅದರಾಗ ಯಾರ್ಯಾರದ ಠೀವಿ, ಹಿಂದಿಂದ ವೀರಣ್ಣ ವಾಣಿ, ಮುಂದ ಮುಂದ ಉತ್ಸವದ ಖಣಿ. ಎದ್ದಾ ಕ್ಹೊಗಿ ನಡುವೆ ಬಿದ್ದು ಮುಳುಗೇದರಿ ನನ್ನ ಲೇಖನಿ. ನೀವೆಲ್ಲ ಚೆಲ್ಲಿ ಹೋಗರಿ ಕೆರಿ ನೀರು ಕೆರಿಗೆ. ತುಳುಕಿ ಹರಿಯುವಾಗ ಏರಿಗೆ ಇಂಗಬೇಕ್ಹ್ಯಾಂಗರಿ ? ಖಾಲಿ ಮಾಡಿ ತಳಕ್ಹೊಗಿ ತಗೆಯದಿದ್ದರ ನನ್ನ ಟಾಕು ಕೊಳತೀತಂತ, ಕಂಡದ್ದನ್ನೂ ಒದ್ದೀ ಮಾಡಿ ಹಿಂಡತೀನಿ. ನಿಮ್ಮ ನೀರನ್ನೂ ನಿಮ್ಮ ಹೃದಯಗುಂಡಿಯಲ್ಲಿ, ದಯಮಾಡಿ ತೆಗೆಯಿರಿ ಮುಚ್ಚಳಿಕಿ.

ಹದಿನೆಂಟು ದಿವಸ ಹೈರಾಣ, ಮಹಾಭಾರತದ ಪುರಾಣ. ಜಯದ್ರಥನನ್ನು ಕೊಲ್ಲುವುದಕ್ಕಾಗಿ ಕೃಷ್ಣ ತನ್ನ ಸುದರ್ಶನ ಚಕ್ರ ಒಗೆದು ಕೃತ್ರಿಮ ಸೂರ್ಯಾಸ್ತ ಮಾಡಿದನಂತೆ. ಎರಡನೆಯ ಮಹಾಯುದ್ಧದ ಕಾಲಕ್ಕೆ ಶತ್ರುವಿಗೆ ತಿಳಿಯದ ಹಾಗೆ ಮಿತ್ರರು ದಿವಸದ ಒಂದು ತಾಸನ್ನೂ ಮುಂದೆ ಸರಿಸಿದ್ದರು. ೧೯೮೭ ಮುಗಿಯುವ ಮಧ್ಯರಾತ್ರಿಯಲ್ಲಿ ಜಗದ ಖಗೋಲ ಶಾಸ್ತ್ರಜ್ಞರು ತರಾತುರಿಯಿಂದ ೧/೨ ಸೆಕೆಂಡು ಮುಳ್ಳು ಹಿಂದೆ ಸರಿಸಿ ೧೯೮೮ ಕ್ಕೆ ಬಂದು ಸೇರಿದರಂತೆ. ಸಾರ್ವಜನಿಕರಿಗೆ ಸಾಕಾರ ವಾಗದಂಥ ಇಂಥ ಮಿಜಿಮಿಜಿ ಯಾಕಂತ, ಧಾರವಾಡದಾಗ ೨೯-೧-೧೯೮೮ ಸನ್ಮಾನ ಶುಕ್ರವಾರ ದಿವಸ ಜಾತ್ರಿಲೆಖ್ಖದ ಪ್ರಕಾರ ಖಾತ್ರಿಯಿಂದ, ಒಂದು ತಾಸು ಮೊದಲೇ ಮುಗಿಲು ಸರಿಸಿ ಹಗಲು ತಜವೀಜಿ ಮಾಡಿಕೊಂಡಿತ್ತು. ಬ್ರಹ್ಮಮುಹೂರ್ತಕ್ಕಿಂತ ಮೊದಲೇ ಯೋಗನಿದ್ರೆಯಲ್ಲಿದ್ದ, ರಾತ್ರಿ ಎದ್ದಾಗ ಬೆಳ್ಳಿ ಚಿಕ್ಕಿ ಸಿಳ್ಳು ಹಾಕಿ ಹೋಗಿತ್ತು. ಉಳಿದ ಚಿಕ್ಕಿಗಳ ಬಕ್ಕಿಗಳು ಮಾಯವಾಗಿದ್ದವು. ಬಾಗಿಲ ಮುಂದೆ ಜಗಲಿ ಬಂದಿತ್ತು, ಬಿದ್ದಿತ್ತು ಮಂಜಿನ ಮಬ್ಬು. ಎದ್ದೇಬಿಟ್ಟಿದ್ದಾ ಹೊಟೇಲಿನ ಸುಬ್ಬು. ಟ್ರಕ್ಕುಗಳ ಬ್ರೆಕ್ಕು ಅಕ್ಸಿಲೇಟರುಗಳ ಸೊಕ್ಕು, ರಸ್ತೆಯ ಮೇಲೆ ತಮ್ಮ ದೇಹಕ್ಕು ಸಾಧಿಸುತ್ತ ಬಂದ ವಾಹನಗಳು ಕೂಡಾ ಶಿಸ್ತಿನಿಂದ ತೀನತಾಲದಲ್ಲಿ ಕೂಟ ನಡೆಸಿದ್ದವು. ಹಾವೇರಿಪೇಟೆ ಹಾರಿ ಬಂದಿತ್ತು. ಕಿಲ್ಲೆಯೊಳಗ ಚಿಲ್ಲಿ ಪಿಲ್ಲಿ ಉಳಿ ದಿದ್ದವು. ಮೃತ್ಯುಂಜಯನಗರ ಕಿತ್ತು ಬಂದಿತ್ತು. ಮಾಳಮಡ್ಡಿ ದಡ್ಡಿ ತೆರವಾಗಿತ್ತು. ಅತ್ತಿಕೊಳ್ಳದ ಎತ್ತರದೊಳಗಿನ ಎಲ್ಲಾ ಎತ್ತರ ಹಳ್ಳಹತ್ತಿರ, ಎತ್ತಿನಗುಡ್ಡ ಅಡ್ಡಾಡು ವುದು ಕಾಣುತ್ತಿತ್ತು. ಗುಲಗಂಜಿಕೊಪ್ಪಕೆಂದೂ ಇಲ್ಲಿಯದೇ ಗಂಜಿ. ಕಮಲಾಪುರದ ಕೋಸು, ಮಾಳಾಪುರದ ನವಲಕೋಲು, ನವಲೂರಿನ ಎಲ್ಲಾ ಪಾಲು ಇಂದು ಸಾಲು ಹಿಡಿದಿದ್ದವು. ಅತ್ತಿಂದ ಬಸ್‌ಗಾಡಿ ಇತ್ತಿಂದ ಬಸ್‌ಗಾಡಿ, ಓಡತಿದ್ದವು ತೆರವು ಮಾಡಿ. ಒಟ್ಟಿನಲ್ಲಿ ದಾರಿ ದಾರಿ ಚಲಿಸುತ್ತ ಕೂಡುತಿದ್ದವು, ರಾಷ್ಟ್ರೀಯ ನಾಲ್ಕನೆಯ

ಹೇಳ್ತಾರೆ, ದೊಡವಾಡರ ಗೇಟಿನ ಕಡೆಗೆ ಹೋದೀತೆ ಹಾದಿ "All roads lead to Dodwad's gate".

ಬಾರಿಬಾರಿಗೆ ಸುಯ್ಕ್ ಎನ್ನುವ ಕಾರುಗಳು, ನಡುವೆ ಅಡ್ಡಾ ತಿಡ್ಡಾ ಗಿಡ್ಡ ಮೋಟಾರುಸೈಕಲ್‌ಗಳು, ದ್ವಿಚಕ್ರ ತಿರುಗಿ ಮರೆಯಾಗುವಾಗ ಕಣ್ಣು ಕರೆಸಿಕೊಳ್ಳುವ ದಂಪತಿಗಳು ಜರತಾರಿ ಸೀರೆಗಳ ಹಿಂದೆ ಸರಿತಿದ್ದವು ತರತರದ ಸೂಟುಗಳು. ಬೆತ್ತಾ ಹಿಡಿದ ಉತ್ತಮರು ಕತ್ತು ಬಾಗಿಸಿ ನಡೆದಿದ್ದರು. ತರುಣರ ತಂಡ, ಹುಡುಗರ ಹಿಂಡು, ಹಂಡಬಂಡ ಬಣ್ಣದಲ್ಲಿ ಕಣ್ಣಿಗೆ ಬೀಳದೇ ಇರತಿದ್ದಿಲ್ಲ. ಅತ್ತ ವಾಹನ ಇತ್ತ ಜನ, ನಡುವೆ ಸಾಹಸದ ಆರಡಿ ಎತ್ತರದ ಖಾಕಿ ಅಡ್ಡಗೋಡೆ. ಯಂತ್ರದಂತೆ ತಂತ್ರ ತಂತ್ರದಂತೆ ಮಂತ್ರ. ಪೋಲಿಸರ ವಿನಯ ವಿನಿಮಯದ ಶಿಸ್ತು. ನಿಂತು ನೋಡುವದೇ ಆಗಿತ್ತು ಬೇಸಿಸ್ತು "ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ" ಅನ್ನುವುದರದೇ ನಡೆದಿತ್ತು ಕಸರತ್ತು. ಅಧಿಕಾರಿಗಳ ಹುದ್ದೆ, ಪೇದೆಗಳ ಏದೆ, ಒಂದೇ ಗೌರವದ ಹೃದಯಗಳಾಗಿದ್ದವು ಇಂದು. ಅಬ್ಬಾ ! ಇವರನ್ನು ನೋಡಬೇಕು. ಮಂತ್ರಿಗಳು ಬಂದಾಗ್ಗ – ದರ್ಜೆಯಂತೆ ಕಿರಿ ಕಿರಿ ಮೀಸೆಯ ಭರ್ಜರಿ ಸುರಿ. ಮುಖ್ಯಮಂತ್ರಿ ಇದ್ದರೆ ಸರಾಸರಿ ಎಲ್ಲರೂ ದೂರಸರಿ. ಪ್ರಧಾನಿಗಂತೂ ಒಂದು ವಾರ ಮೊದಲೇ ಹಾಜರ ಈ ಆದ್ವಾನ. ಕರಕೊಂಡು ಬಂದ ಕುರಿಗಳನ್ನೂ ಅಂದ ರಥಡತಿ ಮಾಡಿ, ದೊಡ್ಡಿಯಲ್ಲಿ ದಬ್ಬಿ ತರುವುದೆಂದರೆ ಎಷ್ಟು ಕಷ್ಟ ಗೊತ್ತೇ ಅವರನ್ನೇ ಕೇಳಿ ಮತ್ತೆ.

ಆಶ್ಚರ್ಯಕ್ಕೆ ಆಶ್ಚರ್ಯವೆಂದರೆ ವಿಸೀಟಿಗೆ ಮೂರು ಗಾಡಿಗಳಂತೆ ಎದುರು ಬದುರು ಭರಗುಟ್ಟುವ ಸರದಾರಜಿಗಳು ಸಂತೋಷದಿಂದ ಮಾಡಿದ ಸಹಕಾರ ನೆನೆದಾಗ "ಪಂಜಾಬದಾಗ್ಯಾಕರೇ ಹಾಹಾಕಾರ ?" ಎಂದು ವಿಷಾದದ ಬೆಳಕು, ಈ ಗಡಿಬಿಡಿಯಲ್ಲಿಯೆ ಗರ್‍ನೆ ಹಾರಿ ಗಿರ್‍ನೆ ಮಾಯವಾಯಿತು.

"ಯಾರಿಗ್ಯಾರೋ ಸಂಗಯ್ಯ" ಇಂಥಾ ದಿವಸದಾಗ, ಬರಗಾಲದಾಗ ಹರಗೋಲಿನ ಹರ್ಷದಿಂದ ಈ ತರ ಎಲ್ಲ ಸ್ಥರಗಳ ಜನಗಳ ಜಮಾವಣೆ ಆಗಬೇಕಾದರೆ ಏನಿದೆ ಅಂಥ ಆತ್ಮೀಯ, ಆಕರ್ಷಣೆ, ಎಂದು ಕೇಳತಿರಿ ನಿಜ ! ದಯಮಾಡಿ ಸ್ವಲ್ಪ ಸಮಾಧಾನ ಮಾಡಿರಿ. ಸತ್ಯಕ್ಕಿಂತಲೂ ಅನುಭವ ದೊಡ್ಡದನ್ನಾಗಿ ಮಾಡಿದ ಬಸವಣ್ಣ. ನಿಬ್ಬಣೆದ್ದರ ಇರತಿದ್ದವು ಬಣ. ಹಬ್ಬಾಗಿದ್ದರೆ ಹಾರ್‍ಯಾಡತಿತ್ತು ಹಣ. ಇಲ್ಲಿ ಗುಣ ಮಾಡಿತ್ತು ಮನದ ಆಕರ್ಷಣ. ಅದಕಾಗಿ ಬರತಿದ್ದರು ಜನ. "ಕರೆದಲ್ಲಿ ಉಣ್ಣುವದು, ಮೆರೆದಲ್ಲಿ ನೋಡುವುದು, ನಡವೇ ಇದೆ, ಅಂತಾ ನೀವು ಅನಬಹುದು. ಗಾಂಧೀಜಿಯವರ ದರ್ಶನಕ್ಕೆ ಊರಿಗೆ ಊರೆ ಹೋಗಿತ್ತು. ರಾಷ್ಟ್ರಪ್ರೇಮ ಭಕ್ತಿಯಿಂದ ನೆಹರೂ ಅವರ ದಾರಿಗೆ ದೇಶ ಮೊರೆ ಹೋಗಿತ್ತು. ಆಕರ್ಷಣೆಯಿಂದ ಅದಕಾಗಿ

ರಾಜಾಜಿ ಅನ್ನುತ್ತಿದ್ದರು : "People go to see Nehru, but come to hear me" ಯಾಕಂದರೆ ಚಾಣಾಕ್ಷರಾದ ಅವರಲ್ಲಿ ಚಿಕಿತ್ಸಕ ಬುದ್ಧಿ ಇತ್ತು. ಸುಭಾಸಚಂದ್ರ ಭೋಸರಲ್ಲಿ ದೇಶಪ್ರೇಮ ಪ್ರೇರಣೆ ಚಿಮ್ಮುತಿತ್ತು. ಇಂದಿರಾಗಾಂಧಿಯವರು ತಮ್ಮ ೨೦ ಅಂಶದ ಕಾರ್ಯಕ್ರಮದ ಸಂಗಡ "ಕರೆದಲ್ಲಿ ಉಣ್ಣು ಮರೆದಲ್ಲಿ ನೋಡು ಮತ ಮಾತ್ರ ಕೊಡು" ಅದಕಾಗಿ ಕಳಿಸಿರುವೆ ಟ್ರಕ್ಕು, ಟ್ರ್ಯಾಕ್ಟರ ಅನ್ನುವದನ್ನು ಕಡ್ಡಾಯ ಮಾಡಿದರು. ಇಲ್ಲಿ ಭೀತೀನ ರೀತಿಯಾಗಿ, ನೀತಿ ಸ್ವೈವೇದ್ಯವಾಗಿತ್ತು. ಬರಬರುತ್ತ ಇಂಥ ರಾಷ್ಟ್ರವ್ಯಾಪ್ತಿ ವ್ಯವಸ್ಥೆ ಸಂಸ್ಕೃತಿಯಾಗಿ ನೆಲೆ ನಿಂತಿತು. ಜಯಪ್ರಕಾಶರ ಸಮಗ್ರಕ್ರಾಂತಿಗೆ ಚಿತೆ ಇಟ್ಟಿತು. ಇಂಥ ನೆರಳಲ್ಲಿ ನಾವಿರುವಾಗ, ಗ್ವಾಲೇರ ರಾಜಕನ್ಯೆಯ ಮದುವೆಗೆ ಹೋದ ಸವಾರಿ ಗಾಡಿಗಳು, ಬೆಂಗಳೂರು ಅರಮನೆಯ ಮೈದಾನದಲ್ಲಿ ಕೊಳ್ಳು ಹರಿದವಂತೆ. ಐದು ವರ್ಷದ ಬಾಲಕನಿಗೆ 'ಶ್ರೀ ಗಣೇಶ' ಪ್ರಸ್ತವಿದ್ದಾಗ 'ಅನ್ನಪ್ರಾಶನ ವಿಧಿ, ಮಾಡಿಸಿದರಂತೆ. "ಸುಬ್ಬಿ ನೋಡಿ ಗುಬ್ಬಿ ಗಬ್ಬವಾಯಿತಂತೆ." ನಡೆದಿಲ್ಲವೇ ಸಾಲಮೇಳಗಳು. ಇವುಗಳ ಹಿಂದೆ ಇದ್ದುದು ಯಾಚಕ ಪಾಚಕ ಧೋರಣೆ. ಹೋದ ವರುಷದ ಕೊನೆಯ ಗಳಿಗೆಯಲ್ಲಿ ಮೈಲಾರಲಿಂಗನ ಸುತ್ತಿ ಹುಬ್ಬಳ್ಳಿಗೆ ಬಂದಾಗ ಊರ ತುಂಬ ರೈತರೇ ರೈತರು. ತಾವು ತಂದ ಬರಗಾಲದ ಬುತ್ತಿ ತಿಂದು ಸರಕಾರದ ಸಂಗಡ ಕುಸ್ತಿಗೆ ಸಡ್ಡು ಹೊಡೆದರಂತೆ, ಅನಿವಾರ್ಯ ಧೋರಣೆಯಿಂದ.

ಹುಬ್ಬಳ್ಳಿಯೊಳಗೆ ಸಟಾ ಸಟಾ ಪಟಗಾ ಹಾರಿಸಿದ ಧಡೂತಿ ದೋತ್ರ, ಉರುಟು ಸೀರೆ ವ್ರತದವರು, ದಿನಾ ನೋಡುವ ದೂಡವಾಡ ಗುರುಪುತ್ರಪ್ಪನವರ ಮಾರಿ ನೋಡಲು ಹೀಗೆ ಹಂಪು ಸಂಪಿನಿಂದ ಗುಂಪು ಗುಂಪಾಗಿ ಇಂದು ಬರುವುದರ ವೈಚಿತ್ರ್ಯವೇನು ? ಸಜ್ಜನಿಕೆಯ ಸಾಮರ್ಥ್ಯ ಇಂದು ಒಂದರಲ್ಲಿ ಗುರುಪುತ್ರಪ್ಪನವರಲ್ಲಿ ದ್ವಂದ್ವವಾಗಿ ಪರಿಣಮಿಸಿದ್ದುದು ಕಾರಣ. ಅಂತಃಕರಣದ ಆಕರ್ಷಣ, ಮತ್ತು ಪ್ರೀತಿಯ ಪ್ರದರ್ಶನ, ಹೃದಯ ಮತ್ತು ವಿವೇಕದ ಕೂಡಲಸಂಗಮ ಇಲ್ಲಿಯವರೆಗೆ.

"ಧಾರವಾಡದ ತಾಯಿ
ಕಲ್ಪವೃಕ್ಷದ ಕಾಯಿ
ಬೇಂದ್ರೆಯವರ ಬಾಯಿ
ಕವಿಗಳಿಗೆ ವರದಾಯಿ"

ಅನ್ನುವ ವಾಡಿಕೆ ಇತ್ತು. ಇಂದು ಮತ್ತೆರಡು ಸಾಲಗಳನ್ನೂ ಜೋಡಿಸುವುದು ಸೂಕ್ತವೆನಿಸುತ್ತದೆ.

ಹೃದಯ ವಿವೇಕ ಕೂಡಿ
ಧಾರವಾಡ ದೊಡವಾಡ ಜೋಡಿ

Walter Lippman ಹೇಳಿದಂತೆ 'When it is unanimous none these but every one acts' ಹೀಗೆ ಇತ್ತು ಇಂದು.

ತಾನು ಹೊರಟಿರುವುದು ಎತ್ತ ಅನ್ನುವುದು ಹೊತ್ತಿಗೆ ಗೊತ್ತಿತ್ತು. ಅದಕಾಗಿ ಜನರನ್ನು ಒತ್ತಿ ಒತ್ತಿ ಊಟದ ಮನೆಗೆ ತರುತಿತ್ತು. ತಾನೂ ಇರುತಿತ್ತು. ಬಡವ–ಬಲ್ಲಿದ, ಅಧಿಕಾರಿ–ಮಮಕಾರಿ, ಹುಡುಗ–ಮುದುಕ, ಕೂಲಿಯುವರು–ಶಾಲಿನವರು ಹರಕು ಅಂಗಿ–ಸೀರೆಯುವರು–ಜರತಾರಿ ತರತರದವರು. ಖುರ್ಚಿಗೆ ಖುರ್ಚಿಗೆ ಹತ್ತಿ, ಕೈಗೆ ಕೈ ಸವರಿ. ಮುಸ್ಥೇಜ್ಜಿ ಸ್ವಚ್ಛ ಗಂಟೆ ಹೊಡೆದಂತೆ ಸರಿಯಾಗಿ ಎಂಟು ಘಂಟೆಗೆ ನಡೆದಿತ್ತು ಉಪಹಾರದ ವ್ಯವಸ್ಥೆ. ಪ್ರಸಾದ–ದಾಸೋಹ–ಕಾಯಕ ಆಗಿದ್ದವು ಒಂದಕ್ಕೊಂದು ಸಹಾಯಕ. ವ್ಯಕ್ತಿಗೆ ತೃಪ್ತಿ, ಸಮೂಹಕ್ಕೆ ಸಂತೃಪ್ತಿ.

ರಾಷ್ಟ್ರೀಯ ಹೆದ್ದಾರಿ, ಯಾವಾಗಲೂ ಭರಾರಿ. ಧಾರವಾಡದ ಅರ್ಧನಾರೀ ನಟೇಶ್ವರನ ಮುಂದೆ ಮುಂದೆ ಹೋಗಿ ಆಗತದೆ ಘರಾರಿ. ಅತ್ತ 'ಶ್ರೀಮಾತಾ' ಸಾಧನಕೇರಿ, ಇತ್ತ ಧರ್ಮಾಧಿಕಾರಿಯ ವಿದ್ಯಾಗಿರಿ. ನಡುವೆ ಹಾಯ್ದದೆ ರಾಷ್ಟ್ರೀಯ ಹೆದ್ದಾರಿ. ಬಲಗಡೆಗೆ ಸರಸಾನಂದನ 'ಸರಸಗಂಗಾ' ಹೃದಯಗಿರಿ. ಎಡಗಡೆಗೆ 'ದೊಡವಾಡರ' ಕಾಂಚನಗಂಗಾ ವಿವೇಕಸಿರಿ. ಅತ್ತಿಕೊಳ್ಳದಲ್ಲಿ ಎತ್ತರ ವಿಶ್ವಚೇತನ. ಎತ್ತಿನಗುಡ್ಡದ ತತ್ವರ ಬಸವಚಿಂತನ. ಒಂದೇ ಕುಟುಂಬಕ್ಕೆ ಸೇರಿದ ೩ ಕಾರ್ಯಕ್ರಮ. ಅಲ್ಲಿ ಕಂಡದ್ದು ಸರಸಾನಂದನ ಶಕ್ತಿ, ಗುರುಪುತ್ರಪ್ಪನ ಯುಕ್ತಿ, ಗಂಗಮ್ಮನ ಪ್ರೀತಿ, ತ್ರಿವೇಣಿ ಸಂಗಮ.

೧. ಸರಸಗಂಗಾ ಗೃಹಪ್ರವೇಶ :

ಶ್ರೀ ಸರಸಾನಂದರು ಗುರುಪುತ್ರಪ್ಪನವರ ಜ್ಯೇಷ್ಠಪುತ್ರರು. ಇವರ ಸಾಹಸ ಒಂದು ಐತಿಹ್ಯ (Legend) ಇವರಿಗಿಂತಲೂ ಹಿರಿಯ ವ್ಯಾಪಾರಿಗಳಾರೂ ಇಲ್ಲ. ಆದರೂ ಇವರ ಸರಸ ಸ್ವಭಾವ 'ಎನಗಿಂತ ಕಿರಿಯರಿಲ್ಲ', ಎಣ್ಣೆಯಿಂದಾದ ಭೋಜಾ ಕಣ್ಣೀರಿನ ಸಜಾ. ಇಂದು ಮಾಡಿದ ವಜಾ ಕೊಟ್ಟು ಬೆಣ್ಣೆ ತಾಜಾ, ನಮ್ಮ ಎಣ್ಣೆಯ ರಾಜಾ, ದಾಸೋಹಕ್ಕಿಲ್ಲದೆ ರಜಾ, ಎನ್ನುವ ಮಟ್ಟಿಗೆ ಇವರ ಪ್ರತೀತಿ, ಸೌಜನ್ಯ. ವ್ಯಾಪಾರದಷ್ಟೇ ಮನೆ ದೊಡ್ಡದು. ಮನ ದೊಡ್ಡದು. 'ನಾಳಿನ ದಿನಕಿಂದಿನ ದಿನವೇ ಲೇಸು' ಎನ್ನೆ ಮಾಡಿದ್ದರಂತೆ ಮುಹೂರ್ತ ಇಂದಾಯಿತು ತಂತರ್". ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯಾ' ಅಂದ ಹಾಗೆ.

ಪೂರ್ಣವಸ್ವರೂಪಿಗಳು ಕಾಲಿಟ್ಟರು. ಉಳಿದವರು ಪರಿ ಇಳಿದರು. ಹೊರಟವು ಮೆರೆಯುತ್ತ ಇಲ್ಲಿಂದ ಸ್ವಾಮಿಗಳ ವಾಹನ. ಅಲಂಕೃತ ಜೀಪು ಮುಂದೆ ಮುಂದೆ. ಮಂಗಳ ವಾದ್ಯಗಳ ಜೀಪ್ರು, ಜಗದ್ಗುರುಗಳಿಬ್ಬರು, ಮಹಾಂತಪ್ಪಗಳು ಒಬ್ಬರು, ದುರದುಂಡೇಶ್ವರರು ಮತ್ತೊಬ್ಬರು, ನಾಲ್ಕಕ್ಕೆ ಹೊಂದಿತ್ತು ಭೂಮಿಯ ರೋಗಿಗಳ

ಪಾಲಿನ ದೇವರು ಡಾ. ಆರ್. ಬಿ. ಪಾಟೀಲರು. ಸಮಸ್ಯೆಗಳ ಪಾಲಿನ ದೇವರು ಶ್ರೀ ಡಿ. ಎಮ್. ಚಂದ್ರಶೇಖರ ಅವರು. ಐದನೆಯವರು ಶತಾಯುಷಿ ಗಂಗಮ್ಮ ನವರು, ಆರಕ್ಕೆ ಸೇರಿದ್ದರು ಅಮೃತಪುತ್ರ ಗುರುಪುತ್ರಪ್ಪನವರು, ಅವರ ಪತ್ನಿ ಶ್ರೀಮತಿ ಶಾಂಭವಿಯವರು. ಏಳಕ್ಕೆ ಏಳು ಜೋಡಿಸಲು ಬಂದವರು ಉಳಿದೆಲ್ಲವರು ಶ್ರೋತೃಗಳು.

ಗ್ರಾಮೀಣರ ಮೆರವಣಿಗೆ, ನಾಗರಿಕರ ಸಭೆಗೆ ಬಂದಾಗ್ಗೆ ಪೂರ್ಣಕುಂಭವೇಳೆ ಕಸ್ತೂರಿ ಜಿಗಜಿನ್ನಿ, ಶಾಂತಾ ಸಾಲಂಕಿ, ಜಯಶ್ರೀ ದೇಸಾಯಿ, ಪ್ರಭಾವತಿ ಮೂರಶಿಳ್ಳಿ ನೇತೃತ್ವದಾಗ, ಮುಂದವಾಗಿ ಸರಿಯುತ್ತಿದ್ದಾಗ ಎಲ್ಲಿ ನೋಡಿದರೂ ಚೆಂದ ಚೆಂದ. ಬರುವವವರು ಬರತಾ ಇದ್ದರು, ಊರೊಳಗೆ ಹೋಗುವವರ್ಯಾರಿದ್ದಿಲ್ಲ. ವಿಶಾಲ ಶೋಭಿತ ವೇದಿಕೆಯ ಮೇಲೆ ಕುಳಿತ ಗೊತ್ತಿದ್ದವರನ್ನೆಲ್ಲ ಯಾರ್ಯಾರೋ ಕದ್ದು ನೋಡಿ ಆನಂದ ಪಡತಿದ್ದರು.

೨. ಗಂಗಮ್ಮನವರ ತುಲಾಭಾರ :

ವೇದಿಕೆಸೋ ಇಂದ್ರನ ಅಮರಾವತಿ. ಆದರಾಗ ತೊಟ್ಟಿಲದ್ಹಾಗೆ ಕಾಣತಿತ್ತು ತಕ್ಕಡಿ, ಎತ್ತರದ ಮೇಲೆ ಎತ್ತರವಾಗಿದ್ದವು ಜಗದ್ಗುರುದ್ವಯರ ಸಿಂಹಾಸನಗಳು. ಪಕ್ಕಕ್ಕೆ ಮಹಾಂತಪ್ಪಗಳು, ನೀಲಕಂಠಸ್ವಾಮಿಗಳು, ಸ್ವಾಗತಸಮಿತಿ ಅಧ್ಯಕ್ಷರಾದ ಡಾ. ಆರ್. ಬಿ. ಪಾಟೀಲರು, ನ್ಯಾಯಮೂರ್ತಿ ಚಂದ್ರಶೇಖರ ಅವರು. ತಾಯಿ ಗಂಗಮ್ಮನವರ ಪಕ್ಕಕ್ಕೆ ಮಗ ಗುರುಪುತ್ರಪ್ಪನವರು. ಅವರ ಮಗ್ಗಲಿಗೆ ಪತ್ನಿ ಶಾಂಭವಿಯವರು. ಈ ಮೂರ್ತಿಗಳ ಸುತ್ತ ಮುತ್ತ ಕಂಚಿನ ಪಂಚಪುತ್ರರು. ಅವರ ಪುತ್ರಪುತ್ರಿಯರು, ಪ್ರಪುತ್ರ ಪುತ್ರಿ, ಮಿತ್ರ ಇತ್ಯಾದಿಗಳು.

ಮಹಾಭಾರತದ ಪಡದೆಯನ್ನು ಕೃಷ್ಣ ಮತ್ತು ದ್ರೌಪದಿ ಹಿಡಿದಿದ್ದು ಪ್ರಸಂಗ ದಂತೆ ಪಾತ್ರಗಳನ್ನು ಹೊರಗೆ ಬಿಡುತ್ತಿದ್ದರೆಂಬ ಕಲ್ಪನೆ. ಇಲ್ಲಿ ಶ್ರೀ ವೀರಣ್ಣ ವಾಣಿ ಮತ್ತು ಡಾ. ಚೆನ್ನಕ್ಕ ಎಲಿಗಾರ ಅವರು ಹಿಡಿದಿದ್ದರೆಂಬುದು ಪ್ರತ್ಯಕ್ಷ ಅನುಭವ. ಸರಸಾನಂದರ ಶಕ್ತಿ, ವಾಣಿಯವರ ಸೂತ್ರಧಾರಕ ಯುಕ್ತಿ, ಡಾ. ಚೆನ್ನಕ್ಕ ಅವರ ಸಾಹಿತ್ಯದ ಪ್ರತೀತಿಗಳ ತ್ರಿಕೋಣದ ಒಳಗಡೆಯಲ್ಲಿ ಈ ಎಲ್ಲ ಪಾತ್ರಚಿತ್ರಗಳಿದ್ದವು. ವ್ರತ ಹಿಡಿದು ನಿಂತವರಲ್ಲಿ ಧೋತರದವರೇ ಹೆಚ್ಚು. ಗದುಗಿನ ಜಗದ್ಗುರುಗಳು ಸೂರ್ಯಪ್ರಭೆಯಲ್ಲಿ ಸಭೆಯಲ್ಲಿ ತಮ್ಮ ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿದಾಗ ಜನ ತಮ್ಮ ಸದ್ಭಾವನೆ ವ್ಯಕ್ತಮಾಡದೆ ಇರಲಿಲ್ಲ. ಸಭೆಯಲ್ಲಿ ಎದ್ದುಕಾಣುವವರಲ್ಲಿ ಬಸಣ್ಣ ದೊಡಮನಿ (ಕಿರಾಣಿ ವರ್ತಕ ಸಂಘದ ಅಧ್ಯಕ್ಷರು) ಸ್ಪಟಿಕದಂತೆ ಬೆಳ್ಳಗಿನ ಕ್ಲೋಸ–ಓಪನ ಕೋಟು, ಕೆಳಗೆ ಕರೆಬೂಟು, ಬೆಂಡಿಗೇರಿಯವರ ಗದ್ದಲ ಹಾಗೂ ಟೆಂಗಿನಕಾಯಿಯವರು ಭುಜ ಮೇಲೆ ಕೆಳಗೆ ಮಾಡುತ್ತ ಕೋಟಿನ ಗಡಿ ತಿದ್ದುತ್ತ ಸರಿ

ಮಾಡತಿದ್ದರು. ಪಕ್ಕನೆ ಕಣ್ಣು ಕಸಗೊಂಡವರು ಅಣ್ಣಾಪ್ಪ ಕುಂದಗೋಳ ಅವರು. ಹೊರಗೆ ಹೇಳಿದರು. ಬಾಡಿಗಿ ಕೊಂಡಿಲ್ಲಂತ ! ತಮ್ಮ ಮದುವೆಯು ಕೋಟು. ಇಂದು ಯಾರೋ ತೆಗೆದಾರಂತ. ಉತ್ತರ ಕೊಡುವಷ್ಟು ಎತ್ತರ, ಶೆರವಾನಿಯು ಪೈಜಾಮಾ ಗಫಾರಖಾನರ ಅಂಗಿಯುವರ ಅರ್ಬನ ಬ್ಯಾಂಕಿನ ಧ್ವನಿ, ಯಾರದಂತ ತಿಳಿದೀರಿ ? ಕಿತ್ತೂರ ಕ್ರಾಂತಿಯ ತೀರ ಹತ್ತಿರದ ಮಾರೀಹಾಳರದು. ಘಂಟೆಣ್ಣವರು ಯಾರ ತಂಟೆಗೂ ಹೋಗದೆ ಬಾರಿಸುತಿದ್ದರು ಶಿಸ್ತಿನ ಗಂಟೆ. ಬೆಲ್ಲದ ಶಿವಣ್ಣ ಅವರು ಹಾಲು ತೊರೆಗೆ ಬೆಲ್ಲದ ಕೆಸರು. ವ್ಯವಸ್ಥಾಪಕತೆಗೊಂದು ಹೆಸರು. ಯೋಗದ ಭಾವಭಂಗಿಯ ಯೋಗೀಶ ಯಡ್ರಾವಿ ಇದ್ದರು.

ಎದುರಿಗೆ ಪ್ರೇಕ್ಷಕರೇ ಪ್ರೇಕ್ಷಕರು. ದುರ್ಬೀನದಾಗೂ ಡಬ್ಬಣದಂತೆ ಉದ್ದ ಕಾಣುವ ದೃಶ್ಯ. ನ್ಯಾಯವಾದಿ ಹಿರೇಗೌಡರಿಂದ ಹಿಡಿದು ಬಹುತರ Life time Public Prosecutor ಅಗಡಿ ವಕೀಲರವರೆಗೆ. ಕಾಣದಿದ್ದ ಮುಖ್ಯರೆಂದರೆ ಈ ಎಲ್ಲ ಉತ್ಸವ ಸಂಪುಟಕ್ಕೆ ಬೆಂಬಿಬಂಟರಾಗಿದ್ದ ನೀಲಕಂಠಪ್ಪನವರು ಅಗಡಿ, ಸಂಸ್ಥಾ ಕಾಂಗ್ರೆಸ್ಸಿನ ಸಂಸ್ಥಾ. ಧಾರವಾಡದಿಂದ ಆರಿಸಿಬಂದ ಪ್ರಥಮ ಪೂಜ್ಯ ಮಹಾಪೌರರು ಮತ್ತು ಒಡನಾಡಿ ರೇಶಿಮೆ ಪೇಠಾದ ಬಡಿಗೆಯ ಒಡೆಯ ಲಿಂಗೈಕ್ಯ ಮಲ್ಲನಗೌಡರು. ಇತರ ಹುಬ್ಬಳ್ಳಿಯ ಗಣ್ಯರು ಡಾ. ತೆಗ್ಗಿನಮನಿಯುವರಿಂದ ಗುಂಡಿಯವರ ವರೆಗೆ. ಶಾಸಕರಲ್ಲಿ ಎದ್ದು ಕಾಣುವವರೆಂದರೆ ಚಂದ್ರಕಾಂತ ಬೆಲ್ಲದ ಮತ್ತು ಪಾಮನಿಯವರು. ಡಾಕ್ಟರರುಗಳಲ್ಲಿ ಡಾ. ಪಾ ವ ಟಿ, ತಾವರಗೇರಿ ದಂಪತಿಗಳು, ರಾಮನಗೌಡರ, ಧೋಳಪ್ಪನವರ, ಹತ್ತೀಕಾಳ, ಮಕ್ಕಳವೈದ್ಯ ರಾಜನ್ ದೇಶಪಾಂಡೆಯುವರ ವರೆಗೆ. ಪ್ರಾಂಶುಪಾಲರಲ್ಲಿ ಗುರುತಿನವರೆಂದರೆ ವಜ್ರಕುಮಾರ, ಸಾಲಿಮಠ ಅವರು. ಉಪ ಕುಲಪತಿಗಳಾದ ಹಿರೇಮಠ, ಒಡೆಯರ ಅವರು. ಬಂದವರು ಯಾವ ಊರೊ ಹೇಳುವದಕ್ಕಿರಲಿಲ್ಲ ಉಸಿರು. ತೆಕ್ಕೆಯೊಳಗಿನ ಮಕ್ಕಳು ಹೊಕ್ಕಳಿಗೆ ಬಂದು ಯಜಮಾನರಿಗೆ ಆಸನ ಕೊಡಬೇಕೆಂದರ ಆಗತಿತ್ತು ಪ್ರಹಸನ. ಸರಕಾರ 'ಮನೆಗೊಬ್ಬರಿಗೆ ನೌಕರಿ' ಕೊಡುವ ಆಶ್ವಾಸನದ ಮಾತನಾಡಿದ್ದರು. ಇಲ್ಲಿ ಖಾತ್ರಿಯಿಂದ ಮನೆಗೊಬ್ಬರ ಜಮಾವಣೆಯಾಗಿತ್ತು. ಧಾರವಾಡದ ಅರ್ಧನಾರೀನಟೇಶ್ವರ ಹಾಜರಾಗಿದ್ದ. ಶಾಲ್ಮಲಾ ಆದಾಗ ಗುಪ್ತ ಸೋಮೇಶ್ವರಾದನಂತೆ ತೃಪ್ತ. ಅಂಥವರೂ ಇದ್ದರು ಸಂಕ್ಷಿಪ್ತ. ಹತ್ತಿರಿಲ್ಲದಾಗ ಪಾರ್ವತಿ ಶಂಕರಗಿರಲಿಲ್ಲವಂತೆ ಶಾಂತಿ. ಅಂಥವರೂ ಇಲ್ಲಿ ಗುರುಪುತ್ರಪ್ಪ ಶಾಂಭವಿಯಂತೆ. ಜಡೆಯಿಂದ ಜಿಗಿದ ಗಂಗೆ ತುಂಬಿವಳಂತೆ ಕೇರಿ ಕೇರಿ ಇಂಗಿ. ಇದು ಪ್ರತ್ಯಕ್ಷ ಗಂಗಮ್ಮನವರ ಭಂಗಿ. ಒಟ್ಟಿನಲ್ಲಿ ಶಿವದಾರದಾಗಿನ ಜೀವನ ಗಂಟು, ಜನಿವಾರದಾಗಿನ ಬ್ರಹ್ಮಗಂಟು, ಹೊಲಸು ರಾಜಕಾರಣದ ಅಂಟು, ಕೆಲಸದ ಉಜದಾರರ ನಂಟು, ಮಂಟಪದಲಿ ಉಂಟು ಅನ್ನುವವರೆ ಇತ್ತು ಹಾಜರಿದ್ದವರ ಪಂಟು, ಪತ್ರಕರ್ತರಲ್ಲಿ ಸಾಲಿಗೊಂದು ಸಾವಿರ ರೂಪಾಯಿಯ ವರ್ತಕರಾರೂ ಕಾಣಲಿಲ್ಲ.

ಸರಸಗಂಗಾ – ಕಾಂಚನಗಂಗಾ ನಡುವೆ ಹೆದ್ದಾರಿ ಹಾಗೇನೆ. ಹೆಂಗಸರ ಹಬ್ಬ ಒಂದು ಕಡೆ. ಗಂಡಸರ ದಿಬ್ಬ ಮತ್ತೊಂದು ಕಡೆ. ಅಕ್ಕನ ಬಳಗ ಸಹಜ ಏಕತ್ರಿತವಾಗಿತ್ತು.

ದೊಡ್ಡಮನೆತನದ ಪಾವನಗಂಗೆಯ ತುಲಾಭಾರ ಎಂದು ತುಂಬಿದ ಕುಂಭಗಳು ತಂಗಿದ್ದವು ಮುಂದೆ ಬಂದು. ಪಂಚಸಂತತಿಯ ಕಂಚು ಇಂಚು ಇಂಚು ದೊಡವಾಡ ಪ್ರಪಂಚದ ಹೊನ್ನ ಸಂಚು. 'ಬಡನೂರು ವರುಷಾನ ಹರುಷಾದಿ ಕಳೆಯೋಣ, ಯಾರಾರೆ ಕೇಳೋಣ' ಎಂದು ಹಾಡಿದ ಕವಿಯ ವಾಣಿಗೆ ಭೂಷಣದ ಆಹ್ವಾನ. ಶತಕ ಬಾರಿಸಿದರೂ ನಾಟಔಟದ ಆಟ. ಪ್ರೇಕ್ಷಕರಿಗೆ ನೋಟ ದೊಡವಾಡರ ಈ ಬಂಗಾರ. ಸಮಾಜದ ಶ್ರೀಂಗಾರ ಗಂಗಮ್ಮನ ತಾಪ ನೆನಪಿನ ಭಾರ ಈ ತುಲಾಭಾರ. ಹೊಸ ಹೊಸ ರೋಗ, ಹೊಸ ಹೊಸ ಔಷಧ ಪ್ರಪಂಚದೊಳಗ, ಗಂಗವ್ವ ಕೂತಾಳ ಇಳಿದ ಪರಡಿ ಸಾವಕಾಶವೇರಲು ಮೊದಲು ತವ್ವ ಕಾಣಿಕೆ ಸಲ್ಲಿಸಿದವರು ಹಿರಿಯ ಮಗಳು ಶ್ರೀಮತಿ ಅಮೃತವ್ವ, ನಂತರ ಎರಡನೆ ಮಗಳು ಸುಶೋಭಿತವ್ವ, ಮೂರನೆಯ ಮಗಳು ಪರಮಾನಂದವ್ವ, ನಾಲ್ಕನೆಯದಾಗಿ ಗುರುಪುತ್ರಪ್ಪನವರು, ನಂತರ ಒಬ್ಬೊಬ್ಬರಾಗಿ ಸರಸಾನಂದ ದಂಪತಿಗಳು, ಸುದೈವ ದಂಪತಿಗಳು, ಮನೋಹರ ದಂಪತಿಗಳು, ದಯಾನಂದ ದಂಪತಿಗಳು, ಕೈಲಾಸ ದಂಪತಿಗಳು ಕಾಣಿಕೆ ಸಲ್ಲಿಸಿದರೂ ಗಂಗಮ್ಮ ಮೇಲೇಳಲು ಒಪ್ಪಲಿಲ್ಲ. ಗುರುಗಳು ಆಶೀರ್ವದಿಸಲೆಂದು ಸತ್ಯಾಗ್ರಹ. ಆಶ್ರಯ ಛತ್ರ ದಾಸೋಹದ ಪಾತ್ರ ಈ ಮನೆತನ ನಡೆಸುತ್ತ ಬಂದವರು ಮುರುಘಾಮಠದ ಮಹಾಂತಪ್ಪಗಳು ಬಂದು ಆಶೀರ್ವದಿಸಿದಾಗ ಪರಡಿ ಸಮಗರಡಿಯಾದಾಗ್ಗೆ ಚಪ್ಪಾಳೆಗೆ ಕೈ ಹಪ್ಪಳಾದವು. ಒಂದು ಲಕ್ಷ ಹನ್ನೊಂದು ಸಾವಿರ ಒಂದು ನೂರ ಹನ್ನೊಂದು ರೂಪಾಯಿಯನ್ನು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ಕೆ ವಿನಿಯೋಗಿಸುತ್ತೇನೆಂದು ಗುರುಪುತ್ರಪ್ಪನವರು ಘೋಷಿಸಿದರು. ಜನರು ಕಪಾಳ ಒರೆಸಿಕೊಂಡರು.

ಗುರುಪುತ್ರಪ್ಪನವರ ಅಮೃತಮಹೋತ್ಸವ

ಕು. ನಂದಾ ಪಾಟೀಲರ ಪ್ರಾರ್ಥನೆಯೊಂದಿಗೆ ನಾಂದಿ. ಅನಿಸಿದಂತೆ ಎಣಿಸಿ ಗುಣಿಸಿದಂತೆ ತಣಿಸುವ ಬುಳ್ಳಾ ಅವರು ಸ್ವಾಗತಿಸಿದ ನಂತರ ಡಾ. ಚೆನ್ನಕ್ಕ ಎಲಿಗಾರ ಅವರು ಸಂದೇಶಗಳನ್ನು ಸಾದರ ಪಡಿಸಿದರು. ನಂತರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪದ್ಮಶ್ರೀ ಡಾ. ಆರ್. ಬಿ. ಪಾಟೀಲರು ಸ್ವಾಮಿಗಳ ಸಮೂಹವನ್ನು, ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಪರೇಡಿನಲ್ಲಿ ಹನ್ನೆರಡು, ಅದರಲ್ಲಿ ಮುಖ್ಯವಾದುವು ಎರಡು. ಪ್ರಸ್ತಾವನೆಯ ಗಡಿ, ನಿರ್ವಹಣೆಯ ಹಿಡಿ. ಎರಡನೆಯ ಅಧಿಕಾರಿ ಸಹಸಾ ಬ್ರಿಗೇಡಿಯರ ಹುದ್ದೆಯವನಿರುತ್ತಾನೆ. ಈ ಉತ್ಸವದ ಬ್ರಿಗೇಡಿಗೆ ಬಂತು ಗ್ರೇಡು. ಶ್ರೀ ಬುಳ್ಳಾ ಅವರು ಗದುಗಿನ ತೋಂಟದಾರ್ಯ ಜಗದ್ಗುರುಗಳ ನೆರಳು ಹಗಲಿರುಳು. ಜಗದ್ಗುರುಗಳ ವಾಣಿ, ಬುಳ್ಳಾ ಅವರ ಧ್ವನಿ. ಬುಳ್ಳಾ ಅವರ 'ಗಳಾ' ಎಂದರೆ

ಇನಸ್ಪೆಂಟಬಳ್ಳೊಳ್ಳಿ ಗರಮ್ಮ ಸಾಲಾ ಇದ್ದಂತೆ (ರಾಜಕಾರಣ ಬಿಟ್ಟು) ನಿಂತಲ್ಲೆ ಚಲಿಸುವ ಈ ಸ್ವಂತಜ್ಞಾನಕೋಶಕ್ಕೆ ಅವಕಾಶ ಸಿಕ್ಕರೆ ಸಾಕು. ಪ್ರಸಂಗ ಪರಿಸರಕ್ಕೆ ಪ್ರಕಾಶ ತ್ರಿವೇಣಿ ಸಂಗಮದಾಗ ಪಂಚಕಲ್ಯಾಣಿ ವ್ರತ ಅನ್ನುವ ಹಾಗೆ ಗದಗಿನ ಬುಳ್ಳಾ ಅವರ ಮೊದಲನೆಯ ಒಳ್ಳೆಯ ಕೆಲಸವೆಂದರೆ "ಧರ್ಮದೀಪ್ತಿ" ಅಭಿನಂದನ ಗ್ರಂಥದ ಬಿಡುಗಡೆ. ಉತ್ತರಪ್ರದೇಶದ ಅಲಹಾಬಾದ ಹಾಯಕೋರ್ಟಿನ ಮತ್ತು ಕರ್ನಾಟಕ ರಾಜ್ಯದ ಮಾಜಿ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಡಿ.ಎಮ್. ಚಂದ್ರಶೇಖರ ಅವರಿಂದ. ಇವರು ನ್ಯಾಯದಾನದ ಬಸವಸಂತಾನ. ಗುರುಪುತ್ರಪ್ಪನವರ ಬಗ್ಗೆ ಅಭಿಮಾನ ಈ 'ಧರ್ಮದೀಪ್ತಿ' ಹೊತ್ತಿಗೆ. ತೃಪ್ತಿ ಸಂತೃಪ್ತಿಯ ಆಸ್ತಿ. ಇದು ಕೇವಲ "ಪುಸ್ತಕದಲ್ಲಿಯ ಬಾನು-ತಲೆಯೊಳಗಿನ ಹೇನು" ಅಲ್ಲವೇ ಅಲ್ಲ. ಪ್ರಸಾದ ದಾಸೋಹದಿಂದ ಹೊಟ್ಟೆ ಇದೆ ಒಂದೇ ಗೇಣು 'ಆದರೆ ಹೃದಯದಲ್ಲಿದೆ ಜೇನು' ಎಂದು ಬಿಂಬಿಸುವ ಅನು. ಇದನ್ನು ಸಂಪಾದಿಸಿದವರು ಅಪಾರ ಸ್ಮರಣಶಕ್ತಿಯ ಡಾ. ಆರ್. ಸಿ. ಹಿರೇಮಠ (ಮಾಜಿ ಉಪಕುಲಪತಿಗಳು ಕ. ವಿ. ವಿ. ಧಾರವಾಡ) ಮತ್ತು ನಗುವಿನ ಮೊಗ ಹೊತ್ತ ಡಾ. ಎಮ್. ಎಸ್. ಸುಂಕಾಪುರ ಅವರು.

ನಂತರ ನಿಂತವರು ಸಂತರು ಮುರಗೋಡ ದುರದುಂಡೀಶ್ವರ ಮಠದ ನೀಲಕಂಠ ಸ್ವಾಮಿಗಳು. ಅವರು ಬಿಡುಗಡೆ ಮಾಡಿದರು ಪ್ರೊ. ಮಾರೀಹಾಳ ಸಂಗ್ರಹಿಸಿದ 'ಚನ್ನಬಸವಣ್ಣನವರ ವಚನಗಳು' ಪುಸ್ತಿಕೆ. ಧಾರವಾಡದ ಈ ಗುರುಭಕ್ತರೆಲ್ಲಾ ಆಸಕ್ತರು. ಚನ್ನಬಸವಣ್ಣನ ಹಸಿರು ಮೇಯುವವರು. ಇವರಿಗೆ ಚನ್ನಬಸವಣ್ಣನದೇ ಚಿನ್ನ. ಅಂಗಿ, ಹೊನ್ನು, ಸಂಗಿ ಅಲ್ಲದೇ ಆತನದೇ ಹೃದಯದಲ್ಲಿ ಗುಂಗಿ.

ಪ್ರಾಸ್ತಾವಿಕ, ವಾಸ್ತವಿಕ, ಪೂರ್ವೋತ್ತರ ವಿಧಾನಗಳನ್ನು ಬುಳ್ಳಾ ಅವರ ಕಣ್ಣುಂಕುಳ್ಳಿಗೊಳಿಸಿದ ನಂತರ ಬಂತು. ಬಂತಪಾ ಬಂತು ಕೊನೆಯ ಮುಖ್ಯ ಕಂತು ! ಉತ್ಸವದ ಮಧ್ಯಬಿಂದು ಗುರುತಿಸಿದಾಗ ಇಂದು. ವೇದಿಕೆಯ ಹೊದಿಕೆಗೆ ಹತ್ತಿರದಿಂದ ಭಾವಲಿಂಗದ ಮುಖಾಂತರ ಆಶೀರ್ವದಿಸುತ್ತಿದ್ದವರು ಅಥಣಿಯ ಶಿವಯೋಗಿಗಳು. ಒಮ್ಮೊಮ್ಮೆ ಇಂದಿರಾಗಾಂಧಿಯವರ ದೊಡ್ಡ ಫೋಟೋದ ಹತ್ತಿರ ಗಾಂಧೀಜಿ ಚಿತ್ರವಿದ್ದ ಹಳೆ ಕ್ಯಾಲೆಂಡರ ಹಾರಾಡತಿರತದಂಥ ಯಾರೋ ಹೇಳಿದ ನೆನಪು, ತಣಕ್ಕನೆ ಹಾಲಿದಾಗ, ಪ್ರಸಾದ-ದಾಸೋಹವಾದಾಗ ತಾಸು ತಾಸಿಗೆ ಕೂಸಿನಲ್ಲಿ ಕರಗಿಹೋಗುವದಿಲ್ಲ. ದಿವಸಾದಂತೆ ವ್ಯಾಸ ಪರಿಘಗಳು ಬೆಳೆದು ಸಂಸ್ಕಾರಾಗತದ ಎಂಬ ಅನುಭವ ಬಾರದೆ ಇರಲಿಲ್ಲ. ಈ ನಿಮಿತ್ತ ಇಷ್ಟೆಲ್ಲ ಜನ ಮನ ಹತ್ತಿರ. ಹೃದಯದಾಗ ಹೃದಯ ಹದಾ ಮಾಡಿದಾಗ ಹುಟ್ಟಿದ ಅಂತಃಕರಣದ ಪೃಥಃಕರಣ. ದೃಷ್ಟಿಯ ಶಕ್ತಿ-ಸಮಷ್ಟಿಯ ಪ್ರೀತಿ ಕೂಡಿದಾಗಿನ ದೃಷ್ಟಿ ಆತ್ಮೀಯ ಸೃಷ್ಟಿ. ಇವರು ಮಂತ್ರಿಗಳಲ್ಲಿ, ಅಧಿಕಾರದಲ್ಲಿದ್ದ ರಾಜಕಾರಣಿಯಲ್ಲಿ, ಧಾರ್ಮಿಕ ಸ್ವಾಮಿಗಳಲ್ಲಿ, ಸಾಮಾನ್ಯ ಅಸಾಮಾನ್ಯರಲ್ಲಿ ಅನ್ಯೋನ್ಯರಾದ ಗುರುಪುತ್ರಪ್ಪನವರು ಬೆವರನ್ನು ಕೆಸರಿನಲ್ಲಿ ಕಲಿಸಿ,

ಕೆನಿ ಕೆನಿ ಮೊಸರು ಮಾಡಿದವರು. ತಮ್ಮ ಜೀವಮಾನದಲ್ಲಿ ಐದು ಸಂತತಿಗೆ ಮಂತಿಕೆಯಾದವರು. ಬಾಳನ್ನು ಏಳಾಗಿಸಿ (ಏಳು–ನಿತ್ಯಸಾವಿರವೊತ್ತು) ಏಳನ್ನು (ಸತ್ಯದಲ್ಲಿಯ ಸತ್ವವನ್ನು) ತಾಳಿಸಿ ಏಳಕ್ಕೆ ತಾವು ತಾಳಿ–ಆಳಿ–ಬಾಳಿದ ಏಳನ್ನು ಜೋಡಿಸಿ ಎಪ್ಪತ್ತೇಳಕ್ಕೆ ಏರುತ್ತಿದ್ದವರು ಎಲ್ಲರ ಹತ್ತಿರ ಇದ್ದವರು "ನೆನಹು ಬಾಳಿನ ಬುತ್ತಿ. ಅನುಭವಗಳ ಅಕ್ಷಯನಿಧಿ" ಕುವೆಂಪು ಅವರು ಹೇಳಿದಂತೆ ಇದೊಂದು ಆ ತೆರದ ವಿಧಿ. ನೆನಪು ಪರದೆಯ ಮೇಲೆ ಮಾಡುವ ಹುಡದಿ. ಇಂದು ಈ ಹೃದಯವಂತನ ಸರದಿ.

ಬುಳ್ಳಾ ಘೋಷಿಸಿದರು, ಅಮೃತಮಹೋತ್ಸವದ ಅಂಶವನ್ನು. ವಾಣಿಯವರ ಹೃದಯ ತುಂಬಿದ, ಭಾವ ತುಂಬಿದ ಮಂದಧ್ವನಿ ಗದ್ಗದ, ಓದಿದರು ಉದ್ಯೋಗಶ್ರೀ ಗುರುಪುತ್ರಪ್ಪನವರಿಗೆ ಅರ್ಪಿಸುವ ಸನ್ಮಾನ ಪತ್ರವನ್ನು. ಎಲ್ಲ ಕಡೆಗೂ ಚುಪ್ ಚಾಪ್ ಗಪ್. ಈ ಕ್ಷಣದಲ್ಲಿ ಮಿಂಚಿದ್ದೆಂದರೆ ಭಾರತ ಸರಕಾರದವರು 'ಭಾರತರತ್ನ' ಒಂದು ಬಿರುದನ್ನು ಬಿಟ್ಟು ಉಳಿದವುಗಳೆಲ್ಲವೂ ಪದ್ಮಕ್ಕೆ ಯಾಕೆ ಹೊಂದಿಕೊಂಡಿವೆಯಲ್ಲಾ ಅಂತ. ಮಜಾ ಅಂದರೆ ನಾನು ಕೂಡಾ ಮದುವೆಯಾದ ನಂತರ 'ಪದ್ಮಭೂಷಣ' ನೇ. ಬಿರುದಿನಲ್ಲಿ ಬಂದ ಈ ತೊಡಕು ಒಡಕಿಗೆ ಪರಿಹಾರದ ಸೂಚನೆ ಏನೆಂದರೆ ಅವರವರ ಕಾಯಕದ ಪ್ರಕಾರ ಬಿರುದಿನ ಶ್ರೇಣಿಗಳು ಇರುವುದು ವಿಹಿತ. ಬ್ರಿಟನ್ನಿನಲ್ಲಿ ಹಾಗೆ ಪದ್ಧತಿ ಇದೆ. ನಮ್ಮಲ್ಲಿ ಈ ಪದ್ಧತಿಗೆ ರದ್ದತಿ ತಂದು ಗುರುಪುತ್ರಪ್ಪನವರಿಗೆ "ಉದ್ಯೋಗಶ್ರೀ, ಉದ್ಯೋಗ ಭೂಷಣ" ಪದವಿ ಜನರು ಪ್ರಧಾನ ಮಾಡುವುದು ಸೂಕ್ತ ಅಂತಾ ಅನ್ನಿಸುತ್ತದೆ.

ಗೊಂದಲಕ್ಕಿಲ್ಲಿ ಬಂದೀ ಇತ್ತು. ಮಹಾಂತಪ್ಪಗಳು ಶಾಲು ಹೊದಿಸಿ ದಂಪತಿಗಳಿಗೆ ಆಶೀರ್ವದಿಸಿದರು. ಚಿತ್ರದುರ್ಗದ ಜಗದ್ಗುರುಗಳು ಗೌರವಿಸಿದರು. ಗುರುಪುತ್ರಪ್ಪನವರು ಗುರುಗಳೆಂದರೆ ಹರೆಯದವರಾಗುತ್ತಾರೆ. ಅವರಿಗೆ ಆ ಭಕ್ತಿಯೇ ಶಕ್ತಿ; ಅದೇ ಅಭಿವ್ಯಕ್ತಿ ಅವರಿಗೆ. 'ದಾಸೋಹದಣ್ಣ ಬಸವಣ್ಣನಿದ್ದಾಗ ಶ್ರಾವಣ. ಮೃತ್ಯುಂಜಯಪ್ಪ ತುಳಿದ ಮಣ್ಣ ಕೊಟ್ಟಾಗ ಅನ್ನ' ಅಮೃತ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಬಸಣ್ಣ ಲಕಮನಹಳ್ಳಿಯವರು ಪುಷ್ಪಹಾರ ಹಾಕಿದಾಗ ಗುರುಪುತ್ರಪ್ಪನವರು ಭಾವ ಪರವಶರಾದರು. ಹಾರಾ ಹಾಕುವದಕ್ಕೆ ಪೆಂಡಾಲಿಲ್ಲ ಹಸಿದಿದ್ದರಿಂದ ವೇದಿಕೆಯೇ ಅದಕ್ಕೆ ಆಹಾರವಾಗಬಹುದೆಂಬ ಭೀತಿಯಿಂದ ಪ್ರಸಂಗಾವಧಾನದಿಂದ ಬುಳ್ಳಾ ಅವರು ಗುರುಪುತ್ರಪ್ಪನವರನ್ನು ಸನ್ಮಾನಕ್ಕೆ ಉತ್ತರ ಕೊಡಲು ಆಹ್ವಾನಿಸಿಯೇ ಬಿಟ್ಟರು, ವಿರಾಟ ಸಭೆಯ ಮುಂದೆ ನಮ್ರನಾಗಿ ಕೈಮುಗಿದು ನಿಂತ ಗಂಗಮ್ಮನ ಉಡಿಯಲ್ಲಿದ್ದ ಮುಡಿ ೭೭ರ ಅಡಿಯಲ್ಲಿದ್ದ ಗಡಿ, ದೊಡವಾಡ ಮನೆತನಕ್ಕೆ ಅಡ್ಡಾಡುವ ಗುಡಿ. ನಿನ್ನೆ ಮೊನ್ನೆ ನೋಡಿದ ಗುರುಪುತ್ರಪ್ಪನವರೆ ಇಂದು ಕೂಡಾ ಅದೇ ಬಿಳಿ ಕೋಟು, ಅಂಗಿ, ಧೋತರ, ಟೊಪ್ಪಿಗೆ, ಅವರದೇ ಬಾಯಿ. ಬಾಡಿಗೆಯಿಂದ ಸಭೆ, ಸಮಾರಂಭ ಕಡ ತೆಗೆದುಕೊಂಡಿದ್ದಲ್ಲ. ಜನರಿಗೆ ಗೊತ್ತು ವ್ಯಾಪಾರಿಗಳ ಅಪಾರಧರ್ಮ. ಆದರೆ ಅವರ

ಹಣೆಯ ಮೇಲೆ ಕಾಣಿಸತಿತ್ತು ಮೂರು ವಿಭೂತಿಯ ಪಟ್ಟಿಗಳು. ಒಂದು ಒಕ್ಕಲಿಗರದು. ಒಂದು ದಲಾಲರದು, ಒಂದು ಹಮಾಲರದು. ಗುರು ಲಿಂಗ ಜಂಗಮ ತ್ರಿವಿಧದಾಸೋಹದ ಉತ್ಪತ್ತಿಯಾಗಿ ಬೆಳೆದ ವೃತ್ತಿ ತನ್ನದು. ಅವಕ್ಕೆ ಸಹಕಾರ ಮಾಡಿದವರು ಸಮಾಜವೆಂದು ಕೃತಜ್ಞತೆಯಿಂದ ನೆನೆಯುವ ನಲ್ಮೆ ಮಾತುಗಳಿಂದ ತೆರೆದರು ತಮ್ಮ ಹೃದಯ. 'Small is beautiful' ಇದು ಬಸವನ ವೈಶಿಷ್ಟ್ಯ. ಇಷ್ಟಲಿಂಗದಿಂದ ಹಿಡಿದು ವಚನದವರೆಗೆ. ಥಾಪಾ ಥೂಪಾರಿಲ್ಲದ ಪ್ರಮಾಣ ಗುರುಪುತ್ರಪ್ಪನವರು, ಜನರಲ್ಲಿ ಪರಿಣಾಮಕಾರಿಯಾಗಿ ಬಿಂಬಿಸಿದರು. ಅವರನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದವರಲ್ಲಿ ನಾನೂ ಒಬ್ಬ.

'ನರೆ ಕೆನ್ನೆಗೆ ತೆರೆಗಲ್ಲಕೆ... ಬರುವ ಮುನ್ನ ಪೂಜಿಸು ಕೂಡಲಸಂಗಮದೇವನ' ಹಾಗೆ ಕೆರೆಯ ನೀರನು ಕೆರೆಗೆ ಚೆಲ್ಲುವ ಪ್ರಸಾದ ದಾಸೋಹದ ರೀತಿ ನೀತಿ ಗತಿಯಲ್ಲಿಯೇ ಇರಬೇಕೆಂಬುದು ಅವರ ಮತಿತಾರ್ಥ.

'ಶಿವಭಕ್ತನಾಗಿ ಭಕ್ತಿಭಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ'ವೆಂಬುದು ಅವರ ನಿಶ್ಚಿತಾರ್ಥ. ತಾನು ಶ್ರೀಮಂತನಾಗಿದ್ದೇನೆಂಬುದು ಅಪಪ್ರಚಾರ, ದಾನ ಮಾಡಬೇಕೆಂಬುದು ಅವಿಚಾರ. ಈ ಭಾವದಲ್ಲಿ ಅವರ ನಿಲುವು ನೇಲಿನಂತೆ ಸರಳ.

ಶ್ರೀ ಬುಳ್ಳಾ ಅವರು ಹಾರ ಹಾಕುವವರ, ಕಾಣಿಕೆ ಕೊಡುವವರ ಯಾದಿ ಓದ ಹತ್ತಲು ಪೆಂಡಾಲೆಲ್ಲ ಎದ್ದು ನಿಂತಿತು, ಒಂದು ಕೈಯಲ್ಲಿ ಹಾರ ಮತ್ತೊಂದು ಕೈಯಲ್ಲಿ ಕಾಣಿಕೆ. ಜನಾ ದಾರಿಯನ್ನು ಗಾದಿ ಮಾಡಿದರು. ಜನಾ ಗುರುಪುತ್ರಪ್ಪನವರನ್ನು ನಿಜವಾಗಿ ಮೆಚ್ಚಿದ್ದರು. ಅವರ ಹುಟ್ಟೂರಾದ ಕಲೀಕಟ್ಟಿ ಎದ್ದು ಬಂದಿತ್ತು. ಒಬ್ಬ ವೃದ್ಧ ಮುಸಲ್ಮಾನ ಮುಂದಕ ಬಾಗಿ ಹಿಡಿದು ಗಂಗಮ್ಮನಿಗೆ ಅರ್ಧಾತೊಲಿ ಉಂಗುರ ಕಾಣಿಕೆ ಕೊಟ್ಟರ, ಗಂಗಮ್ಮ ನಾನೇನು ಮಾಡಲಿ ? ಅಂದರೆ, ಆತನ ಸುತ್ತು ಇತಿಹಾಸ ಮೆತ್ತಿಕೊಂಡಿತ್ತು. ಹೀಗೆ ಎಷ್ಟೋ ಜನ. ಜಗದ್ಗುರುಗಳು ತಾವೇ ಎದ್ದವರಲ್ಲ. ತುಂಬಿದ ಕೊಡಾ ತಾನೇ ಸರಿಯುವಂತಿಲ್ಲ. ಜನಾ ಮೇಲೆ ಹೋಗಿ ವೈಯಕ್ತಿಕ ಸನ್ಮಾನಾ ಸರಿಯುವಂತಿಲ್ಲ. ವಾಣಿಯವರ ವಾಣಿ ಢಣಾ ಢಣಾ, ವೇದಿಕೆಗೆ ಬರುವ ಮಾರ್ಗದ ಮಧ್ಯದಲ್ಲಿ ಸಿಂಹಾಸನಾರೂಢರಾದರು ಗಂಗಮ್ಮನವರು, ಪಕ್ಕಕ್ಕೆ ನಿಂತರು ಗುರುಪುತ್ರಪ್ಪ. ಅತ್ತ ಇತ್ತ ಕುಳಿತರು ಪಂಚದಂಪತಿಗಳು. ಉರುಟನಿಗೆ ಕುಳಿತಂತೆ. ಆದರೂ ವಂತಿಕೆ ಸಲ್ಲಿಸುವವರು ವೇಳೆಯ ಕಂತಿಕೆ ಒಪ್ಪಲೂ ಇಲ್ಲ, ಸೊಪ್ಪು ಹಾಕಲೂ ಇಲ್ಲ. ಗೊಂದಲದಲ್ಲಿ ಗಂಧವಿತ್ತು. ಅಂದ ಚೆಂದದ ಮಂದಸ್ಮಿತವಿತ್ತು. ದೂರದಿಂದ ಬಂದವರ ಆದರ, ಉದ್ಧಾರ, ಉದಾರ ಆಗಗೊಡಲಿಲ್ಲ. ಲಿಂಗಳೆಲ್ಲರಿಗೂ, ಬಂದ ಅತಿಥಿ ಅಭ್ಯಾಗತರಿಗೂ, ಪಿತಾಪುತ್ರರು ಕಾಣಿಕೆಗಳನ್ನರ್ಪಿಸಿ ಕೃತಾರ್ಥರಾದರು.

ಬುಳ್ಳಾ ಅವರು ಚಾರಿಸುತ್ತಿದ್ದ ಗಂಟೆಗೆ ಯಾರೂ ತಂಟೆ ಮಾಡುತ್ತಿದ್ದಿಲ್ಲವಾದರೂ ವ್ಯವಸ್ಥೆ ತಾನೇ ಗತಿ ಹಿಡಿದಿತ್ತು. ಮಹಾಂತಪ್ಪಗಳು ಆಶೀರ್ವಚನ

ಮಾಡಿದ ನಂತರ ವೀರಶೈವ ವಿವೇಕರ ಆದೇಶ, ಸಾರಸ್ವತದ ಉದ್ದೇಶ ಮಂಟಪದಲ್ಲಿ ಪ್ರವೇಶಿಸಿದಾಗ ಆಗಿತ್ತು ಸಂತೋಷ. ಗದುಗಿನ ಹಡಗ ಧಾರವಾಡ ಬಂದರದಾಗ ಅಮೃತೋತ್ಸವದ ಧಕ್ಕೆಯಲ್ಲಿ ಲಂಗರು ಹಾಕಿತ್ತು.

ಧಾರವಾಡದ ಹುಟ್ಟು, ಬೇಂದ್ರೆಯವರ ಗುಟ್ಟು, ಗುರುಪುತ್ರಪ್ಪನವರ ಮುಟ್ಟಿಕ್ಕೆ ಬಂದ ಅಟ್ಟಹಾಸವನ್ನು ಮನಮುಟ್ಟುವಂತೆ ಅಟ್ಟಿದರು ಜಗದ್ಗುರುಗಳು. ವೇಳೆ ಜೀಸಹತ್ತಿದರೂ ಹಸಿವೆಯ ಗಾಳಿ, ಕೇಳುವವರ ಕಿವಿಗಳಲ್ಲಿ ಬೀಳತಿತ್ತು ಜಗದ್ಗುರುಗಳ ಶಬ್ದದ ಮಳಿ. ಬಂತು ಚಿತ್ರದುರ್ಗದ ಜಗದ್ಗುರುಗಳ ಪಾಳಿ. ಸಭಿಕರ ಮಾರಿ ನೋಡಿ ಊದಿದರು ಹಸಿವೆಯ ಕಾಳಿ. ತಾಳಕ್ಕೆ ಮೇಳ ಕೂಡುವಾಗ ಕೃತಜ್ಞ ಸರಸಾನಂದರು, ಬಂಳ್ಳಾ ಅವರ ನಿರ್ವಹಣೆಯನ್ನು ಪ್ರಶಂಸಿಸಿ ಉತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಲಕಮನಹಳ್ಳಿಯವರ ಹಸ್ತದಿಂದ ಶಾಲು ಹೊದಿಸಿ ಪುಷ್ಪಹಾರ ಹಾಕಿ ಸನ್ಮಾನ ಮಾಡಿದರು ಜನರು. ಈರ್ವರನ್ನು ಮೆಚ್ಚಿದರು.

ಹೋಗುವಾಗಿತ್ತು ಕೈಯಲ್ಲಿ ಗುಲಾಬಿ ಪುಷ್ಪ, ಬರುವಾಗ್ಗೆ ಸಿಕ್ಕಿತ್ತು ಫಲ. ಸುವಾಸನೆ ಮೈತುಂಬ ಮೂಸಿ ನೋಡುತ್ತ ಊಟದ ಮನೆಗೆ ಹೊರಟಾಗ್ಗೆ ಸೂರ್ಯ ನೆತ್ತಿಯನೇರಿ ಎರಡು ಪಾವಟಗಿ ಇಳಿದು ಕುಮಾರಿ ನಂದಾಳ ಮಂಗಳ ಎಂದೂ ಆಗದ ತರಗಳ ಕೇಳಲು ಬಂದುಬಿಟ್ಟಿತ್ತು ವಂದನಾರ್ಪಣೆ. ಬಂಧು ಬಳಗ ಆಪ್ತ ಮಿತ್ರ ಎಲ್ಲರಿಗೂ ಊಟದಾಗ ಊಟ ಸವಿನೆನಪಿನ ಮಾಟ ಹೆಂಗಸರು ಹೆಂಗಸರಿಗೆ, ಗಂಡಸರು ಗಂಡಸರಿಗೆ, ಮಕ್ಕಳು ಮಾತ್ರ ಎರಡೂ ಕಡೆಗೆ ಪಂಕ್ತಿಯಲ್ಲಿ ಸಂಗತಿ. ಒಂದೇ ಗತಿ ನೀತಿ, ಪ್ರೀತಿ.

ಅಂದೇ ಸಂಜೆ ೬ ಗಂಟೆಗೆ ಜಾನಪದ ಸಂಗೀತ ರತ್ನ ಹುಕ್ಕೇರಿ ಬಾಳಪ್ಪನವರ ನೇತೃತ್ವದಲ್ಲಿ ವಚನ ಸಂಗೀತೋತ್ಸವ ಜರುಗಿತು. ಕುಮಾರಿ ನಂದಾ ಪಾಟೀಲ, ಹುಬ್ಬಳ್ಳಿ ಮೂರುಸಾವಿರಮಠದ ಮಹಿಳಾ ಕಾಲೇಜಿನ ಶ್ರೀಮತಿ ಲತಾ ನಾಡಿಗೇರ, ಆಕಾಶವಾಣಿ ಕಲಾವಿದರಾದ ಸೂರಜ ಪುರಂದರೆ, ಕುಮಾರದಾಸ ಅವರಿಂದ ಸುಶ್ರಾವ್ಯ ವಚನ ಸಂಗೀತ ಕಾರ್ಯಕ್ರಮ ಜರುಗಿತು. ಹುಕ್ಕೇರಿ ಬಾಳಪ್ಪ ತಮ್ಮ ಸಂಗೀತ ಸುಧೆಯಿಂದ ಸಹೃದಯರ ಮನ ತಣಿಸಿದರು. ಸಂಗೀತೋತ್ಸವದಿಂದ ಜನಮನ ರಂಜಿಸಿದ ಸಂಗೀತಗಾರ್ತಿಯರಿಗೆ ಧಾರವಾಡದ ಶಾಸಕ ಚಂದ್ರಕಾಂತ ಬೆಲ್ಲದವರು ಅಮೃತಮಹೋತ್ಸವ ಸಮಿತಿ ಪರವಾಗಿ ಕಾಣಿಕೆಗಳನ್ನಿತ್ತು ಹರಸಿದರು. ಅಮೃತೋತ್ಸವ ಅಪೂರ್ವರೀತಿಯಿಂದ ಜರುಗಿತು.

ಹೀಗೆ ಅಭೂತಪೂರ್ವವಾದ ಗುರುಪುತ್ರಪ್ಪ ದೊಡವಾಡರ ಅಮೃತ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು. ವೈಶಿಷ್ಟ್ಯವೆಂದರೆ ಇಂಥ ಅಪೂರ್ವ ಕಾರ್ಯಕ್ರಮ ಹಮ್ಮಿಕೊಂಡಾಗ ಬಟನ್ ಒತ್ತಿದರೆ ಲಾಯಿಟ ಅನ್ನುವ ತೆರ ಯೋಜನೆ

ಮನ ಮೆಚ್ಚುವಂಥದಾಗಿತ್ತು. ಮನ ಇದ್ದಲ್ಲಿ ಜನ, ಗುಣ ಇದಲ್ಲಿ ಋಣ. ಜನ, ಮನ, ಗುಣ, ಋಣ, ಇದ್ದಲ್ಲಿ ಬರದೇ ಹಣ ? ಬಸವಣ್ಣನವರು ನಿನ್ನೆಯನ್ನು ನಾಳೆಯನ್ನು ಇಂದಿನ ದಿನಕ್ಕೆ ಜಗ್ಗಿ: ದಿವಸವನ್ನು ಎಪ್ಪತ್ತೆಂಟು ತಾಸಿನದಾಗಿ ಮಾಡಿದರಂತೆ. ೭ + ೨ = ೯ ಒಂಬತ್ತಕ್ಕೆ ಮುಗಿಯಿತು. ಹೀಗೆ ಮೂರು ಕಾರ್ಯಕ್ರಮ, ಮೂರು ದಿವಸ ಕ್ರಮ ೨೯-೧-೮೮ ರಂದು ಅಮೃತದಲ್ಲಿ ನಡೆದ ಸಾಕ್ಷಿಚಿತ್ರ. ನೋಡಿದವರ ನೆನಪಿನ ಪರದೆಯ ಮೇಲೆ ಹುಡದಿಯ ವರದಿ. ನೋಡದಿದ್ದವರಿಗೆ ಗರದಿ ಓದುವ ಸರದಿ.

ಸಾರೆ ಜಹಾಸೆ ಅಚ್ಛಾ ಹಿಂದೂಸತಾನ ಹಮಾರಾ
ಸಾರೆ ಹಿಂದುಸತಾಮೆ ಅಚ್ಛಾ ಕರ್ನಾಟಕ ಹಮಾರಾ
ಸಾರೆ ಕರ್ನಾಟಕಮೆ ಅಚ್ಛಾ ಧಾರವಾಡ ಹಮಾರಾ
ಸಾರೆ ಧಾರವಾಡಮೆ ಸಬ ಅಚ್ಛಾ ಹಮಾರಾ
ಅಚ್ಛೆಮೆ ಸಚ್ಚೆ ಗುರುಪುತ್ರಪ್ಪ ದೊಡವಾಡ ಹಮಾರಾ

ಮೈ ತುಮ್ಹಾರಾ
ರಾಮು ಜಾಧವ
ಪ್ರತ್ಯಕ್ಷದರ್ಶಿ

ಡಾ. ಆರ್. ಬಿ. ಪಾಟೀಲ ಅವರ ಸ್ವಾಗತ ಭಾಷಣ

ಪರಮಪೂಜ್ಯರಾದ ಮಹಾಸ್ವಾಮಿಗಳವರೆಲ್ಲರ ಶ್ರೀಪಾದಪದ್ಮಗಳಿಗೆ ಅಭಿವಂದಿಸಿ : ಗುರುಹಿರಿಯರೆ, ಮಹನೀಯರೆ, ಮಾತೆಯರೆ,

ಧಾರವಾಡ ಮಹಾನಗರದ ಗಣ್ಯ ನಾಗರಿಕರಲ್ಲೊಬ್ಬರಾದ ಶ್ರೀಮಾನ್ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅವರ ಅಮೃತಮಹೋತ್ಸವದ ಇಂದಿನ ಶುಭಸಂದರ್ಭದಲ್ಲಿ ತಮ್ಮೆಲ್ಲರಿಗೆ ಹೃತ್ಪೂರ್ವಕ ಸ್ವಾಗತ ಬಯಸುತ್ತೇನೆ.

ದೊಡವಾಡ ಅಣ್ಣನವರು ತಮ್ಮ ಸುಸಂಸ್ಕೃತ ನಡೆನುಡಿಯಿಂದ, ಗುರುಗಳಲ್ಲಿ, ಧರ್ಮದಲ್ಲಿ ಅಚಲವಾದ ಭಕ್ತಿಯಿಂದ, ನಿರಂತರ ಕಾಯಕನಿಷ್ಠೆಯಿಂದ, ಔದಾರ್ಯಾದಿ ಗುಣಗಳಿಂದ ಶ್ರೇಷ್ಠರೆನಿಸಿ, ಸಮಾಜಜೀವನದಲ್ಲಿ ಘನತೆಯನ್ನು ಪಡೆದ ಮಹನೀಯರಾಗಿದ್ದಾರೆ. ೧೯೧೨ ರಲ್ಲಿ ಕರೀಕಟ್ಟಿ ಗ್ರಾಮದಲ್ಲಿ ಜನಿಸಿದ ಇವರು ಇದೀಗ ಎಪ್ಪತ್ತೇಳನೆಯ ವರ್ಷದಲ್ಲಿ ಪದಾರ್ಪಣೆ ಮಾಡುತ್ತಿರುವರು. ಈ ಪರಮಮಂಗಲ ಸಮಯದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರದ ನಾಗರಿಕರ ಪರವಾಗಿ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಇದಲ್ಲದೆ ಶತಾಯುಷಿಗಳಾದ ಅವರ ತಾಯಿ ಮಾತೋಶ್ರೀ ಗಂಗಮ್ಮನವರ ತುಲಾಭಾರ ಕಾರ್ಯಕ್ರಮವನ್ನೂ ಇದೀಗ ತಾವು ವೀಕ್ಷಿಸಿರುವಿರಿ.

ಲೋಕದಲ್ಲಿ ಶ್ರೀಮಂತರು ಸಾಕಷ್ಟು ಜನರು. ಆದರೆ ಜೀವನದುದ್ದಕ್ಕೂ ಶುಚಿಯನ್ನು ಕಾಯ್ದುಕೊಂಡು ಭಗವತ್ ಕೃಪೆಯಿಂದ ಆರ್ಜಿಸಿದ ಧನವನ್ನು ಸಮಾಜದ ಅಭ್ಯುದಯಕ್ಕಾಗಿ ಉಪಯೋಗಿಸುತ್ತ ಬಂದವರು ಅಪರೂಪ. ಅಣ್ಣನವರು ಸರ್ವದಾ ಶುಭ್ರವಸ್ತ್ರಧಾರಿಗಳಾಗಿರುವಂತೆ, ಇನ್ನೂ ಹೆಚ್ಚಿನ ಪರಿಶುದ್ಧ ಮನಸ್ಸನ್ನು ಪಡೆದವರಾಗಿದ್ದಾರೆ. ಧಾರವಾಡದ ಅನೇಕ ಸಾರ್ವಜನಿಕ ಸಂಸ್ಥೆಗಳು ಅವರ ಔದಾರ್ಯವನ್ನು ಪಡೆದಿವೆ. ಇಂಥ ಮಹನೀಯರ ಅಮೃತೋತ್ಸವ ಸಮಾರಂಭದ ಆಚರಣೆ ಅತ್ಯಂತ ಔಚಿತ್ಯಪೂರ್ಣವೆನಿಸಿದೆ.

ದೊಡವಾಡ ಅಣ್ಣನವರ ಘನತೆವೆತ್ತ ಈ ವ್ಯಕ್ತಿತ್ವಕ್ಕೆ ಅದರ ಧಾರ್ಮಿಕ ಪ್ರವೃತ್ತಿಯೇ ತಳಹದಿಯಾಗಿದೆ. ಪರಮತಪಸ್ವಿಗಳಾದ ಲಿಂಗೈಕ್ಯ ಅಥಣಿಯ ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು ಅವರ ಆರಾಧ್ಯಮೂರ್ತಿಗಳು. ಲೋಕೋದ್ಧಾರಕರಾದ ಧಾರವಾಡದ ಮುರುಘಾಮಠದ ಲಿಂಗೈಕ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಕೃಪೆಗೆ ಪಾತ್ರರಾದರು. ಶ್ರೀ ನಿ. ಪ್ರ. ಮಹಾಂತಪ್ಪಗಳವರ ಕೃಪಾಛತ್ರದಲ್ಲಿ ನಿರಂತರ ಬೆಳೆಯುತ್ತಿರುವವರು. ಮಹಿಮಾನಿಧಿ ಕುಲದೈವ

ಮಹದೇಶ್ವರ ಚಿರರಕ್ಷೆಯನ್ನು ಪಡೆದವರು. ಇಂಥ ಭದ್ರವಾದ ಕೋಟೆಯ ಪರಿಧಿಯಲ್ಲಿ ಬೆಳಗಿದ ಅಣ್ಣನವರ ಮಧುರ ವ್ಯಕ್ತಿತ್ವವು ಅನವರತವೂ ಲೋಕಕಲ್ಯಾಣಕ್ಕಾಗಿಯೇ ಮೀಸಲಾಗಿದೆ ಎಂಬುದು ಹೆಮ್ಮೆ ಪಡತಕ್ಕ ಮಾತಾಗಿದೆ. ಅರ್ಧ ಶತಮಾನಕ್ಕಿಂತಲೂ ಹೆಚ್ಚುಕಾಲ ಅವರನ್ನು ಸಮೀಪದಿಂದ ಬಲ್ಲಂಥ ಜನರು ಇಲ್ಲಿರುವಾಗ ಅಮೃತಮಹೋತ್ಸವದ ಈ ವಿಜೃಂಭಣೆಯ ಆಚರಣೆ ಅತಿಶಯೋಕ್ತಿಯೆನಿಸದು.

ಈ ಅಮೃತಮಹೋತ್ಸವವನ್ನು ನಡೆಯಿಸಿಕೊಡಲು ನಮ್ಮ ಬಿನ್ನಹವನ್ನು ಮನ್ನಿಸಿ ಚಿತ್ರದುರ್ಗದ ಬೃಹನ್ಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು, ಡಂಬಳ ಗದಗ ತೋಂಟದಾರ್ಯ ಸಂಸ್ಥಾನ ಮಠಾಧ್ಯಕ್ಷರಾದ ಶ್ರೀ ಮನ್ನಿರಂಜನ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳವರು, ಧಾರವಾಡದ ಮುರುಘಾಮಠಾಧ್ಯಕ್ಷರಾದ ಶ್ರೀ ನಿ. ಪ್ರ. ಮಹಾಂತಪ್ಪಗಳವರು, ಮುರುಗೋಡದ ದುರದುಂಡೀಶ್ವರ ವಿರಕ್ತಮಠಾಧ್ಯಕ್ಷರಾದ ಶ್ರೀ ನಿ. ಪ್ರ. ನೀಲಕಂಠ ಮಹಾಸ್ವಾಮಿಗಳವರು ಕೃಪೆಯಿಟ್ಟು ಇಲ್ಲಿಗೆ ದಯಮಾಡಿಸಿದ್ದಾರೆ.

ರಾಷ್ಟ್ರದ ಪ್ರಮುಖ ನಾಯಕರಲ್ಲೊಬ್ಬರಾದ, ಹಿಂದಿನ ಉಪರಾಷ್ಟ್ರಪತಿಗಳೂ ಆದ ಶ್ರೀಮಾನ್ ಬಿ. ಡಿ. ಜತ್ತಿ ಅವರೂ, ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಡಿ. ಎಮ್. ಚಂದ್ರಶೇಖರ ಅವರೂ ದಯವಿಟ್ಟು ಇಲ್ಲಿಗೆ ಆಗಮಿಸಿದ್ದಾರೆ. ಅಲ್ಲದೇ ದೂರದೂರದಿಂದ ಗಣ್ಯಮಹನೀಯರನೇಕರು ಬಂದಿದ್ದಾರೆ. ಅವರೆಲ್ಲರಿಗೂ ಅಮೃತಮಹೋತ್ಸವ ಸಮಿತಿಯ ಪರವಾಗಿ ಗೌರವಪೂರ್ವಕ ಸ್ವಾಗತವನ್ನು ಕೋರುತ್ತೇನೆ.

ಇಲ್ಲಿ ನೆರೆದಿರುವ ನಾಗರಿಕ ಬಂಧುಗಳೆಲ್ಲರಿಗೂ ಮತ್ತೊಮ್ಮೆ ಆದರದ ಸ್ವಾಗತ ಬಯಸುವೆ: ಹಾಗೂ ಮುಂದಿನ ಕಾರ್ಯಕ್ರಮ ನಡೆಯಿಸಿಕೊಡಬೇಕೆಂದು ಸನ್ಮಾನ್ಯ ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವೆ.



ಪೂರ್ಣ ಕುಂಭ ಸ್ವಾಗತ



ಮೃತ್ಯುಂಜಯ ಮಾರ್ಕೇಟ ದಲಾಲಿ ವ್ಯಾಪಾರಸ್ಥರ ಸಂಘದ ಬೆಳ್ಳಿನಂದಿಮಂಟಪ ಕಾಣಿಕೆ ಕೊಡುತ್ತಿರುವ ಶ್ರೀ ಎಸ್. ಯನ್. ಸೀಮಿಕೆರಿಮಠ ಇವರೊಂದಿಗೆ



ಎಡದಿಂದ ಬಲಕ್ಕೆ : 1 ಸರಸ್ವಾನಂದ ದೊಡವಾಡ 2 ಡಾ. ಎಂ. ಚಂದ್ರಶೇಖರ 3 ಶಿವಯೋಗಿ ಮರಿದೇವರು ಮುರುಘಾಮಠ 4 [illegible] 5 ಮಹಾಂತಪ್ಪಗಳು ಮುರುಘಾಮಠ 6 ಜಗದ್ಗುರು ಮಲ್ಲಿಕಾರ್ಜುನ ಸ್ವಾಮಿಗಳು ಚಿತ್ರದುರ್ಗ 7 ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು. ತೋಂಟದಾರ್ಯಮಠ 8 ಪೂಜ್ಯ [illegible] ಮಹಾಸ್ವಾಮಿಗಳು ದುರುದುಂಡೇಶ್ವರಮಠ 9 ಮಾತೋಶ್ರೀ ಗಂಗಮ್ಮನವರು 10 ಶ್ರೀ ಗುರುಪುತ್ರಪ್ಪಾ ದೊಡವಾಡ 11 ಶ್ರೀ [illegible] ದೊಡವಾಡ



ಸಿದ್ಧಲಿಂಗ ಮಹಾಸ್ವಾಮಿಗಳು ದೀಪ ಬೆಳಗಿಸುತ್ತಿರುವದು. ಪದ್ಮಶ್ರೀ ಡಾ. ಆರ್. ಬಿ. ಪಾಟೀಲರೊಂದಿಗೆ.



ಮಾತೋಶ್ರೀ ಗಂಗಮ್ಮನವರ ತುಲಾ ಭಾರ



ಮಲ್ಲಿಕಾರ್ಜುನ ಮಹಾಸ್ವಾಮಿಗಳಿಂದ ಶಾಲು ಹೊದಿಸಿ ಸನ್ಮಾನ



ಮುಖ್ಯ ಅತಿಥಿ ಶ್ರೀ ಡಿ. ಎಂ. ಚಂದ್ರಶೇಖರರ ಭಾಷಣ



ಮಹೋತ್ಸವದಲ್ಲಿ ಪಾಲ್ಗೊಂಡ ಮಹಿಳೆಯರು



ಅಮೃತೋತ್ಸವ ಸಿಹಿಭೋಜನ ರುಚಿ



ಮಹೋತ್ಸವದಲ್ಲಿ ಪಾಲ್ಗೊಂಡ ಮಹನೀಯರು

॥ ಶ್ರೀ ಮಹದೇಶ್ವರ ಪ್ರಸನ್ನ ॥

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು

ಬೃಹನ್ಮಠ, ಚಿತ್ರದುರ್ಗ ಅವರ ದಿವ್ಯ ನೇತೃತ್ವದಲ್ಲಿ

ಶ್ರೀಮನ್ನಿರಂಜನ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ

ತ್ರಿವಿಧ ದಾಸೋಹಮೂರ್ತಿ

ಶ್ರೀ ನಿ. ಪ್ರ. ಮಹಾಂತಪ್ಪಗಳು, ಮುರುಘಾಮಠ, ಧಾರವಾಡ

ಶ್ರೀ ನಿ. ಪ್ರ. ನೀಲಕಂಠ ಮಹಾಸ್ವಾಮಿಗಳು ದುರದುಂಡೇಶ್ವರಮಠ, ಮುರಗೋಡ

ಅವರ ದಿವ್ಯ ಸನ್ನಿಧಿಯಲ್ಲಿ

ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ

ಅವರಿಗೆ ಅರ್ಪಿಸಿದ

ಸನ್ಮಾನ ಪತ್ರ

ಸತ್ಕುಲೋದ್ಭವರೆ,

ಕರ್ನಾಟಕದ ಸುಪ್ರಸಿದ್ಧ ದೈವೀಶಕ್ತಿಯ ಕೇಂದ್ರ ಬೆಳಗಾಂವಜಿಲ್ಲೆಯ ಸವದತ್ತಿ ತಾಲೂಕು. ಈ ದಿವ್ಯಶಕ್ತಿಯ ಕಣವನ್ನೊಳಗೊಂಡ ಕರೀಕಟ್ಟಿಗ್ರಾಮದ ದೊಡವಾಡ ಮನೆತನದ ಶ್ರೀ ಗುರುಪಾದಪ್ಪ ಹಾಗೂ ಶ್ರೀಮತಿ ಗಂಗಮ್ಮನವರು ದೈವೀಕಾರುಣ್ಯ ಸಂಜಾತರು. ಅಂಥ ದಂಪತಿಗಳ ಪವಿತ್ರಗರ್ಭದಲ್ಲಿ ದಿ. ೧೨-೧-೧೯೧೨ರಂದು ನೀವು ಜನ್ಮತಳೆದಿರಿ. ಆಗರ್ಭ ಶ್ರೀಮಂತಿಕೆ, ಸದಾಚಾರ, ಸದ್ಭಾವನೆಗೆ ಘನತೆವೆತ್ತ ಮನೆತನ ನಿಮ್ಮದು; ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಸವದತ್ತಿ, ಧಾರವಾಡಗಳಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದಿರಿ. ಆಗಲೇ ಧಾರವಾಡ ಮುರುಘಾಮಠದ ತ್ರಿವಿಧ ದಾಸೋಹಮೂರ್ತಿ ಪರಮಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳ ಕೃಪಾದೃಷ್ಟಿ ನಿಮ್ಮನ್ನು ಬರಸೆಳೆದಿತ್ತು. ಹೆಚ್ಚಿನ ಅಧ್ಯಯನದ ಹಂಬಲವಿದ್ದರೂ ಅಂಥ ಗುರುಗಳ ಪವಿತ್ರ ಸಾನಿಧ್ಯದಲ್ಲಿ ನಿಮ್ಮ ಬುದ್ಧಿಭಾವನೆಗಳ ಆವಿಷ್ಕಾರವಾಗಿ ವ್ಯಾಪಾರಿ ಬದುಕಿಗೆ ಸಮರ್ಪಣೆ ಮಾಡಿಕೊಂಡಿರಿ.

ಕಾಯಕಯೋಗಿಗಳೆ,

ದೈವದತ್ತವಾದ ಸಾಮರ್ಥ್ಯ, ಹೃದಯವಂತಿಕೆ, ಪ್ರಾಮಾಣಿಕತೆ, ಸರಳ ವ್ಯಕ್ತಿತ್ವದಿಂದ ವ್ಯಾಪಾರಿಕ್ಷೇತ್ರವನ್ನು ಬೇಗ ಕರಗತ ಮಾಡಿಕೊಂಡಿರಿ. ತಡಕೋಡದ

ಕಿರಾಣಿ ಅಂಗಡಿಯೊಂದಿಗೆ ನಿಮ್ಮ ವೃತ್ತಿ ೧೯೩೬ರಲ್ಲಿ ಪ್ರಾರಂಭವಾಯಿತು. ಕಾರ್ಯ ದಕ್ಷತೆ, ಶುದ್ಧ ಮಾಲಿನ ಪೂರೈಕೆ, ಗ್ರಾಹಕರ ಬಗೆಗಿನ ಕಳಕಳಿ, ಆತ್ಮೀಯತೆ, ವ್ಯಾಪಾರ ನೀತಿ ಕ್ಷಿಪ್ರಕಾಲದಲ್ಲಿ ನಿಮ್ಮ ಪ್ರಗತಿಯ ಸೂಚನೆಯೆನಿಸಿದವು. ಧಾರವಾಡದ ವ್ಯಾಪಾರಸ್ಥರೊಂದಿಗಿನ ನಿಕಟ ಸಂಪರ್ಕ, ಸುಲೇಮಾನಸೇಠರ ಸ್ವದೇಶ ಪ್ರಯಾಣದಿಂದ ಧಾರವಾಡದ ಮಧ್ಯವರ್ತಿ ಸ್ಥಳವೊಂದು ದೊರೆತು ನಿಮ್ಮ ವೃತ್ತಿಗೆ ಹೊಸ ತಿರುವು ನೀಡಿತು. ನಯವಿನಯ, ಸರಸಸಜ್ಜನಿಕೆಯಿಂದ ನಗರದ ಜನತೆಗೆ ಅಚ್ಚುಮೆಚ್ಚಿನ ವ್ಯಕ್ತಿಯಾದಿರಿ. ಗಣ್ಯವ್ಯಾಪಾರಿಗಳ ಸಾಲಿನಲ್ಲಿ ಶೋಭಿಸಿದಿರಿ. ಆದರೂ ನಿಮ್ಮ ನವೀನಕ್ಷೇತ್ರಗಳ ಅನ್ವೇಷಣೆಯ ಫಲವೆಂಬಂತೆ ದಲಾಲಿ ಅಂಗಡಿ, ಶ್ರೀ ಮೃತ್ಯುಂಜಯ ರಾಯಿಸ್‌ಮಿಲ್ ಹಾಗೂ ಶೇಂಗಾಬೀಜ ಸಂಸ್ಕರಿಸುವ ಉದ್ಯಮ ಕೇಂದ್ರಗಳು ತಲೆ ಎತ್ತಿವೆ. ಪರಿಶ್ರಮಕ್ಕೆ ಸೂಕ್ತಫಲವೆಂಬಂತೆ ದಲಾಲಿ ಅಂಗಡಿ ಮೃತ್ಯುಂಜಯ ಮಾರುಕಟ್ಟೆಯಲ್ಲಿ 'ಶಂಭುಲಿಂಗ ಕೃಪಾ'ಕ್ಕೆ ಸ್ಥಳಾಂತರಿಸಲ್ಪಟ್ಟಿದ್ದು, ರೈತ ಬಾಂಧವರಿಗೆ ಕಲ್ಪವೃಕ್ಷವೆನಿಸಿದೆ. ರೈತರ ಆತ್ಮಗೌರವಕ್ಕೆ ಧಕ್ಕೆ ಬರದಂತೆ, ಅವರು ತಂದ ಮಾಲಿಗೆ ತಕ್ಕ ಮೌಲ್ಯ ದೊರಕುವಂತೆ, ಅವರ ಧೈರ್ಯೋತ್ಸಾಹಗಳು ಹೆಚ್ಚುವಂತೆ ಅನುದಿನ ಪ್ರಯತ್ನ ಕೈಕೊಳ್ಳುತ್ತಿರುವಿರಿ.

ಸಮಾಜಸೇವಾತತ್ಪರರೆ,

ಹಣ ಗಳಿಸುವದೊಂದೇ ಬಾಳಿನ ಸೂತ್ರವಲ್ಲ: ಗಳಿಸಿದ ಹಣವನ್ನು ಸಮಾಜ ಸೇವೆಗೆ, ಸತ್ಪಾತ್ರಕ್ಕೆ ಬಳಸುವುದು ಜೀವನಧರ್ಮ, ಅದೇ ಶರಣಧರ್ಮ, ಅಂತೆಯೇ ಸಮಾಜಸೇವೆಗೆ ಕಂಕಣ ಕಟ್ಟಿರುವಿರಿ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಅವಿಶ್ರಾಂತ ಪರಿಶ್ರಮ ಪಡುತ್ತಿರುವಿರಿ. ಈ ಮಾತಿಗೆ ಸಾಕ್ಷಿ, ಸ್ನೇಹಿತರೊಂದಿಗೆ ನೀವು ಅಧ್ಯಕ್ಷನಭಾವಿಯಲ್ಲಿ ಪ್ರಾರಂಭಿಸಿದ ಶ್ರೀ ಉಳವಿ ಚನ್ನಬಸವೇಶ್ವರ ಜಿನ್ನಿಂಗ ಫ್ಯಾಕ್ಟರಿ. ನಗರದ ಪ್ರತಿಯೊಂದು ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅಗ್ರಸ್ಥಾನ ನಿಮ್ಮದು. ಧಾರವಾಡ-ಹುಬ್ಬಳ್ಳಿ ಅವಳಿ ನಗರಗಳ ಅನೇಕ ಸಂಘಸಂಸ್ಥೆಗಳು ನಿಮ್ಮ ಉದಾರ ಸಹಾಯ ಪಡೆದಿವೆ. ನಿಮ್ಮ ಸದಸ್ಯತ್ವ ಪಡೆದ ಸಂಘಸಂಸ್ಥೆಗಳು ಖ್ಯಾತಿ ಗಳಿಸಿವೆ. ಧಾರವಾಡದ ಶ್ರೀ ಮುರುಘಾಮಠದ ಪ್ರಸಾದನಿಲಯ, ಅಖಿಲ ಭಾರತ ಶಿವಾನುಭವ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ, ಧಾರವಾಡದ ಶ್ರೀ ಉಳವಿ ಚನ್ನಬಸವೇಶ್ವರ ಧರ್ಮಫಂಡ ಸಂಸ್ಥೆಯ ಉಪಾಧ್ಯಕ್ಷರಾಗಿ, ಧಾರವಾಡ ನಗರದ ವರ್ತಕ ಸಂಘ, ವಿಶ್ವ ಹಿಂದೂ ಪರಿಷತ್ತಿನ ಧಾರವಾಡ ಜಿಲ್ಲೆಯ ಅಧ್ಯಕ್ಷರಾಗಿ, ಭಾರತೀಯ ವಿದ್ಯಾಕೇಂದ್ರ, ಹುಬ್ಬಳ್ಳಿ-ಧಾರವಾಡ ಕೋ ಆಪರೇಟಿವ್ ಅರ್ಬನ್ ಬ್ಯಾಂಕಿನ ಚೇರಮನ್ನರಾಗಿ ವಿವಿಧ ರೂಪದಲ್ಲಿ ಸೇವೆ ಸಲ್ಲಿಸುತ್ತಿರುವಿರಿ. ಅನೇಕ ಸಂಘ ಸಂಸ್ಥೆಗಳ ಪ್ರಗತಿಸಾಧನೆಗೆ ಕಾರಣಕರ್ತರಾಗಿರುವಿರಿ. ಜೀವನದ ಉದಾತ್ತ ಧ್ಯೇಯ, ನಿಷ್ಕಲ್ಮಷ ಮನೋಭಾವ, ಸದಾಚಾರ ನಿಮ್ಮ ಅಗ್ಗಳಿಕೆಗೆ ಕಾರಣವೆನಿಸಿವೆ.

ಔದಾರ್ಯದ ಖಣಿಗಳೆ,

ಕಷ್ಟಗಳ ಕುಲುಮೆಯಲ್ಲಿ ಹಾಯ್ದುಬಂದ ನಿಮ್ಮ ಜೀವನ ಪುಟಕ್ಕಿಟ್ಟ ಚಿನ್ನ. 'ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು' ಎಂಬ ಕವಿವಾಣಿಯಂತೆ ಆಚಾರ ವಿಚಾರಗಳ ಸುಂದರ ಸಮನ್ವಯ ನಿಮ್ಮ ಬದುಕು, ಧರಿಸಿದ ಶುಭ್ರವಸ್ತ್ರದಷ್ಟೇ ಶುಭ್ರಮನಸ್ಸು. ಸಿರಿವಂತಿಕೆಯೊಂದಿಗೆ ಸೇರಿದ ವಿನಯವಂತಿಕೆ ಕಲ್ಲಿನಲ್ಲಿ ಕೆತ್ತಿದ ಶಿಲ್ಪಕಲೆಯ ಕುಸುರಿನಂತೆ ಆಪ್ಯಾಯಮಾನ. ಬಂದ ವ್ಯಕ್ತಿಗಳೊಡನೆ ನಡೆದು ಕೊಳ್ಳುವ ರೀತಿ, ಹೃದಯ ಮಾರ್ದವತೆ, ಬುದ್ಧಿವೈಶಾಲ್ಯತೆ ನಿಮ್ಮ ಬಳಗವನ್ನು ಹೆಚ್ಚಿಸಿವೆ. ನಿಮ್ಮ ಸಹವಾಸದಲ್ಲಿ ಸೌಜನ್ಯತೆ ಇದೆ, ಸತ್ಯವಿದೆ, ಧರ್ಮಬುದ್ಧಿ ಇದೆ. ಆದರ್ಶಜೀವನ ಪರಿಪಾಕ ನಿಮ್ಮದಾಗಿದೆ. ಅನೇಕ ಸಂಘಸಂಸ್ಥೆಗಳಿಗೆ ಕೈಮುಟ್ಟಿ ಧನಸಹಾಯ ಮಾಡಿದ ಪುಣ್ಯ ನಿಮ್ಮದು. ನಿಮ್ಮ ಧಾರ್ಮಿಕಪ್ರಜ್ಞೆ ನಿರಂತರ ಜಾಗೃತ. ಬದುಕನ್ನು ತಪಸ್ಸನ್ನಾಗಿ ತಿಳಿದು ಆಚರಿಸಿದವರು ನೀವು. ಸಾಹಿತಿಗಳೆಂದರೆ ನಿಮಗೆ ಪಂಚಪ್ರಾಣ. ಅವರೊಂದಿಗೆ ಗಹನ ವಿಷಯಗಳ ಸಮಾ ಲೋಚನೆಗೆ ನಿಮ್ಮದು ಅನುಪಮ ಆಸಕ್ತಿ. ನಿಮ್ಮ ಬಾಳಿನಲ್ಲಿ ನಯವಿದೆ. ಪಾಂಡಿ ತ್ಯದ ಗುರುತ್ವವಿದೆ. ಅಮೃತತ್ವದ ತೇಜಸ್ಸಿದೆ. ಬಾಳಿನ ಆಳವನ್ನರಿತ ಸಂತೃಪ್ತಿ ನಿಮಗಿದೆ.

ಅಮೃತಪುತ್ರರೆ,

ಕನ್ನಡನಾಡಿನ ಭಾಗ್ಯವೆಂಬಂತೆ ೭೭ ವಸಂತಗಳ ತುಂಬುಬದುಕಿನಲ್ಲಿ ಪಾದಾರ್ಪಣ ಮಾಡುತ್ತಿರುವಿರಿ. ಈ ಶುಭಸಂದರ್ಭದಲ್ಲಿ ಅಮೃತ ಮಹೋತ್ಸವ ಹಮ್ಮಿಕೊಂಡು ನಿಮ್ಮನ್ನು ಗೌರವಿಸುತ್ತಿರುವುದು ಸುಸಂಸ್ಕೃತ ಜನಾಂಗ ತನ್ನನ್ನೇ ತಾನು ಗೌರವಿಸಿ ಕೊಂಡಂತೆ. ಅಮೃತೋತ್ಸವದ ಅಭಿನಂದನಗ್ರಂಥ 'ಧರ್ಮದೀಪ್ತಿ' ನಿಮ್ಮ ಸಾಧನೆ ಸಿದ್ಧಿಗಳ ಕೈಗನ್ನಡಿ. ದೈವೀಪುತ್ರರಾದ ನೀವು ಇನ್ನೂ ಹೆಚ್ಚಿನ ಆಯುರಾರೋಗ್ಯ ಸೌಭಾಗ್ಯ ಪಡೆದು, ಸರ್ವರಿಗೆ ದಾರಿದೀಪವಾಗಿ ಅಮೃತಪುತ್ರ ಹೆಸರನ್ನು ಚಿರಸ್ಥಾಯಿ ಗೊಳಿಸಬೇಕೆಂದು ಹೃತ್ಪೂರ್ವಕವಾಗಿ ಕೋರುವ.

ಶ್ರೀ ಜಿ. ಜಿ. ದೊಡವಾಡ ಅಮೃತ ಮಹೋತ್ಸವ ಸಮಿತಿ
ಧಾರವಾಡ

೨೯-೧-೧೯೮೮

ಶ್ರೀ ಜಿ. ಜಿ. ದೊಡವಾಡ ಅಮೃತ ಮಹೋತ್ಸವ ಸಮಿತಿಯವರು ಸನ್ಮಾನಿಸಿದ್ದಕ್ಕಾಗಿ

ಕೃತಜ್ಞತೆ

ನನ್ನ ೭೫ನೆಯ ವರ್ಷದ ಸನ್ಮಾನ ಸಮಾರಂಭದ ನೇತೃತ್ವವಹಿಸಿದ ಶ್ರೀಮದ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಬೃಹನ್ಮಠ ಚಿತ್ರದುರ್ಗ ಅವರ ಪಾದಾರವಿಂದಗಳಿಗೆ ಹೊಡಮಟ್ಟಿ, ಕಾರ್ಯಕ್ರಮದ ಉದ್ಘಾಟನೆ ಮಾಡಿದ ಪರಮಪೂಜ್ಯ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ತೋಂಟದಾರ್ಯಮಠ ಗದಗ ಡಂಬಳ ಅವರಿಗೆ ನಮಸ್ಕರಿಸಿ, ಶ್ರೀ ಚನ್ನಬಸವಣ್ಣನವರ ವಚನಗಳು ಗ್ರಂಥ ಬಿಡುಗಡೆ ಮಾಡಲಿರುವ ಪರಮಪೂಜ್ಯ ಶ್ರೀ ನೀಲಕಂಠ ಮಹಾಸ್ವಾಮಿಗಳು, ಮುರದುಂಡೇಶ್ವರ ಮಠ, ಮುರಗೋಡ ಅವರಿಗೆ ಭಕ್ತಿ ನಮನಗಳನ್ನು ಸಲ್ಲಿಸಿ, ಪೂಜ್ಯ ಮಹಾಂತಪ್ಪಗಳವರಿಗೆ ಅಭಿವಂದಿಸಿ—

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಮಾಜಿ ಉಪರಾಷ್ಟ್ರಪತಿಗಳೂ ಬಸವ ತತ್ವಾಭಿಮಾನಿಗಳೂ ಆದ ಶ್ರೀ ಬಿ. ಡಿ. ಜತ್ತಿಯವರೆ, ಮುಖ್ಯ ಅತಿಥಿಗಳಾಗಿ ಆಗಮಿಸಿ ಧರ್ಮದೀಪ್ತಿ ಅಭಿನಂದನ ಗ್ರಂಥದ ಬಿಡುಗಡೆ ಗೈಯಲಿರುವ ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರೂ, ಶರಣಪ್ರೇಮಿಗಳೂ ಆದ ಶ್ರೀ ಡಿ. ಎಮ್. ಚಂದ್ರಶೇಖರ ಅವರೆ,

ದೇಶದ ನಾನಾ ಭಾಗಗಳಿಂದ ಈ ಮಹೋತ್ಸವಕ್ಕೆ ಆಗಮಿಸಿದ ವರ್ತಕ ಬಾಂಧವರೆ, ಸನ್ಮಾನ ಸಮಿತಿಯ ಅಧ್ಯಕ್ಷರೆ, ಡಾ. ಆರ್. ಸಿ. ಪಾಟೀಲ ಅವರೆ, ಬಂಧುಬಾಂಧವರೆ, ತಾಯಂದಿರೆ. ಎಲ್ಲರಿಗೂ ನಮಸ್ಕಾರಗಳು.

'ಬಯಸಿ ಬಂದುದು ಅಂಗಭೋಗ. ಬಯಸದೆ ಬಂದುದು ಲಿಂಗಭೋಗ.' ಬಸವಾದಿ ಶಿವಶರಣರ ಲಿಂಗನುಡಿಯನ್ನು ನಂಬಿ ನಡೆದವ ನಾನು. ನನ್ನ ಮೇಲೆ ಪ್ರೀತಿ, ವಾತ್ಸಲ್ಯ, ಗೌರವ. ಅಭಿಮಾನಗಳ ಅಮೃತ ವರ್ಷವನ್ನೇ ಕರೆದಿರುವಿರಿ. ಈ ನಿಮ್ಮ ಗೌರವದ ಭಾವನೆಗೆ ನಾನು ಚಿರಋಣಿಯಾಗಿದ್ದೇನೆ. ಅದಕ್ಕೆ ಪ್ರತಿಯಾಗಿ ನಾನು ತಮ್ಮಲ್ಲಿ ನಿವೇದಿಸಿಕೊಳ್ಳುವದಿಷ್ಟೇ, ನನ್ನ ಪಾಲಿನ ಕಾಯಕವನ್ನು ಪೂಜೆ ಎಂದು ತಿಳಿದು ನಿಷ್ಠೆಯಿಂದ ನಿರ್ವಹಿಸಿಕೊಂಡು ಬಂದಿದ್ದೇನೆ. ಅದನ್ನೇ ತಾವೆಲ್ಲ ತುಂಬ ದೊಡ್ಡದೆಂದು ಭಾವಿಸಿ ನನ್ನ ಮೇಲೆ ಪ್ರೇಮದ ಹೊರೆಯನ್ನೇ ಇಟ್ಟಿರುವಿರಿ. ಅದೂ ಸಾಲದೆ ಈ ಅದ್ದೂರಿಯ ಮಹೋತ್ಸವ ಏರ್ಪಡಿಸಿ ಸಾರ್ವಜನಿಕವಾಗಿ ಸನ್ಮಾನಿಸಿದ್ದೀರಿ. ಇದು ನಾನು ನಂಬಿದ ಆ ದೈವಸನ್ನಿಧಾನಕ್ಕೆ ಸಂದ ಪೂಜೆ ಎಂದು ಭಾವಿಸಿದ್ದೇನೆ. ನನ್ನ ಜೀವನದುದ್ದಕ್ಕೂ ಎಲ್ಲ ಶ್ರೀಗಳ, ಗುರುಹಿರಿಯರ, ಹಿತೈಷಿಗಳ

ಹಾಗೂ ನನ್ನ ಪೂಜ್ಯ ತಂದೆಯವರಾದ ಲಿಂಗೈಕ್ಯ ಗುರುಪಾದಪ್ಪ – ತಾಯಿ ಗಂಗವ್ವ ನವರ ಅಮೂಲ್ಯ ಹಿತನುಡಿ ಹಾಗೂ ಅವರ ಶರಣಜೀವನ ಪ್ರಭಾವ ಬೀರಿವೆ; ಸತ್ಯ ನಿಷ್ಠೆಗಳಿಂದ ಜೀವನ ನಡೆಸಲು, ಸನ್ಮಾರ್ಗದಲ್ಲಿ ಸಾಗಲು ಪ್ರೇರಣೆ ನೀಡಿವೆ ಎಂದು ಪ್ರಾಂಜಲ ಮನಸ್ಸಿನಿಂದ ಪ್ರಕಟಪಡಿಸುತ್ತೇನೆ.

ಮುರುಘಾಮಠದ ಪುನೀತ ಪರಿಸರ, ಪರಮಪೂಜ್ಯ ಮಹಾಂತಪ್ಪಗಳವರ ಅಂತಃಕರಣದ ಕರುಣೆ ಮಠದ ವಿದ್ಯಾರ್ಥಿಯೊಬ್ಬ ಸಮಾಜದಲ್ಲಿ ಗಣ್ಯಸ್ಥಾನ ಸಂಪಾದಿಸಿದ ಎಂಬ ಅಭಿಮಾನ ಈ ಉತ್ಸವಕ್ಕೆ ಕಾರಣವೆನಿಸಿದೆ. ವ್ಯಾಪಾರಸ್ಥರು ನನ್ನೊಂದಿಗಿರಿಸಿದ ಆತ್ಮೀಯತೆ ಸೌಜನ್ಯಗಳೇ ಇಂದು ಈ ಉತ್ಸವ ಹಮ್ಮಿಕೊಂಡಿವೆ. ನಮ್ಮ ತಂದೆಯವರು ಹಾಕಿಕೊಟ್ಟ ನಿಯಮಬದ್ಧ ಜೀವನ, ಶಿಷ್ಟತರದ ಬದುಕು, ಉದ್ಯೋಗಶೀಲತೆಯನ್ನು ನನ್ನ ಜೀವ ಜೀವಾಳವನ್ನಾಗಿಸಿಕೊಂಡಿದ್ದೇನೆ. ಸುಖ ದುಃಖಗಳ ಪ್ರವಾಹದಲ್ಲಿ ಸಮನಾಗಿ ಈಜಿ ದಡ ಸೇರುವ ದೃಢತೆ ಪಡೆದಿದ್ದೇನೆ. ಸೂರ್ಯನಿಗೆ ಎದುರು ಬಂದ ಮೋಡ ಕ್ಷಣಕಾಲದಲ್ಲಿ ಹಿಂದೆ ಸರಿಯುವಂತೆ ಯಾವುದೇ ತೊಂದರೆ ಬಂದರೂ ಸ್ವಾಮಿಭಕ್ತಿಯನ್ನು ನಂಬಿ ಎದುರಿಸುತ್ತಿದ್ದೇನೆ. ತಂದೆಯವರ ಆಧ್ಯಾತ್ಮಿಕ ಪ್ರವೃತ್ತಿ ನನ್ನನ್ನು ಇಂದು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ವ್ಯಾಪಾರ ದಲ್ಲಿ ಎಂಥ ಬಿಗುವಿನ ಪ್ರಸಂಗ ಬಂದರೂ ತಂದೆಯವರು ಮಕ್ಕಳ ಮನ ನೋಯಿಸಿ ದವರಲ್ಲ. ಚಿಕ್ಕವನಿದ್ದಾಗ ನಮ್ಮಣ್ಣ ಒಮ್ಮೆ ೫೦ ರೂ. ಕಳೆದುಕೊಂಡು ತುಂಬ ಮಾನಸಿಕ ವೇದನೆಗೊಳಗಾಗಿದ್ದ. ತಂದೆಯವರು ಸಿಟ್ಟಿಗೇಳುವರೆಂಬ ಭಯ, ಹಣ ಕಳೆದುಕೊಂಡ ನೋವು ಎರಡೂ ಅವನನ್ನು ತುಂಬ ಘಾಸಿಗೊಳಿಸಿದ್ದವು. ಅವನ ಸ್ಥಿತಿಯನ್ನು ಕಂಡ ನಮ್ಮ ತಂದೆ ನಕ್ಕು ಇದೇನು ಲುಕ್ಸಾನ ಅಲ್ಲಪಾ, ಲಾಭ, ದೊಡ್ಡ ಲಾಭ ಎಂದಾಗ ಕಳೆದುಕೊಂಡು ಕಂಗಾಲಾಗಿದ್ದ ನಮ್ಮಣ್ಣನ ಸ್ಥಿತಿ ಹೇಗಾಗಿರಬೇಡ. 'ಕೇಳಪಾ ಇಲ್ಲಿ. ಇದೊಂದು ಬಾರಿ ನಿನ್ನ ಜೀವನದಲ್ಲಿ ಬಿದ್ದ ಹೊಡೆತ ಜನ್ಮ ಜನ್ಮಾಂತರದವರೆಗೂ ಏನನ್ನೂ ಕಳೆದುಕೊಳ್ಳದಂತಹ ಮಾನಸಿಕ ಸ್ಥೈರ್ಯ ಕೊಟ್ಟಿದೆ ಯೆಂದರೆ ಇದಕ್ಕಿಂತ ಹೆಚ್ಚಿನ ಲಾಭ ಬೇಕೇ' ಎಂದರು. ಇದನ್ನು ಗಮನಿಸಿದರೆ ತಂದೆಯವರ ಗರಡಿಯ ಬಗೆಗೆ ಸ್ಪಷ್ಟ ತಿಳುವಳಿಕೆ ಬರುತ್ತದೆ. ಇದು ಅವರು ನನಗೆ ಹಾಕಿಕೊಟ್ಟ ಜೀವನಪಾಠ.

ಇಂದು ನಿಮ್ಮೆಲ್ಲರ ಸಹಾಯ ಸಹಕಾರದಿಂದ ನಮ್ಮ ವ್ಯಾಪಾರ ಪ್ರಗತಿಪಥ ದಲ್ಲಿದೆ. ದಿನದಿನಕ್ಕೂ ಬೆಳೆಯುತ್ತ ಬಂದ ಉದ್ದಿಮೆ ಇಂದು ನಾಲ್ಕು ಭಾಗವಾಗಿ ಐದು ಜನ ಮಕ್ಕಳಲ್ಲಿ ನಾಲ್ವರು ಅದರ ಜವಾಬ್ದಾರಿ ಹೊತ್ತು - ಸುಸೂತ್ರವಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಸಣ್ಣಪ್ರಮಾಣದಲ್ಲಿ ಪ್ರಾರಂಭಿಸಿದ ವ್ಯಾಪಾರ ಇಂದು ಉನ್ನತ ಮಟ್ಟಕ್ಕೇರಿ ಸಮಾಜದಲ್ಲಿ ಇದೊಂದು ಮಾದರಿ ಎನಿಸಿದೆ. ಅದಕ್ಕೆ ನಿಮ್ಮೆಲ್ಲರ ಉದಾರಹೃದಯ, ಸದ್ಭಾವನೆ ಕಾರಣ ಎಂಬುದು ನನ್ನ ಪ್ರಾಮಾಣಿಕ

ಆಸಕ್ತಿ. ಈ ದಿಸೆಯಲ್ಲಿ ಸ್ಥಳೀಯ ಹಾಗೂ ಪರಸ್ಥಳದ ವ್ಯಾಪಾರಸ್ಥರು, ಅವರ ಸಿಬ್ಬಂದಿಯವರು ಸಹಕರಿಸಿ ನನ್ನ ಜೀವನದ ಪಥಕ್ಕೆ ಬೆಳಕು ನೀಡಿದ್ದಾರೆ. ಇದಲ್ಲದೆ ನಮ್ಮ ಸಂಸ್ಥೆಗಳಲ್ಲಿ ನಿಸ್ವಾರ್ಥರಾಗಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರು ಹಮಾಲವರ್ಗದವರು, ಉದ್ದಿಮೆ ಯಶಸ್ವಿಯಾಗುವುದಕ್ಕೆ, ಅದರ ಸರ್ವತೋಮುಖ ಅಭಿವೃದ್ಧಿಗೆ ಕಾರಣರೆನಿಸಿದ್ದಾರೆ.

ಈಗಾಗಲೇ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಿಗೆ, ನನ್ನ ಕೈಲಾದ ಕರುಸಹಾಯ ಸಲ್ಲಿಸಿದ್ದೇನೆ. ಇನ್ನು ಮುಂದಾದರೂ ಹೆಚ್ಚಿನ ರೀತಿಯಲ್ಲಿ ಈ ಸೇವೆಯನ್ನು ಸಾಧಿಸಿಕೊಂಡು ಹೋಗುತ್ತೇನೆ.

ನನ್ನ ಮಾತೋಶ್ರೀಯವರಿಗೆ ೧೦೫ ವರ್ಷಗಳು, ನನಗೆ ೭೭ ವರ್ಷಗಳ ಪದಾರ್ಪಣೆಯ ಈ ಶುಭ ಸಂದರ್ಭದಲ್ಲಿ ನನ್ನ ತಾಯಿಯವರ ತುಲಾಭಾರ, ನನಗೆ ಸನ್ಮಾನ ಸಮಾರಂಭ ಏರ್ಪಡಿಸಿ, ನನಗೆ, ನನ್ನ ಪರಿವಾರದವರಿಗೆ ಗೌರವಾದರಗಳನ್ನು ನೀಡಿರುವಿರಿ.

ಈ ಮಹೋತ್ಸವಕ್ಕೆ ದಯಮಾಡಿ ಆಗಮಿಸಿ ನನ್ನ ಕುಟುಂಬದ ಸರ್ವರಿಗೂ ಶುಭಾಶೀರ್ವಾದ ದಯಪಾಲಿಸಿದ ಪೂಜ್ಯ ಜಗದ್ಗುರುಗಳಿಗೂ, ಮಹಾಂತಪ್ಪಗಳವರಿಗೂ, ಮುರಗೋಡದ ಶ್ರೀಗಳವರಿಗೂ, ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಿರುವ ಶ್ರೀ ಡಿ. ಎಮ್. ಚಂದ್ರಶೇಖರ ಅವರಿಗೂ, ಸಮಾರಂಭದ ಅಧ್ಯಕ್ಷತೆ ವಹಿಸಿರುವ ಮಾಜಿ ಉಪರಾಷ್ಟ್ರಪತಿ ಶ್ರೀ ಬಿ. ಡಿ. ಜತ್ತಿಯವರಿಗೂ, ಡಾ. ಆರ್.ಬಿ. ಪಾಟೀಲರಿಗೂ, ಸಮಸ್ತ ಬಾಂಧವರಿಗೂ, ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಅಮೃತೋತ್ಸವ ಸಮಿತಿಯ ಅಧ್ಯಕ್ಷರಿಗೂ ವರ್ತಕ ಸಂಘದ ಸರ್ವಸದಸ್ಯರಿಗೂ, ನನ್ನ ವೃತ್ತಿಬಾಂಧವರಿಗೂ, ಹಿತೈಷಿಗಳಿಗೂ, ನಮ್ಮ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೂ ಚಿರಋಣಿಯರಾಗಿದ್ದೇನೆ.

ನಮ್ಮ ಮನೆತನಕ್ಕೆ ಇಲ್ಲಿಯವರೆಗೆ ತಾವು ನೀಡಿದ ಪ್ರೀತಿ ವಾತ್ಸಲ್ಯಗಳು ಮುಂದೆಯೂ ಹೀಗೆಯೇ ನಡೆಯಬೇಕೆಂದು ಆಶಿಸಿ, ತಮ್ಮೆಲ್ಲರಿಗೂ ಮತ್ತೊಮ್ಮೆ ಶಿರಬಾಗಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಮಸ್ಕಾರಗಳು.

ತಮ್ಮ

ಗುರುಪುತ್ರಪ್ಪ ದೊಡವಾಡ

ಅಮೃತಮಹೋತ್ಸವದ ಮುಖ್ಯ ಅತಿಥಿ
ಶ್ರೀ ಡಿ. ಎಂ. ಚಂದ್ರಶೇಖರ

ಅವರ ಭಾಷಣ

ವೇದಿಕೆಯ ಮೇಲೆ ಉಪಸ್ಥಿತರಿರುವ ಗುರುವರ್ಯರೆ, ಸ್ವಾಗತ ಸಮಿತಿಯ ಅಧ್ಯಕ್ಷರೆ, ಶ್ರೀಮಾನ್ ದೊಡವಾಡ ಅವರೆ, ಸಮಸ್ತ ಮಹಾಜನಗಳೆ, ಇಂದು ಸನ್ಮಾನಿತ ಗುರುಪುತ್ರಪ್ಪನವರ ಅಮೃತಮಹೋತ್ಸವದ ಸವಿನೆನಪಿಗಾಗಿ ಧರ್ಮ ದೀಪ್ತಿ ಅಭಿನಂದನ ಗ್ರಂಥವನ್ನು ಬಿಡುಗಡೆ ಮಾಡುತ್ತಿದ್ದೇನೆ. ಆದರೆ ಗುರುಪುತ್ರಪ್ಪ ನವರ ಬಗೆಗೆ ನಾನು ಕೆಲವು ಮಾತುಗಳನ್ನು ಹೇಳುತ್ತೇನೆ. ನನಗೆ ಅವರ ಪರಿಚಯು ಆದದ್ದು ಕೇವಲ ಮೂರು ಮೂರುವರೆ ವರ್ಷಗಳ ಹಿಂದೆ. ಆದರೂ ಕೂಡ ಇಷ್ಟು ಅಲ್ಪ ವೇಳೆಯಲ್ಲಿ ಅವರು ಎಂಥ ದೊಡ್ಡ ಮನುಷ್ಯರು ಎಂಬುದು ಗೊತ್ತಾಯಿತು. ಯಾವ ಕಾರ್ಯವನ್ನೇ ಹಿಡಿಯಲಿ ಅದರಲ್ಲಿ ತುಂಬ ಶ್ರದ್ಧೆಯುಳ್ಳವರು, ಯಾವುದೇ ಒಳ್ಳೆಯ ಕೆಲಸ ಇರಲಿ, ಮುಕ್ತಹಸ್ತದಿಂದ ಸಹಾಯಮಾಡುತ್ತಾರೆ. ಅವರು ಒಬ್ಬ ಸಣ್ಣ ವ್ಯಾಪಾರಸ್ಥರಾಗಿ ಪ್ರಾರಂಭಮಾಡಿ ತಮ್ಮ ವ್ಯವಹಾರ ಕುಶಲತೆಯಿಂದ, ಧೈರ್ಯ ದಿಂದ ಮತ್ತು ಸಾಧನೆಯಿಂದ ಒಬ್ಬ ದೊಡ್ಡ ವರ್ತಕರಾಗಿದ್ದಾರೆ. ನಮ್ಮ ದೇಶದಲ್ಲಿ ದೊಡ್ಡ ವರ್ತಕರ ಸಂಖ್ಯೆಗೇನೂ ಕಡಿಮೆ ಇಲ್ಲ. ಈಗಲಂತೂ ಲಕ್ಷಾಂತರ ಜನ ದೊಡ್ಡ ವರ್ತಕರಿದ್ದಾರೆ. ಶ್ರೀ ದೊಡವಾಡರಿಗಿಂತ ಶ್ರೀಮಂತರೂ ಕೂಡ ಇದ್ದಾರೆ. ದೊಡವಾಡರಂತಹ ಉದಾರಬುದ್ಧಿಯವರು, ಬಹಳ ಕಡಿಮೆ ಎಂದೇ ಹೇಳಬೇಕು. ಈಗಿನ ಕಾಲದಲ್ಲಿ ಉದಾರವಾಗಿ ಕೊಡುವ ಮಹನೀಯರೇ ಕಡಿಮೆ ಆಗಿದ್ದಾರೆ. ನಮ್ಮ ದೇಶದಲ್ಲಿ ಹಿಂದೆ ಎಂಥೆಂಥವರಿದ್ದರು. ಶಿರಸಂಗಿ ದೇಸಾಯರಿದ್ದರು, ರಾಜಾ ಲಕಮನಗೌಡರಿದ್ದರು, ಬೆಂಗಳೂರಿನಲ್ಲಿ ಗುಬ್ಬಿ ತೋಟದಪ್ಪನವರು, ಕಂಬಿ ಸಿದ್ದರಾಮಣ್ಣ ನವರು ಇಂಜನಿಯರಿಂಗ ಕಾಲೇಜಿಗೆ ಸಹಾಯ ಮಾಡಿದ ಬಸಪ್ಪ ಭೂಮರೆಡ್ಡಿಯವರು. ಇಂದು ಅಂಥವರನ್ನು ಹುಡುಕುವುದೇ ಕಷ್ಟ. ಜನಗಳ ಮನೋಭಾವ ಬದಲಾವಣೆ ಆಗಿದೆ. ಎಷ್ಟೇ ಹಣ ಇರಲಿ, ನಾನು ಅದ್ದೂರಿಯಿಂದ ಬಾಳಬೇಕು, ನನಗೆ ಪರ ದೇಶದ ಕಾರು ಖರೀದಿ ಮಾಡಲು ೭-೮ ಲಕ್ಷ ರೂಪಾಯಿ ಬೇಕು; ನಾನು ನನ್ನ ಹೆಂಡತಿ ಮಕ್ಕಳೆಲ್ಲ ಕೂಡಿ ಅಮೇರಿಕೆಗೆ ಹೋಗಿ ಬರಲು ೮ ಲಕ್ಷ ಬೇಕು; ಜಪಾನ, ಸಿಂಗಪುರಕ್ಕೆಲ್ಲ ಹೋಗಿ ಬರಲು ಇನ್ನೊಂದು ೧೦ ಲಕ್ಷ ರೂ. ಬೇಕು. ಯುರೋಪಿ ಯನ್ ಟೂರ ಹೋಗಿ ಬರಲು ಇನ್ನೊಂದು ೮ ಲಕ್ಷ ರೂ. ಬೇಕು. ನನಗೆ ಸಾಲೋ

ದಿಲ್ಲ ಎಂಬ ಭಾವ ಜನಗಳಲ್ಲಿ ಬರುತ್ತಿದೆ. ಆದರೆ ಸರಳತೆಯಿಂದ ಯಾವ ಆಡಂಬರಕ್ಕೆ ಹೋಗದೆ, ಗಳಿಸಿದ ಹಣ ಉಳಿಸಿ ಧರ್ಮಕಾರ್ಯಕ್ಕೆ ಕೊಡುವುದು ಬಹಳ ದೊಡ್ಡ ಪ್ರವೃತ್ತಿ. ಶ್ರೀಮಾನ್ ದೊಡವಾಡರಲ್ಲಿ ಈ ಗುಣ ಬಹಳ ದೊಡ್ಡದಾಗಿದೆ.

ಇನ್ನೊಂದು ಮಾತು ಹೇಳುವದೆಂದರೆ ಇಂದು ತಮ್ಮ ತಮ್ಮ ಕೆಲಸ ಮುಗಿಸಿಕೊಳ್ಳುವವರಲ್ಲಿಯೇ ತಮ್ಮ ಕಾಲ ಮುಗಿಸಿಕೊಳ್ಳುತ್ತಾರೆ. ಸಾರ್ವಜನಿಕ ಕೆಲಸಕ್ಕೆ ಯಾರೂ ಕೂಡ ಮುಂದೆ ಬರಲಿಕ್ಕೆ ತಯಾರಾಗಿಲ್ಲ. ನಮ್ಮ ಬಿಜಿನೆಸ್‌ಗೆ ಟೈಮಿಲ್ಲ. ಡಾಕ್ಟರ ಕಡೆ ಹೋಗಲು ಟೈಮಿಲ್ಲ, ನಾವೆಲ್ಲಿ ಕೆಲಸ ಮಾಡೋಣ ಎಂದು ಹೇಳುತ್ತಾರೆ. ಹಿಂದೆ ಅನೇಕ ಮಹನೀಯರು ಉದಾರವಾಗಿ ಕೊಟ್ಟ ಸಂಸ್ಥೆಗಳಿಂದು ನಶಿಸಿ ಹೋಗುತ್ತಿವೆ. ಯಾಕಂದರೆ ಇಂದು ಅವುಗಳನ್ನು ನೋಡಿಕೊಳ್ಳುವ ಟ್ರಸ್ಟಿಗಳಿಲ್ಲ. ಇದ್ದರೂ ಅವು ಕೂಡುವದಿಲ್ಲ. ಕೆಲಸ ಮಾಡುವದಿಲ್ಲ. ಲೆಕ್ಕನೂ ಆಗಿರುವದಿಲ್ಲ, ಆಡಿಟ್ಟು ಆಗುವದಿಲ್ಲ. ಸಭೆನೂ ಸೇರುವದಿಲ್ಲ. ಯಾರಾದರೂ ಒಬ್ಬರು ಸೇರಿಕೊಂಡು ಹಣಾನ ತಿಂತಿದ್ದರೆ ಅದನ್ನು ಕೇಳುವವರೂ ಯಾರಿಲ್ಲ. ಯಾರು ತಿಂದರೂ ತಿಂದುಕೊಂಡು ಹೋಗಲಿ, ನಾನ್ಯಾಕೆ ಅದಕ್ಕೆ ಅಡ್ಡಿ ಬರಲಿ. ನನ್ನ ಮೇಲೆ ಯಾಕೆ ಅಪವಾದ ಬರಬೇಕು ಎಂದು ಹಾಗೇ ಬಿಟ್ಟುಬಿಡುತ್ತಾರೆ. ಇದರಿಂದ ನಮ್ಮ ದೇಶದಲ್ಲಿ ಸಂಘ ಸಂಸ್ಥೆಗಳು ಸರಿಯಾಗಿ ಬೆಳೀತಾ ಇಲ್ಲ. ಕೊಟ್ಟಂತಹ ಮಹನೀಯರ ದಾನ ಕೂಡ ಇಂದು ಸರಿಯಾಗಿ ನಡೀತಾ ಇಲ್ಲ. ಆದರೆ ಶ್ರೀಮಾನ ದೊಡವಾಡ ಅವರು ೧೦-೧೨ ಸಂಸ್ಥೆಗಳಲ್ಲಿ ಭಾಗವಹಿಸಿದ್ದಾರೆ. ಹಣ ಕೊಡುವದಷ್ಟೇ ಅಲ್ಲ, ಆ ಸಂಸ್ಥೆ ಸರಿಯಾಗಿ ಕೆಲಸ ಮಾಡಲು ಶ್ರದ್ಧೆವಹಿಸುತ್ತಿದ್ದಾರೆ. ಇದು ಬಹಳ ಸಂತೋಷ. ನಮ್ಮಲ್ಲಿ ಒಂದು ತತ್ವ, ಕಾಯಕ ದಾಸೋಹ ತತ್ವ ನಿಜವಾಗಿ ಅನುಸರಿಸುತ್ತಿದ್ದವರು ವೀರಶೈವ ಸಮಾಜದವರಲ್ಲ. ಕ್ರಿಶ್ಚಿಯನ್ ಮತ್ತು ಮುಸ್ಲಿಮ ಸಮಾಜದವರು ಬಹಳ ಚೆನ್ನಾಗಿ ಆಚರಿಸುತ್ತಾರೆ. ಯಾಕೆಂದರೆ ಪ್ರತಿಯೊಬ್ಬ ಕ್ರಿಶ್ಚಿಯನ್ ಕೂಡ ತನ್ನ ಮರಣಶಾಸನ (ವಿಲ್) ದಲ್ಲಿ ೧೦% ರಷ್ಟು ಚರ್ಚಿಗೋ ಧರ್ಮ ಸಂಸ್ಥೆಗೋ ಬಿಟ್ಟು ಹೋಗುತ್ತಾನೆ. ಅಥವಾ ಒಬ್ಬ ಮಹಮ್ಮದೀಯ ವರ್ಷದಲ್ಲಿ ಒಂದು ಸರತಿ ಆಸ್ತೀನ ಲೆಕ್ಕ ತೆಗೆದು ಜಕಾತ ಎಂದು ಹೇಳಿ ೨½ ಭಾಗವನ್ನು ಧರ್ಮ ಸಮಾಜಕ್ಕೆ ಹಂಚುತ್ತಾನೆ. ತಮ್ಮಲ್ಲಿ ಇರುವಷ್ಟು ಹಣವನ್ನು ತಮ್ಮಷ್ಟು ಶ್ರೀಮಂತರಲ್ಲದವರಿಗೆ, ಬಡವರಿಗೆ, ಧರ್ಮಕೊಡುತ್ತಾರೆ. ಈ ಪ್ರವೃತ್ತಿ ನಮ್ಮಲ್ಲಿ ವಿಷ್ಟು ಜನರಿಗಿದೆ. ಮತ್ತು ಹೀಗಾದರೆ ಯಾವ ಸಂಘ ಸಂಸ್ಥೆಗಳೂ ಬೆಳೆಯಲು ಅವಕಾಶ ಇಲ್ಲ. ಯಾವದೇ ಸಂಘ ಸಂಸ್ಥೆಗಳು ಬೆಳೆಯಲು ಎರಡು ಬೇಕು : ಶ್ರದ್ಧಾವಂತರಾದ, ನಿಷ್ಠಾವಂತರಾದ ಕಾರ್ಯಕರ್ತರು, ಇಂಥವರ ಕೊರತೆಯಿಂದ ನಮ್ಮ ದೇಶದಲ್ಲಿ ಯಾವ ಸಂಘಸಂಸ್ಥೆಗಳೂ ಬೆಳೆಯುತ್ತಿಲ್ಲ. ಕ್ರಿಶ್ಚಿಯನ್‌ರು ಎಂಥೆಂಥ ಸಂಸ್ಥೆ ಕಟ್ಟಿದ್ದಾರೆ, ಆಸ್ಪತ್ರೆ ಕಟ್ಟಿದ್ದಾರೆ, ವಿದ್ಯಾಸಂಸ್ಥೆ ಕಟ್ಟಿದ್ದಾರೆ. ಯಾವ ದೇಶದಿಂದ ಈ

ಹಣ ಬರುತ್ತೆ, ಬೆಂಗಳೂರಿನ ಸೇಂಟ ಜಾನ್ಸ ಹಾಸ್ಪಿಟಲ್‌ಗೆ ಇಂಗ್ಲಂಡಿನಿಂದ ದುಡ್ಡು ಬಂತು, ಅಮೇರಿಕದಿಂದ ದುಡ್ಡು ಬಂತು, ಅಷ್ಟು ಮುಕ್ತಹಸ್ತದಿಂದ ಹಣ ಕೊಡುತ್ತಾರೆ. ನಮ್ಮ ಹಿಂದೂ ಸಮಾಜದಲ್ಲಿ, ವೀರಶೈವ ಸಮಾಜದಲ್ಲಿ ಈ ರೀತಿ ಕೈಎತ್ತಿ ದುಡ್ಡು ಕೊಡ್ತಾರೆಯೇ. ನಿಜವಾದ ಸಂಘಕ್ಕೆ ತಮ್ಮ ವೇಳೆ, ಶ್ರಮ, ಗೌರವ ಕೊಡ್ತಿದ್ದಾರೆಯೆ ? ಇನ್ನು ಶ್ರೀಮಾನ್ ದೊಡವಾಡರು ಇಷ್ಟು ಭಾರಿ ವ್ಯಾಪಾರ ಇದ್ದರೂ ಸಂಸ್ಥೆಗಳ ವಿಚಾರದಲ್ಲಿ ಶ್ರದ್ಧಾವಂತರಾಗಿ ಕೆಲಸ ಮಾಡುತ್ತಿರುವುದು ಸಂತೋಷದ ವಿಚಾರ. ಅವರಿಗೆ ನನ್ನ ವೈಯಕ್ತಿಕ ಅಭಿನಂದನೆಗಳು. ಅವರು ಶತಾಯುಷಿಗಳಾಗಲಿ, ಸಮಾಜಕ್ಕೆ ಇನ್ನೂ ಹೆಚ್ಚು ಉಪಯೋಗವಾಗಲಿ, ಅವರು ಇನ್ನೂ ದೊಡ್ಡ ದಾನಿಗಳಾಗಿ ಹತ್ತಾರು ಸಂಘ ಸಂಸ್ಥೆಗಳಿಗೆ ದಾನ ಕೊಡಲಿ, ಶ್ರದ್ಧಾವಂತರಾಗಿ ದುಡಿದು ಆ ಸಂಸ್ಥೆಗಳು ಬೇಗ ಪ್ರಗತಿಗೆ ಬರಲಿ ಎಂದು ಆಶಿಸಿ ಈ ಶುಭ ಸಂದರ್ಭದಲ್ಲಿ ನನ್ನ ಶುಭ ಸಂದೇಶವನ್ನು, ಶುಭ ಹಾರೈಕೆಯನ್ನು ಸಲ್ಲಿಸುತ್ತೇನೆ.

ಪೂಜ್ಯರ ಆಶೀರ್ವಚನಗಳು

ಶ್ರೀ ನೀಲಕಂಠ ಮಹಾಸ್ವಾಮಿಗಳು, ಮುರಗೋಡ

(ಚನ್ನಬಸವಣ್ಣನವರ ಪುಸ್ತಕ ಬಿಡುಗಡೆ ಮಾಡುತ್ತ)

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಅವರ ಸನ್ನಿಧಾನದಲ್ಲಿ ನಮಿಸಿ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪಾದಾರವಿಂದಗಳಲ್ಲಿ ದೀರ್ಘದಂಡ ನಮಸ್ಕಾರ ಸಲ್ಲಿಸಿ, ಮುರುಘಾ ಮಠಾಧ್ಯಕ್ಷರಾದ, ಪರಮಪೂಜ್ಯ ತಾಯಿಹೃದಯದ ಮಹಾಂತಪ್ಪಗಳವರಿಗೆ. ಇನ್ನಿತರ ಗುರು ಹಿರಿಯರಿಗೆ ವಂದಿಸಿ, ಇವತ್ತಿನ ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದ ನಿವೃತ್ತ ಮುಖ್ಯ ನ್ಯಾಯಾಧೀಶ ಮಾನ್ಯ ಡಿ. ಎಂ. ಚಂದ್ರಶೇಖರ ಅವರೇ, ಆರೋಗ್ಯ ಕ್ಷೇತ್ರದಲ್ಲಿ ಮಹಾಶಕ್ತಿಯಾಗಿರುವ ನಮ್ಮವರೇ ಆದ ಆರ್. ಬಿ. ಪಾಟೀಲರೇ, ಸಮಾಜಕ್ಕೆ ಚೈತನ್ಯಶಕ್ತಿಯಾದ, ಮಹಾಮೂರ್ತಿಯಾದ ದೊಡವಾಡ ಅವರೇ. ಅಭಿಮಾನಿಗಳೇ. ಪೂಜ್ಯರೇ. ಇಂದಿನ ಈ ಸಂದರ್ಭ ಒಂದು ಪರ್ವಕಾಲ. ಇಂಥ ಪುಣ್ಯಮಯಕಾಲದಲ್ಲಿ ನಾವು ನೋಡುತ್ತಿರುವಂತಹ ಒಂದು ದೃಶ್ಯ ನೋಡಿದಾಗ ಇದಕ್ಕೆ ಯಾವ ಉಪಮೆ ಕೊಡಬೇಕು ಎಂಬ ಮಾತು ನನಗೆ ತಿಳಿಯದಂತಾಗಿದೆ. ಒಂದು ಲೌಕಿಕವಾಗಿರುವ ಸಂಪತ್ತಾದರೆ ಇನ್ನೊಂದು ಅಲೌಕಿಕವಾದ ಸಂಪತ್ತು. ಎರಡನ್ನೂ ಕೂಡಿಸಿರುವಂತಹ ದೊಡವಾಡರಿಗೆ ಸಮಾಜ ಯಾವ ದೃಷ್ಟಿಯಿಂದ ಉಪಯೋಗ ಕೊಟ್ಟರೂ ಕೂಡ ಕಡಿಮೆ ಎಂಬ ಮಾತನ್ನು ಈ ಪ್ರಸಂಗದಲ್ಲಿ ನಾನು ಹೇಳದೆ ಇರಲಾರೆ. ಯಾಕೆಂದರೆ ನಿಜಗುಣ ಶಿವಯೋಗಿಗಳು ಒಂದು ಮಾತನ್ನು ಹೇಳುತ್ತಾರೆ. 'ಮನುಜ ಕುಲ ಫಲವಾವುದು' ಅದಕ್ಕೆ ಅವರೇ ಉತ್ತರ ಹೇಳುತ್ತಾರೆ, 'ಆನಾರೆಂದು ತಿಳಿಯುವುದು'. ಈ ದೊಡ್ಡದಾಗಿರುವ ವಿಚಾರವನ್ನು ನಾವು ಹೇಳಿದಾಗ ಜಗತ್ತಿನಲ್ಲಿ ಹುಟ್ಟಿರುವಂತಹ ಪ್ರತಿಯೊಬ್ಬ ಮನುಷ್ಯ ತನ್ನನ್ನು ತಾನು ತಿಳಿದುಕೊಳ್ಳುತ್ತಾನೆ ಎಂಬ ಪ್ರಶ್ನೆ ಬಂದಾಗ ಸಾಮಾನ್ಯವಾಗಿ ನಮಗೆ ಉತ್ತರ ಸಿಗುತ್ತದೆ. ಎಲ್ಲರೂ ತಿಳಿದುಕೊಳ್ಳುವದಿಲ್ಲ. ಎಲ್ಲರೂ ತಿಳಿದುಕೊಳ್ಳಿದ್ದಾರೆ ಎಂಬ ಮಟ್ಟಕ್ಕೆ ಬಂದಾಗ ಇಂದು ತನ್ನನ್ನು ತಾನು ತಿಳಿದುಕೊಂಡ ವ್ಯಕ್ತಿ ಯಾವನಾದರೂ ಇದ್ದರೆ ಅವರು ದೊಡವಾಡರು. ಅವರು ಹುಟ್ಟಿದ್ದು ಸಣ್ಣ ಗ್ರಾಮವಾದ ಕರೀಕಟ್ಟಿಯಲ್ಲಿ. ನಾವು ಬೆಳಗಾವ ಜಿಲ್ಲೆಯವರು, ಅದರಲ್ಲೂ ಸವದತ್ತಿ ತಾಲೂಕಿನವರು. ನಮಗ ಇದು ಬಹಳ ಅಭಿಮಾನ ಅನ್ನಿಸ್ತದೆ ಇವತ್ತು. ಆ ಬೆಳಗಾವಿಯ ಮೂರ್ತಿ ಧಾರವಾಡದಲ್ಲಿ ಬೆಳಗುತ್ತಾ ಇದೆ ಎಂಬುದು ನನಗೆ ಬಹಳ ಸಂತೋಷ ಅನ್ನಿಸ್ತದೆ.

ಸಣ್ಣದಾಗಿರತಕ್ಕಂತಹ ಗ್ರಾಮ ಕರೀಕಟ್ಟಿ. ಇಂಥ ಗ್ರಾಮದಲ್ಲಿ ಹುಟ್ಟಿ ಕಾಯಕಯೋಗಿಯಾಗಿರುವಂತಹ ಗುರುಪುತ್ರಪ್ಪಣ್ಣ ಇವರು ಸಮಾಜ ಬಾಂಧವರ ಸಹಸ್ರ ಕಣ್ಣುಗಳಿಂದ, ಸಹಸ್ರ ಹಸ್ತಗಳಿಂದ ಮಾಲೆ ಹಾಕಿಸಿಕೊಂಡಿದ್ದು ನೋಡಿದಾಗ ಈ ಪುಣ್ಯಕ್ಕೆ ಬೆಲೆ ಇಲ್ಲ ಎಂಬ ಮಾತು ಇಂದು ನನ್ನ ಮನಸ್ಸಿಗೆ ಬಂದಿದೆ. ಅದಕ್ಕಾಗಿ ಅಂಥ ಪುಣ್ಯದ ಪುಂಜವಾಗಿರುವ ಗುರುಪುತ್ರಪ್ಪ ದೊಡವಾಡ ಅವರ ಅಮೃತ ಮಹೋತ್ಸವ ಆದುದು ಗುರುಪುತ್ರಪ್ಪನಿಗೆ ಅಷ್ಟೇ ಅಲ್ಲ, ವೀರಶೈವ ಸಮಾಜದ ಪ್ರತಿಯೊಬ್ಬನ ಅಮೃತಮಹೋತ್ಸವ ಆಯಿತೆಂಬ ಸಂತೋಷದಿಂದ ನಾನು ಹೇಳುತ್ತಿದ್ದೇನೆ. ಇಂಥ ಸಂದರ್ಭದಲ್ಲಿ ವಿಷಯ ಬಹಳ ಇದೆ, ಸಮಯ ಕಡಿಮೆ ಇದೆ. ನಮಗೆ ದೊಡ್ಡ ಕೆಲಸ ಕೊಟ್ಟಿದ್ದಾರೆ. ವೀರಶೈವ ಸಮಾಜದ ಜ್ಞಾನನಿಧಿ ಆದಂತಹ, ೧೨ನೆಯ ಶತಮಾನದಲ್ಲಿ ಕ್ರಾಂತಿ ಮಾಡಿದಂತಹ ಶರಣ ಚನ್ನಬಸವಣ್ಣ. ಚನ್ನಬಸವಣ್ಣನವರ ವಚನಗಳ ಪುಸ್ತಕ ಬಿಡುಗಡೆಗೆ ಕೊಟ್ಟಿದ್ದಾರೆ. ನಾನು ಈ ಸಭೆಯಲ್ಲಿ ಸಣ್ಣವ, ನನಗಿಂತಲೂ ಹಿರಿಯರಾದ ಉಭಯ ಜಗದ್ಗುರುಗಳು, ಮಹಾಂತಪ್ಪಗಳು ಇಂಥವರ ಸನ್ನಿಧಾನದಲ್ಲಿ ಚನ್ನಬಸವಣ್ಣನವರ ಬಗೆಗೆ ಇವತ್ತು ಮಾತಾಡಿದರೆ ಅದರ ಬಗ್ಗೆ ಸೌಷ್ಟವ ರೀತಿಯಿಂದ ವಿಚಾರಗಳನ್ನು ತಿಳಿಸದೆ ನಾನು ಇವತ್ತು ಈ ಹೇಳಿಕೆಯನ್ನು ಹಿರಿಯರಿಗೆ ಬಿಟ್ಟುಕೊಟ್ಟು, ವೀರಶೈವ ಸಮಾಜದಲ್ಲಿ ಅನುಭವ ಮಂಟಪ ಸ್ಥಾಪನೆಯಾಯಿತು. ಅದಕ್ಕೆ ಮಹಾಶಕ್ತಿಮಾಲೆಯಾಗಿ ಶೋಭಾಯಮಾನವಾಗಿದ್ದ ಬಹಳ ಮಂದಿ ಇದ್ದಾರೆ, ಅಲ್ಲಮಪ್ರಭು, ಚನ್ನಬಸವಣ್ಣ, ಮಡಿವಾಳ ಮಾಚಿದೇವ ಅಕ್ಕಮಹಾದೇವಿ ಮುಂತಾದ ಮಹಾನ್ ಮಹಾನ್ ಶರಣರು; ಕೊನೆಯ ತೀರ್ಮಾನ ಎಲ್ಲಿಗೆ ಬರುತ್ತೈತಿ ಎಂದು ಕೇಳಿದಾಗ ಚನ್ನಬಸವಣ್ಣನದು ಮಾತ್ರಕೊನೆಯದಾಗಿರತಕ್ಕಂತಹ ತೀರ್ಮಾನ.

ಮೊದಲನೆಯ ಪಾರ್ಲಿಮೆಂಟ, ಧರ್ಮದ ಲೋಕಸಭಾ ಅಧ್ಯಕ್ಷ ಯಾರಪಾ ಅಂದರ ಚನ್ನಬಸವಣ್ಣ ಇದ್ದ. ಅವನ ತೀರ್ಮಾನವೇ ಕೊನೆಯ ತೀರ್ಮಾನವೆನಿಸಿತ್ತು. ಚನ್ನಬಸವಣ್ಣನವರ ವಚನಕ್ಕೆ ತಕ್ಕಂತಹ ಒಂದು ಸಂದರ್ಭದಲ್ಲಿ ಗುರುಪುತ್ರಪ್ಪಣ್ಣ ದೊಡವಾಡ ಅಮೃತ ಮಹೋತ್ಸವ ಸಮಿತಿಯವರು ಈ ಪುಸ್ತಕ ಬಿಡುಗಡೆ ಮಾಡಿದ್ದು ವೀರಶೈವ ಸಮಾಜಕ್ಕೊಂದು ಮಾದರಿಯಾಗಿದೆ. ಇತಿಹಾಸ ಸೃಷ್ಟಿಯಾಗಿದೆ. ಹಿಂದೆ ನಾವು ಕೇಳುತ್ತಿದ್ದೆವು ಸಿರಸಂಗಿ ಲಿಂಗರಾಜರ, ವಾರದ ಮಲ್ಲಪ್ಪನವರ, ಅರಟಾಳ ರುದ್ರಗೌಡರಂತಹ ಮಹಾನ್ ಮಹಾನ್ ನೇತಾರರ ಮಹಾನ್ ಕೀರ್ತಿಯನ್ನು ಕೇಳುತ್ತಿದ್ದೇವೆ. ಇಂದು ಅವರ ಸಿರಿಸಂಪತ್ತನ್ನು, ಸೊಬಗನ್ನು ನಾವು ನೀವು ಎಲ್ಲ ನೋಡಿದ್ದೇವೆ, ಇಂದು ಗುರುಪುತ್ರಪ್ಪಣ್ಣನ ಲೌಕಿಕ, ಅಲೌಕಿಕ, ಸಂಪತ್ತನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಈ ಸಂದರ್ಭದಲ್ಲಿ ದೊಡವಾಡ ಬಂಧುಗಳಿಗೆ ನಾನು ಏನು ಹೇಳಬೇಕೆಂಬುದು ತಿಳಿಯದಾಗಿದೆ,

ಪಾಂಡುರಾಜ ಗುರುಪುತ್ರಪ್ಪಣ್ಣ ಪಂಚಪಾಂಡವರಂತಿರುವ ಐದು ಜನ ಮಕ್ಕಳನ್ನು ಪಡೆದ ಸುದೈವಿ: ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವರಂತೆ ಐದು ಜನ ಮಕ್ಕಳು. ಹೆಸರು ಎಂಥವರೀ! ಇಂದಿನ ಲೌಕಿಕವಾಗಿರುವಂತಹ ಹೆಸರು ತೆಗೆದುಕೊಂಡರೆ ದುಃಖವಾಗ್ತದೆ. ವೀರಶೈವ ಸಮಾಜದ ಮಕ್ಕಳ ಹೆಸರನ್ನು ತೆಗೆದುಕೊಂಡರೆ ಆಗ ವೀರಶೈವ ಸಮಾಜದವ್ರೋ, ಯಾವ ಸಮಾಜದವ್ರೋ ಎಂಬುದು ಸಂಶಯವಾಗುತ್ತದೆ. ಹೆಸರಿನ ಬಗ್ಗೆ ಇಂದು ಬಹಳ ಖೇದ ಅನ್ನಿಸ್ತದೆ. ಗುರುಪುತ್ರಪ್ಪ ಇಟ್ಟ ಹೆಸರನ್ನು ನೋಡಿದರೆ ಸರಸಾನಂದ, ದಯಾನಂದ, ಸುದೈವ, ಮನೋಹರ, ಕೈಲಾಸಪತಿ–ಏನ್ರೀ ಎಂಥೆಂಥ ಹೆಸರು. ಇವತ್ತು ನಮ್ಮ ಸಮಾಜ ತಿಳಿದುಕೊಳ್ಳಬೇಕು. ಇವತ್ತು ನಾವು ಹೆಸರಿಡುತ್ತೇವೆ. ಅದನ್ನೇನು ಹೇಳುವುದು ಇವತ್ತು ? ಎಕ್ಸಪ್ಲೇನೇಶನ್ ಕೊಡುವದಿಲ್ಲ. ಆದರೆ ಇವತ್ತು ಪುಣ್ಯದ ಮೂರ್ತಿ ಐದು ಮಕ್ಕಳನ್ನು ಪಡೆದು ಭಾಗ್ಯದ ಸಂಪತ್ತನ್ನು ಪಡೆದವರು ಗುರುಪುತ್ರಪ್ಪನವರು. ನಿಜವಾಗಿ ನನಗೆ ಇವತ್ತು ಸಂತೋಷವಾಗುತ್ತದೆ. ಇವತ್ತು ಪಾಂಡವರ ಸದೃಶರಾಗಿರುವ ಮಕ್ಕಳು, ಉತ್ತಮವಾಗಿರುವ ಸೊಸೆಯಂದಿರನ್ನು ಪಡೆದಿರುವಂತಹ ದೊಡ್ಡ ಪುಣ್ಯ ಅವರದು. ಐದು ಜನ ಸೊಸೆಯರು ಬಂದರೆ ಮನೆತನ ಅದಲು ಬದಲಿಯಾಗಿ ಹೋಗಬೇಕು. ಆದರೆ ಸುದೈವದಿಂದ ಒಂದೇ ಚೌಕಟ್ಟಿನಲ್ಲಿ ಇರುವ ಮನೆತನ, ಒಂದು ಲಗಾಮು, ಗುರುಪುತ್ರಪ್ಪನವರ ಶಕ್ತಿ ಐತಲ್ಲಾ, ಅದಾವುದಪ್ಪಾ ಎಂದರೆ, ಗುರುಲಿಂಗ ಜಂಗಮರ ಬಗ್ಗೆ ಮಾಡುತ್ತಿರುವಂತಹ ಭಕ್ತಿಯ ಹೊನಲು, ಗುರುಪುತ್ರಪ್ಪನವರು ಇಷ್ಟು ದೊಡ್ಡವರಾಗಲು ಏನಾದರೂ ಕಾರಣೀಭೂತ ಇದ್ದರೆ, ಅದು ಅಥಣಿ ಶಿವಯೋಗಿಗಳವರ ಕೃಪೆ, ಮೃತ್ಯುಂಜಯಪ್ಪಗಳವರ ಕೃಪೆ, ಅಥಣಿ ಶಿವಯೋಗಿಗಳ ಕೃಪೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಸಂತೋಷಪಡುತ್ತೇನೆ.

ಗುರುಪುತ್ರಪ್ಪಣ್ಣ ಈಗ ೭೫ ವರ್ಷ ಮುಗಿಸುತ್ತಿದ್ದಾರೆ. ಶತಮಾನೋತ್ಸವನ್ನೂ ಹೀಗೆಯೇ ಆಚರಿಸಲಿ ಎಂದು ಹಾರೈಸುತ್ತೇನೆ. ತಾಯಿಯ ಶತಮಾನೋತ್ಸವ, ತಾಯಿಯನ್ನು ತೂಗಿಸಿ ತುಲಾಭಾರ ಮಾಡಿದರು ಗುರುಪುತ್ರಪ್ಪಣ್ಣ. ಇವತ್ತು ತಾಯಿಯ ಋಣ ಮುಟ್ಟಿಸಿದರು ಎಂದು ಹೇಳಬೇಕಾಗುತ್ತದೆ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಅಂತ ಹೇಳಿದ್ದು ತಾಯಿ, ಯಾವ ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು ಎಂಬುದನ್ನು ತೋರಿಸಿದ ಗುರುಪುತ್ರಪ್ಪಣ್ಣ ನೂರೊಂದು ಕಾಲ ಬಾಳಲಿ. ಆಯುರಾರೋಗ್ಯ ಪಡೆಯಲಿ, ಸಮಾಜಕ್ಕೆ ಮಾರ್ಗದರ್ಶಕರಾಗಲಿ, ಜಗದ್ಗುರುಗಳು ಆಶೀರ್ವದಿಸಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ. ನಿ. ಪ್ರ. ಮಹಾಂತಪ್ಪಗಳು, ಮುರುಘಾಮಠ ಧಾರವಾಡ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳ ದಿವ್ಯಸನ್ನಿಧಿಯಲ್ಲಿ ಪೊಡಮಟ್ಟು, ಶ್ರೀಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಪೊಡಮಟ್ಟು, ಮುರುಗೋಡ ಸಿದ್ದಸಂಸ್ಥಾನದ ಮಠಾಧ್ಯಕ್ಷರಾದ ನೀಲಕಂಠ ಸ್ವಾಮಿಗಳಲ್ಲಿಯೂ, ಇನ್ನುಳಿದ ಎಲ್ಲ ಹರಗುರು ಚರಮೂರ್ತಿಗಳಲ್ಲಿ ವಂದಿಸಿ, ನ್ಯಾಯಮೂರ್ತಿಗಳಾದ ಡಿ.ಎಂ. ಚಂದ್ರಶೇಖರ ಅವರೇ, ಡಾ. ಆರ್. ಬಿ. ಪಾಟೀಲರವರೇ. ಸನ್ಮಾನಿತರಾದ ಗುರುಪುತ್ರಪ್ಪನವರು ದೊಡಮಾಡ ದಂಪತಿಗಳೇ, ಧಾರವಾಡ ಹುಬ್ಬಳ್ಳಿ ಮಹಾನಗರದ ಹಾಗೂ ಇನ್ನುಳಿದ ಎಲ್ಲ ಪ್ರದೇಶಗಳಿಂದ ಆಗಮಿಸಿದ ಮಹನೀಯರೇ, ತಾಯಿಯರೇ,

ಇದು ಅಪೂರ್ವಯುಗ, ಈ ಅಮೃತಮಹೋತ್ಸವ ಮಾಡಲು, ಕಾರಣರೆಂದರೆ ನಮ್ಮ ಲಕಮನಹಳ್ಳಿ ಬಸಣ್ಣನವರು. ಅವರೆ ಮೊದಲು ಮಠದಲ್ಲಿ ನೋಟೀಸು ತೆಗೆದರು, ಗುರುಪುತ್ರಪ್ಪನವರ ಅಮೃತಮಹೋತ್ಸವ ಮಾಡಬೇಕೆಂದು ನೋಟೀಸ ತೆಗೆದರು. ಆ ಪ್ರಕಾರ ಮಠದಲ್ಲಿ ಸೇರಿ ಈ ಕಾರ್ಯ ಮಾಡಿದರು. ಇದು ಬಹಳ ಸಂತೋಷದ ಸಂದರ್ಭ. ಗುರುಪುತ್ರಪ್ಪನವರು ಭಾಗ್ಯವಂತರು. ಇಂಥ ಭಾಗ್ಯ ಎಲ್ಲರಿಗೂ ಬರುವದಿಲ್ಲ. ಶ್ರೀಮಂತರಾಗಬಹುದು, ವಿಜ್ಞಾನಿಯಾಗಬಹುದು, ಕವಿಯಾಗಬಹುದು ಆದರೆ ಭಾಗ್ಯವಂತನಾಗುವದಿಲ್ಲ. ಅದು ಪುಣ್ಯವಶ ಬೇಕು. ಮಹಾಭಾರತದಲ್ಲಿ ಒಂದು ಕಥೆ ಇದೆ, ಕುಂತಿದೇವಿ ಸುಮ್ಮನೆ ಕುಳಿತಾಗ, ಒಬ್ಬ ಗರ್ಭಿಣಿ ಹೆಣ್ಣುಮಗಳು ಬಂದು 'ತಾಯೇ, ನನಗೇನಾದರೂ ಉಪದೇಶ ಮಾಡು' ಎಂದು ಕೇಳಿದಳು. ಆಗ ಅವಳು ಏನು ಉಪದೇಶ ಮಾಡಬೇಕು ? ಕುಂತಿದೇವಿ ಹೇಳುತ್ತಾಳೆ, "ಭಾಗ್ಯವಂತಂ ಪ್ರಸೂದೇತಾಃ ಮಾತೇ ಶೂರಾನ್ ಮಾತೆ ಪಂಡಿತಾನ್" ಭಾಗ್ಯವಂತನಾದ ಮಗನನ್ನು ಪಡೆ ಎಂದು. ಶೂರಮಕ್ಕಳು ಬೇಡ, ಪಂಡಿತ ಮಕ್ಕಳು ಬೇಡ, ಭಾಗ್ಯವಂತ ಮಗನನ್ನು ಪಡೆ, ಧರ್ಮ, ಭೀಮ ಪಂಚಪಾಂಡವರು ಮಹಾಶೂರರು, ಮಹಾಪಂಡಿತರು, ಪ್ರಯೋಜನವೇನು ? ತನ್ನ ಮಕ್ಕಳು ಉಪವಾಸದಿಂದ ಅಡವಿ ಅಡ್ಡಾಡತಾರ. ಏನ ಮಾಡಬೇಕು, ಪಂಡಿತರಿದ್ದೇನು ಪ್ರಯೋಜನ. ಹಾಗೆ ಗುರುಪುತ್ರಪ್ಪನವರು ಭಾಗ್ಯವಂತರು, ಅವರು ಚಿಕ್ಕ ವಯಸ್ಸಿನಲ್ಲಿ ಧಾರವಾಡಕ್ಕೆ ಬಂದರು. ಮುರುಘಾಮಠದಲ್ಲಿ ಎರಡು ವರ್ಷ ಇದ್ದರು ನೋಡ್ರಿ. ಗುರುಗಳ ಸನ್ನಿಧಿಯಲ್ಲಿ ಎರಡು ವರ್ಷ ಇದ್ದು ಗುರುಗಳ ಕೃಪೆಗೆ ಪಾತ್ರರಾದರು. ಗುರುಗಳ ಕೃಪಾದೃಷ್ಟಿ ಅವರ ಮೇಲೆ ಬಿದ್ದಿದೆ ನೋಡಿ. ಈ ದೃಷ್ಟಿ ಬಹಳ ಮಹತ್ವದ್ದು. ಅದೇ ಇಷ್ಟೆಲ್ಲ ಕೆಲಸ ಮಾಡಿಸಿರುವುದು. ಅಲ್ಲಿ ಎರಡು ವರ್ಷ ಇದ್ದು ಅಪ್ಪಗಳ ಸೇವೆ ಮಾಡಿದರು,

ಅಪ್ಪಗಳ ಆಶೀರ್ವಾದ ಅತು. ಗುರುಗಳು ನೋಡಿ, ನೀನು ಭಾಗ್ಯವಂತನಾಗತೀದಿ, ಎಂದು ಆಶೀರ್ವಾದ ಮಾಡಿದರಲ್ಲಾ. ಅದ ಇಂದು ಅಷ್ಟಾತು ನೋಡ್ರಿ. ಅದ್ದರಿಂದ ಅವರು ಏನ ಕಾಯಕ ಮಾಡಿದರಲ್ಲಿ ಗಳಿಸುವುದು, ಉಳಿಸುವುದು, ಬಳಸುವುದು. ಅದರಂತೆ ಗುರುಪುತ್ರಪ್ಪನವರು ಕಾಯಕ ಮಾಡತ ಮಾಡತ ದೊಡ್ಡವರಾದರು. ತಮ್ಮ ಜೀವನದಲ್ಲಿ ಅನೇಕ ಧರ್ಮಕಾರ್ಯ ಮಾಡಿದ್ದಾರೆ. ಯಾರ ಬಂದರೂ ಅವರ ಹತ್ತಿರ ಹಂಗ ಹೋಗಿಲ್ಲ. ಬಡವ ಬರಲಿ, ದರಿದ್ರ ಬರಲಿ ಹಂಗ ಹೋಗಿಲ್ಲ. ವ್ಯಾಪಾರ ದಲ್ಲಿ ಬಹಳ ಶಿಸ್ತು. ಶಿಸ್ತಿಗೆ ದೇವರು ಒಲೀತಾನಂತ. ಶಿಸ್ತು ಇಲ್ಲದಿದ್ದರೆ ದೇವರು ಒಲಿಯುವದಿಲ್ಲ. ಅದರಂತೆ ಅವರ ಮಕ್ಕಳನ್ನು ನೋಡ್ರಿ. ಸರಸಾನಂದ ಅವ ಭಾಗ್ಯ ವಂತದಾನ. ಅಷ್ಟ ಇಷ್ಟ ಅಲ್ಲ, ಅವ ಕೋಟ್ಯಾಧೀಶ ಆಗತಾನ ನೋಡಿರಿ, ಬರಿಗೈಲಿ ಬಂದವರು ಸ್ವಾಮಿ ಕೃಪೆಯಿಂದ ಕೋಟ್ಯಾಧೀಶರಾದರ ಹರನೀವ ಕಾಲಕ್ಕೆ ಸಿರಿಯು ಜನ್ನಲಿ ಬರ್ಕ. ಪರಮಾತ್ಮ ಒಲಿದರ ಸಿರಿ ಸಂಪತ್ತು, ಹಂಗ ಬೇಕು ಹಂಗ ಬರತೈತಿ. ಈ ಸಮಾರಂಭ ನೋಡ್ರಿ, ಎಷ್ಟ ಜನರು ಕೂಡೆರ ! ನಾನೇನು ಬಹಳ ಹೇಳುವದಿಲ್ಲ ಅವರು ಭಾಗ್ಯವಂತರು. ಒಂದುಲಕ್ಷ ಹನ್ನೊಂದು ಸಾವಿರದ ಒಂದುನೂರ ಹನ್ನೊಂದು ರೂ. ಕೊಡುತ್ತೇವೆಂದು ಹೇಳಿದರಲ್ಲ. ಇದು ಬಹಳ ದೊಡ್ಡದು. ಈ ಕಾರ್ಯಕ್ರಮಕ್ಕೆ ಪೂಜ್ಯರು ದಯಮಾಡಿಸಿರುವರು, ಡಾಕ್ಟರು, ಎಂಜನಿಯರು ಬಂದಾರ, ಬಹಳ ಪುಣ್ಯ ಸ್ವಾಮಿ ಪುಣ್ಯ ದೊಡ್ಡದು. ದೊಡವಾಡರು ಶತಾಯುಷಿಗಳಾಗಬೇಕು. ಆರೋಗ್ಯ ವಂತರಾಗಬೇಕು. ಜಗದ್ಗುರುಗಳ ಕೃಪೆ ಅವರಿಗಾಗಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀಮನ್ನಿರಂಜನ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯಮಠ, ಗದಗ

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವ ಸೆಟ್ಟಿ
ಒಮ್ಮನವಾದರೆ ಒಡನೆಯೆ ನುಡಿವನು
ಇಮ್ಮನವಾದರೆ ನುಡಿಯನು ಎಂದಿಗೂ
ಕಾಣಿಯ ಸೋಲ ಅರ್ಧಕಾಣಿಯ ಗೆಲ್ಲ
ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ ॥

ಪ್ರಾತಃಸ್ಮರಣೀಯರಾದ ಬಸವಾದಿ ಶರಣರನ್ನು ಸ್ಮರಿಸಿ, ಧಾರವಾಡ ಮಹಾ ನಗರದಲ್ಲಿ ನಡೆಯುತ್ತಿರುವಂತಹ, ಖ್ಯಾತ ಉದ್ಯಮಪತಿಗಳೂ, ಉದಾರಿಗಳೂ ಆದ ಶ್ರೀ ಗುರುಪುತ್ರಪ್ಪ ಗುರುಪಾದಪ್ಪ ದೊಡವಾಡ ಅವರ ಅಮೃತ ಮಹೋತ್ಸವದ ಅಧ್ಯಕ್ಷತೆಯನ್ನು ವಹಿಸಿದಂತಹ ಬೃಹನ್ಮಠಾಧ್ಯಕ್ಷರಾದ ಶ್ರೀ ಮ. ನಿ. ಪ್ರ. ಮುರುಘರಾಜೇಂದ್ರ ಮಲ್ಲಿಕಾರ್ಜುನ ಮಹಾಸ್ವಾಮಿಗಳೇ, ತ್ರಿವಿಧದಾಸೋಹಮೂರ್ತಿಗಳೂ, ಧಾರವಾಡ ಮುರುಘಾಮಠಾಧ್ಯಕ್ಷರಾದಂತಹ ಮಹಾಂತಪ್ಪಗಳವರೇ, ಮುರಗೋಡ ಮಠಾಧ್ಯಕ್ಷರಾದ ಶ್ರೀ ನೀಲಕಂಠ ಮಹಾಸ್ವಾಮಿಗಳವರೇ, ಇತರ ಹರ ಗುರು ಚರಮೂರ್ತಿಗಳೇ, ಶ್ರೀ ದೊಡವಾಡ ಅವರ ಅಭಿನಂದನ ಗ್ರಂಥ ಬಿಡುಗಡೆ ಮಾಡಿದಂತಹ, ನಾಡಿಗೆ ಕೋಡು ಮೂಡಿಸುವ ನ್ಯಾಯದಾನದಿಂದ ಹಿರಿಮೆಯನ್ನು ತಂದುಕೊಟ್ಟಂತಹ ಕರ್ನಾಟಕದ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಡಿ. ಎಂ. ಚಂದ್ರಶೇಖರ ಅವರೇ. ಖ್ಯಾತ ವೈದ್ಯರಾದ ಪದ್ಮಶ್ರೀ ಆರ್. ಬಿ. ಪಾಟೀಲ ಅವರೇ, ಮಾನ್ಯ ಶ್ರೀ ಜಿ. ಜಿ. ದೊಡವಾಡ ದಂಪತಿಗಳೇ, ಈ ಸಮಾರಂಭದಲ್ಲಿ ಭಾಗಿಗಳಾದಂತಹ ಅವರ ಅಭಿಮಾನಿಗಳೇ, ನಿಮಗೆಲ್ಲರಿಗೂ ಶರಣಾರ್ಥಿಗಳು.

ಕನ್ನಡದಲ್ಲಿ ಒಂದು ಒಳ್ಳೆಯ ಗಾದೆಮಾತು ಹೇಳ್ತಾರೆ. ಮನೆಯಲ್ಲಿ ಹಿರಿ ಮಗನಾಗಿ ಹುಟ್ಟಬಾರದು. ಹಾಗೆಯೇ ಸಭೆಯಲ್ಲಿ ಕೊನೆ ಭಾಷಣಕಾರನಾಗಬಾರದು ಎಂದು. ಸುಮಾರು ೯ ಗಂಟೆಯಿಂದ ನೀವು ನಾವು ನೋಡ್ತೀವಿ. ಶ್ರೀ ದೊಡವಾಡ ಅವರ ಮನೆ ಬಹಳ ಚಂದ ಆಗೇದ, ಉತ್ಸವ ಬಹಳ ಚೆಂದಾಗಿ ಆಯ್ತು, ಪೆಂಡಾಲ ಬಹಳ ಚೆಂದ ಅದ. ಹಾಡುವವರು ಬಹಳ ಚಂದ ಹಾಡಿದರು, ಭಾಷಣ ಬಹಳ ಚಂದ ಮಾಡಿದರು. ಬೇರೆ ಬೇರೆ ಜನಗಳು ಹಾರ ಹಾಕಿದ್ದು, ಗಂಧದ ಹಾರ ಹಾಕಿದ್ದು, ಬಟ್ಟೆ ಕೊಟ್ಟಿದ್ದು, ಬೆಳ್ಳಿ ಸಾಮಾನು ಕೊಟ್ಟದ್ದು, ಅವರ ತಾಯಿಯವರ ತುಲಾಭಾರ ನೋಡಿದ್ದು. ಇವೆಲ್ಲ ಬಹಳ ಸಂತೋಷ. ಒಂದರಕಿಂತ ಒಂದು ಹೆಚ್ಚಿನ ಸಂತೋಷ ಅದಾವ. ಇನ್ನು ಮೇಲೆ ಮಹಾಪ್ರಸಾದ, ಅದು ಇನ್ನೂ ಹೆಚ್ಚಿನ

ಸಂತೋಷ ತರುವಂತಹದು. ಇವೆಲ್ಲ ಸಂತೋಷವೇ, ಬಹಳ ಸ್ವಾಮಿಗಳನ್ನು ಸೇರಿಸ್ಯಾರ. ಗದಗಿನ ಸ್ವಾಮಿಗಳು ಬಹಳ ಚಂದ ಮಾತಾಡತಾರ ಸಂತೋಷ, ಆದರೆ ಅವರು ಭಾಷಣ ಬಹಳ ಬೇಗ ಮುಗಿಸಿದರ ಇನ್ನೂ ಸಂತೋಷ !

ವೀರಶೈವ ಸಮಾಜಸೌಧ ಕಟ್ಟಲು ಅನೇಕರು ಗಟ್ಟಿಗಾರೆಯಾಗಿ ಸುಣ್ಣಬಣ್ಣ ಆಕಾರ ಆಗಿದ್ದಾರೆ. ಈ ಸಮಾಜದ ಆತ್ಮಗೌರವವನ್ನು ಉದ್ಯಮಶೀಲದಿಂದ ಎತ್ತಿ ಹಿಡಿದ ಅಂಥ ಅಗ್ರಮಾನ್ಯರ ಪರಂಪರೆ ಇದಕ್ಕಿದೆ. ಅದರಲ್ಲಿ ಹೆಸರುವೆತ್ತಿದವರು ಸಕ್ಕರಿ ಕರಡೆಪ್ಪನವರು, ವಾರದ ಮಲ್ಲಪ್ಪನವರು, ಕಬ್ಬೂರ ಶರಣರು, ಮೈಲಾರ ಬಸವಲಿಂಗ ಶರಣರು. ಈ ವರ್ತಕ ಶಿಷ್ಯರ ಪರಂಪರೆಯ ಸೆರಗನ್ನು ಹಿಡಿದುಕೊಂಡು ಬಂದ ಗುರುಪುತ್ರಪ್ಪ ಸಮಕಾಲೀನ ವೀರಶೈವ ಸಮಾಜದಲ್ಲಿ ಸಾತ್ವಿಕರು, ಶ್ರೇಷ್ಠ ಸದ್ಗೃಹಸ್ಥರು. ಅವರದು ಒಂದು ರೀತಿ ಮಲ್ಲನಗೌಡರು, ಕೂಡಲಮಠರು, ಮೂವರದು ವ್ಯವಹಾರದಲ್ಲಿ ಆಸಕ್ತಿ, ಆಧ್ಯಾತ್ಮಕಾರ್ಯ ಪ್ರವಣ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆಸಕ್ತಿ. ಒಬ್ಬ ಹಳ್ಳಿ ಮನುಷ್ಯ ಮನಸ್ಸು ಮಾಡಿದರ, ಏಕಚಿತ್ತದಿಂದ ದುಡಿದರೆ ಏನ ಆಗಬಲ್ಲ ಅನ್ನೋದಕ್ಕ ಗುರುಪುತ್ರಪ್ಪನವರು ಒಂದು ಸಾಕ್ಷಿ.

ವ್ಯವಹಾರ ಮಾಡಬೇಕಾದರ ಅವ್ಯವಹಾರ ಮಾಡಬೇಕು ಅಂತಾರ. ಆದರೆ ದೊಡವಾಡರ ವ್ಯವಹಾರ ಕಠಿಣ ಪರಿಶ್ರಮದಿಂದ ಆದುದು. ಅವರ ಸತತೋದ್ಯೋಗದ ಬಗೆಗೆ ಎಷ್ಟು ಹೇಳಿದರೂ ಕಡಿಮೆ. ಅವರು ಸ್ವಾವಲಂಬಿಗಳು: ಅವರ ಮಕ್ಕಳು ಇಂದು ಮಾದರಿಯಾಗಿದ್ದಾರೆ. ಅವರ ಅಭಿವೃದ್ಧಿ, ಶ್ರೇಯಸ್ಸು, ಸಾಧನೆ ಇಂದು ಹೊತ್ತಿಗೆಯಾಗಿದೆ. ದಂತ ಕಥೆಯಂತೆ ಅವರ ಮಗನ ಸಾಹಸ ಜನಗಳು ಹೊಗಳ್ತಾರೆ.

ಧಾರವಾಡದ ನೆಲದ ಶಕ್ತಿ. ಇಲ್ಲಿ ಬಹಳ ಜನ ಕವಿಗಳು, ಸಾಹಿತಿಗಳು, ಸಾತ್ವಿಕರು, ಅನುಭಾವಿಗಳು, ಸುಸಂಸ್ಕೃತರು. ಇದೇ ನಾಡಿನ ಖ್ಯಾತ ಕವಿ ದ. ರಾ. ಬೇಂದ್ರೆಯವರಿಗೆ ಸೊಲ್ಲಾಪುರಕ್ಕೆ ವರ್ಗವಾಗಿತ್ತು. ಅವರನ್ನು ಬೀಳ್ಕೊಡುವ ಸಮಾರಂಭದಲ್ಲಿ

ನಾವು ಬರ್ತೇವಿನ್ನು, ನಮ್ಮ ನಮಸ್ಕಾರ ನಿಮಗ,
ಕಾಯ್ದೇರಿ ಕೂಸಿನ್ಹಾಂಗ. ನಮ್ಮ ನಮಸ್ಕಾರ ನಿಮಗ.
ನನ್ನ ಮಗನ್ಹಾಂಗ ಜೋಪಾನ ಮಾಡಿದಿರಿ,
ಜಗದ ಕೂಡಿ ಬಂದೇವಿ ಜಗಳಾಡಿ,
ಕೊಟ್ಟೇರಿ ನಿಮ್ಮ ತೊಡಿ,
ರೆಘೋಲಿ ಹೋದಾಗ ಆದಿರಿ ಕೋಲು,
ಏನ ಹೇಳಲಿ ನಿಮ್ಮ ಮೋಲು ಮೂರು ಲೋಕದಾಗ. ॥

ಧಾರವಾಡದ ಮಣ್ಣಿನ ಗುಣ ಶ್ರೇಷ್ಠ. ಇಲ್ಲಿ ಮೃತ್ಯುಂಜಯ, ಶಿವ ಒಬ್ಬನ್ನ ಬಿಟ್ಟರ ಇನ್ನೊಬ್ಬ ಮೃತ್ಯುಂಜಯ ಧಾರವಾಡದ ಮುರುಘಾಮಠದ ಮೃತ್ಯುಂಜಯಪ್ಪ. ಇಂಥ ಪುಣ್ಯ ನೆಲದಲ್ಲಿ ನೆಲೆಸಿ ಉತ್ತಮ ವ್ಯಾಪಾರಸ್ಥರಾದವರು ದೊಡವಾಡರು. ವ್ಯಕ್ತಿ ಶ್ರೀಮಂತನಾಗುವುದು ದೊಡ್ಡದಲ್ಲ. ನಿಷ್ಕಲಂಕ ಚಾರಿತ್ರ್ಯ ಇಟ್ಟುಕೊಂಡು ಬರುವುದು ಬಹಳ ದೊಡ್ಡದು. ಹಿಂದಿಯಲ್ಲಿ ಒಂದು ದೋಹೆ ಇದೆ.

ಪಾನಿಸೇ ಪತಲಾ ಕೌನ ಹೈ, ಪಾನಿಸೇ ಪತಲಾ ಜ್ಞಾನ ಹೈ॥

ಮೀರಾಬಾಯಿ ಹೇಳತಾಳ, ನೀರಿಗಿಂತ ತಿಳುವಾದುದು ಯಾವುದು ? ಅಕೀನ ಅದಕ್ಕ ಉತ್ತರ ಹೇಳತಾಳ ಜ್ಞಾನ ಜ್ಞಾನ ಜ್ಞಾನ, ಅಂದರ ಮನುಷ್ಯ ಜ್ಞಾನಿಯಾಗಿರಬೇಕು.

ಅಗನಸೇ ತೇಜ ಕೌನ ಹೈ, ಕ್ರೋಧ ಕ್ರೋಧ ಕ್ರೋಧ

ಜ್ಞಾನಿಯಾದ ಮನುಷ್ಯನಿಗೆ ಸಿಟ್ಟು ಇರಬಾರದು.

ಭೂಮಿ ಸೇ ಭಾರ ಕೌನ ಹೈ, ಪಾಪ ಪಾಪ ಪಾಪ.
ಕಾಜಲ ಸೇ ಕಾಲಾ ಕೌನ ಹೈ, ಕಲಂಕ ಕಲಂಕ ಕಲಂಕ.

ಚಾರಿತ್ರ್ಯದಲ್ಲಿ ಕಲಂಕ ಇರಬಾರದು. ಇಂಥ ಅಕ್ರೋಧ, ಚಾರಿತ್ರ್ಯವಂತ ಮಕ್ಕಳು ಇರಬೇಕು. ಮಕ್ಕಳಿಗೆ ಹೊಲಮನಿ ಕೊಡಬ್ಯಾಡರಿ, ಗುಣ ಕೊಡಬೇಕು, ಸಚ್ಚಾರಿತ್ರ್ಯ ಕೊಡಬೇಕು. ಧೈರ್ಯ ಕೊಡಬೇಕು, ವಿವೇಕಾನಂದರು ಒಮ್ಮೆ ಅವರಪ್ಪನ ಕೇಳಿದರಂತೆ, 'ನನಗೇನು ಕೊಡತಿ, ನೀನು' ಎಂದು. ಆಗ ಅವರು ಮಗನನ್ನು ಕನ್ನಡಿ ಮುಂದ ನಿಲ್ಲಿಸಿ, 'ಇಷ್ಟ ದೊಡ್ಡ ದೇಹ ಕೊಟ್ಟೇನಿ' ಅಂದರು. ವಿವೇಕಾನಂದ ಮುಂದೆ ಬಹಳ ದೊಡ್ಡ ಮನುಷ್ಯನಾಗಲು ಈ ಸಂದೇಶವೂ ಕಾರಣವಾಯಿತು. ಹಾಗೆ ಜಿ. ಜಿ. ದೊಡವಾಡರ ಮಕ್ಕಳು. ಸರಸಾನಂದರ ಬಗ್ಗೆ ಬಹಳ ಹೇಳತಾರ. ಲಿಂಗಾಯತರು ಕಾಯಕದ ಬಗ್ಗೆ ಹೇಳತೀವಿ. 'ಚಿತ್ತಶುದ್ಧವುಳ್ಳವಂಗೆ ಲಕ್ಷ್ಮಿ ಎತ್ತ ನೋಡಿದಡತ್ತ ತಾನೆ ತಾನಾಗಿ ಇಪ್ಪಳು' ಎನ್ನುವಂತೆ ಹೇಳುತ್ತೇವೆ. ಎಷ್ಟು ಜನ ಲಿಂಗಾಯತರು ಟಾಟಾ ಬಿರ್ಲಾ ಗೋಯಂಕಾನ ತರಹ ಇದ್ದಾರೆ ಹೇಳಿರಿ. ಬಹಳ ಕಡಿಮೆ. ಕೈ ಬೆರಳೆಣಿಕೆಯಷ್ಟು ಸೀಖರು, ಪಾರ್ಸಿಜನ, ಮಾರವಾಡಿ, ಗುಜರಾತಿ ಜನ ನಮ್ಮ ಹಾಗೆ ಕಾಯಕದ ಬಗ್ಗೆ ಬಹಳ ಮಾತನಾಡುವದಿಲ್ಲ. ಕಾಯಕದಲ್ಲಿ ಬಹಳ ಮುಂದು ಹೋಗ್ಯಾರ. ಅವರೆಲ್ಲ ಹಾಲಿನ ಮ್ಯಾಲಿನ ಕೆನಿ. ನಮ್ಮ ನಾಡಿನ ಮೇಲಿನ ಕೆನೆಯನ್ನು ಅವರು ಸ್ವೀಕಾರ ಮಾಡತಾರ. ನಾವು ಕೆಳಗಿನ ಹಾಲನ್ನೇ ಉಣತೇವಿ. ಖರೇ ಧರ್ಮವಂತರು, ಖರೇ ಬಸವಣ್ಣನ ಅನುಯಾಯಿಗಳು ವೀರಶೈವರು ಅನ್ನಿಸಿಕೊಳ್ಳುವ ಕಾಯಕ, ಉದ್ಯಮಶೀಲತೆಯಲ್ಲಿ ಪ್ರಬುದ್ಧತೆಯನ್ನು ಪಡೆಯಬೇಕು. ಇಂದಿನ ಸಮಕಾಲೀನ ಸಮಾಜದಲ್ಲಿ ಅಂಥ ಪ್ರಬುದ್ಧತೆಯನ್ನು ಪಡೆದ ನಾಲ್ಕೈದು ಹೆಸರು ಕೇಳಿದ್ದೇನೆ. ಅದರಲ್ಲಿ ಯಜಮಾನರಾದ ದೊಡವಾಡ ಅವರ ಮಕ್ಕಳು ಸರಸಾನಂದರೂ ಒಬ್ಬರು ಎಂದು ಕೇಳಿದ್ದೇನೆ. ಎಣ್ಣೆ ಉದ್ದಿಮೆ ಬಗ್ಗೆ ಜನ ಹೇಳ್ತಾರೆ.

ತಮಿಳುನಾಡು, ಆಂಧ್ರ, ಗೋವಾಗಳ ಎಣ್ಣೆ ಖರೀದಿ ಮಾಡುವುದು: ಇಲ್ಲಿಂದ ಸಪ್ಲೈ ಮಾಡುವುದು: ಸುಮಾರು ೧೦-೧೨ ಟ್ಯಾಂಕರು ಲಾರಿ ಇಟ್ಟು ಅಷ್ಟೇ ಚಾಕಚಕ್ಯತೆಯಿಂದ ಉನ್ನತವಾದ ಉದ್ದಿಮೆ ಇದ್ದರೂ ಒಂದು ಚೂರು ಅಹಂಕಾರ ಇಲ್ಲದೆ ದರ್ಪವಿಲ್ಲದೆ ದಕ್ಷತೆಯಿಂದ ವ್ಯವಹಾರ ನಡೆಸುವ ವಿಧಾನ ಗುರುಪುತ್ರಪ್ಪನವರು ತಮ್ಮ ಮಕ್ಕಳಿಗೆ ಒಳ್ಳೆಯ ತರಬೇತಿ ಕೊಟ್ಟಿದ್ದಾರೆ. ಖರೇ ಅಂದ್ರ, ಮಕ್ಕಳಿಂದ ತಂದೆ ಸೋಲಬೇಕು. "ಪುತ್ರಾದಿಚ್ಛೇತ್ ಪರಾಜಯಂ" ಅಂತಾರೆ, ಮಕ್ಕಳಿಂದ ಸೋಲಬೇಕು ಅಂತಾರೆ. ನಿಜವಾಗಿ ಅವರ ಮಕ್ಕಳು ಅವರಿಗಿಂತ ಇನ್ನೂ ಒಂದು ಹೆಜ್ಜೆ ಮುಂದ ಆದಾರ ಅನ್ನೂದು ಬಹಳ ಸಂತೋಷ. ಅವರ ಒಳ್ಳೆಯತನ ದುಡಿಮೆ ಎಷ್ಟು ಕಾರಣವೋ ಅವರ ಶ್ರೀಮಂತಿ ಜಿ. ಜಿ. ದೊಡವಾಡ ಅವರೂ ಅಷ್ಟೇ ಕಾರಣರು. ಎಷ್ಟೋ ಸಲ ಕೆಲವು ಜನರನ್ನು ನಾವು ಹೊಗಳತೀವಿ. ಆದರೆ ಅವರ ಹಿಂದೆ ಅವರ ಪತ್ನಿಯರು ೫೦% ದುಡದಿರತಾರ. ಅದನ್ನು ಲೆಕ್ಕಕ್ಕ ತಗೊಳ್ಳುವದಿಲ್ಲ. ಆದರೆ ಇಂದು ಅವರ ಧರ್ಮಪತ್ನಿಯನ್ನು ಸಭೆಯಲ್ಲಿ ಸನ್ಮಾನ ಮಾಡಿದ್ದು ಬಹಳ ಸಂತೋಷ, ಯಾಕೆಂದರೆ ಒಳ್ಳೆಯ ಹೆಂಡತಿ ಸಿಗದಿದ್ದರ ಏನಾಗತದ, ಸಾಕ್ರೇಟಿಸನ ಒಂದು ಚುಟುಕು ಹೇಳತೀನಿ. 'ಸಾಕ್ರೇಟಿಸನ ಮನೆಯಲ್ಲಿ ನಾಲ್ಕು ಜನ ಬಂದಿದ್ದರು. ಅವ ಕುಳಿತು ಮಾತಾಡತಿದ್ದ. ಅವನ ಹೆಂಡತಿ ನಿಂತು ಕೇಳುತ್ತಿದ್ದಳು. ಕೊಂಡಿ ಸಪ್ಪಳ ಮಾಡಿದಳು. ಲಗೂ ಮುಗಿಸಿರಿ ನಿಮ್ಮ ಮಾತು ಅಂದಳು. ತತ್ವಜ್ಞಾನಿಗಳ ಮಾತು ಯಾವಾಗ ಸುರು ಆಗತಾವ, ಯಾವಾಗ ಮುಗಿತಾವ ಅಂತ ಹೇಳಾಕ ಬರುವದಿಲ್ಲ. ಆಮೇಲೆ ಆ ಹೆಣ್ಣುಮಗಳು ಸಪ್ಪಳ ಮಾಡಿದಳು. ಇವರ ಮಾತು ಮುಗಿಲಿಲ್ಲ. ಬಾಯಿ ಮಾಡಿದಳು, ಆದರೂ ಮಾತು ಮುಗಿಲಿಲ್ಲ. ಕೊನೆಗೆ ಒಳಗೆ ಹೋಗಿ ಒಂದು ಕೊಡ ನೀರು ತಂದು ದಬದಬ ಅವರ ತಲೆಯ ಮೇಲೆ ಸುರಿದಳು. ಆಗ ಸಾಕ್ರೇಟಿಸ ಸಿಟ್ಟಿಗೆದ್ದನೇನು ? ಸ್ನೇಹಿತರೆ ಇಲ್ಲಿಯವರೆಗೆ, ಗುಡುಗಾಯಿತು. ಈಗ ಮಳೆಯಾಯಿತು ಎಂದನಂತೆ!' ಅಂದರೆ ಸಾಕ್ರೇಟಿಸನ ಹೆಂಡತಿಯಂತಹ ಹೆಂಡತಿ ಸಿಕ್ಕರ ವೇದಾಂತಿನೇ ಆಗುವುದು. ಅದು ಬಿಡಿ ಟಾಲಸ್ಟಾಯನ ಕಥೆ ಕೇಳತೀವಿ. ಆತ ಕೊನೆಯಲ್ಲಿ ಒಂದು ರೇಲ್ವೆ ನಿಲ್ದಾಣದಲ್ಲಿ ಪರದೇಸಿಯಾಗಿ ಸಾಯಬೇಕಾಯಿತು. ರಶಿಯಾದೇಶದ ದೊಡ್ಡ ತತ್ವಜ್ಞಾನಿ. ಅವನು ಹೇಳತಾನ 'ನನ್ನ ಹೆಂಡತಿ ಇಂಥವಳು ಸಿಕ್ಕದ್ದಕ್ಕ ನಾನು ಇಂಥ ದೊಡ್ಡ ತತ್ವಜ್ಞಾನಿ ಆದನೇನೋ' ಅಂತ. ಒಳ್ಳೆಯ ಧರ್ಮಪತ್ನಿಯರು ಧರ್ಮ ಉದ್ದಿಮೆಗೆ ಪೋಷಕ ಆಗುವಂತವರು. ಧರ್ಮ ಸಂಸ್ಕೃತಿಗೆ ಪೋಷಕ ಆಗುವವರು ಸಿಗುವುದು ಕಷ್ಟ. ಲಗ್ನ ಎಲ್ಲರೂ ಆಗ್ತಾರ, ಲಾಟರಿ ಟಿಕೇಟು ಎಲ್ಲರೂ ತೆಗೆದುಕೊಳ್ಳುತ್ತಾರೆ. ಆದರೆ ಬಂಪರಲಾಟರಿ ಕೆಲವರಿಗೆ ಸಿಗುತ್ತದೆ. ಹಂಗ ಮದುವೆ ಅನ್ನೂದು ಒಂದು ಲಾಟರಿ ಇದ್ದಂಗ. ಜಿ. ಜಿ. ದೊಡವಾಡ ಅವರು ಪುಣ್ಯವಂತ ಪತ್ನಿಯನ್ನು ಪಡೆದ ಭಾಗ್ಯಶಾಲಿಗಳು. ಅದರ ಹಿಂದೆ ಅವರ ತಂದೆಯವರ ಸಂಸ್ಕಾರ ಬಹಳ ದೊಡ್ಡದು ಆದ. ಗುರುಪುತ್ರಪ್ಪನವರು, ತಾಯಿಯ

ತುಲಾಭಾರ ಮಾಡಿದರು. ನೂರಾನಾಲ್ಕು ವರ್ಷದ ವೃದ್ಧತಾಯಿ ಎಷ್ಟು ಸಂತೋಷ ಪಡುತ್ತಾಳೆ. ಮಗನ ವೈಭವ ನೋಡಿ, ಮೊಮ್ಮಕ್ಕಳ ವೈಭವ ನೋಡಿ, ತನ್ನನ್ನು ತಕ್ಕಡಿಯಲ್ಲಿ ಕುಳ್ಳಿರಿಸಿ ತೂಕ ಮಾಡಿದ್ದು ನೋಡಿ, ಅರಮನೆಯಂತೆ ಅವರ ಮನೆ ಇದೆ. ಕರೀಕಟ್ಟಿಯ ಆ ಪುಟ್ಟಮನೆಯಿಂದ ಇವತ್ತು ಇಂಥ ದೊಡ್ಡಮನೆಗೆ ಬಂದರೂ ತಾಯಿ ಇಂಥ ನಿರಾಡಂಬರ ಜೀವನ, ಭಾಕ್ತಿಕ ಜೀವನವುಳ್ಳ ತಾಯಿ. ಬಹುಶಃ ಆ ತಾಯಿ, ತನ್ನ ಮಗನನ್ನು ಸುಸಂಸ್ಕೃತಿಯಲ್ಲಿ ಬೆಳೆಸಿರುವುದರಿಂದ ಇಷ್ಟೆಲ್ಲ ಕಾರಣ ವಾಯಿತು. ಅದರಲ್ಲಿ ದೊಡವಾಡರ ತಂದೆಯ ಫೋಟೊ ಇದೆ. ಅವರನ್ನ ನೋಡಿ ದರ ಒಬ್ಬ ಸ್ವಾಮಿಗಳ ಫೋಟೋ ನೋಡಿದ ಗೌರವ ಬರುತ್ತದೆ. ಭಕ್ತಿವಂತರು ಶ್ರೇಷ್ಠರು, ಅವರ ತಂದೆಯವರಾದ ಗುರುಪಾದಪ್ಪನವರು. ಪುರಾಣೆ, ಒಳ್ಳೆಯ ನಡಾವಳಿಯ ದೊಡವಾಡ ಮನೆತನದ ಗುರುಪುತ್ರಪ್ಪನವರು ಒಳ್ಳೆಯ ಯೋಗ್ಯತೆ ಯಿಂದ ಸಾಹಸದಿಂದ ಮುಂದುಬಂದಿದ್ದಾರೆ. ಇದು ಇತರರಿಗೆ ಮಾರ್ಗದರ್ಶಿಯಾಗ ಬೇಕು. ಆದರ್ಶವಾಗಬೇಕು. ಒಳ್ಳೆಯ ಉದ್ಯಮದಲ್ಲಿ ನಾವು ಆಸಕ್ತಿ ವಹಿಸಬೇಕು. ಉದ್ಯಮ ಬೆಳಸಬೇಕು ಅಂದರೆ ಸಮಾಜ ಬೆಳವಣಿಗೆಯಾಗುತ್ತದೆ. ಇಂಥ ಉನ್ನತ ಹಾದಿಯಲ್ಲಿ ನಡೆಯಲು ಸಾಧ್ಯವಾಗ್ತಿದೆ. ಆ ದಿಸೆಯಲ್ಲಿ ೬೭ ವರ್ಷಗಳ ಅಮೃತ ನೆನಹಿನಲ್ಲಿ ಗೌರವಿಸುವುದು ಅಂದರ ಕೃತಜ್ಞತೆ ತೋರಿಸುವುದು. ಅವರು ಬಹಳ ದುಡಿದಿದ್ದಾರೆ, ಕೃತಜ್ಞತೆ ಎಂದರೆ ಉಪಕಾರ ಸ್ಮರಣೆ. ಕೃತಘ್ನತೆ ಅಂದರೆ ಉಪಕಾರ ಗೇಡಿ ಸ್ವಭಾವ. ನಾವು ಈ ಭಾಗದ ಜನ ಉಪಕಾರವುಳ್ಳವರು ಆಗಿರೋಣದರಿಂದ ತಾವು ಬೆಳಕಿನ ಸೀಮೆಂಗೆ ಸೇರಿರೋಣರಾಗಿರುವುದರಿಂದ ಪೂಜ್ಯ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಡಿ. ಎಮ್. ಚಂದ್ರಶೇಖರ ಅವರನ್ನು ಅತಿಥಿ ಮಾಡಿ ನೀವು ಒಂದು ದೊಡ್ಡ ಕಾರ್ಯಕ್ರಮ ಮಾಡಿದಿರಿ. ಇದು ಅಭಿನಂದಿಸಬೇಕಾದುದು. ಈ ಸಂದರ್ಭ ದಲ್ಲಿ ದೊಡವಾಡ ದಂಪತಿಗಳಿಗೆ ದೀರ್ಘ ಆಯುಷ್ಯ ಕೋರಿ, ತಮ್ಮೆಲ್ಲರಿಗೆ ಕೃತಜ್ಞತೆ ಅರ್ಪಿಸಿ ನನ್ನ ನಾಲ್ಕು ಮಾತು ಮುಗಿಸುತ್ತೇನೆ.

ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಚಿತ್ರದುರ್ಗ

ಅತಿಕಲ್ಯಾಣರೂಪಾತ್ವಾತ್ ನಿತ್ಯ ಕಲ್ಯಾಣಸಂಶ್ರೇಯಾತ್ ಸ್ವತೃೋಣಾಮ್ವರದ ತ್ವಾರ್ಚ ಬ್ರಹ್ಮತನ್ಮಂಗಲವಿದುಃ. ತೋಂಟದಾರ್ಯ ಜಗದ್ಗುರುಗಳವರೇ. ಸಹೃದಯರಾದ ಮಹಾಂತಪ್ಪಗಳೇ, ಮುರಗೋಡ ಮಹಾಂತ ಶ್ರೀಗಳವರೇ, ಹರ ಗುರು ಚರಮೂರ್ತಿಗಳೇ. ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾಗಿರುವ ಶ್ರೀಮಾನ್ ಚಂದ್ರಶೇಖರ ಅವರೇ. ದಣ್ಣಕಿಲ್ಲದ ಧಾರವಾಡದಲ್ಲಿರುವ ಮಹಾಜನಗಳೇ, ಗಣ್ಯ ಮಾನ್ಯ ವ್ಯಕ್ತಿಗಳು ಶ್ರೀಮಾನ್ ಡಾ. ಪಾಟೀಲ ಅವರೇ. ಪತ್ರಿಕಾ ಪ್ರತಿನಿಧಿಗಳೇ, ತಾಯಂದಿರೇ, ಇದು ಭಾಷಣದ ಸಮಯ ಅಲ್ಲ. ಭೋಜನದ ಸಮಯ, ಈಗ ಭಾಷಣ ಬೇಡ, ಈಗ ಭೋಜನ ಬೇಕು. ಇಲ್ಲಿ ತೋಂಟದಾರ್ಯರು ಏನ ಕೊಡಬೇಕೋ ಎಲ್ಲ ಕೊಟ್ಟಿದ್ದಾರೆ. ಏನರ ಬಿಡತಾರೇನೋ ಅಂತ ತಿಳಿದು ಕೊಂಡಿದ್ದೆ. ಆ ರೀತಿ ಅವರು ಸೂಚನೆ ಕೊಟ್ಟಿದ್ದರು. ಆದರೂ ಏನೂ ಬಿಡಲಿಲ್ಲ: ಎಲ್ಲ ಮುಗಿಸಿಯೇ ಬಿಟ್ಟರು. ಒಂದು ಮಾತು ಹೇಳ್ತೇವೆ. ಉಪನಿಷತ್ತಿನಲ್ಲಿ ಆ ಮಾತು ಬರ್ತದೆ. ಜುಗುರಾಣಮೇನಃ ಜುಗುರಾಣಂ ಏನಃ. ಸಂಸ್ಕೃತ ಶಬ್ದ ಜುಗುರಾಣಂ, ಅಂದರೆ ಏನು? ಕುಟಿಲತೆ, ವಕ್ರತೆ, ಉಪನಿಷತ್ತಿನ ಭಾಷೆ ಅದು. ಏನಃ, ಅದು ಪಾಪ, ಏನಸ್ ಅಂದರೆ ಪಾಪ, ಎಲ್ಲಿ ವಕ್ರತೆ ಇದೆ, ಕುಟಿಲತೆ ಇದೆ ಅದು ಮಹಾಪಾಪ.

ಈ ಪ್ರಸಂಗದಲ್ಲಿ ಈ ಮಾತು ಯಾಕೆ ಎಂದು ನೀವು ಕೇಳಬಹುದು. ಸಹಜ. ದೊಡವಾಡರ ಹೆಚ್ಚಿನ ಪರಿಚಯ ನಮಗಿಲ್ಲ. ಕೆಲವೇ ದಿವಸಗಳಲ್ಲಿ ನಮಗಾದದ್ದು. ಅವರ ಸರಳತೆ, ಉದಾರತೆ, ಇಲ್ಲಿ ಹೇಳಬೇಕಿದೆ. ಸರಳತೆ ಎನ್ನುವುದು ಸದ್ಗುಣ ಶಿರೋಮಣಿ ಎಂದಿದ್ದಾರೆ. ಆ ಸರಳತೆಯನ್ನು ಅವರಲ್ಲಿ ನಾವು ನೋಡುತ್ತೇವೆ. ಆ ಸರಳತೆಗೆ ಏನು ಮೂಲ ಅಂದರೆ ಈ ಜನಪ್ರಿಯತೆ. ಎರಡನೆಯದಾಗಿ ಉದಾರತೆ.

ಈಗ ಶ್ರೀಮಂತರು ಸಾಮಾನ್ಯವಾಗಿ ಕೃಪಣತೆಯ ಕೈಯಲ್ಲಿ ಸಿಕ್ಕಿರುತ್ತಾರೆ. ನಿಪುಣತೆಯ ಬಂಧನದಲ್ಲಿ ಇರುವದಿಲ್ಲ. ನಿಪುಣತೆಯ ಬಂಧನದಲ್ಲಿ ಮಾರ್ವಾಡಿ, ಸಿಖರು, ಗುಜರಾತಿ ಇದ್ದಾರೆ. ಆ ಬುದ್ಧಿಯ ಚಾಕಚಕ್ಯತೆ ಲಿಂಗಾಯತರಲ್ಲಿ ಕಡಿಮೆಯಿದೆ. ನಿಪುಣತೆ ಇಲ್ಲದೆ ಕೃಪಣತೆ ಬಂದಿದೆ. ಇದಕ್ಕೆ ಆಲಸ್ಯ ಅಂದರೂ ಆದೀತು. ಏನು ತಪ್ಪಿಲ್ಲ, ಸೋಮಾರಿತನ ಏನು ಮಾಡಬೇಕೋ, ಏನು ಅಧೈರ್ಯ, ನಿಷ್ಠೆಯಿಲ್ಲ, ಶ್ರದ್ಧೆಯಿಲ್ಲ, ಈ ಪ್ರವೃತ್ತಿ. ವೀರಶೈವ ತತ್ವ ಹೇಳಲು ಒಂದು ನಾಲಿಗೆ ಸಾಲುವುದಿಲ್ಲ ಒಂದು ಬಾಯಿ ಸಾಲುವುದಿಲ್ಲ, ಎಷ್ಟು ಬಾಯಿ ಅಗಲು ಮಾಡಿ ಹೇಳತಿರತೇವಿ, ನಮ್ಮ ಸ್ಥಿತಿ ಎಂಥಾದು, ಯಾವ ಮಟ್ಟದಲ್ಲಿ ನಾವು ಇದೇವಿ, ಈ ದೊಡವಾಡರಂಥ

ವರು ಎಷ್ಟು ಜನ ಇರ್ತಾರೆ, ಅವರಿಗೆ ಟಾಟಾ ಅಂತೇವಿ, ಬಿರ್ಲಾ ಅಂತೇವಿ, ಇನ್ನೂ ಏನೇನೋ ಅಂತೇವಿ. ಅಂಥವರು ತಯಾರು ಆಗಬೇಕು. ವ್ಯಾಪಾರ ಬರೀ ಲೌಕಿಕಕ್ಕಲ್ಲ. ವ್ಯಾಪಾರದಿಂದ ಪರಮಾರ್ಥ ಸಾಧನೆಯಾಗಬೇಕು. ಪ್ರಪಂಚದ ಸೋಪಾನ ಅಲ್ಲ, ವ್ಯಾಪಾರ ಪರಮಾರ್ಥದ ಪ್ರಥಮ ಸೋಪಾನ. ಪ್ರಾಮಾಣಿಕವಾಗಿ ಹೋದರೆ ಅದು ಒಂದು ಕಾಯಕ. ಈ ಕಾಯಕನಿಷ್ಠೆಯಿಂದ ದೊಡವಾಡರು ಬಹಳ ಒಳ್ಳೆಯ ಹೆಸರು ಗಳಿಸಿದ್ದಾರೆ. ಮುರುಘಾಮಠದಲ್ಲಿ ಅವರು ಇದ್ದುದು ಎರಡು ವರ್ಷ. ಅಲ್ಲಿಯ ಸಂಸ್ಕಾರ ಅವರ ಮೇಲೆ ಪ್ರಭಾವ ಬೀರಿತು. ಅವರೇನು ಹೆಚ್ಚಿನ ವಿದ್ಯೆ ಅಲ್ಲಿ ಕಲೀಲಿಲ್ಲ. ಗುಣಗಳ ಶಿಕ್ಷಣ ಅಲ್ಲಿ ಆಯಿತು. ಗುಣದಿಂದಲೇ ಶಿಕ್ಷಣ ಅಂತಾರೆ. ಅವರಲ್ಲಿ ದಯಾಧರ್ಮ, ಶ್ರದ್ಧೆ, ವಿನಯ, ಅಪ್ಪಗಳಲ್ಲಿ ನೋಡಿ ಬಂದಿರಬೇಕು. ಆ ಸರಳತೆ, ಆ ಉದಾರತೆ, ಆ ಪವಿತ್ರತೆ, ಆ ಪ್ರಾಮಾಣಿಕತೆ, ಈ ಗುಣಗಳನ್ನು ಅಲ್ಲಿ ಅಭ್ಯಾಸ ಮಾಡಿರಬೇಕು. ನೀವು ಕೇಳಬಹುದು, ಹಣದಿಂದ ಶ್ರೀಮಂತರೋ ? ಏನು ಗುಣದಿಂದ ಶ್ರೀಮಂತರೋ ? ಎಂದು. ಇದಕ್ಕೆ ಉತ್ತರ ದೊಡವಾಡರು ಬಹಳ ದುಡ್ಡು ಇದೆ ಎಂದು ಶ್ರೀಮಂತ ಅಂತ ಹೇಳುತ್ತಿರೋ ? ಗುಣದಿಂದ ಶ್ರೀಮಂತರು ಅಂತ ಹೇಳ್ತಿರೋ ?

ಏನಂತಿರೆಪ್ಪ ? ಹೇಳಿ, ಎಲ್ಲರೂ. ಗುಣವಂತ ಶ್ರೀಮಂತರು, ಆ ಗುಣಗಳನ್ನು ರಕ್ಷಣೆ ಮಾಡುವಂತಹ ಹಣ ಅವರಲ್ಲಿದೆ. ಹಣ ಕ್ಷುಪದಾರ್ಥ ತೃಣ ಅಲ್ಲ, ಅದು ಶ್ರೇಷ್ಠವಾಗಿದ್ದು ಗುಣದ ರಕ್ಷಣೆ ಮಾಡಬೇಕು. ಅಲ್ಲಿ ಉದಾರತೆ ಇರಬೇಕು. ಅಲ್ಲಿ ಸರಳತೆ ಇರಬೇಕು. ನಮ್ಮ ಚಂದ್ರಶೇಖರರು ೧೦ ಸಾವಿರ ಅಪೇಕ್ಷ ಮಾಡಿದರು. ಕೆಲಸದಲ್ಲಿ ಇದ್ದಾರೆ. ಸಮುದ್ರಾನೆ ಈಜಿದಾರೆ, ೧೦ ಸಾವಿರ ರೂ ಇಂಥ ಫಂಡಿನಿಂದ ನಾನು ಕೊಡತೇನಿ, ಅಂಥ ಧಾರಾಳ ಬುದ್ಧಿ ಎಲ್ಲ ಶ್ರೀಮಂತರಿಗೆ ಬರ್ತದೋ? ಯಾಕೆ, ಅವರು ಕೃಪಣತೆಯ ಬಂಧನದಲ್ಲಿರ್ತಾರೆ. ನಿಪುಣ ಬಂಧನದಲ್ಲಿರುವದಿಲ್ಲ. ಸಮಾಜವನ್ನು ನೋಡುವದಿಲ್ಲ. ಇವರು ಬೇಕಾದಷ್ಟು ಸಂಪಾದನೆ ಮಾಡಿದಾರೆ, ಸಮಾಜ ನೋಡೋದನ್ನು ನಿಲ್ಲಿಸಿಲ್ಲ. ಸಮಾಜ ನೋಡ್ತಾನೇ ಇದಾರೆ, ತಮ್ಮ ಆವಶ್ಯಕತೆ ನೋಡಿಕೊಂಡು ಏನ ಕೊಡಬೇಕೋ ಕೊಡುತಾನೇ ಬಂದಿದಾರೆ. ಮುರುಘಾಮಠಕ್ಕೆ ಕೊಟ್ಟಿದ್ದಾರೆ, ಬೇರೆ ಕಡೆಗೆ ಕೊಟ್ಟಿದ್ದಾರೆ. ನಾವು ಕೇಳಿಲ್ಲ, ನಮಗೆ ಕೊಟ್ಟಿಲ್ಲ! ಯಾವಾಗ ಕೇಳತೇವೋ ನಮಗೆ ಗೊತ್ತಿಲ್ಲ! ಎಷ್ಟು ಕೇಳತೇವೋ ನಮಗೆ ಗೊತ್ತಿಲ್ಲ! ಕೇಳ್ತಿವೋ ಇಲ್ಲವೋ ಗೊತ್ತಿಲ್ಲ ! ಈಗಂತೂ ಅವರು ನಿಶ್ಚಿಂತ ಸಮಾಧಾನದಿಂದ ಇರಬೇಕು. ಹೀಗೆಲ್ಲ ಇದೆ. ಜಯದೇವ ಗುರುಗಳ ಸ್ಮರಣೆ ಮಾಡಿದಿರಿ, ಮುರುಗೇಶನ ಸ್ಮರಣೆ ಮಾಡಿದಿರಿ, ಊಟದ ಹೊತ್ತಾಗಿದೆ. ಮುರುಗೇಶನ ಸ್ಮರಣೆ ಮಾಡುತಾ, ಪ್ರಸಾದ ತೆಗೆದುಕೊಳ್ಳಿರಿ. ದೊಡವಾಡ ಅವರ ಪರಿವಾರ, ಅವರ ಕುಟುಂಬ ದರ್ಶನ ಆಯಿತು. ತಾಯಿ ಇದ್ದಾಳೆ, ಹೆಂಡತಿ ಇದ್ದಾಳೆ, ಮಗ ಸರಸಾನಂದ,

ಎಲ್ಲಿ ಹುಡುಕಿದಿರಿ ಆ ಹೆಸರು? ಜನ್ಮನಕ್ಷತ್ರ ಹಾಗೇ ಬಂತೋ, ಬಹಳ ಪ್ರತಿಭಾವಂತರು. ಒಂದು ಮಾತನ್ನು ನೀವು ತಿಳಿದುಕೊಳ್ಳಬೇಕು. ತಂದೆಯಿಂದ ಮನೆ ಅಲ್ಲ, ಮಕ್ಕಳಿಂದ ಮನೆ. ತಂದೆ ಗಳಿಸಿದ, ಮಕ್ಕಳು ಉಳಿಸದಿದ್ದರೆ ? ಅದಕ್ಕಾಗಿ ಮಕ್ಕಳಿಂದ ಮನೆ. ಮಕ್ಕಳನ್ನು ಸರಿಯಾಗಿ ತಯಾರು ಮಾಡಬೇಕು. ಅವರ ಅದೃಷ್ಟ ಅಲ್ಲಿದೆ. ದುಡ್ಡು ಅದೃಷ್ಟ ಅಲ್ಲ, ದುಡ್ಡು ಬರ್ತದೆ, ಹೋಗ್ತದೆ. ಅದು ಅದರ ಸ್ವಭಾವ, ಅದಕ್ಕೆ ದುಡ್ಡಿಗೆ ದ್ರವ್ಯ ಅಂತಾರೆ. ಅದು ಹರಿಯುತಾ ಇರೋದು. ದ್ರವಣ ಸ್ವಭಾವ, ಅದರಲ್ಲಿ ಇರುವದರಿಂದ ಅದಕ್ಕೆ ದ್ರವ್ಯ ದ್ರವ್ಯ ಅಂತಾರೆ, ಆ ದ್ರವಣ ಸ್ವಭಾವಕ್ಕೆ ಬೇರೆ ಮುಖ ಮಾಡಿದ್ದಾರೆ ದೊಡವಾಡದವರು. ಈ ದಾರಿಯಲ್ಲಿ ಹರಿ ಅಂತ ಹೇಳಿ. ಅಂತಃಕರಣದ ಗಂಗೆಯನ್ನೇ ಈ ಕಡೆ ಮುಖ ಮಾಡಿಸಿದಾರೆ, ಭಗೀರಥನ ಕೆಲಸ ಮಾಡತಿದ್ದಾರೆ, ದೊಡವಾಡರಿಗೆ ಮುರುಗೇಶ ಹೆಚ್ಚಿನ ಗುಣಸಂಪತ್ತು, ಧನಸಂಪತ್ತನ್ನು ದಯಪಾಲಿಸಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಕೃತಜ್ಞತೆಗಳು

ಪರಮಪೂಜ್ಯ ಶ್ರೀ ನಿ. ಪ್ರ. ಮಹಾಂತಪ್ಪಗಳು ಮುರುಘಾಮಠ, ಅವರ ಅಪ್ಪಣೆಯ ಮೇರೆಗೆ ದಿ. ೨೯-೧-೧೯೮೮ ರಂದು ಶುಕ್ರವಾರ ಶ್ರೀ ಜಿ. ಜಿ. ದೊಡ-ವಾಡರ 'ಅಮೃತ ಮಹೋತ್ಸವ' ಯಶಸ್ವಿಯಾಗಿ, ಅತ್ಯಂತ ವಿಜೃಂಭಣೆಯಿಂದ ನಿರ್ವಿಘ್ನವಾಗಿ ನೆರವೇರಿಸಿದುದು ಆ ಸ್ವಾಮಿಯ ಕೃಪೆಯಲ್ಲದೆ ಬೇರಲ್ಲ.

ದಿ. ೧೪-೬-೧೯೮೭ ರಂದು ಅಮೃತ ಮಹೋತ್ಸವದ ಯೋಜನೆಯನ್ನು ಹಮ್ಮಿಕೊಂಡು, ವ್ಯವಸ್ಥಿತ ಕಾರ್ಯ ಯೋಜನೆಗಾಗಿ ಅದಕ್ಕೆ ಸೂಕ್ತ ಸಮಿತಿಗಳನ್ನು ರೂಪಿಸಿಕೊಳ್ಳಲಾಯಿತು. ಅದರೊಂದಿಗೆ ಶ್ರೀ ಜಿ. ಜಿ. ದೊಡವಾಡರಿಗೆ ಸಮರ್ಪಿಸುವ 'ಧರ್ಮದೀಪ್ತಿ' ಅಭಿನಂದನಾ ಗ್ರಂಥ ಸಮಿತಿಯು ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಆರ್. ಸಿ. ಹಿರೇಮಠ ಹಾಗೂ ಡಾ. ಎಂ. ಎಸ್. ಸುಂಕಾಪುರ ಅವರ ಪ್ರಧಾನ ಸಂಪಾದಕತ್ವದಲ್ಲಿ ರಚಿತವಾಯಿತು. ಡಾ. ಚೆನ್ನಕ್ಕ ಎಲಿಗಾರ ಅವರು ಸಂಪಾದಕರಾಗಿಯೂ, ಶ್ರೀಯುತ ಈಶ್ವರ ಕಮ್ಮಾರ, ಪ್ರೊ. ಎಸ್. ಎಸ್. ಭೂಸರಡ್ಡಿ, ಶ್ರೀ ಯೋಗೀಶ ಯಡ್ರಾಮಿ, ಡಾ. ಮೃತ್ಯುಂಜಯ ಶಾಸ್ತ್ರಿಮಠ ಇವರು ಸದಸ್ಯರಾಗಿಯೂ ಪರಿಶ್ರಮವಹಿಸಿದ್ದರಿಂದ ಅಭಿನಂದನ ಗ್ರಂಥ ಸರ್ವಾಂಗ ಸುಂದರವಾಗಿ ವ್ಯವಸ್ಥಿತವಾಗಿ ಪ್ರಕಟವಾಗಲು ಸಾಧ್ಯವಾಯಿತು. ಅಮೃತಮಹೋತ್ಸವ ಸಮಿತಿಯ ಪರವಾಗಿ ಪ್ರೊ. ವಿ. ಜಿ. ಮಾರೀಹಾಳರು 'ಚನ್ನಬಸವಣ್ಣನವರ ವಚನಗಳು' ಪುಸ್ತಕವನ್ನು ಸಂಪಾದಿಸಿದರು. ಪ್ರೊ. ಭೂಸರಡ್ಡಿಯವರು ಶ್ರೀ ಜಿ. ಜಿ. ದೊಡವಾಡರ ಕಿರುಪರಿಚಯ ರಚಿಸಿ ಸಾರಸ್ವತ ಲೋಕಕ್ಕೆ ಅವರನ್ನು ಪರಿಚಯಿಸಿ ಕೊಟ್ಟರು. ಈ ಮೂರು ಕೃತಿಗಳ ಜವಾಬ್ದಾರಿ ಹೊತ್ತು ಸಾರ್ಥಕ ರೀತಿಯಲ್ಲಿ ಕಾರ್ಯ ನಿರ್ವಹಿಸಿದ ಎಲ್ಲ ಮಹನೀಯರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಅಮೃತ ಮಹೋತ್ಸವದ ಎಲ್ಲ ಸಮಿತಿಗಳ ಸದಸ್ಯರು ಸತತವಾಗಿ ೬ ತಿಂಗಳು ಕ್ರಿಯಾಶೀಲರಾಗಿ, ಪ್ರಾಮಾಣಿಕರಾಗಿ. ಆತ್ಮೀಯತೆಯಿಂದ ದುಡಿದಿದ್ದು, ಮಹೋತ್ಸವದ ಯಶಸ್ಸಿಗೆ ಅವರ ಕೊಡುಗೆ ದೊಡ್ಡದೆನಿಸಿದೆ.

ಹಮ್ಮಿಕೊಂಡ ಕಾರ್ಯ ಅಚ್ಚುಕಟ್ಟುತನದಿಂದ, ಶಿಸ್ತಿನಿಂದ 'ನ ಭೂತೋ ನ ಭವಿಷ್ಯತಿ' ಎಂಬ ರೀತಿಯಲ್ಲಿ ಜರುಗಲು ಮುಖ್ಯ ಕಾರಣರು ಪರಮಪೂಜ್ಯ ಮಹಾಂತಪ್ಪಗಳವರು, ಮುರುಘಾಮಠ. ಮಹೋತ್ಸವದ ಕಾರ್ಯಾಧ್ಯಕ್ಷರಾದ ಶ್ರೀ ಬಿ. ಎಸ್. ಲಕಮನಹಳ್ಳಿಯವರ ಸಮಯಾನುಸಾರ ಸಮರ್ಪಕ ಸೂಕ್ತ ಮಾರ್ಗದರ್ಶನದಿಂದಾಗಿ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಮಹೋತ್ಸವ ವೈಶಿಷ್ಟ್ಯಪೂರ್ಣವಾಗಿ ನಡೆದು, ಪಾಲುಗೊಂಡವರ ಹೃದಯದಲ್ಲಿ ಅಚ್ಚಳಿಯದೆ ಉಳಿಯಲೆಂಬ ಉತ್ಕಟ ಹಂಬಲದಿಂದ ದುಡಿದ, ಸೂಕ್ತ ರೀತಿಯಲ್ಲಿ ಸಹಕರಿಸಿದ, ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಸಹಕಾರ ನೀಡಿದ ಸಮಸ್ತ ಸಹೃದಯ ಬಾಂಧವರಿಗೆ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದ ನಾನು ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.

ಕಾರ್ಯಕ್ರಮ ಹರಸಿ ಶುಭಾಶಯ ಕಳಿಸಿದ ಸಕಲ ಪರಗುರು ಚರಮೂರ್ತಿ, ಮಂತ್ರಿಮಾನ್ಯರು, ಅಭಿಮಾನಿ, ಹಿತೈಷಿಗಳಿಗೆ, ಆಶೀರ್ವದಿಸಿದ ಸಮಸ್ತರಿಗೆ ತಲೆಬಾಗುತ್ತೇನೆ. ಶ್ರೀ ಗುರುಪುತ್ರಪ್ಪನವರು ನೂರು ಕಾಲ ಬಾಳಲೆಂದು. ಅವರ ಶತಮಾನೋತ್ಸವ ಅದ್ದೂರಿಯಿಂದ ಆಚರಿಸುವ ಸೌಭಾಗ್ಯ ನಮ್ಮದಾಗಲೆಂದೂ ಪ್ರಾರ್ಥಿಸುತ್ತೇನೆ.

ಈರಣ್ಣ ವಾಣಿ
ಪ್ರಧಾನ ಕಾರ್ಯದರ್ಶಿ
ಅಮೃತ ಮಹೋತ್ಸವ ಸಮಿತಿ

॥ श्री महदेश्वर प्रसन्न ॥



आराध्यदेवता

श्री महदेश्वर स्वामीजी

महदेश्वर बेट्टा, कोळ्ळेगाल

अमृतोत्सव अभ्युदय

श्री गुरुपुत्रप्पा दोडवाड

आधुनिक कर्नाटक की सांस्कृतिक राजधानी, प्रसिद्ध ऐतिहासिक धारानगरी के प्रतिष्ठित वाणिज्य-उद्यमियों में एक हैं श्री गुरुपुत्रप्पा। उनका जीवन चेतोहारी है।

सवदत्ती, बेलगाम जिले का एक पुण्यक्षेत्र है, शक्तिदेवी का स्थान है। इस तालूके का एक छोटा ग्राम है करीकट्टी। इसी ग्राम में श्री गुरुपुत्रप्पाजी का जन्म हुआ। उनका घर-बार भरा-पूरा था। उनका परिवार कृषि में परिणत तथा व्यापार में निपुण था। उसमें फिर सोने में सुहाग की करह आध्यात्मिक चिन्तन था। तभी उनका कुटुंब दोड(बड़ा)वाड कहलाथा। शिवशरणों की न्यायनिष्ठुरता, सत्य प्रियता उनके रक्त में प्रावाहित थी। प्रामाणिकता उनके जीवन का अंग ही बन गई थी। वे ग्राम के लिए न्याय की तुल बने थे। व्यापार में काफी हानि भोगकर भी सत्य की सत्ता के ज्ञाता बने थे,

स्थितप्रज्ञता के धीमन्त थे। गुरुपादप्पा की धर्मपत्नी गंगम्मा भी साध्वी शिरोमणि ही थीं। पति के लिए अनुकूल, उनकी छाया की तरह, जीवन की ज्योति की तरह थीं। वे शिवशरणों की सूक्ति के अनुसार चलती थीं। इन्हीं अपूर्व पुण्य दंपति की गर्भ-शुक्ति से श्री गुरुपुत्रप्पा ई. स. १९१२ की जनवरी १२ तारीख को जन्मे। किसीने स्वप्न में भी यह कल्पना नहीं की होगी कि ग्राम का यही बालक एक दिन कर्नाटक के व्यापारोद्यम क्षेत्र की ख्याति के शिखर पर आसीन होगा !

गुरुपुत्रप्पा की प्राथमीक शिक्षा करीकट्टी में हुई तथा माध्यमिक शिक्षा सवदत्ती और धारवाड में सम्पन्न हुई। किंतु गुरुपुत्रप्पा की अभिरुचि और आसक्ति उद्योग और व्यवहार में ही थी। उनकी प्रतिभा वंशपरंपरा के व्यापार में ही पुष्पित हुई। गरीबी की आग में तपने पर भी अथणी के श्री मुरुघेन्द्र महाशिवयोगी की कृपा तथा श्री मृत्युंजय स्वामीजी की अन्तःकरणपूर्ण कृपा प्राप्त करनेवाले गुरुपुत्रप्पा अपना भविष्य स्थापित करने की दिशा में धैर्य के साथ आगे बढ़े। १९३६ में करीकट्टी से तडकोड आए और वहाँ एक छोटी सी किराना दूकान आरंभ की। प्रयत्न में परमेश्वर है, इस सत्य के अनुसार उनके व्यापार में वृद्धि हुई, लक्ष्मी की कृपा हुई। वहीं रहते वे धारवाड के व्यापारियों के निकट सम्पर्क में आए और धारवाड में एक दूकान शुरू करने की प्रबल इच्छा उनके मन में जागी। तब तक के दस वर्षों के अनुभव के साथ धारवाड मे कमलापुर के श्री रामजी के किराये के घर में १९४६ में किराना दूकान शुरू की। ग्राहकों को स्वच्छ और अच्छी चीजें देकर गुरुपुत्रप्पा ने अपना व्यापार बढ़ाया। अपने निरन्तर श्रम, प्रामाणिकता तथा सज्जनता के कारण वे सबके प्रेम-पात्र बने। धारवाड के केन्द्र स्थान में एक दुकान शुरु करने की इच्छा उनके मनमें आयी। संयोगवशात् सज्जनता की मूर्ति गुरुपुत्रप्पा धारवाड में स्थित प्रसिद्ध उद्योगपति श्री सुलेमान सेठ के संपर्क में आए। भारत को आजादी हासिल होने के बाद सुलेमान सेठजी को अपने देश लौटना

पड़ा। तब उन्होंने अपने प्रिय गुरुपुत्रप्पा को सुलभ किश्तों पर धारवाड के केन्द्र स्थान नेहरु मार्केट में स्थित अपनी दूकान दे दी। तब से उनके भाग्य की दिशा ही बदल गई। उनका व्यापार वर्द्धित होने लगा और वे नगर के प्रख्यात व्यापारियों में एक माने जाने लगे।

गुरुपुत्रप्पा को न ख्याति अचानक मिली है, न अनायास आकस्मिक धनप्राप्ति हुई है और न किसी की संपत्ति के बल पर ही वे आगे आए हैं। ईमानदारी की सीढ़ियों पर धीरे धीरे चढ़कर वे प्रसिद्ध हुए हैं। विचार और संयोजना के समन्वय ने उनका व्यक्तित्व बनाया है।

आईल किंग

गुरुपुत्रप्पाजी के पाँच सुपुत्र हैं। और वे सब जिमेदारी के साथ अपना अलग अलग उद्योग चला रहे हैं। तब तक उनका बड़ा पुत्र सरसानन्द प्रज्ञाशील बना था। व्यापार में उसे परिणति भी प्राप्त हुई थी। गुरुपुत्रप्पा ने तेल के होल-सेल व्यापार की जिम्मेदारी उसे सौंप दी। पिता की तरह पुत्र भी प्रगति पथ पर आगे बढ़ा। अब सरसानन्द तेल के प्रसिद्ध और बड़े व्यापारी हैं। दस-बीस गाड़ियाँ तेल की सप्लाई करती हैं, कर्नाटक और संपूर्ण देश में संचरण करती हैं। कर्नाटक के बाहर आन्ध्र, तमिळनाडु, महाराष्ट्र, गुजरात आदि राज्यों के तैल-क्षेत्र में उनका बड़ा नाम है। इस तरह उनका 'आईल-किंग' नाम सार्थक हुआ है।

एक नया मोड़

१९६१ में गुरुपुत्रप्पाजी के जीवन में एक नया मोड़ आया। किराना दूकान से आढ़त की दूकान की ओर उनकी दृष्टि गई और उन्होंने एक आढ़त की दूकान भी शूरू कर दी। गाँव के गरीब किसानों को उनकी फसल के, माल के बदले में योग्य मूल्य देने में दोडवाडजी सदा सिद्ध थे। इसलिए उनकी यह दूकान भी प्रगति करने लगी। इस

नई दूकान के लिए मृत्युंजय मार्केट के विशाल स्थान में उन्होंने 'श्री शंभुलिंग कृपा' नामक भवन निर्मित किया। तबसे यह कृषिकों के लिए वरदान और उनके श्रम के प्रति योग्य भरोसा बना है। बिना किसी भेद-भाव से सब को समान रूपसे देखते हैं दोडवाडजी।

दक्ष और चतुर व्यापारी

गुरुपुत्रप्पाजी का मन सदा अन्वेषणशील है। उनमें नए नए क्षेत्रों में पदार्पण करने की महत्वाकांक्षा है। इसीके फलस्वरूप १९६३ में आरंभ हुआ 'श्री मृत्युंजय राइस मिल'।

मूंगफली को फोड़कर, बीजों का संस्करण करके, हाथों से चुन चुनकर अच्छे सुधरे बीजों को बुआई के लिए तैयार करने का 'दोडवाड उद्यम केन्द्र, १९८२ में आरंभ हुआ।

धारवाड के समीप अमीनभावी नामक गाँव में १९८६ में 'श्री उळवी चन्नबसवेश्वर जिन्निग फैक्टरी' स्थापित कर के ग्रामाभिवृद्धि के क्षेत्र में एक और महत्वपूर्ण कार्य किया तथा इस प्रकार वे सहकारी उद्यम क्षेत्र के अग्रपुरुष कहलाए।

सामाजिक

संकटों की आग में तपकर गुरुपुत्रप्पा का जीवन चोखा सोना बन गया है। वे केवल व्यापारी नहीं हैं बल्कि एक निष्ठ समाज सेवक भी हैं, प्रज्ञाशील, सुसंस्कृत, सज्जन हैं। साहित्य, संगीत आदि कलाओं में भी उनकी समान आस्था है। धारवाड नगर की प्रायः सभी सांस्कृतिक और साहित्यिक क्रियाओं में वे सदा अग्रसर हैं।

स्वयं से जितना बन पड़े वे मदद करते आए हैं। धर्म-नीति, अध्यात्म, चिंतन-मंथन में रत जो भी उनके पास आया है निराश नहीं लौटा है। उद्यम-क्षेत्र की तरह अन्य क्षेत्रों में भी वे परिचित हैं। धारवाड के त्रिविध दासोहमूर्ति श्री मृत्युजय स्वामीजी, श्री शिवयोगीजी तथा

श्री नि. प्र. महान्तप्पाजी की कृपा उन पर सदैव रही है जिससे उनका जीवन निरन्तर प्रगति पथ पर है। उनके सारे स्वप्न कार्यान्वित हुए हैं। उनका हृदय विशाल है।

अपने अपार अनुभव का लाभ उन्होंने कई संस्थाओं को प्रदान किया है तथा उनकी प्रगति के लिए तन-मन-धन से सहायता कर रहे हैं। उनका सदस्यत्व पानेवाली संस्थाएँ धन्य हैं।

बहुमुखी व्यक्तित्व

१ १९६१ से श्री मुरुघामठ की व्यवस्थापक समिति (न्यास) के सदस्य।

२ उपाध्यक्ष, अखिल भारत शिवानुभव संस्था, धारवाड।

३ चेअरमन, हुबळी-धारवाड को-ऑप. अर्बन बैंक लि,

४ धारवाड के वणिक संघ के अध्यक्ष रहे।

५ विश्व हिन्दू परिषत् के धारवाड जिला विभाग के अध्यक्ष के रूप में १२ वर्ष तक सेवा की है।

६ विश्व हिन्दू परिषत् की ओर से धारवाड में स्थापित 'संजीविनी अस्पताल' के भी अध्यक्ष रहे।

७ सद्य भारतीय विद्याकेन्द्र, किला, धारवाड के चेअरमन रहकर उसकी सर्वतोमुखी प्रगति के लिए कार्यरत।

८ उपाध्यक्ष, श्री उळवी चन्नबसवेश्वर धर्म-फंड संस्था, धारवाड

९ कोशाधिकारी, अखिल भारत वीरशैव महासभा, धारवाड जिला

१० चेअरमन, आढ़त और व्यापारियों का संघ, धारवाड

११ आजीवन सदस्य, दक्षिण भारत हिन्दी प्रचार सभा। यह महात्मा गांधीजी से स्थापित संस्था है। उसकी कर्नाटक प्रादेशिक प्रगति में इनकी बड़ी आस्था है।

१२ कोशाधिकारी, 'मक्कळ मने' (बालगृह), धारवाड– इसके द्वारा
बच्चों की सर्वांगीण प्रगति के योजक बने हैं।

श्री दोडवाड गुरुपुत्रप्पा ने अपने जीवन का प्रत्येक क्षण प्रयोजनकारी बना लिया है। इस तरह वे मानवता के, अमूल्य निधि हैं। 'योजकः तत्र दुर्लभः' जैसी गीता-वाणी की तरह गुरुपुत्रप्पा श्रेष्ठ प्रकार के संयोजक भी हैं।

धन और विनय का एकत्र रहना कठिन है किन्तु दोडवाडजी में उनका समागम ही उनकी विशेषता है। वे आचार-विचार, रहन-सहन में सरल हैं। गर्व उनसे कोसों दूर है। सबसे कोमलता से पेश आते हैं। वे जैसे शुभ्र वस्त्रधारी हैं वैसे ही शुभ्रमन भी हैं।

वे गुप्तदानी हैं। कभी यह नहीं सोचते कि मैंने किसी को दान दिया है। प्रायः कोई ऐसी संस्था नहीं जिसने उनकी सहायता नहीं पाई हो।

जिएँ सौ सौ वर्ष…

अब वे ७७ वें वर्ष में पदार्पण कर रहे हैं, उनका जीवन अनुकरणीय है, आदर्शपूर्ण है। उनसे स्फूर्ति और चेतन प्राप्त होती हैं। वाणिज्योद्यम में उनकी साधना अपूर्व है। धारवाड का गौरव और महत्व उनसे बढ़ता ही गया है वे सर्वजनप्रिय हैं। परमात्मा से हमारी यही प्रार्थना है कि सौ वर्षों का पूर्ण जीवन उनको मिले।

श्री जी. जी. दोडवाड अमृतमहोत्सव समिति

‘श्री शंभुलिंग कृपा’, मृत्युंजय मार्केट, धारवाड – ५८० ००८

कार्यकारिणी समिति

कार्याध्यक्ष :
श्री बी. एस. लकमनहळ्ळी

उपाध्यक्ष :
श्री एम. जी. अगडी, वकील
श्री बी. एस. कुन्दगोळ

कोशाधिकारी :
श्री बी. जी. दोडमनी

प्रधान कार्यदर्शी :
श्री ईरण्णा वाणी
श्री एम. जी. नडकट्टी, वकील

संयोजक :
श्री सी. एस. घण्टेण्णवर

अभिनन्दन ग्रन्थ
सम्पादक समिति :

प्रधान सम्पादक :
डा. आर. सी. हिरेमठ
एम. ए., पीएच. डी.
भूतपूर्व कुलपति

डा. एस. एस. सुंकापूर
एम्. ए., पीएच्. डी.

सम्पादक :
डा. चन्नक्का एलिगार

सदस्य :
श्री ईश्वर कम्मार
प्रो. एस. एस. भूसरड्डी
डा. मृत्युंजय शास्त्रीमठ
श्री योगीश यड्रावी



ಶ್ರೀ ಗುರುಪುತ್ರಪ್ಪನವರ ಹಿರಿಯ ಪುತ್ರ
ಕಾರ್ಯನಿರತ ಶ್ರೀ ಸರಸಾನಂದ ದೊಡವಾಡ



ಶ್ರೀ ಗುರುಪುತ್ರಪ್ಪನವರು ಧರ್ಮಪತ್ನಿ
ಶ್ರೀಮತಿ ಶಾಂಭವಿಯವರೊಂದಿಗೆ

COVER PRINT ANUPAM GRAPHIC ARTS